


ಕುಂದರನಾಡಿನಲ್ಲಿ ಒಂದು ಅಧ್ಯಾಯ


ಛೋಡೋ ಭಾರತ ಪರ್ವದಲ್ಲಿ

ಲೇಖಕರು :
ರಾಮಚಂದ್ರ ವಡವಿ

"ನಮ್ಮ ಸ್ವಾತಂತ್ರ್ಯ ಯುದ್ಧದಷ್ಟು ಪವಿತ್ರ ಮತ್ತು ಪ್ರಜಾಪ್ರಭುತ್ವದ ಯುದ್ಧವು ಜಗತ್ತಿನ ಇತಿಹಾಸದಲ್ಲಿ ಬೇರೊಂದಿಲ್ಲ, ಈ ಯುದ್ಧದೊಳಗಿನ ಚಿಕ್ಕ ದೊಡ್ಡ ಪ್ರತಿಯೊಬ್ಬ ಸೈನಿಕನೂ ತನ್ನ ಮುಂದಾಳು ತಾನೇ ಆಗಿದ್ದಾನೆ".

—ಗಾಂಧೀಜಿ

ದೇ. ಭ. ಕರ್ನಾಟಕ ಸಿಂಹ ಗಂಗಾಧರರಾವ ದೇಶಪಾಂಡೆ



ಜನನ : ೩೧-೩-೧೮೭೧ ಶತಾಬ್ದಿ : ೧೯೭೧

ದೇ. ಭ. ದೇಶಪಾಂಡೆ ಗಂಗಾಧರರಾಯರ ಜನ್ಮ ಶತಾಬ್ದಿ

ಜನ್ಮ : 31 ಮಾರ್ಚ 1871 ಶತಾಬ್ದಿ : 1971

ಕುಂದರನಾಡಿನಲ್ಲಿ ಒಂದು ಅಧ್ಯಾಯ

(ಛೋಡೋ ಭಾರತ ಪರ್ವದಲ್ಲಿ)

ಲೇಖಕ :

ರಾಮಚಂದ್ರ ವಡವಿ

ಪ್ರಕಾಶಕರು :

ಖಾದೀ ಗ್ರಾಮೋದ್ಯೋಗ
ಸಹಕಾರೀ ಉತ್ಪಾದಕ ಸಂಘ ನಿ., ಹುದಲಿ

ಪೋಸ್ಟ—ಹುದಲಿ ಜಿಲ್ಲಾ—ಬೆಳಗಾಂವ

ಪ್ರಕಾಶಕರು :
ಖಾದೀ ಗ್ರಾಮೋದ್ಯೋಗ ಸಹಕಾರೀ ಉತ್ಪಾದಕ ಸಂಘ ನಿ.
ಹುದಲಿ (ಜಿ. ಬೆಳಗಾಂವ)

ಮೊದಲ ಮುದ್ರಣ : ೧೯೭೧

ಬೆಲೆ : ಹತ್ತು ರೂಪಾಯಿಗಳು

ಮುದ್ರಕರು :
ಕೆ. ಜಿ. ಜೋಶಿ
ಕೆ. ಇ. ಬೋರ್ಡ್ಸ್ ಪ್ರಿಂಟಿಂಗ ಪ್ರೆಸ್, ಧಾರವಾಡ

ಪ್ರಸ್ತಾವನೆ

(ಶ್ರೀ ಕಾಕಾಸಾಹೇಬ ಕಾಲೇಲಕರ)

ಅನಿಷ್ಟ ಆದರೆ ಸಂಯಮಿತ

'ಭೋಡೊ ಭಾರತ ಪರ್ವ' (ಮರಾಠಿ) ಈ ಮಹತ್ವದ ಪುಸ್ತಕ ಶ್ರೀ ಪುಂಡಲೀಕಜೀಯವರ ಇತ್ತೀಚಿನ ಹೊಸ ಕೃತಿಯಾಗಿದೆ. ೧೯೪೨ನೇ ಇಸ್ವಿಯಲ್ಲಿ ಭಾರತದಲ್ಲಿ ಪ್ರಚಂಡ ಆಂದೋಲನವಾಯಿತು. ಆದುದರಿಂದಲೇ ಬ್ರಿಟಿಶ ರಾಜ್ಯ ಕರ್ತರು ಅಂತಿಮವಾಗಿ ಈ ದೇಶದೊಳಗಿಂದ ತಮ್ಮ ಕಾಲು ಕಿತ್ತಿದರು. ಆ ಆಂದೋಲನದ ಭೂಮಿಕೆ ಅದರಿಂದಾದ ಅಪರಿಹಾರ್ಯ ಪರಿವರ್ತನೆ ಇದನ್ನು ಈ ಪುಸ್ತಕದ ಪ್ರಾರಂಭದಲ್ಲಿ ಕೊಡಲಾಗಿದೆ. ಅನಂತರ ಅವರು ಸ್ವತಃ ಮತ್ತು ಶ್ರೀ ರಾಮಚಂದ್ರ ವಡವಿ ಮೊದಲಾದ ಅವರ ಸಹಕಾರಿಗಳು ಬೆಳಗಾವಿ ಭಾಗದಲ್ಲಿ ಹೇಗೆ ಭಾಗ ತೆಗೆದುಕೊಂಡರೆಂಬುದರ ಸವಿಸ್ತಾರ ವರ್ಣನೆಯಿದೆ. ಕೊನೆಗೆ ಈ ಮಾಹಿತಿಗೆ ಪೋಷಕವೆಂದು ಮೊದಲಿನ ಕೆಲವು ಘಟನೆಗಳನ್ನು ಈ ಪುಸ್ತಕದ ೧೧ ಪರಿಶಿಷ್ಟಗಳಲ್ಲಿ ಕೊಡಲಾಗಿದೆ. ಇಂಥ ಉಪಯುಕ್ತ ಪುಸ್ತಕದ ಕನ್ನಡ ಆವೃತ್ತಿ* ಬೇಗನೆ ಆಗುವದಿದೆಯೆಂದು ಕೇಳಿ ಯಾರಿಗಾದರೂ ಸಂತೋಷವೇ ಆದೀತು. ಅವರು ಮಾಡಿದ ಈ ಚಳುವಳಿಯ ಮುಖ್ಯ ಭಾಗವೆಂದರೆ ಬೆಳಗಾಂವಿಯ ಸುತ್ತುಮುತ್ತಲು ಕನ್ನಡ-ಮರಾಠಿ ಮಾತಾಡುವ ಜನರ ಭಾಗವೇ ಆಗಿತ್ತು.

ಪುಸ್ತಕದ ಉತ್ತರಾರ್ಧದಲ್ಲಿ ಬಂದ ವಿಧ್ವಂಸಕ ಕೃತಿಗಳ ವಿವರಣೆ ಬೆಳಗಾಂವಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಆದ ಆಂದೋಲನದ ಇತಿಹಾಸವೇ ಆಗಿದೆ. ಈ ಇತಿಹಾಸದಲ್ಲಿ ಪ್ರಾಮುಖ್ಯವಾಗಿ ಭಾಗ ತೆಗೆದುಕೊಂಡಂಥ ಕಾಂಗ್ರೆಸ್ಸಿಗರಿಗೆ ಗಾಂಧೀಜೀಯವರ ಅಹಿಂಸಾಪರಾಯಣ ತತ್ವಜ್ಞಾನ ಸಂಪೂರ್ಣ ಮಾನ್ಯವಿರಲಿಲ್ಲ, ಅಥವಾ ಅವಗತವಾಗಿರಲಿಲ್ಲ. ಆದರೂ ಅವರು ಗಾಂಧೀಜೀಯವರ ಅಹಿಂಸಾತ್ಮಕ ತಂತ್ರದ ಹೊರಗೆ ವಿಶೇಷ ಹೋಗತಕ್ಕದ್ದಲ್ಲವೆಂದು ನಿಶ್ಚಯಿಸಿದ್ದರು. ಈ ನೇಮವನ್ನು ಸಹ ಸಡಿಲು ಮಾಡಲು ಅವರ ಸಿದ್ಧತೆ ಇತ್ತು.

೧೯೪೨ನೇ ಇಸ್ವಿ "ಭಾರತ ಭೊಡೋ ಆಂದೋಲನವು" ಭಾರತದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಆಂದೋಲನವಾಗಿತ್ತು. ಈ ಚಳವಳಿಯಿಂದ ಯಾವ ಬೋಧೆಯನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ಸ್ವಲ್ಪ ತಡವಾದರೂ ಅಡ್ಡಿ ಇಲ್ಲ.

---

* ಈ ಕನ್ನಡ ಪುಸ್ತಕ ಮರಾಠಿ ಪುಸ್ತಕದ ಅನುವಾದವಲ್ಲ. ಇದು ಸ್ವತಂತ್ರ ಪುಸ್ತಕ.

ಬ್ರಿಟಿಶರು ತೆಗೆದುಕೊಂಡರು. ಮತ್ತು ಭಾರತವು ಸ್ವತಂತ್ರವಾಯಿತು. ಈ ಐತಿಹಾಸಿಕ ಕಾರಣದಿಂದ ಈ ಆಂದೋಲನಕ್ಕೆ ಒಂದು ಹೊಸ ಪ್ರಕಾರದ ಮಹತ್ವ ಪ್ರಾಪ್ತವಾಗಿದೆ.

ಬೆಳಗಾಂವಿಯ ಸುತ್ತುಮುತ್ತಲಿನ ಪ್ರದೇಶದಲ್ಲಿ ಯಾರು ವಿಧ್ವಂಸಕ ಕೃತ್ಯಗಳನ್ನು ಅತ್ಯಂತ ಉತ್ಸಾಹದಿಂದ, ಕೌಶಲ್ಯದಿಂದ ಮತ್ತು ಅಸಾಧಾರಣ ಸಾಹಸದಿಂದ ಮಾಡಿದರೋ ಅವರೆಲ್ಲರ ಅಭಿನಂದನವನ್ನು ಯಾರಿಗೆ ಅವರ ಮಾರ್ಗ ಒಪ್ಪಿಗೆ ಇಲ್ಲವೋ ಅವರು ಸಹ ಮಾಡುವರು. ಇದಕ್ಕೆ ಎರಡು ಕಾರಣಗಳಿವೆ. (೧) ಏನೇ ಆದರೂ ದೇಶದಲ್ಲಿ ಸ್ಮಶಾನ ಶಾಂತಿಯನ್ನು ಇರಗೊಡತಕ್ಕದ್ದಲ್ಲ ಮತ್ತು ಗುಲಾಮಗಿರಿಯ ಪ್ರತಿಕಾರದ ವಾತಾವರಣವನ್ನು ನಿರಂತರವಾಗಿ ಇಡತಕ್ಕದ್ದು. (೨) ವಿಧ್ವಂಸಕ ಕೃತ್ಯಗಳನ್ನು ಉತ್ಸಾಹದಿಂದ ಮತ್ತು ನಿಷ್ಠಾಪೂರ್ವಕವಾಗಿ ಮಾಡಿದರೂ ಸ್ವತಃ ಮಾನ್ಯ ಮಾಡಿದ ಮರ್ಯಾದೆಯ ಉಲ್ಲಂಘನೆ ಮಾಡದಿರುವ ಅವರ ದೃಢ ನಿರ್ಧಾರ.

ಗುಡ್ಡದಲ್ಲಿ ವಾಸಮಾಡುವ ಅಪರಾಧಿ ಜಾತಿಯ ಬೇಡರ ಸಹವಾಸದಲ್ಲಿ ಇರುತ್ತಿದ್ದರೂ ಅವರು ಸಹಾನುಭೂತಿಪೂರ್ವಕವಾಗಿ ವಿಧ್ವಂಸಕ ಕೃತ್ಯಗಳಲ್ಲಿ ಅವರಾಗಿಯೇ ಕೊಡಲಿಕ್ಕೆ ಬಂದ ಅವರ ಸಹಾಯವನ್ನು ಈ ಜನರು ಸ್ವೀಕರಿಸದೇ ತಮ್ಮ ತತ್ವ ನಿಷ್ಠೆಯನ್ನು ತೋರಿಸಿದರು. ಅದಕ್ಕಾಗಿ ಅವರ ಅಭಿನಂದನೆ ಮಾಡಲೇಬೇಕು. ವ್ಯಕ್ತಿಗತ ಆಸ್ತಿಯನ್ನು ಲೂಟಿಮಾಡುವದು ಈ ಬೇಡರ ಜನರ ನಿತ್ಯವ್ಯವಸಾಯ. ಅದು ಅವರ ಧರ್ಮವೇ ಇದ್ದಂತೆ! ಆಂದೋಲನ ಕಾಲದ ಕಠಿಣ ಪರಿಸ್ಥಿತಿಯಲ್ಲಿ ಆರ್ಥಿಕ ಸಂಕಟದಲ್ಲಿದ್ದರೂ ಬೇಡರು ಕೊಡಲಿಕ್ಕೆ ಬಂದ ಆರ್ಥಿಕ ಸಹಾಯವನ್ನು ಈ ಜನರು ನಿರ್ದಾಕ್ಷಿಣ್ಯವಾಗಿ ಸ್ವೀಕರಿಸದೇ ಇದ್ದುದು ಲಕ್ಷ್ಯದಲ್ಲಿಡುವಂತಹ ಮಾತಾಗಿದೆ. ಎಲ್ಲಿಯೂ ಪ್ರಾಣಹಾನಿಯಾಗತಕ್ಕದ್ದಲ್ಲ. ಒಂದು ವೇಳೆ ಪೋಲೀಸರು ಗುಂಡುಹಾಕಿ ತಮ್ಮ ನಾಯಕನನ್ನು ಕೊಂದರೂ ಅದರ ಮುಯ್ಯವೆಂದು ಪೋಲೀಸರನ್ನು ಕೊಲ್ಲುವ ವಿಚಾರ ಮಾಡತಕ್ಕದ್ದಲ್ಲ ಮುಂತಾದ ಅವರ ಸಂಯಮಗಳು ವಿಚಾರಾರ್ಹವಾಗಿವೆ.

೧೯೪೪ ನೇ ಇಸ್ವಿಯಲ್ಲಿ ಬಿಡುಗಡೆಯಾದನಂತರ ಗಾಂಧೀಜಿಯವರು ಈ ವಿಧ್ವಂಸಕ ಕೃತ್ಯಗಳನ್ನು ಖಂಡತುಂಡಾಗಿ ನಿಷೇಧಿಸಲಿಲ್ಲ. ಇದರ ಅರ್ಥವನ್ನು "ಈ ವಿಧ್ವಂಸಕ ಕೃತ್ಯಗಳನ್ನು ಗಾಂಧೀಜಿಯವರು ಮೌನ ಸಮರ್ಥನ ಮಾಡಿದರು" ಎಂದು ಮಾಡಿ ಗಾಂಧೀಜಿಯವರ ತತ್ವನಿಷ್ಠೆಯಲ್ಲಿ ನ್ಯೂನತೆಯನ್ನು ಹುಡುಕುವ ತತ್ವಜ್ಞರು ಇಲ್ಲವೆಂದಲ್ಲ.

ತಮ್ಮ ಅನುಯಾಯಿಗಳ ಕೈಯಿಂದ ತಪ್ಪುಗಳಾಗಬಾರದು. ಅವರಿಗೆ ಸತ್ಯಾಗ್ರಹದ ಅಂದರೆ ಅಹಿಂಸಾತ್ಮಕ ಪ್ರತಿಕಾರದ ಶುದ್ಧ ಮಾರ್ಗ ಸವಿಸ್ತಾರವಾಗಿ ತಿಳಿಯಬೇಕು ಎಂಬ ದೃಷ್ಟಿಯಿಂದ ಗಾಂಧೀಜಿಯವರು ಎಷ್ಟೋ ಸಾರೆ ಅನೇಕ ಮಾತುಗಳನ್ನು ನಿಷ್ಠುರವಾಗಿ ನಿಷೇಧಿಸಿದ್ದಾರೆ. ಆದರೆ ಯಾವುದೋ ಒಂದು ಮಾತು ಆಗಿ ಹೋಯಿತೆಂ.

ಅವರು ಸ್ವತಹದ ಆದರ್ಶದಲ್ಲಿ ಕೂಡುವದಿಲ್ಲ. ಆದರೂ ಅದು ಜಗತ್ತಿನ ವ್ಯವಹಾರದಲ್ಲಿ ಲೋಕಮಾನ್ಯವಿದೆ. ಅಂತಹದನ್ನು ಸಿಕ್ಕ ಹೊತ್ತಿನಲ್ಲಿ ನಿಷೇಧ ಮಾಡುತ್ತ ಹೋಗುವದು ಗಾಂಧೀಯವರ ಸ್ವಭಾವದಲ್ಲಿದ್ದಿಲ್ಲ. ಒಂದು ವೇಳೆ ಗಾಂಧೀಜಿಯವರು ಈ ಇಡೀ ಚಳುವಳಿಯನ್ನು ಕಟು ಶಬ್ದಗಳಲ್ಲಿ ನಿಷೇಧ ಮಾಡಿದ್ದರೆ ಈ ಚಳವಳಿ ಕಾಲದ ಎರಡು ಮೂರು ವರ್ಷಗಳಲ್ಲಿ ಭಾರತದಲ್ಲಿಯ ಬ್ರಿಟಿಶ ಸರಕಾರ ಯಾವ ಅಮಾನುಷ ಅತ್ಯಾಚಾರ ಮಾಡಿತೋ ಮತ್ತು ಎಂದೂ ಸಮರ್ಥನ ಮಾಡಲಿಕ್ಕೆ ಬರದಂಥ ಯಾವ ಹಿಂಸೆಯನ್ನು ಮಾಡಿತೋ ಅವುಗಳ ಮೇಲೆ ಪಡದೆ ಬೀಳುತ್ತಿತ್ತು.

ಈ ಪುಸ್ತಕದ ಉತ್ತರಾರ್ಧದಲ್ಲಿಯ ಚಳವಳಿವಯ ನಾಯಕ ಶ್ರೀ ರಾಮಚಂದ್ರ ವಡವಿ ಎಂದು ಗೊತ್ತಾಗುತ್ತದೆ. ಅವರು ಮತ್ತು ಇತರರು ತಮ್ಮ ಸಮರ್ಥನೆಗಾಗಿ ಎರಡು ಮೂರು ಸಾರೆ ಆ ಕಾಲಕ್ಕೆ ಶ್ರೀ ಕಿಶೋರಲಾಲಭಾಯಿ ಮತ್ತು ನಾನು ಬರೆದ ಲೇಖನಗಳ ಉಪಯೋಗ ಮಾಡಿಕೊಂಡಿದ್ದಾರೆ. ಆದುದರಿಂದ ನನಗೆ ಇಲ್ಲಿ ಎರಡು ಶಬ್ದ ಬರೆಯುವದು ಅಪರಿಹಾರ್ಯವಿದೆ. ಇಷ್ಟೇ ಅಲ್ಲ ಇದಕ್ಕಾಗಿಯೇ ಶ್ರೀ ಪುಂಡಲೀಕಜಿ ಮತ್ತು ವಡವಿಯವರು ನನ್ನಿಂದ ಈ ಪುಸ್ತಕಕ್ಕೆ ಪ್ರಸ್ತಾವನೆ ಕೇಳಿದ್ದಾರೆ. ನನ್ನ ಉಲ್ಲೇಖವನ್ನು ವಡವಿ, ಪುಂಡಲೀಕಜಿ ಮತ್ತು (ಮರಾಠಿ ಪುಸ್ತಕದ) ಪ್ರಸ್ತಾವನಾ ಲೇಖಕ ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ ಜೋಶಿ ಇವರು ಮಾಡಿದ್ದಾರೆ. ಆದರೆ ಆ ಕಾಲಕ್ಕೆ ನಾನು ಬರೆದ ಲೇಖದ ಅವತರಣವನ್ನು ಮಾತ್ರ ಈ ಪುಸ್ತಕದಲ್ಲಿ (ಅಥವಾ ಅದರ ಪರಿಶಿಷ್ಟದಲ್ಲಿ) ಕೊಟ್ಟಿಲ್ಲ. ಇದು ನನಗಾದ ದೊಡ್ಡ ಅನ್ಯಾಯ. ಆದರೆ ಮನೆಯವರಿಂದಲೇ ಅನ್ಯಾಯವಾದರೆ ಏನೆಂದು ತಕರಾರು ಮಾಡುವದು ? ಗಾಂಧೀಯವರ ಮುಂದೆ ತಮ್ಮ ಕುಂಟು ಸಮರ್ಥನೆಗಾಗಿ ಏಕಾಗಲೊಲ್ಲದು ನನ್ನ ಹೆಸರು ಮುಂದೆ ಮಾಡಿದರೆ ಅದಕ್ಕಾಗಿ ನಕ್ಕುಬಿಡಬೇಕು ಅಷ್ಟೇ.

ವಸ್ತುಸ್ಥಿತಿ ಹೀಗಿದೆ : ನಾನು ಬೆಳಗಾಂವಿ ಕಡೆಯ ಮನುಷ್ಯ. ನನ್ನ ಜನ್ಮ ಆದದ್ದು ಮಹಾರಾಷ್ಟ್ರದ ರಾಜಧಾನಿ ಸಾತಾರಾದಲ್ಲಿ. ನನ್ನ ಪ್ರಾಥಮಿಕ ಹಾಗೂ ಕಾಲೇಜ ಶಿಕ್ಷಣ ಪುಣೆಯಲ್ಲಿ ಆದವು. ಇಷ್ಟಾದರೂ ನಮ್ಮ ಮನೆ ಶಹಪೂರದಲ್ಲಿ, ಜಮೀನು ಮುಂತಾದ್ದು ಬೆಳಗಾಂವಿ ಹತ್ತರ ಬೆಳಗುಂದಿಯಲ್ಲಿ. ನನ್ನ ರಾಷ್ಟ್ರಸೇವೆ ಪ್ರಾರಂಭವಾದದ್ದು ಬೆಳಗಾಂವಿಯಲ್ಲಿ ಒಂದು ರಾಷ್ಟ್ರೀಯ ಶಾಲೆಯಿಂದ. ಆದುದರಿಂದ ಮಹಾರಾಷ್ಟ್ರ ಮತ್ತು ಕರ್ನಾಟಕದ ಪ್ರಖ್ಯಾತ ಮುಂದಾಳುಗಳಾದ ಶ್ರೀ ಗಂಗಾಧರರಾವ ದೇಶಪಾಂಡೆಯವರದೂ ನನ್ನದೂ ಪರಿಚಯವಾಯಿತು. ಲೋಕಮಾನ್ಯ ಟಿಳಕರು ಮುಂಬೈಯಲ್ಲಿ ತೆಗೆದ ದೈನಿಕ "ರಾಷ್ಟ್ರಮತ"ದ ಎಲ್ಲ ಭಾರವನ್ನು ಲೋಕಮಾನ್ಯರು ಕೊನೆ ಕೊನೆಗೆ ಗಂಗಾಧರರಾಯರ ಕಡೆಗೇ ಒಪ್ಪಿಸಬೇಕಾಯಿತು. ಗಂಗಾಧರರಾಯರು ನನ್ನನ್ನು "ರಾಷ್ಟ್ರಮತ"ದೊಳಗೆ ಜಗ್ಗಿಕೊಂಡರು. ಅರ್ಥಾತ್ ಮಹಾರಾಷ್ಟ್ರದೊಳಗಿನ

ಕಾಂಗ್ರೆಸ ರಾಜಕಾರಣಕ್ಕಿಂತಲೂ ಮುಂದೆ ಹೋದ ಕ್ರಾಂತಿಕಾರಿ ವಿಚಾರಸರಣಿಯೊಂದಿಗೆ ಇದ್ದ ನನ್ನ ತಾದಾತ್ಮ್ಯದಿಂದ ಇದೆಲ್ಲವೂ ಆಯಿತು.

ಮುಂದೆ ನನ್ನದೂ ಮಹಾತ್ಮಾಗಾಂಧೀಯವರದೂ ಸಂಬಂಧ ಬಂತು. ಅವರು ನನ್ನನ್ನು ಗುಜರಾತದೊಳಗಿನ ತಮ್ಮ ಆಶ್ರಮಕ್ಕೆ ಕರೆದೊಯ್ದರು. ನಾನು ಗಾಂಧೀಜಿಯವರ ಅಹಿಂಸಕ ತತ್ವಜ್ಞಾನವನ್ನು ಸಂಪೂರ್ಣ ಸ್ವೀಕಾರಮಾಡಿದೆ. ಅವರ ಸಾಪ್ತಾಹಿಕ "ನವಜೀವನದಲ್ಲಿ" ನಾನು ಗುಜರಾತಿಯಲ್ಲಿ ಬರೆಯತೊಡಗಿದೆ. ಮುಂದೆ ಗಾಂಧೀಯವರು ತಮ್ಮ "ವಿಶ್ವವಿದ್ಯಾಲಯ" 'ಗುಜರಾಥ ವಿದ್ಯಾಪೀಠ'ದ ಎಲ್ಲ ಹೊಣೆಯನ್ನು ನನ್ನ ಕಡೆಗೆ ಒಪ್ಪಿಸಿದರು. ಆದುದರಿಂದ ಗಾಂಧೀ ವಿಚಾರ, ಗಾಂಧೀಜಿಯ ತತ್ವಜ್ಞಾನ ಮತ್ತು ಅವರ ಅಹಿಂಸಕ ಪ್ರತಿಕಾರ ಮೊದಲಾದವುಗಳ ಸ್ಪಷ್ಟ ಕಲ್ಪನೆ ನನಗಿದೆಯೆಂದು ಎಲ್ಲರೂ ತಿಳಿಯಹತ್ತಿದರು.

ನಾನು ಗಂಗಾಧರರಾಯರಿಗೆ ಹೇಳಿದೆ. ಗಾಂಧೀ ಶ್ರೇಷ್ಠ ಕ್ರಾಂತಿಕಾರಿ ಇರದಿದ್ದರೆ ನಾನು ಅವರ ತತ್ವಜ್ಞಾನ ಸ್ವೀಕರಿಸುತ್ತಲೇ ಇರಲಿಲ್ಲ. ಗಾಂಧೀ ಯಾವ ಪ್ರಕಾರ ನಿಜವಾಗಿಯೂ ಪೂರ್ಣ ಸಾಧು ಇದ್ದಾರೆಯೋ ಅದೇ ಪ್ರಕಾರ ಅವರು ಅತ್ಯಂತ ಕುಶಲ ರಾಜಕಾರಣಿಗಳೂ ಇದ್ದಾರೆ. ಅದಕ್ಕಿಂತಲೂ ಮುಂದೆ ಹೋಗಿ ನಾನು ಹೇಳುತ್ತೇನೆ : ಗಾಂಧೀಯವರು ಯುದ್ಧ ಕಲಾ ನಿಪುಣ, ಲೋಕೋತ್ತರ ಸೇನಾಪತಿಯೂ ಆಗಿದ್ದಾರೆ. ಭಾರತೀಯ ಜನತೆಯೊಂದಿಗೆ ಅವರಿಗಿದ್ದಷ್ಟು ಹಾರ್ದಿಕ ಐಕ್ಯ ನಾನು ಮತ್ತೆಲ್ಲಿಯೂ ನೋಡಿಲ್ಲ. ನಮ್ಮ ಸಂಸ್ಕೃತಿಯಲ್ಲಿ ಯಾವುದನ್ನು ಜನತೆ ಆತ್ಮಸಾತ್ ಮಾಡಿಕೊಂಡಿದೆಯೋ ಅವುಗಳಲ್ಲಿಯ ಗುಣದೋಷ ಎರಡೂ ಗಾಂಧೀಗೆ ಗೊತ್ತಿದೆ. ವಿಶೇಷವೆಂದರೆ ಯಾವುದನ್ನು ನಾವು ದೋಷವೆಂದು ತಿಳಿಯುತ್ತೇವೆಯೋ ಅದರ ಹಿನ್ನೆಲೆಯ ಸ್ವಭಾವ ತಿಳಿದುಕೊಂಡು ಅದಕ್ಕೆ ತೇಜಸ್ವಿರೂಪ ಕೊಡುವದು ಗಾಂಧೀಗೆ ಸಾಧಿಸುತ್ತಿದೆ. ದೋಷವನ್ನು ಸಹ ಪ್ರಯತ್ನಪೂರ್ವಕವಾಗಿ ಗುಣದಲ್ಲಿ ಪರಿವರ್ತಿಸುವದು ರಾಷ್ಟ್ರಪುರುಷನಿಗೆ ಮತ್ತು ಸೇನಾಪತಿಗೆ ಸಾಧಿಸಲು ಬರಲೇಬೇಕು.

ಗಾಂಧೀಜಿಯವರ ಸತ್ಯಾಗ್ರಹವೆಂದರೆ ಅಹಿಂಸಕ ಪ್ರತಿಕಾರ. ಇದರಲ್ಲಿ ಅಹಿಂಸಕ ವಿಶೇಷಣವಿದೆ. ಪ್ರತಿಕಾರ ನಾಮವಿದೆ. ಇದನ್ನು ನಾವು ಮರೆಯಬಾರದು. ಗಾಂಧೀಜಿಯವರಿಗೆ ನೂರಕ್ಕೆ ನೂರು ಅಹಿಂಸಕನಾಗಿರುವದು ಬೇಕು. ಆದರೆ ಪ್ರತಿಕಾರ ಶಕ್ತಿಯನ್ನು ನೂರರಲ್ಲಿ ಒಂದಂಶವಾದರೂ ಕಡಿಮೆ ಮಾಡಕೂಡದು. ಅವರು ಕಾಲಕ್ಕೆ ತಕ್ಕಂತೆ ಹಿಂದೆ ಸರಿಯಬಹುದು. ಒಪ್ಪಂದ ಮಾಡಿಕೊಳ್ಳಬಹುದು. ಆದರೆ ಅನ್ಯಾಯ ಅತ್ಯಾಚಾರ. ಶೋಷಣೆ ಮತ್ತು ಪಾರತಂತ್ರ್ಯ ಇವು ಅವರಿಗೆ ಎಂದೂ ಸಹನ ಆಗಲಾರವು. ಈ ಎಲ್ಲ ತೇಜಸ್ವಿತೆ ನನಗೆ ಗಾಂಧೀಜಿಯವರಲ್ಲಿ ಕಾಣಿಸಿತು. ಆದುದರಿಂದಲೇ ನಾನು ಅವರವನಾದೆ.

ನಾನು ಹೇಳಿದ್ದು ಒಪ್ಪಿಗೆಯಾದನಂತರವೇ ಅವರು (ಗಂಗಾಧರರಾಯರು) ಬೆಳಗಾಂವಿಯ ೧೯೧೬ ನೇ ಇಸ್ವಿಯಲ್ಲಾದ ಮುಂಬೈ ಇಲಾಖೆ (ಪ್ರಾಂತೀಯ) ಪರಿಷತ್ತಿಗೆ ನನ್ನ ಮುಖಾಂತರ ಆಮಂತ್ರಣ ಕೊಟ್ಟರು, ಮತ್ತು ಸ್ವರಾಜ್ಯ ಪ್ರಾಪ್ತಿಗಾಗಿ ಅವರು (ಗಂಗಾಧರರಾಯರು) ಗಾಂಧೀಜಿಯವರ ನೇತೃತ್ವ ಸ್ವೀಕರಿಸಿದರು.

ಸಶಸ್ತ್ರ ಕ್ರಾಂತಿ ಮತ್ತು ಗಾಂಧೀಜಿಯವರ ನಿಃಶಸ್ತ್ರಕ್ರಾಂತಿ ಇವೆರಡರ ತತ್ವಜ್ಞಾನದ ಪರಿಚಯ ಮಾಡಿಕೊಂಡಂಥ ನಾನು ೧೯೪೨ ನೇ ಇಸ್ವಿಯಲ್ಲಿ ಬರೆದದ್ದು ವಿಚಾರಪೂರ್ವಕವಾಗಿಯೇ ಬರೆದಿದ್ದೆ.

೧೯೪೨ ನೇ ಇಸ್ವಿಯಲ್ಲಿ ನಡೆದ ಎಲ್ಲ ವಿಧ್ವಂಸಕ ಕೃತ್ಯಗಳ ಸಮರ್ಥನೆ ನನ್ನ ಲೇಖನದಿಂದ ಆಗುವದು ತೀರ ಅಶಕ್ಯವಿದೆ. ಆದರೆ ನಾನು ಬರೆದ ಲೇಖನದಿಂದ ಕೆಲವು ಮಾತುಗಳನ್ನು ಆ ಜನರು ತೆಗೆದುಕೊಂಡು ಅವುಗಳ ಅತಿರೇಕ ಮಾಡಿದರು. ಒಂದು ವೇಳೆ ನಾನು ಆಗ ಜೇಲಿನಲ್ಲಿರದಿದ್ದರೆ ಮತ್ತು ಭೂಗತನಾಗಿರುವ ಸಂಧಿ ನನಗೆ ದೊರೆತಿದ್ದರೆ ದೇಶದೊಳಗೆ ನಡೆದ ಆಂದೋಲನದ ಮೇಲೆ ನನ್ನ ಯೋಜನೆಯ ಪ್ರಭಾವ ಬೀರುವ ಪ್ರಯತ್ನ ಮಾಡುತ್ತಿದ್ದೆ. ಆ ಕಾಲಕ್ಕೆ ಜನರು ಮಾಡಿದ ಎಷ್ಟೋ ಸಂಗತಿಗಳು ನನಗೆ ಮಾನ್ಯವಿಲ್ಲ. ಮತ್ತು ಅವು ಗಾಂಧೀಜಿ ತತ್ವಜ್ಞಾನದಲ್ಲಿ ಕೂಡುವದಿಲ್ಲ ಎಂದು ನನಗನಿಸುತ್ತಿದ್ದರೂ ಆ ಜನರು ಅದರಲ್ಲಿಯೂ ಸಂಯಮ ತೋರಿಸಿದಂಥ ಜನರು ಗಾಂಧೀಜಿ ದೃಷ್ಟಿಯಿಂದ ಸಾಕಷ್ಟು ಇಲ್ಲದಿದ್ದರೂ ಅಭಿನಂದನೀಯರಿದ್ದಾರೆ ಎಂದು ಇವತ್ತಿಗೂ ನನ್ನಿಂದ ಹೇಳದೆ ಇರಲಿಕ್ಕಾಗುವದಿಲ್ಲ

ಬ್ರಿಟಿಶ ಸಾಮ್ರಾಜ್ಯದೊಳಗಿನ ಮುಕುಟಮಣಿಯೆಂದರೆ 'ಬ್ರಿಟಿಶರ ಭಾರತದೊಳಗಿನ ರಾಜ್ಯ' ಅದು ನಿಜವಾಗಿಯೂ ಕೈಬಿಟ್ಟು ಹೋಗುತ್ತದೆ ಎಂಬ ಭೀತಿ ಉಂಟಾದ ಕೂಡಲೇ ರಾಜ್ಯಕರ್ತರು ಪೋಲೀಸರ ಮುಖಾಂತರ ಮತ್ತು (ಮಿಲಿಟರಿ ಮುಖಾಂತರ ಸಹ) ಯಾವ ಅತ್ಯಾಚಾರ ಮಾಡಿದರೋ ಅದಕ್ಕೆ ಗಾಂಧೀಜಿ Leonine violence ಎಂದು ಕರೆದಿದ್ದಾರೆ. ಇಂಥ ಭಯಾನಕ ಅತ್ಯಾಚಾರಕ್ಕೆ ತ್ರಾಹಿ ತ್ರಾಹಿ ಆಗಿ ಪ್ರಜರು ಹಿಂಸಕ ಕೃತ್ಯ ಮಾಡಿದರು. (ಅದರಲ್ಲಿ ಹುಚ್ಚುತನ ಹೆಚ್ಚಾಗಿತ್ತೆಂಬುದನ್ನು ಗಾಂಧೀಜಿ ಒಪ್ಪಿದ್ದಾರೆ) ಮುಂದೆ ಮಾಡಿದ್ದರೆ ಅದು ಯೋಗ್ಯ ಆಗುತ್ತಿದ್ದಿಲ್ಲ. ಪ್ರಜರ ಕಡೆಯಿಂದ ಯಾವದೇ ಅತ್ಯಾಚಾರವಾಗಿರಲಿ ಅದರ ಹೊಣೆ ಸರಕಾರೀ ಅಧಿಕಾರಿಗಳು ಮಾಡಿದ ಅತ್ಯಾಚಾರದ ಕಡೆಗೆ ಹೋಗುತ್ತದೆ ಎಂದು ಗಾಂಧೀಜಿ ಸರಕಾರಕ್ಕೆ ಸ್ಪಷ್ಟ ತಿಳಿಸಿದ್ದರು.

ಇದರ ಅರ್ಥ ಜನರು ಮಾಡಿದ ಅತ್ಯಾಚಾರಕ್ಕೆ ಗಾಂಧೀಜಿ ತಮ್ಮ ಮೂಕ ಸಮ್ಮತಿ ಕೊಟ್ಟರೆಂದು ಆಗುತ್ತಿದೆಯೇ ?

"ಸರಕಾರ ಹೇಳಿ ಕೇಳಿ ಹಿಂಸಾವಾದಿ. ಆದುದರಿಂದ ಸರಕಾರ ತಮ್ಮ ಕಾನೂನನ್ನೇ ಕಾಲ ಕೆಳಗೆ ತುಳಿದು ಪೋಲೀಸರ ಮುಖಾಂತರ, ಸೇನೆಯ ಮುಖಾಂತರ ಬೇಕಾದಷ್ಟು ಅತ್ಯಾಚಾರ ಮಾಡಿದರೂ ಅದರ ವಿರುದ್ಧ ಏನೂ ಮಾತಾಡುವ ಕಾರಣವಿಲ್ಲ.

ಆ ಪರಿಸ್ಥಿತಿಯಲ್ಲಿ ನಮ್ಮ ಜನರ ಕಡೆಯಿಂದ ಯಾವದೇ ಘಟನೆ ಸಂಭವಿಸಿದ್ದರೂ (ಅದು ಹುಚ್ಚುತನದ್ದಿದ್ದರೂ) ಅದನ್ನೇ ಟೀಕಿಸುತ್ತ ಕೂಡಬೇಕು ಎಂದು ಯಾರಾದರೂ ಹೇಳ ಬಹುದೇ ?

ಇನ್ನು ಎರಡನೆಯ ವಿಷಯ: ಶ್ರೀ ಗಂಗಾಧರರಾಯರ ಕಡೆಯಿಂದ ಅಥವಾ ಪುಂಡಲೀಕಜೀ ಕಡೆಯಿಂದ ನನ್ನ ಕಡೆಗೆ ಬಂದಿರಬಹುದು.* ಅವರಿಗೆ ಅಹಿಂಸಾ ತತ್ವ ಜ್ಞಾನ ತಿಳಿದಿದೆ. ಮತ್ತು ಅವಗತವೂ ಆಗಿದೆ. ಎಂದು ನನ್ನ ತಿಳಿವಳಿಕೆ. ಅವರು ನನ್ನ ಕಡೆಗೆ ಇದ್ದಾಗ ಕಾಂಗ್ರೆಸ ಅಥವಾ ಇತರ ಯಾವುದೇ ರಾಜಕೀಯ ಚಳವಳಿಯಲ್ಲಿ ಭಾಗ ತೆಗೆದುಕೊಂಡ ವಿಷಯ ಎಂದೂ ನನಗೆ ಹೇಳಿರಲಿಲ್ಲ. ಶ್ರೀ ಪುಂಡಲೀಕಜೀಯವರ ಪುಸ್ತಕದಲ್ಲಿ ಅವರ ಪರಾಕ್ರಮ ಓದಿ ನನಗೆ ಆಶ್ಚರ್ಯವಾಯಿತು ! ನಮ್ಮ ಸಾದಾ, ಸರಳ ವಡವಿ ಇವರೇ ಏನು ? ಎಂದು ಸಂಶಯವೂ ಮನಸ್ಸಿನಲ್ಲಿ ಬಂತು. ೧೯೪೨ನೇ ಇಸ್ವಿ ಯಲ್ಲಿ ನಾನು ಬರೆದ ಲೇಖದ ನಂತರವೇ ಅವರಲ್ಲಿ ಈ ಕೃತಿಗಳೆಲ್ಲ ಅವತರಿಸಿದವೇ ಎಂದು ವಿಚಾರ ಮಾಡತೊಡಗಿದೆ. ಆದರೆ ಸುದೈವದಿಂದ ಇದೇ ಪುಸ್ತಕದಲ್ಲಿ ವಡವಿಯವರ ೧೯೩೨ನೇ ಇಸ್ವಿಯ ಹಳೆಯ ಪರಾಕ್ರಮಗಳು ನನಗೆ ಓದಲಿಕ್ಕೆ ದೊರೆತವು. '೩೨ನೇ' ಇಸ್ವಿಯ ಚಾಣಾಕ್ಷ ವಡವಿಯೇ '೪೨' ನೇ ಇಸ್ವಿಯಲ್ಲಿ ಭೂಗತರಿದ್ದು ವಿಧ್ವಂಸಕ ಕೃತ್ಯ ನಡಸುತ್ತಿದ್ದರು. ನನ್ನ ಲೇಖನವನ್ನು ಅವರು ನೋಡದಿದ್ದರೂ ಅವರ ಕಾರ್ಯಕ್ರಮ ದಲ್ಲಿ ವ್ಯತ್ಯಾಸವಾಗುತ್ತಿದ್ದಿಲ್ಲ. ಸ್ವಂತದ ಸಮರ್ಥನೆಗಾಗಿ ನನ್ನ ಲೇಖನ ಉಪಯೋಗ ಜೀಳುತ್ತದೆಂದು ಅದನ್ನು ಮುಂದೆ ಮಾಡಿದ್ದಾರೆ ಇಷ್ಟೆ !

ಅದರಂತೆಯೇ ಶ್ರೀ ಪುಂಡಲೀಕಜೀಯವರಿಗೂ ಸಹ ಅದು ಅತ್ಯಂತ ಉಪ ಯುಕ್ತವಾಗಿರಲಿಕ್ಕೇಬೇಕು.

೧೯೪೨ನೇ ಇಸ್ವಿಯಲ್ಲಿ ಶ್ರೀ ಕಿಶೋರಿಲಾಲಭಾಯಿ ಏನು ಬರೆದಿದ್ದರು ನಾನು ಏನು ಬರೆದಿದ್ದೆ ಎಂಬುದು ಇದ್ದಕ್ಕಿದ್ದಂತೆ ನೆನಪಾಗುವದಿಲ್ಲ. ಆ ಬರಹದ ಪ್ರತಿಗಳು ನನಗೆ ಸಿಕ್ಕರೆ ನೆಟ್ಟಗಾಗುವದು. ಶ್ರೀ ಕಿಶೋರಿಲಾಲಭಾಯಿಯವರಿಗೆ ಆ ಉತ್ಸಾಹದ ಭರದಲ್ಲಿ ತಾವು ಬರೆದದ್ದು ಸದೋಷವಾಗಿತ್ತೆಂದು ಹಿಂದಿನಿಂದ ಅನಿಸಹತ್ತಿತು. ಆಪ್ರಕಾರ ಅವರು ಆಗಿನ ವಿದೇಶಿ ಭಾರತ ಸರಕಾರಕ್ಕೆ ಬರೆದೂ ತಿಳಿಸಿದರು. ಮತ್ತು ಆ ಪತ್ರವನ್ನು ಜನತೆಯ ಸಲುವಾಗಿ ಪ್ರಸಿದ್ಧ ಸಹ ಮಾಡಿದರೆಂದೂ ನನಗನಿಸುತ್ತದೆ.

ಆಗ ನಾನು ಜೇಲಿನಲ್ಲಿದ್ದೆ. ಶ್ರೀ ಕಿಶೋರಲಾಲಭಾಯಿಯವರ ಆ 'ಪಶ್ಚಾ ತ್ತಾಪ' ಓದಿ ಅನೇಕ ಜನರು ಅಸ್ವಸ್ಥರಾದರು. ನನಗೆ ಭೆಟ್ಟಿಯಾಗುವ ಜನರು ನನ್ನನ್ನು ಕೇಳಹತ್ತಿದರು. "ನೀವೂ ಸಹ ನಮ್ಮ ಕುತ್ತಿಗೆಯನ್ನು ಇದೇ ಪ್ರಕಾರ ಕೊಯ್ಯುವವ

---

*ಇದು ಸರಿ ಇಲ್ಲ. ನಾನು ಮೊದಲು ಹೋದದ್ದು ಗಾಂಧೀಜಿ ಕಡೆಗೆ, ಕಾಕಾಸಾಹೇಬರ ಕಡೆಗೆ, ಆನಂತರ ಗಂಗಾಧರರಾಯರ ಕಡೆಗೆ ಬಂದದ್ದು.

ರೇನು ?" ಎಂದು. ನಾನು ಹೇಳಿದೆ: "ಸಶಸ್ತ್ರ ಕ್ರಾಂತಿ ಹಾಗು ಗಾಂಧಿ ಪದ್ಧತಿಯ ಕ್ರಾಂತಿ ಇವೆರಡರದೂ ಅನುಭವ ನನಗಿದೆ. ನಾನು ಬರೆದದ್ದು ಗಾಂಧೀಜಿಯವರ ಅಹಿಂಸೆಯಲ್ಲಿ ಕೂಡುತ್ತದೆಂದು ನನ್ನ ನಿಶ್ಚಿತ ತಿಳಿವಳಿಕೆ. ನನ್ನ ಲೇಖವನ್ನು ಧ್ಯಾನಪೂರ್ವಕ ಓದದೆ ಸ್ವತಃದ ವಿಧ್ವಂಸಕ ಕೃತಿಗಳ ಸಮರ್ಥನೆಗಾಗಿ ಅದರೊಳಗಿಂದಲೇ ಕೆಲವರಿಗೆ ಕಂಡರೆ ಅದು ಅವರ ತಪ್ಪು. ಈ ಚಳವಳಿಯ ಕಾಲಕ್ಕೆ ನಾವು ಬ್ರಿಟಿಶ ಸರಕಾರ ಮಾನ್ಯ ಮಾಡುವದನ್ನು ಬಿಟ್ಟೆವು. ಮತ್ತು ಸ್ವತಃಕ್ಕೆ ಸ್ವತಂತ್ರರೆಂದು ತಿಳಿಯಹತ್ತಿದೆವು. ಇಂಥ ಕಾಲಕ್ಕೆ ಸರಕಾರದ ಕಡೆಯಿಂದ ಆಗುವ ಅನ್ಯಾಯ ಮತ್ತು ಅತ್ಯಾಚಾರಗಳ ಪ್ರತೀಕಾರ ಹೇಗೆ ಮಾಡಬೇಕೆಂಬುದನ್ನು ನಾನು ಹೇಳಿದ್ದೇನೆ. ನನ್ನ ಸೂಚನೆಗಳು ಗಾಂಧಿ ವಿಚಾರ ದಲ್ಲಿ ಸಂಪೂರ್ಣ ಕೂಡುತ್ತವೆಂದು ನನಗೆ ನಿಶ್ಚಿತವಾಗಿ ಅನಿಸುತ್ತದೆ. ನಾನು ಬರೆದದ್ದ ರಲ್ಲಿ ಬದಲಾವಣೆ ಮಾಡಬೇಕೇದು ನನಗನಿಸುವದಿಲ್ಲ.

ಮುಂದೆ ಗಾಂಧಿಯವರ ಬಿಡುಗಡೆಯಾಯಿತು. ನಮ್ಮೆಲ್ಲರ ಬಿಡುಗಡೆಯೂ ಆಯಿತು. ಒಮ್ಮೆ ಪ್ರಸಂಗ ಬಂದಾಗ ನಾನು ಗಾಂಧೀಯವರಿಗೆ ಹೇಳಿದೆ "ಶ್ರೀ ಕಿಶೋರ ಲಾಲಭಾಯಿಯವರು ಪಶ್ಚಾತ್ತಾಪ ವ್ಯಕ್ತಮಾಡಿ ತಮ್ಮ ತಪ್ಪು ಒಪ್ಪಿಕೊಂಡಿದ್ದಾರೆ. ಆಬಗ್ಗೆ ನನಗೇನೂ ಹೇಳುವದಿಲ್ಲ. ನಾನು ಬರೆದದ್ದನ್ನು ಕುರಿತು ಮಾತ್ರ ಈ ಹೊತ್ತು ಹೊಸದಾಗಿ ಸಮರ್ಥನೆ ಮಾಡುವದೇನೂ ಇಲ್ಲ. ಆ ಕಾಲಕ್ಕೆ ನಾನು ಬರೆದದ್ದು ಅತ್ಯಂತ ಸರಿಯಾಗಿತ್ತೆಂದು ಇವತ್ತೂ ನನ್ನ ಮತವಿದೆ. ನನ್ನ ವಿಚಾರಗಳನ್ನು ಅಹಿಂಸೆಯ ದೃಷ್ಟಿಯಿಂದ ಸಮರ್ಥನೆ ಮಾಡುವದಕ್ಕಾಗಿ ಒಂದು ಲೇಖ ಮಾಲೆಯನ್ನೇ ಪ್ರಾರಂಭ ಮಾಡುವವನಿದ್ದೇನೆ. ಇತ್ಯಾದಿ."

ಗಾಂಧೀಜಿ ಅಂದರು : "ಈಗ ಪರಿಸ್ಥಿತಿಬ ದಲಾಗಿದೆ. ನಮ್ಮ ಮುಂದೆ ಹೊಸ ಹೊಸ ಕೆಲಸಗಳಿವೆ. ಆದುದರಿಂದ ಸಮರ್ಥನಾತ್ಮಕ ಲೇಖ ಬರೆಯುವದು ಬಿಟ್ಟರೆ ಏನೂ ಕೆಡುವದಿಲ್ಲ." ಗಾಂಧೀಜಿಯವರ ಸಲಹೆಯನ್ನು ನಾನು ಯಾವಾಗಲೂ ಮಾನ್ಯ ಮಾಡುತ್ತಿದ್ದುದರಿಂದ ಆ ಲೇಖಮಾಲೆಯನ್ನು ಬರೆಯುವ ವಿಚಾರ ಬಿಟ್ಟುಬಿಟ್ಟೆ. ಮತ್ತು ಆ ಪ್ರಕರಣ ಅಲ್ಲಿಗೇ ಮುಗಿಯಿತು.

ಅವತ್ತು ನಾನು ಬರೆದದ್ದು ಇವತ್ತು ನನ್ನ ಎದುರಿನಲ್ಲಿಲ್ಲ. ಆದರೆ ಆಗಿನ ನನ್ನ ಭೂಮಿಕೆ ನನ್ನ ಮನಸ್ಸಿನಲ್ಲಿ ಸ್ಪಷ್ಟವಿದೆ. ಅದನ್ನು ಇಲ್ಲಿ ಕೊಡುತ್ತಿದ್ದೇನೆ. "ನಮ್ಮ ಮೊದಲಿನ ಚಳವಳಿ ಮತ್ತು ಇವತ್ತಿನ (೧೯೪೨ನೇ ಇಸ್ವಿ ಚಳವಳಿ) ಚಳವಳಿ ಇವುಗಳಲ್ಲಿ ವ್ಯತ್ಯಾಸವಿದೆ. ಮೊದಲು ನಾವು ಬ್ರಿಟಿಶರ ರಾಜ್ಯಕ್ಕೆ ಮಾನ್ಯತೆ ಕೊಟ್ಟಿದ್ದೆವು. ರಾಜ್ಯ ಪದ್ಧತಿಯಲ್ಲಿ ಮತ್ತು ಅಧಿಕಾರ ವಿಭಜನೆಯಲ್ಲಿ ಸುಧಾರಣೆ ಮಾಡುವದಕ್ಕಾಗಿ ಸತ್ಯಾಗ್ರಹ ಮಾಡುವತನಕ ಹೋಗಲಿಕ್ಕೆ ನಾವು ಸಿದ್ಧರಿದ್ದೆವು. ಆದರೆ ಅದರ ಮೂಲದಲ್ಲಿ ಇಂಗ್ಲೀಷರ ರಾಜ್ಯಕ್ಕೆ ನಮ್ಮ ತಾತ್ವಿಕ ಮಾನ್ಯತೆ ಇತ್ತು.

ಇವತ್ತ।'ನಾವು ಅವರಿಗೆ ಹೇಳುತ್ತೇವೆ. "ನಿಮ್ಮ ಅನುಭವ ನಮಗೆ ಸಾಕಾಗಿದೆ. ಇನ್ನು ನೀವು ನಮಗೆ ರಾಜ್ಯಕರ್ತರೆಂದು ಬೇಡ. ನಾವು ನಮ್ಮದನ್ನು ನೋಡಿಕೊಳ್ಳುತ್ತೇವೆ. ನಮ್ಮನ್ನು ಸೆರೆಮನೆಯಲ್ಲಿಟ್ಟರೆ ನಿಮ್ಮ ಆ ಶಕ್ತಿ ನಮಗೆ ಮಾನ್ಯವಿದೆ. ನಾವು ಇರುತ್ತೇವೆ ಸೆರೆಮನೆಯಲ್ಲಿ. ಆದರೆ ನಾವು ಇದುವರೆಗೆ ನಿಮಗೆ ಕೊಟ್ಟ ನಮ್ಮ ಮಾನ್ಯತೆಯನ್ನು ತಿರುಗಿ ತೆಗೆದುಕೊಳ್ಳುತ್ತೇವೆ. ಇನ್ನು ಮುಂದೆ ನಮ್ಮ ಮೇಲೆ ರಾಜ್ಯ ಮಾಡುವ ಅಧಿಕಾರ ನಿಮಗುಳಿದಿಲ್ಲ" ಈ ರೀತಿ ಸ್ಪಷ್ಟಪಡಿಸಿದನಂತರ ಅವರು ರೊಚ್ಚಿಗೆದ್ದು ಬಡ ಜನತೆಯ ಮೇಲೆ ಗೋಳೀಬಾರ ಮಾಡುವದಕ್ಕಾಗಿ ಸೈನ್ಯ ಕಳಿಸಲು ನಿಶ್ಚಯಿಸಿದರೆ, ಆ ಸೈನ್ಯ ಅಲ್ಲಿಗೆ ಬರಬಾರದು. ಬಂದರೂ ಹೊತ್ತಿಗೆ ಸರಿಯಾಗಿ ಅಲ್ಲಿಗೆ ಮುಟ್ಟಬಾರದು ಎಂಬ ದೃಷ್ಟಿಯಿಂದ (ಯಾರ ಪ್ರಾಣಹಾನಿಯೂ ಆಗಬಾರದೆಂಬ ಬಗ್ಗೆ ಪೂರ್ಣ ಎಚ್ಚರಿಕೆ ವಹಿಸಿ) ಆ ಸೈನ್ಯದ ರೇಲ್ವೆ ಪ್ರವಾಸದಲ್ಲಿ ವಿಘ್ನ ತರುವ ಅಧಿಕಾರ ನಮಗಿದೆ. (ದೇಶದೊಳಗಿನ ಎಲ್ಲ ರೇಲ್ವೆ ವ್ಯವಹಾರ ಬಂದಾಗಬೇಕೆಂಬ ಸೂಚನೆ ನನ್ನದಿರಲಿಲ್ಲ) ಒಂದು ಸ್ಥಳದಲ್ಲಿ ಜನರು ಸತ್ಯಾಗ್ರಹ ಮಾಡುತ್ತಿದ್ದರೆ ಅದನ್ನು ಹತ್ತಿಕ್ಕುವದಕ್ಕಾಗಿ ಸರಕಾರ ಸೈನ್ಯ ಕಳಿಸುತ್ತದೆಂದು ನಮಗೆ ಗೊತ್ತಾದರೆ ಆಗ ರೇಲ್ವೆ ಹಳಿ ಕಿತ್ತಿ ಅಥವಾ ಸೇತುವೆ ಕೆಡವಿ. ಸೈನ್ಯ ಹೋಗುವ ಮಾರ್ಗದಲ್ಲಿ ವಿಘ್ನ ಉಂಟು ಮಾಡುವದು ನಮ್ಮ ಅಹಿಂಸಕ ಪ್ರತಿಕಾರದಲ್ಲಿ ಕೂಡುತ್ತದೆ. ಆದರೆ ಹೀಗೆ ಮಾಡುವಾಗ ರೇಲ್ವೆ ಹಳಿಯಿಂದ ಅಥವಾ ಸೇತುವೆ ಮೇಲಿಂದ ಕೆಳಗೆ ಗಾಡಿ ಬಿದ್ದು ಪ್ರಾಣಹಾನಿ ಆಗಬಾರದೆಂಬ ದೃಷ್ಟಿಯಿಂದ ನಾವು ಎರಡೂ ಬದಿಗೆ ದೂರದಲ್ಲಿ ಕೆಂಪು ನಿಶಾನೆಗಳನ್ನು ಹಚ್ಚಬೇಕು. ಸ್ಟೇಶನ್ ಮಾಸ್ತರರಿಗೂ "ರೇಲ್ವೆ ಹಳಿ ಕಿತ್ತಲ್ಪಟ್ಟಿವೆ, ಅಥವಾ ಸೇತುವೆ ಕೆಡವಿದೆ, ಗಾಡಿಯನ್ನು ತಡೆಹಿಡಿಯಿರಿ ಮುಂದೆ ಬಿಡಬೇಡಿರಿ ಎಂದು ತಿಳಿಸಬೇಕು."

ಆ ಕಾಲಕ್ಕೆ ಹೀಗೆ ಸೂಚನೆಯನ್ನು ಮಾಡಿದ್ದೂ ನನ್ನ ಜ್ಞಾಪಕದಲ್ಲಿದೆ. "ಸೇತುವೆ ಕೆಡವುವಂಥ ಕೆಲಸಕ್ಕೆ ಹತ್ತಿರದ ಗ್ರಾಮದವರು ಸಹಾಯ ಮಾಡಲು ಸಿದ್ಧರಿರದಿದ್ದರೆ ದೂರದಿಂದ ಜನರನ್ನು ತರಬೇಕಾಗುವದು. ಹೀಗಾದಲ್ಲಿ ನಾವು ಸರಕಾರಕ್ಕೆ ಈ ರೀತಿ ತಿಳಿಸಬೇಕು. "ಹತ್ತಿರದ ಗ್ರಾಮದ ಜನರು ಸಹಾಯ ಮಾಡಲು ನಿರಾಕರಿಸಿದರು. ಆದುದರಿಂದ ಈ ಕೆಲಸದಲ್ಲಿ ಅವರ ಅಂಗವೇನೂ ಇಲ್ಲಾ."

ನಮ್ಮ ಈ ನಿವೇದನೆಯ ಮೇಲೆ ಮತ್ತು ಸತ್ಯವಚನದ ಮೇಲೆ ಸರಕಾರದ ವಿಶ್ವಾಸವಿದ್ದರೆ ಅದು ಆ ಗ್ರಾಮಕ್ಕೆ ತೊಂದರೆ ಕೊಡುವದಿಲ್ಲ (ಆದರೆ ಹೀಗಾಗುವ ಸಂಭವ ಕಡಿಮೆ) ಆದ್ದರಿಂದ ನಾವು ಜನರಿಗೆ ಹೇಳಿಬಿಡಬೇಕು: "ನಮ್ಮ ಜನರ ರಕ್ಷಣೆಯ ಸಲುವಾಗಿ ಸೇತುವೆಯನ್ನು ಕೆಡವಿದ್ದೇವೆ. ಈ ಕೆಲಸದಲ್ಲಿ ನಿಮ್ಮ ಸಂಬಂಧವಿಲ್ಲವೆಂದು ನಾವು ಸರಕಾರಕ್ಕೆ ತಿಳಿಸಿದ್ದೇವೆ. ಆದರೂ ಸಂಶಯದಿಂದ ಸರಕಾರ ನಿಮಗೆ ತೊಂದರೆ ಕೊಡುವದು. ಆದುದರಿಂದ ನಿಮಗೆ ಸ್ಥಳಾಂತರ

ಮಾಡುವದಿದ್ದರೆ, ಜಾಗೆ ಬದಲಾಯಿಸುವದಿದ್ದರೆ, ನಾವು ನಿಮಗೆ ಶಕ್ಯವಿದ್ದಷ್ಟು ಸಹಾಯ ಮಾಡುವೆವು. ಅದಕ್ಕಾಗಿ ನೀವು ಸಿದ್ಧರಾಗಿರಿ" ಸರಕಾರೀ ಪೋಲೀಸ ಸೈನ್ಯ ಮತ್ತು ನೌಕರರ ಪ್ರಾಣ ಉಳಿಸಲು ನಾವು ಈ ರೀತಿ ಇಷ್ಟೊಂದು ಎಚ್ಚರಿಕೆ ವಹಿಸುತ್ತೇವೆಂದ ಮೇಲೆ ನಮ್ಮ ಜನರ ಮೇಲೆ ಸರಕಾರ ದಾಳಿ ಮಾಡುತ್ತಿದ್ದರೆ ಅದರಿಂದ ನಮ್ಮ ಜನರನ್ನು ಪಾರು ಮಾಡುವದಕ್ಕಾಗಿ ನಾವು ಎಲ್ಲ ಪ್ರಯತ್ನವನ್ನೂ ಮಾಡಲೇಬೇಕು.

ನಾವು ಚಳವಳಿ ನಡೆಸಬೇಕಾದರೆ ನಮಗೆ ಸ್ವಲ್ಪ ಆರ್ಥಿಕ ಸಹಾಯದ ಅವಶ್ಯಕತೆ ಇದ್ದೇ ಇರುತ್ತದೆ. ಅದಕ್ಕಾಗಿ ಜನರು ಕೊಟ್ಟಷ್ಟು ಸಹಾಯವನ್ನು ತೆಗೆದುಕೊಳ್ಳಬೇಕು. ಅದು ಸಾಲದಿದ್ದರೆ ಮಾತ್ರ ರಾಷ್ಟ್ರದ್ರೋಹಿ ಸರಕಾರದ ಕೈಯಲ್ಲಿದ್ದ ಹಣವನ್ನು ಆವಶ್ಯಕತೆ ಇದ್ದಷ್ಟೇ ಹಸ್ತಗತ ಮಾಡಿಕೊಳ್ಳಬೇಕು. ಯಾಕಂದರೆ ಅದು ಪ್ರಜರದೇ ದುಡ್ಡು (ಇಷ್ಟೇ ಏಕೆ ಇತರ ಸರ್ವ ಕಡೆಯಿಂದ ನಿರುಪಾಯರಾದಾಗ ಮಾತ್ರ ಮತ್ತು ಸಾಧ್ಯವಿದ್ದಷ್ಟು ಕಡಿಮೆ ವಿಧ್ವಂಸಕ ಕೃತ್ಯ ಮಾಡಬೇಕು. ಮುಂತಾದ ನಿರ್ಬಂಧನೆಗಳನ್ನು ಪಾಲಿಸಬೇಕು.)

ಯಾವದೋಂದು ಸ್ಥಳದಲ್ಲಿ ಪೂಲು ಕೆಡವಿದರೆ "ಈ ಕೆಲಸ ತೀರ ಹತ್ತಿರದ ಜನರ ಸಹಾಯದಿಂದಾಗಿರಬೇಕು" ಎಂದು ಅನುಮಾನದಿಂದ ಸರಕಾರವು ಆ ಊರೊಳಗಿನ ಜನರನ್ನು ನಾಮಶೇಷ ಮಾಡುತ್ತದೆ. ಆದುದರಿಂದ ಇದನ್ನು ತಿಳಿದು ಆ ಗ್ರಾಮದವರು ನಮಗೆ ಸಹಾಯ ಮಾಡಲಿಕ್ಕಿಲ್ಲ ಎಂಬುದು ನಮಗೆ ಗೊತ್ತಿರಬೇಕು. ಕಾರಣ ಅವರ ಮೇಲೆ ಭಾರವನ್ನಂತೂ ಹಾಕಬಾರದು. ಇಷ್ಟೇ ಅಲ್ಲ ಆ ಜನರ ವಿಷಯಕ್ಕೆ ಸಂಶಯಕ್ಕೆ ಆಸ್ಪದ ಸಹ ಇರಕೂಡದೆಂಬುದರ ಎಚ್ಚರಿಕೆ ವಹಿಸಬೇಕು.

ಸ್ವಲ್ಪದರಲ್ಲಿಯೇ ಹೇಳುವದಾದರೆ : ಸಾಮಾನ್ಯವಾಗಿ ವಿದೇಶಿ ಸರಕಾರಕ್ಕಿದ್ದ ನಮ್ಮ ಮಾನ್ಯತೆಯನ್ನು ನಾವು ಯಾವಾಗ ತೆಗೆದುಕೊಳ್ಳುತ್ತೆವೆಯೋ ಮತ್ತು ನಮ್ಮ ಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುವ ಪ್ರಯತ್ನ ಮಾಡುತ್ತೆವೆಯೋ ಆಗ ದೇಶದಲ್ಲಿ ಸ್ವಜನ ರಕ್ಷಣಕ್ಕಾಗಿ ಪ್ರಯತ್ನ ಮಾಡುತ್ತಿರುವಾಗ ಸರಕಾರದ ಅತ್ಯಾಚಾರಕ್ಕೆ ಆಸ್ಪದ ಸಿಗದಂತೆ ಪ್ರಯತ್ನವನ್ನೂ ಮಾಡಬೇಕೆಂಬುದೇ ನನ್ನ ಬರಹದ ಮತ್ತು ನನ್ನ ಸೂಚನೆಗಳ ಭೂಮಿಕೆಯಾಗಿತ್ತು. ಇದನ್ನು ಬರೆಯುತ್ತಿರುವಾಗ ಒಂದು ಮಾತಿನ ನೆನಪಾಯಿತೆಂದು ಅದನ್ನು ಇಲ್ಲಿ ಕೊಡುತ್ತಿದ್ದೇನೆ.

ವರ್ಧಾದ ಮಹಿಲಾ ವಿದ್ಯಾಲಯದಿಂದ ಕೆಲವು ಪ್ರೌಢ ಹುಡುಗಿಯರು ೧೯೪೨ ನೇ ಇಸ್ವಿ ಆಂದೋಲನದ ಕಾಲಕ್ಕೆ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಜನಜಾಗೃತಿ ಮಾಡಬೇಕೆಂದು ತಿರುಗಾಡಹತ್ತಿದರು. ಅವರನ್ನು ಅಲ್ಲಿಗೆ ಕಳಿಸುವಾಗ ಒಬ್ಬ ದೇಶಭಕ್ತರು ಗಾಂಧೀ ಸಿದ್ಧಾಂತದ ಸ್ಪಷ್ಟೀಕರಣ ಮಾಡಿದರು. "ಗಾಂಧೀಜಿಯ ಸಿದ್ಧಾಂತದ ಭಾವ ತಿಳಿದುಕೊಳ್ಳಬೇಕು. ಕೇವಲ ಶಬ್ದಾರ್ಥದ ಪಾಲನೆ ಮಾಡಿಯೂ ಅವರ ಹೇಳಿಕೆಯ ವಿಪರ್ಯಾಸವಾಗಬಹುದು." ಒಮ್ಮೆ ಒಬ್ಬ ಮನುಷ್ಯ ಹೇಳಿದ "ಗಾಂಧೀಜಿ

ಯವರು ಶತ್ರುವಿನ ಪ್ರಾಣಹಾನಿ ಕೂಡ ಆಗಬಾರದೆಂದು ಹೇಳಿದ್ದಾರೆ ಇದನ್ನು ಎಂದೂ ಮರೆಯಬೇಡಿರಿ." ನಾವು ಯಾರ ಪ್ರಾಣಹಾನಿಯನ್ನು ಮಾಡಬಾರದು. ಆದರೆ ಕೈಕಾಲು ಮುರಿಯಲಿಕ್ಕೆ ಅಥವಾ ಕಣ್ಣು ಕಿತ್ತಲಿಕ್ಕೆ ಏನೂ ಅಡ್ಡಿಯಿಲ್ಲಾ. ಹೀಗೆ ಮಾಡಿದರೆ ಮನುಷ್ಯನ ಪ್ರಾಣ ಹೋಗುವದಿಲ್ಲ. ಆತನು ಸಾಯುವದೂ ಇಲ್ಲ. ಆತ ಒದ್ದಾಡುತ್ತ ಬಿದ್ದರೆ ಅದಕ್ಕೆ ನಮ್ಮ ಉಪಾಯವಿಲ್ಲ!

ಈ ಪ್ರಕಾರದ ಅರ್ಥಮಾಡಿ ಗಾಂಧೀ ತತ್ವಜ್ಞಾನದ ಪ್ರಚಾರ ಮಾಡತಕ್ಕದ್ದಲ್ಲ ವೆಂಬುದನ್ನು ಲಕ್ಷದಲ್ಲಿಡಿರಿ.

ಈ ಭಾಷಣದ ಪರಿಣಾಮ ತೀರ ವಿರುದ್ಧವೇ ಆಯಿತು. ಆ ಹುಡುಗಿಯರಿಗೆ ಪ್ರಚಾರದ ಉತ್ಸಾಹವಿತ್ತು. ಅವರು ಇದರ ಅರ್ಥ ಹೀಗೆ ಮಾಡಿದರು. "ಇಷ್ಟೊಂದು ವಿಸ್ತಾರಪೂರ್ವಕವಾಗಿ ಹೇಳಿದ್ದಾರೆ. ಆದುದರಿಂದ ಅದರ ಇಂಗಿತಾರ್ಥ ನಾವೇ ತಿಳಿದುಕೊಳ್ಳಬೇಕು". ಅವರು ಹಳ್ಳಿ ಹಳ್ಳಿಗೆ ಹೋಗಿ ಉಪದೇಶ ಮಾಡಿದರು :

"ಅಪ್ಪಗಳಿರಾ. ಇದು ಸ್ವರಾಜ್ಯದ ಯುದ್ಧ, ಇಂಗ್ಲೀಷ ಸರಕಾರ ನಮ್ಮ ಶತ್ರು ಇದೆ. ಆದರೂ ಪ್ರಾಣಹಾನಿ ಮಾಡಕೂಡದೆಂದು ಗಾಂಧೀಜಿ ಹೇಳಿದ್ದಾರೆ. ಆದುದರಿಂದ ಅಷ್ಟೊಂದನ್ನು ಪಾಲಿಸಲೇಬೇಕು. ಆದರೆ ಶತ್ರುವಿನ ಕೈಕಾಲು ಮುರಿಯಲು ಅಡ್ಡಿ ಇಲ್ಲ. ಕಣ್ಣು ಕಿತ್ತಿರಿ ಅಥವಾ ಬಿಡಿರಿ ಅದು ನಿಮ್ಮ ಇಚ್ಛೆಯ ಕೆಲಸ".

ಈ ರೀತಿ ಗಾಂಧೀ ತತ್ವಜ್ಞಾನದ ಪ್ರಚಾರ ಮಾಡುವದೆಂದರೆ ಗಾಂಧೀಜಿಯ ವಿಡಂಬನೆ ಮಾಡಿದಂತೆ.

ಇಡೀ ಜಗತ್ತೇ ಹಿಂಸಾವಾದಿ ಇದೆಯೆಂಬುದನ್ನು ಗಾಂಧೀಜಿ ನೋಡಿದರು. ಇಂಥ ಜಗತ್ತಿಗೆ ಅಹಿಂಸೆಯ ಕಡೆಗೆ ಜಗ್ಗುವದಿದೆ. ಇಡೀ ಜಗತ್ತಿನ ಕಾಜೀ (ನ್ಯಾಯಾಧೀಶ) ಆಗಲಿಕ್ಕೆ ನಮಗೇನು ಅಧಿಕಾರ ? ಸರಕಾರ ಯಾವ ಅತ್ಯಾಚಾರದ ಮಾರ್ಗ ಹಿಡಿದಿದೆಯೋ ಅದರದೇ ಪ್ರತಿಕ್ರಿಯೆ ಜನತೆಯ ನಡುವಳಿಕೆಯಲ್ಲಿ ಕಂಡುಬರುತ್ತದೆ. ಆದುದರಿಂದ ಆದದ್ದು ಆಗಿಹೋಯಿತು. ಇನ್ನು ಮುಂದೆ ಎಲ್ಲರನ್ನೂ ಕಾಯ್ದು ಕೊಂಡು ಹೋಗಬೇಕು ಎಂದು ಅವರು ನಿಶ್ಚಯಿಸಿದರು. ಇದರ ಅರ್ಥ "ಗಾಂಧೀಜಿಯವರು ಜನತೆಯ ಎಲ್ಲ ಕೃತ್ಯಗಳಿಗೆ ಮೌನ ಸಮ್ಮತಿ ಕೊಟ್ಟರೆಂದು ಮಾಡುವದು ಗಾಂಧೀಜಿಗೆ ಅನ್ಯಾಯ ಬಗೆದಂತೆ."

ಕೊನೆಗೆ ಒಂದು ಮಾತು ಬರೆಯುವದು ಅತ್ಯಂತ ಅವಶ್ಯವಿದೆ. ಶ್ರೀ ಲಕ್ಷ್ಮಣ ಶಾಸ್ತ್ರಿ ಜೋಶಿಯವರು ತಮ್ಮ ಪ್ರಸ್ತಾವನೆಯಲ್ಲಿ* ಒಂದು ಅನುಮಾನ ತೆಗೆದಿದ್ದಾರೆ. ಅದನ್ನು ಗಂಭೀರವಾಗಿ ವಿಚಾರ ಮಾಡಬೇಕು.

---

* ಶ್ರೀ ಪುಂಡಲೀಕಜೀಯವರು ಬರೆದ ಮರಾಠಿ 'ಘೋಡೋ ಭಾರತ' ಪುಸ್ತಕಕ್ಕೆ ತರ್ಕ ತೀರ್ಥ ಲಕ್ಷ್ಮಣಶಾಸ್ತ್ರಿ ಬರೆದ ಪ್ರಸ್ತಾವನೆಯಲ್ಲಿ.

"ಸ್ವಾತಂತ್ರ್ಯೋತ್ತರ ಕಾಲದ ವರ್ತಮಾನ ಭಾರತ ಗಾಂಧೀಜಿಯ ಧ್ಯೇಯವಾದದಿಂದ ಜಾರಿ ದೂರ, ಅತಿದೂರ ಹೋಗುತ್ತಿದೆ. ವಿಧ್ವಂಸಕ ಕೃತ್ಯಗಳಿಗೆ ಗಾಂಧೀಜಿಯವರ ಮೌನದಿಂದ ಆಶೀರ್ವಾದ ದೊರೆಯಿತು. 'ಛೋಡೋ ಭಾರತ' ಮಂತ್ರದಿಂದ ಪ್ರಸೂತ ಮತ್ತು ಪ್ರಸೃತವಾದ ತಂತ್ರ ಪವಿತ್ರವಾದುದೆಂದು ಸಿದ್ಧವಾಯಿತು. ಈಗ ಆ "ಪವಿತ್ರ ತಂತ್ರ" ಭಾರತದ ಪ್ರಜಾರಾಜ್ಯದ ಯಂತ್ರವನ್ನು ಮುರಿಯಲಿಕ್ಕೆ ಮುಂದೆ ಬರುತ್ತಿದೆ. ಅದು ಹಿಂಸೆ ಇತ್ತು, ಅಂದರೆ ಹಿಂಸೆಯಿಂದ ಹಿಂಸೆ ಎಂಬ ದುಷ್ಟ ಚಕ್ರ ಅವಿರತ ನಡೆಯುತ್ತದೆ. ಅಹಿಂಸಾವಾದಿ ದ್ರಷ್ಟಾರ ಈ ಸೂತ್ರ ಸತ್ಯವಾಗುತ್ತಿದೆ. ಆ ಸೂತ್ರದಂತೆ ಆರ್ಥಿಕ. ರಾಜಕೀಯ ಮತ್ತು ಅನ್ಯ ಪ್ರಕಾರದ ಬೇಡಿಕೆಗಳನ್ನು ಮಾನ್ಯ ಮಾಡಿಸಿಕೊಳ್ಳುವದಕ್ಕೆ ಭಾರತೀಯ ಜನತೆ, ವಿದ್ಯಾರ್ಥಿ, ಕೂಲಿಕಾರರು, ನೌಕರರು ಮುಂತಾದವರು ಆಂದೋಲನ ಮಾಡುತ್ತಾರೆ. ರೇಲ್ವೆ, ಬಸ್, ಮೋಟಾರ, ಕಾರ್ಯಾಲಯ ಮುಂತಾದವುಗಳ ನಾಶ ಮಾಡುತ್ತಾರೆ ಹಾಗೂ ಅಗ್ನಿಧ್ವಂಸ ಮಾಡುತ್ತಾರೆ. ಇದು ಛೋಡೋ ಭಾರತದ ವಾರಸಾ ಇದೆ."

ತರ್ಕ ತೀರ್ಥರದು ಇದು ನಿರೀಕ್ಷಣೆಯಿದೆ, ಅನುಮಾನವಿದೆ. ಪುಂಡಲೀಕಜೀಯವರ ಮರಾಠಿ ಅಥವಾ ಶ್ರೀ ವಡವಿಯವರ ಕನ್ನಡ ಪುಸ್ತಕ ಓದಿ ಈ ರೀತಿ ಜನರು ಪ್ರೇರಣೆ ಹೊಂದಬೇಕೆಂಬ ಗರ್ಭಿತ ಸೂಚನೆ ಇದರಲ್ಲಿ ಎಷ್ಟೂ ಇಲ್ಲ.

ಆದರೆ ಯಾರು ಹೇಳಬೇಕು ? ಕಾರಸ್ಥಾನೀ ಜನರು ಯಾವುದರೊಳಗಿಂದಲೂ ಯಾವ ಅರ್ಥ ಹೊರಡಿಸುತ್ತಾರೆ ಮತ್ತು ನಿಷೇಧದೊಳಗಿಂದಲೂ ಯಾವ ಪ್ರೇರಣೆಯನ್ನು ಹೊಂದುತ್ತಾರೆ ಎಂಬುದನ್ನು ಯಾರು ಹೇಳಬೇಕು ?

ಆದುದರಿಂದ ಶ್ರೀ ಪುಂಡಲೀಕಜೀ ಮತ್ತು ಶ್ರೀ ವಡವಿ ಇವರು ತರ್ಕತೀರ್ಥರ ಮೇಲಿನ ವಚನದಿಂದ ಬೋಧ ತೆಗೆದುಕೊಂಡು ಆ ರೀತಿ ದುಷ್ಟ ಪರಿಣಾಮ ತಡೆಯುವದಕ್ಕಾಗಿ ಅವಶ್ಯ ಎಚ್ಚರಿಕೆ ವಹಿಸಬೇಕು ಮತ್ತು ಸವಿಸ್ತಾರ ಬರೆಯಬೇಕು.

೯-೯-೭೧
ಮುಂಬೈ

—ಕಾಕಾ ಕಾಲೇಲಕರ

ಉಪೋದ್ಘಾತ

"Stop not till the goal is reached".

—Swami Vivekanand

"ಗುರಿಯು ಸಾಧಿಸಿದನಕ ವಿಶ್ರಮಿಸಬೇಡ"

—ಸ್ವಾಮಿ ವಿವೇಕಾನಂದ

"ಹಿಂದಿನ ಇತಿಹಾಸವನ್ನು ಅನುಸರಿಸುವದು ನಮ್ಮ ಕೆಲಸವಲ್ಲ, ಹೊಸ ಇತಿಹಾಸವನ್ನು ನಿರ್ಮಿಸಲು ನಮ್ಮ ಜನ್ಮವಿದೆ." ಎಂದು ಆದಾಗಲೇ ದಕ್ಷಿಣ ಆಫ್ರಿಕೆಯಿಂದ ಹಿಂತಿರುಗಿಬಂದ ಗಾಂಧೀಜಿಯವರು, ಆ ಕಾಲಕ್ಕೆ ಮುಝಫ್ಫರ ಕಾಲೇಜಿನಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದ ಜೆ. ಬಿ. ಕೃಪಲಾನಿಯವರ ಪ್ರಶ್ನೆಗೆ ಉತ್ತರವಾಗಿ ನುಡಿದರು. "ಅಹಿಂಸೆಯಿಂದ ಸ್ವಾತಂತ್ರ್ಯ ಗಳಿಸಿಕೊಂಡ ಯಾವದೊಂದು ದೇಶದ ಉದಾಹರಣೆ ಇತಿಹಾಸದಲ್ಲಿಲ್ಲವಲ್ಲ ?" ಎಂಬುದೇ ಪ್ರಾಧ್ಯಾಪಕ ಕೃಪಲಾನಿಯವರ ಪ್ರಶ್ನೆಯಿತ್ತು. ಯಾವದೊಂದು ಆವೇಶವಿಲ್ಲದೆ, ಹಾವಭಾವವಿಲ್ಲದೆ, ಗಾಂಧೀಜಿಯವರು ಸಹಜ ಶಾಂತ ಗಂಭೀರ ವೃತ್ತಿಯಿಂದ ನುಡಿದ ಈ ಒಂದು ಸೂತ್ರವಾಕ್ಯದಿಂದ ಪ್ರಾಧ್ಯಾಪಕ ಕೃಪಲಾನಿಯವರಿಗೆ, ಇತಿಹಾಸದ ಕಡೆಗೆ ನೋಡುವ ಹೊಸ ದೃಷ್ಟಿಯೇ ಪ್ರಾಪ್ತವಾಯಿತು. ಮಾನವನು ಭೂತಕಾಲದ ಉಪಾಸಕನಲ್ಲ; ಆದರೆ ಭವಿಷ್ಯದ ನಿರ್ಮಾಪಕನು. ಭೂತಗಳಿಗಾದರೋ ಬೆನ್ನಿಗೆ ಕಣ್ಣು. ಅವು ಹಿಂಗಾಲಿನಿಂದ ಹಿಂದಕ್ಕೆ ನಡೆಯುವವು. ಆದರೆ ಮಾನವನಿಗಾದರೋ ಭೂತ-ವರ್ತಮಾನಗಳ ಪ್ರಕಾಶದಲ್ಲಿ ಭವಿಷ್ಯತ್ತನ್ನು ರೂಪಿಸುವ ಶಕ್ತಿಯಿದೆ. ಹಳೇದನ್ನೇ ತೀಡುವದರಲ್ಲಲ್ಲ. ಆದರೆ ಹೊಸ ಹೊಸ ಪ್ರಯೋಗಗಳನ್ನು ಕೈಕೊಳ್ಳುವದರಲ್ಲಿಯೇ ಮಾನವನ ಪುರುಷಾರ್ಥವಿದೆ.

ಅಹಿಂಸೆಯಿಂದಲೇ ನಿಜ ಜನತಾ ರಾಜ್ಯ ಸಾಧ್ಯ

"ನಮಗೆ ಬೇಕಾದುದು ಸ್ವರಾಜ್ಯದ ತಿರುಳು (The substance of Swaraj) ಕೇವಲ ಸ್ವರಾಜ್ಯದ (Legal frame work) ಕಾನೂನೀ ಚೌಕಟ್ಟಲ್ಲ. ನಿಜ ಸ್ವರಾಜ್ಯದಲ್ಲಿ ಯಾವದೇ ವಿಧದ ಶೋಷಣಕ್ಕೆ ಆಸ್ಪದವಿರಲಾರದು. ಉಚ್ಚ ನೀಚ ಭೇದಗಳಿಗೆ ಅವಕಾಶವಿರಲಾರದು. ಜನತೆಯ ಮೇಲೆ ಸರಕಾರದ ನಿಯಂತ್ರಣ ಆದಷ್ಟು ಕಡಿಮೆ. ಜನರು ಸ್ವಯಂಪ್ರೇರಣೆಯಿಂದ ಸ್ವಂತ ಅಭಿಕ್ರಮ (Initiative) ದಿಂದ ಸ್ಥಾಪಿಸಿಕೊಂಡ ತಮ್ಮ ಸಹಕಾರೀ ಸಂಘಟನೆಗಳ (Voluntary co-operative organisation) ಕೈಯಲ್ಲಿಯೇ ಜನತೆಯ ಪೋಷಣೆ, ಶಿಕ್ಷಣ, ರಕ್ಷಣವಿರುವದು. ಇದೇ

ನಿಜ ಲೋಕರಾಜ್ಯ, ನಿಜ ಪ್ರಜಾಪ್ರಭುತ್ವ, ಸ್ವಾಯತ್ತ. ಆತ್ಮ-ನಿರ್ಭರ ಸ್ವಯಂಪೂರ್ಣ ಗ್ರಾಮಸ್ವರಾಜ್ಯಗಳ ಒಕ್ಕೂಟವೇ ನಿಜ ಜನತಾ ಸ್ವಾತಂತ್ರ್ಯದ ವಾಹಕವಾಗಬಲ್ಲದು. (United Sarvodaya State of five lacs of Sarvodaya Republics) ಇದು ಗಾಂಧೀಜಿಯವರ ಗುರಿಯಿತ್ತು.

ದಕ್ಷಿಣ ಆಫ್ರಿಕೆಯಲ್ಲಿರುವಾಗ ಗಾಂಧೀಜಿಯವರು ಇಂಗ್ಲಂಡ ಹಾಗೂ ಇತರ ಪಾಶ್ಚಾತ್ಯ ದೇಶಗಳ ರಾಜಕೀಯ ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದರು. ಅಲ್ಲಿ ಎಲ್ಲಿಯೂ ಅವರಿಗೆ ನಿಜ (genuine) ಪ್ರಜಾಪ್ರಭುತ್ವ ಕಂಡುಬರಲಿಲ್ಲ. "ಚಲೇಜಾವ" ಠರಾವನ್ನು ಮಂಡಿಸುವಾಗ ಮಾಡಿದ ತಮ್ಮ ಭಾಷಣ ದಲ್ಲಿಯೂ ಇದೇ ಮಾತನ್ನು ಅವರು ಹೇಳಿದರು. **ಹಿಂಸಾಮಾರ್ಗದಿಂದ ಸ್ವಾತಂತ್ರ್ಯ ಗಳಿಸಬಹುದು. ಆದರೆ ಅದರಿಂದ ನಿಜ ಸ್ವರಾಜ್ಯ ನಿಜ ಪ್ರಜಾ-ಪ್ರಭುತ್ವವು ಫಲಿಸಲಾರದು. ಇದು ಗಾಂಧೀಜಿಯವರು ರಾಜನೀತಿ ಶಾಸ್ತ್ರಕ್ಕೆ ಕೊಟ್ಟ ಹೊಸ ದೃಷ್ಟಿ.**

ಭಾರತದ ಸ್ವತಂತ್ರ ಪ್ರತಿಭೆ

ಕೇವಲ ಪಾಶ್ಚಾತ್ಯ ದೇಶಗಳ ಅನುಕರಣ ಮಾಡುವದು ನಮ್ಮ ಕೆಲಸವಲ್ಲ. ಭಾರತದ ಒಂದು ಸ್ವತಂತ್ರ ಪ್ರತಿಭೆಯಿದೆ, ವಿಚಾರಮಾಡುವ ಸ್ವತಂತ್ರ ಭೂಮಿಕೆಯಿದೆ. ಇಷ್ಟೇ ಅಲ್ಲ ಭಾರತವು ಜಗತ್ತಿಗೆ ಒಂದು ಮಹಾಸಂದೇಶ ನೀಡತಕ್ಕದ್ದಿದೆ. ಇದು ಗಾಂಧೀಜಿಯವರ ಶ್ರದ್ಧೆ. I believe absolutely that India has a mission for the world (ಯಂಗ ಇಂಡಿಯಾ ೧೧-೮-೧೯೨೦).

ಗಾಂಧೀಜಿಯವರ ಸತ್ಯಾಗ್ರಹ ಆಂದೋಲನದ ನಿಜವಾದ ಮೌಲ್ಯಮಾಪನ ಮಾಡುವಾಗ ನಾವು ಈ ಮಾತುಗಳನ್ನು ನೆನಪಿನಲ್ಲಿಡುವದು ಅವಶ್ಯ.

ಎಟಂ ಬಾಂಬು, ಹಾಯಡ್ರೊಜನ್ ಬಾಂಬಿನಂಥ ಸಂಹಾರಕ ಶಸ್ತ್ರಗಳ ಶೋಧ ಮತ್ತು ಸಂಗ್ರಹದ ಕುರಿತು ರಾಷ್ಟ್ರ-ರಾಷ್ಟ್ರಗಳ ನಡುವೆ ನಡೆದಿರುವ ಮೇಲಾಟ, ಫ್ರಾನ್ಸ, ರಶಿಯಾ, ಚೀನಗಳಲ್ಲಿ ನಡೆದ ರಕ್ತಕ್ರಾಂತಿಗಳ ಫಲಶ್ರುತಿ, ಈ ಮತ್ತು ಇಂಥ ಜಾಗತಿಕ ಘಟನೆಗಳ ಬೆಳಕಿನಲ್ಲಿ ವಿಚಾರ ಮಾಡಿದಾಗ, ಗಾಂಧೀಜಿಯವರ ಮಾತಿನ ಸತ್ಯತೆಯು ನಮಗೆ ಹೊಳೆಯದಿರದು.

ಅಚ್ಯುತ ಪಟವರ್ಧನರವರ ಆತ್ಮನಿವೇದನೆ

ಒಂದು ಕಾಲದಲ್ಲಿ, ಪಾಶ್ಚಾತ್ಯ ಸಮಾಜವಾದದ ಅನನ್ಯ ಉಪಾಸಕರೂ, ಚಲೇಜಾವ ಆಂದೋಲನದಲ್ಲಿ ಭೂಗತರ ಅಗ್ರಗಣ್ಯರಾಗಿ ಸರ್ವಾರ್ಪಣಭಾವದಿಂದ ದುಡಿದವರು, ತತ್ವಚಿಂತಕರೂ ಆಗಿರುವ ಶ್ರೀ **ಅಚ್ಯುತ ಪಟವರ್ಧನ** ಇವರು ಇದೇ

ಮಾರ್ಚದಲ್ಲಿ (೧೯೭೧) ಅನೌಪಚಾರಿಕ ರೀತಿಯಲ್ಲಿ ಬ್ರಹ್ಮವಿದ್ಯಾಮಂದಿರದ ಸದಸ್ಯರ ಮುಂದೆ ಮಾಡಿದ ಆತ್ಮನಿವೇದನವು ಈ ಸಂಬಂಧದಲ್ಲಿ ತುಂಬ ಬೆಳಕು ಬೀರುವಂತಿದೆ. ಶ್ರೀ ಪಟವರ್ಧನರು ಹೇಳುತ್ತಾರೆ:–"ಅಮೇರಿಕೆಯಲ್ಲಿ ವಿಪುಲ ಸಮೃದ್ಧಿಯಿದೆ. ಆದರೆ ಅದರೊಂದಿಗೆ ವೈಫಲ್ಯವೂ ಇದೆ. ಇಂದಿನ ಅಮೇರಿಕೆಯ ಇತಿಹಾಸದಿಂದ ನಾವು ಕಲಿಯ ಬೇಕಾದ್ದೆಂದರೆ ಕೇವಲ ಸಮೃದ್ಧಿಯಿಂದ ಪ್ರಯೋಜನವಿಲ್ಲ. ಸಮೃದ್ಧಿ ಇದ್ದು ಸಹ, ಜೀವನದಲ್ಲಿ ವೈಫಲ್ಯವು ಮನೆಮಾಡಿಕೊಳ್ಳಬಹುದು. ಇನ್ನು ರಶಿಯಾದ ಕಡೆಗೆ ಹೊರ ಳಿರಿ. ಬೊಲ್ಶೆವಿಕ್ ಕ್ರಾಂತಿಯಾಗಿ ನಾಲ್ವತ್ತು ವರ್ಷಗಳು ಉರುಳಿದವು. ಈಗಲೂ ಅಲ್ಲಿ ಏನು ಸ್ಥಿತಿ ಇದೆ ? ವೈಜ್ಞಾನಿಕರಿಗೆ, ಸಾಹಿತಿಗಳಿಗೆ, ಕಲಾವಿದರಿಗೆ ವಿಚಾರಸ್ವಾತಂತ್ರ್ಯ ವಿಲ್ಲ. ಎಲ್ಲಿ ಈ ಪ್ರಕಾರ ವಿಚಾರಸ್ವಾತಂತ್ರ್ಯವಿಲ್ಲವೋ ಅಲ್ಲಿಯ ಸಮಾಜವಾದದಲ್ಲಿ ಹುರುಳಿಲ್ಲ. ಒಂದು ಶಾಸಕವರ್ಗ, ಇನ್ನೊಂದು ಅವರ ಶಾಸನಕ್ಕೆ ಒಳಪಟ್ಟ ವರ್ಗ. ಹೀಗೆ ಸಮಾಜವು ಇಬ್ಭಾಗವಾಗಿದೆ ಅಲ್ಲಿ. ಝೆಕೋಸ್ಲಾವೇಕಿಯದ ಮೇಲೆ ರಶಿಯದ ಸೇನೆ ಏರಿಹೋದಾಗ, ರಶಿಯನರು ಆ ಕುರಿತು ತಮ್ಮ ಸ್ವತಂತ್ರ ವಿಚಾರ ವ್ಯಕ್ತಮಾಡಬಾರದೇ? ಆ ಹಕ್ಕು ಅವರಿಗಿಲ್ಲವೇ ? ಆದರೆ–ಹೀಗೆ ಸ್ವತಂತ್ರ ವಿಚಾರ ಮಾಡಿದವರಿಗೆ ತುರಂಗ ದಲ್ಲಲ್ಲ, ಆದರೆ ಹುಚ್ಚರ ಆಸ್ಪತ್ರೆಗೆ ಸೇರಿಸಲಾಗುತ್ತದೆ–ರಶಿಯಾದಲ್ಲಿ. ಚೀನಾದ ಸಾಮ್ಯ ವಾದದ ನಿಜಸ್ವರೂಪ ತಿಳಿದುಕೊಳ್ಳುವ. ಟಿಬೇಟದಂಥ ದೇಶವನ್ನು ಅದು ಪಾದಾ ಕ್ರಾಂತ ಮಾಡುತ್ತದೆ. ಅಲ್ಲಿ ದಂಡಿನಾಳಿಕೆ ನಡಿಸುತ್ತದೆ. ಇಂಥ ಸಾಮ್ಯವಾದವು ಬಡ ವರ ರಕ್ಷಕವೆಂದು ಯಾರು ಹೇಳಬೇಕು ?"*

ಶ್ರೀ ಅಚ್ಯುತ ಪಟವರ್ಧನರು ಇದೇ ಸಂದರ್ಭದಲ್ಲಿ ಹೇಳಿದ ಇನ್ನೊಂದು ಮಾತು ನಮ್ಮ ಶಿಕ್ಷಿತ ಜನರ ವಿಚಾರ ಭೂಮಿಕೆಯ ಕುರಿತು ತುಂಬ ಬೆಳಕು ಬೀರುವಂತಿದೆ. ಅವರು ಹೇಳುತ್ತಾರೆ:– "ನಮ್ಮ ಪೀಳಿಗೆಯ ಜನರು ರಾಷ್ಟ್ರೀಯ ವೃತ್ತಿಯವರಿದ್ದರು. ಅದರೊಂದಿಗೆ ಅವರ ವೈಚಾರಿಕ ಆದರ್ಶವು ಪಾಶ್ಚಿಮಾತ್ಯ ವಿಚಾರಗಳ ಮೇಲೆ ಆಧಾರಿತ ವಾಗಿತ್ತು. ನಮ್ಮ ರಾಜ್ಯಶಾಸ್ತ್ರ-ಅರ್ಥಶಾಸ್ತ್ರದ ಆದರ್ಶಗಳು ಪಾಶ್ಚಿಮಾತ್ಯ ಆದರ್ಶ ಗಳಾಗಿದ್ದವು. ಪಶ್ಚಿಮದ ವಿಚಾರಗಳನ್ನು ಗ್ರಹಿಸುವದರಿಂದ ಪ್ರಯೋಜನವಿಲ್ಲ. ನಾವು ಭಾರತೀಯರು. ನಮ್ಮ ಭೂಮಿಕೆಯಿಂದ ವಿಚಾರ ಮಾಡಬೇಕಾಗುವದು ಎಂದು ಮೊದಲು ಸಾರಿದವರು ಗಾಂಧೀಜಿ. ಅವರ ಆಂದೋಲನವು ವಿಧಾಯಕ ಸ್ವರೂಪ ದ್ದಿತ್ತು." (ಮೈತ್ರಿ ಮಾಸಿಕ ಎಪ್ರಿಲ್ ೧೯೭೧).

ಈ ವಿಷಯವನ್ನು ಸ್ವಲ್ಪ ವಿಸ್ತೃತಮಾಡಿ ಹೇಳುವ ಉದ್ದೇಶವಿಷ್ಟೇ–ಗಾಂಧೀಜಿ ಯವರು ಸ್ವಾತಂತ್ರ್ಯದ ಬಗ್ಗೆ ಹೂಡಿದ ಅಹಿಂಸಕ ಸಂಗ್ರಾಮದ ನಿಜಮೌಲ್ಯಮಾಪನ ಮಾಡಲು, ಈ ವಿಚಾರಭೂಮಿಕೆಯ ಯಥಾರ್ಥ ಆಕಲನವು ಅವಶ್ಯ.

*ಈಗಂತೂ ಬಂಗ್ಲಾದೇಶದ ವಿಷಯದಲ್ಲಿ ಪ್ರಜಾಪ್ರಭುತ್ವದ ತತ್ವಗಳನ್ನು ಗಾಳಿಗೆ ತೂರಿ, ಅಲ್ಲಿ ಕರಾಳ ದಂಡಿನಾಳಿಕೆ ನಡಿಸಿ ಮಾನವನ ಕಗ್ಗೊಲೆ ನಡಿಸುತ್ತಿರುವ ಯಾಹ್ಯಾಖಾನರ ಕೃತಿಯನ್ನು ಚೀನವು ಬೆಂಬಲಿಸುತ್ತಿದೆ. ಇದು ಚೀನದ ಸಾಮ್ಯವಾದ.

ಅಹಿಂಸಾ ಶಕ್ತಿಯ ಶೋಧ ಮತ್ತು ಪ್ರಯೋಗ

ಹೇಗೆ ಭೌತಿಕ ಜಗತ್ತಿನಲ್ಲಿರುವ ವಿದ್ಯುತ್‌ಶಕ್ತಿ, ಅಣುಶಕ್ತಿ ಮೊದಲಾದವುಗಳ ಶೋಧವನ್ನು ಭೌತಿಕ ವಿಜ್ಞಾನಿಗಳು ಮಾಡಿರುವರೋ ಹಾಗೆಯೇ ಅಹಿಂಸೆ (Soul-force) ಇದು ಒಂದು ಆಧ್ಯಾತ್ಮಿಕ ಶಕ್ತಿ. ಗುರುತ್ವಾಕರ್ಷಣಶಕ್ತಿಯ ಶೋಧಮಾಡಿದ ನ್ಯೂಟನ್‌ನಿಗಿಂತ ಈ ಅಹಿಂಸಾ ಶಕ್ತಿಯ ಶೋಧಮಾಡಿದ ನಮ್ಮ ಋಷಿಗಳು ಹೆಚ್ಚಿನವರು ಎಂಬ ಸಂಗತಿಯನ್ನು ಗಾಂಧೀಜಿಯವರು ನಮ್ಮ ಲಕ್ಷಕ್ಕೆ ತಂದರು. ಸಮಾಜ ಕಾರಣದಲ್ಲಿ, ರಾಜಕಾರಣದಲ್ಲಿ ಅಹಿಂಸಾ ಶಕ್ತಿಯ ಪ್ರಯೋಗ ನಡಿಸಿದವರು ಜಗತ್ತಿನ ಇತಿಹಾಸದಲ್ಲಿ ಗಾಂಧೀಜಿಯವರೇ ಪ್ರ-ಪ್ರಥಮರು ಎಂದು ಹೇಳಬಹುದು. ೧೯೨೧ರಿಂದ ತಮ್ಮ ಆತ್ಮಬಲಿದಾನದವರೆಗೂ ಈ ಪ್ರಯೋಗವನ್ನು ಅವರು ಭಾರತದಲ್ಲಿ ಮುನ್ನಡೆಸಿದರು. ಹೀಗಿದ್ದರೂ ಸತ್ಯಾಗ್ರಹ ಶಾಸ್ತ್ರವನ್ನು ಮತ್ತು ಕಲೆಯನ್ನು ತಾವು ಪೂರ್ಣತೆಗೆ ಮುಟ್ಟಿಸಿರುವೆನೆಂದು ಗಾಂಧೀಜಿ ಭಾವಿಸುತ್ತಿರಲಿಲ್ಲ. ಅಹಿಂಸೆಯಲ್ಲಿ ಅಡಕವಾಗಿರುವ ಅಮೋಘ ಶಕ್ತಿಯ ಪೂರ್ಣ ಶೋಧವಾಗಲು, ಅದರಂತೆ ಅದರ ಯಶಸ್ವೀ ಕಾರ್ಯಾಚರಣೆಯ ಶಾಸ್ತ್ರವು ಪೂರ್ಣತೆಗೆ ಮುಟ್ಟಲು ಎಷ್ಟೋ ಪ್ರಯೋಗಗಳು ನಡೆಯಬೇಕು. ಹಿಂಸೆಯು ಇಂದು ಕಾಲಬಾಧಿತವಾಗಿದೆ. ಕಾಲಗ್ರಸ್ತವಾಗಿದೆ. (Outmodel, Out dated) ಎಂದು ಜಗತ್ತಿನ ಇಂದಿನ ಇತಿಹಾಸವು ಸಾರುತ್ತದೆ. ಆದುದರಿಂದ ಅಹಿಂಸಾ ಶಕ್ತಿಯ ಹೆಚ್ಚೆಚ್ಚು ಆಳವಾದ ಸಂಶೋಧನವು ಅವಶ್ಯ. ಇದರಲ್ಲಿಯೇ ಮಾನವಕುಲದ ಭವಿತವ್ಯವು ಅವಲಂಬಿಸಿದೆ.

ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅಹಿಂಸಾ ಶಕ್ತಿಯ ಪ್ರಯೋಗ ನಡೆಯಹತ್ತಿದ್ದು ಕೇವಲ ಇತ್ತೀಚಿನ ಕೆಲವರ್ಷಗಳಲ್ಲಿ. ಗಾಂಧೀಜಿಯವರ ಜೀವಮಾನದಲ್ಲಿ ಆ ಮಾನದಿಂದ ಅದು ಸಾಧಿಸಿದ ಕಾರ್ಯವು ಗಣನೀಯವಿದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಈವರೆಗೆ ಈ ಅಲ್ಪ ಅವಧಿಯಲ್ಲಾದ ಪ್ರಯೋಗಗಳು ಪೂರ್ಣ ಯಶಸ್ವಿಯಾಗಿಲ್ಲದಿದ್ದರೂ, ಎಷ್ಟೋ ಮಹತ್ವದ ಪರಿಣಾಮಗಳನ್ನು ಸಾಧಿಸಿವೆ. ಈ ದೃಷ್ಟಿಯಿಂದ ಈ ಶಕ್ತಿಯ ಹೆಚ್ಚೆಚ್ಚು ಪ್ರಯೋಗಗಳು ನಡೆದು ಅದನ್ನು ವಿಕಾಸಗೊಳಿಸುವದರಲ್ಲಿಯೇ ಮಾನವಕುಲದ ಉದ್ಧಾರವಿದೆ. ಸುತ್ತಲೂ ಕವಿದ ಕತ್ತಲೆಯಲ್ಲಿ ಅದೊಂದೇ ಉಜ್ವಲ ಆಶಾಕಿರಣ, ದಾರಿದೀಪ.

ಅಮೇರಿಕೆಯಲ್ಲಿ ನಿಗ್ರೋ ಜನರ ನ್ಯಾಯವಾದ ನಾಗರಿಕ ಹಕ್ಕುಗಳಿಗಾಗಿ ಮಾರ್ಟಿನ ಲೂಥರ್ ಕಿಂಗ್ ಇವರು ಇಂಥ ಒಂದು ಉಜ್ವಲ ಪ್ರಯೋಗವನ್ನು ನಡಿಸಿ ಎಷ್ಟೋಮಟ್ಟಿಗೆ ಯಶಸ್ವಿಯಾದರು. ಜಗತ್ತು ಅವರ ಈ ಕಾರ್ಯದ ಮಹತಿಯನ್ನು ಗಮನಿಸಿ ಅವರಿಗೆ ನೋಬೆಲ್ ಪಾರಿತೋಷಕ ಕೊಟ್ಟಿತು. ಗಾಂಧೀಜಿಯವರು ೧೯೩೬ ರಲ್ಲಿ– "ಅಹಿಂಸೆಯ ಪರಿಶುದ್ಧ ಸಂದೇಶವನ್ನು ಜಗತ್ತಿಗೆ ನೀಡುವ ಸದ್ಭಾಗ್ಯ ಕದಾಚಿತ್ ನಿಗ್ರೋ ಜನರ ಪಾಲಿಗೆ ಬರಬಹುದು" ಎಂದು ಮಾಡಿದ ಭವಿಷ್ಯವಾಣಿಯು ಈ ರೀತಿ

ಸಿದ್ಧವಾಯಿತು. "It may be through the Negroes that the unadulterated message of Non-violence will be delivered to the world" (Harijan 14-3-1936).

ಇನ್ನು ಈ ಅಹಿಂಸಾ ಶಕ್ತಿಯ ಹೆಚ್ಚಿನ ಪ್ರಯೋಗಗಳನ್ನು ನಡಿಸುವಾಗ ಇದುವರೆಗೆ ಆದ ಇಂಥ ಪ್ರಯೋಗಗಳನ್ನು ತಟಸ್ಥ ವೈಜ್ಞಾನಿಕ ವೃತ್ತಿಯಿಂದ ಅಧ್ಯಯನ ಮಾಡುವದು ಹಾಗೂ ಅವುಗಳ ಯಶಾಪಯಶಗಳ ಕಾರಣಗಳ ಕುರಿತು ಚಿಂತನ ನಡಿಸುವದು ತುಂಬ ಉಪಯುಕ್ತ. ತುಂಬ ಅವಶ್ಯ.

ಪ್ರಸ್ತುತ ಗ್ರಂಥದ ವೈಶಿಷ್ಟ್ಯ

ಶ್ರೀ ವಡವಿಯವರು ಬರೆದ ಪ್ರಸ್ತುತ ಗ್ರಂಥವು ಈ ದೃಷ್ಟಿಯಿಂದ ತುಂಬ ಮಹತ್ವದ್ದು. ಒಂದನೆಯದಾಗಿ ವೈಜ್ಞಾನಿಕ ಅಧ್ಯಯನಕ್ಕೆ ಅವಶ್ಯವಿದ್ದ ಸತ್ಯಕಥನವು ಅದರಲ್ಲಿದೆ. ಎರಡನೆಯದಾಗಿ ಈ ಪ್ರಯೋಗದಲ್ಲಿ ಸ್ವತಃ ಮುಖ್ಯ ಪಾತ್ರ ವಹಿಸಿದವರ ಕಥನವೇ ಈ ಗ್ರಂಥಕ್ಕೆ ಆಧಾರ. "ಚಲೇ ಜಾವ" ಆಂದೋಲನದೊಳಗಿನ ಕುಂದರನಾಡಿನ ಒಂದು ಆಕರ್ಷಕ. ರೋಮಹರ್ಷಕ ದೃಶ್ಯವು ಪ್ರಸ್ತುತ ಪುಸ್ತಕದ ಮುಖ್ಯ ವಿಷಯ. ಇದರ ಹಿನ್ನೆಲೆ ಸ್ಪಷ್ಟವಾಗಲು ಆಂದೋಲನದ ಅಖಿಲ ಭಾರತೀಯ ಸ್ವರೂಪವನ್ನು ವಿಹಂಗಮ ದೃಷ್ಟಿಯಿಂದ ಈ ಗ್ರಂಥದಲ್ಲಿ ಸುಂದರವಾಗಿ ವಿವರಿಸಲಾಗಿದೆ. ಕುಂದರನಾಡಿನ ಕಾರ್ಯರಂಗದಲ್ಲಿ ಮುಖ್ಯ ನಾಯಕರಾದ ಶ್ರೀ ವಡವಿಯವರು ತನ್ನ ಕಾರ್ಯನೀತಿಯನ್ನು ರೂಪಿಸುವಾಗ ತನ್ನ ಪ್ರಾಮಾಣಿಕ ಬುದ್ಧಿಯಿಂದ ಅಹಿಂಸೆಗೆ ನಿಷ್ಠರಾಗಿ ನಡೆಯಲು ಹೆಜ್ಜೆ ಹೆಜ್ಜೆಗೂ ಜಾಗರೂಕರಾಗಿದ್ದರೆಂಬದು ಇಲ್ಲಿ ಕಂಡುಬರುವದು. ಎಲ್ಲ ಘಟನೆಗಳನ್ನು ಇದ್ದಕ್ಕಿದ್ದಂತೆ ವರ್ಣಿಸಿರುವರು. ತನ್ನ ಅಹಿಂಸಾ ಅನುಷ್ಠಾನದಲ್ಲಿ ನಂತರ ಕಂಡುಬಂದ ನ್ಯೂನತೆಗಳನ್ನು ಗಾಂಧೀಜಿಯವರು ವಿವರಿಸಿದ ನಂತರ ಒಪ್ಪಿಕೊಂಡವರು ಅವರು.

ರಾಜಕಾರಣಿಗಳ ಕೈಯಲ್ಲಿ ಇತಿಹಾಸ ಲೇಖನವು, ರಾಜಕಾರಣಮಾಡುವ ಒಂದು ಶಸ್ತ್ರವಾಗಿದೆ. ಪ್ರಸ್ತುತ ಗ್ರಂಥವು ಹಾಗಿಲ್ಲ. ಆದುದರಿಂದ ಸತ್ಯ ಶೋಧಕರಿಗೆ ಇದು ತುಂಬ ಉಪಯುಕ್ತ. ಈ ದೃಷ್ಟಿಯಿಂದ ಈ ಗ್ರಂಥದ ಅಧ್ಯಯನ ಮಾಡಿದಾಗ ನನಗೆ ಕಂಡು ಬಂದ ಕೆಲ ವಿಷಯಗಳನ್ನು ಇಲ್ಲಿ ಸಂಕ್ಷಿಪ್ತದಲ್ಲಿ ವಿವರಿಸುವದು ಅಪ್ರಸ್ತುತವಾಗಲಾರದು :—

ವಿಧಾಯಕ ಸೇವೆಯ ಪ್ರಭಾವ

ಒಂದನೆಯದಾಗಿ ಹುದಲಿ ಗ್ರಾಮದಲ್ಲಿ ಒಂದು (ಸರಕಾರ ನಿಯುಕ್ತವಲ್ಲ) ಲೋಕಮಾನ್ಯ ಗ್ರಾಮಪಂಚಾಯತಿ, ಗ್ರಾಮಪಂಚರು ಇದ್ದರು. ತಮ್ಮ ಸೇವಾಬಲದಿಂದ.

ಚಾರಿತ್ರ್ಯದ ಬಲದಿಂದ ಲೋಕಮಾನ್ಯತೆ ಪಡೆದ ಪಂಚರು ತಮ್ಮ ಎಳೆ ವಯಸ್ಸಿನ ಮಕ್ಕಳಿಗೆ "ಕರೇಂಗೆ ಯಾ ಮರೇಂಗೆ" ಹೋರಾಟದಲ್ಲಿ ಧುಮುಕುವ ಕುರಿತು—ಪ್ರತ್ಯಕ್ಷ ಗಲ್ಲಿನ ಶಿಕ್ಷೆಯನ್ನು ಅವರು ಎದುರು ನೋಡುತ್ತಿರುವಾಗ—ಪರಿಣಾಮದ ಗಣನೆ ಮಾಡದೆ ಧುಮುಕಲು ಸಮ್ಮತಿ ಕೊಡುವ ಪ್ರಶ್ನೆ, ಶ್ರೀ ವಡವಿಯವರ ವಶಕ್ಕೆ ಅವರನ್ನು ಒಪ್ಪಿಸುವ ಪ್ರಶ್ನೆ ಈ ಪಂಚರ ಮುಂದಿತ್ತು. ಗಂಭೀರ ಸಮಸ್ಯೆ ! ಕೆಲಹೊತ್ತು ವಿಚಾರ ಮಗ್ನರಾದರು. ಕೊನೆಗೆ ವಡವಿಯವರಿಗಾದದ್ದೇ ನಮ್ಮ ಮಕ್ಕಳಿಗೆ ಆಗುವದು ಎಂಬ ಧೀರೋದಾತ್ತ ವಿಚಾರದಿಂದ ಪ್ರೇರಿತರಾಗಿ ಮಕ್ಕಳಿಗೆ ಸಮ್ಮತಿ ಕೊಟ್ಟರು. ಶ್ರೀ ವಡವಿಯವರು ಸಹ ಈ ಪಂಚರ ಪೂರ್ವ ಸಮ್ಮತಿ ಪಡೆದೇ ಈ ಯುವಕರನ್ನು ಸೇರಿಸಿಕೊಳ್ಳುವ ಸರಳ ಮುತ್ಸದ್ದಿಗಿರಿಯನ್ನು ತೋರಿಸಿದರು. (Truth is my diplomacy—Gandhiji) ಇದೆಲ್ಲಾ ಯಾತರ ಪರಿಣಾಮ ? ಸರ್ವಶ್ರೀ ವಡವಿ. ವಾಮನರಾವ ಬಿದ್ರಿ, ದಾದಾ ಕಾಳೆ, ಪುಂಡಲೀಕಜಿ ಮತ್ತು ಅವರ ಸಹಕಾರಿಗಳು ಕುಂದರನಾಡಿನಲ್ಲಿ ಜನರೊಡನೆ ತಾದಾತ್ಮ್ಯದಿಂದ ನಡಿಸಿದ ವಿಧಾಯಕ ಸೇವೆಯೇ ಇಂಥ ವಿಶ್ವಾಸಕ್ಕೆ ಕಾರಣ. ಈ ಭಾವಾತ್ಮಕ (Positive) ಅಹಿಂಸೆಯ-ಶುದ್ಧ ಸೇವೆಯ ಅನುಷ್ಠಾನದ ಮೂಲಕವೇ, ಈ ಆತ್ಮವಿಶ್ವಾಸ, ಪರಸ್ಪರ ವಿಶ್ವಾಸ, ತ್ಯಾಗ ಬಲಿದಾನದ ಪ್ರೇರಣೆ ಫಲಿಸಿದವು. (೨) ಅದೇ ಪ್ರಕಾರ ಈ ಎಲ್ಲ ತರುಣರು ಕೊನೆಯ ವರೆಗೆ ತಮ್ಮ ನಾಯಕರಿಗೆ (ಶ್ರೀ. ವಡವಿಯವರಿಗೆ) ನಿಷ್ಠರಾಗಿ ಉಳಿದು ಸಾವನ್ನು ಸಹ ಆನಂದದಿಂದ ಅಪ್ಪಿಕೊಳ್ಳಲು ಸದಾ ಸನ್ನದ್ಧರಾಗಿ ಉಳಿದರು. ಮಾನವನಲ್ಲಿ ಹುದುಗಿಕೊಂಡಿದ್ದ ಆತ್ಮತೇಜದ ಒಂದು ಉಜ್ವಲ ನಿದರ್ಶನವಿದು. ಸುಯೋಗ್ಯ ಯೋಜಕರಿದ್ದರೆ ಸಾಮಾನ್ಯರೆಂದು ತೋರುವ ಜನರಲ್ಲಿಯೂ ಸಹ ಸುಪ್ತವಾಗಿರುವ ಆತ್ಮ ತೇಜವನ್ನು ಪ್ರಾಕಟ್ಯಕ್ಕೆ ತರಬಹುದು. ಕಾರ್ಯೋನ್ಮುಖ ಮಾಡಬಹುದೆಂಬುದಕ್ಕೆ ಇದು ಸಾಕ್ಷಿ.

ಸಾಮಾನ್ಯರೇ ಸಮಾಜದ ಆಧಾರ ಶಿಲೆ

ಶ್ರೀ ವಡವಿಯವರು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಇಂಥ ಸಂಗ್ರಾಮದಲ್ಲಿ ನಿಷ್ಠೆಯಿಂದ ದುಡಿದ, ಕೇವಲ ಒಂದು ಶ್ರದ್ಧೆಯಿಂದ ಪ್ರೇರಿತರಾಗಿ ಎಲ್ಲ ಸ್ವಾರ್ಥವನ್ನು ಒತ್ತೊಟ್ಟು ತಮ್ಮ ಪ್ರಾಣವನ್ನು ಅಂಗೈಯಲ್ಲಿಟ್ಟುಕೊಂಡು ಹೋರಾಡಿದ "ಅಶಿಕ್ಷಿತ, ವಾಚಾಹೀನ, ಸಾಮಾನ್ಯ" ಜನರ ನಿರ್ದೇಶವು ಯಾವ ಇತಿಹಾಸದಲ್ಲೂ ಬರುವದಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸುವದು ಈ ಗ್ರಂಥ ಲೇಖನದ ತನ್ನ ಒಂದು ಪ್ರಧಾನ ಉದ್ದೇಶವೆಂದು ಹೇಳಿರುವರು. ಇದು ನಿಜ. ಆದರೆ ಮಾನವನ ಅಳತೆಗೋಲು ಬೇರೆ. ಜಗನ್ನಿಯಾಮಕ ಪ್ರಭುವಿನ ಅಳತೆಗೋಲು ಬೇರೆ. ಭವ್ಯ, ಉತ್ತುಂಗ ಮಂದಿರಗಳನ್ನು ಕಟ್ಟಡಗಳನ್ನು ನೋಡುವವರ ಕಣ್ಣನ್ನು ಅವುಗಳ

ಕಂಬಗಳೂ, ಕಮಾನುಗಳೂ, ಗೋಪುರಗಳೂ ಆಕರ್ಷಿಸುವವು. ಅವರ ಪ್ರಶಂಸೆಯನ್ನು ಪಡೆಯುವವು. ಆದರೆ ಇವೆಲ್ಲವಕ್ಕೂ, ಇಡೀ ಕಟ್ಟಡಕ್ಕೂ ಆಧಾರ ಕೊಡಲು ತಳ ಪಾಯದಲ್ಲಿ ಯಾರ ಕಣ್ಣಿಗೂ ಕಾಣಿಸಿಕೊಳ್ಳದೆ ಬಿದ್ದುಕೊಂಡಿರುವ ಸಾವಿರಾರು ಕಲ್ಲು ಗಳಿಲ್ಲದಿದ್ದರೆ ಆ ಕಟ್ಟಡವು ನಿಲ್ಲಬಹುದಿತ್ತೇ ? ಇದನ್ನೆಲ್ಲ ವಿಚಾರಿಸಲಾಗಿ, ನಮ್ಮ ದೃಷ್ಟಿ ಯಲ್ಲಿ ಬದಲಾಗಬೇಕೆಂಬುದು ಸ್ಪಷ್ಟ.

ಭಾವಾತ್ಮಕ ಅಹಿಂಸೆಯ ಅಮೋಘ ಶಕ್ತಿ

ಗುಪ್ಪೆಗಾರ ಬೇಡರ ಜಾತಿಯ ವಿಚಾರ : ಗುಪ್ಪೆಗಾರರು ಯಾರು ? ದೋಷ ಪೂರ್ಣ ಸಮಾಜರಚನೆಯೇ ಈ ತರದ ವಿಕೃತಿಗಳಿಗೆ ಕಾರಣ. ಅವರ ಸಮಸ್ಯೆಯನ್ನು ಸಹಾನುಭೂತಿಯಿಂದ ತಿಳಕೊಂಡು, ಅದಕ್ಕೆ ಯೋಗ್ಯ ಪರಿಹಾರವನ್ನು ಯೋಜಿಸಿದರೆ, ಎಷ್ಟೊಂದು ಅಮೌಲ್ಯ ಮಾನವ ಸಂಪತ್ತು, ಎಷ್ಟೊಂದು ಉದಾತ್ತತೆ, ಇಂಥ ಸಮಾಜ ದಲ್ಲಿ–ಹುದುಗಿಕೊಂಡಿದೆಂಬುದು ಹುದ್ಲಿಯ ಕಾರ್ಯಕರ್ತರು, ಈ ಸಮಾಜದಲ್ಲಿ ನಡಿಸಿದ ವಿಧಾಯಕ ಸೇವೆಯಿಂದ ದೃಷ್ಟಿಗೆ ಬರುವದು. **ಇದುವೇ (Positive) ಭಾವಾ ತ್ಮಕ ಅಹಿಂಸೆ ಇದರ ಆಧಾರವಿಲ್ಲದೆ, ನಿಷೇಧಾತ್ಮಕ ಅಹಿಂಸೆಯನ್ನು ಅಸಹ ಕಾರವನ್ನು ಅಹಿಂಸಾತ್ಮಕ ಪ್ರತಿರೋಧವನ್ನು ಸಂಘಟಿಸುವದು ಅಶಕ್ಯ.** ಗಾಂಧೀಜಿಯವರು ಕಾಂಗ್ರೆಸ್ಸಿಗೆ ಪುನಃಪುನಃ ಹೇಳುತ್ತಿದ್ದರು. ಎಲ್ಲಿಯವರೆಗೆ ನಿಮ್ಮಲ್ಲಿ (anti-social) ಸಮಾಜ ವಿರೋಧಿ ಗುಂಪುಗಳನ್ನು ವ್ಯಕ್ತಿಗಳನ್ನು ನಿಯಂತ್ರಣದಲ್ಲಿ ತರಲು ಅವರಮೇಲೆ ನಿಮ್ಮ ನೈತಿಕ ಪ್ರಭಾವ ಬೀರಲು ನೀವು ಸಮರ್ಥರಾಗುವದಿಲ್ಲವೋ ಅಲ್ಲಿಯತನಕ ಕಾಂಗ್ರೆಸ್ಸು ದೇಶದ ಪ್ರತಿನಿಧಿ ಅನಿಸಿಕೊಳ್ಳಲು ಅರ್ಹವಲ್ಲ.

ಮಹಾದೇವಪ್ಪ ಮೈಲಾರರು, ತನ್ನ ಕೊನೆಯುಸಿರು ಎಳೆಯುತ್ತಿರುವಾಗಲೂ ತನ್ನನ್ನು ಗುಂಡಿಕ್ಕಿ ಕೊಂದ ಪೋಲೀಸರ ಮೇಲೆ, ತನ್ನ ಜತೆಗಾರರು ಕೈ ಮಾಡುವದನ್ನು ಪ್ರತಿಬಂಧಿಸಿದ್ದು. ಕರ್ನಾಟಕದ ಏಕೆ ಇಡೀ ಭಾರತದ "ಚಲೇಜಾವ್" ಆಂದೋಲನದಲ್ಲಿ ಒಂದು ಅಮರ ಪ್ರಕಾಶದಿಂದ ಬೆಳಗುವ ಶಾಶ್ವತ ಜ್ಯೋತಿಯಾಗಿ ಉಳಿಯುವದು.

ಆಂದೋಲನದ ಮೌಲ್ಯ ಮಾಪನ

ಈ ರೀತಿ ಅನೇಕ ಕಾರ್ಯಕರ್ತರು ತಮ್ಮ ನಾಯಕರಿಗೆ ನಿಷ್ಠರಾಗಿ ತಮ್ಮ ಅಂತಃಕರಣಕ್ಕೆ ಪ್ರಾಮಾಣಿಕರಾಗಿ ತಮ್ಮನಾಯಕರು ಹಾಕಿಕೊಟ್ಟ ಅಹಿಂಸೆಯ ಮರ್ಯಾದೆ ಯಲ್ಲಿ ನಡೆಯುತ್ತ ಮಾಡಿದ ತ್ಯಾಗವು, ಸಹಿಸಿದ ಕಷ್ಟಪರಂಪರೆಯೂ ದೇಶವನ್ನು ಸ್ವಾತಂತ್ರ್ಯದ ಧ್ಯೇಯದ ಕಡೆಗೆ ಮುನ್ನಡೆಯಲು ಸಹಾಯಕವಾಗಿಲ್ಲವೆಂದು ಹೇಳುವದು ಸುಸಂಗತವಲ್ಲ. ಗಾಂಧೀಜಿಯವರಿಗೇ ಪ್ರಶ್ನೆ ಹಾಕಲಾಯಿತು–"ಅಹಿಂಸೆಯ ಅನುಷ್ಠಾನ ದಲ್ಲಿ ಅವರು (ಕಾರ್ಯಕರ್ತರು) ತಪ್ಪುಗಳನ್ನುಮಾಡಿದರು ನಿಜ. ಇದರಿಂದ ಸಾತಂತ್ರ್ಯದ

ಹೋರಾಟವು ಹಿಮ್ಮೆಟ್ಟಿತೇ" ಎಂದು ಕೇಳಿದ ಪ್ರಶ್ನೆಗೆ ಗಾಂಧೀಜಿಯವರ ಉತ್ತರ–"ಪ್ರತಿಯೊಂದು ಹೋರಾಟವು ದೇಶಕ್ಕೆ ಸ್ವಾತಂತ್ರ್ಯದ ಕಡೆಗೆ ಪ್ರಗತಿ ಮಾಡಲು ಸಹಾಯಕವಾಗಿದೆ. ಅದರಂತೆ ಈ ಹೋರಾಟದಿಂದಲೂ ಆ ದಿಶೆಯಲ್ಲಿ ಪ್ರಗತಿಯಾಗಿದೆ. ಆದರೆ ಎಲ್ಲರೂ ಅಹಿಂಸೆಯನ್ನು ಪಾಲಿಸಿದ್ದರೆ ಇನ್ನೂ ಹೆಚ್ಚಿನ ಪ್ರಗತಿಯಾಗುತ್ತಿತ್ತು." (Mahatma Gandhi The last phase Volume I Page 338).

ಆಂದೋಲನದ ನಿಷ್ಪತ್ತಿ ಈ ರೀತಿ ನಿರಸವಾಯಿತೇಕೆ ?

ಇರಲಿ. ಆದರೆ, ಹೀಗೆಂದು ನಾವು ಆತ್ಮತೃಪ್ತರಾಗುಳಿದರೆ, ನಮ್ಮಷ್ಟು ಜಡರು ಮತ್ತೊಬ್ಬರಿಲ್ಲ. ಇಂದು ನಮಗೆ ಲಭಿಸಿದ್ದೇನು ? ಬ್ರಿಟಿಷ ಸಾಮ್ರಾಜ್ಯಶಾಹಿಯು ಅಸ್ತವಾಯಿತು. ಇದೊಂದು ಮಹತ್ವದ ಸಿದ್ಧಿ. ಆದರೆ ಇದು ಕೇವಲ ಅಭಾವಾತ್ಮಕ ಸಿದ್ಧಿ (Negative). ಅದರ ಸ್ಥಾನದಲ್ಲಿ ನಿಜ ಸ್ವರಾಜ್ಯವು ಉದಯಕ್ಕೆ ಬಂದಿದೆಯೇ? ದೇಶವು ಇಬ್ಭಾಗವಾಯಿತು. ಕಾಂಗ್ರೆಸ್ಸಿನ ಗುರಿ, ಗಾಂಧೀಜಿಯವರ ಗುರಿ ಹೀಗಿದ್ದಿಲ್ಲ. ಜನತೆಯ ಮೇಲೆ ಸರಕಾರೀ ನೌಕರಶಾಹಿಯ ಆಳಿಕೆ ಮೊದಲಿಗಿಂತ ತಿಲಮಾತ್ರವೂ ಕಡಿಮೆಯಾಗಿಲ್ಲ. ದೇಶವು ಸ್ವತಂತ್ರವಾಗಿದೇನೋ ನಿಜ. ಜನರು ಮಾತ್ರ ಪರತಂತ್ರರಾಗಿಯೇ ಇದ್ದಾರೆ. ಮತದಾರರು ಆರಿಸಿದ ತಮ್ಮ ಪ್ರತಿನಿಧಿಗಳ ಸ್ವಚ್ಛಂದ ವೃತ್ತಿಯನ್ನು ನಿಯಂತ್ರಿಸಬಲ್ಲರೇ ? ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಸಾರ್ವತ್ರಿಕವಾಗಿ ಹಬ್ಬಿಕೊಂಡ ಪಕ್ಷಾಂತರದ ಪಿಡುಗು ಇದಕ್ಕೆ ಉತ್ತರ ನೀಡಲಿ. ಕುಳ ಕಾಯಿದೆ, ಋಣವಿಮೋಚನೆ ಕಾಯಿದೆ, ಸೀಲಿಂಗ ಕಾಯಿದೆ ಮುಂತಾದ ಕಾನೂನುಗಳು ರೈತರನ್ನು ಶೋಷಣದಿಂದ ಬಿಡುಗಡೆ ಮಾಡುವಲ್ಲಿ ಯಶಸ್ವಿಯಾಗಿವೆಯೇ. ಈ ಕಾಯಿದೆಗಳು ಬಹುಮಟ್ಟಿಗೆ ಕಾನೂನು ಬುಕ್ಕುಗಳಲ್ಲಿ ಕಂಗೊಳಿಸುತ್ತಿವೆ. ವಸ್ತುಸ್ಥಿತಿ ನೋಡಿದರೆ ಇದೆಲ್ಲ ಒಂದು ಅಣಕ (moekery) ವಾಗಿ ಪರಿಣಮಿಸಿದೆ. ಗ್ರಾಮಪಂಚಾಯತಿಗಳು ಕೆಲ ಅಪವಾದಗಳನ್ನು ಬಿಟ್ಟರೆ, ಶೋಷಣದ ಕೇಂದ್ರಗಳಾಗಿವೆ. ಈ ಮಾಲಿಕೆಯನ್ನು ಉದ್ದ ಬೆಳೆಸುವ ಕಾರಣವಿಲ್ಲ. ಪ್ರಶ್ನೆಯಿಷ್ಟೇ ಗಾಂಧೀಜಿಯವರು ನಿಜ ಜನತಾ ರಾಜ್ಯಕ್ಕಾಗಿ ೧೯೨೦ ರಿಂದ ಅಹಿಂಸಾತ್ಮಕ ಹೋರಾಟ ನಡಿಸಿದರು. ಆದರೆ ಅದರಿಂದ ಸಾಧಿಸಿದ ಫಲ ಹೀಗೇಕೆ ವಿರಸವಾಯಿತು ? ಇದು ಅಹಿಂಸಾ ತತ್ವದ ದೋಷವೇ ? ಅಥವಾ ಅದರ ಕಾರ್ಯಾಚರಣೆಯಲ್ಲಿ ನಮ್ಮಿಂದಾದ ಪ್ರಮಾದಗಳು ಇದಕ್ಕೆ ಕಾರಣವೇ ಎಂಬುದು ಮಹತ್ವದ ಪ್ರಶ್ನೆ.

ಜಡವತ್ ವಿಧಾಯಕ ಕಾರ್ಯ ನಡೆಸಿದೆವು

ಇಲ್ಲಿ ನಾನು ಸಂಕ್ಷಿಪ್ತವಾಗಿ ನನ್ನ ನಮ್ರ ಬುದ್ಧಿಗೆ ಹೊಳೆದ ಪ್ರಕಾರ ಈ ಪ್ರಶ್ನೆಯ ಉತ್ತರ ಹುಡುಕಲು ಯತ್ನಿಸುವೆ. ನಾನೊಬ್ಬ ನಮ್ರ ವಿಧಾಯಕ ಕಾರ್ಯಕರ್ತ. ಈ ದೃಷ್ಟಿಯಿಂದ ಮೊಟ್ಟಮೊದಲು ನಮ್ಮಿಂದ – ವಿಧಾಯಕ ಕಾರ್ಯಕರ್ತರಿಂದ

ಆದ ಲೋಪದೋಷಗಳನ್ನು ವಿವರಿಸುವೆ. ಚರಖಾದಿಂದ ಸ್ವರಾಜ್ಯ ಎಂದು ಗಾಂಧೀಜಿ ಹೇಳಿದರು. ಆದರೆ, ಗಾಂಧೀಜಿಯವರೇ ಹೇಳಿದಂತೆ, ನಾವು ಮಾತ್ರ ಜಡವತ್ ಚರಖಾ ತಿರುಗಿಸಿದೆವು. ಹಳ್ಳಿಯ ಜನತೆಯಲ್ಲಿ ಸ್ವಾವಲಂಬನ ಹಾಗೂ ಪರಸ್ಪರಾವಲಂಬನ, ಆತ್ಮವಿಶ್ವಾಸ–ಸಹಕಾರ ವೃತ್ತಿ ಇವುಗಳ ವಿಕಾಸವಾಗಿ, ಪ್ರತಿಯೊಂದು ಗ್ರಾಮವು ಒಂದು ಸ್ವಾಯತ್ತ ಸ್ವಾವಲಂಬೀ ಘಟಕವಾಗುವಂತೆ, ಚರಖಾರೂಪೀ ಸೂರ್ಯನ ಸುತ್ತಲೂ ಗ್ರಾಮೋದ್ಯೋಗ, ಹರಿಜನ ಸೇವೆ—ವರ್ಧಾ ಶಿಕ್ಷಣ ಇತ್ಯಾದಿ ಹದಿನೆಂಟು ವಿಧದ ಕಾರ್ಯಕ್ರಮಗಳನ್ನು ಸಂಘಟಿಸುವ ದೃಷ್ಟಿ ನಮ್ಮಲ್ಲಿ ಬರಲಿಲ್ಲ. ಚರಖಾ ಸಂಘದ ವಿಕೇಂದ್ರಿಕರಣದ ಅರ್ಥವನ್ನು ಸಹ ನಾವು ಗ್ರಹಿಸದೆ ಹೋದೆವು. ಅಲ್ಲಲ್ಲಿ ಖಾದೀಗ್ರಾಮೋದ್ಯೋಗ ಸಂಘಗಳು ಅಸ್ತಿತ್ವದಲ್ಲಿ ಬಂದರೆ ವಿಕೇಂದ್ರಿಕರಣವಾಯಿತೆಂದು ನಾವು ತಿಳಿಕೊಂಡೆವು. ಆದರೆ ಇದರಿಂದ ಕಾರ್ಯವು ಸಂಸ್ಥಾಗತವಾಗಿ–ಆ ಸಂಸ್ಥೆಗಳಿಗೆ ಮರ್ಯಾದಿತವಾಗಿ ಉಳಿಯಿತು. ಗ್ರಾಮದ ಜನರೇ ಪರಸ್ಪರ ಸಹಕಾರದಿಂದ ಖಾದೀಕಾರ್ಯ ಸಂಘಟಿಸಿ ಕೈಗೊಳ್ಳುವಂತೆ—ಗ್ರಾಮವೇ ಚರಖಾ ಸಂಘವಾಗುವಂತೆ ಸಮಗ್ರ ಸೇವಾ ಘಟಕವಾಗುವಂತೆ ನಾವು ಯೋಚಿಸಲಿಲ್ಲ. ಕೇವಲ ಖಾದಿ ಉತ್ಪತ್ತಿ ಮಾರಾಟ ಇದೇ ನಮ್ಮ ಪ್ರಧಾನ ಕಾರ್ಯವಾಗಿ ಕೊನೆವರೆಗೆ ಉಳಿದಿದೆ. ಗಾಂಧೀಜಿಯವರು ಸಮಗ್ರ ಗ್ರಾಮಸೇವಾ ಕಾರ್ಯಕ್ಕೆ ಕಾರ್ಯಕರ್ತರನ್ನು ಕರೆದರು. ಆದರೆ ಅವರ ಕರೆಗೆ ನಾವು ಎಷ್ಟು ಜನರು ಓಕಾರ ಕೊಟ್ಟೆವು? ಗಾಂಧೀಜಿಯವರನ್ನು ತಿಳಿಕೊಂಡು ನಾವು ಕಾರ್ಯ ಪ್ರವೃತ್ತರಾಗಿದ್ದರೆ ಪ್ರತಿ ಗ್ರಾಮದಲ್ಲಿ ಲೋಕ ಶಕ್ತಿ ನಿರ್ಮಾಣವಾಗುತ್ತಿತ್ತು. ಪ್ರತಿ ಗ್ರಾಮವು ಅಹಿಂಸಾ ಸಂಗ್ರಾಮದ ಭದ್ರಕೋಟೆಯಾಗುತ್ತಿತ್ತು.

ರಾಜಕೀಯ ಮುಂದಾಳುಗಳ ಪಾಶ್ಚಾತ್ಯ ಆದರ್ಶದಿಂದ ಪ್ರಭಾವಿತವಾದ ದೃಷ್ಟಿ

ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಿಂದ ಬಂದಾಗ ಕಾಂಗ್ರೆಸ್ಸು ಸ್ವರಾಜ್ಯಕ್ಕಾಗಿ ಹೋರಾಡುವ ಒಂದು ಸಂಘಟಿತ ಸಂಸ್ಥೆಯಾಗಿ ಮೊದಲೇ ಕಾರ್ಯ ಪ್ರವೃತ್ತವಾಗಿತ್ತು. ಅದರ ಹಿಂದೆ ದಾದಾಭಾಯಿ, ಟಿಳಕ, ಗೋಖಲೆಯಂಥ ಮಹಾಪುರುಷರ ತಪಸ್ಸಿತ್ತು. ಆದುದರಿಂದ ವ್ಯವಹಾರ ಕುಶಲ ಮಹಾತ್ಮಾಜಿಯವರು ಈ ಸಂಸ್ಥೆಯ ಮುಖಾಂತರವೇ ಈ ಸ್ವಾತಂತ್ರ್ಯ ಸಂಗ್ರಾಮವನ್ನು ಸಂಘಟಿಸುವ ಸಂಕಲ್ಪ ಮಾಡಿದರು. ಆದರೆ, ಕಾಂಗ್ರೆಸ್ಸಿನ ಬಹುತೇಕ ಮುಂದಾಳುಗಳು ಪಾಶ್ಚಾತ್ಯ ರಾಜಕಾರಣ ಶಾಸ್ತ್ರ, ಪಾಶ್ಚಾತ್ಯ ಅರ್ಥ ಶಾಸ್ತ್ರವನ್ನು ನಂಬುವವರಾಗಿದ್ದರು. ಅವರ ದೃಷ್ಟಿ ಕೇವಲ ರಾಜಕೀಯವಿತ್ತು. ಸಮಗ್ರ ದರ್ಶನ ಅವರಿಗಿದ್ದಿಲ್ಲ. ಗಾಂಧೀಜಿಯವರ ನೇತೃತ್ವ ಅವರಿಗೆ ಬೇಕಿತ್ತು. ಕಾಂಗ್ರೆಸ ಮುಂದಾಳುಗಳೆಲ್ಲರದೂ ಈ ದೃಷ್ಟಿಯಿತ್ತೆಂದು ಅರ್ಥವಲ್ಲ.

ಆದರೆ ಕಾಂಗ್ರೆಸ್ಸಿನೊಳಗಿನ ಪ್ರಧಾನ ವಿಚಾರ ಓಘವು ಪಾಶ್ಚಾತ್ಯ ಧಾಟಿಯಲ್ಲಿತ್ತು. ಅಹಿಂಸೆಯನ್ನು ಕಾಂಗ್ರೆಸ್ಸು ಒಂದು ನಿಷ್ಠೆಯೆಂದು ಸ್ವೀಕರಿಸಲಿಲ್ಲ. ಒಂದು ಕಾರ್ಯ ನೀತಿ (Policy) ಎಂದು ಮಾನ್ಯ ಮಾಡಿತು. ಅಹಿಂಸೆಯ ಪ್ರಭಾವವು ಮನ ದಟ್ಟಾದಂತೆ ಕಾಂಗ್ರೆಸ್ಸು ಇಂದಲ್ಲ ನಾಳೆಯಾದರೂ ಅಹಿಂಸೆಯನ್ನು ನಿಷ್ಠೆಯನ್ನಾಗಿ ಸ್ವೀಕರಿಸುವದೆಂಬ ವಿಶ್ವಾಸವನ್ನು ಗಾಂಧೀಜಿಯವರು ತಾಳಿದ್ದರು. ಆದರೆ ಕಾಂಗ್ರೆಸ್ಸಿನ ಭೂಮಿಕೆ ಕೊನೆವರೆಗೂ ಏಕಪ್ರಕಾರವಾಗಿ ಉಳಿಯಿತು.

ಗಾಂಧೀಜಿಯವರು ಕಾಂಗ್ರೆಸ್ಸಿನ ಸೂತ್ರಗಳನ್ನು ತಮ್ಮ ಕೈಯಲ್ಲಿ ತಕ್ಕೊಂಡಂದಿ ನಿಂದಲೇ ಹಿಂದು, ಮುಸ್ಲಿಮ ಇತ್ಯಾದಿ ಕೋಮುಗಳ ಐಕ್ಯ, ಅಸ್ಪೃಶ್ಯತಾ ನಿವಾರಣೆ ಇವುಗಳಿಗೆ ಕಾಂಗ್ರೆಸ ಕಾರ್ಯಕ್ರಮದಲ್ಲಿ ಪ್ರಧಾನ ಸ್ಥಾನ ಕೊಟ್ಟಿದ್ದರು. ಆದರೆ ಇವು ಗಳ ಪ್ರತ್ಯಕ್ಷ ಕಾರ್ಯಾಚರಣೆ ಎಷ್ಟರ ಮಟ್ಟಿಗೆ ಮತ್ತು ಯಾವ ಅಂತಃಕರಣ ವೃತ್ತಿ ಯಿಂದ ಆಗಬೇಕೆಂದು ಗಾಂಧೀಜಿ ಬಯಸಿದ್ದರೋ ಆ ಪ್ರಕಾರ ಆಗಿಲ್ಲ. ಆ ಮೂಲಕ ದೇಶದಲ್ಲಿ ಭಾವಾತ್ಮಕ ಐಕ್ಯ ಉಂಟಾಗಲಿಲ್ಲ.

ವಿಧಾಯಕ ಕಾರ್ಯಕ್ರಮದಿಂದಲೇ ಜನತೆಯಲ್ಲಿ ಅಹಿಂಸಾತ್ಮಕ ಪ್ರತಿರೋಧ ಶಕ್ತಿಯ ವಿಕಾಸ

ವಿಧಾಯಕ ಕಾರ್ಯಕ್ರಮವು ಗಾಂಧೀಜಿಯವರ ಸತ್ಯಾಗ್ರಹ ತತ್ವದ ಹಾಗೂ ತಂತ್ರ (Technique) ದ ಭಾವಾತ್ಮಕ (Positive) ಅಂಗ. ಅದರ ಮೂಲಕವೇ ರಾಷ್ಟ್ರದಲ್ಲಿ ಜನತೆಯಲ್ಲಿ ಆತ್ಮಶಕ್ತಿ ಬೆಳೆಯುವದು. ಎಲ್ಲತರದ ಭೇದಭಾವ, ವಿಷಮತೆ ದೂರಾಗಿ ಹಳ್ಳಿಗಳು ಮತ್ತು ಶಹರುಗಳು, ಶಿಕ್ಷಿತರು ಮತ್ತು ಅಶಿಕ್ಷಿತರು,–ಸಿರಿವಂತರು ಮತ್ತು ಬಡವರು, ಸವರ್ಣರು ಮತ್ತು ಅವರ್ಣರು, ಇವರೆಲ್ಲರಲ್ಲೂ ಏಕಾತ್ಮಭಾವ ಮೂಡಲು ಸಹಕಾರ ಸೌಹಾರ್ದ ಬೆಳೆಯಲು, ನಮ್ಮ ಸಮಾಜದೊಳಗೆ ದೃಢಮೂಲ ವಾಗಿದ್ದ ಘಾತಕದೋಷಗಳು ದೂರಾಗಲು ಈ ಕಾರ್ಯಕ್ರಮ ಯೋಜಿಸಿದ್ದರು ಗಾಂಧೀಜಿ. ಈ ವಿಧಾಯಕ ಕಾರ್ಯಕ್ರಮವನ್ನು ಮನಮುಟ್ಟಿ ನೆರವೇರಿಸಿದಾಗಲೇ ರಾಷ್ಟ್ರದಲ್ಲಿ ಭಾವಾತ್ಮಕ ಅಹಿಂಸೆಯು (Positive Non-violence) ವಿಕಾಸವಾಗು ವದು. ಆಗಲೇ ರಾಷ್ಟ್ರವು ಕೈಕೊಳ್ಳುವ ಅಹಿಂಸಾತ್ಮಕ ಪ್ರತಿರೋಧವು (Non-violence Resistance) ಯಶಸ್ವಿಯಾಗಬಲ್ಲದು.

೧೨-೪-೪೨ ರ ತಮ್ಮ ಹರಿಜನ ಪತ್ರಿಕೆಯಲ್ಲಿ ಗಾಂಧೀಜಿ–"ವಿಧಾಯಕ ಕಾರ್ಯ ಕ್ರಮದ ಆಧಾರವಿಲ್ಲದೆ ತಾನು ಅಹಿಂಸಾಶಕ್ತಿಯನ್ನು ಪ್ರಕಟಿಸಬಲ್ಲೆನೆಂದು ಯಾರಾದರೂ ನಂಬಿದ್ದರೆ, ಆಯುತ ಪರೀಕ್ಷೆಸಮಯಕ್ಕೆ ಆವನು ಕಡು ಅಪಯಶಸ್ಸಿಗೆ ಗುರಿಯಾಗುವನು" ಎಂದು ಸ್ಪಷ್ಟಪಡಿಸಿರುವರು. (Any one who believes that without the backing of the Constructive Programme he will show

Non-Violvet strength. When the testing time, comes, will fail miserably) Harijan 12-4-42.

ಗಾಂಧೀಜಿಯವರು ತಮ್ಮ ನಿರಹಂಭಾವ ವೃತ್ತಿಗನುಸರಿಸಿ ಈ ವಿಷಯದಲ್ಲಿ ತಮ್ಮ ತಪ್ಪನ್ನು ೨೧–೭–೪೦ ರ ಹರಿಜನದಲ್ಲಿ ಈ ರೀತಿ ಒಪ್ಪಿಕೊಂಡಿರುವರು— "ನಾನು ನನ್ನ ಸಹಕಾರಿಗಳು ನನ್ನಿಂದ ದೂರಾಗಬಹುದೆಂಬ ಭೀತಿಯಿಂದ ವಿಧಾಯಕ ಕಾರ್ಯಕ್ರಮದ ಪೂರ್ತಿಯಾಗುವ ಶರ್ತಿಗೆ ಅಂಟಿಕೊಳ್ಳದೆ ಅದಕ್ಕೆ ಅದ್ಯಸ್ಥಾನ ಕೊಡದೆ ಸವಿನಯ ಕಾನೂನು ಭಂಗಕ್ಕೆ ಆಸ್ಪದ ಕೊಟ್ಟೆ ಮತ್ತು ಈ ರೀತಿ ನ್ಯೂನವಾದ ಅಹಿಂಸೆಯಿಂದ ಕೆಲಸ ಮುಂದರಿಸಿದೆ. ಇದು ನನ್ನಿಂದಾದ ಹಿಮಾಲಯದಷ್ಟು ದೊಡ್ಡ ತಪ್ಪು" (In placing Civil Disobedience before constructive work I was wrong and I did not profit by the Himalayan blunder I had committed. I feared I should estrange my Co-workers and so carrid on with imperfect Ahimsa).

ಇದರ ಮೇಲಿಂದ ಅಹಿಂಸಾ ಪ್ರಯೋಗದಲ್ಲಿ ತೊಡಗಿದವನಿಗೆ ತನ್ನ ಪ್ರಯೋಗಗಳನ್ನು ಎಷ್ಟೊಂದು ಕಠೋರ ವೈಜ್ಞಾನಿಕ ದೃಷ್ಟಿಯಿಂದ ಒರೆಗಲ್ಲಿಗೆ ಹಚ್ಚಬೇಕಾಗುವದು ಎಂಬುದು ವ್ಯಕ್ತವಾಗುವದು. ಸ್ಥಳಾಭಾವದ ಮೂಲಕ ಗಾಂಧೀಜಿಯವರ ಇನ್ನೊಂದು ಉದ್ಧರಣ ಕೊಡಲಾಗುವದು. ೧೮–೫–೧೯೪೦ ರಲ್ಲಿ—ನಿಜವಾದ ಪ್ರಜಾಪ್ರಭುತ್ವವನ್ನು ವಿಕಾಸಗೊಳಿಸಲು ಭಾರತದ ಯತ್ನ! ಅದಕ್ಕಾಗಿ ಸತ್ಯಾಗ್ರಹದ ಆಯುಧಗಳೇ ನಮ್ಮ ಸಾಧನ. ಚರಖಾ, ಗ್ರಾಮೋದ್ಯೋಗ, ವರ್ಧಾ ಶಿಕ್ಷಣ, ಅಸ್ಪೃಶ್ಯತಾ ನಿವಾರಣೆ, ಜಾತೀಯ ಐಕ್ಯ (Communal harmony) ಮದ್ಯಪ್ರತಿಬಂಧ, ಅಹಮ್ಮದಾಬಾದ ಕೂಲಿಕಾರ ಸಂಘಟನೆಯ ಮಾದರಿಯಲ್ಲಿ ಮಜದೂರರ ಅಹಿಂಸಕ ಸಂಘಟನೆ ಇವೇ ನಮ್ಮ ಸತ್ಯಾಗ್ರಹದ ಆಯುಧಗಳು. ಈ ಕಾರ್ಯಕ್ರಮದ ಮೂಲಕ ಜನತೆಗೆ ಸ್ವರಾಜ್ಯಕ್ಕಾಗಿ ಅವಶ್ಯವಿದ್ದ ಲೋಕಶಿಕ್ಷಣವು ಲಭಿಸುತ್ತದೆ. ಜನತೆಯ ಸಾಮೂಹಿಕ ಶಕ್ತಿ, ಸಾಮೂಹಿಕ ಉದ್ಯಮ ವಿಕಾಸಗೊಳ್ಳುತ್ತವೆ.

ಆಯುತ ಹೊತ್ತಿನಲ್ಲಿ ಅಸಮರ್ಥರಾದೆವು

ಅವರ ಈ ಮಹತ್ವದ ಮೂಲಭೂತ ಮಾತಿನ ಕಡೆಗೆ ನಮ್ಮ ದುರ್ಲಕ್ಷ್ಯವಾಯಿತು. ಮೇಲೆ ವಿವರಿಸಿದಂತೆ ಈ ಕಡೆಗೆ ಕಾಂಗ್ರೆಸ ಜನರು ಸಾಕಷ್ಟು ಗಮನಕೊಡಲಿಲ್ಲ. ಆದುದರಿಂದ ಭಾವಾತ್ಮಕ ಅಹಿಂಸೆಯು (Positive Nan-Violance) ದೇಶದಲ್ಲಿ ವಿಕಾಸವಾಗಲಿಲ್ಲ. ಆದುದರಿಂದ ಆಯುತ ಸತ್ವಪರೀಕ್ಷೆಯ ಸಮಯದಲ್ಲಿ ಪರಿಶುದ್ಧ ಅಹಿಂಸಾ ಶಕ್ತಿಯನ್ನು, ಆತ್ಮಶಕ್ತಿಯನ್ನು ಪ್ರಕಟಮಾಡಲು ನಾವು ಅಸಮರ್ಥರಾದೆವು. ಗುಪ್ತತೆ, ವಿಧ್ವಂಸಕ ಕೃತಿಗಳನ್ನು ಆಶ್ರಯಿಸಿದೆವು. ೧೯೩೦, ೩೨,

೩೩ ರ ಆಂದೋಲನಗಳಲ್ಲಿ ಸಹ ವಿಧ್ವಂಸಕ ಕೃತಿಗಳಿಗೆ ಸ್ಥಾನ ಸಿಗದಿದ್ದರೂ ಗುಪ್ತತೆಯ ಆಶ್ರಯ ನಾವು ಪಡೆದಿದ್ದೆವು.

ಇಲ್ಲಿ ಒಂದು ಮಾತು ವ್ಯಕ್ತಿಶಃ ನನ್ನ ಬಗ್ಗೆ ಸ್ಪಷ್ಟ ಮಾಡದಿದ್ದರೆ ಅಸತ್ಯದ, ಡಂಭದ ಮಹದಪರಾಧಕ್ಕೆ ನಾನು ಗುರಿಯಾಗುವೆ. ೧೯೪೨ ರ ಆಂದೋಲನದಲ್ಲಿ ಅಗಸ್ಟ ತಾರೀಖು ೯-೧೦ ಕ್ಕೆ ನಾನು ಬಂಧಿತನಾದೆ. ಅದರೂ ತುರುಂಗದಲ್ಲಿದ್ದಾಗ ನಾನು ಗುಪ್ತ ಹಾಗೂ ವಿಧ್ವಂಸಕ ಕೃತಿಗಳ ಬಗ್ಗೆ ಸಹಾನುಭೂತಿ ಮಾತ್ರ ತಾಳಿದ್ದೆನಷ್ಟೇ ಅಲ್ಲ ಅವನ್ನು ಸಮರ್ಥಿಸುತ್ತಿದ್ದೆ. ಆದರೆ ೧೯೪೨, ೪೪ ರ ಆಂದೋಲನದ ಸೂಕ್ಷ್ಮ ಹಾಗೂ ತಟಸ್ಥ ಅಧ್ಯಯನ ಮಾಡಿದಾಗ ನಮ್ಮ ಈ ದೋಷಪೂರ್ಣ ಕಾರ್ಯ ಪದ್ಧತಿಯ ಪ್ರತೀತಿಯಾಗದಿರದು. ನಮ್ಮ ಕಾರ್ಯ ಪದ್ಧತಿಯಿಂದ ಜನತಾ ಆಂದೋಲನವು ವಿಕಾಸಗೊಳ್ಳಲಿಲ್ಲ. ಜನಕೋಟಿಯಲ್ಲಿ ಆತ್ಮವಿಶ್ವಾಸ, ಆತ್ಮಶಕ್ತಿ ಪ್ರಕಟವಾಗಲಿಲ್ಲ.

ಗುಪ್ತತೆ ಮತ್ತು ವಿಧ್ವಂಸಕ ಕೃತಿಗಳ ಕುರಿತು ಗಾಂಧೀಜಿ

ಈ ವಿಷಯದಲ್ಲಿ ಗಾಂಧೀಜಿಯವರು ೧೯೪೪ ರಲ್ಲಿ ತಮ್ಮ ಬಿಡುಗಡೆಯ ನಂತರ ತಮ್ಮ ಭೆಟ್ಟಿಗೆ ಬಂದಿದ್ದ ಭೂಗತ ಕಾರ್ಯಕರ್ತರಿಗೆ ಸ್ಪಷ್ಟಪಡಿಸಿದ ಮಾತುಗಳನ್ನು ನಾವು ಮನನ ಮಾಡಬೇಕು. ಅವುಗಳಲ್ಲಿ ಎರಡು ಮೂರು ಮಾತುಗಳನ್ನು ಇಲ್ಲಿ ಕನ್ನಡದಲ್ಲಿ ಅನುವಾದಮಾಡಿ ಕೊಡಲಾಗುವದು— "ನಮಗೆ ಒಬ್ಬಿಬ್ಬರ ದೃಷ್ಟಿಯಿಂದ ವಿಚಾರ ಮಾಡತಕ್ಕದ್ದಿಲ್ಲ. ನಾಲ್ವತ್ತು ಕೋಟಿ ಬಾಂಧವರ ದೃಷ್ಟಿಯಿಂದ ವಿಚಾರಮಾಡಬೇಕಾಗಿದೆ. ಇಂದು ಅವರು ನಿಷ್ಪ್ರಾಣರಾಗಿದ್ದಾರೆ. ಗುಪ್ತ ಪದ್ಧತಿಗಳನ್ನು ಆಶ್ರಯಿಸುವದರಿಂದ ನಾವು ಅವರಲ್ಲಿ ಪ್ರಾಣಕಳೆ ತುಂಬಲಾರೆವು. ಸತ್ಯ ಮತ್ತು ಅಹಿಂಸೆಗಳಿಗೆ ಅಂಟಿಕೊಳ್ಳುವದರಿಂದಲೇ ಅವರ ತೇಜೋಹೀನ ಕಣ್ಣುಗಳಲ್ಲಿ ತೇಜವನ್ನು ಉಂಟುಮಾಡಬಲ್ಲೆವು."— "ಇಮಾರತುಗಳು, ಯಾತಾ-ಯಾತ ಸಾಧನಗಳು. (ರೈಲು ಇತ್ಯಾದಿ) ರಸ್ತೆಗಳು ಇವುಗಳಲ್ಲಿ ತಾನೇ ಏನು ಕೆಡಕು ಇದೆ ? ಆದರೆ ಅವುಗಳನ್ನು ದುರುದ್ದೇಶಕ್ಕಾಗಿ ಉಪಯೋಗಿಸುವವರಲ್ಲಿ ಕೆಡಕು ಇದೆ. ರೇಲ್ವೆ, ರಸ್ತೆ ಇತ್ಯಾದಿಗಳನ್ನು ಧ್ವಂಸಪಡಿಸುವದರಿಂದ, ಆವುಗಳನ್ನು ತಮ್ಮ ದುರುದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಜನರ ಮನಸ್ಸಿನ ಮೇಲೆ ಯಾವದೇ ಇಷ್ಟ ಪರಿಣಾಮವಾಗಲಾರದು. ಅವರ ಮನಸ್ಸಿನ ಪರಿವರ್ತನೆಯಾಗಲಾರದು. ಹೀಗಾಗಲು ಶುದ್ಧ ಆತ್ಮ ಬಲಿದಾನವು ಅವಶ್ಯ. ಸತ್ಯಕ್ಕಾಗಿಯೇ ತಮ್ಮ ಜೀವನವನ್ನರ್ಪಿಸಿದವರ ದೇಹಕ್ಕೆ ಅಧಿಕಾರಿಗಳು ಘಾತ ಮಾಡಬಹುದು. ಆದರೆ ಸತ್ಯಾಗ್ರಹಿಗಳ ನಿರ್ಧಾರವನ್ನು ಭಂಗಗೊಳಿಸುವದು ಶಕ್ಯವಿಲ್ಲವೆಂಬುದು ಇಂಥ ಶುದ್ಧ ಆತ್ಮ ಬಲಿದಾನದಿಂದ ನಿದರ್ಶನಕ್ಕೆ ಬರುವದು."

—"ವಿಧ್ವಂಸಕ ಕೃತಿಗಳು ಕೆಲಹೊತ್ತಿನ ವರೆಗೆ ಯಶಸ್ವಿಯಾದವೆಂದು ಕಾಣಿಸಿಕೊಳ್ಳಬಹುದು. ಅಥವಾ ಕೆಲಹೊತ್ತಿನ ವರೆಗೆ ಯಶಸ್ವಿಯೂ ಆಗಬಹುದು.

ಆದರೆ ಅಂತಿಮದಲ್ಲಿ ಅದಕ್ಕೆ ಅಪಯಶಸ್ಸು ನಿಶ್ಚಿತ (Mahatma Gandhi The last phase Volume I ದಲ್ಲಿ Nation's Voice Page 38. 41, ದಿಂದ ಉದ್ಧೃತ).

ಮೇಲೆ ಹೇಳಿದಂತೆ "ಚಲೇಜಾವ" ಆಂದೋಲನದ ತಟಸ್ಥ ಅಧ್ಯಯನ ಮಾಡಿದಾಗ ಗಾಂಧೀಜಿಯವರ ಈ ಮಾತುಗಳ ಸತ್ಯತೆಯು ಪ್ರತೀತಿಗೆ ಬರುವದು.

ಗುರಿಯಿಂದ ದೂರ ಉಳಿದೆವು

ಈ ರೀತಿಯಾಗಿ ನಾವು ಆಚರಿಸಿದ ಸತ್ಯಾಗ್ರಹತಂತ್ರ (Technique) ದಲ್ಲಿ ನ್ಯೂನತೆಗಳು ತಲೆದೋರಿದ ಮೂಲಕ ಭಾವಾತ್ಮಕ ಅಹಿಂಸೆಯನ್ನು ನಾವು ಸಾಕಷ್ಟು ವಿಕಾಸಗೊಳಿಸದ್ದರಿಂದ. ಈ ಹೋರಾಟವು ಬ್ರಿಟಿಷ ಸಾಮ್ರಾಜ್ಯಶಾಹಿಯು ನಮ್ಮ ರಾಷ್ಟ್ರದಿಂದ ಕಾಲು ತೆಗೆಯುವಂತೆ ಮಾಡುವ ಮಟ್ಟಿಗೆ ಮಾತ್ರ ಒಂದು ಪ್ರಭಾವೀ ಕಾರಣವಾಯಿತು. ಒಂದು ಅಭಾವಾತ್ಮಕ ಸಿದ್ಧಿಯನ್ನು (Negative achievement) ಮಾತ್ರ ನಾವು ಸಾಧಿಸಿದೆವು. ಆದರೆ ನಮ್ಮ ಹೋರಾಟದ ನಿಜಗುರಿಯನ್ನು ನಾವು ಮುಟ್ಟಲು ಸಮರ್ಥರಾಗಲಿಲ್ಲ. ಮೇಲೆ ವಿವರಿಸಿದಂತೆ ನಿಜವಾದ ಜನತಾ ರಾಜ್ಯವು ನಮ್ಮಿಂದ ದೂರವೇ ಉಳಿಯಿತು.

ಮುಂದೇನು

ಆದರೆ ಇದರಿಂದ ಎದೆಗುಂದುವ, ಇಲ್ಲವೆ ಪರಾಭವ ಭಾವನೆ (Defeatist mentality) ತಾಳುವ ಕಾರಣವೇ ಇಲ್ಲ. ಕೂಸು ಎಡವುತ್ತ ಬೀಳುತ್ತಲೇ ನಡೆಯಲು ಸಮರ್ಥವಾಗುತ್ತದೆ. ಆದುದರಿಂದ ಇದುವರೆಗಿನ ಅನುಭವದ ಹಿನ್ನೆಲೆಯಲ್ಲಿ ನಾವು ಈ ನಮ್ಮ ಧ್ಯೇಯದತ್ತ ಜನಕೋಟಿಯ ಸ್ವರಾಜ್ಯದತ್ತ ಮುಂದೆ ಸಾಗುವ ಮಾರ್ಗವನ್ನು ಕ್ರಮಿಸಬೇಕಾಗಿದೆ. ಭಾರತದ ಜನತೆಯನ್ನು ಎಲ್ಲ ವಿಧದ ಶೋಷಣದಿಂದ ಬಿಡುಗಡೆ ಮಾಡುವ. ನಿಜ ಜನತಾ ರಾಜ್ಯವನ್ನು ಸಾಧಿಸುವ ಸಂಕಲ್ಪವನ್ನು ಈಡೇರಿಸಲು ನಮ್ಮ ಜೀವನ ಸಮರ್ಪಿಸುವದರಿಂದಲೇ ನಾವು ನಮ್ಮ ಕರ್ತವ್ಯವನ್ನು ಪೂರ್ತಿಗೊಳಿಸಿದಂತಾಗುವದು. "ಚಲೇಜಾವ" ಆಂದೋಲನದ ಉದ್ದೇಶವು ಪೂರ್ತಿಯಾಗುವದು. ಆಗಲೇ ಈ ಆಂದೋಲನದಲ್ಲಿ, ಹಾಗೂ ಇಡೀ ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆತ್ಮಬಲಿದಾನ ಮಾಡಿದ, ಜೀವನ ಸವೆಸಿದ, ಅಸಂಖ್ಯ ತ್ಯಾಗವೀರರ ಆತ್ಮಕ್ಕೆ ಶಾಂತಿ ಸಿಗುವದು. ಆಗಲೇ "ಮಾಡು ಇಲ್ಲವೇ ಮಡಿ" ಎಂದು ರಾಷ್ಟ್ರಪಿತನು ಕೊಟ್ಟ ಆದೇಶವನ್ನು ಪಾಲಿಸಿದಂತಾಗುವದು.

ಸುತ್ತಲೂ ಕವಿದ ಕತ್ತಲೆಯಲ್ಲಿ ಒಂದು ಬೆಳಕು

ನಮ್ಮ ಹಾಗೂ ದೇಶದ ಸುದೈವದಿಂದ ಮಹಾತ್ಮಾ ಗಾಂಧಿಯವರ ಸರ್ವಶ್ರೇಷ್ಠ ಅನುಯಾಯಿಗಳಾದ ಆಚಾರ್ಯ ವಿನೋಬಾಜಿಯವರು ಈ ದಿಶೆಯಲ್ಲಿ ನಮಗೆ ದಾರಿ ತೋರಿಸಿರುವರು. ಗಾಂಧೀಜಿಯವರು ಸಂಕಲ್ಪಿಸಿದ ಸಮಗ್ರ ಕ್ರಾಂತಿಯನ್ನು ಪೂರ್ತಿಗೊಳಿಸಲು ಗಾಂಧೀಜಿಯವರ ಪಥದಲ್ಲಿಯೇ ನಮ್ಮನ್ನು ಮುನ್ನಡೆಯಿಸಲು ಲಭಿಸಿರುವರು. ಅದಕ್ಕಾಗಿ ಅವರು ಗ್ರಾಮದಾನ ಮೂಲಕ, ಗ್ರಾಮೋದ್ಯೋಗ ಪ್ರಧಾನ. ಅಹಿಂಸಕ ಕ್ರಾಂತಿಯ ಕಹಳೆಯನ್ನೂದಿ, ದೇಶಪ್ರೇಮಿಗಳೆಲ್ಲರಿಗೂ ಕರೆಯುತ್ತಿರುವರು.

ಜಯಪ್ರಕಾಶ ನಾರಾಯಣ ಅವರು ಹಾಕಿಕೊಟ್ಟ ಮೇಲ್ಪಂಕ್ತಿ

ಜಗತ್ತಿನಲ್ಲಿ ನಡೆದ ಎಲ್ಲ ಕ್ರಾಂತಿಗಳ ಆಳವಾದ ಅಧ್ಯಯನ ಮಾಡಿದವರು, ಜನಕ್ರಾಂತಿಗಾಗಿಯೇ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟವರು ಶ್ರೀ ಜಯಪ್ರಕಾಶರು. ಹಿಂದೆ "ಚಲೇಜಾವ" ಆಂದೋಲನದಲ್ಲಿ ಯಾವದೊಂದು ಆತ್ಯಂತಿಕ ನಿರ್ಧಾರದಿಂದ ಪ್ರಾಣವನ್ನೇ ಪಣಕ್ಕೆ ಕಟ್ಟಿ ಹೋರಾಡಿದರೋ, ಅದೇ ನಿರ್ಧಾರದಿಂದ ವಿನೋಬಾಜಿಯವರು ಕೈಕೊಂಡ ಕ್ರಾಂತಿಯೇ ನಿಜವಾದ ಕ್ರಾಂತಿಮಾರ್ಗವೆಂದು ಮನಗಂಡು, ಈ ಕ್ರಾಂತಿಗಾಗಿ ಸರ್ವಾರ್ಪಣಭಾವದಿಂದ ದುಡಿಯುತ್ತಿರುವರು. ಹಿಂಸಾಕ್ರಾಂತಿಯು ಶೋಷಕ ರಾಜಸತ್ತೆಯನ್ನು ನಷ್ಟಪಡಿಸಬಹುದು. ಆದರೆ, ಅದರಿಂದ ಶೋಷಣಮುಕ್ತ ಸಮಾಜವು ಮಾತ್ರ ಅಸ್ತಿತ್ವದಲ್ಲಿ ಬರಲಾರದು ಎಂಬ ನಿರ್ಣಯಕ್ಕೆ ಅವರು ಗಾಢ ಅಧ್ಯಯನ ಮತ್ತು ಅನುಭವದಿಂದ ಬಂದಿರುವರು.

ವಿನೋಬಾಜಿಯವರು ಕೈಕೊಂಡ ಕ್ರಾಂತಿಯ ಕುರಿತು ಸಮಗ್ರ ವಿವೇಚನೆ ಇಲ್ಲಿ ನಾನು ಮಾಡಲಿಚ್ಛಿಸುವದಿಲ್ಲ. ಅದಕ್ಕೆ ಈ ಸ್ಥಾನವಲ್ಲ. ದೇಶದ ಇಂದಿನ ಚಿಂತಾಜನಕ ಪರಿಸ್ಥಿತಿಯಲ್ಲಿ ರಾಜಕೀಯ, ಆರ್ಥಿಕ, ಶೈಕ್ಷಣಿಕ ರಂಗಗಳಲ್ಲಿ ವ್ಯಾಪಿಸಿರುವ ಅನವಸ್ಥೆಯ ಹಿನ್ನೆಲೆಯಲ್ಲಿ ವಿನೋಬಾಜಿಯವರ ಈ ಆಂದೋಲನದ ಸಮಗ್ರ ದರ್ಶನವಾಗುವ ದೃಷ್ಟಿಯಿಂದ, ಶ್ರೀ ಜಯಪ್ರಕಾಶರು ಸದ್ಯಕ್ಕೇ, ಬಿಹಾರದ ಒಂದು ಪ್ರಖಂಡದಲ್ಲಿ ಕೈಕೊಂಡ ಕಾರ್ಯದ ವಿಷಯವಾಗಿ ಬರೆದಿರುವ, "ಆಮನೇ ಸಾಮನೇ" (Face to face with reality) ಈ ಚಿಕ್ಕ ಪುಸ್ತಿಕೆಯನ್ನು ಓದಬೇಕಾಗಿ ನಮ್ರ ಸೂಚನೆ. ಈ ಚಿಕ್ಕ ಪುಸ್ತಿಕೆಯು ಜಗತ್ತಿನಲ್ಲಿ ಪ್ರಗತಿಪರ ವಿಚಾರ ತಾಳಿದವರ ಲಕ್ಷ್ಯವನ್ನು ಆಕರ್ಷಿಸಿದೆ.

"ಮಾಡು ಇಲ್ಲವೆ ಮಡಿ" ಈ ಆದೇಶವು ಇನ್ನೂ ಪೂರ್ತಿಗೊಳಿಸತಕ್ಕದ್ದಿದೆ

ಈ ಕುರಿತು ಪ್ರಾಮಾಣಿಕ ಶಂಕೆ ಪಡುವವರಲ್ಲಿ ನಮ್ರ ಅರಿಕೆ

ಅನೇಕ ಬುದ್ಧಿಶಾಲಿಗಳೂ. ಕಾರ್ಯಕರ್ತರೂ ಸಹ ವಿನೋಬಾಜಿಯವರು ಕೈಕೊಂಡ ಕ್ರಾಂತಿಕಾರ್ಯದ ಕುರಿತು ಪ್ರಾಮಾಣಿಕಭಾವದಿಂದ ಶಂಕಾಶೀಲವೃತ್ತಿ ತಾಳಿರು

ವರು. ಅಂಥವರ ಬಗ್ಗೆ ಅವರ ಈ ಸ್ಪಷ್ಟ ಪ್ರಾಮಾಣಿಕ ವೃತ್ತಿಯಬಗ್ಗೆ ನಮ್ಮಲ್ಲಿ ತುಂಬ ಆದರವಿದೆ. ಪ್ರತಿಯೊಬ್ಬರಿಗೂ ತಮ್ಮ ಪ್ರಾಮಾಣಿಕ ಮತದಂತೆ ನಡೆಯಲು ಅಧಿಕಾರವಿದೆ. ಇಷ್ಟೇ ಅಲ್ಲ. ಅದು ಅವರ ಕರ್ತವ್ಯ. ಯಾಂತ್ರಿಕವಾಗಿ ಕೊಡುವ ಸಮ್ಮತಿಗಿಂತ ಪ್ರಾಮಾಣಿಕ ಮತಭೇದವನ್ನು ವ್ಯಕ್ತಮಾಡುವದರಿಂದಲೇ ಪ್ರಗತಿ ಸಾಧ್ಯ. ಅಂಥವರಲ್ಲಿ ನನ್ನ ನಮ್ರ ಅರಿಕೆಯಿಷ್ಟೇ. ಅವರು ತಮ್ಮ ಬುದ್ಧಿಗೆ ಹೆಚ್ಚು ಪರಿಣಾಮ ಕಾರಿಯೆನಿಸುವ ಮಾರ್ಗವನ್ನು ಅಂಗೀಕರಿಸಿ, ಜನಕೋಟಿಯ ಶೋಷಣ ಮುಕ್ತಿಗಾಗಿ, ನಿಜ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಕಟಿಬದ್ಧರಾಗಲಿ. ನಮ್ಮ ದೇಶದ ಇಂದಿನ ಚಿಂತಾ ಜನಕ ಪರಿಸ್ಥಿತಿಯಲ್ಲಿ ನಿಷ್ಕ್ರಿಯರಾಗಿ ಕುಳಿತುಕೊಂಡಿರುವದು ಅಕ್ಷಮ್ಯ ಕರ್ತವ್ಯಚ್ಯುತಿ ಯಾಗುವದೆಂಬ ಮಾತನ್ನು ಹೇಳುವ ಅವಶ್ಯಕತೆಯಿಲ್ಲ.

ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಜಗತ್ತಿನಲ್ಲಿಯೇ ಅಭೂತಪೂರ್ವ ಸ್ವಾತಂತ್ರ್ಯ ಸಂಗ್ರಾಮದ " ಭಾರತದಿಂದ ತೊಲಗಿರಿ " ಎಂಬ ಉಜ್ವಲ ಪರ್ವವನ್ನು ಮತ್ತು ಆ ಪರ್ವದಲ್ಲಿ ಕುಂದರನಾಡು ವಹಿಸಿದ ಧೀರೋದಾತ್ತ ಪಾತ್ರ ವನ್ನು ಚಿತ್ರವತ್ ವರ್ಣಿಸುವ ಪ್ರಸ್ತುತ ಗ್ರಂಥವು ಕರ್ನಾಟಕದ ಜನತೆಗೂ, ಯುವಕ ಯುವತಿಯರಿಗೂ " ಮಾಡಿ ಇಲ್ಲವೆ ಮಡಿ " ಎಂಬ ನಿರ್ಧಾರದಿಂದ ಶೋಷಣಮುಕ್ತ ಸಮಾಜ ರಚನೆಯ ಕಾರ್ಯಕ್ಕಾಗಿ ಕೃತಸಂಕಲ್ಪರಾಗಲು ಪ್ರೇರಣೆ ಕೊಡಲಿ ಎಂದು ನನ್ನ ಉತ್ಕಟ ಹಾರೈಕೆ.

೨೧-೬-೭೧ ತಿಮ್ಮಪ್ಪನಾಯಕ

ಲೇಖಕರ ನುಡಿ

"ನೀನು ಗಾಂಧೀ ಆಶ್ರಮದಲ್ಲಿದ್ದೆ; ಅಹಿಂಸೆಯ ಪಾಠ ಕಲಿತೆ; ಅವರು ಹೂಡಿದ ಅನೇಕ ಅಹಿಂಸಕ ಹೋರಾಟಗಳಲ್ಲಿ ಭಾಗವಹಿಸಿದೆ. ಆದರೆ ಚಲೇಜಾವ ಚಳವಳಿಯಲ್ಲಿ ವಿಧ್ವಂಸಕ ಕೃತಿಗಳಲ್ಲಿ ಹೇಗೆ ತೊಡಗಿದೆ ?" ಎಂದು ಅನೇಕರು ನನ್ನನ್ನು ಕೇಳುತ್ತಿದ್ದಾರೆ. ಆದುದರಿಂದ ಅಂದಿನ ಪರಿಸ್ಥಿತಿ, ಆಗಿನ ನನ್ನ ಮನೋಭಾವನೆಯ ಬಗೆಗೆ ಒಂದೆರಡು ಮಾತು ಹೇಳುವದು ಉಚಿತ.

೧೯೪೨ನೇ ಇಸ್ವಿ ಅಗಷ್ಟ ತಿಂಗಳಲ್ಲಿ ಮುಂಬೈಯಲ್ಲಿ ಅ. ಭಾ. ಕಾಂಗ್ರೆಸ ಕಮೀಟಿ ಅಧಿವೇಶನ ನಡೆದಾಗ ನಾನು ಹುಬ್ಬಳ್ಳಿಯಲ್ಲಿದ್ದೆ. 'ಕ್ವಿಟ್ ಇಂಡಿಯಾ' ಠರಾವು ಪಾಸಾದದ್ದು, ವರ್ಕಿಂಗ ಕಮೀಟಿ ಸದಸ್ಯರನ್ನು ಬಂಧಿಸಿದ್ದು, ನನಗೆ ಅಲ್ಲಿಯೇ ತಿಳಿಯಿತು. ನನ್ನ ಮೇಲೆ ವಾರಂಟ ಇದ್ದದ್ದು ನನಗೆ ಗೊತ್ತಾದ್ದರಿಂದ ನಾನು ಬೆಳಗಾವಿಗೆ ಭೂಗತನಾಗಿಯೇ ಬಂದೆ. ಕರ್ನಾಟಕದ ಮುಖಂಡರೆಲ್ಲ ಅ. ಭಾ. ಕಾಂ. ಕಮೀಟಿಗೆ ಹೋಗಿದ್ದರು. ಹೋದವರಲ್ಲಿ ಕೆಲವರು ಅಲ್ಲಿಯೇ ಬಂಧಿತರಾದರು. ಕೆಲವರು ಭೂಗತರಾದರು. ಉಳಿದ ಕೆಲವರು ತಿರುಗಿ ಬಂದ ಕೂಡಲೇ ಅವರವರ ಸ್ಥಳದಲ್ಲಿ ಬಂದಿಸಲ್ಪಟ್ಟರು. ನಾನು ಬೆಳಗಾಂವಿಗೆ ಬಂದಾಗ ಗು. ಗಂಗಾಧರರಾಯರಾಗಲಿ ಇತರ ಮುಖಂಡರಾಗಲಿ ಯಾರೂ ಹೊರಗಿರಲಿಲ್ಲ. ನನ್ನ ಸಹಕಾರ್ಯಕರ್ತರಾದ ಶ್ರೀ–ಪುಂಡಲೀಕಜಿಯವರು ಮಿರಜದಲ್ಲಿ, ಹಾಗೂ ಅಣ್ಣುಗುರೂಜಿ, ವಾಮನರಾವ ಬಿದರಿಯವರು ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಭೂಗತರಾಗಿ ಕೆಲಸ ಮಾಡುತ್ತಿದ್ದಾರೆಂದು ಗೊತ್ತಾಯಿತು. ಪೂಜ್ಯ ರಂಗರಾವ ದಿವಾಕರರು ಮತ್ತು ಶ್ರೀ ದ. ಪ. ಕರಮರಕರರು ಭೂಗತರಾಗಿ ಮುಂಬಯಿಯಲ್ಲಿ ಕೆಲಸ ನಡೆಸುತ್ತಿದ್ದಾರೆಂದು ತಿಳಿಯಿತು. ವಿಚಾರ ವಿನಿಮಯ ಮಾಡುವಂಥ ಜನರು ಯಾರೂ ಹೊರಗೆ ಇರಲೇ ಇಲ್ಲ. ಈ ಸಲದ ಚಳುವಳಿ ಪ್ರತಿ ಸಲದಂತಲ್ಲ. 'ಮಾಡು ಇಲ್ಲವೆ ಮಡಿ' ಎಂದು ಗಾಂಧೀಜಿ ಸಂದೇಶ ಕೊಟ್ಟು ಹೋಗಿದ್ದಾರೆ. ಪ್ರಾಣಹಾನಿ ಬಿಟ್ಟು ಎಲ್ಲ ವಿಧ್ವಂಸಕ ಕೃತ್ಯ ಈ ಸಲದ ಆಂದೋಲನದಲ್ಲಿ ಬರುತ್ತವೆ. ನಾನು ಮತ್ತು ಅಣ್ಣುಗುರೂಜಿ ನಮ್ಮ ಸಂಗಡಿಗರೊಂದಿಗೆ ಅದೇ ಕಾರ್ಯದಲ್ಲಿ ತೊಡಗಿದ್ದೇವೆ. ನೀವು ಸಹ ನಿಮ್ಮ ಸಂಗಡಿಗರೊಂದಿಗೆ ಕೆಲಸ ಪ್ರಾರಂಭಿಸಿರಿ. ಸಾಧ್ಯವಾದಾಗ ಭೆಟ್ಟಿಯಾಗೋಣ. ಎಂದು ಶ್ರೀ ವಾಮನರಾವ ದೇಸಾಯಿ, ಬಿದರಿ ಇವರು ಒಂದು ಚೀಟಿ ಬರೆದು ಕಳಿಸಿದ್ದರು. ಶ್ರೀ ಪುಂಡಲೀಕಜಿಯವರು ಸಹ ಪ್ರಾರಂಭಕ್ಕೆ ಅದೇ ರೀತಿ ಪತ್ರ ಬರೆದು ಕಳಿಸಿದ್ದರು. ಇಷ್ಟರಿಂದ ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲ. ವಿಧ್ವಂಸಕಕೃತ್ಯಗಳು ಗಾಂಧೀಜಿಯ ಅಹಿಂಸೆಯಲ್ಲಿ ಬರುತ್ತವೆಯೇ?

ಇಲ್ಲದಿದ್ದರೆ ಗಾಂಧೀಜಿಯವರ "ಮಾಡು: ಇಲ್ಲವೆ ಮಡಿ" ಈ ಸಂದೇಶದ ಅರ್ಥವೇನು? ಕೇವಲ ಪ್ರಭಾತಫೇರಿ ತೆಗೆದರೆ ಅದರಲ್ಲಿ ಸಾಯುವ ಪ್ರಶ್ನೆ ಬರುವದಿಲ್ಲ. ನಾಲ್ಕಾರು ತಿಂಗಳು ಶಿಕ್ಷೆಯಾಗಬಹುದು. ಕೆಲಸ ಮಾಡುತ್ತ ಮಾಡುತ್ತ ಮಡಿಯುವದು ಹೇಗೆ ? ಕೆಲಸ ಮಾಡುವದಾದರೆ ಯಾವ ಕೆಲಸ ಮಾಡುವದು ? ಎಂಬ ವಿಚಾರಗಳು ನನ್ನ ಮನಸ್ಸಿನಲ್ಲಿ ತಾಕಲಾಡತೊಡಗಿದವು.

ರೇಲ್ವೆ ಹಳಿ ಕಿತ್ತ ಸುದ್ದಿ. ಸ್ಟೇಶನ್ನು ಸುಟ್ಟ ಸುದ್ದಿ ಮುಂತಾದವುಗಳು ವೃತ್ತ ಪತ್ರಗಳಲ್ಲಿ ದಿನಾಲು ಬರಹತ್ತಿದವು. ಅವುಗಳನ್ನೋದಿದರೆ ಈ ಕೃತ್ಯಗಳನ್ನು ಗಾಂಧೀ ವಾದಿಗಳು ಮಾಡಿರಬಹುದೇ ? ಅಥವಾ ಅವರ ಹೆಸರಿನಲ್ಲಿ ಸೋಸಿಯಾಲಿಸ್ಟ. ಕಮ್ಯು ನಿಸ್ಟ. ಮುಂತಾದವರು ಯಾರಾದರೂ ಮಾಡುತ್ತಿರಬಹುದೇ ಎಂಬ ಸಂದೇಹವೂ ಬಾರದೆ ಇರಲಿಲ್ಲ. ಆದರೆ ಪೂಜ್ಯ ದಿವಾಕರರಂಥ ಅಪ್ಪಟ ಗಾಂಧೀವಾದಿಗಳು ಭೂಗತ ರಾಗಿ ಈ ಕೆಲಸ ಸಂಘಟಿಸುತ್ತಿದ್ದಾರೆಂದು ಕೇಳಿ. ಗಾಂಧೀಜಿಯವರ ಅಹಿಂಸೆಯಲ್ಲಿ ಪ್ರಾಣಹಾನಿ ಬಿಟ್ಟು ಇತರ ವಿಧ್ವಂಸಕ ಕೃತಿಗಳು ಬರುತ್ತಿರಬಹುದು. ಎಂಬ ವಿಚಾರ ಬಲವತ್ತರವಾಯಿತು. ಈ ವಿಚಾರಕ್ಕೆ ಪುಷ್ಟಿಯಾಗಿ ಮತ್ತೊಂದು ಪುರಾವೆ ದೊರೆಯಿತು. ಪೂ. ಕಿಶೋರಿಲಾಲ ಮಶ್ರೂವಾಲಾ. ಮತ್ತು ಪೂ. ಕಾಕಾಸಾಹೇಬ ಕಾಲೇಲಕರ ಅವರು ಬರೆದ ಹರಿಜನ ಪತ್ರಿಕೆಯೊಂದನ್ನು ಯಾರೋ ನನ್ನ ಕೈಯಲ್ಲಿ ತಂದುಕೊಟ್ಟರು. ಅದ ರಲ್ಲಿ ಪ್ರಾಣಹಾನಿ ಬಿಟ್ಟು, ರೇಲ್ವೆ ಹಳಿ ಕಿತ್ತುವದು. ಸೇತುವೆ ಕೆಡಹುವದು, ಪೋಲೀಸ ಸ್ಟೇಶನ್ ಮತ್ತು ಕಚೇರಿ ಸುಡುವದು ಮುಂತಾದ ಎಲ್ಲ ವಿಧ್ವಂಸಕ ಕೃತ್ಯಗಳು ಈ ಸಲದ ಆಂದೋಲನದಲ್ಲಿ ಬರುತ್ತವೆಯೆಂದು ಬರೆಯಲಾಗಿತ್ತು. ಆ ಹರಿಜನ ಪತ್ರಿಕೆ ಓದಿದನಂತರ ನನ್ನ ಸಂಶಯ ದೂರಾಯಿತು. ಪೂ. ಕಿಶೋರಿಲಾಲ ಮಶ್ರೂವಾಲಾ ಪೂ. ಕಾಕಾಸಾಹೇಬ ಕಾಲೇಲಕರರಂಥ ಅಹಿಂಸಾತತ್ವದ ಅಧ್ವರ್ಯುಗಳು ಈ ರೀತಿ ಪ್ರತಿ ಪಾದನ ಮಾಡಿದ ಮೇಲೆ ನನ್ನಂಥವರು ಆ ಬಗ್ಗೆ ವಿಚಾರ ಮಾಡುವ ಕಾರಣವೇ ಇಲ್ಲ ವೆಂದು ತಿಳಿದು ನಾನು ಸ್ಥಿರ ಮನಸ್ಸಿನಿಂದ ಕೆಲಸದಲ್ಲಿ ತೊಡಗಿದೆ.

ಪೂ. ಮಶ್ರೂವಾಲಾ ಮತ್ತು ಪೂ. ಕಾಕಾಸಾಹೇಬರಂಥವರು ಇದನ್ನು ಈ ರೀತಿ ಹೇಗೆ ಹೇಳಿರಬಹುದು ? ಗಾಂಧೀಜೀಯವರ ಅಹಿಂಸೆಯ ಅರ್ಥವೇನಿರಬಹುದು? ಎಂದು ನಾನೇ ನನ್ನಲ್ಲಿ ವಿಚಾರ ಮಾಡತೊಡಗಿದೆ. ಗಾಂಧೀಜೀಯವರ ಅಹಿಂಸೆ ವ್ಯಾಪಕವಾದದ್ದು. ಒಂದೆಡೆಗೆ "ಒಬ್ಬನನ್ನು ಶಾರೀರಿಕ ಹಿಂಸೆ ಮಾಡುವದು ಮಾತ್ರ ಹಿಂಸೆಯಲ್ಲ. ಆತನ ಬಗ್ಗೆ ಮನಸ್ಸಿನಲ್ಲಿ ದ್ವೇಷ ಬುದ್ಧಿ ತಾಳುವದೂ, ಕಟುವಚನ ಆಡುವದೂ ಸಹ ಹಿಂಸೆ." ಎಂದು ಹೇಳುತ್ತಾರೆ. ಇನ್ನೊಂದೆಡೆಗೆ "ಆಕಳ ಕರು ಕಷ್ಟ ದಿಂದ ಒದ್ದಾಡುತ್ತಿರುವಾಗ ಅದಕ್ಕೆ ಇಂಜಕ್ಶನ್ ಕೊಟ್ಟು ಅದರ ಪ್ರಾಣ ತೆಗೆಯುವದು. ಪೋಲಂಡ ದೇಶ ಶಸ್ತ್ರ ಹಿಡಿದು ಜರ್ಮನಿಯ ವಿರುದ್ಧ ಹೋರಾಡುವದು ಅಹಿಂಸೆ"

ಎಂದು ಹೇಳುತ್ತಾರೆ. ಇದರ ಅರ್ಥವೇನಿರಬಹುದು ? ಶುದ್ಧ ಸತ್ಯಾಗ್ರಹಿಯ ಅಹಿಂಸೆ ಸೂಕ್ಷ್ಮತಮವಾದದ್ದು. ವ್ಯಾಪಕವಾದ ಅಹಿಂಸಾತ್ಮಕ ಹೋರಾಟದಲ್ಲಿ ಸೂಕ್ಷ್ಮತಮ ಅಹಿಂಸೆ ಸಾಧಿಸುವದು ಸಾಧ್ಯವಿಲ್ಲ. ಪೋಲಂಡದವರ ಯುದ್ಧ ಅಹಿಂಸಾತ್ಮಕವೆಂದು ತಿಳಿಸುವದಕ್ಕೆ ಬೆಕ್ಕು ಇಲಿಯ ಉದಾಹರಣೆ ಕೊಟ್ಟಿದ್ದರು. ಬೆಕ್ಕು ಇಲಿಯನ್ನು ಹಿಡಿದು ತಿನ್ನುವಾಗ ಇಲಿ ತನ್ನ ಪ್ರಾಣ ಉಳಿಸಿಕೊಳ್ಳುವದಕ್ಕೆ ಬೆಕ್ಕಿಗೆ ಸ್ವಲ್ಪ ಚಿವುರಿದರೆ ಅದಕ್ಕೆ ಹಿಂಸೆ ಎನ್ನಲಾದೀತೆ ? ಇದೇ ಮಾತು ಈಗಿನ ನಮ್ಮ ಹೋರಾಟಕ್ಕೂ ಏಕೆ ಅನ್ವಯಿಸ ಬಾರದು ? ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಸೈನ್ಯದಿಂದ ಕೂಡಿದ ಬ್ರಿಟಿಶ ಸರಕಾರ ಒಂದು ಕಡೆ. ಯುದ್ಧದ ಗಂಧವೂ ಇಲ್ಲದ ನಿಃಶಸ್ತ್ರರಾದ ಅಜ್ಞ ಜನ ಇನ್ನೊಂದು ಕಡೆಗೆ. ಬ್ರಿಟಿಶ ಆಡಳಿತ ಯಂತ್ರ ಸ್ಥಗಿತ ಮಾಡುವದಕ್ಕಾಗಿ ಅಥವಾ ಜೀರ್ಣ ಮಾಡುವ ದಕ್ಕಾಗಿ ಒಂದೆರಡು ಸೇತುವೆ ಕೆಡವಿದರೆ, ರೇಲ್ವೆ ಸ್ಟೇಶನ್, ಕಚೇರಿ ಮುಂತಾದುವನ್ನು ಸುಟ್ಟರೆ ಇವಕ್ಕೆ ಹಿಂಸೆ ಎನ್ನಲಾದೀತೇ ? ಈ ರೀತಿ ನಾನು ಶುದ್ಧ ಸತ್ಯಾಗ್ರಹಿಯ ಅಹಿಂಸೆ ಹಾಗೂ ಸಾಮೂಹಿಕ ಅಹಿಂಸೆ ಇವುಗಳಲ್ಲಿ ಸೂಕ್ಷ್ಮ ಮತ್ತು ಸ್ಥೂಲ ಅಹಿಂಸೆ ಗಳ ಪ್ರಭೇದ ಕಲ್ಪಿಸಿಕೊಂಡು ಈ ಚಳುವಳಿ ಅಹಿಂಸಾತ್ಮಕ ಹೋರಾಟವೆಂದೇ ನಿಶ್ಚ ಯಿಸಿ "ಮಾಡು ಇಲ್ಲವೆ ಮಡಿ" ಎಂಬ ನಿರ್ಧಾರದಿಂದ ಈ ಚಳುವಳಿಯಲ್ಲಿ ಧುಮುಕಿದೆ.

ನಾವು ಭೂಗತರಾಗಿ ಕೆಲಸ ಮಾಡುತ್ತಿರುವಾಗ, ನಾವು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿದ್ದೇವೆಂದು ಶಾಸನ ತಿಳಿದಿತ್ತು. ಆದರೆ ನಾವು ಎಂದೂ ಶಸ್ತ್ರಾಸ್ತ್ರಗಳನ್ನು ಹಿಡಿಯಲಿಲ್ಲ. ಮತ್ತು ಉಪಯೋಗಿಸಲೇ ಇಲ್ಲ. ಇದರ ಅರ್ಥ ನಮಗೆ ಶಸ್ತ್ರಾಸ್ತ್ರಗಳು ದೊರಕುತ್ತಿದ್ದಿಲ್ಲ ಎಂದು ಯಾರೂ ಭಾವಿಸುವ ಕಾರಣವಿಲ್ಲ. ಬೇಡರ ಹತ್ತಿರ ಲಾಯಿ ಸೆನ್ಸ ಇಲ್ಲದ ಬಂದೂಕು ಇದ್ದೇ ಇದ್ದವು. ಅಲ್ಲದೆ ಪಿಸ್ತೂಲು, ರಾಯಫಲ್‌ಗಳನ್ನು ಒದಗಿಸಲು ಅನೇಕರು ಸಿದ್ಧರಿದ್ದರು. ಕೆಲವರು ತೆಗೆದುಕೊಂಡು ಕೂಡ ಬಂದಿದ್ದರು. ಅವನ್ನು ಹೇಗೆ ಉಪಯೋಗ ಮಾಡಬೇಕೆಂಬದನ್ನು ತೋರಿಸಿಕೊಟ್ಟರು. ಆದರೆ ನಾವು ವಿಚಾರಪೂರ್ವಕವಾಗಿಯೇ ಅವನ್ನು ನಮ್ಮ ಹತ್ತಿರ ಇಟ್ಟುಕೊಳ್ಳಲಿಲ್ಲ. ಅವು ನಮ್ಮ ಕೈಯಲ್ಲಿದ್ದರೆ ಮನಸ್ಸಿನ ಸ್ಥಿತಿ ಯಾವಹೊತ್ತಿಗೆ ಏನಾಗುತ್ತದೆಯೋ ಎಂದು ಹೇಳುವದು ಕಷ್ಟ. ನಮ್ಮಿಂದ ತಪ್ಪಿ ಕೂಡ ಪ್ರಾಣಹಾನಿಯಾಗಬಾರದೆಂಬ ನಮ್ಮ ಧ್ಯೇಯಕ್ಕೆ ಎಲ್ಲಿ ಚ್ಯುತಿ ಬರುತ್ತಿದೆಯೋ ಎಂದು ನಾವು ಬೇಕಂತಲೇ ಯಾವುದೇ ಪ್ರಕಾರದ ಶಸ್ತ್ರ ಹಿಡಿ ಯುವದನ್ನು ವರ್ಜಿಸಿದ್ದೆವು. ಹಾಗೆಯೇ ನಾವು ಯಾರ ವೈಯಕ್ತಿಕ ಸ್ವತ್ತಿಗೂ ಕೈಹಚ್ಚ ತಕ್ಕದ್ದಲ್ಲ ಎಂದು ಗೊತ್ತುಮಾಡಿದ್ದೆವು. ಇವೆರಡನ್ನೂ ನಾವು ಕೊನೆಯವರೆಗೆ ಪಾಲಿಸಿ ಕೊಂಡು ಬಂದೆವು.

೧೯೬೨ನೇ ಇಸ್ವಿಯ ಮಾತು. ನಾನು ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಯಾಗಿ ಬೆಂಗಳೂರಿನಲ್ಲಿದ್ದಾಗ ಶ್ರೀ ಪುಂಡಲೀಕಜಿ ಕಾತಗಡೆ ಮತ್ತು ಶ್ರೀ ಶ್ರೀನಿವಾಸರಾವ ಜೋಗ ಅವರು ನನ್ನಲ್ಲಿ ಬಂದಿದ್ದರು. ಸಹಜವಾಗಿ ಹಿಂದಿನಕಾಲದ ಆಂದೋಲನದ

ಸುದ್ದಿಗಳನ್ನು ಮಾತಾಡುತ್ತ ಕುಳಿತಾಗ ಶ್ರೀ ಪುಂಡಲೀಕಜಿ ಅವರು ತಾವು ಭೂಗತರಾಗಿದ್ದಾಗಿನ ಒಂದೆರಡು ನೆನಪುಗಳನ್ನು ಹೇಳಿದರು. ನಾನೂ ಒಂದೆರಡು ಹೇಳಿದೆ. ಅವುಗಳನ್ನು ಕೇಳಿ ಶ್ರೀ ಪುಂಡಲೀಕಜೀಯವರಿಗೆ ಆಶ್ಚರ್ಯವಾಯಿತು. ಅವರು "ನಿಮ್ಮ ಅನುಭವಗಳು ಬಹಳೇ ಹೃದಯಸ್ಪರ್ಶಿಯಾಗಿವೆ. ನಮ್ಮ ನಿಮ್ಮ ಸಂಬಂಧ ಇಷ್ಟು ಘನಿಷ್ಟವಾಗಿದ್ದರೂ. ಇಷ್ಟೊಂದು ದಿವಸಗಳಾದರೂ ನೀವು ಇವುಗಳನ್ನೊಂದೂ ನನಗೆ ಹೇಳಲಿಲ್ಲವಲ್ಲ!" ಎಂದರು. "ನಮ್ಮ ಪೌರುಷ ನಾವೇ ಕೊಚ್ಚಿಕೊಳ್ಳುವದರಲ್ಲೇನಿದೆ" ಎಂದೆ. ಆಗ ಶ್ರೀ ಶ್ರೀನಿವಾಸರಾಯರು "ನೀವು ಇದೆಲ್ಲವನ್ನೂ ಬರೆದು ಪ್ರಕಟಿಸಬೇಕು. ಅದು ನಿಮ್ಮ ದೊಡ್ಡಸ್ತಿಕೆಗಾಗಿ ಅಲ್ಲ. ಆದರೆ ಅದೊಂದು ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಮೌಲ್ಯ ಇತಿಹಾಸ. ನೀವು ಇದನ್ನು ಇಷ್ಟೊಂದು ಲಘುವಾಗಿ ಕಾಣಬಾರದು" ಎಂದರು. ಪ್ರೊ. ದಿವಾಕರರೂ ಸಹ ಕಾರ್ಯಕರ್ತರು ಭೂಗತರಾಗಿದ್ದಾಗಿನ ತಮ್ಮ ಅನುಭವ ಬರೆದು ಪ್ರಕಟಿಸಬೇಕೆಂದು ಅಂದಿದ್ದರು. ಶ್ರೀ ಬೆಟಗೇರಿ ಕೃಷ್ಣಶರ್ಮರು ಅದನ್ನು ಪರಿಶೀಲಿಸಿಯೂ ಕೊಟ್ಟಿದ್ದರು. ಇವುಗಳನ್ನು ಬರೆದಿಡಬೇಕು. ಪ್ರಕಟಿಸುವದನ್ನು ಹಿಂದಿನಿಂದ ವಿಚಾರ ಮಾಡಿದರಾಯಿತು ಎಂದು ನನಗೂ ಅನಿಸಿತು. ಆದುದರಿಂದ ೧೯೩೦. ೧೯೩೨ನೇ ಇಸ್ವಿ ಆಂದೋಲನಗಳ ಕಾಲಕ್ಕೆ ನಾನು ಭೂಗತನಾಗಿದ್ದಾಗ ಸಂಭವಿಸಿದ ಮಹತ್ವದ ಹಾಗೂ ವಿನೋದಪರ ಘಟನೆಗಳನ್ನೂ ೧೯೪೨ನೇ ಇಸ್ವಿಯಲ್ಲಿ ನಮ್ಮ ಹಡೆಯುವರು ಮಾಡಿದ ಸಾಧ್ಯಂತ ಕಾರ್ಯ. ಹಾಗೂ ಆ ಕಾಲದ ಪರಿಸ್ಥಿತಿಯನ್ನೂ ನನಗೆ ಜ್ಞಾಪಕವಿದ್ದಷ್ಟು ಬರೆದಿಟ್ಟೆನು. ಎಷ್ಟೋ ದಿವಸ ಅವು ನನ್ನಲ್ಲಿಯೇ ಬಿದ್ದಿದ್ದವು. ನಾನು ಘಟಪ್ರಭಾ ಆರೋಗ್ಯಧಾಮಕ್ಕೆ ಹೋದಾಗ ನನ್ನ ಜೊತೆಗೆ ಶ್ರೀ ಗಂಗಪ್ಪ ಯಮಕನಮರ್ಡಿ ಇವರು ಇದ್ದರು. ಡಾ. ಹರ್ಡಿಕರರ ಜೊತೆ ಮಾತಾಡುವಾಗ ಇಂಥವೆ ಒಂದೆರಡು ಅನುಭವ ಹೇಳಿದೆವು. ಅವರೂ ಸಹ ಇವುಗಳೆಲ್ಲವನ್ನೂ ನೀವು ಬರೆದು ಪ್ರಸಿದ್ಧಿಸಬೇಕು ಎಂದು ಅಂದಿದ್ದರು. ಕೆಲವು ದಿವಸಗಳ ನಂತರ "ಕರ್ಮವೀರ" ಪತ್ರಿಕೆಯವರು "ನಿಮ್ಮ ನೆನಹುಗಳನ್ನು ಕೊಟ್ಟು ಕಳಿಸಿರಿ ನಾವು ಅವುಗಳನ್ನು ಲೇಖಾಂಕ ಮಾಲೆಯಾಗಿ ಕರ್ಮವೀರದಲ್ಲಿ ಪ್ರಕಟಿಸುವೆವು" ಎಂದು ಬರೆದರು. ಅವರಲ್ಲಿ ಎಳೆಂಟು ಲೇಖಗಳನ್ನು ಆಯ್ದುಕೊಂಡು ಅವರು ಪ್ರಸಿದ್ಧಿಸಿದರು. ಆದರೆ ಅವುಗಳಲ್ಲಿ ೧೯೪೨ನೇ ಇಸ್ವಿ ಆಂದೋಲನಕ್ಕೆ ಸಂಬಂಧಪಟ್ಟ ವಿಷಯಗಳಾವವೂ ಇರಲಿಲ್ಲ.

ಇದಾದ ಕೆಲವು ದಿವಸಗಳ ನಂತರ ಶ್ರೀ ಪುಂಡಲೀಕಜೀಯವರು ನನ್ನನ್ನು "ನೀವು ಬರೆದಿಟ್ಟ ನಿಮ್ಮ ನೆನಹುಗಳನ್ನು ಕೊಡಿರಿ. ಅವುಗಳನ್ನು ನಾನು ಬರೆಯುತ್ತಿರುವ 'ಛೋಡೋ ಭಾರತ ಪರ್ವ' ಮರಾಠಿ ಪುಸ್ತಕದಲ್ಲಿ ಪ್ರಕಟಿಸುತ್ತೇನೆ" ಅಂದರು. ಆಗಲೂ ಸಹ ಇವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಬೇಕೋ, ಬಾರದೋ ಎಂದು ನನ್ನ ಮನಸ್ಸು ಹೊಯ್ದಾಡುತ್ತಿತ್ತು.

ಈ ಕಾಲಕ್ಕೆ ಒಂದು ವಿಚಾರ ಹೊಳೆಯಿತು. ಆಂದೋಲನ ಕಾಲದ ಮುಖಂಡರ ಮತ್ತು ಮೇಲಂತಸ್ತಿನ ಕಾರ್ಯಕರ್ತರ ಹೆಸರು ಮತ್ತು ಅವರು ಮಾಡಿದ

ಕಾರ್ಯಗಳು ಪ್ರಸಿದ್ಧಿಗೆ ಬರುತ್ತವೆ. ಅವರಿಗೆ ಮಾನಸನ್ಮಾನಗಳಾಗುತ್ತವೆ. ಸ್ವರಾಜ್ಯ ದೊರೆತ ನಂತರ ಸಹ ಅವರಿಗೇ ಹೆಚ್ಚಿನ ಅಧಿಕಾರ ಮತ್ತು ಸ್ಥಾನಮಾನಗಳು ಒಂದಿಲ್ಲೊಂದು ರೀತಿಯಿಂದ ಆರ್ಥಿಕ ಸಹಾಯ ಸಹ ಅವರಿಗೇ ಮೀಸಲು. ಆದರೆ ಭಾರತ ಮಾತೆಯ ಪಾರತಂತ್ರ್ಯ ಶೃಂಖಲೆಯನ್ನು ಹರಿದೊಗೆಯುವದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ತಮ್ಮ ಪ್ರಾಣವನ್ನು ಪಣಕ್ಕೆ ಹಚ್ಚಿ ಹೋರಾಡಿದ ಅಜ್ಞ, ಅಶಿಕ್ಷಿತ, ವಾಚಾಹೀನ, ನಿತ್ಯದ ದುಡಿಮೆಯಿಂದಲೇ ಉಪಜೀವಿಸುವ ಯಾವ ಸ್ಥಾನಮಾನದ ಆಶೆಯಿಲ್ಲದೆ ನಿರಪೇಕ್ಷ ಬುದ್ಧಿಯಿಂದ ಹೋರಾಡಿದ ವೀರ ಜನರ ಹೆಸರುಗಳು ಎಲ್ಲಿಯೂ ಕೇಳಬರುವದಿಲ್ಲ. ಅವರು ಮಾಡಿದ ಕಾರ್ಯ, ಅವು ಎಷ್ಟೇ ಮಹತ್ವದ್ದಾಗಿರಲಿ. ಅತ್ತಕಡೆಗೆ ಯಾರ ಲಕ್ಷ್ಯವೂ ಹೋಗುವದಿಲ್ಲ. ಆದ್ದರಿಂದ ಆಂದೋಲನ ಕಾಲದಲ್ಲಿ ನನ್ನ ಜೊತೆಗೆ ಹೆಗಲಿಗೆ ಹೆಗಲು ಹಚ್ಚಿ ಜೀವದ ಹಂಗುದೊರೆದು ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಳ್ಳಿಯ ಜನರ ತ್ಯಾಗ, ಶೌರ್ಯ, ಧೈರ್ಯ, ಸಾಹಸ ಅವರು ಅನುಭವಿಸಿದ ಕಷ್ಟ–ನಷ್ಟ ಮತ್ತು ಆಂದೋಲನ ಕಾಲಕ್ಕೆ ಅವರು ಮಾಡಿದ ಅದ್ಭುತ ಕಾರ್ಯ ಇವುಗಳ ಬಗೆಗೆ ನನಗೆ ಗೊತ್ತಿದ್ದಷ್ಟು ಬರೆದು ಪ್ರಸಿದ್ಧ ಮಾಡುವದು ನನ್ನ ಕರ್ತವ್ಯವೆನಿಸಿತು. ಆಗ ನನ್ನ ನೆನಹುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ನನ್ನ ಮನಸ್ಸು ಸಿದ್ಧವಾಯಿತು.

ಶ್ರೀ ಪುಂಡಲೀಕಜೀಯವರಿಗೆ ನಾನು ಬರೆದಿಟ್ಟ ನನ್ನ ನೆನಹುಗಳನ್ನು ಕೊಟ್ಟೆನು. ಅವರು ಅವನ್ನು ತಮ್ಮ ಮರಾಠಿ "ಭೋಡೋ ಭಾರತ" ಪುಸ್ತಕದಲ್ಲಿ ಪ್ರಸಿದ್ಧಿಸಿದರು.

ಶ್ರೀ ಪುಂಡಲೀಕಜೀಯವರು ೧೯೪೨ ನೇ ಇಸ್ವಿ ಆಗಷ್ಟ ತಿಂಗಳಲ್ಲಿ ಮುಂಬೈಯಲ್ಲಿ ನಡೆದ ಅ. ಭಾ. ಕಾಂ. ಕಮೀಟಿ ಸಭೆಗೆ ಹೋಗಿದ್ದರು. ಆಗಷ್ಟ ೯ ನೇ ತಾರೀಖಿನ ಬೆಳಿಗ್ಗೆ ಮಹಾತ್ಮಾ ಗಾಂಧೀಯವರನ್ನೂ ಮತ್ತು ಇತರ ಮುಖಂಡರನ್ನೂ ಬಂಧಿಸಿದಾಗ ಅವರು ಮುಂಬಯಿಯಲ್ಲಿಯೇ ಇದ್ದರು. ಆಗ ಅವರು ಅಲ್ಲಿ ನಡೆದ ಘಟನೆಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಅದನ್ನು ಪ್ರಾರಂಭಕ್ಕೆ ಕೊಡಲಾಗಿದೆ. ಅದಾದನಂತರ ಅ. ಭಾ. ಕಾಂ. ಕಮೀಟಿಯಲ್ಲಿ ಪಾಸಾದ ಗೊತ್ತುವಳಿ, ಅದರ ಮೇಲೆ ಗಾಂಧೀಜಿ ಮತ್ತು ಇತರ ಮುಖಂಡರು ಮಾಡಿದ ಭಾಷಣ. ದೇಶದ ಜನರ ಮೇಲೆ ಈ ಗೊತ್ತುವಳಿ ಬೀರಿದ ಪ್ರಭಾವ, ದೇಶ-ವಿದೇಶಗಳಲ್ಲಿ ಆದ ಪ್ರತಿಕ್ರಿಯೆ ಇವೇ ಮೊದಲಾದವುಗಳನ್ನು ಕೊಡಲಾಗಿದೆ. ಶ್ರೀ ಪುಂಡಲೀಕಜೀಯವರು ಭೂಗತರಾಗಿದ್ದಾಗ ತಮ್ಮ ಅನುಭವ ಬರೆದಿದ್ದಾರೆ. ಅದನ್ನೂ ಸಹ ಇಲ್ಲಿ ಒಂದು ಪ್ರಕರಣದಲ್ಲಿ ನೋಡಬಹುದು.

ಈ ಆಂದೋಲನದ ಕಾಲಕ್ಕೆ ಗಾಂಧೀಜಿಯವರ ಮನಸ್ಸು ಯಾವ ಪ್ರಕಾರ ಕೆಲಸ ಮಾಡುತ್ತಿತ್ತೆಂಬುದರ ಬಗೆಗೆ ಅನೇಕ ಊಹಾಪೋಹಗಳು ಇನ್ನೂ ನಡೆದಿವೆ. ಈ ವಿಷಯವನ್ನು ಪೂಜ್ಯ ವಿನೋಬಾಜಿಯವರು ಮೊನ್ನೆ ಮೊನ್ನೆ ಹೊರಗೆಡವಿದ್ದಾರೆ.

ಅವನ್ನು "ಗಾಂಧೀಜಿಯ ಮನೋಮಂಥನ" ಎಂಬ ಶೀರ್ಷಿಕೆಯಲ್ಲಿ ಕೊಡಲಾಗಿದೆ. ಇವೆಲ್ಲವನ್ನೂ ಶ್ರೀ ಪುಂಡಲೀಕಜೀಯವರ ಮರಾಠಿ ಪುಸ್ತಕದಿಂದಲೇ ಉದ್ಧೃತ ಮಾಡಲಾಗಿದೆ.

೧೯೪೨ನೇ ಇಸ್ವಿ ಆಂದೋಲನದ ಕಾಲಕ್ಕೆ ನಡೆದ ವಿಧ್ವಂಸಕ ಕೃತ್ಯಗಳು ಗಾಂಧೀ ತತ್ವಜ್ಞಾನದಲ್ಲಿ ಸೇರುತ್ತವೆಯೋ ಇಲ್ಲವೋ ಎಂಬ ಬಗ್ಗೆ ಇನ್ನೂ ವಾದ-ವಿವಾದ ನಡೆದಿದೆ. ಇಂಥ ಸಮಯದಲ್ಲಿ ಈ ಪುಸ್ತಕಕ್ಕೆ ಮುನ್ನುಡಿ ಯಾರಿಂದ ಬರೆಯಿಸ ಬೇಕೆಂಬ ವಿಚಾರ ಬಂದಿತು. ಭೂಗತರಾಗಿದ್ದು ಕೆಲಸ ಮಾಡಿದವರು ಬರೆದ ಪುಸ್ತಕಕ್ಕೆ ಭೂಗತರಿಂದಲೇ ಮುನ್ನುಡಿ ಬರೆಯಿಸುವದು ಅಷ್ಟು ಸಮಂಜಸವೆನಿಸಲಿಲ್ಲ. ಆದುದರಿಂದ ಯಾರು ಅಪ್ಪಟ ಗಾಂಧೀವಾದಿಗಳೋ ಮತ್ತು ಯಾರು ಗಾಂಧೀ ತತ್ವಗಳ ಅನುಷ್ಠಾನದಲ್ಲಿ ತಮ್ಮ ಇಡೀ ಜೀವನವನ್ನು ಸವಿಸಿದ್ದಾರೆಯೋ ಅಂಥವರಿಂದಲೇ ಇದಕ್ಕೆ ಮುನ್ನುಡಿ ಬರೆಯಿಸಬೇಕೆಂದು ನಿಶ್ಚಯಿಸಿದೆನು. ಗಾಂಧೀ ತತ್ವಗಳ ಅಧ್ಯಯನಮಾಡಿ ಅವನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದಂಥ ಕೆಲವೇ ಜನರಲ್ಲಿ ಶ್ರೀ ತಿಮ್ಮಪ್ಪ ನಾಯಕರೊಬ್ಬರಾಗಿದ್ದಾರೆ. ಆದುದರಿಂದ ಅವರಿಗೆ ಬರೆದು ಕೊಡಲು ವಿನಂತಿಸಿ ಕೊಂಡೆವು. ಅವರು ಅದಕ್ಕೆ ಒಪ್ಪಿ ವಿಶ್ಲೇಷಣಾತ್ಮಕ ಮುನ್ನುಡಿ ಬರೆದು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ತುಂಬ ಉಪಕೃತನಾಗಿದ್ದೇನೆ.

ಇದೇ ಕಾಲಕ್ಕೆ ಶ್ರೀ ಪುಂಡಲೀಕಜೀಯವರು ತಮ್ಮ ಮರಾಠಿ "ಛೋಡೋ ಭಾರತ"ದ ಪ್ರತಿಯೊಂದನ್ನು ಪೂ. ಕಾಕಾಸಾಹೇಬ ಕಾಲೇಲಕರ ಅವರಿಗೆ ಓದಲು ಕೊಟ್ಟರು. ಮತ್ತು ೧೯೪೨ನೇ ಇಸ್ವಿ ಆಂದೋಲನದ ಕಾಲಕ್ಕೆ ನಾನು ಮಾಡಿದ ಕೆಲವೊಂದು ಕೃತಿಗಳನ್ನು ಕಾಕಾಸಾಹೇಬರಿಗೆ ಹೇಳಿದರು. ಅದಕ್ಕೆ ಅವರು ರಾಮಚಂದ್ರ ವಡವೀ ನಮ್ಮ ಗುಜರಾಥ ವಿದ್ಯಾಪೀಠದ ವಿದ್ಯಾರ್ಥಿ. ಆದುದರಿಂದ ನಾನು ಈ ಪುಸ್ತಕ ಪೂರ್ತಿ ಓದುತ್ತೇನೆ ಎಂದು ಅಂದರಂತೆ. ಶ್ರೀ ಪುಂಡಲೀಕಜೀ 'ಓದಿದ ಮೇಲೆ ನೀವು ಈ ಪುಸ್ತಕದ ಬಗ್ಗೆ ನಾಲ್ಕು ಶಬ್ದ ಬರೆದು ಕಳಿಸಿರಿ. ಅದನ್ನು ಕನ್ನಡ ಪುಸ್ತಕದಲ್ಲಿ ಹಾಕುತ್ತೇವೆ' ಅಂದರಂತೆ. ಶ್ರೀ ಪುಂಡಲೀಕಜೀ ಬೆಳಗಾವಿಗೆ ಬಂದಮೇಲೆ ಈ ವಿಷಯ ನನಗೆ ಹೇಳಿದರು. ಪೂ. ಕಾಕಾಸಾಹೇಬರಿಂದ ಈ ಪುಸ್ತಕದ ಬಗ್ಗೆ ನಾಲ್ಕು ಶಬ್ದ ಬರೆದು ಬಂದರೆ ಒಳ್ಳೆಯದೆಂದು ನನಗೂ ಅನಿಸಿತು. ಆದರೆ ಪೂ. ಕಾಕಾಸಾಹೇಬರಿಂದ ಬಹಳ ದಿವಸ ಏನೂ ಬರೆದು ಬರಲಿಲ್ಲ. ಆಗ ನಾನು ಶ್ರೀ ಪುಂಡಲೀಕಜಿಯವರಿಗೆ 'ಪೂಜ್ಯ ಕಾಕಾಸಾಹೇಬರಿಗೆ ಮತ್ತೊಂದು ಪತ್ರ ಬರೆದು ಜ್ಞಾಪಕ ಮಾಡಿರಿ' ಎಂದು ಹೇಳಿದೆ. ಮೊನ್ನೆ ಮೊನ್ನೆ ಅವರಿಂದ ಸುದೀರ್ಘ ಪ್ರಸ್ತಾವನೆಯೇ ಬಂದುಬಿಟ್ಟಿತು. ಆದುದರಿಂದ ಪೂಜ್ಯ ಕಾಕಾಸಾಹೇಬರದು ಪ್ರಸ್ತಾವನೆಯೆಂದೂ, ಶ್ರೀ ತಿಮ್ಮಪ್ಪ ನಾಯಕರದು ಉಪೋದ್ಘಾತವೆಂದೂ ಈ ಪುಸ್ತಕದಲ್ಲಿ ಹಾಕಲಾಗಿದೆ.

ಇವೆರಡೂ ಲೇಖನಗಳು ಅತ್ಯಂತ ಮಹತ್ವಪೂರ್ಣವಿವೆ: ವಿಚಾರಾತ್ಮಕ, ವಿವೇಚನಾತ್ಮಕ, ವಿಶ್ಲೇಷಣಾತ್ಮಕವಾಗಿವೆ. ಗಾಂಧೀ ತತ್ವಜ್ಞಾನದ ಜಿಜ್ಞಾಸುಗಳಿಗೆ ಮತ್ತು ಅಭ್ಯಾಸಿಗಳಿಗೆ ಅತ್ಯಂತ ಉಪಯುಕ್ತವಾಗಿವೆ.

ನಾನು ಪೂಜ್ಯ ಕಾಕಾಸಾಹೇಬರ ಕಡೆಗೆ ಹೋದಾಗ ತೀರ ಚಿಕ್ಕವನಿದ್ದೆ. ನನಗೆ ಬೇರೆ ಕಡೆಯಿಂದ ಯಾವ ಸಹಾಯವೂ ಇರಲಿಲ್ಲ. ಆಗ ಅವರು ನನ್ನನ್ನು ಪುತ್ರ ವಾತ್ಸಲ್ಯದಿಂದ ನೋಡಿಕೊಂಡು ನನಗೆ ವಿದ್ಯಾಭ್ಯಾಸಕ್ಕೂ ಹಾಗೂ ಖಾದಿ ಕಾರ್ಯ ಕಲಿಯಲಿಕ್ಕೂ ಎಲ್ಲ ಸಹಾಯ, ಸೌಕರ್ಯ ಒದಗಿಸಿಕೊಟ್ಟರು. ಇಂದಿಗೂ ಸಹ ಅದೇ ಪ್ರೇಮದಿಂದ ಅವರು ಅವಿರತವಾಗಿ ಎಷ್ಟೋಂದು ಕಾರ್ಯಗಳಲ್ಲಿ ತೊಡಗಿದ್ದರೂ ಅದ ರಲ್ಲಿಯೇ ಬಿಡುವು ಮಾಡಿಕೊಂಡು ವಿಚಾರಾತ್ಮಕವಾದ ಪ್ರಸ್ತಾವನೆ ಬರೆದುಕೊಟ್ಟು ನನ್ನನ್ನು ಚಿರಋಣಿಯನ್ನಾಗಿ ಮಾಡಿದ್ದಾರೆ. ಅವರಿಗೆ ನಾನು ಎಂದೆಂದಿಗೂ ಚಿರ ಋಣಿಯಾಗಿದ್ದೇನೆ.

ನನ್ನ ನೆನಹುಗಳನ್ನು ಬರೆದಿಟ್ಟು ಬಹಳ ದಿವಸಗಳಾಗಿದ್ದವು. ಮುದ್ರಣಕ್ಕೆ ಕೊಡುವ ಮೊದಲು ೧೯೪೨ನೇ ಇಸ್ವಿ ಆಂದೋಲನದಲ್ಲಿ ಭಾಗವಹಿಸಿ ನನ್ನ ಜೊತೆಗೆ ಕೆಲಸ ಮಾಡಿದ ಪ್ರಮುಖ ಕಾರ್ಯಕರ್ತರಿಗೆ ಅವನ್ನು ಓದಿ ತೋರಿಸಿ, ಅವು ಸರಿ ಇದ್ದ ಬಗ್ಗೆ ಖಚಿತಪಡಿಸಿಕೊಂಡೆನು. ಅವರು ಸೂಚಿಸಿದ ಒಂದೆರಡು ಘಟನೆಗಳನ್ನೂ ಅದರಲ್ಲಿ ಸೇರಿಸಿದ ನಂತರವೇ ಅದನ್ನು ಮುದ್ರಣಕ್ಕೆ ಕೊಟ್ಟೆನು. ಈ ನನ್ನ ಕರಡು ಪ್ರತಿ ಓದಿ ನೋಡಿ ತಿದ್ದುಪಡಿ ಮಾಡಿಕೊಟ್ಟ ಶ್ರೀ ಗೋವಿಂದರಾವ ಚುಳಕಿಯವರಿಗೆ ನಾನು ಆಭಾರಿ.

ಶ್ರೀ ಶಂ. ಬಾ. ಜೋಶಿಯವರು ಈ ಮುದ್ರಣದ ಕಾಲಕ್ಕೆ ಕೆಲವೊಂದು ಅತ್ಯಂತ ಉಪಯುಕ್ತ ಸಲಹೆಗಳನ್ನು ಮಾಡಿದ್ದಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞ.

ಹುದಲಿ ಖಾದೀ ಗ್ರಾಮೋದ್ಯೋಗ ಸಹಕಾರಿ ಉತ್ಪಾದಕ ಸಂಘದ ನನ್ನ ಮಿತ್ರರು ಈ ಪುಸ್ತಕದ ಪ್ರಕಾಶನ ಮಾಡುವ ಹೊಣೆ ಹೊರಲು ಮುಂದೆ ಬಂದಿ ದ್ದಾರೆ. ಈ ಪುಸ್ತಕದಲ್ಲಿ ಬರೆದ ಘಟನೆಗಳು ಅವರ ಭಾಗದವು. ಅವರ ಊರಿನವು. ಅವರ ಜನರವು. ಆದುದರಿಂದ ಇದರ ಬಗೆಗೆ ನನಗಿದ್ದಷ್ಟೇ ಅಭಿಮಾನ, ಆಸಕ್ತಿ ಅವ ರಿಗೂ ಇದೆ. ಆದರೂ ಅವರು ಮುಂದೆ ಬಂದು ಈ ಸಾಹಸ ಮಾಡಿದ್ದಕ್ಕಾಗಿ ಅವರು ಅಭಿನಂದನೆಗೆ ಪಾತ್ರರು.

ಒಂದು ಮಹತ್ವದ ಮಾತು

ಇದು ಗು. ದೇಶಪಾಂಡೆ ಗಂಗಾಧರರಾಯರ ಜನ್ಮ ಶತಾಬ್ದಿ ವರುಷ. ಅವರ ಸಂಸ್ಮರಣೆಗಾಗಿ ಈ ಪುಸ್ತಕವು ಬಿಡುಗಡೆಯಾಗುವುದು ಸಂತೋಷದ ಸಂಗತಿ.

— **ರಾಮಚಂದ್ರ ವಡವಿ**

ಪ್ರಕಾಶಕರ ಮಾತು

ನಮ್ಮ ಸಂಸ್ಥೆಯವರು ಕೈಕೊಂಡ ಈ ಸಾಹಿತ್ಯ ಪ್ರಕಾಶನದ ಕಾರ್ಯ ತೀರ ಹೊಚ್ಚ ಹೊಸತು. ಈ ಉಪಕ್ರಮ ಕೈಕೊಳ್ಳಲು ಒಂದು ಕಾರಣವೂ ಇದೆ. ಇದು ಕರ್ನಾಟಕ ಸಿಂಹ ಗಂಗಾಧರರಾವ ದೇಶಪಾಂಡೆಯವರ ಜನ್ಮ ಶತಾಬ್ದಿ ವರ್ಷ. ಪೂಜ್ಯ ಗಂಗಾಧರರಾಯರು ಕರ್ನಾಟಕದಲ್ಲಿ ಖಾದೀ ಕಾರ್ಯದ ಮೂಲ ಸಂಸ್ಥಾಪಕರು. ಕರ್ನಾಟಕದಲ್ಲಿಯ ಖಾದೀ ಕಾರ್ಯಕ್ಕೆ ಅವರೇ ಮೊದಲನೇ ಏಜಂಟರಾಗಿದ್ದರು. ಕುಮರಿ ಆಶ್ರಮ ಮತ್ತು ಖಾದೀ ಕೇಂದ್ರ (ಹುದಲಿ) ವು ಸಹ ಅವರಿಂದಲೇ ಸ್ಥಾಪಿಸಲ್ಪಟ್ಟಿತು. ಅವರ ಪರಂಪರೆಯಾಗಿಯೇ ನಮ್ಮ ಈ ಸಂಸ್ಥೆ ನಡೆದು ಬಂದಿದೆ. ಪೂಜ್ಯ ಗಂಗಾಧರರಾಯರು ಖಾದೀ ಕಾರ್ಯದ ಸಂಸ್ಥಾಪಕರಿದ್ದಂತೆ ಅಖಂಡ ಕರ್ನಾಟಕದ ರಾಜಕೀಯ ಧುರೀಣರೂ ಆಗಿದ್ದರು. ಆದುದರಿಂದ ಅವರ ಪುಣ್ಯ ಸ್ಮರಣೆ ಯಾವ ರೀತಿ ಮಾಡಬೇಕೆಂದು ಯೋಚಿಸುತ್ತಿದ್ದೆವು.

ಶ್ರೀ ರಾಮಚಂದ್ರ ವಡವಿಯವರು ಬರೆದ “ಛೋಡೋ ಭಾರತ ಪರ್ವ” ಕುಂದರನಾಡಿನಲ್ಲಿ ಒಂದು ಅಧ್ಯಾಯ–ಈ ಪುಸ್ತಕದಲ್ಲಿ ೧೯೪೨ನೇ ಇಸ್ವಿ ಚಲೇಜಾವ ಚಳವಳಿಯ ಕಾಲಕ್ಕೆ ನಮ್ಮ ಭಾಗದ, ನಮ್ಮೂರ ಜನರು ಮಾಡಿದ ಕಾರ್ಯದ ವರ್ಣನೆಯೇ ಇದೆ. ಆದುದರಿಂದ ಪೂಜ್ಯ ಗಂಗಾಧರರಾಯರ ಜನ್ಮ ಶತಾಬ್ದಿಯ ಅಂಗವಾಗಿ ಈ ಪುಸ್ತಕದ ಪ್ರಕಾಶನ ಕಾರ್ಯ ಕೈಕೊಂಡು ಅದನ್ನು ಬಿಡುಗಡೆ ಮಾಡುವದು ಅವರಿಗೆ ಯಥೋಚಿತವಾದ ಪುಣ್ಯ ಸ್ಮರಣೆ ಎಂದು ನಾವು ಈ ಉಪಕ್ರಮ ಕೈಕೊಂಡೆವು.

ಶ್ರೀ ಪುಂಡಲೀಕಜೀ ಮತ್ತು ಶ್ರೀ ರಾಮಚಂದ್ರ ವಡವಿಯವರು ದಿ. ಗುರುವರ್ಯ ಗಂಗಾಧರರಾಯರ ನೇತೃತ್ವದಲ್ಲಿಯೇ ತಯಾರಾದವರು. ಇವರು ೧೯೪೨ನೇ ಇಸ್ವಿ ಚಲೇಜಾವ್ ಚಳುವಳಿಯ ಗುಂಪಿನ ಮುಖಂಡರಿದ್ದರು. ಅವರ ಕೈಯೊಳಗೆ ಕೆಲಸ ಮಾಡುವ ಕಾರ್ಯಕರ್ತರೆಲ್ಲರೂ ಅವರ ಕೈಯಲ್ಲಿಯೇ ತಯಾರಾದವರಿದ್ದರು. ಈ ತ್ರಿವೇಣಿ ಸಂಗಮದಿಂದಲೇ ಈ ಭಾಗದಲ್ಲಿ ಇಷ್ಟೊಂದು ಕಾರ್ಯ ನಡೆಯಿತು. ಈ “ಛೋಡೋ ಭಾರತ ಪರ್ವ” ಪುಸ್ತಕ ಪ್ರಕಾಶನವನ್ನು ನಮ್ಮ ಸಂಘದಿಂದ ಮಾಡುವದು ಇದೊಂದು ಹೆಚ್ಚಿನ ಕಾರಣವಾಯಿತು. ಅನೇಕ ವಿಧಾಯಕ ಕಾರ್ಯಕ್ರಮಗಳ

ಮುಖಾಂತರ ಜನಸಂಪರ್ಕ ಬೆಳೆಸಿ ಅವರೊಂದಿಗೆ ತಾದಾತ್ಮ್ಯ ಹೊಂದಿ ಜನರಲ್ಲಿ ಅದ ರಲ್ಲಿಯೂ ವಿಶೇಷವಾಗಿ ತರುಣರಲ್ಲಿ ಸಾಮಾಜಿಕ, ನೈತಿಕ ಹಾಗೂ ರಾಷ್ಟ್ರೀಯ ಪ್ರವೃತ್ತಿ ಗಳನ್ನು ಅವರು ಬೆಳೆಸಿದರು. ಅದಕ್ಕಾಗಿ ಅವರಿಬ್ಬರಿಗೂ ನಾವು ಮತ್ತು ನಮ್ಮ ಊರ ಜನರು ಚಿರಋಣಿಯಾಗಿದ್ದೇವೆ.

ಈ ಪುಸ್ತಕಕ್ಕೆ ಬೇಕಾಗುವ ಫೋಟೋ ಮತ್ತು ಬ್ಲಾಕ್‌ಗಳನ್ನು ಉತ್ತಮ ವಾಗಿ ತಯಾರಿಸಿಕೊಟ್ಟ ಶ್ರೀ ಅಥಣಿಮಠ ಮತ್ತು ಶ್ರೀ ಗುಂಜಟಕರ ಬಂಧು ಇವರಿಗೆ ನಾವು ಆಭಾರಿಯಾಗಿದ್ದೇವೆ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ವಿದ್ಯಾರಣ್ಯ ಹಾಯಸ್ಕೂಲದ ಪ್ರಾಧ್ಯಾಪಕರಿಗೂ ಅವರ ಸಿಬ್ಬಂದಿಗೂ ನಾವು ಉಪಕೃತರು.

ಈ ಪುಸ್ತಕದ ಲಾಭಾಂಶವನ್ನು ಗಾಂಧೀ ವಿಚಾರ ಪ್ರಚಾರಕ್ಕಾಗಿ ಉಪ ಯೋಗಿಸಲಾಗುವದು.

ನಿ. ಯ. ತುಕ್ಕಾರ
ಚೇರಮನ್,
ಖಾದೀ ಗ್ರಾಮೋದ್ಯೋಗ ಸಹಕಾರೀ
ಉತ್ಪಾದಕ ಸಂಘ ನಿ., ಹುದಲಿ
ಮತ್ತು ಸದಸ್ಯರು

ಪರಿವಿಡಿ

ಶ್ರೀ ರಾಮಚಂದ್ರ ವಡವೀಯವರ
ಇತರ ಕೃತಿಗಳು

ಖಾದಿ

೧ ಬಡವರ ಭಾಗ್ಯ (ಹತ್ತಿಯಿಂದ ನೂಲುವವರೆಗಿನ ಎಲ್ಲ ಪ್ರಕ್ರಿಯೆಗಳು)
೨ ಖಾದೀದರ್ಶನ (ಹತ್ತಿಯಿಂದ ನೇಯ್ಗೆವರೆಗಿನ ಎಲ್ಲ ಪ್ರಕ್ರಿಯೆಗಳು ಗಣೀತ ಸಹಿತ)
೩ ಖಾದೀ (ಖಾದೀ ಹಿಂದಿನ ತತ್ವಜ್ಞಾನ ಮತ್ತು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವಿಚಾರಗಳು)

ಪ್ರೌಢ ಶಿಕ್ಷಣ

೪ ಕುರುಡರ ಕಣ್ಣು (ಶೀಘ್ರ ಸಾಕ್ಷರತಾ ಪ್ರಸಾರ ಪದ್ಧತಿ)
೫ ಮೂಲಾಕ್ಷರ ಬೋಧೆ
೬ ಗುಣಿತಾಕ್ಷರ ಬೋಧೆ
೭ ಮೂಲಾಕ್ಷರ ಪಟಗಳು (ಸಚಿತ್ರ)

ಗಾಂಧೀ ವಿಚಾರ

೮ ಗಾಂಧೀಜಿಯ ಕಥೆ (ಸಚಿತ್ರ)
೯ ಗಾಂಧೀ ಜೀವನ ಪಟಗಳು (ಸಂಖ್ಯೆ ೧೮)
೧೦ ಭೂದಾನವೇ ಏಕೆ ?
೧೧ ಕುಂದರನಾಡಿನಲ್ಲಿ ಒಂದು ಅಧ್ಯಾಯ (ಥೋಡೋ ಭಾರತಪರ್ವದಲ್ಲಿ)

೧೨ ಗಾಂಧೀ ಬೋಧೆ ಅನುವಾದ
೧೩ ಮಂಗಳ ಪ್ರಭಾತ ,,
೧೪ ಮಹಾದೇವಭಾಯಿ ದಿನಚರಿ ಭಾಗ ೧ ,,
೧೫ ಸರ್ವೋದಯ ದರ್ಶನ ,,
೧೬ ದೇಶಪಾಂಡೆ ಗಂಗಾಧರರಾಯರ ಆತ್ಮಚರಿತ್ರ ,,

ಮುಂಬರುವ ಕೃತಿಗಳು

ಗಾಂಧೀ ಪ್ರಣೀತ ವಿಧಾಯಕ ಕಾರ್ಯ
ಗಾಂಧೀ ಸ್ಮಾರಕ ನಿಧಿಯಲ್ಲಿ ಮಾಡಿದ ಕಾರ್ಯ ಮತ್ತು ಅನುಭವಗಳು

೧ | ೧೯೪೨ನೇ ಇಸ್ವಿಯ
ಅಖಿಲಭಾರತ ಕಾಂಗ್ರೆಸ ಕಮಿಟಿಯ ಅಧಿವೇಶನ

೧೯೪೨ನೇ ಇಸ್ವಿ ಆಗಸ್ಟ ತಿಂಗಳಲ್ಲಿ ಮುಂಬೈ "ಗೋವಾಲಿಯಾ ಟ್ಯಾಂಕ" ಮೈದಾನದ ಮೇಲೆ ಅಖಿಲಭಾರತ ಕಾಂಗ್ರೆಸ ಕಮಿಟಿಯ ಅಧಿವೇಶನ ಸೇರಿತ್ತು. ಅದ ರಲ್ಲಿ ಮಹಾತ್ಮಾಗಾಂಧಿಯವರು ಬ್ರಿಟಿಶರೇ "ಭಾರತದಿಂದ ತೊಲಗಿರಿ" ಎಂಬ ಆದೇಶ ಕೊಟ್ಟ ಕೂಡಲೇ ಅಖಿಲ ಭಾರತದಲ್ಲಿ ಒಮ್ಮೆಲೆ ನವಚೈತನ್ಯದ ಸಂಚಾರವಾಯಿತು. ಆ ವೇಳೆಗೆ ಗು. ವ. ಗಂಗಾಧರರಾವ್ ದೇಶಪಾಂಡೆಯವರ ಜೊತೆಗೆ ನಾನೂ ಆ ಅಧಿವೇಶನ ದಲ್ಲಿ ಉಪಸ್ಥಿತನಿದ್ದೆ. ನಾವು ಸರದಾರಗೃಹದಲ್ಲಿಯೇ ಇಳಕೊಂಡಿದ್ದವು. ಅನೇಕ ಜನ ಮುಂದಾಳುಗಳು ಸರದಾರಗೃಹಕ್ಕೆ ಬಂದು ಗಂಗಾಧರರಾಯರ ಜೊತೆಗೆ ಚರ್ಚೆ ಮಾಡಿ ಹೋಗುತ್ತಿದ್ದರು. ಜಗತ್ತಿನೊಳಗಿನ ಅನೇಕ ರಾಷ್ಟ್ರಗಳ ವಿಶೇಷ ಸುದ್ದಿಗಾರರು ಈ ಅಧಿವೇಶನಕ್ಕೆ ಬಂದಿದ್ದರು. ಈ ಅಧಿವೇಶನದಲ್ಲಿ ಮಹತ್ವದ ಒಂದೇ ಒಂದು ಗೊತ್ತುವಳಿಯನ್ನು ಸ್ವೀಕಾರ ಮಾಡುವದಿತ್ತು. ಭಾರತದ ಸ್ವಾತಂತ್ರ್ಯಕ್ಕಾಗಿ ಇದು ಅಂತಿಮ ಹೋರಾಟವಾಗಿತ್ತು. ಆದ್ದರಿಂದ ಸಾಮಾನ್ಯವಾಗಿ ಎಲ್ಲ ಸದಸ್ಯರೂ ಈ ಅಧಿವೇಶನದಲ್ಲಿ ಉಪಸ್ಥಿತರಿದ್ದರು. ವಾತಾವರಣದಲ್ಲಿ ಗಾಂಭೀರ್ಯ ತುಂಬಿ ತುಳುಕುತ್ತಿತ್ತು.

ಪೂಜ್ಯ ಸೇನಾಪತಿ ಬಾಪಟ ಅವರು ತಮ್ಮ ಸಲುವಾಗಿ ಮತ್ತು ನನ್ನ ಸಲು ವಾಗಿ ಎಂದು ಎರಡು ಸುದ್ದಿಗಾರರ ಪಾಸುಗಳನ್ನು ದೊರಕಿಸಿದ್ದರು. ನಾವಿಬ್ಬರೂ ಒಂದೇ ಸ್ಥಳದಲ್ಲಿ ಕುಳಿತಿದ್ದೆವು. ಕೊನೆಗೆ 'ಭಾರತದಿಂದ ತೊಲಗಿರಿ (Quit India)' ಗೊತ್ತುವಳಿಯನ್ನು ಮಂಡಿಸಿ, ಮಹಾತ್ಮಾಗಾಂಧಿಯವರು ತಮ್ಮ ಭಾಷಣ ಪ್ರಾರಂಭ ಮಾಡಿದರು. ಆಗ ಸಭಾಸ್ಥಾನದಲ್ಲಿ ಯುದ್ಧಪೂರ್ವದ ಶಾಂತತೆ ನೆಲೆಸಿತ್ತು. ಒಬ್ಬರು ಇನ್ನೊಬ್ಬರ ಸಂಗಡ ಮಾತಾಡುವದಿದ್ದರೆ ಒಬ್ಬರು ಇನ್ನೊಬ್ಬರ ಕಿವಿಯೊಳಗೆ ಗುಜು ಗುಜು ಮಾಡುತ್ತಿದ್ದರು. ಮಹಾತ್ಮಾಗಾಂಧಿಯವರ ಭಾಷಣ ಕೇಳುತ್ತಿದ್ದಂತೆ ಪೂ. ಸೇನಾಪತಿ ಬಾಪಟ ಮತ್ತು ಶಾತ್ಯಾ ನನಗೆ ಅಂದರು : "ಕೌರವ-ಪಾಂಡವರ ಸೈನ್ಯದ ಮಧ್ಯದಲ್ಲಿ ನಿಂತು ಪ್ರತ್ಯಕ್ಷ ಗೋಪಾಲಕೃಷ್ಣನು ಗೀತಾ ಹೇಳುತ್ತಿದ್ದಾನೆ. ಈ ಯುಗ ದಲ್ಲಿ ನಾವು ಹುಟ್ಟಿದೆವು, ಹೋರಾಡಿದೆವು ಮತ್ತು ಈ ಯುದ್ಧದಲ್ಲಿ ಭಾಗತೆಗೆದು ಕೊಳ್ಳುತ್ತಿದ್ದೇವೆ. ಇದು ನಮ್ಮ ಎಂಥ ದೊಡ್ಡ ಭಾಗ್ಯ."

ಅಧಿವೇಶನದ ಕಾರ್ಯ ಕಲಾಪಗಳು ಮುಗಿದ ನಂತರ ಸಭಾಸದರು, ಪ್ರೇಕ್ಷಕರು, ದೇಶವಿದೇಶಗಳಿಂದ ಹಾಗೂ ಭಾರತದ ನಾನಾ ಭಾಗಗಳಿಂದ ಬಂದ ಸುದ್ದಿಗಾರರು

ಇಷ್ಟೊಂದು ಶಾಂತರೀತಿಯಿಂದ ಹೊರಟು ಹೋದ ದೃಶ್ಯವನ್ನು ನಾನು ಇದುವರೆಗಿನ ಹಿಂದಿನ ಯಾವದೇ ಅಧಿವೇಶನದಲ್ಲಿ ನೋಡಿರಲಿಲ್ಲ. ಗಂಗಾಧರರಾಯರ ಮೋಟರದೊಳಗಿಂದಲೇ ನಾನೂ ಸರದಾರಗೃಹಕ್ಕೆ ತಿರುಗಿ ಬಂದೆನು. ನಮ್ಮ ಹಿಂದೆಯೇ ಅನೇಕ ಮುಂದಾಳುಗಳು ಸರದಾರಗೃಹಕ್ಕೆ ಸಾಲಿಟ್ಟಿದ್ದರು. ಗಂಗಾಧರರಾಯರ ಭೆಟ್ಟಿಗೆ ಬಂದ ಅನೇಕ ಮುಂದಾಳುಗಳು ಆ ರಾತ್ರಿ ಸರದಾರಗೃಹದಲ್ಲಿಯೇ ಊಟ ಮಾಡಿದರು. ರಾತ್ರಿ ಒಂದೂವರೆ ಗಂಟೆಯ ವರೆಗೆ ಚರ್ಚೆ ನಡೆದಿತ್ತು. ಅನೇಕರು ಅನೇಕ ಯೋಜನೆಗಳನ್ನು ಚರ್ಚೆಗಾಗಿ ಮುಂದೆ ಇಟ್ಟಿದ್ದರು. ಎಲ್ಲರೂ ಹೊರಟು ಹೋದ ಮೇಲೂ ಗಂಗಾಧರರಾಯರು ಅಟ್ಟದ ಗ್ಯಾಲರಿಯಲ್ಲಿ ಕೆಲಹೊತ್ತು ನಿಂತುಕೊಂಡಿದ್ದರು. ಕೆಲಹೊತ್ತು ಕೋಣೆಯಲ್ಲಿಯೇ ಶತಪಥ ಹಾಕುತ್ತಿದ್ದರು. ಅವರು ರಾತ್ರಿ ನನ್ನನ್ನು ಎರಡು ಸಲ ಎಬ್ಬಿಸಿದರು. ಏನಾದರೂ ಕೆಲಸವಿರಬಹುದು. ಪತ್ರ ಬರೆಯುವದಿರಬಹುದು ಅಥವಾ ಅವರಿಗೆ ಏನಾದರೂ ಬೇಕಾಗಿರಬಹುದು ಎಂದು ನನಗನಿಸಿತು. ನಾನು ಹಾಸಿಗೆಯಿಂದೆದ್ದು "ಏನಾದರೂ ಕೆಲಸವಿದೆಯೇ ? ಏನಾದರೂ ಬೇಕಾಗಿದೆಯೇ ?" ಎಂದು ಕೇಳಿ ಅವರ ಮುಂದೆ ಎಷ್ಟೋ ಹೊತ್ತು ನಿಂತುಕೊಂಡಿದ್ದೆ. ಆದರೂ ಅವರು ಏನೂ ಮಾತಾಡದೆ ಗ್ಯಾಲರಿಯಲ್ಲಿ ನಿಂತಂತೆಯೇ ನಿಂತಿದ್ದರು ಅಥವಾ ಕೋಣೆಯಲ್ಲಿ ಶತಪಥ ಹಾಕುತ್ತಿದ್ದರು. ಬೆಳಿಗ್ಗೆ ಐದೂವರೆ ಗಂಟೆಗೆ ಅವರು ಮತ್ತೆ ಎದ್ದು ಕುಳಿತರು. ನನ್ನನ್ನೂ ಎಬ್ಬಿಸಿದರು. ಆದರೂ ಏನನ್ನೂ ಮಾತಾಡಲಿಲ್ಲ. ಬೆಳಿಗ್ಗೆ ಮತ್ತೆ ಮುಂದಾಳುಗಳು, ಕಾರ್ಯಕರ್ತರು ಬರತೊಡಗಿದರು. ಅಷ್ಟರಲ್ಲಿ ಒಂದು ಸುದ್ದಿ ಬಂತು: "ಕಾಂಗ್ರೆಸ ಕಾರ್ಯ ಸಮಿತಿಯ ಎಲ್ಲ ಸದಸ್ಯರನ್ನೂ ಬೆಳಗಿನ ಜಾವದಲ್ಲಿಯೇ ಬಂಧಿಸಿದ್ದಾರೆ." ಮತ್ತೊಂದು ಸುದ್ದಿ ಬಂತು: "ದಾರಿಯ ಮೇಲೆ ಹೋಗುವವರನ್ನು ಪೋಲೀಸರು ಹಿಡಿದು ಹೊಡೆಯುತ್ತಿದ್ದಾರೆ." ಗಂಗಾಧರರಾಯರು ನನಗೆ ಹೇಳಿದರು: "ನೀನು ಇಲ್ಲಿಂದ ಗಿರಗಾಂವ ಚರ್ಚದ ವರೆಗೆ ನಡೆಯುತ್ತ ಹೋಗಿ. ನಡೆಯುತ್ತ ಬಾ. ಏನು ಪರಿಸ್ಥಿತಿ ಇದೆ ಎಂಬುದನ್ನು ನನಗೆ ಹೇಳು."

ನಾನು ನಡೆಯುತ್ತಲೇ ಗಿರಗಾಂವದತ್ತ ಹೊರಟೆನು. ಚಿಕ್ಕ ಮಕ್ಕಳ "ಮಾರ್ಜಾರ ಸೇನಾ". ದೊಡ್ಡ ಹುಡುಗರ "ವಾನರ ಸೇನಾ"ದ ಪ್ರವಾಹವನ್ನು ನಿಗ್ರಹ ಮಾಡುವದು ಪೋಲೀಸರಿಗೆ ಕಠಿಣವಾಗಹತ್ತಿತ್ತು. ಎರಡೂ ಬದಿಯ ಎಲ್ಲ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಮುಂಜಾನೆ ಒಂಬತ್ತು ಗಂಟೆಯ ಸಮಯವಿರಬಹುದು. ಎಲ್ಲ ಮನೆಗಳೂ, ಅಂತಸ್ತುಗಳೂ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿದ್ದವು. ಪೋಲೀಸರ ಬೆತ್ತದ ಏಟಿನಿಂದ ಪಾರಾಗುವವರು ತೀರ ಕಡಿಮೆ ಜನರು. ಯಾರನ್ನೂ ಹೊಡೆಯದೆ ಬಿಡಬಾರದು ಎಂದು ಸರಕಾರದ ಧೋರಣೆ ಇದ್ದಂತೆ ತೋರುತ್ತಿತ್ತು. ಗಾಂಧೀ ಹೆಸರಿನಿಂದ ಆಗುವ ಜಯ ಜಯಕಾರದಿಂದ ವಾತಾವರಣ ದುಮು ದುಮುಸುತ್ತಿತ್ತು. ರಹದಾರಿಗಳೆಲ್ಲವೂ ಬಂದೇ ಆಗಿದ್ದವು. ನನಗೆ ಸರದಾರಗೃಹಕ್ಕೆ ತಿರುಗಿ ಬರಲು ಎರಡು ತಾಸುಗಳಾದರೂ ಹಿಡಿದಿರಬಹುದು. ನಾನು ಸರದಾರ

ಗೃಹಕ್ಕೆ ಬಂದು. ನೋಡಿದ ವಸ್ತುಸ್ಥಿತಿಯನ್ನು ಗಂಗಾಧರರಾಯರಿಗೆ ತಿಳಿಸಿದೆ. ಆಗ ಕೆಲವು ಮುಖಂಡರು ತಮ್ಮ ತಮ್ಮೊಳಗೆ ಹಾಗೂ ಗಂಗಾಧರರಾಯರ ಜೊತೆಗೆ ಚರ್ಚೆ ನಡೆಸಿದ್ದರು. ಅಷ್ಟರಲ್ಲಿ ಗಂಗಾಧರರಾಯರು ಸಹಜವಾಗಿ ಅಂದರು: "ಬ್ಯಾ. ಸಾವರಕರರು ತಮ್ಮ ಮೇಲಿನ ಸರಕಾರಿ ನಿರ್ಬಂಧಗಳನ್ನೆಲ್ಲ ಕಿತ್ತೊಗೆದು 'ಭಾರತದಿಂದ ತೊಲಗಿರಿ' ಈ ಸಂಗ್ರಾಮದಲ್ಲಿ ಭಾಗವಹಿಸಿದರೆ ಬಹಳ ಉತ್ತಮವಾದೀತು. ಅವರ ಇದುವರೆಗಿನ ಚಾರಿತ್ರ್ಯದ ದೃಷ್ಟಿಯಿಂದ ಅವರ ಆಯುಷ್ಯಕ್ಕೆ ಒಂದು ಸುಂದರ ಕಳಸವಾದೀತು." ಕೂಡಲೇ ಗಂಗಾಧರರಾಯರು ನನಗೆ ಹೇಳಿದರು: "ಪುಂಡಲೀಕ, ಸಾವರಕರರ ನಂಬರು ಹುಡುಕಿ ಫೋನ ಹಚ್ಚು. ನಾನು ಅವರ ಸಂಗಡ ಸ್ವತಃ ಮಾತಾಡುತ್ತೇನೆ." ನಾನು ಫೋನ ಮಾಡಿದೆ. ಅದು ಹತ್ತಿತು:

"ಮಾತಾಡುವವರು ಯಾರು ?"

ಉತ್ತರ: "ನಾನು ಸ್ವಾತಂತ್ರ್ಯವೀರ ಸಾವರಕರರ ಮನೆಯಿಂದ ಮಾತಾಡುತ್ತಿದ್ದೇನೆ. ನೀವು ಯಾರು ?"

"ನಾನು ಗಂಗಾಧರರಾವ ದೇಶಪಾಂಡೆಯವರ ಕಡೆಯಿಂದ ಮಾತಾಡುತ್ತಿದ್ದೇನೆ. ಅವರಿಗೆ ಬ್ಯಾ. ಸಾವರಕರರ ಸಂಗಡ ಮಾತನಾಡುವದಿದೆ. ಸಾವರಕರರಿಗೆ ಫೋನ ಕೊಡುತ್ತೀರಾ ?"

"ಸ್ವಲ್ಪ ತಡೆಯಿರಿ! ಅವರನ್ನು ವಿಚಾರಿಸಿ ಹೇಳುತ್ತೇನೆ. ಫೋನ ಬಂದ ಮಾಡಬೇಡಿರಿ."

ಇಷ್ಟರಲ್ಲಿ ಅಲ್ಲಿ ಚರ್ಚೆ ಮಾಡುತ್ತಿದ್ದವರಲ್ಲಿ ಯಾರೋ ಸೂಚಿಸಿದರು: "ನಾವಾಗಿಯೇ ಸಾವರಕರರನ್ನು ಈ ರೀತಿ ಕೇಳಬಾರದು. ಸೂಚಿಸಲೂ ಬಾರದು. ಗಂಗಾಧರರಾಯರಂತೂ ಸ್ವತಃ ಕೇಳಲೇ ಬಾರದು. ಸ್ವತಃ ಸಾವರಕರರೇ ವಿಚಾರ ಮಾಡುತ್ತಲೇ ಇರಬಹುದು. ಅವರಷ್ಟಕ್ಕೆ ಅವರೇ ನಿರ್ಣಯ ತೆಗೆದುಕೊಳ್ಳಲಿ. ಅದೇ ಯೋಗ್ಯವಾದೀತು."

ಗಂಗಾಧರರಾಯರು ನನ್ನನ್ನು ಕೂಗಿ ಕೇಳಿದರು: "ಯಾರೂ ಫೋನ ತೆಗೆದುಕೊಳ್ಳಲಿಲ್ಲವೇನು ?"

ನಾನು ಉತ್ತರ ಕೊಟ್ಟೆ: "ಸಾವರಕರರನ್ನು ಯಾರೂ ಕರೆಯಲು ಹೋಗಿದ್ದಾರೆ. ಅವರು ಇಷ್ಟರಲ್ಲಿಯೇ ಬರಬಹುದು. ಅವರು ಫೋನ ಮೇಲೆ ಬಂದ ಕೂಡಲೇ ನಿಮಗೆ ತಿಳಿಸುತ್ತೇನೆ."

ಗಂಗಾಧರರಾಯರು "ಫೋನ ಬಂದ ಮಾಡು. ಸ್ವಲ್ಪ ತಡೆ, ಪುನಃ ಫೋನ ಮಾಡಲಿಕ್ಕೆ ಬಂದೀತು" ಎಂದು ಅಂದರು. ಆಗ ಅಲ್ಲಿ ಕುಳಿತವರಲ್ಲಿ ಕಾಕಾಸಾಹೇಬ ಕಾಲೇಲಕರ. ಹ. ಮೊ. ಜೋಶಿ ಮತ್ತು ಇನ್ನೂ ಕೆಲವರಿದ್ದರು. ಇಷ್ಟಾದನಂತರ ಸಾವರಕರರಿಗೆ ಫೋನ ಮಾಡಲಿಲ್ಲ. ಮತ್ತು ಅವರ ಸಂಗಡ ಮಾತುಕತೆ ಆಗಲಿಲ್ಲ.

ಮಧ್ಯಾಹ್ನ ಊಟವಾದ ನಂತರ ಇದೇ ರೀತಿ ಏನೋ ಮಾತಾಡುತ್ತ, ಚರ್ಚೆ ಮಾಡುತ್ತ ಕುಳಿತಾಗ ಸರದಾರಗೃಹಕ್ಕೆ ಫೋನ ಬಂತು. ಅದು ಯಾರದೆಂದು ನೋಡಲು ಗಂಗಾಧರರಾಯರು ನನಗೆ ಹೇಳಿದರು. ನಾನು ಫೋನ ಎತ್ತಿ ವಿಚಾರಿಸಿದೆ.

ನಾನು: "Who is speaking ? Whom do you want ?"

ಉತ್ತರ: "Is Mr. Gangadhararao there ?"

ನಾನು: "Yes, he is here. May I know who is speaking?"

ಆದರೆ ನನಗೆ ಯಾವದೇ ಉತ್ತರ ಬಾರದ್ದರಿಂದ ಫೋನ ಕೆಳಗೆ ಇಟ್ಟುಬಿಟ್ಟೆ. ನಾನು ನಡೆದ ಸಂಗತಿಯನ್ನು ಗಂಗಾಧರರಾಯರಿಗೆ ತಿಳಿಸಿದೆ. ಅವರು ನನಗೆ ಅಂದರು: "ನಾನು ಇಲ್ಲಿ ಇದ್ದೇನೆಂದು ಮೊದಲೇ ಏಕೆ ತಿಳಿಸಿದೆ ? ಈ ಫೋನ ಪೋಲೀಸ ಅಧಿಕಾರಿಗಳದ್ದೇ ಇರಬೇಕು. ಮೊದಲು ನಮ್ಮ ಹೋಲ್ಡಾಲ್ ಮುಂತಾದ ಸಾಮಾನು ಕಟ್ಟಿ ಶ್ರೀ ಸಾಳವೀಕರ ಅಂದರೆ ಸರದಾರಗೃಹದ ಒಡೆಯರ ಮನೆಯ ಮೇಲಂತಸ್ತಿನಲ್ಲಿ ಒಯ್ದಿಡು." ಕಾಕಾಸಾಹೇಬ ಕಾಲೇಲಕರ ಈ ಮೊದಲೇ ಹೊರಟು ಹೋಗಿದ್ದರು. ಶ್ರೀ ಹ. ಮ. ಜೋಶಿಯವರನ್ನೂ ಶ್ರೀ ಸಾಳವೀಕರರ ಮನೆಗೆ ಕರೆದುಕೊಂಡು ಹೋದೆ. ಗಂಗಾಧರರಾಯರು ಬಟ್ಟೆ ಹಾಕಿಕೊಂಡು ಕಾವುಂಟರಕ್ಕೆ (ಗಲ್ಲೆಗೆ) ಹೋಗಿ ಸರದಾರ ಗೃಹದ ಬಿಲ್ಲನ್ನು ಕೊಟ್ಟರು. ಪೋಲೀಸರು ಇದನ್ನೆಲ್ಲ ವಿಚಾರಿಸಬಹುದೆಂದು ಅವರು ಊಹಿಸಿಯೇ ಪದ್ಧತಿ ಪ್ರಕಾರ ಪಾವತಿ ಮುಂತಾದ್ದನ್ನು ಪಡೆದುಕೊಂಡರು. ಕಾವುಂಟರ ಮೇಲಿನ ಮನುಷ್ಯನಿಗೆ ಹೇಳಿದರು: "ನನಗೆ ಸ್ಟೇಶನಕ್ಕೆ ಹೋಗಬೇಕಾಗಿದೆ. ಸಾಮಾನು ಕೆಳಗೆ ತರಲಿಕ್ಕೆ ಒಬ್ಬ ಕೂಲಿಯವನನ್ನು ತರಿಸಿಕೊಡಿರಿ. ೧೨೬ ನಂಬರ ಕೋಣೆಯಲ್ಲಿ ನಾನಿದ್ದೇನೆ." ಹೀಗೆ ಹೇಳಿ ಗಂಗಾಧರರಾಯರು ಮೇಲಂತಸ್ತಿಗೆ ಹೋಗುವ ಹಿಂದಿನ ಮೆಟ್ಟಲುಗಳಿಂದ ಸಾಳವೀಕರರ ಮನೆಗೆ ಹೋದರು. ಅವರು ಎರಡು ಮೂರು ದಿವಸ ಸಾಳವೀಕರರ ಮನೆಯಲ್ಲಿಯೇ ಇದ್ದರು.

ಮುಂದೆ ೧೫–೨೦ ನಿಮಿಷಗಳಲ್ಲಿಯೇ ಪೋಲೀಸ ಅಧಿಕಾರಿಗಳು ಸರದಾರ ಗೃಹಕ್ಕೆ ಬಂದರು. ಅವರ ಈ ಕಾರಸ್ಥಾನವೆಲ್ಲ ಗಂಗಾಧರರಾಯರನ್ನು ಹಿಡಿಯುವ ದಕ್ಕೋಸ್ಕರವೇ ಇತ್ತು. ಪೋಲೀಸ ಅಧಿಕಾರಿಗಳು ಕಾವುಂಟರ ಮೇಲಿನ ಡುಪ್ಲಿಕೇಟ ಪಾವತಿ ನೋಡಿದರು. ಕಾವುಂಟರ ಮೇಲಿನ ಮನುಷ್ಯ ಹೇಳಿದ: "ಅವರು ತಮ್ಮ ಸಾಮಾನು ಕೆಳಗ ತರಲಿಕ್ಕೆ ಒಬ್ಬ ಕೂಲಿಯವನನ್ನು ಕರೆಸಿದ್ದರು. ಸ್ಟೇಶನಕ್ಕೆ ಹೋಗಲು ಟ್ಯಾಕ್ಸಿ ತರಲು ತಮ್ಮ ಮನುಷ್ಯನನ್ನು ಕಳಿಸಿದ್ದರು. ಅವರು ಸ್ಟೇಶನಕ್ಕೆ ಹೋಗಿರಬೇಕು. ರೈಲು ಸಿಕ್ಕಿರಬೇಕು. ಅವರು ಪುಣೆಗೆ ಹೋಗುವವರಿದ್ದರು." ಪೋಲಿಸರು ೧೨೬ ನಂಬರಿನ ಕೋಣೆಯನ್ನು ಪ್ರತ್ಯಕ್ಷ ನೋಡಿ ಬಂದರು.

ಗಂಗಾಧರರಾಯರಿಗೆ ಮುಂದೆ ಚಳವಳಿಗಾಗಿ ಮುಂಬೈಯಲ್ಲಿ ನಿಧಿ ಸಂಗ್ರಹ ಮಾಡಬೇಕಾಗಿತ್ತು. ಕೆಲವೊಂದು ನಿಧಿ ಸಂಗ್ರಹಮಾಡಿ ಅದನ್ನು ತಮ್ಮ ಒಬ್ಬ ವಿಶ್ವಾಸಿಕ

ಮನುಷ್ಯನ ಕೈಯಲ್ಲಿ ಕೊಟ್ಟು ಹೇಗೆ ಖರ್ಚು ಮಾಡಬೇಕೆಂಬುದನ್ನು ಹೇಳಿದರು. ಆತನಿಗೆ ಮುಂದೆ ಸಹ ಆರ್ಥಿಕ–ಸಹಾಯ ಸತತ ದೊರೆಯುತ್ತಿರುವಂತೆ ಯೋಜನಾ ಬದ್ಧ ವ್ಯವಸ್ಥೆ ಮಾಡಿದರು. ಇದಕ್ಕೋಸ್ಕರವಾಗಿಯೇ ಅವರು ಮುಂಬೈಯಲ್ಲಿ ೩–೪ ದಿವಸ ಹೆಚ್ಚಿಗೆ ನಿಲ್ಲುವದಿತ್ತು. ಈ ಕೆಲಸ ಮುಗಿದನಂತರ ಅವರು ಬಹಿರಂಗ ವಾಗಿಯೇ ಮುಂಬೈಯನ್ನು ಬಿಟ್ಟರು. ಆದರೆ ಪೋಲೀಸರು ಸಹ ಅವರ ಶೋಧಾರ್ಥ ಹೆಚ್ಚಿನ ಗಡಿಬಿಡಿ ಮಾಡಲಿಲ್ಲ. ಗಂಗಾಧರರಾಯರು ಬೆಳಗಾಂವಿ ಮುಟ್ಟಿದ ಮೇಲೆ ಅವರನ್ನು ಬಂಧಿಸಿದರೆ ಅದರ ಪರಿಣಾಮ ಸ್ಥಾನಿಕ ಕಾರ್ಯಕರ್ತರ ಮೇಲೆ ಸಹ ಆಗ ಬಹುದೆಂದು ಪೋಲೀಸ ಅಧಿಕಾರಿಗಳು ತಿಳಿದಿರಬಹುದು. ಯಾಕಂದರೆ ಗಂಗಾಧರ ರಾಯರು ಬೆಳಗಾಂವಿ ಮುಟ್ಟಿದ ಮೇಲೆಯೇ ಅವರನ್ನು ಬಂಧಿಸಲಾಯಿತು.

ವರ್ಕಿಂಗ ಕಮೀಟಿ ಸದಸ್ಯರನ್ನು ಬಂಧಿಸಿದ ಮೂರನೇ ದಿವಸವೇ ಗಂಗಾಧರ ರಾಯರಿಗೆ ನಮಸ್ಕಾರಮಾಡಿ ನಾನು ಅವರ ಆಶೀರ್ವಾದ ತೆಗೆದುಕೊಂಡು ಮುಂಬೈ ಯಿಂದ ಹೊರಟೆನು. ನನಗೆ ಆಶೀರ್ವಾದ ಮಾಡುವಾಗ ಗಂಗಾಧರರಾಯರು ಹೇಳಿದರು :—

"ಮೊನ್ನೆ ಗಾಂಧೀಜಿಯವರ ಭಾಷಣ ನೀನು ಕೇಳಿಯೇ ಇರುವಿ. ಈ ಅಂದೋ ಲನ ಸೆರೆಮನೆ ತುಂಬುವ ಅಂದೋಲನವಲ್ಲ. ನಿನ್ನ ಬಂಧನವಾಯಿತು, ನೀನು ಜೇಲಿಗೆ ಹೋದಿ ಎಂಬುದನ್ನು ಕೇಳಿ ನನಗೆ ಸಮಾಧಾನವಾಗಲಾರದು. ನೀನು ಪೋಲೀಸರ ಗುಂಡಿನೇಟಿಗೆ ಬಲಿಯಾಗಿ ಸತ್ತಿ ಎಂದು ಕೇಳಿದರೆ ನನಗೆ ಹೆಚ್ಚು ಸಮಾಧಾನವಾದೀತು. ನಿನಗೆ ಏನು ಮಾಡಿ ತೋರಿಸಬೇಕಾಗಿದೆಯೋ ಅದನ್ನು ಮಾಡಿ ತೋರಿಸು. ಸಾಕಷ್ಟು ಅವಕಾಶವಿದೆ. ಇಂದು ಪ್ರತಿಯೊಬ್ಬ ಮನುಷ್ಯ ತನ್ನ ಮುಂದಾಳು ತಾನೇ ಆಗಿದ್ದಾನೆ. ಗಾಂಧೀಜಿಯವರ ತತ್ವಕ್ಕನುಸರಿಸಿ ಎಷ್ಟು ಉಪದ್ವ್ಯಾಪ ಮಾಡಬೇಕಾಗಿದೆಯೋ ಮಾಡು. ಧೈರ್ಯ ಸಾಹಸಗಳನ್ನು ತೋರಿಸು." ಹೀಗೆ ಹೇಳಿ ಅವರು ನನಗೆ ೩೦೦ ರೂಪಾಯಿ ಗಳನ್ನು ಕೊಟ್ಟರು. ನಾನು ಅವರ ಅಪ್ಪಣೆ ಪಡೆದು ಹೊರಟೆನು.

ನಾನು ಪುಣೆಯಲ್ಲಿ ಒಂದು ದಿವಸ ನಿಂತು ಊರೆಲ್ಲ ತಿರುಗಾಡಿ ಪುಣೆಯಲ್ಲಿ ಏನೇನು ನಡೆದಿದೆ ಎಂಬುದನ್ನು ತಿಳಿದುಕೊಂಡೆನು. ಶಾಲೆ–ಕಾಲೇಜ ವಿದ್ಯಾರ್ಥಿಗಳು ಗುಂಪು ಗುಂಪಾಗಿ ಊರಲ್ಲಿ ತಿರುಗಾಡುತ್ತಿದ್ದರು. ಪೋಲೀಸ ಅಧಿಕಾರಿ ಮತ್ತು ವಿದ್ಯಾರ್ಥಿಗಳ ನಡುವೆ ಸ್ಪರ್ಧೆಯ ತಿಕ್ಕಾಟ ನಡೆದಿತ್ತೆಂದು ಹೇಳಲು ಅಡ್ಡಿ ಇಲ್ಲ. ಇಂಜನಿಯರಿಂಗ ಕಾಲೇಜ ವಿದ್ಯಾರ್ಥಿಗಳು ಇನ್ನೂ ವಿಚಾರ ನಡೆಸಿದ್ದರು: ಕಾಲೇಜ ಬಿಟ್ಟು ಹೊರಬಿದ್ದಿದ್ದಿಲ್ಲ. ಆದರೂ ಪೋಲೀಸ ಅಧಿಕಾರಿಗಳು ಆ ಕಡೆಗೆ ಧಾವಿಸಿದರು. ಆಗ ವಿದ್ಯಾರ್ಥಿಗಳು ಅವರಿಗೆ ಚನ್ನಾಗಿ ಪಾಠ ಕಲಿಸಿದರು. ಇದು ನನಗೆ ತಿಳಿದ ನಂತರ ನಾನು ಆ ಕಾಲೇಜ ಕಡೆಗೆ ಹೊರಟೆನು. ನಾನು ಅಲ್ಲಿಗೆ ಹೋಗಿ ಮುಟ್ಟು ವದರೊಳಗೆ ಅಲ್ಲಿ ಎಲ್ಲವೂ ಶಾಂತವಾಗಿತ್ತು.

ಪುಣೆಯಿಂದ ನಾನು ಮಿರಜಿಗೆ ಹೊರಟೆನು. ಮಿರಜಿಗೆ ಬೆಳಿಗ್ಗೆ ೩ ಗಂಟೆಗೆ ಮುಟ್ಟಿದೆನು. ಸ್ಟೇಶನ್ನಿನ ಮೇಲೆ ಒಂದೂ ವಾಹನ ಇರಲಿಲ್ಲ. ಸ್ಟೇಶನ್ನಿನಿಂದ ನಾನು

ನಡೆಯುತ್ತಲೇ ಊರೊಳಗೆ ಬಂದೆ. ಮಾರ್ಕೆಟ್ಟಿನ ಹತ್ತಿರ ಕೆಲವು ಜನರು ಗುಂಪು ಗುಂಪಾಗಿ ಕುಳಿತಿರುವದು ಕಾಣಿಸಿತು. ಅವರಲ್ಲಿ ಅನೇಕರು ನನ್ನ ಪರಿಚಯದವರಿದ್ದರು. ಅವರಲ್ಲಿ ಬಹಳ ಜನ ನನ್ನನ್ನು ಗುರುತಿಸುತ್ತಿದ್ದರೂ ಕೆಲವರು ನನ್ನನ್ನು ಕೇಳಿದರು: "ನೀವು ಈ ಆಂದೋಲನದ ಬಗ್ಗೆ ಏನು ಮಾಡುವವರಿದ್ದೀರಿ ? ನಿಮ್ಮ ಕಾರ್ಯ ಕ್ಷೇತ್ರ ಮಿರಜ. ಸಾಂಗಲಿ. ಕೊಲ್ಹಾಪುರಗಳನ್ನು ಮಾಡಿಕೊಳ್ಳಬಹುದೇ ?" ನಾನು ಹೇಳಿದೆ: "ನಾನು ವಿಚಾರ ಮಾಡುತ್ತಿದ್ದೇನೆ. ಒಂದೆರಡು ದಿವಸಗಳಲ್ಲಿ ಒಂದು ಯೋಜನೆ ಗೊತ್ತುಮಾಡಿ ಕೆಲಸಕ್ಕೆ ಹತ್ತುತ್ತೇನೆ."

ಮರುದಿವಸ ನಾನು ಸಾಂಗಲಿಗೆ ಹೋಗಿ ಸಂಸ್ಥಾನೀ ಚಳವಳಿಯ ಅಧ್ಯಯ್ರ ಕೈ. ಗಣಪತರಾವ ಅಭ್ಯಂಕರ ಇವರ ಮನೆಯಲ್ಲಿ ಇರಹತ್ತಿದೆ. ರಾತ್ರಿ ವೇಷ ಬದಲಾಯಿಸಿ ನಾನು ಸಾಯಕಲ್ ಮೇಲಿಂದ ಮಿರಜಿಗೆ ಹೋಗಿ ಬರಹತ್ತಿದೆ. ನನ್ನನ್ನು ಆ ವೇಷದಲ್ಲಿಯೂ ಮಿರಜದಲ್ಲಿಯ ಕೆಲವು ಜನರು ಗುರುತಿಸುತ್ತಿದ್ದರು. ಕೆಲವರು ಸಂಶಯದಲ್ಲಿ ಬೀಳುತ್ತಿದ್ದರು. ಮತ್ತೆ ಕೆಲವರು ತೀರ ನನ್ನ ಪರಿಚಿತ ಜನರೇ ನನ್ನನ್ನು ಗುರುತಿಸುತ್ತಿರಲಿಲ್ಲ. ಸಾಮಾನ್ಯವಾಗಿ ನಾನು ಹಗಲು ಅಭ್ಯಂಕರರ ಮನೆಯಿಂದ ಹೊರ ಬೀಳುತ್ತಿರಲಿಲ್ಲ. ಜಿ. ಲಕ್ಷ್ಮಣ ಶಿಶಿರೆ ಎಂಬ ಒಬ್ಬ ಚಾಣಾಕ್ಷ ವಿದ್ಯಾರ್ಥಿ ನನಗೆ ಹೊರಗಿನ ಸಂಪರ್ಕ ಇಟ್ಟುಕೊಳ್ಳಲು ಸಹಾಯಕನಾಗಿದ್ದ. ಕೇವಲ ಮಿರಜಿಗೆ ಹೋಗುವಾಗ ಮಾತ್ರ ನಾನು ನನ್ನ ವೇಷ ಬದಲಾಯಿಸುತ್ತಿದ್ದೆ.

ಸುಮಾರು ಒಂದು ತಿಂಗಳು ನಾನು ನನ್ನ ಬಟ್ಟೆ ಬದಲಿಸಿದ್ದಿಲ್ಲ. ಯಾಕಂದರೆ ವೇಷ ಬದಲಾಯಿಸಿ ಊರಲ್ಲಿ ತಿರುಗಾಡುವದು ಗಾಂಧೀ ತತ್ವಕ್ಕೆ ವಿರುದ್ಧವೆಂದು ನನ್ನ ಅಭಿಪ್ರಾಯವಾಗಿತ್ತು. ಬೆಂಕಿ ಹಚ್ಚುವದು. ಸ್ಟೇಶನ್ ಸುಡುವದು. ರೇಲ್ವೆ ಹಳಿ ಕಿತ್ತುವದು—ಇವು ಗಾಂಧೀ ತತ್ವಕ್ಕೆ ವಿರುದ್ಧವಾದವು ಎಂದು ನನಗೆ ಅನಿಸುತ್ತಿದ್ದುದರಿಂದ ನಾನು ನನ್ನ ಬುಲೆಟಿನ್ ಅದೇ ಅರ್ಥದ ಮಾರ್ಗದರ್ಶನ ಮಾಡುವದರ ಸಲುವಾಗಿ ತೆಗೆದಿದ್ದೆನು. ಆದರೆ ಮುಂದೆ ಶ್ರೀ ಕಿಶೋರೀಲಾಲಜಿ ಮಶ್ರುವಾಲಾ ಮತ್ತು ಪೂಜ್ಯ ಕಾಕಾಸಾಹೇಬ ಕಾಲೇಲಕರ ಅವರು ಮೇಲಿನ ವಿಧ್ವಂಸಕ ಕೃತ್ಯಗಳನ್ನು ಎತ್ತಿಹಿಡಿದು ಮಾರ್ಗದರ್ಶನ ಮಾಡಿದ್ದು ನನಗೆ ಗೊತ್ತಾಯಿತು. ಆಗ ನಾನು ವಿಚಾರ ಮಾಡಿದೆ: "ಈ ಮಹಾನ್ ವಿಚಾರಕರಿಗಿಂತ ನನಗೆ ಗಾಂಧೀವಾದ ಎಷ್ಟರ ಮಟ್ಟಿಗೆ ತಿಳಿಯುತ್ತದೆ ?" ಅಲ್ಲಿಂದ ನನ್ನ ಎಲ್ಲ ಗುಪ್ತ ಪತ್ರಿಕೆಗಳನ್ನು "ವಿಧ್ವಂಸಕದ" ಹೊಸ ತಂತ್ರಕ್ಕೆ ಅನುಸರಿಸಿ ತೆಗೆಯಹತ್ತಿದೆನು. ಸಾಂಗಲಿಯಲ್ಲಿ ಪ್ರಾ. ಶಹಾ ಅವರ ಮುದ್ರಣಾಲಯದಲ್ಲಿ ನನಗೆ ಎಲ್ಲ ಗುಪ್ತ ಪತ್ರಿಕೆಗಳೂ ಮುದ್ರಿಸಿ ಸಿಗುತ್ತಿದ್ದವು. ಪ್ರಾ. ಶಹಾ ಅವರದೊಂದು ಸಿದ್ಧಾಂತವಿತ್ತು: "ಗುಪ್ತ ಎಂದು ಕಾರಸ್ಥಾನ ಮಾಡಹತ್ತಿದರೆ ಅದು ಬಹಳ ಕಾಲ ಗುಪ್ತ ಉಳಿಯುವದಿಲ್ಲ. ಅದರೂ ಬಹಿರಂಗವಾಗಿಯೇ ನಾವು ಮಾಡಹತ್ತಿದರೆ ಅತ್ತ ಕಡೆಗೆ ಅನೇಕ ದಿವಸ ಜನರ ಲಕ್ಷ್ಯ ಹೋಗುವದಿಲ್ಲ." ಅದರಂತೆ ಅವರು ನನ್ನ ಎಲ್ಲ ಗುಪ್ತ ಪತ್ರಿಕೆಗಳನ್ನು ತಮ್ಮ ಮುದ್ರಣಾಲಯದಲ್ಲಿಯೇ ಮುದ್ರಿಸಿಕೊಡುತ್ತಿದ್ದರು.

ಈ ಮಾತನ್ನು ಹೊರಗೆ ಹೇಳಬಾರದೆಂದು ಅವರು ತಮ್ಮ ಮುದ್ರಣಾಲಯದ ಕಂಪೋಜಿಟರಿಗೆ ಎಂದೂ ಹೇಳಿರಲಿಲ್ಲ. ಮಳೆ ಜೋಡಿಸುವ ಕೆಲಸ ಮಾತ್ರ ಅವರದು. ಅದರೊಳಗಿನ ವಿಷಯದ ಅರ್ಥ ನೋಡಬೇಕೆಂದು ಅವರ ತಲೆಯೊಳಗೆ ಎಂದೂ ಬರುವದಿಲ್ಲ.

ನಾನು ನನ್ನ ಮೊದಲಿನ ಭೂಮಿಕೆಯನ್ನು ಬಿಟ್ಟನಂತರ ನನ್ನ ಗುಪ್ತ ಪತ್ರಿಕೆಗಳು ಬಹಳ ಉಗ್ರವಾಗಿ ಹೊರಡಹತ್ತಿದ್ದವು. "ಸ್ಟೇಶನ್" ಹೇಗೆ ಸುಡಬೇಕು ? ರೇಲ್ವೆ ಹಳಿ ಎಲ್ಲಿ, ಯಾವಾಗ ಕಿತ್ತಬೇಕು ? 'ವಕೀಲರಿಗೆ ಆವ್ಹಾನ' 'ಸರಕಾರೀ ನೌಕರರಿಗೆ ಪ್ರಚೋದನೆ' 'ವ್ಯಾಪಾರಸ್ಥರು ಈ ಅಂದೋಲನದಲ್ಲಿ ಯಾವ ರೀತಿ ಭಾಗ ತೆಗೆದುಕೊಳ್ಳಬೇಕು?' 'ರೇಲ್ವೆ ಹಳಿಯ ಫಿಶ್ ಪ್ಲೇಟುಗಳನ್ನು ಹೇಗೆ ತೆಗೆಯಬೇಕು ?' 'ರೇಲ್ವೆ ಡಬ್ಬಿಯಲ್ಲಿ ಕುಳಿತು ಬಹಿರಂಗವಾಗಿ ಸರಪಳಿ ಜಗ್ಗಿ ಪರಿಣಾಮಕ್ಕೆ ಎದೆಗೊಟ್ಟು ಹೇಗೆ ನಿಲ್ಲಬೇಕು ?' ಈ ವಿಷಯ ಕುರಿತು ನಾನು ಗುಪ್ತ ಪತ್ರಿಕೆ ಬರೆದು ಮುಂಚಿತವಾಗಿ ಮುದ್ರಿಸಿ ಇಟ್ಟಿದ್ದೆನು.ವಾರಕ್ಕೊಮ್ಮೆ ಗುಪ್ತ ಪತ್ರಿಕೆಯ ಎರಡು ಬಂಡಲ್(ಗಂಟು)ಗಳನ್ನು ನಾನು ಬೆಳಗಾಂವಿ ಜಿಲ್ಲೆಗೆ ಕಳಿಸುತ್ತಿದ್ದನು. ನನ್ನ ಅಂಣ ಗೋಪಾಳರಾವ ಅವರು ನನ್ನ ಸಹಾಯಕ್ಕೆ ಸಹಜವಾಗಿ ದೊರೆತರು. ಅವರ ಗುರುತಿನ ಕೆಲವರು ರೇಲ್ವೆ ಗಾರ್ಡ ಇದ್ದರು. ಗಾರ್ಡನ ಡಬ್ಬಿಯೊಳಗಿಂದ ವಾರದಲ್ಲಿ ಎರಡು ಸಲ ಆಯಾ ತಾರೀಖಿನ ಗುಪ್ತ ಪತ್ರಿಕೆಗಳ ಬಂಡಲ್ ತೆಗೆದುಕೊಂಡು ಹೋಗಿ ರಾತ್ರಿ ಗೊತ್ತುಮಾಡಿದ ಸ್ಥಳದಲ್ಲಿ ಒಗೆಯಲಾಗುತ್ತಿತ್ತು. ನಿಯುಕ್ತ ಕಾರ್ಯಕರ್ತ ಅಲ್ಲಿಂದ ಆ ಬಂಡಲ್‌ಗಳನ್ನು ತೆಗೆದುಕೊಂಡು ಹೋಗುತ್ತಿದ್ದ. ಅದರಲ್ಲಿ ಏನಿದೆ ಎಂಬುದನ್ನು ಗೋಪಾಳರಾಯರು ಇಬ್ಬರು ಗಾರ್ಡರಿಗೆ ಹೇಳಿಬಿಟ್ಟಿದ್ದರು. ಆ ಕಾಲಕ್ಕೆ ಸಾಮಾನ್ಯ ಜನರಲ್ಲಿ ಸಹ ದೇಶಭಕ್ತಿ ಹೇಗೆ ಉಂಟಾಗಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಪ್ರಾ. ಶಹಾ ಅವರ ಮುದ್ರಣಾಲಯದಲ್ಲಿ ಈ ಗುಪ್ತಪತ್ರಿಕೆ ಮುದ್ರಿಸಲ್ಪಡುತ್ತವೆಂಬುದು ಹಿಂದಿನಿಂದ ಸರಕಾರಕ್ಕೆ ಗೊತ್ತಾಯಿತು. ಅವರ ಮುದ್ರಣಾಲಯ ಜಪ್ತಮಾಡಿ ಶೋಧಿಸಲಾಯಿತು. ಆದರೆ ಪೋಲೀಸರಿಗೆ ಒಂದಾದರೂ ಗುಪ್ತ ಪತ್ರಿಕೆ, ಅದರ ಹಸ್ತಲಿಖಿತ ಅಥವಾ ಅದರ ಕಚ್ಚಾಮುದ್ರಿತ ಪ್ರತಿ ಯಾವದೂ ದೊರೆಯಲಿಲ್ಲ, ಗುಪ್ತ ಪತ್ರಿಕೆಗಳ ಬಂಡಲ್‌ಗಳೆಲ್ಲ ಸಾಂಗಲಿಯಲ್ಲಿ ಶ್ರೀ ಅಭ್ಯಂಕರರ ಮನೆಯಲ್ಲಿದ್ದವು. ಪೋಲೀಸರಿಗೆ ಇದರ ಸುಳಿವು ಹತ್ತಿದ್ದಿಲ್ಲ. ಆ ಎರಡು ಮೂರು ತಿಂಗಳಲ್ಲಿ ಬೆಳಗಾಂವಿ ಸುತ್ತುಮುತ್ತಲಿನ ಭಾಗದಲ್ಲಿ ಯಾವ ಯಾವ ಮಾಲಗಾಡಿಗಳು ಬಿದ್ದವು. ಹಳಿಯ ಮೇಲಿಂದ ಗಾಡಿಗಳು ಜಾರಿದವು ಎಂಬದಕ್ಕೆ "ಫಿಶ್‌ಪ್ಲೇಟ್" ತೆಗೆದದ್ದೇ ಕಾರಣ. ಫಿಶ್ ಪ್ಲೇಟ ತೆಗೆಯುವ ಪಾನಾಗಳು ವೇಲಣಕರ ಧನಿ ಅವರ ಕಾರಖಾನೆಯಲ್ಲಿ ತಯಾರಾಗುತ್ತಿದ್ದವು. ಫಿಶ್‌ಫ್ಲೇಟ್ಸ ತೆಗೆಯುವ ಪಾನಾ ಸಣ್ಣವು ಇದ್ದರೆ ನಡೆಯುವದಿಲ್ಲ. ಅವು ಬಂದೂಕಿನಷ್ಟು ಉದ್ದವಿರುತ್ತವೆ. ಅವುಗಳನ್ನು ಸಾಯಕಲ್ಲ ತ್ರಿಕೋನಕ್ಕೆ ಕಟ್ಟಿ ಸಾಯಂಕಾಲ ಆರು ಏಳು ಗಂಟೆಯ ಸುಮಾರಿಗೆ ನಾನು ಅವುಗಳನ್ನು ಶ್ರೀ ಅಭ್ಯಂಕರರ ಮನೆಗೆ ತರುತ್ತಿದ್ದೆ. ಯಾಕಂದರೆ ಆ ಕಾಲಕ್ಕೆ ಯಾರಿಗೂ ಯಾವುದೇ ತರಹದ ಸಂಶಯ ಬರು

ವದಿಲ್ಲ. ಅಭ್ಯಂಕರರ ಮನೆಯಲ್ಲೂ ಸಹ ಈ ವಿಷಯ ಯಾರಿಗೂ ಗೊತ್ತಿರಲಿಲ್ಲ. ಅಭ್ಯಂಕರರ ಎಲ್ಲಕ್ಕೂ ಚಿಕ್ಕ ಚಿರಂಜೀವ ಹಣುಮಂತರಾವ ಅರ್ಥಾತ ವಸಂತರಾವ ಅವರು ಆಗ **Ph. D.** ಸಲುವಾಗಿ ಪ್ರಬಂಧ ಬರೆಯುತ್ತಿದ್ದರೆಂದು ನನಗೆ ಜ್ಞಾಪಕವಿದೆ.

ಬೆಳಗಾಂವಿಯಲ್ಲಿ ನಿಶ್ಚಿತ ತಾರೀಖಿಗೆ ಗುಪ್ತ ಪತ್ರಿಕೆಗಳು ಹಂಚಲ್ಪಡುತ್ತಿದ್ದ ವೆಂಬುದನ್ನು ನೋಡಿ ಪೋಲೀಸರು ಬೆಳಗಾಂವಿ, ನಿಪ್ಪಾಣಿಗಳಲ್ಲಿ ಶೋಧ ಪ್ರಾರಂಭ ಮಾಡಿದರು. ಜನರನ್ನು ಬಂಧಿಸತೊಡಗಿದರು. ಹೊಡೆಯ ಹತ್ತಿದರು. ಪ್ರಾ. ಶಹಾ ಅವರ ಮುದ್ರಣಾಲಯವನ್ನು ಜಪ್ತಮಾಡಿ ಅವರನ್ನು ಬಂಧಿಸಿದ ಮೇಲೆ ಸಹ ಈ ಗುಪ್ತಪತ್ರಿಕೆಗಳು ಅವರಲ್ಲಿ ಮುದ್ರಿಸಲ್ಪಡುತ್ತಿದ್ದವೆಂಬುದು ಪೋಲೀಸರಿಗೆ ಗೊತ್ತಾಗಲಿಲ್ಲ.

ಒಂದು ದಿವಸ ಮಧ್ಯರಾತ್ರಿಯಲ್ಲಿ ಫಿಶ್‌ಪ್ಲೇಟುಗಳ ಬೋಲ್ಟಿನ ಅಳತೆ ತೆಗೆದುಕೊಳ್ಳಬೇಕೆಂದು ನಾನು ಮತ್ತು ಧನಿ ವೇಲಣಕರ ಇಬ್ಬರೂ ಕಪ್ಪುಬಟ್ಟೆಗಳನ್ನು ಹಾಕಿಕೊಂಡು ಅವರ "ಗಜಾನನ ಮಿಲ್ಲಿನ" ಹಿಂಭಾಗದ ರೇಲ್ವೆ ಹಳಿಯ ಬಳಿ ಹೋಗಿದ್ದೆವು. ನಾವು ಬೋಲ್ಟಗಳ ಅಳತೆ ತೆಗೆದುಕೊಂಡೆವು. ಅಷ್ಟರಲ್ಲಿ ಒಂದು ಮಾಲಗಾಡಿ ಬರುವದು ಕಾಣಿಸಿತು. ಆ ಗಾಡಿಯ ಬೆಳಕಿನಲ್ಲಿ ನಾವು ಕಾಣಿಸುತ್ತೇವೆ. ನಮ್ಮನ್ನು ಪೋಲೀಸರು ಹಿಡಿಯುತ್ತಾರೆ ಎಂದು ನನ್ನ ಜೊತೆಗಾರರಿಗೆ ಅನಿಸಿತು. ನಾನು ಅವರಿಗೆ ಹೇಳಿದೆ: "ಗಾಡಿಯ ಬೆಳಕಿನ ಮುಂದ ನೀವು ಎಷ್ಟು ಓಡಬಹುದು? ನಾವು ಈ ಸೇತುವೆಯ ಕೆಳಗೆ ಕುಳಿತುಕೊಳ್ಳುವಾ. ಇದೀಗಲೇ ಈ ಗಾಡಿ ಈ ಪೂಲಿನಮೇಲಿಂದ ಬೀಳುತ್ತದೆಯೆ ? ಅಥವಾ ಜರಿಯುತ್ತದೆಯೇ ? ಎಂದು ನಾನು ಪೂಲಿನ ಕೆಳಗೆ ಕುಳಿತೆ. ಧನಿ ವೇಲಣಕರ ಹತ್ತಿರದ ಹೊಲದಲ್ಲಿ ಅಂದರೆ ಬೆಳೆಯಲ್ಲಿ ಅಡ್ಡಾದರು. ಮಾಲಗಾಡಿ ಹೊರಟು ಹೋಯಿತು. ಫಿಶ್ ಪ್ಲೇಟುಗಳನ್ನು ಬಹಳ ಗಟ್ಟಿಯಾಗಿ ಕೂಡ್ರಿಸಿರುತ್ತಾರೆ. ಅದನ್ನು ತೆಗೆಯುವದು ಅಷ್ಟೊಂದು ಸುಲಭವಿರುವದಿಲ್ಲ. ಮುಂದೆ ಫಿಶ್‌ಪ್ಲೇಟ್ಸ ಕೊರೆಯುವ ವಿಶಿಷ್ಟ ಪ್ರಕಾರದ ಕರಗಸಗಳು ದೊರೆಯಹತ್ತಿದವು. ಈ ಕರಗಸಗಳು ಕಿರ್ಲೋಸ್ಕರ ವಾಡೀ ಕೆಲಸಗಾರರಿಂದ ದೊರೆಯಹತ್ತಿದವು.ನನ್ನೊಬ್ಬ ಮಿತ್ರ ಮಿರಜಕರರ ಹಿರಾಬಾಗದ ಕಾರಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಈ ಕಾಲಕ್ಕೆ ಅವನಿಂದಲೂ ನನಗೆ ಸಾಕಷ್ಟು ಸಹಾಯವಾಯಿತು.

ಇಂಥ ಕೆಲಸದಲ್ಲಿ ಬಹಳ ವೆಚ್ಚ ಮಾಡಬೇಕಾಗುತ್ತದೆ. ಮುಂಬೈಯಲ್ಲಿ ನನಗೆ ದೊರೆತ ೩೦೦ ರೂ. ಗಳು ಯಾವಾಗಲೋ ವೆಚ್ಚವಾಗಿ ಹೋಗಿದ್ದವು. ನನ್ನ ಒಬ್ಬ ಬಾಲಮಿತ್ರ ಡಾ. ಗೋಸಾವಿ ಬಿ. ಟಿ. ಆ ಕಾಲಕ್ಕೆ ಮಿರಜ ಸಂಸ್ಥಾನದಲ್ಲಿ ಚೀಫ್ ಮೆಡಿಕಲ್ ಆಫೀಸರ್ ಆಗಿದ್ದರು. ನಾನು ಆಗ ಯಾವ ಉದ್ಯೋಗದಲ್ಲಿ ತೊಡಗಿದ್ದೇನೆಂಬುದು ಅವರಿಗೆ ಗೊತ್ತಿತ್ತು. ಅವರು ವಿಚಾರದಿಂದ ಉಜ್ವಲ ರಾಷ್ಟ್ರೀಯ ವೃತ್ತಿಯವರು. ಅವರು ನನಗೆ ತಿಂಗಳಿಗೆ ೧೦೦ ರೂ. ಕಳಿಸುತ್ತಿದ್ದರು. ಶ್ರೀ ರಂಗರಾವ ದಿವಾಕರರು ಸ್ವತಃ ಮಿರಜಿಗೆ ಬಂದಾಗ ಒಮ್ಮೆ ನನಗೆ ೨೦೦ ರೂ. ಕೊಟ್ಟಿದ್ದರು.

ನಿಪ್ಪಾಣಿಯ ಮುಂದೆ ಘಟಪ್ರಭಾದಲ್ಲಿ ಬಳಿಯ ಕಾರಖಾನೆ ತೆಗೆಯಬೇಕೆಂದಿದ್ದ ಹೀರಾಚಂದ ಶಹಾ ಅವರು ನನಗೆ ಗುಪ್ತ ಪತ್ರಿಕೆಗಳನ್ನು ಮುದ್ರಿಸುವ ಎಲ್ಲ ವೆಚ್ಚವನ್ನು ಕೊಟ್ಟರು. ಶ್ರೀ ಅಭ್ಯಂಕರರ ಮನೆಯಲ್ಲಿ ನನ್ನ ಭೆಟ್ಟಿಗೆ ಬಂದ ಅನೇಕರು ನನಗೆ ಕೆಲವೊಂದು ಆರ್ಥಿಕ ಸಹಾಯ ಕೊಟ್ಟು ಹೋಗುತ್ತಿದ್ದರು. ಆದ್ದರಿಂದ ಹಣದ ತೊಂದರೆ ನನಗೆ ಎಂದೂ ಆಗಲಿಲ್ಲ. ನನಗೆ ಎಲ್ಲರ ಸಹಾನುಭೂತಿ ಇತ್ತು. ಆ ಕಾಲಕ್ಕೆ ಸಾಂಗಲಿಯಲ್ಲಿ ಶ್ರೀ ಲಕ್ಷ್ಮಣರಾವ ಗಾಡಗೀಳ ಅವನ ವಿಶೇಷ ಸಹಾನುಭೂತಿ ಮತ್ತು ಸಹಾಯ ಭೂಮಿಗತ ಕಾರ್ಯಕರ್ತರಿಗೆ ದೊರೆಯುತ್ತಿತ್ತು. ಅವರು ಯುರೋಪಿಯನ್ ಡ್ರೆಸ್ ಹಾಕಿದರೆ ಸಾಹೇಬರಂತೆಯೇ ಕಾಣುತ್ತಿದ್ದರು. ಅವರ ಮೈ ಬಣ್ಣವೇ ಅಂತಹದು. ಕಾಂಗ್ರೆಸ್ ಭೂಮಿಗತ ಕಾರ್ಯಕರ್ತರಿಗೆ ಶ್ರೀ ಲಕ್ಷ್ಮಣರಾವ ಗಾಡಗೀಳ ಅವರಿಂದ ಎಲ್ಲ ರೀತಿಯಿಂದಲೂ ಸಹಾಯ ದೊರೆಯುತ್ತಿತ್ತು. ಸಾಂಗಲಿ ಹಾಯಕೋರ್ಟ ಜಡ್ಜ ಶ್ರೀ ಮಾಧವರಾವ ಅಠವಲೆ ಅವರ ಸಹಾಯ ಹಾಗೂ ಮಾರ್ಗದರ್ಶನ ನನಗೆ ಲಭಿಸುತ್ತಿತ್ತು.

---

೨ | ಗಾಂಧೀಜಿಯವರು ಮಾಡಿದ ಸ್ಪಷ್ಟೀಕರಣ ಮತ್ತು ಕೊಟ್ಟ ಎಚ್ಚರಿಕೆ

ನಾನು "ಗೋವಾಲಿಯಾ ಟ್ಯಾಂಕ" ಮೈದಾನದಲ್ಲಿ ಕೂಡಿದ ಅಖಿಲಭಾರತ ಕಾಂಗ್ರೆಸ ಕಮೀಟಿಯ ಅಧಿವೇಶನದ ಸ್ಮರಣೆ ಮಾಡಿ ಮಾಡಿದಂತೆ ಆಗಿನ ದೃಶ್ಯ ನನ್ನ ಕಣ್ಣ ಮುಂದೆ ಕಟ್ಟುತ್ತದೆ. ಆ ಕಾಲಕ್ಕೆ ಕೇಳಿದ ಭಾಷಣಗಳು ನಾನು ಈಗ ಕೇಳುತ್ತಿರುವಂತೆಯೇ ನನ್ನ ಕಿವಿಯಲ್ಲಿ ಧ್ವನಿತವಾಗುತ್ತಿವೆ. ಆಗಿನ ದೃಶ್ಯವೆಲ್ಲ ನನ್ನ ಕಣ್ಣ ಮುಂದೆ ಕಟ್ಟುತ್ತದೆ. ಆದರೂ ನನ್ನ ಎಲ್ಲ ಸ್ಮರಣೆಗಳನ್ನು ಆಗಿನ ವೃತ್ತಪತ್ರ ಹಾಗೂ ಇತರ ಪುಸ್ತಕಗಳಿಗೆ ಹೋಲಿಸಿ ನೋಡಿದ್ದೇನೆ. ಮುಖ್ಯ ಗೊತ್ತುವಳಿಯನ್ನು ಅಧಿವೇಶನದ ಮುಂದೆ ಸ್ವೀಕಾರ ಮಾಡುವ ಪೂರ್ವದಲ್ಲಿ ಗಾಂಧೀಜಿಯವರು ಒಂದು ಚಿಕ್ಕ ಭಾಷಣ ಮಾಡಿ ಸ್ಪಷ್ಟೀಕರಣ ಮಾಡಿದರು. ಗಂಭೀರ ಎಚ್ಚರಿಕೆಯನ್ನೂ ಕೊಟ್ಟರು. ಗಾಂಧೀಜಿ. ಸದಸ್ಯರಿಗೂ. ಶ್ರೋತೃಗಳಿಗೂ ಈ ರೀತಿ ವಿನಂತಿ ಮಾಡಿದರು: "ನಿಮ್ಮ ಮುಂದೆ ಬರುವ ಗೊತ್ತುವಳಿಗೆ ನೀವು ಮತಕೊಡುವ ಪೂರ್ವದಲ್ಲಿ ನನ್ನ ದೃಷ್ಟಿಯಿಂದ ವಿಚಾರ ಮಾಡಬೇಕು. ಅಂದರೆ ಮಾತ್ರ ನೀವು ಆ ಗೊತ್ತುವಳಿಯನ್ನು ಕಾರ್ಯರೂಪದಲ್ಲಿ ತರಬಹುದು. ಅನೇಕರು ಇಂದಿನ ಗೊತ್ತುವಳಿಯ ಸ್ವರೂಪ ನೋಡಿ ನನ್ನನ್ನು ಕೇಳುತ್ತಾರೆ: "ನೀವು ೧೯೨೦ ರ ಪೂರ್ವದಲ್ಲಿ ಇದ್ದಂತೆಯೇ ಇರುವಿರಾ ?" ಅದಕ್ಕೆ ನನ್ನ ಸ್ಪಷ್ಟ ಉತ್ತರ ಇಷ್ಟೆ: "ನಾನು ೧೯೨೦ ನೇ ಇಸ್ವಿ ಪೂರ್ವದಲ್ಲಿ ಯಾವ ರೀತಿ ಇದ್ದೆನೋ ಅದೇ ರೀತಿ ಇದ್ದೇನೆ. ನನ್ನ ವಿಚಾರದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಅಹಿಂಸೆಯ ಮೇಲಿನ ನನ್ನ ವಿಶ್ವಾಸ ಎಷ್ಟೂ ಕಡಿಮೆಯಾಗಿಲ್ಲ. ಇಷ್ಟೇ ಅಲ್ಲ–ತಿಲಮಾತ್ರ ಅಧಿಕವೇ ಆಗಿದೆ. ನನ್ನ ಮೊದಲಿನ ಭಾಷಣ. ಲೇಖನ ಮತ್ತು ಇಂದಿನ ಗೊತ್ತುವಳಿ–ಇವುಗಳಲ್ಲಿ ಎಳ್ಳಷ್ಟೂ ವಿರೋಧ ಅಥವಾ ವ್ಯತ್ಯಾಸವಾಗಿಲ್ಲ. ಆದ್ದರಿಂದ ಯಾರಿಗೆ ಅಹಿಂಸೆಯ ಮೇಲಿನ ವಿಶ್ವಾಸ ಹಾರಿ ಹೋಗಿದೆಯೋ ಅಥವಾ ಅಹಿಂಸೆಗೆ ಬೇಸರ ಬಂದಿರುವದೋ ಅಂಥವರು ಈ ಗೊತ್ತುವಳಿಗೆ ಅನುಕೂಲ ಮತ ಕೊಡಬಾರದು."

ಗಾಂಧೀಜಿ ಈ ಹೊತ್ತಿಗೆ ಹೆಚ್ಚು ಗಂಭೀರವಾಗಿದ್ದರು. ತಮ್ಮ ಅಹಿಂಸೆಯ ಮೇಲಿನ ನಿಷ್ಠೆಯನ್ನು ವ್ಯಕ್ತಪಡಿಸುತ್ತ ಅವರು ಹೇಳಿದರು: "ಪರಮಾತ್ಮನು ನನ್ನ ಕೈಯಲ್ಲಿ ಅಹಿಂಸೆಯಂಥ ಶ್ರೇಷ್ಠ ಶಸ್ತ್ರವನ್ನು ಕೊಟ್ಟಿದ್ದಾನೆ. ಇದು ನನ್ನ ಮತ್ತು ನನ್ನ ಅಹಿಂಸೆಯ ಅಗ್ನಿಪರೀಕ್ಷೆಯೇ ಆಗಿದೆ ಎಂಬುದನ್ನು ನಾನು ಪ್ರತ್ಯಕ್ಷ ನೋಡುತ್ತಿದ್ದೇನೆ. ಹಿಂಸೆ ತಾಂಡವವಾಡುತ್ತಿರುವ ಈ ಕಾಲದಲ್ಲಿ ನನ್ನ ಅಹಿಂಸೆಯ ಮತ್ತು ನನ್ನ ಬುದ್ಧಿಮತ್ತೆಯ ಉಪಯೋಗ ನಾನು ಮಾಡದೆ ಹೋದರೆ. ದೇವರಿಗೆ ನಾನು ಅಪರಾಧಿ

ಯಾದೇನು. ದೇವರು ನನ್ನನ್ನು ಕ್ಷಮಿಸಲಾರ. ದೇವರ ಈ ಕೊಡುಗೆಗೆ ನಾನು ಅಪಾತ್ರನೆಂದು ಸಿದ್ಧವಾದೀತು".

ಕಾಂಗ್ರೆಸ್ ಭೂಮಿಕೆಯನ್ನು ಸ್ಪಷ್ಟಮಾಡುತ್ತ ಗಾಂಧೀಜಿ ನುಡಿದರು: ನಮಗೆ ಅಧಿಕಾರದ ಲೋಭವಾಗಲಿ, ವ್ಯಾಮೋಹವಾಗಲಿ ಇಲ್ಲ; ಇರಲೂ ಬಾರದು. ಕೇವಲ ದೇಶದ ಸ್ವಾತಂತ್ರ್ಯಕ್ಕಾಗಿಯೇ ಈ ಹೋರಾಟವಿದೆ. ಸ್ವಾತಂತ್ರ್ಯ ಯುದ್ಧದ ಅಹಿಂಸಕ ಸೈನಿಕ ಸ್ವಂತದ ಸಲುವಾಗಿ ಏನನ್ನೂ ಮಾಡಬಾರದು. ಸ್ವಾತಂತ್ರ್ಯ ದೊರೆತ ನಂತರ ಆ ಸ್ವರಾಜ್ಯ, ಆ ಅಧಿಕಾರ ಯಾರ ಕೈಯಲ್ಲಿ ಹೋಗುತ್ತದೆಂಬ ಬಗ್ಗೆ ಕಾಂಗ್ರೆಸ್ ಅಲಿಪ್ತ ಹಾಗೂ ಉದಾಸೀನವಾದೀತು. ಇಂದಿನ ಕಾಂಗ್ರೆಸ್ಸಿನಲ್ಲಿ ಯಾರ ಹೆಸರಿಲ್ಲವೋ ಅಂಥವರ ಕೈಯಲ್ಲಿ ಸಹ ಅಧಿಕಾರ ಹೋಗುವದು ಸಾಧ್ಯವಿದೆ. ಆ ಬಗ್ಗೆ ಯಾವ ಕಾಂಗ್ರೆಸ್ಸಿಗನಿಗೂ ಆಕ್ಷೇಪ ತೆಗೆದುಕೊಳ್ಳಲು ಬರಲಾರದು. ಜಾತೀಯವಾದದಿಂದ ಕಾಂಗ್ರೆಸ್ ಅತಿ ದೂರವಿರುವದು. ಕಾಂಗ್ರೆಸ್ ಇದುವರೆಗೆ ರಾಷ್ಟ್ರದಷ್ಟೇ ವ್ಯಾಪಕ ದೃಷ್ಟಿಯನ್ನಿಟ್ಟು ಕೊಂಡಿದೆ.

ಅಹಿಂಸೆಯನ್ನು ಕುರಿತು ಗಾಂಧೀಜಿ ಅಂದರು: "ನನಗೆ ಸ್ವಲ್ಪ ಸ್ಪಷ್ಟ ಮಾತಾಡುವದಿದೆ. ವಿರೋಧಿ ಮತದ ವಿಚಾರಕರೂ ನನ್ನ ಕಣ್ಣ ಮುಂದೆ ಇರುವರು. ನಮ್ಮ ಕಾಂಗ್ರೆಸ್ಸಿನ ಮತ್ತು ನನ್ನ ಈ ಅಹಿಂಸೆಯು ನಿಜವಾದ ಅಹಿಂಸೆಯಿಂದ ಎಷ್ಟು ದೂರವಿದೆ ಎಂಬುದರ ಅರಿವು ನನಗಿದ್ದಷ್ಟಕ್ಕಿಂತಲೂ ಇತರರಿಗೆ ಬಹಳ ಕಡಿಮೆ ಇದೆ. ಆ ಪ್ರಮಾಣದಲ್ಲಿ ಯಶಸ್ಸಿನ ವಿಷಯದಲ್ಲಿ ಪರಿಣಾಮ ಮತ್ತು ಸಮಯಗಳಲ್ಲಿ ಕೂಡ ತಾತ್ವಿಕ ದೃಷ್ಟಿಯಿಂದ ವ್ಯತ್ಯಾಸ ಆಗಿಯೇ ಆಗುತ್ತದೆ. ಆದರೂ ಇದರಲ್ಲಿ ನಮಗೆ ಯಶ ದೊರತೇ ತೀರುವದು. ನಾನು ಅದನ್ನು ಈಶ್ವರನ ಕೃಪೆ ಎಂದೇ ತಿಳಿಯುತ್ತೇನೆ. ಅಹಿಂಸೆಗೆ ಶಾಶ್ವತವಾದ ಪರಾಜಯವೆಂಬುದು ಎಂದೂ ಗೊತ್ತಿಲ್ಲ. ನಾವು ನಮ್ಮ ಶಕ್ತಿ ಮತ್ತು ಬುದ್ಧಿಮತ್ತೆಯ ಪ್ರಕಾರ ಅಹಿಂಸೆಗೆ ಪ್ರಾಮಾಣಿಕರಾಗಿರೋಣ. ಅಂದರೆ ಅಂತಿಮ ಜಯ ನಮ್ಮದೇ ಎಂಬುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

ನಮ್ಮ ಈ ಸ್ವಾತಂತ್ರ್ಯದ ಅಂತಿಮ ಯುದ್ಧ ಕುರಿತು ಗಾಂಧೀಜಿ ಹೇಳಿದರು: "ಸಾಧ್ಯ, ಸಾಧನದ ವಿಚಾರ ಮಾಡುವಾಗ ನನಗೆ ಈ ರೀತಿ ಅನಿಸುತ್ತದೆ. ನಮ್ಮ ಸ್ವಾತಂತ್ರ್ಯ ಯುದ್ಧದಷ್ಟು ಪವಿತ್ರ ಮತ್ತು ಪ್ರಜಾಪ್ರಭುತ್ವದ ಯುದ್ಧವು ಜಗತ್ತಿನ ಇತಿಹಾಸದಲ್ಲಿ ಬೇರೊಂದಿಲ್ಲ. ಈ ಯುದ್ಧದೊಳಗಿನ ಚಿಕ್ಕ ದೊಡ್ಡ ಪ್ರತಿಯೊಬ್ಬ ಸೈನಿಕನೂ ತನ್ನ ಮುಂದಾಳು ತಾನೇ ಆಗಿದ್ದಾನೆ. ಈ ಯುದ್ಧದಲ್ಲಿ 'ಹಿಂದಿ' ಎಂದೇ ನಾವೆಲ್ಲರೂ ಭಾಗ ತೆಗೆದುಕೊಳ್ಳಬೇಕೆಂದು ನಾನು ಆವ್ಹಾನಿಸುತ್ತೇನೆ. ಈ ಮತ್ತು ಇನ್ನೂ ಇದರ ಪಥ್ಯ (ನಿಯಮಗಳನ್ನು) ಮಾತ್ರ ಪಾಲಿಸಿದರೆ ಈ ಯುದ್ಧದ ಶ್ರೇಷ್ಠತ್ವ ಮತ್ತು ಪಾವಿತ್ರ್ಯಗಳನ್ನು ನಾವು ಕಾಯ್ದುಕೊಳ್ಳಬಹುದು."

ಇಂದು ಭಾರತದ ಸಾಮಾನ್ಯ ಜನತೆಯಲ್ಲಿ ಇಂಗ್ಲೀಷರ ವಿಷಯಕ್ಕೆ ದ್ವೇಷ ಬುದ್ಧಿ ಹರಡಿದುದರ ಉಲ್ಲೇಖಮಾಡಿ ಗಾಂಧೀಜಿ ಮಾತಾಡಿದರು: "ಜನರಲ್ಲಿ ಇಂಗ್ಲೀ

ಷರ ವಿಷಯಕ್ಕೆ ದ್ವೇಷಬುದ್ಧಿ ಇಂದು ತುಂಬಿ ತುಳುಕುತ್ತಿರುವದನ್ನು ನಾನು ನೋಡುತ್ತಿದ್ದೇನೆ. ಒಂದು ವೇಳೆ ಜಪಾನದ ಆಧಿಪತ್ಯ ಭಾರತದ ಮೇಲೆ ಬಂದರೂ ನಡೆದೀತು. ಆದರೆ ಈ ಬ್ರಿಟಿಶರು ಇಲ್ಲಿಂದ ಹೊರಟು ಹೋಗಲಿ ಎಂದು ಜನರು ಮಾತಾಡುತ್ತಿರುವದನ್ನು ನಾನು ಬಲ್ಲೆ. ಈ ವೃತ್ತಿ ಈ ಯುದ್ಧಕ್ಕಂತೂ ಹಾನಿಕಾರಕವಿದೆ. ಇದು ನಿಜವಾದ ಸತ್ಯಾಗ್ರಹಿಯ ದೃಷ್ಟಿಯಲ್ಲ. ಒಂದು ಗುಲಾಮಗಿರಿಯನ್ನು ಬಿಟ್ಟು ಇನ್ನೊಂದು ಗುಲಾಮಗಿರಿಯನ್ನು ಸ್ವೀಕರಿಸಿದಂತಿದೆ. ಈ ಯುದ್ಧದಲ್ಲಿ ಇಂಥ ವೃತ್ತಿಗೆ ಸ್ಥಾನವಿಲ್ಲ. ಈ ವೃತ್ತಿಯನ್ನು ತ್ಯಜಿಸಲೇ ಬೇಕು. ನಮ್ಮ ಯುದ್ಧ ಬ್ರಿಟಿಶರ ವಿರುದ್ಧವಿರದೇ ಅವರ ಸಾಮ್ರಾಜ್ಯವಾದದ ವಿರುದ್ಧವಿದೆ. ಭಾರತದಿಂದ ಬ್ರಿಟಿಶರ ಸತ್ತೆ ಹೊರಗೆ ಹಾಕುವ ನಮ್ಮ ನಿರ್ಧಾರ ಕ್ರೋಧೋತ್ಪನ್ನವಾದುದಲ್ಲ. ಬ್ರಿಟಿಶರಿಗೆ ಈ ಯುದ್ಧದಲ್ಲಿ ಕೇವಲ ಧನ, ಜನ ಸಹಾಯ ಒದಗಿಸುತ್ತ ಕೂಡ್ರುವದು ಭಾರತದಂಥ ರಾಷ್ಟ್ರಕ್ಕೆ ಶೋಭಿಸಲಾರದು. ನಾವು ಸ್ವತಂತ್ರರಾಗದೇ ಈ ಯುದ್ಧ ನಮ್ಮದೇ ಎಂದು ನಮಗೆ ಅನಿಸಲಿಕ್ಕಿಲ್ಲ. ಆ ರೀತಿ ನಮಗೆ ಅನಿಸದ ಹೊರತು ನಮ್ಮ ದೇಶದಲ್ಲಿ ನಿಜವಾದ ಸ್ವಾರ್ಥತ್ಯಾಗ, ಶೌರ್ಯದ ಭಾವನೆಗಳು ಹೊರಹೊಮ್ಮಿ ಬರಲಾರವು. ನನ್ನ ಮನಸ್ಸಿನಲ್ಲಿ ಕೇವಲ ಬ್ರಿಟಿಶರ ವಿಷಯಕ್ಕೇ ಏಕೆ— ಯಾರ ವಿಷಯಕ್ಕೂ ಎಂದೂ ದ್ವೇಷವಿದ್ದಿಲ್ಲ ಇಂದಿಗೂ ಇರುವುದಿಲ್ಲ. ಬ್ರಿಟಿಶಸತ್ತೆಯನ್ನು ಹಿಂದುಸ್ಥಾನದಿಂದ ಹೊರಗೆ ಹಾಕುವ ಈ ಕಾಲಕ್ಕೂ ಕೂಡ ನಾನು ಮೊದಲಿಗಿಂತಲೂ ಹೆಚ್ಚು ಅವರ ಸಮೀಪದ ಮಿತ್ರನಾಗಿದ್ದೇನೆ. ಅವರು ಸಂಕಟದಲ್ಲಿ ಸಿಕ್ಕಿರುವದೇ ಇದಕ್ಕೆ ಕಾರಣ. ಅವರು ಇದುವರೆಗೆ ಮಾಡಿದ ತಪ್ಪುಗಳೊಳಗಿಂದ ಅವರನ್ನು ಪಾರು ಮಾಡುವದು ನನ್ನಂಥ ಅವರ ಮಿತ್ರನ ಆದ್ಯ ಕರ್ತವ್ಯವಾಗಿದೆ. ಅವರು ದಂಡೆಯೊಂದರ ಕಟ್ಟಕಡೆಯ ಅಂಚಿನಲ್ಲಿ ನಿಂತಿದ್ದಾರೆ. ಆದ್ದರಿಂದಲೇ ನಾನು ಮಿತ್ರತ್ವದ ಕೈಯನ್ನು ಮುಂದೆ ಚಾಚಿದ್ದೇನೆ. ಅವರು ಸಿಟ್ಟಿನಿಂದ ಅದನ್ನು ಬಿಸುಡಿ ಮಿತ್ರತ್ವದ ಸಂಬಂಧ ಕಡಿದುಕೊಂಡರೆ ಅದು ಅವರಿಗೇ ದೊಡ್ಡ ಗಂಡಾಂತರವಿದೆ. ಈ ಪ್ರಚಂಡ ಯುದ್ಧ ಪ್ರಾರಂಭ ಮಾಡುವಾಗ ನನ್ನ ಮನಸ್ಸಿನಲ್ಲಿ ಯಾರ ವಿಷಯಕ್ಕೂ ದ್ವೇಷ ಭಾವನೆ ಇರುವುದಿಲ್ಲ. ಅದು ನಮ್ಮಲ್ಲಿಯ ಯಾರ ಮನಸ್ಸಿನಲ್ಲಿಯೂ ಇರಕೂಡದು."

ಗಾಂಧೀಜಿಯವರ ಸ್ಪಷ್ಟೀಕರಣ ಹಾಗೂ ಗಂಭೀರ ಎಚ್ಚರಿಕೆಯ ಭಾಷಣ ಮುಗಿದ ನಂತರ ನೆರೆದ ಜನರು ಚಪ್ಪಾಳೆ ಹೊಡೆಯಲಿಲ್ಲವೆಂದು ನನಗೆ ಜ್ಞಾಪಕವಿದೆ. ಗಾಂಧೀಜಿಯವರ ಈ ಚಿಕ್ಕ ಭಾಷಣ ಜನರನ್ನು ಇಷ್ಟೊಂದು ಪ್ರಭಾವಿತರನ್ನಾಗಿ ಮಾಡಿತ್ತು. ಈ ಭಾಷಣದಿಂದ ಪ್ರತಿಯೊಬ್ಬನೂ ತನ್ನ ಮುಂದಿನ ಕರ್ತವ್ಯದ ಸಲುವಾಗಿ ವಿಚಾರ ಮಗ್ನನಾದಂತೆ ನನಗೆ ತೋರಿತು. ಸೇನಾಪತಿ ಬಾಪಟ ಅವರೂ ಅದೇ ವಿಚಾರದಲ್ಲಿ ಮಗ್ನರಾಗಿದ್ದರು. ಸ್ವಾತಂತ್ರ್ಯದ ರಾಷ್ಟ್ರೀಯ ಯುದ್ಧದ ಅಂತಿಮ ಪರ್ವದಲ್ಲಿ ನಾವು ಪದಾರ್ಪಣ ಮಾಡುತ್ತಿದ್ದೇವ ಎಂದೇ ಎಲ್ಲರಿಗೂ ಭಾಸವಾಗುತ್ತಿತ್ತು. ಸರಕಾರದೊಂದಿಗೆ ಹೊಸದಾಗಿ ನಡೆಯಬಹುದಾದ ಆ ಚರ್ಚೆಯಲ್ಲಿ ಇನ್ನೂ ಕೆಲವು ದಿನ ಕಳೆಯಬಹುದೆಂದು ಗಾಂಧೀಜಿಯ ಗ್ರಹಿಕೆ ಇತ್ತು. ಆದರೂ ಯಾರಿಗೆ ಗೊತ್ತು. ತಮ್ಮ

ಈ ಗ್ರಹಿಕೆ ಸುಳ್ಳಾದರೆ ಜನರಿಗೆ ಮುಂದಿನ ಮಾರ್ಗ ಸ್ಪಷ್ಟವಿರಬೇಕೆಂದು ಗಾಂಧೀಜಿ ಈ ಸ್ಪಷ್ಟೀಕರಣವನ್ನೂ ಎಚ್ಚರಿಕೆಯನ್ನೂ ಕೊಟ್ಟುಬಿಟ್ಟರು. ಅವರ ಕಾರ್ಯ ನೂರಕ್ಕೆ ನೂರು ಯಶಸ್ವಿಯಾಯಿತು. ಪ್ರತಿಸಲದ ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಅಧಿವೇಶನದಂತೆ ಈ ಅಧಿವೇಶನ ಇದ್ದಿದ್ದಿಲ್ಲ ಮತ್ತು ಪ್ರತಿಸಲದ ಗೊತ್ತುವಳಿಯಂತೆ ಈ ಗೊತ್ತುವಳಿಯು ಇರಲಿಲ್ಲ. ಗಾಂಧೀಜಿಯವರ ಈ ಭಾಷಣ ಎಲ್ಲ ಸದಸ್ಯರ ಮನಸ್ಸಿನ ಮೇಲೆ ಈ ಭಾವನೆಯನ್ನು ಮೂಡಿಸಿತ್ತು. ಈ ಅಧಿವೇಶನದ ಮುಂದೆ ಬರುವ ಗೊತ್ತುವಳಿಯ ಕಡೆಗೆ ದೇಶದ ಜನರ ಲಕ್ಷವೆಲ್ಲ ವೇಧಿಸಿತ್ತು. ಇಡೀ ರಾಷ್ಟ್ರ ಪಾರತಂತ್ರ್ಯದ ಶೃಂಖಲೆಯನ್ನು ಕಿತ್ತೊಗೆಯಲು ಕಾತರಗೊಂಡಿತ್ತು. ಜನರ ಉತ್ಸಾಹ ಕೋಡಿವರಿದಿತ್ತು. ಕಾಂಗ್ರೆಸ್ಸಿನಿಂದ ಯಾವದೇ ಆದೇಶ ಬರಲಿ—ಅದನ್ನು ಪ್ರಾಣ ಪಣಕ್ಕೆ ಹಚ್ಚಿ, ಕಾರ್ಯಗತ ಮಾಡಲು ಜನರು ಕಟಿಬದ್ಧರಾಗಿದ್ದರೆಂಬುದು ಕುರುಡನಿಗೂ ಸಹ ಕಾಣಿಸುವಂತಿತ್ತು.

೩

"ಭಾರತದಿಂದ ತೊಲಗಿರಿ" ಗೊತ್ತುವಳಿ ಮತ್ತು ಗಾಂಧೀಜಿಯವರ ಅಹಿಂಸಕ ಬಂಡು

"Quit India" ಅರ್ಥಾತ್ "ಭಾರತದಿಂದ ತೊಲಗಿರಿ" ಎಂಬ ಗೊತ್ತುವಳಿ ಅಧಿವೇಶನದಲ್ಲಿ ಪಾಸಾದ ನಂತರ ಗಾಂಧೀಜೀ ಮೊದಲು ಹಿಂದಿಯಲ್ಲಿ ಆಮೇಲೆ ಇಂಗ್ಲೀಷಿನಲ್ಲಿ ವಿಸ್ತೃತ ಭಾಷಣ ಮಾಡಿದರು. ಈ ಗೊತ್ತುವಳಿಗೆ ಮೂರು ಉಪ ಸೂಚನೆಗಳು ಬಂದಿದ್ದವು; ಹದಿಮೂರು ಸದಸ್ಯರು ಪ್ರತಿಕೂಲ ಮತಕೊಟ್ಟರು. ಉಪ ಸೂಚನೆ ಮಾಡಿದವರಲ್ಲಿ ಇಬ್ಬರು ತಮ್ಮ ಉಪಸೂಚನೆಗಳನ್ನು ತಿರುಗಿ ತೆಗೆದು ಕೊಂಡರು. ಒಬ್ಬ ಸದಸ್ಯರು ಮಾತ್ರ ತಿರುಗಿ ತೆಗೆದುಕೊಳ್ಳಲಿಲ್ಲ. ಇಷ್ಟೇ ಅಲ್ಲದೆ ಅದನ್ನು ಮತಕ್ಕೆ ಹಾಕಬೇಕೆಂಬ ಆಗ್ರಹ ಹಿಡಿದರು. ಪ್ರಚಂಡ ಬಹುಮತದಿಂದ ಆ ಉಪಸೂಚನೆ ತಿರಸ್ಕೃತವಾಯಿತು. ಕಡಕಡಾಟ ಚಪ್ಪಾಳಿಯ ಸಪ್ಪಳದಲ್ಲಿಯೇ "ತರವಿೂಮ ಗಿರಗಯಿ" ಎಂದು ಹೇಳಲಾಯಿತು. ಇದರ ಉಲ್ಲೇಖ ಮಾಡಿಯೇ ಗಾಂಧೀಜಿ ತಮ್ಮ ಭಾಷಣ ಪ್ರಾರಂಭ ಮಾಡಿದರೆಂದು ನನಗೆ ನೆನಪಿದೆ.

"ಈ ಗೊತ್ತುವಳಿಯನ್ನು ಸ್ವೀಕಾರಮಾಡಿದ್ದಕ್ಕಾಗಿ ನಾನು ತಮಗೆ ಆಭಾರಿಯಾಗಿದ್ದೇನೆ. ಈ ಗೊತ್ತುವಳಿ ವಿರೋಧಿಸಿದವರ ಆಭಾರವನ್ನೂ ನಾನು ಮನ್ನಿಸುತ್ತೇನೆ. ಒಬ್ಬ ಸದಸ್ಯರು ತಮ್ಮ ಉಪಸೂಚನೆಯನ್ನು ತಿರುಗಿ ತಗೆದುಕೊಳ್ಳದೆ ಕೊನೆಯವರೆಗೂ ಅದನ್ನು ಮತಕ್ಕೆ ಹಾಕುವವರೆಗೂ ಪಟ್ಟುಹಿಡಿದಿದುದು ನನಗೆ ಸೇರಿತು. ಈ ಗೊತ್ತುವಳಿಗೆ ಪ್ರತಿಕೂಲ ಮತಕೊಟ್ಟ ಹದಿಮೂರು ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ. ತಾವು ತೀರ ಅಲ್ಪ ಮತದವರು; ಜನರು ತಮ್ಮನ್ನು ನೋಡಿ ನಗುತ್ತಾರೆ ಎಂಬುದು ತಮಗೆ ಗೊತ್ತಿದ್ದರೂ. ತಾವು ತಮ್ಮ ಮತವನ್ನು ಎಂದೂ ಬಿಡಬಾರದು. ಇದರಲ್ಲಿ ತಮಗೆ ಜಯ ದೊರಕುವದಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತಿದ್ದರೂ ತಾವು ತಮ್ಮ ಮತಕ್ಕೆ ಅಂಟಿಕೊಂಡಿರಬೇಕು. ಕಳೆದ ಇಪ್ಪತ್ತು ವರ್ಷಗಳಲ್ಲಿ ತಾವು ಇದನ್ನೇ ಕಲಿಯುವ ಪ್ರಯತ್ನ ಮಾಡಿದ್ದೀರಿ. ಈ ಪರೀಕ್ಷೆಯಲ್ಲಿ ಈ ಸಭಾಸದರು ಉತ್ತೀರ್ಣರಾಗಿದ್ದಾರೆ. ಪಂಡಿತ ಜವಾಹರಲಾಲಜಿ ಮತ್ತು ಮೌಲಾನಾ ಆಝಾದ ಇವರ ಭಾಷಣಗಳಿಂದ ಅವರಿಗೆ ಏನು ಬೇಕಾಗಿತ್ತೋ ಅದು ದೊರೆತಿದೆ ಎಂದು ನನಗೆ ಅನಿಸುತ್ತದೆ.

ಕಾಯದ–ಇ–ಆಝಮ್ ಜಿನ್ನಾಸಾಹೇಬ ಮತ್ತು ಅವರ ವಿಚಾರದ ಜನರನ್ನು ಉದ್ದೇಶಿಸಿ, ಗಾಂಧೀಜಿ ಉತ್ತರ ಕೊಡುತ್ತ ಸವಿಮಾತಿನಲ್ಲಿ ಈ ರೀತಿ ಹೇಳಿದರು: "ಕಾಂಗ್ರೆಸ್ಸಿನೊಳಗಿನ ಮುಸಲ್ಮಾನ ಬಂಧುಗಳಿಗೆ ಬಯ್ಯುವ ಕಾರಣವೇನು ? ಅದರಿಂದ

ಯಾರಿಗೆ ಏನು ಲಾಭ ? ಮುಸಲ್ಮಾನ ಬಂಧುಗಳ ಪ್ರಚಂಡ ಬೆಂಬಲ ನಿಮಗಿದೆ ಎಂಬುದೇ ನಿಮ್ಮ ಅಭಿಪ್ರಾಯವಲ್ಲವೇ ? ಅಂದಮೇಲೆ ಕಾಂಗ್ರೆಸ್ಸಿನಲ್ಲಿರುವ ನಾಲ್ಕು ಜನ ಮುಸಲ್ಮಾನರನ್ನು ನೀವು ಏಕೆ ಉಪೇಕ್ಷಿಸಬಾರದು ? ನಿಮ್ಮ ಈ ವರ್ತನೆ ಇಸ್ಲಾಂ ಧರ್ಮಕ್ಕೆ ಅನುಸರಿಸಿ ಇದೆಯೇ ? ನಿಮ್ಮ ಪೈಗಂಬರರು ವಿರೋಧಿ ಜನರಲ್ಲಿ ಯಾವ ರೀತಿ ಕೆಲಸ ಮಾಡಿದ್ದರು ? ನಿಜವಾದ ಇಸ್ಲಾಂ ಧರ್ಮದ ಜನರು ಪೈಗಂಬರರ ವರ್ತನೆಯೇ ತಮ್ಮ ಆದರ್ಶವೆಂದು ತಮ್ಮ ಮುಂದೆ ಇಟ್ಟುಕೊಳ್ಳಬೇಕು."

ಪ್ರಸಿದ್ಧ ಮುತ್ಸದ್ದಿ ರಾಜಗೋಪಾಲಾಚಾರ್ಯ-ರಾಜಾಜಿ ಅವರ ಹೇಳಿಕೆಯ ಉಲ್ಲೇಖಮಾಡಿ, ಅವರಿಗೂ ಗಾಂಧೀಜಿ ತಾತ್ವಿಕ ಆಧಾರಾನುಸಾರವಾಗಿ ಉತ್ತರ ಕೊಟ್ಟರು. ರಾಜಾಜಿ ಅನ್ನುತ್ತಾರೆ : "ಪಾಕಿಸ್ತಾನ ನಿರ್ಮಿತಿಯ ಮೇಲೆ ನನ್ನ ವಿಶ್ವಾಸ ವಿಲ್ಲ. ಆದರೆ ಜಿನ್ನಾಸಾಹೇಬ ಮತ್ತು ಮುಸಲ್ಮಾನ ಬಂಧುಗಳು ಇಂದು ಅದನ್ನು ಕೇಳುತ್ತಿದ್ದಾರೆ. ಅವರ ತಲೆಯಲ್ಲಿ ಅದೊಂದು ಹುಚ್ಚು ಇದೆ. ಇಂದು ಅವರಿಗೆ 'ಆಗಲಿ' ಎಂದು ಏಕೆ ಒಪ್ಪಬಾರದು ? ಪ್ರತ್ಯಕ್ಷವಾಗಿ ಕೊಡ-ತೆಗೆದುಕೊಳ್ಳುವ ಪ್ರಶ್ನೆ ಬಂದಾಗ, ಅದರಲ್ಲಿ ಮುಸಲ್ಮಾನರ ಲಾಭವಿಲ್ಲೆಂದು ಅವರಿಗೇ ಕಂಡುಬರುವದು. ಆಗ ಅವರು ತಮ್ಮ ಬೇಡಿಕೆ ಹಿಂದೆ ತೆಗೆದುಕೊಳ್ಳಬಹುದು."

ರಾಜಗೋಪಾಲಾಚಾರ್ಯರಂಥವರಿಂದ ಬಂದ ಸೂಚನೆಗೆ ಉತ್ತರ ಕೊಡು ವದು ಅಷ್ಟೊಂದು ಸುಲಭವಿರಲಿಲ್ಲ. ರಾಜಾಜಿ ಒಬ್ಬ ಅಸಾಮಾನ್ಯ ಬುದ್ಧಿವಂತ ಪುರುಷರು. ದಾದಾ ಧರ್ಮಾಧಿಕಾರಿಯವರು ಅವರ ಬಗ್ಗೆ ಯಾವಾಗಲೂ ಹೇಳುತ್ತಿರು ತ್ತಾರೆ. "ರಾಜಾಜಿಯ ವ್ಯಕ್ತಿತ್ವ ಎಂದರೆ ವಿದ್ಯಾರಣ್ಯಸ್ವಾಮಿ, ಆಲಿವ್ಹರ ಕ್ರಾಮವೆಲ್, ವಿಷ್ಣುದತ್ತ ಚಾಣಕ್ಯ. ಅವರ ಮಿಶ್ರಣವಾಗಿದೆ. ಒಂದು ಸಲ ಒಂದು ನೃತ್ಯನೋಡಲು ರಾಜಾಜಿಯವರನ್ನು ಯಾರೋ ಕರೆದುಕೊಂಡು ಹೋದರಂತೆ. ರಾಜಾಜಿಯವರೂ ನೃತ್ಯ ನೋಡಲು ಹೋದರು. ನೃತ್ಯದ ಬಗ್ಗೆ ರಾಜಾಜಿಯ ಅಭಿಪ್ರಾಯ ಕೇಳಿದಾಗ ಅವರು ಹೀಗೆ ಹೇಳಿದರಂತೆ :—

"ನೃತ್ಯವೇನೋ ಚನ್ನಾಗಿ ಆಯಿತು. ಆದರೆ ಆಕೆ ಅಷ್ಟಾದರೂ ಬಟ್ಟೆ ಏಕೆ ಧರಿಸಿದ್ದಳೋ ಯಾರಿಗೆ ಗೊತ್ತು ?" ಇದನ್ನು ಕೇಳಿದವರಿಗೆ ನೃತ್ಯದ ಬಗ್ಗೆ ಏನಾದರೂ ಸಮರ್ಥನೆ ಮಾಡಿಕೊಳ್ಳಬೇಕಾಗಿತ್ತು. ರಾಜಾಜಿಯವರು ರಾಮಾಯಣ-ಮಹಾ ಭಾರತಗಳ ಆಳವಾದ ಅಭ್ಯಾಸ ಮಾಡಿರುವರೆಂಬುದು ಅವರಿಗೆ ಗೊತ್ತಿತ್ತು. ಆದ್ದರಿಂದ ಅವರು ಉತ್ತರ ಕೊಟ್ಟರು : "ನಿಮ್ಮ ಶಿವ ಪಾರ್ವತಿಯರು ಸಹ ಇದೇ ರೀತಿ ನೃತ್ಯ ಮಾಡುತ್ತಿದ್ದರೆಂದು ಪುರಾಣದಲ್ಲಿ ಉಲ್ಲೇಖವಿದೆಯಲ್ಲ ?" ಆಗ ರಾಜಾಜಿ ಅವರ ಸಮಾಚಾರ ಚನ್ನಾಗಿ ತೆಗೆದುಕೊಂಡರು. ರಾಜಾಜಿ ಹೇಳಿದರು : "ಮಹಾರಾಯಾ, ಶಿವಪಾರ್ವತಿಯರು ಪ್ರೇಕ್ಷಕರ ಸಲುವಾಗಿ ನೃತ್ಯ ಮಾಡುತ್ತಿರಲಿಲ್ಲ. ಅವರು ತಮ್ಮ ವ್ಯಕ್ತಿಗತ ಆನಂದದಲ್ಲಿ ಮಗ್ನವಾಗುವದಕ್ಕೋಸ್ಕರ ನೃತ್ಯ ಮಾಡುತ್ತಿದ್ದರು. ಅವರಲ್ಲಿ ಅವರು ತಲ್ಲೀನರಾಗುತ್ತಿದ್ದರು."

ಆದರೆ ಇಂಥ ರಾಜಾಜಿಯವರಿಗೆ ಉಪರಿನಿರ್ದಿಷ್ಟ ಸೂಚನೆಗೆ ಸಮರ್ಪಕ ಉತ್ತರ ಕೊಡುವವರಲ್ಲಿ ಸಹ ಗಾಂಧೀಜಿಯವರ ಒಂದು ಕೈ ಮೇಲಾಗಿತ್ತು. ಅವರು ತಮ್ಮ ತತ್ವಕ್ಕನುಸರಿಸಿ ರಾಜಾಜಿಗೆ ಗಂಭೀರವಾಗಿ ಉತ್ತರ ಕೊಟ್ಟರು: "ನಾನು ಯಾವ ಮಾತನ್ನು ಅಸತ್ಯವೆಂದು ತಿಳಿಯುತ್ತೇನೆಯೋ ಅದನ್ನು ಕೆಲವೊಂದು ಕಾಲದ ವರೆಗೆ ಸತ್ಯವೆಂದು ತಿಳಿದು ಇತರರಿಗೂ ಆ ರೀತಿ ತಿಳಿಯಹಚ್ಚುವದು ಯೋಗ್ಯವಲ್ಲ. ಅದೂ ಸಹ ಪ್ರತ್ಯಕ್ಷ ಸಮಯ ಬಂದಾಗ ಅವರು ತಮ್ಮ ಬೇಡಿಕೆಯನ್ನು ತಿರುಗಿ ತೆಗೆದು ಕೊಳ್ಳುತ್ತಾರೆಂಬ ವಿಶ್ವಾಸದ ಮೇಲೆ !! ಅವರ ಬೇಡಿಕೆ ನ್ಯಾಯವಾದದ್ದೆಂದು ನನಗನಿ ಸಿದರೆ ಇಂದೇ ಏಕೆ ಈಗಲೇ ಅದನ್ನು ಅವರಿಗೆ ಕೊಟ್ಟುಬಿಡುವೆನು. ಆದರೆ ಜಿನ್ನಾ ಸಾಹೇಬರಿಗೆ ನಾನು ಹಾಗೆ ಎಂದೂ ಮಾಡಲಾರೆ. ಹಾಗೆ ಮಾಡುವದು ನನ್ನ ವಿಚಾರ ಸರಣಿಯಲ್ಲಿ ಬರುವದೇ ಇಲ್ಲ. ದೇಶದ ಸ್ವಾತಂತ್ರ್ಯ ದೊರಕಿಸುವದಕ್ಕೆ ಮೊದಲು ಹಿಂದೂ–ಮುಸಲ್ಮಾನರಿಬ್ಬರೂ ಒಂದಾಗಬೇಕೆಂಬುದು ಸತ್ಯವಾದ ಮಾತು. ಆದರೆ ನನಗೆ ನನ್ನ ದೇಶದ ಸ್ವಾತಂತ್ರ್ಯ ಇಂದೇ ಈ ಕ್ಷಣಕ್ಕೇ ಬೇಕಾಗಿದೆ. ಜಾತಿ-ಜಾತಿಯೊಳ ಗಿನ ಐಕ್ಯವಾಗುವವರೆಗೆ ದೇಶದ ಸ್ವಾತಂತ್ರ್ಯ ದಾರಿಕಾಯಲಾರದು. ಭಾರತವು ಎಲ್ಲರದೂ ಇದೆ. ಮತಾಧಿಕ್ಯ ದೊರಕಿಸಿ ಭಾರತದ ರಾಜ್ಯ ಮತ್ತು ಅಧಿಕಾರಗಳನ್ನು ತೆಗೆದುಕೊಳ್ಳಲು ಮುಸಲ್ಮಾನರು ಸ್ವತಂತ್ರರಿದ್ದಾರೆ."

ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಇದನ್ನೂ ಸ್ಪಷ್ಟಮಾಡಿದರು. "ಪ್ರತ್ಯಕ್ಷ ಹೋರಾಟ ಇಷ್ಟರಲ್ಲಿಯೇ ಪ್ರಾರಂಭವಾದೀತು ಎಂದಲ್ಲ. ನೀವು ಗೊತ್ತು ವಳಿ ಮಾಡಿ ನನಗೆ ಸರ್ವಾಧಿಕಾರ ಕೊಟ್ಟಿದ್ದೀರಿ, ಅಷ್ಟೇ. ಇನ್ನೂ ಅನೇಕ ಪ್ರಕ್ರಿಯ ಗಳೊಳಗಿಂದ ಈ ಗೊತ್ತುವಳಿ ದಾಟಬೇಕಾಗಿದೆ. ಈ ಮಧ್ಯಂತರ ಕಾಲದಲ್ಲಿ ನೀವು ಏನು ಮಾಡುವವರಿದ್ದೀರಿ ? ನಿಮ್ಮಲ್ಲಿ ಪ್ರತಿಯೊಬ್ಬರೂ ಈ ಹೊತ್ತಿನಿಂದ ಸ್ವತಂತ್ರ ನಿದ್ದೇನೆಂದು ಮನಸ್ಸಿನಲ್ಲಿ ನಿರ್ಧಾರಮಾಡಿ ನಡೆಯಬೇಕು. ಬ್ರಿಟಿಶ ಸಾಮ್ರಾಜ್ಯದ ಗುಲಾಮಗಿರಿಯಲ್ಲಿ ನಾನಿಲ್ಲವೇ ಇಲ್ಲ—ಎಂದು ತಿಳಿಯುವದಷ್ಟೇ ಅಲ್ಲ. ಆದರೆ ನಾನು ಮತ್ತು ನಮ್ಮ ದೇಶ ಸ್ವತಂತ್ರವಾಗಿಯೇ ಬಿಟ್ಟಿದೆ ಎಂದು ವರ್ತಿಸಬೇಕು."

ಸಮಾಜದೊಳಗಿನ ಪ್ರತಿಯೊಂದು ಮಹತ್ವದ ಅಂತಸ್ತಿನ ಜನರನ್ನುದ್ದೇಶಿಸಿ ಗಾಂಧೀಜಿ ಅವರಿಗೆ ಮಾರ್ಗದರ್ಶನ ಮಾಡಿಯೇ ಬಿಟ್ಟಿದ್ದರು. ಒಂದು ವೇಳೆ ತಮ್ಮ ಎಲ್ಲ ಪಕ್ರಿಯಗಳೊಳಗಿಂದ ಹೋಗಲು ಕಾಂಗ್ರೆಸ್ಸು ಅಥವಾ ಗಾಂಧೀಜಿಗೆ ಸಂಧಿ ಅಥವಾ ಸಮಯ ಬ್ರಿಟಿಶ ಸರಕಾರ ಕೊಡದೆ ಇದ್ದರೆ ಅಂಥ ಪ್ರಸಂಗದಲ್ಲಿ ಹೊತ್ತು ಬಂದಲ್ಲಿ ತಮ್ಮ ಸಂಪೂರ್ಣ ಮಾರ್ಗದರ್ಶನ ಮಾಡಿಟ್ಟಿರಬೇಕೆಂದೋ ಏನೋ ಗಾಂಧೀಜಿ ತಮ್ಮ ಭಾಷಣ ಮುಂದುವರಿಸಿದರು.

ಜನರು ಸಾಮ್ರಾಜ್ಯವಾದದ ರಾಜ್ಯಕರ್ತರಿಗೆ ಏನು ಪ್ರಶ್ನಿಸಬೇಕೆಂಬುದನ್ನು ತಾವೇ ಊಹಿಸಿಕೊಂಡು ಗಾಂಧೀಜಿ ಈ ರೀತಿ ಅಂದರು: "ನಾವು ಇದು ವರೆಗೆ ನಿಮ್ಮ ಗುಲಾಮರಿದ್ದೆವು. ಆದರೆ ಇನ್ನು ಮುಂದೆ ನಾವು ಗುಲಾಮರಲ್ಲ. ನಮ್ಮನ್ನು ಕೇವಲ

ಮುಕ್ತಮಾಡಿದರೆ ಸಾಕು. ನಾವು ನಿಮ್ಮಿಂದ ಬೇರೆ ಏನನ್ನೂ ಕೇಳುವದಿಲ್ಲ. ನಾನು ಎಲ್ಲ ಹೊರೆಯನ್ನು ದೇವರ ಮೇಲೆ ಹಾಕಿದ್ದೇನೆ. ಪರಮಾತ್ಮನೇ ನಮ್ಮಲ್ಲಿ ಸ್ವಾತಂತ್ರ್ಯದ ಲಾಲಸೆಯನ್ನು ಉತ್ಪನ್ನ ಮಾಡಿದ್ದಾನೆ. ಇಂದಿನಿಂದ ನಾನು ಸ್ವತಂತ್ರ ನಿದ್ದೇನೆ; ನಿಮ್ಮ ಗುಲಾಮನಲ್ಲ ಎಂದು ತಿಳಿಯಬೇಕು ಮತ್ತು ಹೇಳಬೇಕು."

ಇದನ್ನು ಹೇಳುತ್ತಿರುವಾಗಲೇ ಗಾಂಧೀಜಿ ಸಭಾಸದರಿಗೆ ಈ ಮಾತನ್ನೂ ಸ್ಪಷ್ಟಪಡಿಸಿದರು: "ಈ ಯುದ್ಧದಲ್ಲಿ ಇನ್ನು ಹಿಂದಡಿ ಇಲ್ಲ." ಗಾಂಧೀಜಿ ಮುಂದು ವರಿದು ಹೇಳಿದರು: "ವ್ಹಾಯಿಸರಾಯರೊಂದಿಗೆ ಅಧಿಕಾರದ ವಿಷಯಕ್ಕೆ ಕೊಡ-ಕೊಳ್ಳುವ ವ್ಯಾಪಾರೀ ಮಾತುಗಳನ್ನು ಇನ್ನು ನಾನು ಆಡುವದಿಲ್ಲವೆನ್ನುವದನ್ನು ನೀವು ನಿಶ್ಚಿತವೆಂದು ತಿಳಿದುಕೊಳ್ಳಿರಿ. ನನಗೆ ರಾಷ್ಟ್ರದ ಸಂಪೂರ್ಣ ಸ್ವಾತಂತ್ರ್ಯವೇ ಬೇಕಾ ಗಿದೆ. ಅದಿಲ್ಲದೇ ನನಗೆ ಸಮಾಧಾನವೇ ಇಲ್ಲ. ಸ್ವಾತಂತ್ರ್ಯಕ್ಕಿಂತ ತಿಲಮಾತ್ರವೂ ಕಡಿಮೆ ಇಲ್ಲ ಮತ್ತು ಬೇಡ. ನಾನು ಇಂದು ನಿಮಗೆ ಒಂದು ಮಂತ್ರ ಹೇಳಿಕೊಡು ತ್ತೇನೆ. ಅದನ್ನು ನೀವು ನಿಮ್ಮ ಅಂತಃಕರಣದ ಮೇಲೆ ಕೆತ್ತಿಕೊಳ್ಳಿರಿ. ನಿಮ್ಮ ಪ್ರತಿ ಯೊಂದು ಶ್ವಾಸೋಚ್ಛ್ವಾಸದೊಂದಿಗೆ ಅದಕ್ಕೆ ಮಾತು ಉಂಟಾಗಬೇಕು. ಆ ಮಂತ್ರ ಹೀಗಿದೆ :—

"ಕರೋ ಯಾ ಮರೋ, ಮಾಡು ಇಲ್ಲವೆ ಮಡಿ" "Do or die"

ನಾವು ಭಾರತಕ್ಕೆ ಸ್ವಾತಂತ್ರ್ಯ ದೊರಕಿಸುವಾ ಇಲ್ಲವೆ ಆ ಪ್ರಯತ್ನದಲ್ಲಿ ಮಡಿಯುವಾ. ಈ ಮಂತ್ರದಿಂದ ಪ್ರತಿಯೊಬ್ಬ ಕಾಂಗ್ರೆಸ್ಸಿಗನ ಮತ್ತು ಭಾರತವಾಸಿಯ ಅಂತಃಕರಣ ಉಕ್ಕಿ ಬರಬೇಕು. ಇದೇ ನಮ್ಮ ಪ್ರತಿಜ್ಞೆಯಾಗಿರಬೇಕು. – ಪರಮಾತ್ಮನ ಸಾಕ್ಷಿಯಾಗಿ ಈ ಪ್ರತಿಜ್ಞೆಯನ್ನು ಮಾಡಿರಿ. ಇದಕ್ಕಾಗಿ ಆಹುತಿಯಾಗಲು ಸಿದ್ಧರಾಗಿರಿ. ಇದರಲ್ಲಿ ತಮ್ಮ ಪ್ರಾಣ ಸಮರ್ಪಣ ಮಾಡುವವರು ನಿಜವಾದ ಅರ್ಥದಿಂದ ಬದುಕಿ ದಂತೆ. ಯಾರು ಜೀವ ಉಳಿಸಿಕೊಳ್ಳಲು ಪ್ರಯತ್ನ ಮಾಡುವರೋ ಅವರು ಇದ್ದೂ ಸತ್ತಂತೆ."

ಪತ್ರಿಕಾಕರ್ತರನ್ನುದ್ದೇಶಿಸಿ ಗಾಂಧೀಜಿ ಹೇಳಿದರು: "ಇದುವರೆಗೆ ನೀವು ರಾಷ್ಟ್ರದ ಬೇಡಿಕೆಗಳಿಗೆ ಬೆಂಬಲ ಕೊಡುತ್ತ ಬಂದುದಕ್ಕೆ ನಾನು ನಿಮಗೆ ಆಭಾರಿಯಾಗಿ ದ್ದೇನೆ; ನಿಮ್ಮನ್ನು ಅಭಿನಂದಿಸುತ್ತೇನೆ. ಎಷ್ಟೊಂದು ಅಡ್ಡಿ-ಆತಂಕಗಳನ್ನು ಎದುರಿಸಿ ನೀವು ಕೆಲಸ ಮಾಡಬೇಕಾಗುತ್ತದೆಂಬುದರ ಅರಿವು ನನಗಿದೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣ ಮಾಡುವದು ತಮ್ಮ ಜನ್ಮಸಿದ್ಧ ಹಕ್ಕು. ತಮ್ಮ ಲೆಕ್ಕಣಿಕೆಯನ್ನು ಸರಕಾರ ಮೊಂಡ ಮಾಡಲಾರದು. ನಿಮ್ಮ ವೃತ್ತಪತ್ರಿಕೆಗಳನ್ನು ನಿಲ್ಲಿಸಿಬಿಡಿರೆಂದು ನಾನು ಹೇಳುವ ದಿಲ್ಲ. ನಾನು ನಿಮಗೆ ಮಧ್ಯಮ ಮಾರ್ಗ ಸೂಚಿಸುತ್ತಿದ್ದೇನೆ. ಭಾರತ ಸ್ವಾತಂತ್ರ್ಯ ವಾದ ನಂತರವೇ "ಸಂಪಾದಕೀಯ" ಬರೆಯುವೆವು. ಅಲ್ಲಿಯವರೆಗೆ ಲೆಕ್ಕಣಿಕೆಯನ್ನು ಒರೆ

ಯಲ್ಲಿ ಹಾಕಿಡುವೆವು" ಎಂಬ ನಿರ್ಧಾರವನ್ನು ನೀವು ಮಾಡಬೇಕು. ಸರಕಾರದ ಜಾಹೀರಾತುಗಳನ್ನು ಪ್ರಕಟಿಸಿ ನೀವು ಅವುಗಳಿಗೆ ಪ್ರಸಿದ್ಧಿಯನ್ನು ಕೊಡಬಾರದು. ಕಾಂಗ್ರೆಸ ಧ್ವಜದ ಕೆಳಗೆ ನಿಲ್ಲುವೆವು. ಕಾಂಗ್ರೆಸ್ಸಿಗೆ ಬೆಂಬಲ ಕೊಡುವೆವು ಎಂದು ನೀವು ಬಹಿರಂಗವಾಗಿ ಹೇಳಬೇಕು. ಈ ಕೆಲಸವನ್ನು ನೀವು ಪ್ರತ್ಯಕ್ಷ ಹೋರಾಟ ಪ್ರಾರಂಭವಾಗುವ ಪೂರ್ವದಲ್ಲಿಯೇ ಮಾಡಬೇಕು."

ಗಾಂಧೀಜಿ ತಮ್ಮ ಭಾಷಣದಲ್ಲಿ ಸಂಸ್ಥಾನಿಕರನ್ನುದ್ದೇಶಿಸಿ ನಾಲ್ಕು ಮಾತುಗಳನ್ನು ಹೇಳಿ ಮಾರ್ಗದರ್ಶನ ಮಾಡಿದರು. ಅವರು ಹೇಳಿದರು: "ನಾನು ತಮ್ಮ ಕಡೆಯಿಂದ ಒಂದು ಅತಿ ಚಿಕ್ಕ ಮಾತನ್ನು ಅಪೇಕ್ಷಿಸುತ್ತೇನೆ. ನಾನು ಸಂಸ್ಥಾನಿಕರ ಹಿತಚಿಂತಕನಾಗಿದ್ದೇನೆ. ನನ್ನ ಜನ್ಮ ಸಂಸ್ಥಾನದಲ್ಲಿಯೇ ಆಗಿದೆ. ನನ್ನ ತಂದೆಯವರು ಯಾವುದೇ ಇತರ ಸಂಸ್ಥಾನಿಕರಿಗೆ ತಮ್ಮ ಬಲಗೈಯಿಂದ ನಮಸ್ಕಾರ ಮಾಡುತ್ತಿರಲಿಲ್ಲ. (ಯಾಕೆಂದರೆ ಅವರು ತಮ್ಮ ಸಂಸ್ಥಾನಾಧಿಪತಿಗೆ ತಮ್ಮ ಬಲಗೈಯನ್ನು ಕೊಟ್ಟಿದ್ದರು.) ನಾನು ಸಂಸ್ಥಾನಿಕರ ಉಪ್ಪನ್ನು ಉಂಡಿದ್ದೇನೆ. ನಾನು ಅವರಿಗೆ ಹೊರಳುಪ್ಪು ಆಗಲಾರೆ. ಜವಾಹಲಾಲರಿಗೆ ಸಂಸ್ಥಾನಿಕರು ಬೇಡವಾಗಿದ್ದಾರೆ. ಆದರೆ ನನ್ನ ವಿಚಾರ ಅಷ್ಟೊಂದು ಮುಂದೆ ಹೋಗಿಲ್ಲ. ಸಂಸ್ಥಾನಿಕರು ತಮ್ಮ ಸಂಸ್ಥಾನಗಳ ಧರ್ಮದರ್ಶಿಗಳೆಂದು ತಿಳಿದು ವರ್ತಿಸಬೇಕು. ತಮ್ಮ ಜನತೆಯಲ್ಲಿಯೇ ಜನಾರ್ದನನನ್ನು ಕಾಣಬೇಕು. ಅವರು ತಮ್ಮ ಜನತೆಗೆ ಹೀಗೆ ಹೇಳಬೇಕು. "ನಿಜವಾದ ಒಡೆಯರು ನೀವು. ನಾವು ನಿಮ್ಮ ಸೇವಕ" ಎಂದು. ಸಂಸ್ಥಾನಿಕರು ಕಂಗಾಲರಾಗಬೇಕೆಂದು ನಾನು ಹೇಳುವದಿಲ್ಲ. ಸಾಮ್ರಾಜ್ಯವಾದೀ ಸರಕಾರಕ್ಕೆ "ಸಲಾಂ" ಹೊಡೆಯುವದಕ್ಕಿಂತ ತಮ್ಮ ಜನತೆಯ ಸಾರ್ವಭೌಮತ್ವವನ್ನು ಅವರು ಏಕೆ ಸ್ವೀಕರಿಸಬಾರದು ? ಸಂಸ್ಥಾನಿಕರು ತಾವು ನಿರಂತರವಾಗಿ ಗುಲಾಮಗಿರಿಯಲ್ಲಿರಬೇಕೆಂದಿದೆಯೇ ? ಅವರು ಪೊಲಿಟಿಕಲ್ ಎಜಂಟರಿಗೆ ಈ ರೀತಿ ಸ್ಪಷ್ಟವಾಗಿ ಹೇಳಬೇಕು: "ಜನತೆ ಈಗ ಜಾಗೃತವಾಗಿದೆ. ಅದರ ಮುಂದೆ ದೊಡ್ಡ ದೊಡ್ಡ ಸಾಮ್ರಾಜ್ಯಗಳು ಕುಪ್ಪಳಿಸಿ ಬಿದ್ದಿವೆ. ಆದಕಾರಣ ಇನ್ನು ಮುಂದೆ ನಾವು ಜನತೆಯ ಪಕ್ಷದೊಂದಿಗೇ ಇರುತ್ತೇವೆ. ಅವರೊಂದಿಗೇ ನಮ್ಮ ಅಳಿವು-ಉಳಿವು ಇದೆ. ಬ್ರಿಟಿಶ ಸರಕಾರ ಸಂಸ್ಥಾನಿಕರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಕರಾರುಗಳು ಬ್ರಿಟಿಶ ಸರಕಾರ ಮತ್ತು ಸಂಸ್ಥಾನಿಕರಲ್ಲಿ ಆಗಿವೆಯೆಂದು ನನ್ನ ತಿಳುವಳಿಕೆಯ ಮೇರೆಗೆ ಇರುವದಿಲ್ಲ."

"ಸಂಸ್ಥಾನದೊಳಗಿನ ಜನರು ಈ ರೀತಿ ಪ್ರಕಟ ಪಡಿಸಬೇಕು. ನಾವು ನಮ್ಮ ಸಂಸ್ಥಾನಿಕರನ್ನು ನಮ್ಮ ಮುಖಂಡರೆಂದು ತಿಳಿಯುತ್ತೇವೆ. ಆದರೆ ಅವರು ಜನತೆಯೊಂದಿಗೆ ಬೆರೆತು ವರ್ತಿಸಬೇಕು. ಇಲ್ಲದಿದ್ದರೆ ಇಷ್ಟೂ ಸಾಧ್ಯವಾಗಲಿಕ್ಕಿಲ್ಲ. ಹೀಗೆ ಹೇಳುವವರಿಂದ ಬರಲಿರುವ ಆಪತ್ತುಗಳನ್ನು ಜನತೆ ಆನಂದದಿಂದಲೂ ಧೈರ್ಯದಿಂದಲೂ ಸಹನ ಮಾಡಬೇಕು. ಆದರೆ ಮುಂದಿಟ್ಟ ಹೆಜ್ಜೆ ಹಿಂದಿಡಲಾಗದು. ಆದರೆ ಇದರಲ್ಲಿ

ಗುಪ್ತವಾಗಿ ಏನೂ ನಡೆಯಬಾರದು. ಈ ಹೋರಾಟದಲ್ಲಿ ಗೌಪ್ಯವು ಪಾಪವಾಗಿದೆ. ಸ್ವತಂತ್ರ ಮನುಷ್ಯನು ಗೌಪ್ಯದಲ್ಲಿ ಭಾಗ ತೆಗೆದುಕೊಳ್ಳಬಾರದು. ನನ್ನ ಮಾರ್ಗದರ್ಶನವನ್ನು ಧಿಕ್ಕರಿಸಿ ಸ್ವತಂತ್ರ ಭಾರತ ಸಿ. ಆಯ್. ಡಿ. ಇಲಾಖೆಯನ್ನು ಇಟ್ಟೇ ತೀರುವದು. ಆದರೆ ಈ ಯುದ್ಧದಲ್ಲಿ ಎಲ್ಲವನ್ನೂ ಪ್ರಕಟವಾಗಿಯೇ ಮಾಡತಕ್ಕದ್ದಿದೆ. ಓಡಿ ಹೋಗದೆ ಗುಂಡಿಗೆ ಎದೆಕೊಟ್ಟು ನಿಲ್ಲಬೇಕಾಗುವದು."

ಸರಕಾರೀ ನೌಕರರನ್ನುದ್ದೇಶಿಸಿ ಗಾಂಧೀಜಿ ಅಂದರು : "ಅವರು ಈಗಲೇ ತಮ್ಮ ನೌಕರಿಗಳಿಗೆ ಇಷ್ಟವಲ್ಲದಿದ್ದರೆ ರಾಜೀನಾಮೆ ಕೊಡಬಾರದು. ನ್ಯಾ. ಮೂ. ರಾನಡೆಯವರು ಸರಕಾರೀ ನವಕರಿಯಲ್ಲಿದ್ದುಕೊಂಡೇ ಉಚ್ಚಪ್ರತಿಯ ದೇಶಸೇವೆ ಸಲ್ಲಿಸಿದ್ದಾರೆ. ತಾನು ಕಾಂಗ್ರೆಸ ಮನುಷ್ಯನಿದ್ದೇನೆಂದು ಅವರು ಬಹಿರಂಗವಾಗಿ ಪ್ರಕಟಿಸಿದ್ದರು. ನ್ಯಾಯಮೂರ್ತಿ ರಾನಡೆಯವರ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ನಡೆಯಬೇಕು."

ಆ ಕಾಲದಲ್ಲಿ ಸೈನ್ಯವನ್ನುದ್ದೇಶಿಸಿ ಮಾತಾಡುವದು ಅತ್ಯಂತ ಗಂಡಾಂತರದ್ದಾಗಿತ್ತು. ಆದರೂ ಇದು ರಾಷ್ಟ್ರವ್ಯಾಪಿ ಅಹಿಂಸಕ ಕ್ರಾಂತಿಯಾದ್ದರಿಂದ ಸೈನ್ಯವನ್ನುದ್ದೇಶಿಸಿ ಎರಡು ಶಬ್ದ ಮಾತಾಡಲು ಗಾಂಧೀಜಿ ಹಿಂದೆಮುಂದೆ ನೋಡಲಿಲ್ಲ. ಪ್ರತ್ಯಕ್ಷ ಯುದ್ಧ ಇನ್ನೂ ಪ್ರಾರಂಭವಾಗಿಲ್ಲೆಂಬ ಮಾತಿನ ಅರಿವು ಗಾಂಧೀಜಿಯವರ ಮನಸ್ಸಿನಲ್ಲಿ ಯಾವಾಗಲೂ ಇತ್ತೆಂಬುದು ಯಾರಿಗಾದರೂ ಸಹಜ ಕಾಣುವಂತಿತ್ತು. ಸೈನ್ಯವನ್ನುದ್ದೇಶಿಸಿ ಗಾಂಧೀಜಿ ಹೇಳಿದರು : ಸೈನ್ಯದೊಳಗಿನ ನಿಮ್ಮ ಹುದ್ದೆಗಳಿಗೆ ರಾಜೀನಾಮೆ ಕೊಟ್ಟು ಸೈನ್ಯದ ಸಂಬಂಧ ಕಡಿದುಕೊಳ್ಳಲಿಕ್ಕೆ ಇಂದು ನಾನು ನಿಮಗೆ ಹೇಳುವದಿಲ್ಲ. ಜವಾಹರಲಾಲ, ಮೌಲಾನಾ ಆಝಾದರ ಮತ್ತು ನನ್ನ ಹತ್ತಿರ ಸೈನಿಕರು ಬಂದು 'ಈ ಸರಕಾರ ನಮಗೆ ಬೇಸರವಾಗಿದೆ. ನಾವು ನಿಮ್ಮ ಜೊತೆಗೆ ಇದ್ದೇವೆ' ಎಂದು ಹೇಳುತ್ತಾರೆ. ಅವರಿಗೆ ನಾನು ಹೇಳುವದಿಷ್ಟೇ : 'ನಮ್ಮ ಅಂತಃಕರಣಗಳು ಕಾಂಗ್ರೆಸ್ಸಿನೊಂದಿಗೆ ಇವೆ. ನಾವು ನಮ್ಮ ಸ್ಥಳಗಳನ್ನು ಬಿಡುವ ವಿಚಾರವಿಲ್ಲ. ನಿಮ್ಮ ವೇತನ ಪಡೆಯುವ ವರೆಗೆ ನಿಮ್ಮ ಸೇವೆ ಅವಶ್ಯ ಮಾಡುತ್ತೇವೆ. ನಿಮ್ಮ ನ್ಯಾಯವಾದ ಆಜ್ಞೆಗಳನ್ನು ಪಾಲಿಸುತ್ತೇವೆ. ಆದರೆ ನಮ್ಮ ಜನರ ಮೇಲೆ ನಾವು ಗುಂಡುಗಳನ್ನು ಹಾರಿಸುವದಿಲ್ಲ ಎಂದು ಸರಕಾರಕ್ಕೆ ತಿಳಿಸಬೇಕು. ಇಷ್ಟೂ ಸಹ ಹೇಳುವ ಧೈರ್ಯವಿಲ್ಲದ ಸೈನಿಕರಿಗೆ ಹೇಳುವಂತಹದು ನನ್ನ ಹತ್ತರ ಏನೂ ಇರುವದಿಲ್ಲ."

ವಿದ್ಯಾರ್ಥಿಗಳನ್ನುದ್ದೇಶಿಸಿ ಗಾಂಧೀಜಿ ನುಡಿದರು: "ಕೆಲವು ದಿವಸ ಆಂದೋಲನದಲ್ಲಿ ಭಾಗತೆಗೆದುಕೊಂಡು ಮತ್ತೆ ಶಾಲೆ–ಕಾಲೇಜುಗಳಿಗೆ ಹೋಗುವವರಿದ್ದರೆ ಅಂಥವರಿಗೆ ಈ ಯುದ್ಧದಲ್ಲಿ ಭಾಗತೆಗೆದುಕೊಳ್ಳಲು ನಾನು ಹೇಳುವದೇ ಇಲ್ಲ. ಯಾಕೆಂದರೆ ಈ ಯುದ್ಧ ಅಂತಿಮ ಯುದ್ಧ. ಅಂದರೆ "ಮಾಡು ಇಲ್ಲವೆ ಮಡಿ" ''Do or die'' ಯುದ್ಧ. ಆದರೆ ನಮ್ಮ ಯುದ್ಧದ ಕಾರ್ಯಕ್ರಮ ನಿಶ್ಚಿತವಾಗುವ ವರೆಗೆ

ವಿದ್ಯಾರ್ಥಿಗಳು ತಮ್ಮ ಶಿಕ್ಷಕರಿಗೂ ಪ್ರಾಧ್ಯಾಪಕರಿಗೂ ಈ ರೀತಿ ಹೇಳಬೇಕು : "ನಾವು ಕಾಂಗ್ರೆಸ ಪಕ್ಷದವರು. ನೀವು ಸರಕಾರೀ ಪಕ್ಷದವರೋ ಅಥವಾ ಕಾಂಗ್ರೆಸ ಪಕ್ಷದವರೋ ? ನೀವು ಕಾಂಗ್ರೆಸ್ಸಿನವರಾಗಿದ್ದರೆ ನಿಮ್ಮ ಸ್ಥಾನಗಳನ್ನು ಬಿಡಬೇಡಿರಿ. ಆ ಸ್ಥಾನಗಳಲ್ಲಿದ್ದೇ ಸ್ವಾತಂತ್ರ್ಯ ಯುದ್ಧದಲ್ಲಿ ನಮಗೆ ಸಹಾಯ ಮಾಡಿರಿ. ಜಗತ್ತಿನ ಎಲ್ಲ ಸ್ವಾತಂತ್ರ್ಯ ಯುದ್ಧಗಳಲ್ಲಿ ವಿದ್ಯಾರ್ಥಿಗಳು ಮಹತ್ವದ ಪಾತ್ರ ವಹಿಸಿದ್ದಾರೆ."

ಯುದ್ಧ ಪ್ರತ್ಯಕ್ಷ ಪ್ರಾರಂಭವಾಗುವವರೆಗೆ ನಾನು ಹೇಳಿದ ಮಾತುಗಳನ್ನೆಲ್ಲ ನೀವು ಮಾಡಿದರೆ ಯುದ್ಧದ ಸ್ವರೂಪವೇ ಬದಲಾಗುವ ಸಂಭವವಿದೆ. ನನ್ನ ಮನಸ್ಸಿನಲ್ಲಿ ನಿಮಗೆ ಇನ್ನೂ ಅನೇಕ ಮಾತುಗಳನ್ನು ಹೇಳಬೇಕೆಂದಿದೆ; ಆದರೆ ಮೊದಲೇ ಹೆಚ್ಚು ಹೊತ್ತು ತೆಗೆದುಕೊಂಡಿದ್ದೇನೆ. ಅಲ್ಲದೆ ಇಂಗ್ಲೀಷಿನಲ್ಲಿಯೂ ನನಗೆ ಒಂದೆರಡು ಮಾತು ಹೇಳುವದಿದೆ.

ಇದಾದನಂತರ ಗಾಂಧೀಜಿ ಇಂಗ್ಲೀಷಿನಲ್ಲಿ ಒಂದು ಚಿಕ್ಕ ಭಾಷಣ ಮಾಡಿದರು. ಆ ಇಂಗ್ಲೀಷ ಭಾಷಣ ಜಗತ್ತಿಗೆ ಮತ್ತು ವಿದೇಶಗಳಿಂದ ಬಂದ ಸುದ್ದಿಗಾರರಿಗಾಗಿ ಇತ್ತೆಂದು ಇಂದು ನನಗೆನಿಸುತ್ತದೆ. ಗಾಂಧೀಜಿ ತಮ್ಮ ಇಂಗ್ಲೀಷ ಭಾಷಣದಲ್ಲಿ ಈ ರೀತಿ ಹೇಳಿದರು :

"ಇಡೀ ಪ್ರಪಂಚವೇ ನಿನ್ನ ವಿರುದ್ಧ ನಿಂತರೂ ನೀನೊಬ್ಬನೇ ಅದನ್ನು ವಿರೋಧಿಸು, ಎಂದು ನನ್ನ ಸದಸದ್ವಿವೇಕ ಬುದ್ಧಿ ನನಗೆ ಹೇಳುತ್ತದೆ. ಮಿತ್ರರು, ಪರಿವಾರದವರು ಮುಂತಾದ ಎಲ್ಲರನ್ನೂ ತ್ಯಾಗ ಮಾಡುವ ಪ್ರಸಂಗ ಬಂದರೂ ಮಾಡು. ನೀನು ಯಾವ ತತ್ವದ ಸಲುವಾಗಿ ಆಯುಷ್ಯದ ತುಂಬೆಲ್ಲ ತಪಶ್ಚರ್ಯೆ ಮಾಡಿದ್ದೀಯೋ ಅದಕ್ಕಾಗಿ ಸಾವನ್ನಪ್ಪಬೇಕಾದರೂ ಅದಕ್ಕೆ ಸಿದ್ಧನಾಗು."

"ನನಗೆ ಸಾಯಬೇಕಾಗಿದೆಯೆಂದು ಮಾತ್ರ ತಿಳಿಯಬೇಡಿ. ನನಗೆ ೧೨೦ ವರ್ಷ ಬಾಳಬೇಕಾಗಿದೆ. ಈ ಅವಧಿಯಲ್ಲಿ ಭಾರತ ಮತ್ತು ಜಗತ್ತು ಸ್ವತಂತ್ರವಾಗುವವು. ಇಂಗ್ಲಂಡ ಅಥವಾ ಅಮೇರಿಕೆಗಳು ಸ್ವತಂತ್ರ ರಾಷ್ಟ್ರಗಳೆಂದು ನಾನು ತಿಳಿಯುವದಿಲ್ಲ.

"ನಮ್ಮ ಕಾಂಗ್ರೆಸ್ಸು ತನ್ನ ಜನ್ಮದಾರಭ್ಯದಿಂದಲೂ ನ್ಯಾಯಸಮ್ಮತ ಮಾರ್ಗದಿಂದ ಅಹಿಂಸೆಯನ್ನು ಘೋಷಿಸುತ್ತ ಬಂದಿದೆ. ಅದು ಇಂದು ಅಹಿಂಸಕ ಯುದ್ಧಕ್ಕಾಗಿ ತನ್ನ ಅಡಿಯನ್ನು ಮುಂದಿಟ್ಟಿದೆ. ಇದರಲ್ಲಿ ನಾನು ಮೋಸ ಹೋದರೂ ಇಟ್ಟ ಅಡಿ ಹಿಂದಕ್ಕೆ ತೆಗೆದುಕೊಳ್ಳುವದಿಲ್ಲ. ಕಾಂಗ್ರೆಸ್ಸಿನ ಶಾಂತತಾಪೂರ್ಣ ಮಾರ್ಗದಲ್ಲಿ ಅದರ ಮುಂದಿನ ಪೀಳಿಗೆ ಅಹಿಂಸೆಯ ಮಾರ್ಗಾವಲಂಬಿಯಾಗದಿರದು."

"ಭಾರತವು ತನ್ನ ರಾಷ್ಟ್ರದ ಸ್ವಾತಂತ್ರ್ಯ ಕೇಳುವದರಲ್ಲಿ ಏನು ಅಪರಾಧ ಮಾಡಿಧೆ ಎಂದು ಜಗತ್ತಿಗೆ ನಾನು ಪ್ರಶ್ನಿಸಬೇಕಾಗಿದೆ. ಇಂಗ್ಲಂಡ, ಅಮೇರಿಕಾ ಮತ್ತು

ಇತರ ರಾಷ್ಟ್ರಗಳು ತಮ್ಮ ಅಂತಃಕರಣವನ್ನು ಶೋಧಿಸಿ ನೋಡಬೇಕು. ಇಂಥ ಉಜ್ವಲ ಇತಿಹಾಸವುಳ್ಳ ನಮ್ಮ ಕಾಂಗ್ರೆಸ ಸಂಸ್ಥೆಯ ಹೆಸರನ್ನು ತಮ್ಮ ಸ್ವಾಧೀನದಲ್ಲಿದ್ದ ಸರ್ವ ಸಾಧನಗಳನ್ನು ಉಪಯೋಗಿಸಿ ಕೆಡಿಸುವದು ನ್ಯಾಯವೇ ? "ನಾವು ತಪ್ಪುತ್ತಿದ್ದೇವೆ. ಹೋರಾಟಕ್ಕೆ ಇದು ಸಮಯವಲ್ಲ" ಎಂದು ಕೆಲವರು ನಮಗೆ ಹೇಳುತ್ತಾರೆ. ಇಷ್ಟೊಂದು ದೀರ್ಘಕಾಲದವರೆಗೆ ಸಾಮ್ರಾಜ್ಯವನ್ನು ನಡಿಸಿಕೊಂಡು ಬಂದ ಬ್ರಿಟಿಶ ರಾಜಕಾರಣದ ವಿಷಯಕ್ಕೆ ನನಗೆ ಒಂದು ಕಾಲಕ್ಕೆ ಬಹಳ ಆದರವಿತ್ತು. ಆದರೆ ಇಂದು ನನಗೆ ಅವರ ಬಗ್ಗೆ ಹೇಸಿಕೆ ಅನಿಸಹತ್ತಿದೆ. ಇದರಲ್ಲಿ ಅವರಿಗೆ ಇನ್ನೂ ಕೆಲ ಕಾಲ ಇನ್ನೂ ಯಶ ದೊರೆಯುವದೆಂದು ಅನಿಸಬಹುದು. ಆದರೆ ಅದು ನಿಜವಲ್ಲ."

"ಇಂಥಾ ವಿಪರೀತ ಪರಿಸ್ಥಿತಿಯಲ್ಲಿ ನಾನು ಜಗತ್ತಿಗೆ ಘಂಟಾಘೋಷವಾಗಿ ಸಾರುತ್ತಿರುತ್ತೇನೆ. ಈ ಅಹಿಂಸಾತ್ಮಕ ಯುದ್ಧದಿಂದ ನಾನು ಭಾರತಕ್ಕೆ ಸ್ವಾತಂತ್ರ್ಯವನ್ನು ಎಳೆದು ತರುತ್ತೇನೆ. ನಾನು ಏಕಾಕಿಯಾಗಿ ಉಳಿದರೂ ಸತತವಾಗಿ ಮುಂದೆ ಮುಂದೆ ಹೋಗುತ್ತಲೇ ಇರುವೆನು."

"ವಿದೇಶಗಳಿಂದ ಅನೇಕ ಸುದ್ದಿಗಾರರು ಇಲ್ಲಿಗೆ ಬಂದಿದ್ದಾರೆ. ಅವರ ಮುಖಾಂತರ ನಾನು ಜಗತ್ತಿಗೇ ಹೇಳುತ್ತೇನೆ : ಅವರು ಈ ಸಮಯದಲ್ಲಿ ಭಾರತದ ಸ್ವಾತಂತ್ರ್ಯ ಯುದ್ಧಕ್ಕೆ ಬೆಂಬಲ ಕೊಡಬೇಕು. ತಮ್ಮ ಪ್ರಾಮಾಣಿಕತೆಯನ್ನು ಸಿದ್ಧ ಮಾಡಬೇಕು. ಈ ಸಂಧಿಯನ್ನು ಕಳೆದುಕೊಂಡರೆ ಅವರು ಜಗತ್ತಿನೊಳಗಿನ ಒಂದು ಸರ್ವೋತ್ಕೃಷ್ಟ ಸಂಧಿಯನ್ನು ಕಳೆದುಕೊಂಡಂತಾಗುವದು."

ಭಾರತಕ್ಕೆ ಸ್ವಾತಂತ್ರ್ಯ ಸಿಗುವದಿದ್ದರೆ ಅದು ಇಂದೇ ಸಿಗುವದು. –

"Do or die"

ಕಾಂಗ್ರೆಸ ಗೊತ್ತುವಳಿ

೧೯೪೨ನೇ ಆಗಸ್ಟ ೮ನೇ ತಾರೀಖಿನಂದು ಪಾಸಾದ ಗೊತ್ತುವಳಿ ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿಯ ಮಹತ್ವದ ಗೊತ್ತುವಳಿ. ಅದು ಗೊತ್ತುವಳಿ ಇದ್ದರೂ, ಅದೊಂದು ಪ್ರದೀರ್ಘ ನಿವೇದನವೇ ಆಗಿದೆ. ಆ ಗೊತ್ತುವಳಿಯ ನಿಷ್ಕರ್ಷವನ್ನು ಇಲ್ಲಿ ಕೊಡಲಾಗಿದೆ.

೧೯೪೨ನೇ ಜುಲೈ ೧೪ನೇ ತಾರೀಖಿನಂದು ಕಾಂಗ್ರೆಸ ವರ್ಕಿಂಗ ಕಮಿಟಿಯು ನಮ್ಮ ಕಡೆಗೆ ಒಪ್ಪಿಸಿದ ವಿಷಯಗಳನ್ನು ನಾವು ಕೂಲಂಕಷವಾಗಿ ವಿಚಾರ ಮಾಡಿದ್ದೇವೆ. ಆ ಪ್ರಕಾರ ಯುದ್ಧದ ಪರಿಸ್ಥಿತಿ, ಇತರ ಘಟನೆಗಳು, ಹೊಣೆಗಾರ ಬ್ರಿಟಿಶ ಮುತ್ಸದ್ದಿಗಳು ಕೊಟ್ಟ ಹೇಳಿಕೆಗಳು, ಭಾರತ ಮತ್ತು ಹೊರ ದೇಶಗಳಲ್ಲಿ ನಡೆದ ಟೀಕೆ ಮತ್ತು

ಅಭಿಪ್ರಾಯ ಇವೇ ಮೊದಲಾದವುಗಳನ್ನು ನಾವು ವಿಚಾರಪೂರ್ವಕ ಅಭ್ಯಾಸ ಮಾಡಿದ್ದೇವೆ. ಈ ಕಮೀಟಿಯು ವರ್ಕಿಂಗ ಕಮೀಟಿಯು ಗೊತ್ತುವಳಿಯನ್ನು ಅಂಗೀಕರಿಸುತ್ತದೆ. ಮತ್ತು ಪುಷ್ಟೀಕರಿಸುತ್ತದೆ. ಈ ಗೊತ್ತುವಳಿಯ ತರುವಾಯ ನಡೆದ ಘಟನೆಗಳಿಂದ ಕೂಡಲೇ ಬ್ರಿಟಿಶ ಸತ್ತೆಯ ಅಂತ್ಯವಾಗುವದು ಅವಶ್ಯವಾಗಿದೆ. ಬ್ರಿಟಿಶ ಸತ್ತೆಯ ಅಂತ್ಯವು ಭಾರತ ಮತ್ತು ಸಂಯುಕ್ತ ರಾಷ್ಟ್ರಗಳ ಕಲ್ಯಾಣದ ದೃಷ್ಟಿಯಿಂದಲೂ ಅವಶ್ಯವಾಗಿದೆ. ಬ್ರಿಟಿಶ ಆಳಿಕೆ ಮುಂದುವರಿಯುವದು ಭಾರತಕ್ಕೆ ಅಪಮಾನಕರವಾಗಿದೆ. ಅದು ಭಾರತವನ್ನು ದುರ್ಬಲಗೊಳಿಸುತ್ತಲಿದೆ. ಆದರಿಂದ ಭಾರತವು ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳಲು ಬಾರದಾಗಿದೆ. ಜಗತ್ತಿನ ಸ್ವಾತಂತ್ರ್ಯದ ಕಾರ್ಯದಲ್ಲಿ ಅದು ಸಹಾಯ ಸಲ್ಲಿಸಲಾರದಾಗಿದೆ.

ರಶಿಯಾ, ಚೀನಗಳ ಯುದ್ಧ ಭೂಮಿಕೆಯು ಕೆಡುತ್ತಿರುವ ಪರಿಸ್ಥಿತಿಯನ್ನು ನೋಡಿ ಭಯವುಂಟಾಗಹತ್ತಿದೆ. ರಶಿಯಾ, ಚೀನಗಳ ಧೈರ್ಯದ ಬಗ್ಗೆ ಧನ್ಯತೆಯೆನಿಸುತ್ತದೆ. ಈ ಎಲ್ಲ ಪರಾಭವಗಳ ಮೂಲಕ ಮಿತ್ರರಾಷ್ಟ್ರಗಳ ಇದುವರೆಗಿನ ಧೋರಣೆಯನ್ನು ನೋಡುತ್ತಿರಲಾಗಿ ಆಮೂಲಾಗ್ರ ಪರಿಶೀಲಿಸಬೇಕೆಂದೆನಿಸುತ್ತದೆ. ಈ ಧೋರಣೆ ಸ್ವಾತಂತ್ರ್ಯ ತತ್ವದ ಮೇಲೆ ಆಧರಿತವಾಗಿರದೆ ಗೆದ್ದ ರಾಷ್ಟ್ರಗಳ ಮೇಲೂ, ವಸಾಹತುಗಳ ಮೇಲೂ, ಪ್ರಭುತ್ವ ನಡೆಸುವದಕ್ಕೋಸ್ಕರ ಇರುತ್ತವೆ. ಸಾಮ್ರಾಜ್ಯಗಳು ರಾಜ್ಯಕರ್ತರಿಗೆ ಶಕ್ತಿಪ್ರದವಾಗಿರದೆ ಭಾರಭೂತವಾಗಿವೆ; ಶಾಪಗಳಾಗಿವೆ. ಭಾರತವು ಆಧುನಿಕ ಸಾಮ್ರಾಜ್ಯಶಾಹಿಯ ಶ್ರೇಷ್ಠ ಮಾದರಿಯ ರಾಷ್ಟ್ರವಾಗಿದೆ. ಅದು ಈ ಪ್ರಶ್ನೆಯ ಒರೆಗಲ್ಲಾಗಿದೆ. ಯಾಕೆಂದರೆ ಭಾರತದ ಸ್ವಾತಂತ್ರ್ಯದ ಮೇಲಿಂದ ಬ್ರಿಟನ್ ಮತ್ತು ಸಂಯುಕ್ತ ರಾಷ್ಟ್ರಗಳ ಸತ್ವ ಪರೀಕ್ಷೆಯಾಗುವದಿದೆ. ಇದರಿಂದ ಏಶಿಯಾ ಮತ್ತು ಆಫ್ರಿಕೆಯೊಳಗಿನ ಜನರಲ್ಲಿ ಆಸೆ ಮತ್ತು ಉತ್ಸಾಹಗಳು ನಿರ್ಮಾಣವಾಗಲಿರುವವು.

ಭಾರತದಲ್ಲಿ ಬ್ರಿಟಿಶ ಆಳಿಕೆಯ ಅಂತ್ಯವಾಗುವದು ಆತುರದ ಹಾಗೂ ಜೀವಾಳದ ಪ್ರಶ್ನೆಯಾಗಿದೆ. ಇದರ ಮೇಲೆ ಯುದ್ಧ, ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ ಭವಿತವ್ಯವು ಅವಲಂಬಿಸಿದೆ. ಸ್ವತಂತ್ರ ಭಾರತವು ತನ್ನ ಸರ್ವ ಶಕ್ತಿಯನ್ನು ಸ್ವಾತಂತ್ರ್ಯಕ್ಕಾಗಿ ವಿನಿಯೋಗಿಸುವದು. ನಾಝಿ, ಫ್ಯಾಸಿಸ್ಟ ಮತ್ತು ಸಾಮ್ರಾಜ್ಯವಾದಿಗಳ ಆಕ್ರಮಣದ ವಿರುದ್ಧ ಹೋರಾಡುವದು. ಆದರಿಂದ ಹಿಂದುಳಿದ ಮತ್ತು ಗುಲಾಮಗಿರಿಯಲ್ಲಿದ್ದ ಮಾನವತೆಯು ಸಂಯುಕ್ತ ರಾಷ್ಟ್ರಗಳ ಪಕ್ಷಕ್ಕೆ ಒಲಿಯುವದು. ಆ ರಾಷ್ಟ್ರಗಳಿಗೆ ಭಾರತದ ಮೈತ್ರಿಯಿಂದ ಜಗತ್ತಿನಲ್ಲಿ ನೈತಿಕ ಹಾಗೂ ಅಧ್ಯಾತ್ಮಿಕ ನೇತೃತ್ವ ಪ್ರಾಪ್ತವಾಗುವದು. ಪಾರತಂತ್ರ್ಯದಲ್ಲಿದ್ದ ಭಾರತ, ಬ್ರಿಟಿಶ ಸಾಮ್ರಾಜ್ಯಾಧಿಪತ್ಯದ ಒಂದು ಲಾಂಛನವಾಗಿ ಉಳಿದೀತು. ಆ ಸಾಮ್ರಾಜ್ಯಾಧಿಪತ್ಯದ ಚಿಸ್ಹದ ಮೂಲಕ ಸಂಯುಕ್ತ ರಾಷ್ಟ್ರಗಳ ಭಾಗ್ಯದ ಮೇಲೆ ಪರಿಣಾಮ ಬೀರೀತು.

ಇಂದಿನ ಆಪತ್ಕಾಲದ ಕಾರಣದಿಂದ ಭಾರತದ ಸ್ವಾತಂತ್ರ್ಯ ಮತ್ತು ಬ್ರಿಟಿಶ ಪ್ರಭುತ್ವದ ಅಂತ್ಯಗಳು ಅವಶ್ಯವಾಗಿವೆ. ಭಾವೀ ವಚನಗಳಿಂದಾಗಲಿ ಆಶ್ವಾಸನಗಳಿಂದಾಗಲಿ ಸದ್ಯದ ಪರಿಸ್ಥಿತಿ ಬದಲಾಗಲಾರದು ಮತ್ತು ವಿಪತ್ತುಗಳನ್ನು ಎದುರಿಸುವದು ಶಕ್ಯವಾಗಲಾರದು. ಸಾಮಾನ್ಯ ಜನತೆಯ ಮನಸ್ಸಿನ ಮೇಲೆ ಅವರ ಮಾನಸಿಕ ದೃಷ್ಟಿಯಿಂದಲೂ ಯಾವ ಪರಿಣಾಮವೂ ಆಗಲಾರದು. ಸ್ವಾಂತ್ರ್ಯದ ಲಕಲಕನೆ ಹೊಳೆಯುವ ಪ್ರಕಾಶದಿಂದ ಕೋಟ್ಯಾವಧಿ ಜನರ ಶಕ್ತಿ, ಉತ್ಸಾಹಗಳು ವಿಮುಕ್ತವಾಗಿ, ಕೂಡಲೇ ಯುದ್ಧದ ಸ್ವರೂಪವೇ ಬದಲಾದೀತು.

ಆದುದರಿಂದ ಅಖಿಲಭಾರತ ಕಾಂಗ್ರೆಸ ಕಮಿಟಿಯ ಈ ಸಭೆ ಭಾರತದಿಂದ ಬ್ರಿಟಿಶ ಸತ್ತೆಯನ್ನು ಕಿತ್ತುಕೊಂಡು ಹೋಗುವಂತೆ ಮತ್ತೊಮ್ಮೆ ಅತ್ಯಂತ ಒತ್ತಾಯದಿಂದ ಬೇಡಿಕೆ ಮಂಡಿಸುತ್ತಿದೆ. ಭಾರತ ಸ್ವತಂತ್ರವಾದ ನಂತರ ಅದು ಒಂದು ತಾತ್ಪೂರ್ತಿಕ ಸರಕಾರವನ್ನು ಸ್ಥಾಪಿಸುವದು. ಆ ಸರಕಾರವು ಮಿತ್ರ ರಾಷ್ಟ್ರಗಳ ಮಿತ್ರವಾಗುವದು. ಅದು ಸ್ವಾತಂತ್ರ್ಯದ ಸಲುವಾಗಿ ಅದರ ಸುಖ ದುಃಖಗಳಲ್ಲಿ ಪಾಲುಗೊಳ್ಳುವದು. ರಾಷ್ಟ್ರದೊಳಗಿನ ಪ್ರಮುಖಪಕ್ಷ ಮತ್ತು ಗುಂಪುಗಳ ಸಹಕಾರದಿಂದಲೇ ತಾತ್ಪೂರ್ತಿಕ ಸರಕಾರವನ್ನು ರಚಿಸಲಿಕ್ಕೆ ಬಂದೀತು. ಆ ಸರಕಾರದ ಪ್ರಥಮ ಕಾರ್ಯವೆಂದರೆ ಮಿತ್ರರಾಷ್ಟ್ರಗಳ ಸಹಾಯದಿಂದ ಭಾರತದ ರಕ್ಷಣೆ ಮಾಡುವದು. ಸಶಸ್ತ್ರ ಮತ್ತು ಅಹಿಂಸಕ ಸಾಧನಗಳಿಂದ ಆ ರಾಷ್ಟ್ರಗಳ ಆಕ್ರಮಣವನ್ನು ಎದುರಿಸಲಾಗುವದು. ತಾತ್ಪೂರ್ತಿಕ ಸರಕಾರ ಹೊಲಗಳಲ್ಲಿ ಮತ್ತು ಕಾರಖಾನೆಗಳಲ್ಲಿ ದುಡಿಯುತ್ತಿರುವ ಕೂಲಿಕಾರರ ಕಲ್ಯಾಣ ಮತ್ತು ಪ್ರಗತಿಗಳ ಸಲುವಾಗಿ ಹೋರಾಡುವದು. ಈ ವರ್ಗಗಳ ಕಡೆಗೇ ಸರ್ವ ಸತ್ತೆ ಹಾಗೂ ಅಧಿಕಾರ ಹೋಗಬೇಕು. ತಾತ್ಪೂರ್ತಿಕ ಸರಕಾರ ವಿಧಾನ ಪರಿಷತ್ತಿನ ಯೋಜನೆಯನ್ನು ಸಿದ್ಧಗೊಳಿಸುವದು. ಆ ಪರಿಷತ್ತು ಭಾರತದ ಶಾಸನಕ್ಕಾಗಿ ಸರ್ವ ಸಮ್ಮತವಾಗುವಂಥ ಘಟನೆಯನ್ನು ಸಿದ್ಧಗೊಳಿಸುವದು. ಈ ಘಟನೆ ಕಾಂಗ್ರೆಸ ದೃಷ್ಟಿಯಿಂದ ಸಂಘರಾಜ್ಯ (ಫೆಡರಲ್)ಗಳದ್ದಾಗಿರಬೇಕು. ಅದರಲ್ಲಿ ಘಟಕಗಳಿಗೇ ಹೆಚ್ಚಿನ ಹೆಚ್ಚು ಸ್ವಯಂ ಶಾಸನಾಧಿಕಾರವಿರಬೇಕು. ಶೇಷಾಧಿಕಾರವು ಘಟಕಗಳಿಗೇ ಇರಬೇಕು. ಮಿತ್ರ ರಾಷ್ಟ್ರ ಮತ್ತು ಭಾರತಗಳ ನಡುವಿನ ಸಂಬಂಧವನ್ನು ಸ್ವತಂತ್ರ ರಾಷ್ಟ್ರಗಳ ಪ್ರತಿನಿಧಿಗಳ ಸಭೆಯಲ್ಲಿ ನಿರ್ಣಯಿಸಬೇಕು. ಈ ಸಂಬಂಧವು ಆಕ್ರಮಣವನ್ನು ಎದುರಿಸುವದಕ್ಕಾಗಿ ಪರಸ್ಪರರಿಗೆ ಲಾಭದಾಯಕವೂ ಸಹಕಾರವುಳ್ಳದ್ದೂ ಆಗಿರಬೇಕು.

ಪರಕೀಯರ ವಶದಲ್ಲಿರುವ ಏಸಿಯಾದೊಳಗಿನ ಎಲ್ಲ ದೇಶಗಳನ್ನು ಮುಕ್ತ ಮಾಡುವದೇ ಭಾರತ ಸ್ವಾತಂತ್ರ್ಯದ ಬೆಂಬಲವಿರಬೇಕು. ಬ್ರಹ್ಮದೇಶ. ಮಲಯಾ. ಇಂಡೋಚಿನ, ಡಚ್, ಈಸ್ಟ ಇಂಡೀಜ, ಇರಾಣ, ಇರಾಕ ಇವುಗಳಿಗೂ ಸಂಪೂರ್ಣ ಸ್ವಾತಂತ್ರ್ಯ ದೊರೆಯಬೇಕು. ಇಂದು ಜಪಾನದ ವಶದಲ್ಲಿರುವ ರಾಷ್ಟ್ರಗಳು ವಸಾಹತಿ ಅಧಿಕಾರದಿಂದ ತೃಪ್ತವಾಗಲಾರವು ಎಂಬ ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

'ಭಾರತದ ಸ್ವಾತಂತ್ರ್ಯ' 'ಸಂಕಟದಲ್ಲಿ ಸಂರಕ್ಷಣ' ಇವು ಅ. ಭಾ. ಕಾ. ಕಮಿಟಿಗೆ ಮಹತ್ವದ ಪ್ರಶ್ನೆಗಳಾಗಿವೆ. ಆದರೂ ಈ ಕಮಿಟಿಯ ಮತದಂತೆ ಜಗತ್ತಿನೊಳಗೆ ಭಾವಿ ಶಾಂತಿ, ಸುರಕ್ಷಿತತೆ. ಸುವ್ಯವಸ್ಥಿತವಾದ ಪ್ರಗತಿಗಳ ಸಲುವಾಗಿ ಜಗತ್ತಿನಲ್ಲಿ ಸ್ವತಂತ್ರ ರಾಷ್ಟ್ರಗಳ ಸಂಘದ ಅವಶ್ಯಕತೆ ಇದೆ. ಯಾಕೆಂದರೆ ಈ ರೀತಿ ಮಾಡದಿದ್ದರೆ ಆಧುನಿಕ ಜಗತ್ತಿನ ಪ್ರಶ್ನೆ ಬಗೆಹರಿಯಲಾರದು. ಹೀಗೆ ಈ ಜಾಗತಿಕ ಸಂಘವು ತನ್ನ ಘಟಕಗಳ ಸ್ವಾತಂತ್ರ್ಯದ ಬಗ್ಗೆ ಸಾಕ್ಷಿಯನ್ನು ಕೊಡಬಹುದು. ಆಕ್ರಮಣ ಹಾಗು ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಶೋಷಣೆ ಮಾಡುವುದನ್ನು ತಡೆಯುವದು; ರಾಷ್ಟ್ರಗಳಲ್ಲಿಯ ಅಲ್ಪಸಂಖ್ಯಾಕರ ರಕ್ಷಣೆಯನ್ನು ಮಾಡುವದು: ಹಿಂದುಳಿದ ಭಾಗಗಳ ಹಾಗೂ ಜನತೆಯ ಪ್ರಗತಿಯನ್ನು ಮಾಡುವದು. ಸರ್ವರ ಕಲ್ಯಾಣಕ್ಕಾಗಿ ಜಗತ್ತಿನಲ್ಲಿಯ ಸಾಮುಗ್ರಿಗಳ ಏಕತ್ರೀಕರಣ ಮಾಡುವದು ಇಂಥ ವಿಶ್ವಸಂಸ್ಥೆ ಸ್ಥಾಪನೆಯಾದ ನಂತರ ಎಲ್ಲ ದೇಶಗಳಲ್ಲಿ ನಿಃಶಸ್ತ್ರೀಕರಣ ಮಾಡಲು ಬರುವದು. ರಾಷ್ಟ್ರೀಯ ಸೈನ್ಯ, ಯುದ್ಧ ಸಾಮುಗ್ರಿ. ವೈಮಾನಿಕ ದಳಗಳ ಅವಶ್ಯಕತೆ ಉಂಟಾಗಲಾರದು. ಜಾಗತಿಕ ಸಂರಕ್ಷಣ ದಳವು ಜಗತ್ತಿನಲ್ಲಿ ಶಾಂತತೆಯನ್ನಿಡುವದು; ಆಕ್ರಮಣವಾಗದಂತೆ ನೋಡಿಕೊಳ್ಳುವದು.

ಸ್ವತಂತ್ರ ಹಿಂದುಸ್ಥಾನವು ಆನಂದದಿಂದ ಇಂಥ ವಿಶ್ವಸಂಸ್ಥೆಯ ಸದಸ್ಯವಾಗುವದು: ಆಕ್ರಮಣವನ್ನು ನಿಲ್ಲಿಸುವದು. ಅದು ಇತರ ರಾಷ್ಟ್ರಗಳ ಜೊತೆಗೆ ಅಂತರ್‌ರಾಷ್ಟ್ರೀಯ ಪ್ರಶ್ನೆ ಬಿಡಿಸುವದಕ್ಕಾಗಿ ಸಮಾನ ಭೂಮಿಕೆಯ ಮೇಲೆ ಸಹಕಾರ ನೀಡುವದು.

ಈ ಸಂಸ್ಥೆಯಲ್ಲಿ ಯಾವುದೇ ರಾಷ್ಟ್ರ ಸೇರಬಹುದು. ಆದರೆ ಅದು ಸಂಸ್ಥೆಯ ಮೂಲಭೂತ ತತ್ವಗಳನ್ನು ಒಪ್ಪಬೇಕಾಗುವದು. ಆದರೆ ಈಗಿನ ಯುದ್ಧ ಪರಿಸ್ಥಿತಿಯಲ್ಲಿ ಈ ಸಂಸ್ಥೆಯು ಸಂಯುಕ್ತ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿರುವದು. ಈಗಲೇ ಈ ಕ್ರಮ ಕೈಕೊಂಡದ್ದಾದರೆ ಯುದ್ಧದ ಮೇಲೆ ಇದರಿಂದ ಗಂಭೀರ ಪರಿಣಾಮವಾಗುವದು. ಅಂಥದೇ ಪರಿಣಾಮ ಜರ್ಮನಿ, ಇಟಲಿ ಮುಂತಾದ ರಾಷ್ಟ್ರಗಳ ಜನತೆಯ ಮೇಲೂ ಭಾವೀ ಶಾಂತತೆಯ ಮೇಲೆಯೂ ಆಗುವದು.

ಜಗತ್ತಿನಲ್ಲಿಯ ಬಹಳ ಕಡಿಮ ರಾಷ್ಟ್ರಗಳು ಈ ವಿಶ್ವಸಂಸ್ಥೆಯ ಪರವಾಗಿರುವವು. ಅವುಗಳಿಗೆ ಯುದ್ಧದ ವಿಷಯಕ್ಕೆ ಸಾಕಷ್ಟು ದುಃಖದಾಯಕ ಅನುಭವಗಳು ಬಂದಿದ್ದರೂ ಸಹ ದುರ್ದೈವದಿಂದ ಅವುಗಳ ವೃತ್ತಿ ಬದಲಾಗುತ್ತಿಲ್ಲ. ಬ್ರಿಟಿಶ ಸರಕಾರದ ಪ್ರತೀಕಾರ ಮತ್ತು ಪರಕೀಯ ವೃತ್ತಪತ್ರಗಳಲ್ಲಿಯ ತಪ್ಪು ಟೀಕೆಗಳ ಮೇಲಿಂದ ಭಾರತದ ಸ್ವಾತಂತ್ರ್ಯದ ಬೇಡಿಕೆಗೆ ಪ್ರತಿಕಾರವುಂಟಾಗುತ್ತದೆಂಬ ಮಾತು ಸ್ಪಷ್ಟ ಕಾಣುತ್ತದೆ. ಈ ಸ್ವಾತಂತ್ರ್ಯದ ಬೇಡಿಕೆ ಮುಖ್ಯವಾಗಿ ಸದ್ಯದ ಸಂಕಟವನ್ನು ಎದುರಿಸುವದಕ್ಕೂ ಭಾರತವನ್ನು ಆತ್ಮರಕ್ಷಣೆಗೆ ಸಮರ್ಥವನ್ನಾಗಿ ಮಾಡುವದಕ್ಕೂ. ಮತ್ತು ಚೀನ. ರಶಿಯಾಗಳಿಗುಂಟಾದ ಸಂಕಟಕ್ಕೆ ಸಹಾಯ ಮಾಡುವದಕ್ಕಾಗಿ ಇರುತ್ತದೆ.

ಹೀಗಿದ್ದರೂ ಅದು ಮಾನ್ಯವಾಗುವದಿಲ್ಲ. ಚೀನ ರಶಿಯಾಗಳ ಸಂರಕ್ಷಣೆಯ ಪ್ರಯತ್ನದಲ್ಲಿ ಅಡ್ಡಿಯನ್ನುಂಟು ಮಾಡುವದಕ್ಕಾಗಲಿ ಇಲ್ಲವೆ ಸಂಯುಕ್ತ ರಾಷ್ಟ್ರದ ಸಂರಕ್ಷಣಾ ಶಕ್ತಿಯಲ್ಲಿ ಆತಂಕವನ್ನೊಡ್ಡುವದಕ್ಕಾಗಲಿ ಈ ಕಮಿಟಿಯ ಉದ್ದೇಶವಿಲ್ಲ. ಆದರೆ ಹಿಂದುಸ್ಥಾನ ಮತ್ತು ಈ ದೇಶಗಳಲ್ಲಿ ಈ ಸಂಕಟವು ಒಂದೇಸವನೆ ಹೆಚ್ಚಾಗುತ್ತಿದೆ. ಇಂಥ ಸಮಯದಲ್ಲಿ ಪರಕೀಯ ರಾಜ್ಯಶಾಸನಕ್ಕೆ ಶರಣು ಹೋಗಿ, ಸ್ವಸ್ಥ ಕುಳಿತುಕೊಳ್ಳುವದು ಭಾರತಕ್ಕೆ ಕೀಳುತನದ್ದೆನಿಸುತ್ತದೆ. ಇಷ್ಟೇ ಅಲ್ಲದೆ–ನಮ್ಮ ಸಂರಕ್ಷಣ ಶಕ್ತಿ ಮತ್ತು ಪ್ರತಿಕಾರ ಶಕ್ತಿಗಳು ಹ್ರಾಸವಾಗುತ್ತಿವೆ. ಆದರಿಂದ ಹೆಚ್ಚುತ್ತಿರುವ ಸಂಕಟಗಳನ್ನು ಎದುರಿಸಲಿಕ್ಕಾಗುವದಿಲ್ಲ. ಸಂಯುಕ್ತ ರಾಷ್ಟ್ರದೊಳಗಿನ ಜನರಿಗೆ ನಮ್ಮಿಂದ ಸಹಾಯ ಮಾಡುವದೂ ಆಗುವದಿಲ್ಲ. ಭಾರತದ ಸ್ವಾತಂತ್ರ್ಯವನ್ನು ವಿರೋಧಿಸುವದು ಪ್ರಭುತ್ವದ ಮತ್ತು ತಾವು ಶ್ರೇಷ್ಠವರ್ಣದವರು ಎಂಬ ಮನೋರಚನೆಯ ಚಿನ್ಹವಾಗಿದೆ. ಭಾರತವು ಇದನ್ನು ಸಹನಮಾಡಲಾರದು. ನಮ್ಮ ಸಾಮರ್ಥ್ಯದ ಅರಿವು ನಮಗಿದೆ. ನಮ್ಮದು ನ್ಯಾಯವಾದ ಪಕ್ಷ ಎಂಬುದೂ ನಮಗೆ ಗೊತ್ತಿದೆ. ಇವುಗಳ ಜ್ಞಾನವುಳ್ಳ ಸ್ವಾಭಿಮಾನಿ ಜನರು ನಾವು.

ಇಷ್ಟೊಂದು ತಡವಾದರೂ ಅಖಿಲ-ಭಾರತ ಕಾಂಗ್ರೆಸ ಕಮಿಟಿಯು, ಈ ಕೊನೆಯ ಗಳಿಗೆಯಲ್ಲಿ ಗ್ರೇಟಬ್ರಿಟನ್ ಮತ್ತು ಸಂಯುಕ್ತ ರಾಷ್ಟ್ರಸಂಘಗಳಿಗೆ ಜಾಗತಿಕ ಸ್ವಾತಂತ್ರ್ಯದ ಸಲುವಾಗಿ ಬಿನ್ನವಿಸಿಕೊಳ್ಳುತ್ತಿದೆ.

ಸಾಮ್ರಾಜ್ಯವಾದಿ ಮತ್ತು ಹುಕುಮುಶಾಹಿ ಸರಕಾರಗಳ ವಿರುದ್ಧ ನಮ್ಮ ಇಚ್ಛಾಶಕ್ತಿಯನ್ನು ಪ್ರಭಾವಿತಗೊಳಿಸುವದರ ಬದಲು ಹಿಂದೆ ಜಗ್ಗುತ್ತಿರುವುದು ಸಮರ್ಥನೀಯವಾಗಲಾರದೆಂದು ಈ ಕಮಿಟಿಯ ಅಭಿಪ್ರಾಯವಿದೆ. ಈ ಸರಕಾರ ನಮ್ಮ ಮತ್ತು ಮಾನವತೆಯ ಹಿತದ ಸಲುವಾಗಿ ಕೆಲಸಮಾಡಲು ನಮಗೆ ಅಡ್ಡಿಯನ್ನು ಮಾಡುತ್ತಿದೆ. ತನ್ನ ಪ್ರಭುತ್ವವನ್ನು ಮೆರೆಸುತ್ತಿದೆ. ಆದ್ದರಿಂದ ಭಾರತದ ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು ಎಂಬುದನ್ನು ಸಿದ್ಧಮಾಡಿ ತೋರಿಸುವದಕ್ಕಾಗಿ ಅತ್ಯಂತ ವ್ಯಾಪಕ ಪ್ರಮಾಣದಿಂದ, ಅಹಿಂಸಕ ಮಾರ್ಗದಿಂದ ಯುದ್ಧ ಪ್ರಾರಂಭಮಾಡಲು ಮಂಜೂರಾತಿ ಕೊಡುತ್ತದೆಂಥು ಈ ಕಮಿಟಿಯು ಗೊತ್ತುವಳಿಯನ್ನು ಮಾಡುತ್ತದೆ. ಕಳೆದ ೨೨ ವರ್ಷಗಳಿಂದಲೂ ರಾಷ್ಟ್ರವು ಈ ಶಾಂತಯುತವಾದ ಯುದ್ಧಕ್ಕಾಗಿ ತನ್ನ ಶಕ್ತಿಯನ್ನು ಒಂದುಗೂಡಿಸಿದೆ. ಈಗ ಇಡೀ ರಾಷ್ಟ್ರವು ಅದನ್ನೆಲ್ಲ ಉಪಯೋಗದಲ್ಲಿ ತರಬೇಕು. ಈ ಯುದ್ಧವು ಗಾಂಧೀಜಿ ಅವರ ನೇತೃತ್ವದಲ್ಲಿ ನಡೆಯುತ್ತದೆಂದು ಹೇಳಲಿಕ್ಕೆ ಬೇಡ. ಈ ಕಮಿಟಿಯು ಗಾಂಧೀಜಿಯವರಿಗೆ ನೇತೃತ್ವ ವಹಿಸಿಕೊಳ್ಳಲು ಮತ್ತು ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಲು ಬಿನ್ನವಿಸುತ್ತದೆ.

ಬರುವ ಸಂಕಟ ಮತ್ತು ಕ್ಲೇಶಗಳನ್ನು ಧೈರ್ಯದಿಂದಲೂ ಸಹನಶೀಲತೆಯಿಂದಲೂ ಎದುರಿಸಲು ಹಿಂದೀಯರನ್ನು ಈ ಕಮಿಟಿಯು ಬೇಡಿಕೊಳ್ಳುತ್ತದೆ.

ಗಾಂಧೀಜಿಯವರ ನೇತೃತ್ವದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸಮಾಡಬೇಕು. ಭಾರತದ ಸ್ವಾತಂತ್ರ್ಯದ ಶಿಸ್ತಿನ ಸೈನಿಕರೆಂದು ಅವರ ಆಜ್ಞೆಯನ್ನು ಪಾಲಿಸಬೇಕು. ಅಹಿಂಸೆಯು ಈ ಯುದ್ಧದ ತಳಹದಿಯಾಗಿದೆ ಎಂಬುದನ್ನು ಜನರು ಲಕ್ಷ್ಯದಲ್ಲಿಡಬೇಕು. ಹೀಗೂ ಒಂದು ಕಾಲ ಬರಬಹುದು: ಸೂಚನೆಗಳನ್ನು ಕೊಡುವದು ಅಶಕ್ಯವಾಗಬಹುದು, ಅಥವಾ ಅವು ಜನರವರೆಗೆ ಹೋಗಿ ಮುಟ್ಟದೆ ಇರಬಹುದು. ಕಾಂಗ್ರೆಸ ಕಮೀಟಿಯೂ ಅಸ್ತಿತ್ವದಲ್ಲಿರಲಿಕ್ಕಿಲ್ಲ. ಇಂಥ ಸಮಯದಲ್ಲಿ ಅಂದೋಲನದಲ್ಲಿಯ ಪ್ರತಿಯೊಬ್ಬ ಸ್ತ್ರೀ ಪುರುಷರು ಸರ್ವ ಸಾಮಾನ್ಯ ಸೂಚನೆಗಳ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರಬೇಕು. ಸ್ವಾತಂತ್ರ್ಯ ಬೇಕಾಗುವ ಹಾಗು ಅದಕ್ಕಾಗಿ ಪ್ರಯತ್ನಿಸುತ್ತಿರುವ ಪ್ರತಿಯೊಬ್ಬ ಹಿಂದೀಯನೂ ತನ್ನ ಮಾರ್ಗದರ್ಶನವನ್ನು ತಾನೇ ಮಾಡಿಕೊಳ್ಳಬೇಕು. ಕಠಿಣತರ ಮಾರ್ಗದಿಂದ ಮುಂದೆ ಹೆಜ್ಜೆಯನ್ನಿಡುತ್ತಿರಲೇ ಬೇಕು. ದಾರಿಯಲ್ಲಿ ವಿಶ್ರಾಂತಿಗೆ ಸ್ಥಾನವಿಲ್ಲ. ಆ ಮಾರ್ಗವು ಭಾರತದ ಮುಕ್ತಿ. ಮತ್ತು ಭಾರತದ ಸ್ವಾತಂತ್ರ್ಯದತ್ತ ಕೊನೆಗೆ ಹೋಗತಕ್ಕದ್ದಿದೆ.

ಕಾಂಗ್ರೆಸ್ಸಿಗೆ ತನ್ನ ಕೈಯಲ್ಲಿ ಅಧಿಕಾರ ತೆಗೆದುಕೊಳ್ಳುವ ಇಚ್ಛೆಯಿಲ್ಲವೆಂದು ಈ ಸಾರ್ವತ್ರಿಕ ಯುದ್ಧ ಪ್ರಾರಂಭವಾಗುವ ಕಾಲಕ್ಕೆ ಅ. ಭಾ. ಕಾಂ. ಕಮೀಟಿಯು ಎಲ್ಲರಿಗೂ ಹೇಳಬಯಸುತ್ತದೆ. ಅಧಿಕಾರ ಯಾವಾಗ ಬರುವದೋ ಆಗ ಅದು ಎಲ್ಲರದೂ ಆಗುವದು.

---

೪ | ‘ಭಾರತದಿಂದ ತೊಲಗಿರಿ’ ಗೊತ್ತುವಳಿಯಿಂದ ಜನತೆಯ ಮೇಲೆ ಆದ ಪರಿಣಾಮ

‘ಭಾರತದಿಂದ ತೊಲಗಿರಿ’ (Quit India) ಗೊತ್ತುವಳಿ ಸ್ವೀಕೃತವಾದ ಎರಡನೆಯ ದಿನವೇ ಮುಂಜಾನೆ ಪಂಡಿತ ಜವಾಹರಲಾಲರ ಹಸ್ತದಿಂದ ಅಝಾದ ಮೈದಾನಿನಲ್ಲಿ “ಧ್ವಜವಂದನೆ”ಯ ಕಾರ್ಯಕ್ರಮವಾಗುವದಿತ್ತು. ಅಲ್ಲಿಯ ಧ್ವಜದ ಕಂಬವನ್ನು ಸರಕಾರವು ಕಿತ್ತುಹಾಕಿತು. ಆದರೂ ಶ್ರೀಮತಿ ಅಸಫ ಅಲ್ಲಿಯವರ ಹಸ್ತದಿಂದ ಗೊತ್ತಾದ ವೇಳೆಗೆ ಧ್ವಜವಂದನೆಯಾಯಿತು. ಬೆಳಗು ಜಾವದಲ್ಲಿ ಮುಖಂಡರನ್ನು ಬಂಧಿಸಿದ ಸುದ್ದಿಯನ್ನು ಪ್ರಸಿದ್ಧಪಡಿಸಲಾಯಿತು. ಸರಕಾರವು ಮೆರೆವಣಿಗೆ, ಸಭೆಗಳಿಗೆ ನಿಷೇಧಾಜ್ಞೆ ಹೊರಡಿಸಿತು. ಹತ್ಯಾರ, ಲಾಠಿ ಹಿಡಿಯುವದನ್ನು ಪ್ರತಿಬಂಧಿಸಿತು. ಕೆಲವು ಭಾಗಗಳಲ್ಲಿ ರಾತ್ರಿ ಸಂಚಾರಕ್ಕೆ ತಡೆ ಆಜ್ಞೆ ಹೊರಡಿಸಿತು. ಪೋಲೀಸ ಅಧಿಕಾರಿಗಳು ಲಾಠೀ ಹೊಡೆತ, ಅಶ್ರುವಾಯುಗಳನ್ನು ಮುಕ್ತರೀತಿಯಿಂದ ಉಪಯೋಗಿಸಲು ಪ್ರಾರಂಭ ಮಾಡಿದರು. ಜನರಿಂದ ಸತ್ಯ ಅಹಿಂಸೆಗಳ ಬಂಧನ ಅಪೇಕ್ಷಿಸುವ ಕಾಲ ಮೀರಿ ಹೋಗಿತ್ತು. ಎಲ್ಲದಕ್ಕೂ ಮುಕ್ತದ್ವಾರವಾಗಿತ್ತು.

ಜನತೆ ಕಸವಿಸಿಗೊಂಡಿತ್ತು. ಜೀವದ ಮೇಲೆ ಉದಾರವಾಗಿತ್ತು. ಹಿರಿಕಿರಿಯ ನಾಯಕರೆಲ್ಲರೂ ಬಂಧಿತರಾದ್ದರಿಂದ ದಾರಿತೋರಿಸಲು ಯಾರೂ ಸ್ಥಳದಲ್ಲಿ ಇರಲಿಲ್ಲ. ಆದಕಾರಣ ಜನತೆ ಮುಕ್ತಗೊಂಡಿತ್ತು. ಸರಕಾರದ ಪಾಶವೀಶಕ್ತಿ ಉಚ್ಛೃಂಖಲವಾಗಿ ತಾಂಡವವಾಡತೊಡಗಿತ್ತು. ಜನತೆಯೂ ಉಗಿಬಂಡಿಗಳಿಗೆ ಕಲ್ಲೊಗೆಯುವದು, ಲೂಟಿ ಮಾಡುವದು, ಬೆಂಕಿಹಚ್ಚುವ ಕೆಲಸ ಮಾಡಹತ್ತಿತ್ತು. ಶಾಲೆ–ಕಾಲೇಜುಗಳು ಮುಚ್ಚಿದ್ದವು. ರೇಲ್ವೆ ಹಳಿಗಳ ಫಿಶ್‌ಪ್ಲೇಟುಗಳನ್ನು ಕಿತ್ತುವ ವಿಚಾರ ದೇಶದ ತುಂಬೆಲ್ಲ ಕಾಡುಗಿಚ್ಚಿನಂತೆ ಪಸರಿಸತೊಡಗಿತ್ತು. ವರ್ತಮಾನಪತ್ರಗಳಲ್ಲಿ ಅಂಥ ಸುದ್ದಿಗಳು ಬರತೊಡಗಿದ್ದವು. ಈ ವಿಷಯದಲ್ಲಿ ಬಿಹಾರ ಪ್ರಾಂತವು ಅಗ್ರಗಣ್ಯವಾಗಿತ್ತು. ಅಹಮ್ಮದಾಬಾದಿನ ಗಿರಣಿಗಳು ಮುಚ್ಚಲ್ಪಟ್ಟವು. ಅದರಂತೆಯೇ ಮುಂಬಯಿಯಲ್ಲೂ ಕೆಲವು ಗಿರಣಿಗಳಿಗೆ ಕೀಲಿ ಬಿದ್ದಿದ್ದವು. ಅಲ್ಲದೆ ಮುಂಬಯಿಯಲ್ಲಿ ದೀಪದ ಖಂಬಗಳನ್ನು ಕಿತ್ತಿಹಾಕಿದ್ದು ಕಂಡುಬರುತ್ತಿತ್ತು. ದಾದರದಲ್ಲಿ ಒಂದು ಪೆಟ್ರೋಲು ವಾಹಕ ಮೋಟಾರನ್ನು ಸುಡಲಾಗಿತ್ತು. ಲೋಕಲ್ (ಸ್ಥಳೀಯ) ಗಾಡಿಗಳಂತೂ ನಿಂತಲ್ಲಿಯೇ ನಿಂತುಬಿಟ್ಟಿದ್ದವು. ಮುಂಬೈಯಲ್ಲಿನ ವಾಹನ ಸಂಚಾರವು ಬಹುಶಃ ನಿಂತೇಬಿಟ್ಟಿತು. ಈ ಗೊಂದಲದಲ್ಲಿ ೧೯೪೨ ರ ಅಗಸ್ಟ ೯ ರಂದು ಎಂಟು ಜನರು ಸಾವನ್ನಪ್ಪಿದರು. ೧೬೯ ಜನರೂ ೨೭ ಜನ ಪೋಲಿಸರೂ ಗಾಯಗೊಂಡರೆಂದು ಪ್ರಕಟವಾಗಿತ್ತು. ಎರಡೇ ದಿನಗಳಲ್ಲಿ ಪೋಲೀಸರೂ

ಸೈನಿಕನೂ ಕನಿಷ್ಟ ೧೦–೧೨ ಸಲವಾದರೂ ಜನರ ಮೇಲೆ ಗೋಳೀಬಾರು ಮಾಡಿದರು. ಪುಣೆ, ಅಹಮದಾಬಾದ, ಲಖನೌ, ಕಾನಪುರಗಳಲ್ಲಿಯೂ ಇದೇ ಕೃತ್ಯಗಳು ಇಕ್ಕೆಲಗಳಿಂದಲೂ ಪ್ರಾರಂಭವಾದ ಸುದ್ದಿಗಳು ವೃತ್ತಪತ್ರಿಕೆಗಳಲ್ಲಿ ಓದಲು ಸಿಗುತ್ತಿದ್ದವು. ಅಗ್ನಿಧ್ವಂಸಕರಿಗೆ ಕಾಯಿದೆಯ ಪ್ರಕಾರ ಶಿಕ್ಷೆ ವಿಧಿಸುವದಲ್ಲದೆ ಪಟಕೀ ಶಿಕ್ಷೆಯನ್ನೂ ಕೊಡಲಾಗುವದೆಂದೂ ಸರಕಾರವು ಸುಗ್ರೀವಾಜ್ಞೆ ಹೊರಡಿಸಿತ್ತು. ಅದೇ ರೀತಿ ವಾಹನ, ರೇಲ್ವೆಗಾಡಿ, ಕಟ್ಟಡ, ಟ್ರಾಮರಸ್ತೆ, ಪೂಲು ಮುಂತಾದವುಗಳನ್ನು ಧ್ವಂಸಮಾಡುವವರಿಗೂ ಭಾರೀ ಶಿಕ್ಷೆ ವಿಧಿಸಲಾಗುವದೆಂದು ಸರಕಾರವು ಅದೇ ಕಾಲಕ್ಕೆ ಪ್ರಕಟಿಸಿತ್ತು. ಕಾಂಗ್ರೆಸ್ಸಿಗೆ ಸಹಾನುಭೂತಿ ತೋರಿಸುವ ಸ್ಥಾನಿಕ ಸಂಸ್ಥೆಗಳನ್ನೂ ಜಪ್ತಿಮಾಡಿ ಸರಕಾರವು ತನ್ನ ಸ್ವಾಧೀನಪಡಿಸಿಕೊಂಡಿತು. ಇದರ ಅನುಕರಣವನ್ನು ಅನ್ಯಪ್ರಾಂತೀಯ ಸರಕಾರಗಳೂ ಮಾಡಿದವು. ಒಂದು ಪ್ರಾಂತದಲ್ಲಿ ಒಂದು ಸ್ಥಳದ ಜನರು ಮಾಡಿದ ಪ್ರತೀಕಾರ ಮಾರ್ಗವನ್ನು ಇತರ ಪ್ರಾಂತದ ಜನರೂ ಅನುಸರಿಸ ತೊಡಗಿದರು. ಹೀಗೆ ನಿಜವಿರಲಿ, ಸುಳ್ಳಿರಲಿ, ಒಂದಕ್ಕೆ ಹತ್ತಾಗಿರಲಿ ಇಂಥ ಸುದ್ದಿಗಳು ಮಾತ್ರ ದಿನಪತ್ರಿಕೆಗಳಲ್ಲಿ ಓದಲು ಸಿಗುತ್ತಿದ್ದವು. ಸಂಸ್ಥಾನದ ಜನರೂ ಕೂಡ ಈ ಕೆಲಸದಲ್ಲಿ ಉದಾಸೀನರಾಗಿರಲಿಲ್ಲ. ಅಥವಾ ಹಿಂದೆ ಬಿದ್ದಿರಲಿಲ್ಲ. ಒಂದೇ ವಾರದಲ್ಲಿ ಎಲ್ಲ ಪ್ರಾಂತಗಳಲ್ಲಿಯೂ ಸಂಸ್ಥಾನಗಳಲ್ಲಿಯೂ ಜನರು ಈ ದಿಸೆಯಲ್ಲಿ ಪಳಗಿದವರಾಗಿದ್ದರು. ಹೊಸ ಹೊಸ ಯುಕ್ತಿಗಳನ್ನು ಹುಡುಕುವದು ಜನತೆ ಹಾಗೂ ಸರಕಾರಗಳ ಕಡೆಯಿಂದ ಕಂಡುಬರುತ್ತಿತ್ತು. ಪುಣೆ, ಹೊಸದಿಲ್ಲಿ, ನಾಶಿಕಗಳಲ್ಲಿ ಸರಕಾರವು ಅಮಾನುಷ ದಬ್ಬಾಳಿಕೆ ನಡೆಸಿದೆ ಎಂಬ ಸುದ್ದಿ ಕೇಳಿ ಜನರಲ್ಲಿ ರೊಚ್ಚು–ಕಿಚ್ಚುಗಳು ಹೆಚ್ಚಾಗಹತ್ತಿದ್ದವು. ರೇಲ್ವೆ ನಿಲ್ದಾಣಗಳು, ರೇಲ್ವೆ ಗೋಡಾವುನಗಳು, ಇನ್‌ಕಮ್‌ಟ್ಯಾಕ್ಸ ಕಚೇರಿಗಳು, ಶಾಲೆ–ಕಾಲೇಜ ಕಟ್ಟಡಗಳು, ಪೋಸ್ಟ ಆಫೀಸುಗಳು ಇವೇ ಮೊದಲಾದವುಗಳು ಅನೇಕ ಕಡೆಗಳಲ್ಲಿ ಅಗ್ನಿಗೆ ಆಹುತಿಯಾಗುತ್ತಿದ್ದವು. ಜನರು ಬಿಹಾರದಲ್ಲಿ ಸಚಿವಾಲಯದ ಮೇಲೆ ದಾಳಿ ಮಾಡಿ ಅದನ್ನು ಸುಡುವ ಯತ್ನ ನಡೆಸಿದರು. ಆಗ ನಡೆದ ಗೋಳೀಬಾರಿನಲ್ಲಿ ಗುರ್ಖಾ ಸೈನಿಕ ದಳದವರು ಅನೇಕರನ್ನು ಕೊಂದರಲ್ಲದೆ ಬಹಳಷ್ಟು ಜನರನ್ನು ಗಾಯಗೊಳಿಸಿದ ವಾರ್ತೆ ಬಂದಿತು, ಬಿಹಾರ ಹಾಗೂ ಮುಂಬೈಗಳಲ್ಲಿ ಕೆಲವು ವರಿಷ್ಠ ಅಧಿಕಾರಿಗಳು ತಮ್ಮ ಸರಕಾರೀ ನೌಕರಿಗೆ ರಾಜೀನಾಮೆ ಕೊಡಹತ್ತಿದ ಸುದ್ದಿಯೂ ಹಬ್ಬಿತ್ತು. ಅದರದೇ ಪರಿಣಾಮವೆಂಬಂತೆ ಮುಂಬೈಯಲ್ಲಿ ಸಾರಿಗೆ ಸಾಗಾಟ ಮತ್ತು ರಹದಾರಿಗಳು ಬಹುತರ ನಿಂತೇಹೋಗಿದ್ದವು. ಖಾಸಗಿ ವಾಹನಗಳನ್ನೂ ಮತ್ತು ಅವುಗಳಲ್ಲಿ ಕುಳಿತವರ ತಲೆಯಮೇಲೆ ಗಾಂಧೀಟೊಪ್ಪಿಗೆಯಿದ್ದರೆ ಮಾತ್ರ ಸಂಚಾರಕ್ಕೆ ಆಸ್ಪದವೀಯಲಾಗುತ್ತಿತ್ತು. ಟ್ರಾಮುಗಳ ಹಳಿಗಳಲ್ಲಿ ಉಸುಕು ತುಂಬಿಬಿಟ್ಟಿದ್ದರಿಂದ ಟ್ರಾಮು ಸಂಚಾರ ಸ್ಥಗಿತವಾಗಿತ್ತು.

"ಗೋವಾಲಿಯಾ ಟ್ಯಾಂಕ"ದ ಮೇಲೆ ಅಖಿಲಭಾರತೀಯ ಕಾಂಗ್ರೆಸ ಕಮೀಟಿಯ ಸಭೆಯಲ್ಲಿ "ಭಾರತದಿಂದ ತೊಲಗಿರಿ" ಠರಾವಿನ ಮೇಲೆ ಪಂಡಿತ ಜವಾಹರ

ಲಾಲರು ಮಾಡಿದ ಭಾಷಣವು ವೃತ್ತಪತ್ರಿಕೆಗಳಲ್ಲಿ ಕ್ರಮೇಣವಾಗಿ ಪ್ರಸಿದ್ಧವಾಗತೊಡಗಿತ್ತು. ಅವರು ತಮ್ಮ ಆ ಭಾಷಣದಲ್ಲಿ ಹೇಳಿದುದು ಹೀಗಿದೆ : "ಯುರೋಪ ಖಂಡವು ಭೌತಿಕ ದೃಷ್ಟಿಯಿಂದ ಮುಂದಿರಬಹುದು. ಆದರೆ ಅವರಿಗೆ ಜೀವನ ಕಲೆ ತಿಳಿದಿಲ್ಲ. ಆ ಕಲೆಯು ನೂರಾರು ವರ್ಷಗಳ ವಿಚಾರ ಮಂಥನದಿಂದ ಮತ್ತು ಅನುಭವದಿಂದ ಭಾರತಕ್ಕೆ ತಿಳಿದಿದೆ. ಅದನ್ನು ಕಲಿಯುವದು ಸುಲಭವೇನಲ್ಲ." ಅವರ ಈ ಉದ್ಗಾರದ ಪ್ರಚಾರ ಬಹಳೇ ಆಗಿತ್ತು. ಚಳವಳಿಯ ವಿಷಯದಲ್ಲಿ ಜವಾಹರಲಾಲರು "ಭಾರತವು ತನ್ನ ನಿಶ್ಚಯದಿಂದ ತಿಲಮಾತ್ರವೂ ಹಿಂದೆಗೆಯುವದಿಲ್ಲ. ನಮ್ಮ ದಾರಿಯು ರಾಷ್ಟ್ರೀಯತ್ವದ್ದಾಗಿದೆ. ಆದರೆ ಆ ರಾಷ್ಟ್ರೀಯತ್ವವು ಸಂಕುಚಿತವಾದುದಲ್ಲ" ಎಂದು ಹೇಳಿದ್ದರು.

ಈ 'ಭಾರತದಿಂದ ತೊಲಗಿರಿ' ಠರಾವಿಗೆ ಬೆಂಬಲಕೊಡುತ್ತ ಸರದಾರ ವಲ್ಲಭಭಾಯಿ ಪಟೇಲ ಅವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು : "ನಾವು ಈಗ ಮಾಡಲಿರುವ ಕೃತಿಯೇ ನಮ್ಮನ್ನು ಟೀಕಿಸುವವರಿಗೆ ಉತ್ತರ ಕೊಡಲು ಸಮರ್ಥವಾಗಿದೆ." ಸರದಾರರು ಮತ್ತೂ ಹೇಳಿದ್ದೇನೆಂದರೆ— "ನಿಮಗೆ ಬೇಕಾಗಿದ್ದರೆ ಮುಸಲ್ಮಾನರಿಗೆ ಸ್ವರಾಜ್ಯ ಕೊಡಿರಿ, ಹರಿಜನರಿಗೆ ಕೊಡಿರಿ, ಸಂಸ್ಥಾನಿಕರಿಗೆ ಕೊಡಿರಿ, ಹೆಚ್ಚಿಗೇನು ಹೇಳುವದು. ಬೇಕಾದರೆ ಹಿಂದುಸ್ಥಾನದಲ್ಲಿಯ ಕಳ್ಳ-ಕಾಕರಿಗೆ ಕೊಡಿರಿ. ಆದರೆ ನೀವು ಒಮ್ಮೆ ಇಲ್ಲಿಂದ ಹೊರಟು ಹೋಗಿರಿ. ಜಪಾನ ಹಿಂದುಸ್ಥಾನದಲ್ಲಿ ಬರಬೇಕೆಂದು ಹೇಳುವವರು ಕಾಂಗ್ರೆಸ್ಸನ್ನು ಬಿಟ್ಟು ಹೋಗಿದ್ದಾರೆ. ಕಾಂಗ್ರೆಸ್ಸಿನಲ್ಲಿ ಈಗಿರುವವರು ಜಪಾನಿನೊಡನೆ ಯುದ್ಧಮಾಡಬೇಕೆಂಬವರಾಗಿದ್ದಾರೆ. ಜಪಾನಿನ ಪ್ರತೀಕಾರ ಮಾಡಲು ಇಂಗ್ಲೀಷರು ಹೊರಟುಹೋಗಿ ನಮಗೆ ಮಾರ್ಗವನ್ನು ನಿರಾತಂಕ ಮಾಡಿ ಕೊಡಬೇಕು." ಈ ಮತ್ತು ಈ ರೀತಿಯ ಶ್ರೇಷ್ಠನಾಯಕರ ಸ್ಪಷ್ಟ ನುಡಿಗಳು ಜನರಲ್ಲಿ ಸ್ಫೂರ್ತಿಯನ್ನೂ ಕೆಚ್ಚನ್ನೂ ಹೆಚ್ಚಿಸಲು ಕಾರಣೀಭೂತವಾಗಿದ್ದುವು. ಸರದಾರರು ತಮ್ಮ ಭಾಷಣದಲ್ಲಿ ಜನರಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದರು. ಈ ಸಲದ ಯುದ್ಧವೆಂದರೆ ಹಿಂದಿನಂಥ ಒಂದು ಚಳವಳಿಯಲ್ಲ; ಸಾದಾ ಚಳವಳಿ ಎಂದು ಅದರಲ್ಲಿ ಧುಮುಕಿದರೆ ಮೋಸ ಹೋದೀರಿ. ಬೇರೆ ಬೇರೆ ದೇಶಗಳ ಜನರು ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ಅರ್ಪಿಸುತ್ತಿದ್ದಾರೆ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ಸೇವೆಗಾಗಿ ಸರ್ವಸ್ವವನ್ನೂ 'ಆಹುತಿಕೊಡುವ ಸಂಧಿಯು ನಿಮ್ಮೆಡೆಗೆ ತಾನಾಗಿಯೇ ನಡೆದು ಬಂದಿದೆ. ಈ ಗಂಗೆಯಲ್ಲಿ ಮಿಂದು ಪವಿತ್ರರಾಗಿರಿ. ಯುದ್ಧದ ಯೋಜನೆಯನ್ನು ಸ್ವತಃ ಮಹಾತ್ಮಾಜೀಯವರೇ ನಿರ್ಧರಿಸಲಿರುವರು. ನಮ್ಮ ಕೆಲಸವೆಂದರೆ ಶಿಸ್ತಿನ ಸೈನಿಕನಂತೆ ಅವರು ಕೊಟ್ಟ ಆಜ್ಞೆಯನ್ನು ಪಾಲಿಸುವದಾಗಿದೆ."

ಕಾಂಗ್ರೆಸ್ಸಿನ ಈ ಆಹ್ವಾನವನ್ನು ಸ್ವೀಕರಿಸಿ, ಸರಕಾರವೂ ವಿಚಾರ ಹಾಗೂ ಯೋಜನಾಪೂರ್ವಕವಾಗಿ ದೃಢತೆಯಿಂದ ಹೆಜ್ಜೆಯಿಡಲು ಮುಂದೆ ಬರತೊಡಗಿದೆ. ಅದು ಅಂಗಡಿಕಾರರಿಗೂ; ವ್ಯಾಪಾರಿಗಳಿಗೂ ಗಂಭೀರವಾದ ಎಚ್ಚರಿಕೆಯನ್ನು ಕೊಡುವ

ಆಜ್ಞಾಪತ್ರವನ್ನು ಹೊರಡಿಸಿದೆ. ಅಂಗಡಿಕಾರರೂ ವ್ಯಾಪಾರಿಗಳೂ ಹರತಾಳದಲ್ಲಿ ಭಾಗವಹಿಸಕೂಡದು. ಅಂಗಡಿ ಮತ್ತು ಚಹದ ಅಂಗಡಿಗಳನ್ನು ಒತ್ತಾಯದಿಂದ ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು ತೆರೆದಿಡುವ ಅಧಿಕಾರವನ್ನು ಜಿಲ್ಹಾಧಿಕಾರಿಗಳಿಗೆ ಕೊಡಲಾಯಿತು. ಈ ಹರತಾಳದಲ್ಲಿ ಭಾಗವಹಿಸುವ ತಪ್ಪಿಗಾಗಿ ಮೂರು ವರ್ಷ ಶಿಕ್ಷೆ ಇಲ್ಲವೆ ದಂಡ ಅಥವಾ ಎರಡೂ ಶಿಕ್ಷೆ ಕೊಡಲಾದೀತೆಂದು ಪ್ರಸಿದ್ಧಿಸಲಾಗಿತ್ತು.

ಬಂಧಿತರಾಗುವ ಮೊದಲು ಮ. ಗಾಂಧೀಜಿಯವರು ಚೀನದೇಶಕ್ಕೆ ಒಂದು ಸಂದೇಶವನ್ನು ಕಳಿಸಿದ್ದರು. ಅದು ಇದೇ ವೇಳೆಗೆ ವೃತ್ತಪತ್ರಗಳಲ್ಲಿ ಪ್ರಕಟವಾಯಿತು. ಅವರು ತಮ್ಮ ಸಂದೇಶದಲ್ಲಿ "ಕಾಂಗ್ರೆಸ್ಸಿನ ಯುದ್ಧವು ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಎಷ್ಟರ ಮಟ್ಟಿಗೆ ಇದೆಯೋ ಅಷ್ಟೇ ಚೀನದ ಸಂರಕ್ಷಣಕ್ಕಾಗಿಯೂ ಇದೆ ಎಂಬುದನ್ನು ಚೀನವು ಲಕ್ಷದಲ್ಲಿಟ್ಟುಕೊಳ್ಳಲಿ" ಎಂದು ಹೇಳಿದ್ದರು. ಇಂಥ ಸುದ್ದಿಗಳಿಂದ ಸಾಮಾನ್ಯ ಜನತೆಯೂ ಕೂಡ ಜಾಗತಿಕ ದೃಷ್ಟಿಯಿಂದ ತಮ್ಮ ದೇಶದ ಸ್ವಾತಂತ್ರ್ಯದ ವಿಚಾರವನ್ನು, ಊಹಾಪೋಹವನ್ನು ತಮ್ಮಷ್ಟಕ್ಕೆ ತಾವೇ ಸ್ವಾಭಾವಿಕವಾಗಿ ಮಾಡತೊಡಗಿತು.

ಇದೇ ವೇಳೆಗೆ ಸರ್ ಸ್ಟ್ಯಾಫೋರ್ಡ ಕ್ರಿಪ್ಸ ಅವರು ಹಿಂದುಸ್ತಾನದಲ್ಲಿಯ ಅರಾಜಕತೆಯ ಜ್ವಲಂತ ಚಿತ್ರವನ್ನು ಬಣ್ಣಿಸಿ ಪ್ರಕಟಿಸಿದ್ದರು. ಭಾರತವು ಸಂಗ್ರಾಮಕ್ಕೆ ಆರಿಸಿದ ಈ ವೇಳೆ ನಿಶ್ಚಿತವಾಗಿ ಗಂಡಾಂತರಕಾರಿಯೆಂದು ಅದರಲ್ಲಿ ಹೇಳಲಾಗಿತ್ತು. ಇದಕ್ಕೆ ತಕ್ಕ ಉತ್ತರ ಕೊಟ್ಟು ಕ್ರಿಪ್ಸರ ಎಣಿಕೆಯೂ ಭೀತಿಯೂ ತಳಬುಡವಿಲ್ಲದ್ದು, ಕುಚ್ಚಿತವಾದುದು, ತಪ್ಪಾದುದು ಎಂದು ಭಾರತದಲ್ಲಿಯ ಎಲ್ಲ ಪಕ್ಷಗಳೂ ಘಂಟಾಘೋಷವಾಗಿ ಹೇಳಿ, ಸರಕಾರಕ್ಕೂ ಜನತೆಗೂ ಮನವರಿಕೆ ಮಾಡಿಕೊಡುವ ವಿಫಲ ಪ್ರಯತ್ನ ಮಾಡಿದವು.

ಕಾಂಗ್ರೆಸ್ಸಿನ ಈ ಆಹ್ವಾನವನ್ನು ಎದುರಿಸುವ ತನ್ನ ನಿಶ್ಚಯವನ್ನು ಸರಕಾರವು ಪತ್ರಿಕೆಗಳ ಹಾಗೂ ತನ್ನ ಕೃತಿಗಳ ಮೂಲಕ ಜಾಹೀರು ಮಾಡಿತ್ತು. ಸರಕಾರವು ವೃತ್ತಪತ್ರಗಳು ಚಳವಳಿಯ ಸುದ್ದಿಗಳನ್ನು ಪ್ರಸಿದ್ಧಿಸಕೂಡದೆಂಬ ನಿರ್ಬಂಧ ಹಾಕುವ ಕ್ರಮವನ್ನು ಮೊದಲು ಕೈಗೊಂಡಿತು. ಅಹಮ್ಮದಾಬಾದಿನಲ್ಲಿ ಜನ ಗುಂಪುಗೂಡಬಾರದೆನ್ನುವ ಆಜ್ಞೆಯನ್ನು ಅಮಲಿನಲ್ಲಿ ತಂದಿತು. ಹಾಗೆಯೇ ಅದರ ಅನುಕರಣೆಗೆ ಇಡೀ ದೇಶದಲ್ಲಿ ಮತ್ತು ಎಲ್ಲ ಪ್ರಾಂತಗಳಲ್ಲಿ ವೇಳೆಯೇ ಹಿಡಿಯಲಿಲ್ಲ. ಜನತೆಯ ಕಡೆಯಿಂದಲೂ ಕೂಡ ಪುನಃ ಸ್ವಾತಂತ್ರ್ಯ ಘೋಷಣೆ ನಾಲ್ಕೂ ಕಡೆಯಿಂದಲೂ ಆಗತೊಡಗಿತು. ಅಲ್ಲಲ್ಲಿ ಕಾಂಗ್ರೆಸ ಕಾರ್ಯಕರ್ತರ ಖಾಸಗಿ ಅಥವಾ ಗುಪ್ತ ಸಭೆಗಳು ಜರುಗಿ ಅವರವರ ಕಾರ್ಯಕ್ರಮಗಳು ನಿಶ್ಚಿತಗೊಳಿಸುತ್ತಿದ್ದವು.

ಕರ್ನಾಟಕದ ಕಡೆಗೆ ದೃಷ್ಟಿ ಹೊರಳಿಸಿದರೆ ಅಲ್ಲಿಯೂ ಎರಡೂ ಕಡೆಯಿಂದ ಕ್ರಿಯೆ-ಪ್ರತಿಕ್ರಿಯೆಗಳು ಆಗತೊಡಗಿದ್ದವು. ನಿವೃತ್ತ ಅರ್ಥ ಮಂತ್ರಿ ಶ್ರೀ. ಅ. ಬಾ. ಲಠ್ಠೆ,

ಜೀವಣರಾವ ಯಾಳಗಿ, ಭೀಮರಾವ ಪೋತದಾರ, ಮತ್ತು ಎಸ್. ಎನ್. ಅಂಗಡಿ ಅವರನ್ನು ೯-೮-೧೯೪೨ ರಂದು ಸೆರೆಹಿಡಿಯಲಾಯಿತು. ಹುಬ್ಬಳ್ಳಿಯಲ್ಲಿ ಡಾ. ಪರ್ಡೀಕರರನ್ನು ಬಂಧಿಸಲಾಯಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯು ಬೇಕಾಯದೆಶೀರವೆಂದು ಸಾರಲಾಯಿತು. ಅದರಂತೆಯೇ ಪುಣೆಯಲ್ಲಿ ಶ್ರೀ ಮಾಮಾ ಸಾಹೇಬ ದೇವಗಿರಿಕರ, ಬಾಪೂಸಾಹೇಬ ಗುಪ್ತೆ, ತಾತ್ಯಾ ಸಾಹೇಬ ದೇಶಪಾಂಡೆ ಅವರ ಬಂಧನವಾಯಿತು. ಈ ಮುಖಂಡರ ಬಂಧನದಿಂದ ಎರಡೂ ಪ್ರಾಂತಗಳಲ್ಲಿ ಪ್ರತಿಕ್ರಿಯೆ ಹೆಚ್ಚಾಗಿ ನಡೆಯಿತು.

ಇದೇ ವೇಳೆಗೆ ದೇಶಭಕ್ತ ಬ್ಯಾರಿಸ್ಟರ ಸಾವರಕರರು ಸರಕಾರಕ್ಕೆ ಗಂಭೀರ ಎಚ್ಚರಿಕೆ ಕೊಟ್ಟುದು ಪ್ರಸಿದ್ಧವಾಗಿತ್ತು. ಆದರೆ ಅವರ ವೃತ್ತಿ ಮೊದಲು ಕೆಲದಿನಗಳ ವರೆಗೆ ತಟಸ್ಥವಾಗಿದ್ದಿತ್ತೆಂದು ಹೇಳಬೇಕಾಗುತ್ತದೆ. ಮುಂದೆ ಒಂದೆರಡು ದಿನಗಳಲ್ಲಿ ಪುಣೆಯಲ್ಲಿಯ ಎಲ್ಲ ಪ್ರಸಿದ್ಧ ಕಾಂಗ್ರೆಸ್ ಮುಖಂಡರನ್ನು ಬಂಧಿಸಲಾಯಿತು. ಅಂಥವ ರಲ್ಲಿ ಶ್ರೀ ಶಂಕರರಾವ ದೇವ, ಶಂಕರರಾವ ಮೋರೆ, ಕಾಕಾಸಾಹೇಬ ಗಾಡಗೀಳ, ಕೇಶವರಾವ ಜೇಧೆ, ಡಾ॥ ದಾತಾರ, ಆಚಾರ್ಯ ಲಿಮಯೆ, ಪೋಪಟಲಾಲ ಶಹಾ ರಘುನಾಥರಾವ ಖಾಡೀಲಕರ, ಮತ್ತು ಪ್ರೇಮಾಬಾಯಿ ಕಂಟಕ ಮೊದಲಾದವರು, ಇದ್ದರು.

ಬಂಧಿತರಾದ ಮುಖಂಡರಲ್ಲಿ ಮಹಾತ್ಮಾ ಗಾಂಧಿಯವರನ್ನು ಆಗಾಖಾನ ಅರಮನೆಯಲ್ಲಿಡಲಾಯಿತು. ಅವರೊಂದಿಗೆ ಸರೋಜಿನೀ ದೇವಿ, ಮೀರಾಬೆನ್, ಮಹಾದೇವಭಾಯಿ ದೇಸಾಯಿ ಅವರನ್ನು ಇಡಲಾದ ಸುದ್ದಿ ಪ್ರಕಟವಾಗಿತ್ತು. ಸರಕಾರವು ಬಹುಶಃ ಎಲ್ಲ ಕಡೆಗಳಲ್ಲಿಯ ಕಾಂಗ್ರೆಸ ಕಮಿಟಿಗಳನ್ನು ಕಾನೂನು ಬಾಹಿರವೆಂದು ಸಾರಿತು. ನಗರ ನಗರಗಳಲ್ಲಿಯೂ ಗುಂಡಿನ ಸುರಿಮಳೆಯ ಸತ್ರ ಪ್ರಾರಂಭವಾಯಿತು. ಇದೇ ಹೊಡೆತದಲ್ಲಿ ವಿನೋಬಾಜೀಯವರೂ ದಾದಾ ಧರ್ಮಾಧಿಕಾರಿಯವರೂ ಬಂಧಿತರಾದರು. ಲಾಹೋರಿನಲ್ಲಿ ಲಾಲಾ ದುನಿಚಂದ, ಕಟಕದಲ್ಲಿ ಗೋಪಬಂಧು ಚೌಧರಿ, ಪಾಟಣಾದಲ್ಲಿ ರಾಜೇಂದ್ರಪ್ರಸಾದರನ್ನೂ ಸೆರೆಹಿಡಿಯಲಾಯಿತು. ಪುರುಷೋ ತ್ತಮದಾಸ ಟಂಡನ್ ಮತ್ತು ಡಾ॥ ಕಟಜು ಅವರನ್ನು ಅಲಹಾಬಾದಿನಲ್ಲಿ ಹಿಡಿಯ ಲಾಯಿತು. ಮದ್ರಾಸಿನಲ್ಲಿ, ಎಸ್. ಸತ್ಯಮೂರ್ತಿ ಅವರನ್ನು ಬಂಧಿಸಿದರು. ಈ ಮುಖಂಡರೆಲ್ಲರೂ ಬಂಧಿತರಾದ ಮೇಲೆ ಆಯಾಯ ಭಾಗದ ಜನರು ರೌದ್ರಾ ವೇಷದಿಂದ ಕ್ರುದ್ಧರಾಗಿ ಎದ್ದರು. ಕಿಚ್ಚು ಹೊತ್ತಿಕೊಂಡಿತೆಂಬುದನ್ನು ಹೇಳುವದೇ ಬೇಡ.

ಮುಂಬೈ ನಗರದಲ್ಲಿ ಹರತಾಳ ಹಾಗೂ ಸಂಪುಗಳು ನಡೆದೇ ಇದ್ದವು. ನಗರದ ಎಲ್ಲ ವ್ಯವಹಾರವೂ ಕಟ್ಟಾಗಿತ್ತು. ಟ್ರಾಮು ಹಾಗೂ ಬಸ್ಸುಗಳ ಸಾಗಾಟ ನಿಲ್ಲಿಸುವ ದಕ್ಕೆ ವಿದ್ಯಾರ್ಥಿಗಳ ಪ್ರಯತ್ನ ದಿನದಿನಕ್ಕೂ ಹೆಚ್ಚುತ್ತಲೇ ಇತ್ತು. ಪೋಲೀಸ ಚೌಕಿ ಗಳನ್ನು ಸುಡುವ ಕಾರ್ಯ ಅಲ್ಲಲ್ಲಿ ಭರ-ಭರಾಟಿಯಿಂದ ನಡೆಯಿತು. ಈ ಹೊಸ

ಕ್ರಮ ಭಾರತದಾದ್ಯಂತ ವ್ಯಾಪಿಸಲು ವೇಳೆ ಹಿಡಿಯಲಿಲ್ಲ. ಒಬ್ಬ ಸಾಮಾನ್ಯ ಮನುಷ್ಯ ಎಲೆ-ಅಡಿಕೆ-ತಿನ್ನಬೇಕೆಂದು ತನ್ನ ಮನೆಯ ಹೊರಗೆ ಬಂದಿದ್ದ; ಅವನು ಎಲೆಯಡಿಕೆಯ ಬದಲು ಪೋಲೀಸರ ಗುಂಡಿನೇಟನ್ನು ತಿಂದೇ ಮರಣಕ್ಕೀಡಾದನು. ಇದರ ಮೇಲಿಂದ ನಗರದಲ್ಲಿಯ ಗಂಭೀರ ವಾತಾವರಣದ ಸಹಜ ಕಲ್ಪನೆ ಬರಬಹುದು. ಹ್ಯಾಟುಗಳ ಹೋಳಿಯು ನಾಲ್ಕೂ ಕಡೆಗೂ ನಡೆಯಿತು. ರೇಲ್ವೆಸ್ಟೇಶನ್ನುಗಳ ಮೇಲೆ ದಾಳಿ ನಡೆದವು. ಯಾರು ಯಾರು, ಎಲ್ಲಿ ಎಲ್ಲಿ ಗುಂಡಿನೇಟು ತಿಂದು ಸಾವಿಗೆ ಗುರಿಯಾದರೆಂಬ ಸುದ್ದಿಗಳ ಸುರಿಮಳೆ ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗತೊಡಗಿತು.

ಕಾಂಗ್ರೆಸ್ಸಿನ ಭಾರತೀಯ ಯುದ್ಧದ ಬಗ್ಗೆ ಚೀನವು ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿತು. ಕೇವಲ ದಬ್ಬಾಳಿಕೆಯ ಗುರಿಯು ಗಂಡಾಂತರಕಾರಿಯಾದುದೆಂಬ ಎಚ್ಚರಿಕೆಯನ್ನು ಲಂಡನ್ ಟಾಯಿಮ್ಸ್ ಪತ್ರಿಕೆಯೂ ಕೊಟ್ಟಿತ್ತು. ಜನತೆಯು ಟೆಲಿಫೋನ ತಂತಿ ಕತ್ತರಿಸುವ, ಪೋಸ್ಟ ಆಫೀಸ, ಕೋರ್ಟುಗಳನ್ನು ಸುಡುವ ಮೊದಲಾದ ಕೆಲಸಗಳನ್ನು ನಡೆಸಿತು. ಸರಕಾರವು ಜನರ ಮೆರವಣಿಗೆಗಳ ಮೇಲೆ ಹಲ್ಲೆ ಮಾಡತೊಡಗಿತು. ಹೀಗೆ ಇಬ್ಬರೂ ತಮ್ಮ ತಮ್ಮ ಕಾರ್ಯಕ್ರಮವನ್ನೂ ಮತ್ತು ಗುರಿ-ಸರಿಯನ್ನೂ ಮತ್ತಿಷ್ಟು ಚುರುಕುಗೊಳಿಸತೊಡಗಿದರು. ಇಬ್ಬರೂ ಇದರ ಅನುಕರಣವನ್ನು ಭಾರತದಾದ್ಯಂತ ಬಹಳ ತರಾತುರಿಯಿಂದ ಮಾಡಹತ್ತಿದರು. ಇದೇ ವೇಳೆಗೆ ಆಗಾಖಾನ ಅರಮನೆಯಲ್ಲಿ ಮಹಾತ್ಮಾಗಾಂಧೀಜಿ ಅವರ ಕಾರ್ಯದರ್ಶಿಗಳಾದ ಮಹಾದೇವಭಾಯಿಯವರ ಆಕಸ್ಮಿಕ ಶೋಚನೀಯ ನಿಧನವಾಯಿತು. ಅದರಿಂದ ಚಳವಳಿಯ ಮೇಲಾಗಲೀ ಇಲ್ಲವೆ ಮಹಾತ್ಮರ ಧೋರಣೆಯ ಮೇಲಾಗಲಿ ಯಾವುದೇ ತರಹದ ದುಷ್ಪರಿಣಾಮವಾಗಲಿಲ್ಲ. ಸರಕಾರದ ದಬ್ಬಾಳಿಕೆಯ ವಿರುದ್ಧ ದೇಶದ ತುಂಬೆಲ್ಲ ನಿಷೇಧಿಸುವ ಕಾರ್ಯಕ್ರಮಗಳು ವ್ಯಾಪಕವಾಗಿ ನಡೆದವು; ಸರಕಾರವೂ ರೌದ್ರರೂಪ ತಾಳಿತು. ಸರಕಾರದ ಕರ್ಫ್ಯೂ ಆಜ್ಞೆಯ ಭಂಗವನ್ನು ನಿರ್ಭಯವಾಗಿ ಮಾಡುವ ಹೊಸದೊಂದು ಕಾರ್ಯಕ್ರಮವನ್ನು ಜನತೆಯು ಪ್ರಾರಂಭಿಸಲೆಣಿಸುತ್ತಿತ್ತು. ಆದ್ದರಿಂದ ದೇಶದಲ್ಲಿ ಕರ್ಫ್ಯೂಗಳ ಸಂಖ್ಯೆ ಕಡಿಮೆಯಾಯಿತು. ಮಹಾತ್ಮರ ಹಾಗೂ ಇನ್ನಿತರ ಕಾಂಗ್ರೆಸ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುವ ಸಭೆಗಳು ೧೮-೯-೧೯೪೨ರಿಂದ ಮೇಲಿಂದ ಮೇಲೆ ಜರುಗಹತ್ತಿದವು. ಈ ವಿಷಯವಾಗಿ ವ್ಯಾಪಾರಸ್ಥರೂ ಅವರ ಸಂಸ್ಥೆಗಳೂ ಮುಂದಾಳುತನವನ್ನು ವಹಿಸಿದ್ದವು. ಅದಕ್ಕೆ ಉತ್ತರವೇನೊ ಎಂಬಂತೆ ಸರಕಾರವು ಎರಡು ಹೊಸ ಹುಕುಮುಗಳನ್ನು ಹೊರಡಿಸಿತು. ತುರ್ತು ಪರಿಸ್ಥಿತಿಯ ಸಲುವಾಗಿ ಪ್ರತ್ಯೇಕ ಕೋರ್ಟು ಸ್ಥಾಪಿಸುವದು ಮತ್ತು ಸಾಮುದಾಯಿಕ ದಂಡ ಹೇರುವದು ಇವೇ ಆ ಎರಡು ಹುಕುಮುಗಳು. ಇವೆರಡನ್ನೂ ಇಡೀ ದೇಶದಲ್ಲಿ ಕಾರ್ಯಗತಗೊಳಿಸಲಾಯಿತು. ಸರಕಾರದ ಈ ಉಪಕ್ರಮದಿಂದ ಪ್ರಜಾವರ್ಗದ ಮೇಲೆ ವಿಚಿತ್ರ ಪರಿಣಾಮವಾಯಿತು. ಸರಕಾರದ ಯಾವದೇ ದಬ್ಬಾಳಿಕೆಯನ್ನು ಎದೆಗೊಟ್ಟು, ಜೀವನವನ್ನೇ ಪಣಕ್ಕೆ ಹಚ್ಚಿ ವಿರೋಧಿಸಬೇಕು

ಎದುರಿಸಬೇಕು ಎಂಬ ಪ್ರವೃತ್ತಿ ಜನರಲ್ಲಿ ಬಲಗೊಳ್ಳತೊಡಗಿತು. ಮೆರವಣಿಗೆ ತೆಗೆಯುವ ಕಾರ್ಯಕ್ರಮವಂತೂ ದೇಶದಲ್ಲಿ ಎಲ್ಲೆಲ್ಲಿಯೂ ದಿನವೂ ನಡೆಯುತೊಡಗಿತು. ಕೋರ್ಟಿನಲ್ಲಿ ಕಾಂಗ್ರೆಸ್ಸಿನ ಘೋಷಣೆಗಳ ಮಹಾಪೂರೇ ಎದ್ದುಬಿಟ್ಟಿತು. ಬೆಳಗಾವಿಯಲ್ಲಿ ೧೫-೮-೧೯೪೨ ರಂದು ಕರ್ನಾಟಕದ ಸಿಂಹ ಗಂಗಾಧರರಾವ ದೇಶಪಾಂಡೆಯವರ ಬಂಧನವಾದ ದಿನದಿಂದ ಬೆಳಗಾಂವ ಜಿಲ್ಹೆಯಲ್ಲಿ ಚಳವಳಿಗೆ ಹೆಚ್ಚಿನ ಬಲ ಬರತೊಡಗಿತು. ಬೆಳಗಾವಿ ಜಿಲ್ಹೆಯೊಳಗಿನ ಚಳವಳಿಯ ವಿಸ್ತೃತವಾದ ವರದಿಯನ್ನೂ ವಿವೇಚನೆಯನ್ನೂ ಪ್ರತ್ಯೇಕ ಪ್ರಕರಣದಲ್ಲಿಯೇ ಕೊಡಬೇಕೆಂದು ನನ್ನ ವಿಚಾರವಿದೆ.

ಪಿಕೆಟಿಂಗ (ನಿರೋಧನೆ), ಮೆರವಣಿಗೆ, ಗೋಳಿಬಾರ, ಕಾರ್ಯಕರ್ತರ ಬಂಧನ ಹಾಗೂ ಶಿಕ್ಷೆಗಳ ಸತ್ರವು ನಾಲ್ಕೂ ಕಡೆಗೂ ಒಂದೇಸಮನೆ ನಡೆದೇ ಇತ್ತು. ಶಿಕ್ಷೆಯ ಅವಧಿಯನ್ನು ಬೆಳೆಸಲಾಯಿತು. ಗುಪ್ತಪತ್ರಿಕೆ (ಬುಲೆಟಿನ್ನು) ಗಳನ್ನು ಹೊರಡಿಸುವ ಉತ್ತಮ ಕಾರ್ಯಕ್ರಮವೂ ಆ ಕಾರ್ಯಕ್ರಮಗಳ ಪಟ್ಟಿಯಲ್ಲಿ ಸೇರಿತು. ಇದಕ್ಕೆ ಉತ್ತರವೆಂಬಂತೆ ಸರಕಾರವು ಕಾಂಗ್ರೆಸ ಕಾರ್ಯಕರ್ತರ ಆಸ್ತಿಪಾಸ್ತಿ ಸರಂಜಾಮುಗಳನ್ನು ಜಪ್ತುಮಾಡುವ ಹೊಸ ಉಪಕ್ರಮವನ್ನು ಪ್ರಾರಂಭಿಸಿತು. ವಿಧ್ವಂಸಕ ಕೃತ್ಯಗಳಿಗಾಗಿ ಮರಣದಂಡನೆ ಅಥವಾ ಫಟಕೀ ಶಿಕ್ಷೆ ಕೊಡಲಾಗುವದೆಂಬ ಹೊಸ ಹುಕುಮನ್ನು ಸರಕಾರವು ಹೊರಡಿಸಿತು.

" ದಾಳಿ, ಅಗ್ನಿಧ್ವಂಸ, ರೇಲ್ವೆಯ ವಿನಾಶ, ಸೇತುವೆ ಕೆಡವುವದೇ ಮೊದಲಾದ ಎಲ್ಲ ಕೃತ್ಯಗಳ ಹೊಣೆಗಾರಿಕೆ ಕಾಂಗ್ರೆಸ್ಸಿನದೇ ಎಂದು ಸರಕಾರವು ಕಾಂಗ್ರೆಸ್ಸನ್ನು ಆರೋಪಿಸಿತು. ಸರಕಾರವು ಮುಂದಾಳುಗಳನ್ನು ಬಂಧಿಸಿದ ಮೂಲಕ ಮಹಾತ್ಮಾಜಿಯವರಿಗೆ ಮಾತುಕತೆಗೆ ಅವಕಾಶ ದೊರೆಯದ್ದರಿಂದ ಜನತೆಯಲ್ಲಿ ನಿರಾಶೆ ಮತ್ತು ಉದ್ರೇಕ ಹೆಚ್ಚಾದ್ದರಿಂದ ಈ ಕೃತಿಗಳು ಸ್ವಾಭಾವಿಕವಾಗಿಯೇ ನಡೆದುವು. ಇಷ್ಟೆಲ್ಲದರ ಹೊಣೆಗಾರಿಕೆಯು ಸರಕಾರದ ಮೇಲೆಯೇ " ಎಂಬುದು ನಿಜವಲ್ಲವೆಂದು ಸರಕಾರದ ಮತವಾಗಿತ್ತು. ಇದರ ಪ್ರತ್ಯಕ್ಷ ದಾಖಲೆ ಎಂಬಂತೆ ಕಾಂಗ್ರೆಸ್ಸಿನ ಒಂದು ಪತ್ರಿಕೆಯನ್ನು ಸರಕಾರವು ಎತ್ತಿ ತೋರಿಸುತ್ತಿತ್ತು. ಆ ಪತ್ರಿಕೆಯ ಪ್ರಕಾರ ಸರಕಾರದ ಕೈಯಲ್ಲಿರುವ ಕಾಗದ ಪತ್ರದ ಮೇಲಿಂದ ಕಾಯಿದೆಭಂಗದಲ್ಲಿ ಮತ್ತು ಈ ಹೋರಾಟದಲ್ಲಿ ಕೆಳಗೆ ಕಾಣಿಸಿದ ಸಂಗತಿಗಳು ಸಮಾವೇಶಗೊಂಡಿದ್ದವು. ಆ ಸೂಚನೆಗಳು ಕಾಂಗ್ರೆಸ್ಸಿನ ' ಭಾರತದಿಂದ ತೊಲಗಿರಿ ' ಎಂಬ ಗೊತ್ತುವಳಿ ಪಾಸಾಗುವ ಮೊದಲೇ ಕೊಡಲ್ಪಟ್ಟಿದ್ದವು. ಈ ಪ್ರಕರಣವು ಆ ವೇಳೆಗೆ ಕೆಲವು ದಿನಗಳ ವರೆಗೆ ವರ್ತಮಾನಪತ್ರಗಳಲ್ಲಿ ಚರ್ಚೆಗೆ ಈಡಾಗಿತ್ತು. ಈ ಬಗೆಗೆ ಮೇಲೆ ಉಲ್ಲೇಖಿಸಿದ ಪತ್ರದಲ್ಲಿ ಕೆಳಗಿನ ಸೂಚನೆ ಮಾಡಲಾಗಿತ್ತು.

೧) ಟೆಲಿಫೋನು ತಂತಿ ಕತ್ತರಿಸುವದು,

೨) ರೇಲ್ವೆ ದಾರಿಗಳ ಹಾಗೂ ಸೇತುವೆಗಳ ನಾಶ, ಉಗಿಬಂಡೆಗಳನ್ನು ಗಂಡಾಂತರ ಸರಪಳಿ ಎಳೆದು ನಿಲ್ಲಿಸುವದು.
೩) ಟಿಕೆಟ್ಟಿಲ್ಲದೆ ಪ್ರವಾಸ ಮಾಡುವದು.
೪) ಪೋಲೀಸ ಮತ್ತಿತರ ಸರಕಾರೀ ಕಚೇರಿಗಳಿಗೆ ಹೋಗಿ, ಸರಕಾರೀ ನೌಕರರಿಗೆ ರಾಜೀನಾಮೆ ಕೊಡಲು ಒತ್ತಾಯಮಾಡುವದು.
೫) ಹರತಾಳ ಆಚರಿಸುವದು,
೬) ಸೇಂದಿಯ ಗಡಂಗಗಳ ಮೇಲೆ ಪಿಕೆಟಿಂಗು.
೭) ಸರಕಾರದ ಯುದ್ಧ ಕಾರ್ಯದಲ್ಲಿ ಅಡ್ಡಿ-ಆತಂಕ ಒಡ್ಡುವದು.

ಈ ಸೂಚನೆಗಳು ಕಾಂಗ್ರೆಸ ವರ್ಕಿಂಗ ಕಮೀಟಿಯಿಂದಲೇ ಬಂದಿರಬೇಕೆಂದು ಸರಕಾರದ ಮನವರಿಕೆಯಾಗಿದೆ.

೧೯೪೨ರ ಆಗಸ್ಟ ೩೦ರ ಸುಮಾರಿಗೆ ಇದರ ಅಲ್ಲೋಲ ಕಲ್ಲೋಲ ವೆದ್ದಿತ್ತು. ಆದರೆ ಮುಂದೆ ಸಾರಾಸಾರ ವಿಚಾರಮಾಡಿ ತಮ್ಮ ಪಕ್ಷವು ಕುಂಟಾಗಿದೆ ಎಂದು ತಿಳಿದು. ಸರಕಾರವು ಇದರ ಬಗೆಗಿನ ತನ್ನ ಆಗ್ರಹವನ್ನು ತತ್ವತಃ ಹಿಂದೆಗೆದು ಕೊಂಡದ್ದರಿಂದ ಈ ಪ್ರಕರಣವು ಹಾಗೆಯೇ ಕಂದಿ, ಕುಂದಿಹೋಯಿತು.

ಹಿಂದೂ ಮಹಾಸಭೆಯೂ ಕೂಡ ತಾ. ೨-೯-೧೯೪೨ ರಂದು ಕಾಂಗ್ರೆಸ್ಸಿನ ದಾರಿ ತುಳಿಯುತ್ತ ಇಂಥದೇ ಒಂದು ಬೇಡಿಕೆಯನ್ನು ಮುಂದಿಟ್ಟಿತು : "ಸದ್ಯದ ಬಿಕ್ಕಟ್ಟಿನ ಪ್ರಸಂಗವನ್ನು ತಪ್ಪಿಸಲು ಸರಕಾರವು ಅಧಿಕಾರತ್ಯಾಗ ಮಾಡಿ ಹಿಂದುಸ್ಥಾನ ದೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು." ಆದರೆ ಸರಕಾರದ ಧೋರಣೆ ಇನ್ನೂ ವಿಶೇಷ ಬಿಗುವಿನದೇ ಇತ್ತು. ಒಪ್ಪಂದ ಮಾಡಿಕೊಳ್ಳುವದು ಒತ್ತಟ್ಟಿಗೇ ಉಳಿಯಿತು. ಆದರೆ ಸಾಮುದಾಯಿಕ ದಂಡಗಳ (ಪುಂಡಗಂದಾಯಗಳ) ಸಂಖ್ಯೆ ಮತ್ತು ಅವುಗಳ ಮೊತ್ತವನ್ನು ಹೆಚ್ಚಿಸಲು ಸರಕಾರವು ಪ್ರಾರಂಭಿಸಿತು.

ಹೀಗೆಯೇ ಇನ್ನೊಂದು ಸಣ್ಣ ಬಿರುಗಾಳಿಯು ಇದೇ ವೇಳೆಗೆ ಬೀಸಿತು (೧೧-೯-೧೯೪೨). ಮಿ. ಚರ್ಚಿಲ್ಲರು ಪಾರ್ಲಮೆಂಟಿನಲ್ಲಿ ಒಂದು ಉದ್ದಾಮತನದ ಭಾಷಣವನ್ನು ಮಾಡಿದರು. ಅವರ ಆ ಉದ್ದಾಮತನದ ಭಾಷಣದ ಮೇಲೆ ಅಲ್ಲಿಂದ ಲ್ಲಿಯೇ ಪ್ರಶ್ನೆಗಳ ಸುರಿಮಳೆಯಾಯಿತು. ಕಾಂಗ್ರೆಸ್ಸಿನ "ಭಾರತದಿಂದ ತೊಲಗಿರಿ"ಯ ಆಂದೋಲನವು ಅಯಶಸ್ವಿಯಾಯಿತೆಂದು ಮಿ. ಚರ್ಚಿಲ್ಲರು ಆ ಭಾಷಣದಲ್ಲಿ ಪ್ರೌಢಿಮೆ ಕೊಚ್ಚಿಕೊಂಡಿದ್ದರು. ಕೆಲವು ದಿನಗಳ ವರೆಗೆ ಭಾರತದಲ್ಲಿಯೂ ಆ ಭಾಷಣದ ಮೇಲೆ ಟೀಕೆಯು ನಡೆದಿತ್ತು. ಬ್ರಿಟಿಶ ಪಾರ್ಲಮೆಂಟಿನಲ್ಲಿ ಮಿ. ಚರ್ಚಿಲ್ಲರಿಗೆ ಧಿಕ್ಕಾರ ಮತ್ತು ನಿಷೇಧವಾಯಿತು. ಆ ವೇಳೆಗೆ ಬ್ಯಾ. ಸಾವರಕರರು "ಹಿಂದುಸ್ಥಾನದ ಭವಿತವ್ಯವು ಈಗ ಮಿ. ಚರ್ಚಿಲ್ಲರ ಕೈಯಲ್ಲಿ ಉಳಿದಿಲ್ಲ" ವೆಂದು ಸ್ಪಷ್ಟ ಉದ್ಗಾರ ತೆಗೆದರು.

"೧೯೪೨ ನೇ ಡಿಸೆಂಬರ ೧ಸೇ ತಾರೀಖಿನಿಂದ ಹಿಂದುಸ್ಥಾನವು ಪೂರ್ಣ ಸ್ವತಂತ್ರವಾಯಿತು ಎಂದು ಘೋಷಣೆ ಮಾಡಿರಿ. ಕಾಂಗ್ರೆಸ ಮತ್ತು ಇನ್ನಿತರ ಸಂಸ್ಥೆಗಳ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿರಿ. ಮ. ಗಾಂಧೀಜಿ ಹಾಗೂ ಇತರ ಮುಖಂಡ ರನ್ನೆಲ್ಲ ಕೂಡಲೆ ಬಂಧಮುಕ್ತ ಮಾಡಿರಿ, ಈಗ ವಸೂಲ ಮಾಡಿದ ದಂಡದ ಹಣವನ್ನು ತಿರುಗಿ ಕೊಡಿರಿ. ಹೊಸ ಚುನಾವಣೆ ನಡೆಸಿರಿ, ಕಾಂಗ್ರೆಸು ಹಾಗೂ ಮುಸ್ಲಿಂ ಲೀಗಗಳಿಗೆ ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚಿಸಲು ಕರೆ ಕೊಡಿರಿ, ಅದಾಗದಿದ್ದರೆ ಕಾಂಗ್ರೆಸ್ಸೊಂ ದನ್ನೇ ಕೇಳಿರಿ. ಅದು ಕಾಂಗ್ರೆಸ್ಸಿಗೆ ಒಪ್ಪಿಗೆ ಆಗದಿದ್ದರೆ, ಮುಸ್ಲಿಂ ಲೀಗ ಒಂದಕ್ಕೇ ರಾಷ್ಟ್ರೀಯ ಸರಕಾರ ರಚಿಸಲು ಕೇಳಿಕೊಳ್ಳಿರಿ." ಈ ಆಶಯದ ಒಂದು ಗೊತ್ತುವಳಿ ಯನ್ನು ೧೬-೯-೧೯೪೨ ರಂದು ಶ್ರೀ ಸಂತಸಿಂಗ ಅವರು ವಿಧಾನ ಮಂಡಲದ ಮುಂದಿಟ್ಟರು—ಎಂದು ಆಗ ಪ್ರಕಟವಾಗಿತ್ತು. ಅದಕ್ಕೆ ಮಿ. ಮ್ಯಾಕ್ಸವೆಲ್ಲರು ಉತ್ತರಿ ಸಿದರು: "ಇದು ಜನತೆಯ ಚಳವಳಿಯೆಂದು ಹೇಳಲು ಬರುವದಿಲ್ಲ. ಎಲ್ಲ ಹೊಣೆ ಗಾರಿಕೆಯೂ ಕಾಂಗ್ರೆಸ್ಸಿನದೇ ಎಂದು ಹೇಳಿದರು." ಆ ಕಾರಣದಿಂದ ಆ ಗೊತ್ತುವಳಿ ಬಿದ್ದುಹೋಯಿತು.

ಸಾರಾಂಶ—ಇಷ್ಟೆ, ಅದು ಜನತೆಯಿಂದ ನಡೆಯುವ ಕೊನೆಯ ಹೋರಾಟ ವೆಂದು ನಿರ್ಧರಿಸಿದನಂತರ ಜನತೆಯು ತನ್ನ ಪ್ರಯತ್ನದ ಸಹನಶೀಲತೆಯ ಮತ್ತು ತ್ಯಾಗದ ಚರಮ ಸೀಮೆಯನ್ನು ಮುಟ್ಟಿತೆಂಬುದರಲ್ಲಿ ಸಂದೇಹವಿಲ್ಲ. ಕಾಂಗ್ರೆಸಿನ "ಭಾರತದಿಂದ ತೊಲಗಿರಿ" ಗೊತ್ತುವಳಿಯ ಮೂಲಕ ಕಾಂಗ್ರೆಸ್ಸು ಹಾಗೂ ಮಹಾತ್ಮಾಜೀಯವರು ಪ್ರಾರಂಭಿಸಿದ ಅಹಿಂಸಕ ಕ್ರಾಂತಿಯು ಆರಂಭವಾಯಿತು. ಸರ ಕಾರದ ಉಗ್ರ ದಬ್ಬಾಳಿಕೆಯ ಪ್ರತಿಕ್ರಿಯೆ ನಡೆದೇ ಇತ್ತು. ರೇಲ್ವೆ ಬಂಡಿಗಳ ಮೇಲೆ ಕಲ್ಲೆಸೆ ಯುವದು, ಲೂಟಿ, ಬೆಂಕಿ-ಹಚ್ಚುವದು, ಶಾಲೆ-ಕಾಲೇಜುಗಳಿಗೆ ಬಹಿಷ್ಕಾರ, ರೇಲ್ವೆ ಹಳಿಗಳ ಫಿಶ್ ಪ್ಲೇಟುಗಳನ್ನು ತೆಗೆಯುವದು, ಉಗಿಬಂಡಿಗಳನ್ನು ಉರುಳಿಸುವದು, ಸರಕಾರೀ ಕಟ್ಟಡಗಳ ಧ್ವಂಸ, ರೇಲ್ವೆ ಮಾರ್ಗಗಳನ್ನು ನಾಶಗೊಳಿಸುವದು ಟ್ರಾಮುಗಳ ಹಳಿಗಳಲ್ಲಿ ಉಸುಕು ತುಂಬುವದು ಇವೇ ಮೊದಲಾದ ಕೆಲಸಗಳಲ್ಲಿ ಕಾರ್ಯಕರ್ತರೂ ಜನತೆಯೂ ಒಂದೇ ವಾರದಲ್ಲಿ ತಜ್ಞವಾಗಿತ್ತಷ್ಟೇ ಅಲ್ಲದೆ ನಿರ್ಭೀತವೂ ಆಗಿತ್ತು. ಅವರು ಹೊಸ ಹೊಸ ಯೋಜನೆಗಳನ್ನು ಅವಲಂಬಿಸುತ್ತಿದ್ದರು. ರೇಲ್ವೆ ನಿಲ್ದಾಣಗಳು, ಇನ್ಕಂಟ್ಯಾಕ್ಸ ಕಚೇರಿ, ಕೋರ್ಟ-ಶಾಲೆ-ಕಾಲೇಜುಗಳ ಕಟ್ಟಡಗಳು ಮತ್ತು ಪೋಸ್ಟ ಆಫೀಸುಗಳನ್ನು ಸುಡುವದು, ಪೋಸ್ಟ ಲೂಟಿ ಮಾಡುವದು—ಇವೆಲ್ಲವುಗಳು ದಿನ ನಿತ್ಯದ ಕಾರ್ಯಕ್ರಮಗಳಾಗಿದ್ದವು [ಮಾಜಗಾವ (ಮುಂಬಯಿ) ಕೋರ್ಟ ಸುಡ ಲಾಗಿತ್ತು.]. ಬಿಹಾರದಲ್ಲಂತೂ ಸರಕಾರೀ ಸಚಿವಾಲಯವನ್ನೇ ಸುಟ್ಟುಹಾಕುವ ಪ್ರಯತ್ನ ನಡೆಯಿತು. ಗಾಂಧೀ ಟೊಪ್ಪಿಗೆಯನ್ನು ಹಾಕಿಕೊಳ್ಳದ ವಿನಃ ಯಾರಿಗೂ ಪಾದಚಾರಿಗಳಾಗಿ ಇಲ್ಲವೆ ವಾಹನಗಳ ಮೂಲಕ ಓಡಾಡಲು ಸಾಧ್ಯವೇ ಆಗುವಂತಿರಲಿಲ್ಲ.

ಎಲ್ಲ ಪ್ರಾಂತಗಳಲ್ಲಿಯೂ ಗುಪ್ತ ಸಭೆಗಳ ಪ್ರವಾಹ ಉಕ್ಕೇರಿತ್ತೆಂದರೆ ಅತಿಶಯೋಕ್ತಿ ಏನಲ್ಲ. ಈ ಗುಪ್ತ ಸಭೆಗಳಲ್ಲಾದ ನಿರ್ಣಯಗಳು ಆಗಿಂದಾಗ ಕಾರ್ಯಗತವಾಗುತ್ತಿದ್ದವು. ಈ ರೀತಿಯ ನಿರ್ಣಯಗಳು ಸರಕಾರಕ್ಕೆ ತಿಳಿದು. ಅವುಗಳ ಪ್ರತೀಕಾರಕ್ಕೆ ಯೋಜನೆಗಳನ್ನು ಮಾಡುವಷ್ಟು ಕಾಲಾವಕಾಶವೇ ಸಿಗುತ್ತಿರಲಿಲ್ಲ. ಕೋರ್ಟುಗಳಲ್ಲಿ ಸ್ವಾತಂತ್ರ್ಯದ ಘೋಷಣೆಗಳು ನಡೆಯುತ್ತಿದ್ದ ಕಾರಣ ಅಲ್ಲಿಯ ಕಾರ್ಯಕ್ರಮಗಳು ನಡೆಯದಂತೆ ಆಗಿದ್ದವು. ಪಿಕೆಟಿಂಗ, ಮೆರವಣಿಗೆ, ಗಿರಣಿಗಳನ್ನು ಬಂದು ಕೆಡಹುವದು, ಮುನಸೀಪಾಲಟಿಯ ದೀಪಗಳ ಕಂಬಗಳನ್ನು ಕಿತ್ತುಹಾಕುವದು, ಪೆಟ್ರೋಲು ಟ್ಯಾಂಕುಗಳನ್ನು ಸುಡುವದು. ಸಾರ್ವಜನಿಕ ವಾಹನಗಳಿಗೆ ಅಡೆ ತಡೆ ಒಡ್ಡುವದು, ಕಾನೂನು ಬಾಹಿರವೆಂದು ಸಾರಿದ ಕಾಂಗ್ರೆಸ ಸಾರ್ವಜನಿಕ ಅಧಿವೇಶನಗಳನ್ನು ನಡೆಸುವದು. ಕೊನೆಯದಾಗಿ ಅಲ್ಲಲ್ಲಿ ಬಾಂಬು ಸ್ಫೋಟ ಮಾಡುವದು ಎಂಬ ಈ ಮಟ್ಟಕ್ಕೆ ಜನತೆ ಬಂದು ಮುಟ್ಟಿತ್ತು. ಮುಂಬೈ, ಪುಣೆಗಳಲ್ಲಿ, ಹಾಗೂ ಎಷ್ಟೋ ಕಡೆಗಳಲ್ಲಿ ತಾರೀಖು ೧೧–೧೦–೪೨ ರ ಸುಮಾರಿಗೆ ಬಾಂಬ ಸ್ಫೋಟವಾದವು. ದಾದರ ಹಾಗೂ ನಡಿಯಾದಗಳಲ್ಲಿ ಬಾಂಬುಗಳು ಸಿಕ್ಕವು. ಭಾರತದ ತುಂಬೆಲ್ಲ ನಡೆದ ಈ ಪ್ರಕಾರದ ಪ್ರಯತ್ನಗಳ ಸುದ್ದಿಗಳು ವರ್ತಮಾನಪತ್ರಗಳಲ್ಲಿ ಓದಸಿಗುತ್ತಿದ್ದವು. ಇದರಲ್ಲಿಯ ಅನೇಕ ಕಾರ್ಯಕ್ರಮಗಳು ಸರಕಾರದ ದಬ್ಬಾಳಿಕೆಯಿಂದಲೇ ಹೋಳೆಯುತ್ತಿದ್ದವು ಅಥವಾ ಸೂಚಿಸಲ್ಪಡುತ್ತಿದ್ದವು ಎಂಬುದು ಸೂಕ್ಷ್ಮ ನಿರೀಕ್ಷಣೆ ಮಾಡುವವರೆಲ್ಲರಿಗೂ ಕಂಡುಬರುವಂತಿದೆ.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ಸಿನ ಹಾಗೂ ಮಹಾತ್ಮಾಜಿಯವರ ಈ ಅಹಿಂಸಕ ಕ್ರಾಂತಿಯನ್ನೆದುರಿಸಲು ಸರಕಾರವು ದೃಢನಿಶ್ಚಯವನ್ನು ಮಾಡಿತ್ತು. ಸರಕಾರವು ಮುಂದಾಳುಗಳನ್ನು ಒಮ್ಮಿಂದೊಮ್ಮೆಲೆ ದೊಡ್ಡ ನಸುಕಿನಲ್ಲಿ ಬಂಧಿಸುವದರೊಂದಿಗೆ ಈ ದಬ್ಬಾಳಿಕೆಯನ್ನು ಪ್ರಾರಂಭಮಾಡಿತು. ಸರಕಾರದೊಂದಿಗೆ ಕೊನೆಯ ಸುತ್ತಿನ ಮಾತುಕತೆ ನಡೆಸಲು ಸರಕಾರವು ಅವಕಾಶವನ್ನೇ ಕೊಡಲಿಲ್ಲ. ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಸೂಚಿಸಿದಂತೆ ಕೊನೆಯ ಹಂತದ ಮಾತುಕತೆಗಳಿಗೆ ಸಂಧಿ ಒದಗಿಸಿದ್ದರೆ. ಈ ಯುದ್ಧದ ಇತಿಹಾಸವು ಬೇರೆಯೇ ಆಗುತ್ತಿತ್ತು. ಸರಕಾರದ ಈ ದಬ್ಬಾಳಿಕೆಯು ಹೇಗೆ ಹೇಗೆ ಹೆಚ್ಚಾಗುತ್ತ ನಡೆಯಿತೋ ಹಾಗೆ ಹಾಗೆ ದಿನದಿನಕ್ಕೆ ಹೆಚ್ಚು ಕಠೋರ ಹಾಗೂ ದಯಾಶೂನ್ಯವಾಗುತ್ತ ಹೋಯಿತೆಂಬುದು ಸಹ ನೋಡುವಂತಹದಾಗಿದೆ. ತಾ॥ ೯–೮–೧೯೪೨ ರಂದು ಮಹಾತ್ಮಾ ಗಾಂಧಿ ಹಾಗೂ ಕಾಂಗ್ರೆಸ ವರ್ಕಿಂಗ ಕಮೀಟಿಯ ಇತರ ಸಭಾಸದರನ್ನು ಬಂಧಿಸುವದರೊಂದಿಗೆ ಪ್ರಾರಂಭವಾದ ಈ ಬಂಧನ ಸತ್ರವು ತಾ. ೨೮–೧೦–೪೨ ರಂದು ಸರಹದ್ದ ಗಾಂಧಿ ಎಂದರೆ ಬಾದಶಹ ಖಾನ ಅವರ ಬಂಧನದೊಂದಿಗೆ ಮುಕ್ತಾಯಕ್ಕೆ ಬಂದಿತ್ತೆಂದು ಹೇಳಲಡ್ಡಿಯಿಲ್ಲ. ಜನತೆಯ ಮೇಲಿನ ಮುಖಂಡರ ಪ್ರಭಾವ ಮತ್ತು ವಿಶಿಷ್ಟ ಮುಂದಾಳುಗಳ ಈ “ ಮಾಡು ಇಲ್ಲವೆ ಮಡಿ ” ಎಂಬ ಚಳವಳಿಯೊಂದಿಗಿದ್ದ ಕೆಲವರ ಸಮರಸತೆಗಳನ್ನು ಕೂಲಂಕಷ

ವಿಚಾರಮಾಡಿಯೇ ಸರಕಾರದ ಬಂಧನ ಸತ್ರವು ಪ್ರಾರಂಭವಾಗಿತ್ತು. ಮುಂದಾಳುಗಳು ತಮ್ಮ ತಮ್ಮ ಪ್ರಾಂತಗಳನ್ನು ತಲುಪಿದ ನಂತರವೇ ಅವರನ್ನು ಬಂಧಿಸಬೇಕೆಂಬ ಸರಕಾರದ ಧೋರಣವೇ ಸರಕಾರಕ್ಕಿಂತ ಚಳವಳಿಗೇ ಹೆಚ್ಚು ಅನುಕೂಲವಾಯಿತು ; ಸರಕಾರದ ತರ್ಕ ತಪ್ಪಾಯಿತು.

ಬಂಧನ. ಮೆರವಣಿಗೆ, ಸಭಾನಿರ್ಬಂಧ. ಶಸ್ತ್ರ–ಬೆತ್ತ–ಬಡಿಗೆ ಮೊದಲಾದವುಗಳನ್ನು ಜೊತೆಗಿಟ್ಟುಕೊಳ್ಳುವದಕ್ಕೆ ತಡೆಯಾಜ್ಞೆ. ರಾತ್ರಿ ಸಂಚಾರಕ್ಕೆ ಅಡ್ಡಿ, ಬೆತ್ತದಿಂದ ಮನಬಂದಂತೆ ಹೊಡೆಯುವದು. ಅಶ್ರುವಾಯು. ಘಟಕೀ ಶಿಕ್ಷೆ. ಕಾಂಗ್ರೆಸ್ಸಿನೊಡನೆ ಸಂಬಂಧವಿಟ್ಟುಕೊಂಡ ಮತ್ತು 'ಭಾರತದಿಂದ ಹೊರಡಿ' ಗೊತ್ತುವಳಿಗೆ ಸಹಾನುಭೂತಿಯುಳ್ಳ ಸಂಸ್ಥೆಗಳನ್ನು ವಶಪಡಿಸಿಕೊಳ್ಳುವದು, ಅಂಗಡಿಕಾರರಿಗೂ ವ್ಯಾಪಾರೀ ಸಂಸ್ಥೆಗಳಿಗೂ ಗಂಭೀರ ಎಚ್ಚರಿಕೆ ಕೊಡುವದು, ಬಲಾತ್ಕಾರದಿಂದ ವ್ಯಾಪಾರಸ್ಥರ ಅಂಗಡಿಗಳನ್ನು ತೆರೆದಿಡುವ ಅಧಿಕಾರವನ್ನು ಜಿಲ್ಹಾ ಮ್ಯಾಜಿಸ್ಟ್ರೇಟರಿಗೆ ಕೊಡುವದು, ಉಗ್ರ ಶಿಕ್ಷೆ ಅಂದರೆ ೩ ವರ್ಷಗಳ ವರೆಗೆ ಸಶ್ರಮ ಶಿಕ್ಷೆ ಇಲ್ಲವೆ ಮಿತಿಮೀರಿದ ದಂಡ ಅಥವಾ ಶಿಕ್ಷೆ–ದಂಡ ವಿಧಿಸುವದು, ಶಿಕ್ಷೆಯ ಅವಧಿಯನ್ನು ಬೆಳೆಸುತ್ತಿರುವದು, ಕಾಂಗ್ರೆಸ್ ಕಾರ್ಯಕರ್ತರ ಹಾಗೂ ಅವರಿಗೆ ಸಹಾಯ ಸಹಾನುಭೂತಿಯುಳ್ಳವರ ಆಸ್ತಿಗಳನ್ನು ಜಪ್ತುಮಾಡುವದು, ವಿಧ್ವಂಸಕ ಅಥವಾ ಅಗ್ನಿಧ್ವಂಸಕ ಅಪರಾಧಕ್ಕಾಗಿ ಮರಣದಂಡನೆ ಇಲ್ಲವೆ ಘಟಕೀ ಶಿಕ್ಷೆ ಕೊಡುವ ಬಗ್ಗೆ ಸುಗ್ರೀವಾಜ್ಞೆ ಮತ್ತು ಕೊನೆಯದಾಗಿ ಜನಸಮೂಹದ ಮೇಲೆ ವಿಮಾನಿನಿಂದ ಮಿಶನ್‌ಗನ್ನುಗಳನ್ನು ಹೊಡೆಯುವದು—ಈ ಪ್ರಕಾರ ಒಂದಕ್ಕಿಂತ ಒಂದು ಹೆಚ್ಚು ಉಗ್ರರೀತಿಯ ಕ್ರಮಗಳಿಂದ ಸರಕಾರದ ದಬ್ಬಾಳಿಕೆಯು ಹೆಚ್ಚುತ್ತ ನಡೆದಿತ್ತು. ಇದನ್ನು ನೋಡುವ ಮತ್ತು ಇದರಲ್ಲಿ ಭಾಗವಹಿಸುವ ಸುದೈವ ನಾನು ಭೂಮಿಗತನಿರುವವರೆಗೆ ನನಗೆ ಲಭಿಸಿತ್ತು.

ಇದು ಶಸ್ತ್ರಾಸ್ತ್ರ ಸಜ್ಜಿತ ಸರಕಾರ ಮತ್ತು ನಿಃಶಸ್ತ್ರ ಜನತೆಯ ನಡುವೆ ನಡೆದ ಘೋರ ಸಂಗ್ರಾಮವಾಗಿತ್ತು. ಈ ಸರಕಾರದ ರಾಜ್ಯಯಂತ್ರವನ್ನು ಲಿಕಿಲಿಕಿಯಾಗುವಂತೆ ಸಡಿಲು ಮಾಡುವ ಅಂತಿಮ ನಿರ್ಣಯವನ್ನು ಜನತೆ ತೆಗೆದುಕೊಂಡಿತ್ತು. ೧೯೪೨ರ ಈ ಯುದ್ಧವು ಜಗತ್ತಿನಲ್ಲಿಯೇ ಅಪೂರ್ವವಾಗಿತ್ತು. ಈ ಯುದ್ಧದಲ್ಲಿ ಜನತೆಯು ನಿಜವಾಗಿಯೂ ಹೋರಾಡಿತೆಂದು ಹೇಳಲಡ್ಡಿಯಿಲ್ಲ. ಬಿಹಾರ ಹಾಗೂ ಪೂರ್ವ ಸಂಯುಕ್ತ ಪ್ರಾಂತಗಳಲ್ಲಿ ರೇಲ್ವೆ ಸಂಚಾರವು ಎಷ್ಟೋ ವಾರಗಳ ವರೆಗೆ ಸಂಪೂರ್ಣ ನಿಂತುಹೋಗಿತ್ತು. ಆಸಾಮಿನಿಂದ ಮುಂಬಯಿವರೆಗೆ ಅದರಲ್ಲಿಯೂ ಕಲಕತ್ತೆ. ಅಲಹಾಬಾದ, ಪಾಟಣಾ. ಪುಣೆಗಳಲ್ಲಿ, ವೀರಶ್ರೀ ಮೈವೆತ್ತಿ ನಿಂತಿತ್ತು. ಬ್ರಿಟಿಶ ಸರಕಾರವು ಅಕ್ಷರಶಃ ಅಳುಕುಂಡಿಗೆ ಬಂದಿತ್ತು.

ವೀರಮಾತೆ ಮಾತಂಗಿನಿಯ ಕತೆಯಂತೂ ಬಹು ರೋಮಾಂಚಕಾರಿಯಾಗಿದೆ. ಈ ವಿಷಯದಲ್ಲಿ ಮಿದನಾಪುರವು ಶಿಖರವನ್ನು ಮುಟ್ಟಿತ್ತು. ತಾಮೂಲಕ ವಿಭಾಗ

ದಲ್ಲಿಯ ಆಗಿನ ದೃಶ್ಯವು ಅತ್ಯಂತ ರೋಮಾಂಚಕಾರಿಯೂ ಚಿತ್ತವಿಹ್ವಲಕಾರಿಯೂ ಆಗಿತ್ತು. ಅಲ್ಲಿಯ ಜನತೆಯು ೨೯ನೇ ಸಪ್ಟಂಬರ ದಿನ ಎಲ್ಲ ಸರಕಾರೀ ಅಧಿಕಾರಿಗಳನ್ನು ಸೆರೆ ಹಿಡಿಯುವ ನಿರ್ಣಯ ತೆಗೆದುಕೊಂಡಿತು. ಆ ಯೋಜನೆಯಂತೆ ತಾ. ೨೮ರ ರಾತ್ರಿ ದಾರಿಯ ಬದಿಗಿರುವ ಗಿಡಗಳೆಲ್ಲ ಸದ್ದಿಲ್ಲದಂತೆ ಅಡ್ಡ ಮಲಗಿಬಿಟ್ಟವು. ದಾರಿಯು ಕಟ್ಟಾಯಿತು. ಅರವತ್ತು ಸೇತುವೆಗಳು ಒಮ್ಮೆಲೆ ಉಧ್ವಸ್ತವಾದವು. ಹುಗಳೀ ನದಿಯಲ್ಲಿ ಸಾಮಾನು ಸಾಗಿಸುವ ನಾವುಗಳೂ ಗಪ್ಪುಚಿಪ್ಪಾಗಿ ತಮ್ಮ ತಮ್ಮ ನಿಲ್ಲುವ ಸ್ಥಳಗಳಲ್ಲಿ ನಿಂತುಬಿಟ್ಟವು. ೨೭ ಮೈಲುದ್ದದ ಮಾರ್ಗದ ಮೇಲಿನ ೧೯೪ ಕಂಬಗಳು ಕಿತ್ತಿಹಾಕಲ್ಪಟ್ಟವು. ತಾ. ೨೯ ರಂದು ಎಲ್ಲೆಡೆಗೆ ಜನತೆಯ ದಂಡಯಾತ್ರೆ ಹೊರಟಿತು. ಈ ದಂಡಯಾತ್ರೆಯ ಸ್ವಾಗತಕ್ಕೆ ಸರಕಾರೀ ದಂಡು ಸಿದ್ಧವಾಗಿಯೇ ಇತ್ತು. ಜನತೆಯ ಈ ದಂಡಯಾತ್ರೆಯ ಒಂದು ತಂಡಕ್ಕೆ ೭೩ ವರ್ಷದ ಮುದುಕಿ ವೀರಮಾತೆ ಮಾತಂಗಿನಿ ನೇತೃತ್ವ ವಹಿಸಿದ್ದಳು. ಅವಳ ಜೋಣಿಯು ಧೈರ್ಯದಿಂದ ಸೈನಿಕರ ಮುಂದೆ ಹೋಗಿ ನಿಂತಿತು. ಆ ವೃದ್ಧ ಮಾತೆಯು ದಂಡಿನ ಸೈನಿಕರಿಗೆ ಸರಕಾರೀ ನೌಕರಿಯನ್ನು ಬಿಟ್ಟುಬಿಡಲು ವಿನಂತಿಸಿಕೊಂಡಳು. ಒಂದೇ ಕ್ಷಣದಲ್ಲಿ ಆ ಮುದುಕಮ್ಮನಿಗೆ ಬಂದೂಕಿನ ಗುಂಡಿನ ಉತ್ತರವು ದೊರೆಯಿತು. ಕೈಯಲ್ಲಿದ್ದ ಧ್ವಜವನ್ನು ಎತ್ತಿ ಹಿಡಿದೇ ಆ ಮಾತೆಯು ಪ್ರಾಣತ್ಯಾಗ ಮಾಡಿದಳು. ಅವಳ ತೇಜಸ್ಸಿನ ಪ್ರಭಾವ ಜನರ ಮೇಲೆ ಒಳ್ಳೇ ಪರಿಣಾಮ ಬೀರಿತೆಂದು ಹೇಳುವದೇ ಬೇಡ.

ಭಾರತ ಸರಕಾರದ ಯುದ್ಧಸದಸ್ಯರಾದ ಮಿ. ರೆಜಿನಾಲ್ಡ ಮ್ಯಾಕ್ಸ್ವೆಲ್ ಅವರು ಕೇಂದ್ರ ವಿಧಾನ ಸಭೆಯಲ್ಲಿ ೧೯೪೩ನೇ ಫೆಬ್ರುವರಿಯಲ್ಲಿ ಕೊಟ್ಟ ಸಂಗತಿಯನ್ನು ನಾನು ಇಲ್ಲಿ ಉದಹರಿಸುತ್ತೇನೆ. ಅದು ಹೀಗಿದೆ :—

> "೫೩೮ ಸಲ ಜನತೆಯ ಮೇಲೆ ಗೋಳೀಬಾರು ಮಾಡಲಾಯಿತು. ೯೪೦ ಜನರು ಈ ಗೋಳೀಬಾರಿಗೆ ತುತ್ತಾದರು. ೧೬೩೦ ಜನರು ಗಾಯಗೊಂಡರು. ೩೫೦೦ ಸ್ಥಳಗಳಲ್ಲಿ ತಾರು ಹಾಗೂ ಟೆಲಿಫೋನ ತಂತಿಗಳನ್ನು ಕತ್ತರಿಸಲಾಯಿತು. ೬೦೨೯ ಜನರನ್ನು ಬಂಧಿಸಲಾಯಿತು. ೨೦೦ ಸ್ಟೇಶನ್ನುಗಳನ್ನು ಸುಡಲಾಯಿತು. ೫೫೦ ಅಂಚೆ ಕಚೇರಿಗಳ ಮೇಲೆ ದಾಳಿಯಾಯಿತು. ೭೦ ಪೋಲಿಸ ಕಚೇರಿಗಳು ಪೂರ್ತಿ ಭಸ್ಮವಾದವು. ೮೫ ಇತರ ಸರಕಾರೀ ಕಟ್ಟಡಗಳು ಅಗ್ನಿಗೆ ಆಹುತಿಯಾದವು."

ಕೊನೆಯಲ್ಲಿ ಒಂದು ಸೂಕ್ಷ್ಮ ತಾತ್ವಿಕ ಚರ್ಚೆಯನ್ನು ಇಲ್ಲಿ ಮಾಡಿ ಈ ಪ್ರಕರಣ ಮುಗಿಸ ಬಯಸುತ್ತೇನೆ. ಮುಂಬಯಿಯ ಅ. ಭಾ. ಕಾಂ. ಕಮಿಟಿಯು "ಭಾರತದಿಂದ ತೊಲಗಿರಿ" ಎಂಬ ಗೊತ್ತುವಳಿ ಮಾಡಿ, ಅಹಿಂಸಕ ಕ್ರಾಂತಿಯ ಧ್ವಜವನ್ನು ಎತ್ತಿ ಹಿಡಿಯಿತು. ಆಗ ಮುಖಂಡರ ಬಂಧನ ಸತ್ರದಲ್ಲಿ ಹಿಂದಿನ ಅರ್ಥ ಮಂತ್ರಿಗಳಾದ ಶ್ರೀ ಅ. ಬಾ. ಲಠ್ಠೆಯವರು ಬಂಧಿತರಾದರು. ಅವರೊಡನೆಯೇ ಶ್ರೀ ಭೀಮರಾವ ಪೋತದಾರ.

ಕೃಷ್ಣರಾವ ಯಾಳಗಿ, ಜೀವಣರಾವ ಯಾಳಗಿ, ಅವರನ್ನೂ ಸೆರೆಹಿಡಿಯಲಾಯಿತು. ಆದರೆ ಮುಂದೆ ಸ್ವಲ್ಪೇ ದಿವಸಗಳಲ್ಲಿ ಶ್ರೀ ಅಣ್ಣಾಸಾಹೇಬ ಲಠ್ಠೆಯವರನ್ನು ಸರಕಾರದವರು ಯಾವ ಕರಾರನ್ನೂ ಹಾಕದೆ ಸೆರೆಮನೆಯಿಂದ ಬಿಡುಗಡೆ ಮಾಡಿದರು. ಜನರಲ್ಲಿ ಅವರ ವಿಷಯಕ್ಕೆ ವ್ಯರ್ಥ ತಪ್ಪು ತಿಳುವಳಿಕೆಯಾಯಿತು. ಕೆಲವು ಜನರು ಈ ತಿಳುವಳಿಕೆಯನ್ನು ಬೇಕಂತಲೇ ಪುಟಕೊಟ್ಟು ಬೆಳೆಸುತ್ತಿದ್ದರು. ಆದರೆ ಅದರ ವಸ್ತುಸ್ಥಿತಿ ಹೀಗಿದೆ :—

“ಸವಿನಯ ಕಾಯಿದೆಭಂಗದ ದಾರಿಯು ಮತ್ತು ಮುಂಬೈ ಕಾಂಗ್ರೆಸ್ಸಿನ “ಭಾರತದಿಂದ ತೊಲಗಿರಿ” ಎಂಬ ನಿರ್ಣಯವು ರಾಜಾಜಿಯವರಂತೆ ಶ್ರೀ. ಅ. ಬಾ. ಲಠ್ಠೆಯವರಿಗೂ ಮಾನ್ಯವಿದ್ದಿರಲಿಲ್ಲ. ಆದರೆ ಇಂಥ ಮಹಾನ್ ರಾಷ್ಟ್ರವ್ಯಾಪೀ ಆಂದೋಲನದ ಶುಭ ಪ್ರಸಂಗದಲ್ಲಿ ಅಪಸ್ವರ ತೆಗೆಯುವದೂ ಅಣ್ಣಾಸಾಹೇಬರಿಗೆ ಸರಿ ಕಾಣಲಿಲ್ಲ. ಆದ್ದರಿಂದ ಅವರು ಸ್ತಬ್ಧರಾಗಿಯೇ ಇದ್ದರು. ಅಣ್ಣಾಸಾಹೇಬರಿಗೂ ಸರದಾರ ಪಾಟಣಕರರಿಗೂ ಗಾಢ ಸ್ನೇಹವಿತ್ತು. ಶ್ರೀ ಅಣ್ಣಾಸಾಹೇಬರು ಪಾಟಣಕರರೊಡನೆ ಸಹಜವಾಗಿ ಹರಟೆ ಹೊಡೆಯುವಾಗ ಮೇಲೆ ವಿವರಿಸಿದ ತಮ್ಮ ಅಭಿಪ್ರಾಯವನ್ನು ಅವರಿಗೆ ಹೇಳಿದ್ದರು. ಆ ಪ್ರಕರಣ ಅಷ್ಟಕ್ಕೇ ನಿಂತುಹೋಗಿತ್ತು. ಮುಂದೆ ಎಲ್ಲರ ಜೊತೆಗೇನೇ ಶ್ರೀ ಅಣ್ಣಾಸಾಹೇಬರೂ ಕಾಂಗ್ರೆಸ ಪಕ್ಷದ ಹಿಂದಿನ ಮಂತ್ರಿಗಳಾದ ಕಾರಣದಿಂದಲೋ ಏನೋ ಬಂಧಿಸಲ್ಪಟ್ಟರು. ಸೆರೆಮನೆಗೆ ಹೋಗುವಾಗ ಅವರು ಈ ಬಗ್ಗೆ ಯಾವ ರೀತಿಯ ಆಶ್ಚರ್ಯವನ್ನು ಯಾರ ಮುಂದೆಯೂ ವ್ಯಕ್ತಮಾಡಲಿಲ್ಲ ಅಥವಾ ಸರಕಾರೀ ಅಧಿಕಾರಿಗಳೊಂದಿಗೆ ಈ ಬಂಧನದ ವಿಷಯದಲ್ಲಿ ತಕರಾರು ಹೇಳಲಿಲ್ಲ. ಸೆರೆಮನೆಯಲ್ಲಿ ಅಣ್ಣಾಸಾಹೇಬರು ನಗುತ್ತ, ಕೆಲೆಯುತ್ತ. ಏನೋ ಕೆಲವು ಪುಸ್ತಕಗಳನ್ನು ಓದುತ್ತ ಆನಂದದಲ್ಲಿ ತಮ್ಮ ವೇಳೆಯನ್ನು ಕಳೆಯುತ್ತಿದ್ದರು. ಆಗ ಬಂಧಿತರಾದವರಲ್ಲಿ ಅಣ್ಣಾಸಾಹೇಬರು ಹೆಚ್ಚು ನಿಶ್ಚಿಂತೆಯಿಂದ ಸಂತೋಷದಿಂದ ಕಾಲ ಕಳೆಯುತ್ತಿದ್ದರು. ಆ ವೇಳೆಗೆ ಹಿಂಡಲಗಿ ಸೆರೆಮನೆಯಲ್ಲಿ ಅಣ್ಣಾಸಾಹೇಬರ ಜೊತೆಗೆ ಗು. ದೇಶಭಕ್ತ ಗಂಗಾಧರರಾವ ದೇಶಪಾಂಡೆ, ಕೃಷ್ಣರಾವ ಯಾಳಗಿ, ಜೀವಣರಾವ ಯಾಳಗಿ, ನಾರಾಯಣರಾವ ಜೋಶಿ ಮೊದಲಾದವರಿದ್ದರು. ಆದುದರಿಂದ ಎಲ್ಲರ ಸಮಯವೂ ಅತ್ಯಂತ ಆನಂದದಲ್ಲಿ ಹೋಗುತ್ತಿತ್ತೆಂಬುದರಲ್ಲಿ ಆಶ್ಚರ್ಯವೇನಿಲ್ಲ.

ಮುಂದೆ ಸ್ವಲ್ಪೇ ದಿವಸಗಳಲ್ಲಿ ಸರದಾರ ಪಾಟಣಕರ ಅವರು ಬೆಳಗಾವಿಗೆ ಬಂದಾಗ ಬೆಳಗಾವಿಯ ಕಲೆಕ್ಟರ ಹಾಗೂ ಕಮಿಶನರರನ್ನು ಭೆಟ್ಟಿಯಾದರು. ಈ ಸಹಜ ಭೆಟ್ಟಿಯಲ್ಲಿ ಪಾಟಣಕರರು ಅಂದರು : “ಸರಕಾರವು ಅಣ್ಣಾಸಾಹೇಬರನ್ನು ಬಂಧಿಸಿದ್ದನ್ನು ಕೇಳಿ ನನಗೆ ಆಶ್ಚರ್ಯವೇ ಆಯಿತು. ಯಾಕೆಂದರೆ ಇಂದಿನ ಸವಿನಯ ಕಾಯಿದಭಂಗ ಹಾಗೂ ‘ಭಾರತದಿಂದ ತೊಲಗಿರಿ’ ನಿರ್ಣಯಗಳು ಶ್ರೀ ಲಠ್ಠೆಯವರಿಗೆ ಮಾನ್ಯವಿಲ್ಲವೆಂದು ನನಗೆ ನಿಶ್ಚಯವಾಗಿ ಗೊತ್ತಿದೆ,”

ಕಲೆಕ್ಟರ, ಕಮಿಶನರರು, "ಶ್ರೀ ಲಕ್ಶ್ಮೆಯವರು ಈಗಲೂ ಕೂಡ ನಮಗೆ ಹಾಗೆ ತಿಳಿಸಿದಲ್ಲಿ ಅವರನ್ನು ಕೂಡಲೆ ಸೆರೆಮನೆಯಿಂದ ಬಿಡುಗಡೆ ಮಾಡುವೆವು." ಎಂದು ಅಂದರು. ಸರದಾರ ಪಾಟಣಕರರು ಮೊದಲು ಅಣ್ಣಾಸಾಹೇಬರನ್ನು ಭೆಟ್ಟಿಯಾದರು. ಮೇಲೆ ನಡೆದ ಸಂಗತಿಯನ್ನು ಏನೂ ತಿಳಿಸದೆ ಲಕ್ಶ್ಮೆಯವರ ಜೊತೆಗೆ ಮಾತನಾಡಿದರು. ಆಗ ಲಕ್ಶ್ಮೆಯವರು ತಮ್ಮ ಅಭಿಪ್ರಾಯವು ಈಗಲೂ ಅಚಲವಾಗಿದೆಯೆಂದು ಅವರಿಗೆ ತಿಳಿಸಿದರು. ಅನಂತರ ಮೇಲಿನ ಸಂಗತಿಯನ್ನು ಶ್ರೀ ಪಾಟಣಕರರು ಶ್ರೀ ಲಕ್ಶ್ಮೆ ಇವರಿಗೆ ಹೇಳಿದರು. ಆಗ ಮಾತ್ರ ಲಕ್ಶ್ಮೆಯವರು "ನಾನು ಗಂಗಾಧರರಾವ ದೇಶಪಾಂಡೆ, ನಾರಾಯಣರಾವ ಜೋಶಿಯವರನ್ನು ಕಂಡು, ಮಾತನಾಡಿದ ಬಳಿಕವೇ ನಿಮಗೆ ಉತ್ತರ ಕೊಡುವೆನೆಂದು ಹೇಳಿ, ತಮ್ಮ ಸೆರೆಮನೆಯ ಬರಾಕಿಗೆ ಮರಳಿ ಬಂದರು. ಅವರು ಗಂಗಾಧರರಾಯರು ಹಾಗೂ ನಾರಾಯಣರಾಯರೊಡನೆ ಚರ್ಚಿಸಿದರು. ಶ್ರೀ ಪಾಟಣಕರರು ಸೆರೆಮನೆಯ ಆಫೀಸಿನಲ್ಲಿ ಕುಳಿತೇ ಇದ್ದರು.

ಇದರಲ್ಲಿ ತಾತ್ವಿಕ ಹಾಗೂ ವ್ಯಾವಹಾರಿಕ ಎಂಬ ಎರಡು ಪ್ರಶ್ನೆಗಳು ಉದ್ಭವಿಸಿದವು. ಪ್ರಾಣ ಪಣಕ್ಕೆ ಹಚ್ಚಿ ಹೋರಾಡುವ ರಾಷ್ಟ್ರೀಯ ಸ್ವಾತಂತ್ರ್ಯದ ಅಂತಿಮ ಯುದ್ಧದ ಕಡೆಗೆ ಲಕ್ಷ್ಯಕೊಟ್ಟು ವ್ಯಾವಹಾರಿಕ ವಿಚಾರ ಮಾಡಿ ತಮ್ಮ ಮತ ಬದಲಾಗಿರದಿದ್ದರೂ ಈಗ ಬದಲಾಗಿದೆ ಎಂದು ಹೇಳಬೇಕೆ ? ತಮ್ಮ ತಾತ್ವಿಕ ಮತವನ್ನು ಬಿಚ್ಚಿಡಬೇಕೆ ? ಹೇಗೆ ? ಸರಕಾರದ ಸಿಟ್ಟು ಹಾಗೂ ಸೆರೆಮನೆವಾಸಗಳನ್ನು ತಪ್ಪಿಸಿಕೊಳ್ಳುವದಕ್ಕಾಗಿ ತಮ್ಮ ತಾತ್ವಿಕ ಸತ್ಯ ಹಾಗೂ ಪ್ರಾಮಾಣಿಕ ಅಭಿಪ್ರಾಯಗಳನ್ನು ಈ ಸಮಯಕ್ಕೆ ಪ್ರಕಟಿಸಬೇಕೇ ? ಲೋಕಪ್ರಿಯತೆ ಹೋಗುತ್ತದೆಂಬ ಅಂಜಿಕೆಯಿಂದ ತಮ್ಮ ತಾತ್ವಿಕ ಮತ ಬದಲಾಗಿದೆಯೆಂದು ಸುಳ್ಳು ಹೇಳುವದು ಗಾಂಧೀಜಿಯವರ ತತ್ವಜ್ಞಾನದಲ್ಲಿ ಬರುತ್ತದೆಯೇ? ಈ ಪ್ರಕಾರದ ಶೃಂಗಾಪತ್ತಿಯಿಂದ ಪಾರಾಗುವದು ಅಷ್ಟು ಸುಲಭವಿದ್ದಿಲ್ಲ. ಗಂಗಾಧರರಾಯರು, ನಾರಾಯಣರಾಯರಿಗೂ ಕೂಡ ಈ ವಿಷಯದಲ್ಲಿ ನಿಶ್ಚಿತ ಮಾರ್ಗದರ್ಶನ ಮಾಡುವದು ಬಹಳ ಕಠಿಣವೆನಿಸಿತು. "ತಾವೇ ವಿಚಾರ ಮಾಡಿ ಏನಾದರೂ ನಿರ್ಣಯ ಮಾಡಿರಿ" ಎಂದು ಹೇಳುವದು ನಿಜವಾದ ನಿಶ್ಚಿತವಾದ ಮಾರ್ಗದರ್ಶನವೇನಲ್ಲ. ಗಂಗಾಧರರಾಯರೂ, ನಾರಾಯಣರಾಯರೂ ಒಪ್ಪೇ ಇರಲಿ, ತಪ್ಪೇ ಇರಲಿ ಅಧಿಕೃತವಾಗಿ ಏನಾದರೊಂದು ನಿಶ್ಚಿತ ಮಾರ್ಗದರ್ಶನ ಮಾಡಿದ್ದರೆ, ಅದನ್ನು ಮನ್ನಿಸಲು ಲಕ್ಶ್ಮೆಯವರು ಸಿದ್ಧರಾಗಬಹುದಿತ್ತು. ಕೊನೆಗೆ ಲಕ್ಶ್ಮೆಯವರು ತಾವೇ ವಿಚಾರ ಮಾಡಿ ಒಂದು ನಿರ್ಧಾರಕ್ಕೆ ಬಂದರು. ಅದನ್ನು ಸರದಾರ ಪಾಟಣಕರರಿಗೆ ತಿಳಿಸಿದರು. ಆ ನಿರ್ಣಯವು ಹೀಗಿತ್ತು :—

"ಈಗಿನ ಸವಿನಯ ಕಾಯದೆಭಂಗ ಹಾಗೂ ಮುಂಬೈಯ 'ಭಾರತದಿಂದ ತೊಲಗಿರಿ' ಗೊತ್ತುವಳಿಗಳ ಬಗ್ಗೆ ನನ್ನ ಮತ ಹಾಗೂ ಅಭಿಪ್ರಾಯಗಳು ಮೊದಲಿನಂತೆಯೇ ಇವೆ. ಅವುಗಳಲ್ಲಿ ಬದಲಾವಣೆ ಆಗಿಲ್ಲ. ಆದರೂ ಈ ಮಾತಿನ ಉಪಯೋಗ

ವನ್ನು ನೀವಾಗಲಿ ಅಥವಾ ಕಲೆಕ್ಟರ, ಕಮಿಶನರರಾಗಲಿ ನನ್ನ ಬಿಡುಗಡೆಗಾಗಿ ಏನೂ ಮಾಡತಕ್ಕದ್ದಲ್ಲ. ಹಾಗೆ ಮಾಡುವದು ನನಗೆ ಸೇರಲಾರದು."

ಶ್ರೀ ಪಾಟಣಕರರು ಈ ಸಂಗತಿಯನ್ನು ಇದ್ದಕ್ಕಿದ್ದಂತೆ ಕಲೆಕ್ಟರ, ಕಮಿಶನರರಿಗೆ ತಿಳಿಸಿದರು. ಕಲೆಕ್ಟರ. ಕಮಿಶನರರು ಈ ಬಗ್ಗೆ ಮುಂಬಯಿ ಸರಕಾರದೊಡನೆ ವಿಚಾರ ವಿನಿಮಯ ಮಾಡಿದರೋ ಇಲ್ಲವೋ ಯಾರಿಗೆ ಗೊತ್ತು! ಆದರೆ ಮರುದಿನವೇ ಯಾವೊಂದೂ ಕರಾರು ಹಾಕದೆ, ಶ್ರೀ ಅಣ್ಣಾಸಾಹೇಬರ ಬಿಡುಗಡೆ ಮಾಡಲಾಯಿತು.

ಈ ಘಟನೆಯ ಉಪಯೋಗ ಅಥವಾ ದುರುಪಯೋಗವನ್ನು ಯಾರು-ಯಾರೋ ಹೇಗೆ ಹೇಗೆ ಮಾಡಿಕೊಂಡರೊ, ಮುಂದೆ ಭಾವೀ ಚುನಾವಣೆಯ ಕಾಲಕ್ಕೆ ಅಣ್ಣಾಸಾಹೇಬರಿಗೆ ಕಾಂಗ್ರೆಸ ಟಿಕೀಟು ಕೊಡುವಾಗ ಯಾವ ಯಾವ ಪ್ರಕಾರಗಳು ನಡೆದವೋ ಎಂಥೆಂಥ ಅಡೆತಡೆಗಳುಂಟಾದವು. ಆದರೂ ಕೇವಲ ಗಂಗಾಧರರಾಯರ ಪ್ರಯತ್ನದಿಂದಲೇ ಅವರಿಗೆ ಕಾಂಗ್ರೆಸ ಟಿಕೀಟು ಹೇಗೆ ದೊರೆಯಿತು ಮತ್ತು ಆ ಪ್ರಕರಣ ದಲ್ಲಿ ಪ್ರಸ್ತುತ ಲೇಖಕರು, ಮತ್ತು ಜೀವಣರಾವ ಯಾಳಗಿ ಅವರ ಹೆಸರು ಹೇಗೆ ಅಡಕ ವಾಗಿದ್ದಿತು ಎಂಬ ಈ ಬಗೆಗೆ ಉಲ್ಲೇಖ ಮತ್ತು ಉಹಾಪೋಹ ಮಾಡುವ ಸ್ಥಳವು ಇದಲ್ಲವಾದ್ದರಿಂದ ಈ ಪ್ರಶ್ನೆಯನ್ನು ನಾನು ಇಲ್ಲಿಗೇ ಬಿಟ್ಟಿದ್ದೇನೆ.

೫ | ನಾನು ಭೂಗತನಿದ್ದಾಗ ಏನು ಮಾಡಿದೆ ?

ನಾನು ನನ್ನ ಬಗ್ಗೆ ಕೆಲವೊಂದು ಸಂಗತಿಯನ್ನು ಈ ಮೊದಲೇ ಹೇಳಿದ್ದೇನೆ. ಎಂಟ್ಹತ್ತು ದಿವಸ ವಿಚಾರ ಮಾಡಿದ ನಂತರ ಸಾಂಗಲಿಯನ್ನೆ ನನ್ನ ಕಾರ್ಯಕ್ಷೇತ್ರ ಮಾಡಿಕೊಳ್ಳಬೇಕೆಂದು ನಾನು ನಿಶ್ಚಯಿಸಿದೆ. ಸಾಂಗಲಿಯಲ್ಲಿ ನಿಂತುಕೊಂಡು ಬೆಳಗಾವಿ ಜಿಲ್ಹೆಯ ಕಾರ್ಯಕರ್ತರು ಹಾಗೂ ಕಾರ್ಯಕ್ರಮಗಳೊಂದಿಗೆ ಸಂಬಂಧವಿಟ್ಟುಕೊಳ್ಳ ಬೇಕಲ್ಲದೆ ಮಹಾರಾಷ್ಟ್ರದಲ್ಲಿಯ ಕಾರ್ಯಕರ್ತರೊಂದಿಗೂ ಸಂಪರ್ಕ ಬೆಳೆಸಬೇಕೆಂದು ಗೊತ್ತುಮಾಡಿದೆ. ಆ ಪ್ರಕಾರ ನಾನು ಬೆಳಗಾವ ಜಿಲ್ಹೆಯ ಕಾರ್ಯಕರ್ತರಿಗೆ ತಿಳಿಸಿದೆ. ಇದೇ ಹೊತ್ತಿಗೆ ಕೆಲವು ದಿವಸಗಳಲ್ಲಿ ಶ್ರೀ ರಂಗರಾವ ದಿವಾಕರರು ಮಿರಜಿಗೆ ಬಂದಿದ್ದರು. ಅವರು ನನ್ನ ಈ ನಿರ್ಣಯಕ್ಕೆ ಸಮ್ಮತಿಸಿದರು. ಅವರು ಹೋಗುವಾಗ ನನಗೆ ೨೦೦ ರೂ. ಗಳನ್ನು ಕೊಟ್ಟರು.

ಕೆಲವೊಂದು ವರ್ಷ ಗಾಂಧೀಜಿ ಆಶ್ರಮದಲ್ಲಿದ್ದಂಥ, ಎಷ್ಟೋವರ್ಷ ಗಾಂಧೀಜಿ ಯವರ ನಿಕಟಸಂಪರ್ಕದಲ್ಲಿ ಬಂದಂಥ, ಗಾಂಧೀ ತತ್ವಜ್ಞಾನದ ಅಭ್ಯಾಸ ಮಾಡಿದಂಥ. ಮತ್ತು ಗಾಂಧೀವಾದಿ ಎಂದು ಹೇಳಿಸಿಕೊಳ್ಳಲ್ಪಡುವಂಥ ನನ್ನಂಥವನ ಮೇಲೆ ಒಂದು ವಿಶಿಷ್ಟಪ್ರಕಾರದ ಹೊಣೆಗಾರಿಕೆ ಇದೆ ಎಂದು ನನಗೆ ಅನಿಸುತ್ತಿತ್ತು. ದೇಶದಲ್ಲಿ—ವಿಶೇಷತಃ ಮಹಾರಾಷ್ಟ್ರ ಕರ್ನಾಟಕಗಳಲ್ಲಿ ನಡೆದ ಕೃತಿಗಳು ಗಾಂಧೀಜಿಯವರ ತತ್ವ ಜ್ಞಾನದಲ್ಲಿ ಬರುವದಿಲ್ಲ; ಗಾಂಧೀಜಿಯವರಿಗೆ ಅವು ಸೇರಲಿಕ್ಕಿಲ್ಲ. ಇದರ ಸಲುವಾಗಿ ಒಂದು ವೇಳೆ ಅವರು ಪ್ರಾಣಾಂತಿಕ ಉಪವಾಸ ಕೈಕೊಂಡರೆ ನನಗ ಆಶ್ಚರ್ಯವಾಗ ಲಿಕ್ಕಿಲ್ಲ. ವೇಷ ಪರಿವರ್ತನೆ ಮಾಡುವದಂತೂ ಗಾಂಧೀ ತತ್ವದಲ್ಲಿ ಮತ್ತು ಪ್ರಕ್ರಿಯೆ ಯಲ್ಲಿ ಎಂದೂ ಬರುವದಿಲ್ಲವೆಂಬುದು ನನಗೆ ಸಂಪೂರ್ಣ ಗೊತ್ತಿತ್ತು. ಆದ್ದರಿಂದ ನಾನು ವೇಷ ಬದಲಾಯಿಸದೆ ಎಷ್ಟೋ ದಿವಸ ಸಾಂಗಲಿಯಲ್ಲಿ ಶ್ರೀ ಗಣಪತರಾವ ಅಭ್ಯಂಕರ ಅವರ ಬಂಗಲೆಯಲ್ಲಿರುತ್ತಿದ್ದೆ. ಸಾಂಗಲಿ ಊರಲ್ಲಿ ಹೋಗುವದು ಅವಶ್ಯಬಿದ್ದಾಗ ಮಾತ್ರ ಮನೆಯಿಂದ ಹೊರಬೀಳುತ್ತಿದ್ದೆ. ಸಾಂಗಲಿಯಲ್ಲಿದ್ದೂ ಮಹಾರಾಷ್ಟ್ರ-ಕರ್ನಾಟಕ ವಿಶೇಷವಾಗಿ ಬೆಳಗಾವಿ ಜಿಲ್ಹೆಯ ಕಾರ್ಯಕರ್ತರ ಸಲುವಾಗಿ ಬುಲೆಟಿನ್ಸ–ಗುಪ್ತ ಪತ್ರಿಕೆಗಳನ್ನು ಹೊರಡಿಸಬೇಕೆಂದು ನಾನು ನಿಶ್ಚಯಿಸಿದೆ. ಸಾಂಗಲಿ–ಮಿರಜಗಳ ಮಧ್ಯದಲ್ಲಿರುವ ವಿಲಿಂಗ್ಡನ್ ಕಾಲೇಜಿನ ವಿದ್ಯಾರ್ಥಿಗಳನ್ನು ಕೂಡಿಸಿ. ಅವರ ಕೈಯಿಂದ ನಾನು ನನ್ನ ಪ್ರಥಮ ಬುಲೆಟಿನ್ ಬರೆಯಿಸಿದ್ದೆ. "ಆಸ್ತಿನಾಶ, ಅಗ್ನಿಧ್ವಂಸಕ ಕೃತ್ಯ, ವೇಷ ಬದಲಾಯಿಸುವದು. ರೇಲ್ವೆ ಹಳಿ ಕಿತ್ತುವದು. ಸ್ಟೇಶನ್ ಮುಂತಾದವುಗಳನ್ನು

ಸುಡುವದು ಇತ್ಯಾದಿ ಗಾಂಧೀ ತತ್ವಜ್ಞಾನದಲ್ಲಿ ಬರುವದಿಲ್ಲ. ಅದು ಅವರಿಗೆ ಸೇರುವ್ರದಿಲ್ಲ. ಈ ಎಲ್ಲ ಕೃತ್ಯಗಳನ್ನು ನಿಲ್ಲಿಸಿದರೆ ಚಳವಳಿಯೇ ಬಂದಾಗುವದು ಎಂಬ ಭಾಸವಾಗಬಹುದು. ಆದರೆ ಅದು ನಿಜವಲ್ಲ. ಈ ಚಳವಳಿಯು ನಿಜವಾದ ಶಕ್ತಿ ಅದೇ ಆಗಿದೆ. ಇದರಿಂದ ಚಳವಳಿ ಹಿಮ್ಮೆಟ್ಟಿತೆಂದು ತಿಳಿಯಬಾರದು." ಎಂದು ನಾನು ಅದರಲ್ಲಿ ಸ್ಪಷ್ಟ ಬರೆದಿದ್ದೆ. ಈ ಗುಪ್ತ ಪತ್ರಿಕೆಯನ್ನು ನಾನು ವಿದ್ಯಾರ್ಥಿಗಳ ಕೈಯಿಂದ ಬರೆಯಿಸುತ್ತಿರುವಾಗಲೇ ಕೆಲವು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಇದು ಸರಿಬಾರದ್ದರಿಂದ ಅವರು ಅಲ್ಲಿಂದ ಎದ್ದು ಹೊರಟು ಹೋದರು. ಕೆಲವು ವಿದ್ಯಾರ್ಥಿನಿಯರು ಬಂದು ನನಗೆ ಈ ಧೋರಣವನ್ನು ಬದಲು ಮಾಡಲು ಸೂಚಿಸಿದರು. ಇಷ್ಟೇ ಅಲ್ಲದೆ ಆ ರೀತಿ ಮಾಡಲು ಸೂಚಿಸಿದರು. ಇಷ್ಟೇ ಅಲ್ಲದೆ ಆ ರೀತಿ ಮಾಡಲು ಅವರು ಆಗ್ರಹ ತೊಟ್ಟರು. ನನಗೆ ಸಹಾಯ ಮಾಡುವವರಲ್ಲಿ ಮೂರು-ನಾಲ್ಕು ಹುಡುಗಿಯರಿದ್ದರು. ಅವರಲ್ಲಿ ಒಬ್ಬಳು ಮಹಾರಾಷ್ಟ್ರದವಳು; ಮೂವರು ಕಾರವಾರದವರಿದ್ದರು.

ಪುಣೆಯ ಟಿಳಕ ಮಹಾವಿದ್ಯಾಲಯದ ಶ್ರೀ ಅತೀತಕರ ಅವರು ನನ್ನನ್ನು ಈ ಸಂಕಟದೊಳಗಿಂದ ಪಾರು ಮಾಡಿದರು. ಗಾಂಧೀಜಿಯವರ ಹರಿಜನ ಗುಪ್ತಪತ್ರವೆಂಬುದನ್ನು ಅಚ್ಚುಹಾಕಿಸಿಕೊಂಡು ಹೋಗಲು ಅವರು ಸಾಂಗಲಿಗೆ ಬಂದಿದ್ದರು. ಅವರ ಹತ್ತಿರ ಎರಡು ಲೇಖಗಳಿದ್ದವು. ಒಂದು ಕಿಶೋರಿಲಾಲ ಮಶ್ರೂವಾಲಾರದು. ಇನ್ನೊಂದು ಪೂಜ್ಯ ಶ್ರೀ ಕಾಕಾಸಾಹೇಬ ಕಾಲೇಲಕರರದು, ಆ ಲೇಖಗಳನ್ನು ಓದಿದ ನಂತರ ನನಗೆ ನನ್ನ ತಪ್ಪು (?) ತಿಳಿಯಿತು, ಅವರಿಬ್ಬರ ತುಲನೆಯಿಂದ ನನ್ನ ಗಾಂಧೀವಾದದ ಜ್ಞಾನವೆಷ್ಟು ಎಂದೆನಿಸಿತು, ನನ್ನ ಈ ಹೊಸಜ್ಞಾನ (?) ದಿಂದ ನನ್ನ ವಿಚಾರದಲ್ಲಿ ಆಮೂಲಾಗ್ರ ಬದಲಾವಣೆಯಾಯಿತು. ನನ್ನ ಬೆಳಗಾವಿಯ ಮಿತ್ರರಿಗೂ ಹುದಲಿ ಆಶ್ರಮದ ನನ್ನ ಸಹಕಾರಿಗಳಿಗೂ ನಾನು ಆ ರೀತಿ ತಿಳಿಸಿದೆನು. ನನ್ನ ಮೊದಲನೇ ಬುಲೆಟಿನ್ನಿನ ಕೆಲವು ಪ್ರತಿಗಳನ್ನು ಮೊದಲನೆಯ ದಿನವೇ ಕೆಲವರಿಗೆ ನಾನು ಹಂಚಿದ್ದೆ, ಅಷ್ಟುಮಾತ್ರ ಅದರ ಪ್ರಚಾರ ಮಾಡಲಾಯಿತು. ಉಳಿದವುಗಳನ್ನು ಹಂಚದೆ ಒಂದು ಭದ್ರವಾದ ಸ್ಥಳದಲ್ಲಿ ಇಟ್ಟುಬಿಟ್ಟೆನು, ನನ್ನ ಎಲ್ಲ ಬುಲೆಟಿನ್‌ಗಳನ್ನು ಬಹಿರಂಗವಾಗಿ ಮುದ್ರಿಸಿಕೊಡುವ ಮುದ್ರಣಾಲಯ ಮತ್ತು ಅದರ ಒಡೆಯ ಪ್ರೊ. ಶಹಾ ನನಗೆ ದೊರೆತಿದ್ದರೆಂದು ನಾನು ಈ ಮೊದಲೇ ಹೇಳಿದ್ದೇನೆ. ಆ ಬುಲೆಟಿನ್‌ಗಳ ಮೇಲೆ ಮುದ್ರಣಾಲಯದ ಹೆಸರು ಇರುತ್ತಿರಲಿಲ್ಲ, ಪ್ರತಿಯೊಂದು ಬುಲೆಟಿನ್ನಿಗೂ ಬೇರೆ ಬೇರೆ ಊರಿನ ಹೆಸರು ಕೊಡಲಾಗುತ್ತಿತ್ತು. ಮುದ್ರಣದ ವೆಚ್ಚಕ್ಕಾಗಿ ಹಣ ಒದಗಿಸುವ ಜನರೂ ನನಗೆ ಸಿಕ್ಕಿದ್ದರು. ಒಟ್ಟು ೨೨ ಬುಲೆಟಿನ್ನುಗಳನ್ನು ನಾನು ಈ ಮುದ್ರಣಾಲಯದಲ್ಲಿ ಅಚ್ಚುಹಾಕಿಸಿಕೊಂಡಿದ್ದೆನು. ಪ್ರತಿಯೊಂದು ಗುಪ್ತ ಪತ್ರಿಕೆಯ ಮೂರು ಸಾವಿರ ಪ್ರತಿಗಳನ್ನು ಮುದ್ರಿಸಲಾಗುತ್ತಿತ್ತು. ಸಾವಿರದ ಒಂದೊಂದು ಕಟ್ಟುಗಳನ್ನು ಕಟ್ಟಿ ಸಾಯಂಕಾಲ ಜನರು ತಿರುಗಾಡುವ ಸಮಯದಲ್ಲಿ ಅವುಗಳನ್ನು ಶ್ರೀ ಅಭ್ಯಂಕರರ

ಬಂಗಲೆಗೆ ಸಾಗಿಸಲಾಗುತ್ತಿತ್ತು. ಶ್ರೀ ಗಣಪತರಾವ ಅಭ್ಯಂಕರರ ಕನಿಷ್ಠ ಪುತ್ರ ಶ್ರೀ ವಸಂತರಾವ ಅವರು ತಮ್ಮ ಪಿ.ಎಚ್. ಡಿ. ನಿಬಂಧ ಬರೆಯುವದರಲ್ಲಿ ಮಗ್ನರಾಗಿರುತ್ತಿದ್ದರು! ನಾನು ಅವರ ಮನೆಯಲ್ಲಿದ್ದು ಏನು ಕೆಲಸ ಮಾಡುತ್ತಿದ್ದೆನೆಂಬುದು ಅವರ ಮಾತೋಶ್ರಿಯವರಿಗೆ ಮಾತ್ರ ಗೊತ್ತಿತ್ತು. ಶ್ರೀಮತಿ ಲಕ್ಷ್ಮೀಬಾಯಿ ಅಭ್ಯಂಕರರು ಸಮಾಜ ಸುಧಾರಕರೂ ದೇಶಭಕ್ತರೂ ಆಗಿದ್ದರು. ನನ್ನ ಬಗ್ಗೆ ಅವರಿಗೆ ಪ್ರೇಮ ಹಾಗೂ ಆತ್ಮೀಯತೆ ಎನಿಸುತ್ತಿತ್ತು. ನಾನು ಅವರ ಆರನೇ ಮಗನೆಂದೇ ಅವರು ಭಾವಿಸಿದ್ದರು.

ನನ್ನ ಮೇಲೆ ವಾರಂಟಿದೆ. ನಾನು ಭೂಗತನಿದ್ದೇನೆ. ಅದರಿಂದ ಹುದಲಿಯಲ್ಲಿಯ ನನ್ನ ವಾಚನಾಲಯ ಮತ್ತು ಇತರ ಸಾಮಾನುಗಳನ್ನು ಪೋಲೀಸರು ಜಪ್ತಮಾಡಿ ಒಯ್ಯುತ್ತಾರೆಂದು ಹುದಲಿಯ ಜನರಿಗೆ ತಿಳಿದುಬಂದಿತು. ಹುದಲಿಯ ಕಾರ್ಯಕರ್ತರು ನನ್ನ ಎಲ್ಲ ಸಾಮಾನುಗಳನ್ನು ನಾನಿಟ್ಟಿದ್ದ ಸ್ಥಳದಿಂದ ಶ್ರೀ ಬಂಡೋಪಂತ ದೇಶಪಾಂಡೆ ಅವರ ಮನೆಯಲ್ಲಿ ಒಯ್ದು ಇಟ್ಟರು. ಇದು ಮೊದಲು ನನಗೆ ತಿಳಿದಿರಲಿಲ್ಲ; ಅನಂತರ ತಿಳಿಯಿತು.

ನಾನು ಮಿರಜದಿಂದ ನನ್ನ ಮಿತ್ರ ಶ್ರೀ ದಾಮುಅಣ್ಣಾ ಕುಲಕರ್ಣಿ ವೈದ್ಯ ಡಾಲಗಾಂವಕರ ಅವರನ್ನು ಹುದಲಿಗೆ ಕಳಿಸಿದೆನು, ಅವರು ಪೋಲಿಸರ ಕೈಗೆ ಸಿಕ್ಕರೆ ಭಾರೀ ಶಿಕ್ಷೆಯಾಗುತ್ತದೆಂಬುದನ್ನು ನಾನು ಸ್ಪಷ್ಟವಾಗಿ ಅವರಿಗೆ ಹೇಳಿಬಿಟ್ಟಿದ್ದೆ. ಅವರು ಅಷ್ಟು ತಮ್ಮ ಸಿದ್ಧತೆಯನ್ನು ಮಾಡಿಕೊಂಡೇ ಹುದಲಿಗೆ ಹೊರಟರು. ಹುದಲಿಯಲ್ಲಿ ಅವರು ಬಹಳ ಚಾಣಾಕ್ಷತೆಯಿಂದ ಪೋಲೀಸರ ಕಣ್ಣು ತಪ್ಪಿಸಿ ಬಂದರು.

ಹುದಲಿಯಲ್ಲಿ ಸಾಯಿಕ್ಲೊಸ್ಟಾಯಿಲ್ ಮಶಿನ್ ಇತ್ತು. ಒಂದು ಪಾಕೀಟದಲ್ಲಿ ೮೫೦ ರೂ. ನೋಟು ಹಾಕಿ ಅದನ್ನು ಒಂದು ದೊಡ್ಡ ಪುಸ್ತಕದಲ್ಲಿ ಇಟ್ಟಿದ್ದೆನು, ಅವೆರಡೂ ನನಗೆ ಬೇಕಾಗಿದ್ದವು, ಹುದಲಿಯ ಶ್ರೀ ತಿಪ್ಪಣ್ಣಾ ಬೆಟಗೇರಿ–ಶಾಸ್ತ್ರಿ ಅವರು ನನ್ನ ಪುಸ್ತಕದ ರಾಶಿಯೊಳಗಿಂದ ಆ ದೊಡ್ಡ ಪುಸ್ತಕ ಹಾಗೂ ಅದರೊಳಗಿದ್ದ ನೋಟಿನ ಪಾಕೀಟನ್ನು ಹುಡುಕಿ ತೆಗೆದರು. ಅದನ್ನು ಶ್ರೀ ಕುಲಕರ್ಣಿಯವರ ಕಡೆಗೆ ಕೊಟ್ಟರು. ಅವರು ಅದನ್ನೆಲ್ಲ ನನಗೆ ತಂದು ಮುಟ್ಟಿಸಿದರು,

ಶ್ರೀ ಕುಲಕರ್ಣಿಯವರು ಸುಲಧಾಳ ಸ್ಟೇಶನ್‌ದಿಂದ ಹೊರಟರು. ಸಾಯಿಕ್ಲೋಸ್ಟಾಯಿಲನ್ನು ಒಂದು ಚೀಲದಲ್ಲಿ ಹಾಕಿ ೧೦ ಮೈಲು ದೂರದಲ್ಲಿರುವ ಪಾಚ್ಛಾಪುರ ಸ್ಟೇಶನದ ವರೆಗೆ ಒಬ್ಬ ಮನುಷ್ಯ ತಲೆಯ ಮೇಲೆ ಹೊತ್ತುಕೊಂಡು ಬಂದು ಅದನ್ನು ಶ್ರೀ ಕುಲಕರ್ಣಿಯವರು ಕುಳಿತ ಗಾಡಿಗೆ ತಂದು ಮುಟ್ಟಿಸಿದನು. ಮಿರಜ ಪೋಲೀಸರ ಕಣ್ಣು ತಪ್ಪಿಸಿ. ಜಕಾತಿಯವರ ಗೊಂದಲದಿಂದ ಪಾರಾಗಿ ಆ ಸಾಯಿಕ್ಲೋಸ್ಟಾಯಲನ್ನು ಶ್ರೀ ಕುಲಕರ್ಣಿಯವರು ತಂದು ನನ್ನ ಸ್ವಾಧೀನಕ್ಕೆ ಕೊಟ್ಟರು.

ಶ್ರೀ ದಾಮು ಅಣ್ಣಾ ವೈದ್ಯರು ಸಾಯಿಕ್ಲೋಸ್ಟಾಯಿಲ್ ಮಿಶಿನ್ ಸಹಿತ ವಾಗಿ ಪೋಲೀಸರ ಕೈಗೆ ಸಿಕ್ಕಿದ್ದರೆ ಅವರು ಪೋಲೀಸರಿಂದ ಹೊಡೆತ ತಿನ್ನಬೇಕಾಗು ತ್ತಿತ್ತು. ಶ್ರೀ ಕುಲಕರ್ಣಿಯವರು ಸೆರೆಮನೆಗೆ ಹೋಗದೆ. ಭೂಗತರ ಸಲುವಾಗಿ ಎಷ್ಟೋ ಸಾಹಸದ ಕೆಲಸ ಮಾಡಿದ್ದಾರೆ. ಆರ್ಥಿಕ ತೊಂದರೆಯನ್ನು ಅನುಭವಿಸಿದ್ದಾರೆ. ಹುದಲಿಯಲ್ಲಿಯ ಪೋಲಿಸರ ಕಣ್ಣು ತಪ್ಪಿಸಿ. ಸಾಯಿಕ್ಲೋಸ್ಟಾಯಿಲ್ ಮಿಶನ್ ಮಿರಜಿಗೆ ತರುವದು ಬಹಳ ಗಂಡಾಂತರದ ಕೆಲಸವಾಗಿತ್ತು. ಅವರು ಸುರಕ್ಷಿತವಾಗಿ ಮಿರಜಿಗೆ ಬಂದು ಮುಟ್ಟುವವರೆಗೆ ನಾನು ಬಹಳ ಚಿಂತೆಯಲ್ಲಿದ್ದೆ.

ನನಗೆ ಹೊಸ ಜ್ಞಾನ (?) ಪ್ರಾಪ್ತವಾದ ನಂತರ ನಾನು ಬರೆದ ಹೊಸ ಗುಪ್ತ ಪತ್ರಿಕೆಗಳು ತೀರ ಭಿನ್ನವಾಗಿದ್ದವು. ಈ ಗುಪ್ತ ಪತ್ರಿಕೆಗಳ ಸಲುವಾಗಿ ಪೋಲೀ ಸರು ಬೆಳಗಾವಿ ಮತ್ತು ಸಾತಾರಾ ಜಿಲ್ಹೆಗಳಲ್ಲಿ ಶೋಧ ಸತ್ರ ಪ್ರಾರಂಭ ಮಾಡಿದ್ದರು. ಯಾಕಂದರೆ ಪ್ರತಿಯೊಂದು ಗುಪ್ತ ಪತ್ರಿಕೆಯ ಮೇಲೆ ಬೇರೆ ಬೇರೆ ಊರ ಹೆಸರನ್ನು ಮುದ್ರಿಸುವ ಎಚ್ಚರಿಕೆಯನ್ನು ನಾನು ವಹಿಸಿದ್ದೆ. ಯಾವ ಬುಲೆಟಿನ್‌ಗಳ ಮೇಲೂ ಸಾಂಗಲಿಯ ಹೆಸರಿರಲಿಲ್ಲ. "ರೇಲ್ವೆ ಹಳಿ ಹೇಗೆ ಕಿತ್ತಬೇಕು? ಫಿಶ್‌ಪ್ಲೇಟ ಹೇಗೆ ಉಚ್ಚಬೇಕು? ಮೊದಲು ಎಲ್ಲಿಯ ಹಳಿ ಕಿತ್ತಬೇಕು?" ಎಂಬದರ ಮಾರ್ಗದರ್ಶನ ಮಾಡುವಾಗ ನಾನು ಬರೆದಿದ್ದೆ: ಅಡವಿಯಲ್ಲಿ ಹಾಯ್ದಿರುವಂಥ, ಸಮೀಪದಲ್ಲಿ ಊರು ಇಲ್ಲದಂಥ ಸ್ಥಳದಲ್ಲಿಯ ರೇಲ್ವೆ ಹಳಿ ಕಿತ್ತಬೇಕು. ಅಂದರೆ ಬೇಗನೆ ಸರಿಪಡಿಸಲು ಕಠಿಣ ವಾಗುವದು. ಜನರನ್ನು ಒಯ್ಯುವ ಗಾಡಿಯನ್ನು ಕೆಡವದಂತೆ ಎಚ್ಚರಿಕೆ ವಹಿಸಬೇಕು. ತಂತಿಗಳನ್ನು ಕಡಿದು ಅದರ ಜೊತೆಗೆ ಅದರ ಕಂಬಗಳನ್ನು ನಾಶಮಾಡಬೇಕು. ಫಿಶ್-ಪ್ಲೇಟ ಕಿತ್ತಿದ ನಂತರ ಅಲ್ಲಿ ದೊಡ್ಡ ಕೆಂಪು ನಿಶಾನಿ ಹಚ್ಚಿ ಇಡಬೇಕು.

ಇಂಥ ಕಾರ್ಯಕ್ರಮಗಳಿಗೆ ಜನರನ್ನು ದೂರ ದೂರದ ಊರುಗಳಿಂದ ಕರೆತರ ಬೇಕು. ಕಾರ್ಯಕ್ರಮ ಮುಗಿದ ಕೂಡಲೇ ಅವರನ್ನು ಅವರವರ ಊರಿಗೆ ಕಳಿಸಬೇಕು. ಈ ಪ್ರಕಾರದ ಸೂಚನೆಗಳನ್ನು ಗುಪ್ತ ಪತ್ರಿಕೆಯಲ್ಲಿ ಕೊಡಲಾಗುತ್ತಿತ್ತು. ಫಿಶ್‌ಪ್ಲೇಟ ಉಚ್ಚುವ ಪಾನಾಗಳನ್ನು ಸಾಂಗಲಿಯಲ್ಲಿ ಮಾಡಿಸಿ ಅವನ್ನು ಪೂರೈಸುವ ಕೆಲಸವನ್ನೂ ನಾನು ಮಾಡುತ್ತಿದ್ದೆ. ತಯಾರಾದ ಪಾನಾಗಳನ್ನು ಶ್ರೀ ಅಭ್ಯಂಕರರ ಮನೆಯಲ್ಲಿ ಉರವಲ ಕಟ್ಟಿಗೆ ಇಡುವ ಕೋಣೆಯಲ್ಲಿಡುತ್ತಿದ್ದೆನು. ಆದರೆ ಎರಡು ಮೂರು ದಿವಸ ಗಳಿಗಿಂತ ಹೆಚ್ಚು ಕಾಲ ಅವುಗಳನ್ನು ಅಲ್ಲಿ ಇಡುತ್ತಿದ್ದಿಲ್ಲ. ಅಂದರೆ ಕೂಡಲೇ ಅವುಗಳನ್ನು ಅವಶ್ಯವಿದ್ದ ಸ್ಥಳಗಳಿಗೆ ಕೊಟ್ಟು ಕಳಿಸಲಾಗುತಿತ್ತು.*

* ಆಂದೋಲನವೆಲ್ಲ ಮುಗಿದ ನಂತರ ನಾನು ಪುಣೆಯಲ್ಲಿ ಗಾಂಧೀಜಿಯವರ ಭೆಟ್ಟಿಗೆ ಹೋಗಿದ್ದೆ. ಆಗ ನನ್ನ ಸಂಗಡ ನನ್ನ ಎಲ್ಲ ಬುಲೆಟಿನ್ ತೆಗೆದುಕೊಂಡು ಹೋಗಿದ್ದೆ. ನನಗೆ ಶ್ರೀಮಾನ್ ರಾಜಗೋಪಾಲಾಚಾರ್ಯರ ಭೆಟ್ಟಿಯೂ ಅದೇ ಕಾಲಕ್ಕೆ ಗಾಂಧೀಜಿಯವರ ನಿವಾಸಸ್ಥಾನದಲ್ಲಿಯೇ ಆಯಿತು.

[ಮುಂದಿನ ಪುಟ ನೋಡಿರಿ]

ನಿಗದಿ ಮಾಡಿದ ತಾರೀಖಿಗೆ ಕಳಿಸಬೇಕಾದ ಗುಪ್ತ ಪತ್ರಿಕೆಯ ಕಟ್ಟುಗಳನ್ನು ಆಯಾ ತಾರೀಖಿಗೆ ಕಳಿಸಲಾಗುತ್ತಿತ್ತು. ಪುಣೆಯಿಂದ ಬೆಳಗಾವಿ, ಚಿಕ್ಕೋಡಿ, ನಿಪ್ಪಾಣಿ ವರೆಗೆ ೧೪–೧೫ ಊರುಗಳಿಗೆ ಈ ಗುಪ್ತ ಪತ್ರಿಕೆಗಳನ್ನು ಮುಟ್ಟಿಸಲಾಗುತ್ತಿತ್ತು. ಒಂದುಸಾರೆ 'ಶ್ರೀ ಅಚ್ಯುತರಾವ ಪಟವರ್ಧನ ಅವರ ಕಡೆಯಿಂದ' ಎಂದು ಒಂದು ಇಂಗ್ಲೀಷ ಬುಲೆಟಿನ್ ನನ್ನ ಕಡೆಗೆ ಬಂದಿತು. ಆ ಬುಲೆಟಿನ್ ಅರ್ಧ ಹಾಳಿಯ ಎರಡೂ ಬದಿಗೆ ಇಂಗ್ಲೀಷಿನಲ್ಲಿ ಟಾಯಿಪ ಮಾಡಿತ್ತು. ವಿಲಿಂಗ್ಡನ್ ಕಾಲೇಜಿನ ಒಂದು ಕೋಣೆಯಲ್ಲಿ ೨೦–೨೫ ವಿದ್ಯಾರ್ಥಿಗಳನ್ನು ಕೂಡಿಸಿದೆನು. "ಈ ಕಾಗದವನ್ನು ಜಮಖಂಡಿ

ಶ್ರೀ ರಾಜಗೋಪಾಲಾಚಾರ್ಯರು ನನ್ನನ್ನು ವಿಚಾರಿಸಿದರು : "ಭಾರತದಿಂದ ತೊಲಗಿರಿ ಆಂದೋಲನದಲ್ಲಿ ನೀವು ಏನು ಮಾಡಿದಿರಿ ? ನೀವು ಭೂಗತರಾಗಿದ್ದಿರಾ ?"

ನಾನು ಮಾಡಿದ ಕಾರ್ಯದ ಪುರೋಚಿಯನ್ನು ಅವರ ಮುಂದೆ ಓದಿದೆ. ಮತ್ತು ನನ್ನ ಗುಪ್ತ ಪತ್ರಿಕೆಗಳನ್ನು ಅವರಿಗೆ ತೋರಿಸಿದೆ.

"ನಿಮ್ಮ ಮೊದಲಿನ ಬುಲೆಟಿನ್ ಮತ್ತು ಇತರ ಎಲ್ಲ ಬುಲೆಟಿನ್‌ಗಳಲ್ಲಿ ಭೂಮ್ಯಾಕಾಶದಷ್ಟು ಅಂತರವಿದೆಯಲ್ಲ ! ಇದು ಏಕೆ" ? ಎಂದು ರಾಜಾಜಿ ವಿಚಾರಿಸಿದರು.

ನನ್ನ ಉತ್ತರ ; "ಶ್ರೀ ಕಿಶೋರಲಾಲಜೀ ಮಶ್ರೂವಾಲಾ ಮತ್ತು ಪೂಜ್ಯ ಕಾಕಾಸಾಹೇಬ ಕಾಲೇಲ್ಕರ ಅವರ ಲೇಖನ ಓದಿದ ನಂತರ ನನ್ನ ತಪ್ಪು (?) ತಿಳಿಯಿತು. ಆದ್ದರಿಂದ ಈ ವ್ಯತ್ಯಾಸವಿದೆ."

ಎರಡನೆಯ ಮೊಗಸಾಲೆಯಲ್ಲಿ ಕುಳಿತ ಗಾಂಧೀಜಿ ಕಡೆಗೆ ನನ್ನನ್ನು ರಾಜಾಜಿಯವರು ಕರೆದು ಕೊಂಡು ಹೋಗಿ ಗಾಂಧೀಜಿಗೆ ಅಂದರು : "ಇದನ್ನು ತೆಗೆದುಕೊಳ್ಳಿ—ಇನ್ನೊಂದು ಉದಾಹರಣೆ. ಅವರ ಬುಲೆಟಿನ್ನ ನೋಡಿರಿ."

ಗಾಂಧೀಜಿಯವರ ಮುಂದೆಯೂ ಅದೇ ಪುರೋಚಿಯನ್ನು ನಾನು ಹೇಳಿದೆ. ನನ್ನ ಮೊದಲಿನ ಬುಲೆಟಿನ್ ನಾನು ಸಾದ್ಯಂತ ಓದಿ ತೋರಿಸಿದೆ. ಇತರ ಎಲ್ಲ ಬುಲೆಟಿನ್‌ಗಳ ತಲೆಬರಹವನ್ನು ಓದಿ ಹೇಳಿದೆ.

ನಾನು ಗಾಂಧೀಜಿಯವರ ಹತ್ತಿರವೇ ಕುಳಿತಿದ್ದೆ. ಅವರು ನನ್ನ ಕಪಾಳಕ್ಕೆ ಚನ್ನಾಗಿ ಹೊಡೆದು, ನನಗೆ ಅಂದರು : "ನೀನು ಹೀಗೆ ಮಾಡಬಹುದೆಂದು ನಾನು ತಿಳಿದಿದ್ದಿಲ್ಲ. ನಾನೇ ಸ್ವತಃ ಎಂದಾದರೂ ಹಿಂಸೆಗೆ ಅಹಿಂಸೆ ಎಂದೆನ್ನಹತ್ತಿದರೆ, ನೀನು ಅದನ್ನು ವಿರೋಧಿಸಬೇಕು, ಅವರು ಎಷ್ಟೇ ದೊಡ್ಡವರಿರಲಿ ಕೇವಲ ಇತರರ ಲೇಖನಗಳಿಂದ ತಮ್ಮ ಮತ ಬಿಡಬೇಕೇ ? ಅಥವಾ ಬದಲಾಯಿಸ ಬೇಕೇ ? "

ಶ್ರೀ ರಾಜಾಜಿಯವರು ನನ್ನನ್ನು ಗಾಂಧೀಜಿಯವರ ಕಡೆಗೆ ಕರೆದುಕೊಂಡು ಹೋಗಿ ಈ ಗೊಂದಲ ಮಾಡಿದರು. ಅದರಲ್ಲಿ ಅವರ ಉದ್ದೇಶವೇನಿತ್ತೆಂಬುದರ ಕಲ್ಪನೆ ನಾನು ಮಾಡಲಾರೆ. ಆದರೆ ಇದರಿಂದ ನನಗೆ ಗೊತ್ತಾದುದು ಇಷ್ಟು : "ಗಾಂಧೀಜಿಗೆ ಈ ಅಗ್ನಿಧ್ವಂಸಕೃತ್ಯ ಅಥವಾ ಸ್ಯಬೊಲೇಜ ಸಮ್ಮತವಿರಲಿಲ್ಲ."

ಇದರ ಪರಿಣಾಮವೇನಾಗುತ್ತಿದೆಂಬೋ ಎಂಬ ಭೀತಿ ನನಗಿತ್ತು. ಆದರೆ ಇಂಥ ಅನೇಕ ಉದಾಹರಣೆಗಳನ್ನು ಅವರು ಈ ಪೂರ್ವದಲ್ಲಿಯೇ ಕೇಳಿದ್ದರಿಂದ ನನ್ನ ಉದಾಹರಣೆ ಅವರಿಗೆ ಹೊಸದೇನೂ ಆಗಿರಲಿಲ್ಲ.

ಯಲ್ಲಿ ನಾನು ಕೊಟ್ಟ ವಿಳಾಸಕ್ಕೆ ಶ್ರೀ ವಾಮನರಾವ ದೇಸಾಯಿ ಚಿದ್ರಿ ಇವರ ಕಡೆಗೆ ಯಾರು ಮುಟ್ಟಿಸಬಲ್ಲಿರಿ? ಒಂದು ವೇಳೆ ಪೋಲೀಸರ ಕೈಗೆ ಆ ಕಾಗದ ಸಿಗುವ ಪ್ರಸಂಗ ಬಂದರೆ, ಅದನ್ನು ಚೂರು ಚೂರು ಮಾಡಿ ತಿಂದು ಬಿಡಬೇಕು!" ಕೋಣೆಯಲ್ಲಿ ಕುಳಿತ ವಿದ್ಯಾರ್ಥಿಗಳಲ್ಲಿ ಒಬ್ಬನು ತನ್ನ ಕೈ ಮೇಲೆತ್ತಿ ಹೇಳಿದನು: "ಯಾವುದೇ ಪೋಲೀಸ ನನ್ನ ಕೈಯಿಂದ ಆ ಕಾಗದ ತೆಗೆದುಕೊಳ್ಳಲಾರ. ಆ ಕಾಗದ ಝಡತಿಯಲ್ಲಿ ಸಿಗುವದು ಸಾಧ್ಯವಿಲ್ಲ. ಒಂದು ಸಾರೆ ಆ ಬುಲೆಟಿನ್ ಓದಿರಿ. ನೋಡೋಣ. ಅದರಲ್ಲಿ ಏನು ಬರೆದಿದೆ ಎಂಬುದು ಎಲ್ಲರಿಗೂ ಕೇಳಲಿಕ್ಕೆ ಸಿಗುತ್ತದೆ." ನಾನು ಆ ಬುಲೆಟಿನ್ ಎಲ್ಲರಿಗೂ ಓದಿ ಹೇಳಿದೆ. ಇದನ್ನು ಕೇಳಿದ ನಂತರ ಆ ವಿದ್ಯಾರ್ಥಿ ನನಗೆ ಹೇಳಿದ: "ನಿಮ್ಮ ಕೈಯಲ್ಲಿದ್ದ ಗುಪ್ತ ಪತ್ರಿಕೆ ನೀವು ನೋಡಿರಿ. ಅದನ್ನೆಲ್ಲ ನಾನು ಅಂದು ತೋರಿಸು ತ್ತೇನೆ. ಜಮಖಂಡಿಗೆ ಹೋದ ನಂತರ ನಾನು ಅದನ್ನು ಅಲ್ಲಿ ಬರೆದುಕೊಡುತ್ತೇನೆ." ಆ ಪ್ರಕಾರ ಅವನು ಅದನ್ನು ಅಂದು ತೋರಿಸಿದ. "ನನ್ನ ತಲೆಯಲ್ಲಿದ್ದ ಈ ಬುಲೆಟಿನ್ ಪೋಲೀಸರು ಹೇಗೆ ಹುಡುಕಬಲ್ಲರು ?" ಎಂದು ಆ ವಿದ್ಯಾರ್ಥಿ ಅಂದನು.

ವಿದ್ಯಾರ್ಥಿಗಳೊಂದಿಗೆ ನಮ್ಮ ಈ ಚರ್ಚೆ ನಡೆದಾಗಲೇ ಹೊರಗೆ ಪೋಲೀಸ ಪಾರ್ಟಿ ಬಂದಿತ್ತು. ಕಾಲೇಜಿನ ಪ್ರಿನ್ಸಿಪಾಲರು ಪೋಲೀಸರಿಗ ತಮ್ಮ ಕಾಲೇಜಿನ ಆವಾರದಲ್ಲಿ ಬರಗೊಡಲಿಲ್ಲವಾದ್ದರಿಂದ ನಾನು ಅಲ್ಲಿಂದ ಪಾರಾಗಲು ಶಕ್ಯವಾಯಿತು. ರಾತ್ರಿಯಾಗುವ ವರೆಗೆ ನಾನು ಪ್ರಿನ್ಸಿಪಾಲರ ಮನೆಯ ಒಂದು ಕೋಣೆಯಲ್ಲಿದ್ದೆನು.

ಶ್ರೀ ಅಭ್ಯಂಕರರ ಮನೆಗೆ ಬೆಳಗಾವ ಜಿಲ್ಹೆಯ ಅನೇಕ ಕಾರ್ಯಕರ್ತರು ಬಂದು ಹೋಗುತ್ತಿದ್ದರು. ಅವರೆಲ್ಲರ ಉಪಹಾರದ ವ್ಯವಸ್ಥೆ ಶ್ರೀ ಅಭ್ಯಂಕರರ ಮನೆ ಯಲ್ಲಿಯೇ ಆಗುತ್ತಿತ್ತು. ಆದರೆ ಸಾಂಗಲಿ ಊರೊಳಗಿನವರಾರಿಗೂ ಶ್ರೀ ಅಭ್ಯಂಕರರ ಮನೆಗೆ ಬರಗೊಡುತ್ತಿದ್ದಿಲ್ಲ. ಇದನ್ನು ನಾನು ವಿಚಾರ ಪೂರ್ವಕವೇ ಮಾಡಿದ್ದೆ. ಇಲ್ಲಿಯ ವರೆಗೂ ನಾನು ನನ್ನ ವೇಷವನ್ನು ಬದಲಿಸಿದ್ದಿಲ್ಲ. ಯಾಕೆಂದರೆ ಅದು ನನಗೆ ಒಪ್ಪಿತವಿರಲಿಲ್ಲ.

ಕರ್ಹಾಡದಿಂದ ಹನ್ನೆರಡು ಮೈಲು ದೂರದಲ್ಲಿರುವ ಕಾಸೇಗಾಂವ ಎಂಬ ಗ್ರಾಮದಲ್ಲಿ ಭೂಗತ ಕಾರ್ಯಕರ್ತರ ಒಂದು ಸಿಬಿರ ಸೇರಿತ್ತು. ಅಲ್ಲಿ ವ್ಯಾಖ್ಯಾನ ಕೊಡಲು ನನ್ನನ್ನು ಕರೆಯಲು ಒಬ್ಬ ಕಾರ್ಯಕರ್ತ ಬಂದಿದ್ದನು. ಇದು ಪೋಲೀಸರ ತಂತ್ರ ಅಲ್ಲವೆಂಬುದನ್ನು ನಿಶ್ಚಿತ ಮಾಡಿಕೊಂಡೇ ನಾನು ಆ ಆಮಂತ್ರಣ ಸ್ವೀಕರಿಸಿದೆನು; ಕೂಡಲೇ ಆ ಕಾರ್ಯಕರ್ತನೊಂದಿಗೆ ನಾನು ಹೊರಟೆನು. ಊರು ಮತ್ತು ಸ್ಥಳ ಹುಡುಕುವ ಪ್ರಸಂಗ ಬಂದರೆ ಎಲ್ಲವೂ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತಾಗು ವದು. ಚಳವಳಿಗೆ ಪೆಟ್ಟು ತಗಲುವ ಸಂಭವವಿದೆಯೆಂದು ನನಗನಿಸುತ್ತಿತ್ತು. ಆದ್ದರಿಂದ ನಾನು ಅತ್ಯಂತ ಜಾಗರೂಕನಾಗಿದ್ದೆನು. ಶಿಬಿರ ನಡೆಯುವ ಊರಿಗೆ ನಾನು ಬಂದು ಮುಟ್ಟಿದೆನು. ಕೈ. ದೇ. ಭ. ಶ್ರೀಮಾನ್ ಭಾವೂರಾವ ಪಾಟೀಲರೂ ಅಲ್ಲಿಗೆ ಬಂದಿದ್ದರು.

ಅವರು ಭೂಗತರಾಗಿರಲಿಲ್ಲ. ಆದರೂ ಮಾರ್ಗದರ್ಶನಕ್ಕಾಗಿ ಅವರನ್ನು ಬೇಕೆಂತಲೇ ಕರೆದುಕೊಂಡು ಬಂದಿದ್ದರು. ಅಧಿಕಾರಿಗಳ ಜೀವಕ್ಕೆ ಧಕ್ಕೆ ತಗಲದಂತೆ ಅವರನ್ನು ಅಜ್ಞಾತ ಸ್ಥಳದಲ್ಲಿ ಒಯ್ದು ಸುರಕ್ಷಿತವಾಗಿ ಹೇಗಿಡಬೇಕೆಂಬ ಬಗ್ಗೆ ಇರುವ ನನ್ನ ವಿಚಾರವನ್ನು ಅಲ್ಲಿದ್ದ ಭೂಗತ ಕಾರ್ಯಕರ್ತರೆದುರು ಹೇಳಿದೆನು. ಈ ಪ್ರಕಾರ ಮತ್ತೆ ಒಟ್ಟುಗೂಡಬಾರದು. ಪ್ರತಿಯೊಬ್ಬರೂ ತಮ್ಮ ತಮ್ಮ ಶಕ್ತ್ಯಾನುಸಾರ ಸಣ್ಣ ಅಥವಾ ದೊಡ್ಡ ಕ್ಷೇತ್ರಗಳನ್ನು ಆಯ್ದುಕೊಂಡು, ಸ್ವತಂತ್ರ ಸಂಘ ಅಥವಾ ಪಥಕಗಳನ್ನು ರಚಿಸಿಕೊಂಡು ಕೆಲಸ ಮಾಡಬೇಕು ಎಂದು ನಾನು ನನ್ನ ಭಾಷಣದಲ್ಲಿ ಸೂಚಿಸಿದೆನು. ಶ್ರೀ ಭಾವುರಾವ ಪಾಟೀಲರು ಅಂದೇ ರಾತ್ರಿ ಅಲ್ಲಿಂದ ಕರ್ಹಾಡಕ್ಕೆ ಹೊರಟು ಹೋದರು. ಭೂಗತ ಕಾರ್ಯಕರ್ತರು ನನ್ನನ್ನು ಸುರಕ್ಷಿತವಾಗಿ ಮಿರಜಿಗೆ ತಂದು ಮುಟ್ಟಿಸಿದರು. ಈ ಶಿಬಿರವು ಏಳು ದಿವಸ ನಡೆದಿತ್ತು. ಇದಕ್ಕೆ ಊರ ಜನರ ಸಂಪೂರ್ಣ ಸಹಾಯ–ಸಹಾನುಭೂತಿಗಳಿದ್ದವು. ಅದರಂತೆ ಪೋಲೀಸರ ಸಂಪೂರ್ಣ ಸಕ್ರಿಯ ಸಹಾನುಭೂತಿಯೂ ಇತ್ತು. ಎಷ್ಟೋ ಪೋಲೀಸ ಅಧಿಕಾರಿಗಳು ಭೂಗತ ಕಾರ್ಯಕರ್ತರ ಬಂಧನವಾಗದಂತೆ ಜಾಗರೂಕತೆ ವಹಿಸುತ್ತಿದ್ದರು. ಅವರ ಸಹಾಯವಿಲ್ಲದಿದ್ದರೆ ನಾನು ಕರ್ಹಾಡದಿಂದ ಮಿರಜಿಗೆ ಬಂದು ಮುಟ್ಟುತ್ತಲೇ ಇರಲಿಲ್ಲ.

ಪ್ರತ್ಯಕ್ಷ ಕೆಲಸ ಮಾಡುವ ಕಾರ್ಯಕರ್ತರಿಗೆ ಭೂಗತರ ಹೆಸರು–ವಿಳಾಸ ಮತ್ತು ಅವರ ಬಗೆಗಿನ ಸಂಗತಿ ಹೇಳತಕ್ಕದ್ದಲ್ಲ. ನಿಗದಿಮಾಡಿದ ತಾರೀಖಿಗೇ ಗುಪ್ತ ಪತ್ರಿಕೆಗಳ ಕಟ್ಟುಗಳು ಗೊತ್ತುಮಾಡಿದ ವೇಳೆಗೆ, ನಿಶ್ಚಿತ ಸ್ಥಳಕ್ಕೆ ಹೋಗಿ ಬೀಳುತ್ತಿದ್ದವು. ಅಲ್ಲಿಂದ ಅವುಗಳನ್ನು ಕಾರ್ಯಕರ್ತರು ತೆಗೆದುಕೊಂಡು ಹೋಗುತ್ತಿದ್ದರು. ಆ ಪತ್ರಿಕೆಗಳನ್ನು ಹಂಚುವ ತಂಡವು ಬೇರೆಯೇ ಇತ್ತು. ಗುಪ್ತತೆಯನ್ನು ಕಾಯ್ದುಕೊಳ್ಳುವ ವಿಷಯದಲ್ಲಿ ಮಹಾರಾಷ್ಟ್ರದ ಗ್ರಾಮ ಮತ್ತು ಕಾರ್ಯಕರ್ತರಿಗಿಂತಲೂ ಕನ್ನಡ ಗ್ರಾಮ ಹಾಗೂ ಕಾರ್ಯಕರ್ತರು ಹೆಚ್ಚು ಯಶಸ್ವಿಯಾದರೆಂದು ನನ್ನ ಅನುಭವವಿದೆ. ಇದಕ್ಕೆ ಕಾರಣ ಪ್ರಸಿದ್ಧಿಯ ಆಕಾಂಕ್ಷೆ ಇರಬೇಕೆಂದು ನನಗನಿಸುತ್ತದೆ. ಆಯಾಯ ತಾರೀಖಿನ ಮೂರು ತಿಂಗಳುಗಳ ಬುಲೆಟಿನ್ನುಗಳು ಕಟ್ಟುಕಟ್ಟಿ ಸಿದ್ಧವಿರುತ್ತಿದ್ದವು. ಆ ಕಟ್ಟುಗಳನ್ನು ನಾನು ಅಭ್ಯಂಕರರ ಮನೆಯಿಂದ ಬೇರೆ ಕಡೆಗೆ ಸಾಗಿದೆನು. ಸಾಂಗಲಿ ಹತ್ತಿರ ಡಿಗ್ರಜಗಾಂವ ಎಂಬಲ್ಲಿ ನನ್ನ ಪರಿಚಯದ ಒಬ್ಬ ಮನುಷ್ಯನನ್ನು ಇರಲಿಕ್ಕೆ ಕಳಿಸಿದೆನು. ಆತನ ಕೋಣೆಯಲ್ಲಿ ಈ ಬಲೆಟಿನ್ ಬಂಡಲ್‌ಗಳನ್ನು ಇಟ್ಟೆನು. ಅವನು ಯಾವುದೇ ಚಳವಳಿಯಲ್ಲಿ ಭಾಗತೆಗೆದುಕೊಳ್ಳಬಾರದು. ಯಾವುದೇ ಸಭೆಗೆ ಹೋಗಬಾರದೆಂದು ಅವನಿಗೆ ಹೇಳಲಾಗಿತ್ತು. ಅದೇ ಅವನ ಸ್ವಾರ್ಥತ್ಯಾಗ! ಫಿಶ್‌ಪ್ಲೇಟ್ಸ ತೆಗೆಯುವ ೭–೮ ಪಾನಾಗಳು ಸಿದ್ಧವಾಗಿದ್ದವು. ಅವುಗಳನ್ನೂ ಅಭ್ಯಂಕರರ ಮನೆಯಿಂದ ತೆಗೆದುಕೊಂಡು ಮಿರಜ, ಕುರುಂದವಾಡ, ಮಾಲಗಾಂವಗಳಿಗೆ ಒಯ್ದೆನು. ಮುಂದೆ ಅವುಗಳನ್ನು ಉಪಯೋಗ ಮಾಡುವವರ ಕಡೆಗೆ ಕೂಡಲೇ ಮುಟ್ಟಿಸಲಾಯಿತು. ಅಂದರೆ ಮುದ್ದೇಮಾಲ ಪೋಲೀಸರಿಗೆ ಸಿಗದಂತೆ ಪೂರ್ಣ ವ್ಯವಸ್ಥೆ ಮಾಡಲಾಗಿತ್ತು.

ನಿಶ್ಚಿತ ತಾರೀಖಿಗೆ ಬುಲೆಟಿನ್ಸ ಹಂಚುತ್ತಿರುವದನ್ನು ನೋಡಿ, ಪೋಲೀಸರು ಆಶ್ಚರ್ಯಚಕಿತರಾದರು. ಬೆಳಗಾವಿ, ಚಿಕ್ಕೋಡಿ, ನಿಪ್ಪಾಣಿ ಊರುಗಳಲ್ಲಿ ಪೋಲೀಸರು ಶೋಧ ಪ್ರಾರಂಭ ಮಾಡಿದರು. ಸಂಶಯ ಬಂದವರನ್ನು ಹಿಡಿಯಹತ್ತಿದರು. ಈ ಬಗ್ಗೆ ತಪಾಸಣೆ, ಮತ್ತು ಶೋಧ ಹುದಲಿ ಊರಲ್ಲೂ ಆಗುವದೆಂದು ನನಗೆ ನಿಶ್ಚಿತ ಗೊತ್ತಿತ್ತು. ಆದ್ದರಿಂದ ನಾನು ಆ ಊರನ್ನು ನನ್ನ ಚಟುವಟಿಕೆಯಿಂದ ಅಲಿಪ್ತವಾಗಿರಿಸಿದೆನು. ಅಲ್ಲದೆ ಅಲ್ಲಿಯ ಕಾರ್ಯಕರ್ತರು ಶ್ರೀ ರಾಮಚಂದ್ರ ವಡವಿ ಅವರ ಮಾರ್ಗದರ್ಶನದಲ್ಲಿ ಉತ್ತಮ ಕೆಲಸ ನಡೆಸಿದ್ದರು.

ನಾನು ಮುದ್ರಿಸಿದ ಎಲ್ಲ ಬುಲೆಟಿನ್‌ಗಳನ್ನು ಕನ್ನಡಕ್ಕೆ ಅನುವಾದಿಸಿ, ಅವುಗಳನ್ನು ಇದೇ ರೀತಿ ಹಾಕಿಸಬೇಕು. ತಾರೀಖ ಪ್ರಕಾರ ಕಟ್ಟುಕಟ್ಟಿ ಬೆಳಗಾವ ಜಿಲ್ಹೆಯ ಕನ್ನಡಭಾಗದಲ್ಲಿ ಅವುಗಳನ್ನು ಹಂಚಿ ಪ್ರಚಾರಮಾಡಬೇಕೆಂದು ನನ್ನ ಮನಸ್ಸಿನಲ್ಲಿ ಬಂದಿತು. ಈ ಬಗ್ಗೆ ವಿಚಾರ ವಿನಿಮಯಮಾಡಿ ಯೋಜನೆ ತಯಾರಿಸುವದಕ್ಕಾಗಿ ನಾನು ಸಾಂಗಲಿಯಲ್ಲಿ ಶ್ರೀ ಮಾಧವರಾವ ಅಠವಲೆ ಅವರ ಮನೆಗೆ ಸಾಯಕಲ್ ಮೇಲಿಂದ ಹೊರಟೆನು. ಸ್ವಲ್ಪ ದೂರ ಹೋದನಂತರ ಬೆಳಗಾವಿ ಮತ್ತು ಸಾಂಗಲಿ ಪೋಲೀಸ ಸಬ್ ಇನಸ್ಪೆಕ್ಟರು ನಡೆಯುತ್ತಲೇ ಮುಂದೆ ಹೊರಟುದುದು ಕಂಡುಬಂತು. ಹಿಂದಿನಿಂದ ನೋಡಿದ ಕೂಡಲೆ ನಾನು ಅವರನ್ನು ಗುರುತಿಸಿದೆನು. ಆದರೆ ಅಷ್ಟರಲ್ಲಿ ನನ್ನ ಸಾಯಕಲ್ ಅವರ ಹತ್ತಿರಕ್ಕೆ ಬಂದಿತ್ತು. ಅಂದರೆ ಅವರಿಗೂ ನನಗೂ ೧೨–೧೫ ಅಡಿ ಅಂತರ ಮಾತ್ರ ಉಳಿದಿತ್ತು. ಸಾಯಕಲ್ಲಿನಿಂದ ಇಳಿದು ತಿರುಗಿ ಹೋಗುವಷ್ಟು ಸಮಯವು ಇರಲಿಲ್ಲ; ಸ್ಥಳವೂ ಇರಲಿಲ್ಲ. ಆದ್ದರಿಂದ ನಾನು ಅವರ ಹತ್ತಿರದಿಂದಲೇ ವೇಗದಿಂದ ಸಾಯಕಲ್ ಹೊಡೆದೆನು. ಅವರೂ ನನ್ನನ್ನು ಗುರುತಿಸಿದರು."ಪುಂಡಲೀಕಜೀ' ಸ್ವಲ್ಪ ನಿಲ್ಲಿರಿ. ನಿಮ್ಮ ಹತ್ತಿರ ಮಹತ್ವದ ಕೆಲಸವಿದೆ"ಎಂದು ಅವರು ಕೂಗಿ ಹೇಳುತ್ತಿದ್ದರು. ನಾನು ಅತ್ತಕಡೆಗೆ ಲಕ್ಷ್ಯಕೊಡದೆ ಅಥವಾ ಚನ್ನಾಗಿ ಲಕ್ಷ್ಯಕೊಟ್ಟು ಮುಂದಿನ ವಿಚಾರ ಮಾಡಿ, ನಾನು ನನ್ನ ಸಾಯಕಲ್ಲನ್ನು ಮಿರಜಿಯ ಕಡೆಗೆ ಹೊಡೆದೆನು. ನನಗೆ ಮಿರಜಿಗೆ ಹೋಗುವದಿರಲಿಲ್ಲ. ನಾನು ಮಿರಜಿಯ ಕಡೆಗೆ ಹೋದೆನೆಂದು ಮಾತ್ರ ತೋರಿಸುವದಿತ್ತು. ಅದರಲ್ಲಿ ನಾನು ಯಶಸ್ವಿಯಾದೆನು. ರಾಮಮಂದಿರದ ಮೇಲಿಂದ ಸಾಯಕಲ್ ತಿರುಗಿಸಿ, ನಾನು ಸಾಂಗಲಿಯಲ್ಲಿ ಶ್ರೀ ಮಾಧವರಾವ ಅಠವಲೆ ಅವರ ಮನೆಯಲ್ಲಿ ಹೋಗಿ ಕುಳಿತೆನು. ಈ ಘಟನೆ ನಡೆದ ರಸ್ತೆಯ ಮೇಲೆ ಮಹತ್ವದ ಸ್ಥಳ ಅಥವಾ ಬಂಗಲೆಯೆಂದರೆ ಶ್ರೀ ಅಭ್ಯಂಕರರದೇ ಆಗಿತ್ತು. ಆ ಬಂಗಲೆಯ ಮುಂದೆ ಒಂದು ದೊಡ್ಡ ಮೈದಾನವಿದೆ; ಅದಿನ್ನೂ ಇದ್ದ ಹಾಗೆಯೇ ಇದೆ. "ಪುಂಡಲೀಕಜಿ ಇಲ್ಲಿಯೇ ಇರುತ್ತಿರಬೇಕು. ತಿರುಗಿ ಬರುವ ಕಾಲಕ್ಕೆ ಅವರು ಇಲ್ಲಿ ಪೋಲೀಸ–ಸಾದಾ ಡ್ರೆಸ್ಸಿನ ಅಥವಾ ಯುನಿಫಾರ್ಮ ಡ್ರೆಸ್ಸಿನ ಕಾವಲು ಇಲ್ಲವೆಂಬುದನ್ನು ಮನಗಾಣದೆ ಈ ಬಂಗ್ಲೆಗೆ ಬರುವದಿಲ್ಲ" ಎಂದು ಪೋಲೀಸರು ವಿಚಾರ ಮಾಡಿದರು. ಆದ್ದರಿಂದ ಅಭ್ಯಂಕರರ

ಬಂಗ್ಲೆಯ ಮುಂದಿನ ಮೈದಾನದ ಆಚೆಯ ಬದಿಗೆ ಇಬ್ಬರು ಸಾದಾ ಉಡುಪಿನ ಪೋಲೀಸರನ್ನು ಕೂಡಿಸಿದರು. ಈ ಘಟನೆ ಸಾಯಂಕಾಲ ಐದು ಗಂಟೆಯ ಸುಮಾರಿಗೆ ನಡೆಯಿತು.

ಶ್ರೀ ಅಭ್ಯಂಕರರ ಬಂಗ್ಲೆಯಲ್ಲಿ ನಾಸಿರುತ್ತೇನೆಂಬ ಸಂಶಯ ಪೋಲೀಸರಿಗೂ ಬಂದಿರಲಿಕ್ಕೆ ಸಾಕೆಂದು ನನಗೂ ಅನಿಸಿತು. ಆದರೆ ಪೋಲೀಸರು ಮೊದಲು ಜೀಪ ತೆಗೆದುಕೊಂಡು ಮಿರಜ ರಸ್ತೆಯ ಮೇಲೆ ಸಾಯಕಲ್ ಬೆನ್ನು ಹತ್ತಿ ನನ್ನನ್ನು ಒಡಿ ಯುವ ಪ್ರಯತ್ನ ಮಾಡಬಹುದು. ಆ ಪ್ರಕಾರ ಕೆಲವು ಪೋಲೀಸರನ್ನು ಜೀಪ ಕೊಟ್ಟು ಕಳಿಸಿಯೂ ಬಿಟ್ಟರು. ಆ ಪೋಲೀಸ ಜೀಪಗಾಡಿ ಮಿರಜಿಯ ವರೆಗೆ ಎರಡುಸಾರೆ ಸುತ್ತಿ ಬಂದಿತು. ಮಿರಜದಲ್ಲಿ ನನ್ನ ಶೋಧಕ್ಕಾಗಿ ಕೆಲವು ಮನೆಗಳ ಝಡತಿ ನಡೆಯಿತು. ನನ್ನನ್ನು ಹುಡಕಲಿಕ್ಕೆ ಪ್ರಾರಂಭವಾಯಿತು. ಇತ್ತ ಅಭ್ಯಂಕರರ ಮನೆಯ ಮುಂದೆ ಪೋಲೀಸರ ಕಾವಲು ಅಥವಾ ಪಾಳತಿಯಾದರೂ ಇರಬೇಕೆಂದು ನನಗೆ ಗೊತ್ತೆ ಇಲ್ಲ. ಆದ್ದರಿಂದ ನಾನು ಹೊರಬಿದ್ದು ಸಾಯಕಲ್ ಮೇಲಿಂದ ಅಭ್ಯಂಕರರ ಮನೆಯ ಮುಂದಿನ ಮೈದಾನದ ಎರಡನೇ ಬದಿಗೆ ಬಂದು, ಅಭ್ಯಂಕರರ ಮನೆಯ ಮುಂದೆ ಪೋಲೀಸ ಕಾವಲು ಇದೆಯೋ ಇಲ್ಲವೋ ಎಂಬುದನ್ನು ನೋಡಬೇಕೆಂದು ನಾನೂ ಮೈದಾನದ ಎರಡನೇ ಬದಿಗೆ ಬಂದೆನು. ನಾನು ಅಲ್ಲಿಗೆ ಬಂದಾಗ ಇಬ್ಬರು ಸಾದಾ ಡ್ರೆಸ್ಸಿನ ಪೋಲೀಸರು ಅಭ್ಯಂಕರರ ಬಂಗಲೆಯ ಗೇಟ ಕಡೆಗೆ ನೋಡುತ್ತ ಕುಳಿತಿದ್ದರು. ನಾವು ಒಬ್ಬರನ್ನೊಬ್ಬರು ಈ ಮೊದಲು ಎಂದೂ ನೋಡಿದ್ದಿಲ್ಲ, ಆದ್ದರಿಂದ ಯಾರಿಗೂ ಯಾವ ಸಂಶಯವೂ ಬರಲಿಲ್ಲ, ಅಭ್ಯಂಕರರ ಬಂಗಲೆಯ ಗೇಟ ಮುಂದೆ ಯಾರೂ ಇಲ್ಲವೆಂಬುದನ್ನು ನಿಶ್ಚಯ ಮಾಡಿಕೊಂಡೇ ನಾನು ಸಾಯಕಲ್ ಮೇಲಿಂದ ಬಂಗಲೆ ಯೊಳ ಗೆಹೋದೆನು. ಮೈದಾನದ ಆ ಬದಿಗೆ ಕುಳಿತ ಸಾದಾ ಡ್ರೆಸ್ಸಿನ ಪೋಲೀಸರು ಇದನ್ನು ನೋಡಿದರು. ಇದೀಗ ನಮ್ಮ ಹತ್ತಿರ ಬಂದು ಎಲ್ಲವನ್ನೂ ನೋಡಿ ಹೋದ ಮನುಷ್ಯನು ಈತನೇ ಎಂದು ಅವರು ತಿಳಿದುಕೊಂಡರು. ಪೋಲೀಸ ಕಚೇರಿಯಲ್ಲಿ ಅದರ ವರದಿಯನ್ನು ಕೊಟ್ಟರು, ಸಾಯಂಕಾಲ ಏಳು ಗಂಟೆಯ ಸುಮಾರಿಗೆ ಪೋಲೀ ಸರು ಅಭ್ಯಂಕರರ ಮನೆಗೆ ಮುತ್ತಿಗೆ ಹಾಕಿದರು. ಗೇಟಿನ ಮುಂದೆ ಒಬ್ಬ ಸಶಸ್ತ್ರ ಪೋಲೀಸ ನಿಂತಿದ್ದನು. ಅಭ್ಯಂಕರರ ಕನಿಷ್ಠ ಚಿರಂಜೀವ ಶ್ರೀ ವಸಂತರಾವ ಮನೆಯ ಲ್ಲಿಯೇ ಇದ್ದರು. ಅವರು ಅತ್ಯಂತ ಧೈರ್ಯ ಹಾಗೂ ಚಾಣಾಕ್ಷತನದಿಂದ ನನಗೆ ಪೋಲೀಸರ ಕೈಯಿಂದ ಪಾರಾಗುವದಕ್ಕೆ ಅಮೌಲ್ಯ ಸಹಾಯ ಮಾಡಿದರು. ಅದ್ಭುತ ಯುಕ್ತಿಯನ್ನು ಹೂಡಿದರು.

ಶ್ರೀ ವಸಂತರಾಯರು ಪೋಲೀಸ ಅಧಿಕಾರಿಗಳಿಗೆ ಬಿನ್ನವಿಸಿದರು : "ಪುಂಡ ಲೀಕಜಿ ನಮ್ಮ ನಮ್ಮ ಮನೆಯಲ್ಲಿಲ್ಲ, ಎಂದೂ ಬರುವದೂ ಇಲ್ಲ, ನಮ್ಮ ತಂದೆಯವ ರಿದ್ದಾಗ ಮಾತ್ರ ಬರುತ್ತಿಧ್ದರು. ನಮ್ಮ ಮನೆಗೆ ಮುಂಬೈಯಿಂದ ಬ್ಯಾರಿಸ್ಟರರೊಬ್ಬರು

ಬಂದಿದ್ದಾರೆ, ಈಗ ಅವರು ಸಾಯಕಲ್ ಮೇಲಿಂದ ಹೋಗುವವರಿದ್ದಾರೆ, ಅವರು ಹೋಗುವ ವರೆಗೆ ನಮ್ಮ ಮನೆಯ ಝಡತಿ ಮಾಡದಿದ್ದರೆ ಒಳ್ಳೆಯದು. ಬಂಗಲೆಯ ಸುತ್ತಲೂ ಪೋಲೀಸರ ಕಾವಲು ಇದ್ದೇ ಇದೆ. ಸಾಂಗಲಿಯಲ್ಲಿ ಅಭ್ಯಂಕರರದು ಪ್ರತಿಷ್ಠಿತ ಮನೆತನವಾದ್ದರಿಂದ ಪೋಲೀಸ ಅಧಿಕಾರಿಗಳು ಅವರ ವಿನಂತಿಯನ್ನು ಮನ್ನಿಸಿದರು. ಅಭ್ಯಂಕರರ ನವಕರನೊಬ್ಬ ದೀಪವಿದ್ದ ಒಂದು ಒಳ್ಳೇ ಸಾಯಕಲ್ ಹಿಡಿದುಕೊಂಡು ಗೇಟಿನ ಹತ್ತಿರ ರಸ್ತೆಯ ಮೇಲೆ ಬ್ಯಾರಿಸ್ಟರ ಸಾಹೇಬರ ದಾರಿ ಕಾಯುತ್ತ ನಿಂತಿದ್ದ. ಮನೆಯಲ್ಲಿ ಶಿರಾ, ಪುರಿ, ಪಲ್ಲೆ ಬ್ಯಾರಿಸ್ಟರರ ಸಲುವಾಗಿ ಸಿದ್ಧವಾಗಿತ್ತು. ನನಗೆ ಡ್ರೆಸ್ ಬದಲಾಯಿಸಲು ವಸಂತರಾವ ಅಭ್ಯಂಕರರು ಹೇಳಿದರು. ವೇಷ ಬದಲಾಯಿಸಬಾರದೆಂಬ ನನ್ನ ವಿಚಾರವನ್ನು ನಾನು ಬಿಟ್ಟುಕೊಟ್ಟೆ, ಅಭ್ಯಂಕರರ ಯುರೋಪಿಯನ್ ಡ್ರೆಸ್ ನನ್ನ ಮೈಗೆ ಸರಿಹೋಯಿತು. ಹೊರಗೆ ಇಬ್ಬರು ಪೋಲಿಸ ಅಧಿಕಾರಿಗಳು, ಒಳಗೆ ನಾನು ಮತ್ತು ಅಭ್ಯಂಕರರ ಮನೆಯ ಜನರು ಫಲಹಾರ ತಿನ್ನಲಿಕ್ಕೆ ಕುಳಿತೆವು. ನಾನು ನನ್ನ ಧ್ವನಿ ಬದಲಾಯಿಸಿ ಅಭ್ಯಂಕರರ ಮನೆಯವರೊಂದಿಗೆ ಮಾತಾಡುತ್ತಿದ್ದೆ. ಇದನ್ನೆಲ್ಲ ಪೋಲೀಸ ಅಧಿಕಾರಿಗಳು ನೋಡುತ್ತ, ಕೇಳುತ್ತ ಕುಳಿತಿದ್ದರು. ಗೇಟಿನ ವರೆಗೆ ನನ್ನನ್ನು ಕಳಿಸಲು ಅಭ್ಯಂಕರರ ಮನೆಯವರು ಹೊರಗೆ ಬಂದಿದ್ದರು. ಹೊರಗಿನ ಪೋಲೀಸ ಅಧಿಕಾರಿಗಳೊಂದಿಗೆ ಒಬ್ಬರಿಗೊಬ್ಬರು ನಮಸ್ಕಾರ ಮಾಡುತ್ತ ಬ್ಯಾರಿಸ್ಟರ ಸಾಹೇಬರು ಸಾಯಕಲ್ ಮೇಲಿಂದ ಹೊರಟುಹೋದರು.

ಇದಾದ ನಂತರ ಪೋಲೀಸ ಅಧಿಕಾರಿಗಳು ಅಭ್ಯಂಕರರ ಮನೆ ಝಡತಿ ಮಾಡಿದರು. ಪುಂಡಲೀಕಜಿ ಅವರ ಮನೆಯಲ್ಲಿಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡು ಪೋಲೀಸ ಅಧಿಕಾರಿಗಳು ಹೊರಟುಹೋದರು. ಮುಂದೆ ಶ್ರೀ ವಸಂತರಾವ ಅಭ್ಯಂಕರರು ನನ್ನ ಬಟ್ಟೆ ಮತ್ತು ಎಲ್ಲ ಸಾಮಾನುಗಳನ್ನು ಶ್ರೀ ಮಾಧವರಾವ ಅಠವಲೆಯವರ ಮನೆಗೆ ಕೊಟ್ಟು ಕಳಿಸಿದರು. ಬ್ಯಾರಿಸ್ಟರ ಸಾಹೇಬ (ನಾನು) ಅಠವಲೆಯವರ ಮನೆ ಮುಟ್ಟಿದೆನು. ಶ್ರೀ ಮಾಧವರಾವ ಅಠವಲೆಯವರು ಈ ಹೊಸ ವೇಷದಲ್ಲಿದ್ದ ನನ್ನನ್ನು ಮೊದಲು ಗುರುತಿಸಲಿಲ್ಲ. ನನ್ನ ಡ್ರೆಸ್ ನೋಡಿ ಅವರು ನನ್ನ ಸಂಗಡ ಇಂಗ್ಲೀಷಿನಲ್ಲೇ ಮಾತಾಡಹತ್ತಿದರು. ನಾನು ಅವರಿಗೆ ಏನೂ ಉತ್ತರ ಕೊಡದೆ ಅವರ ಮನೆಯ ಅಟ್ಟದ ಮೇಲೆಯೇ ಹೋದೆ. ಯಾಕೆಂದರೆ ಅವರ ಮನೆಯವರಿಗೆ ನನ್ನ ಪೂರ್ಣ ಪರಿಚಯವಿತ್ತು. ಅವರ ಮನೆಯ ಅಟ್ಟ. ಅಟ್ಟಕ್ಕೆ ಹೋಗುವ ದಾರಿ ನನಗೆ ಗೊತ್ತಿದ್ದವು. ಅವರು ನನಗೆ ಅಟ್ಟದ ಮೇಲೆ ಊಟ ತಂದು ಕೊಟ್ಟರು; ಕೂಡಲೆ ಸಾಂಗಲಿ ಬಿಟ್ಟು ಹೋಗಲು ಹೇಳಿದರು. ನಾನೂ ಅದಕ್ಕೆ ಒಪ್ಪಿದೆ. ನನ್ನ ಸಾಮಾನುಗಳು ಸಾಧ್ಯವಿದ್ದಷ್ಟು ಹಗುರಾಗಿರಬೇಕೆಂದು ಅವರು ತಮ್ಮ ಸಣ್ಣ 'ಸೂಟಕೇಸ' ಕೊಟ್ಟರು. ನನ್ನ ಊಟ ಮುಗಿಯುವದರೊಳಗಾಗಿ ಮನೆಯ ಮುಂದೆ ಒಂದು ಟಾಂಗಾ ತಂದು ನಿಲ್ಲಿಸಿದ್ದರು. ನಾನು ಆ ಟಾಂಗಾದಲ್ಲಿ ಕುಳಿತು ಬುಧಗಾಂವ (ಮಾಧವನಗರ) ಸ್ಟೇಶನಕ್ಕೆ

ಹೊರಟೆ. ನಾನು ಈ ಪ್ರವಾಸ ಮಾಡುವಾಗ ಜೀವವನ್ನು ಕೈಯಲ್ಲಿ ಹಿಡಿದೇ ಹೊರಟಿದ್ದೆ. ಇದೇ ವೇಳೆಗೆ ಟಾಂಗಾದ ಕಂದೀಲಿನ ಮೇಣಬತ್ತಿ ತೀರಿತು. ಹೊಸ ಮೇಣಬತ್ತಿ ತೆಗೆದುಕೊಳ್ಳಲು ಟಾಂಗಾವಾಲಾ ಟಾಂಗಾ ನಿಲ್ಲಿಸಿದ. ಅದೂ ಪೋಲೀಸ ಆಫೀಸ ಎದುರಿಗೆನೇ. ಆದರೆ ಯಾವ ಪೋಲೀಸನ ಲಕ್ಷ್ಯವು ಟಾಂಗಾದ ಕಡೆಗೆ ಹೋಗಲಿಲ್ಲ. ನಾನು ಸುರಕ್ಷಿತವಾಗಿ ಬುಧಗಾಂವ ಸ್ಟೇಶನಕ್ಕೆ ಬಂದು ಮುಟ್ಟಿದೆನು. ಆಗ ನನಗೆ ಜೀವದಲ್ಲಿ ಜೀವ ಬಂದಂತಾಯಿತು. ಸ್ವಲ್ಪ ಸಮಾಧಾನವಾಯಿತು.

ಆ ಕಾಲಕ್ಕೆ ಗಾಡಿಗಳನ್ನು ಕೆಡವುತ್ತಿದ್ದುದರಿಂದ ಪ್ಯಾಸೆಂಜರ ಅಥವಾ ಮೇಲ ಗಾಡಿ ಬರುವ ಪೂರ್ವದಲ್ಲಿ ಒಂದು ಪಾಯಲೆಟ್ ಗಾಡಿ ಬಿಡುತ್ತಿದ್ದರು, ನನ್ನ ಡ್ರೆಸ್ ನೋಡಿ ಬುಧಗಾಂವ ಸ್ಟೇಶನ್ ಮಾಸ್ತರರು ಪ್ಲಾಟಫಾರ್ಮ ಮೇಲೆ ಕುಳಿತುಕೊಳ್ಳಲು ನನಗೊಂದು ಕುರ್ಚಿ ಹಾಕಿಸಿಕೊಟ್ಟರು. ಪುಣೆಗೆ ಒಂದು ಫರ್ಸ್ಟ್‌ಕ್ಲಾಸ ತಿಕೀಟ ತೆಗೆಸಿದೆನು. ಸ್ವಲ್ಪಹೊತ್ತಿಗೆ ಒಂದು ಪಾಯಲೆಟ್ ಗಾಡಿ ಬಂದಿತು. ಅದರಲ್ಲಿಯ ಅಧಿಕಾರಿಯು ನಾನು ಒಬ್ಬನೇ ಪ್ಲಾಟ್‌ಫಾರ್ಮ ಮೇಲೆ ಕುರ್ಚಿಯ ಮೇಲೆ ಕುಳಿತುದನ್ನು ನೋಡಿದನು. ಅವನು ನನ್ನ ಹತ್ತರ ಬಂದು ನನ್ನನ್ನು ವಿಚಾರಿಸಿದನು. ನಾನು ಪುಣೆಗೆ ಹೋಗಬೇಕಾಗಿದೆ ಎಂದು ಹೇಳಿದೆ. ಅವನು ಪುಣೆಗೆ ಹೋಗುವ ಒಬ್ಬ ಸಾಮಾನ್ಯ ಪ್ರವಾಸಿ ಎಂಬುದನ್ನು ಸ್ಟೇಶನ್ ಮಾಸ್ತರರೂ ಆತನಿಗೆ ಹೇಳಿದ್ದರು. ಪಾಯಲೆಟ್ ಗಾಡಿಯ ಅಧಿಕಾರಿಯು ನನ್ನ ತಿಕೀಟು ನೋಡಿದನು. ಆ ನಂತರ ಗಾಡಿ ಮುಂದೆ ಹೊರಟುಹೋಯಿತು. ಸ್ವಲ್ಪ ಹೊತ್ತಿನಲ್ಲಿ ಮೇಲಗಾಡಿ ಬಂದಿತು. ಅದರಲ್ಲಿ ನನಗೆ ಫರ್ಸ್ಟ ಕ್ಲಾಸಿನಲ್ಲಿ ಸ್ಥಳ ದೊರೆಯಿತು. ಆ ಫರ್ಸ್ಟ ಕ್ಲಾಸ ಡಬ್ಬಿಯಲ್ಲಿ ಬೇರಾವ ಪ್ರವಾಸಿಯೂ ಇರಲಿಲ್ಲ. ನನ್ನ ತಿಕೀಟು ಪುಣೆಯವರೆಗಿದ್ದರೂ ನಾನು ಮಧ್ಯದಲ್ಲಿ ರಹಿಮತ್‌ಪೂರ ಸ್ಟೇಶನ್ನದಲ್ಲಿ ಇಳಿದೆನು.ಅಲ್ಲಿಂದ ಒಂದುಟ್ಯಾಕ್ಸಿ ಮಾಡಿಕೊಂಡು ಔಂಧಕ್ಕೆ ಹೋದೆನು. ಔಂಧದಲ್ಲಿ ನಾನು ನೇರವಾಗಿ ರಾಜೇಸಾಹೇಬರ ವಾಡೆಗೇ ಹೋದೆನು. ಆಗ ಬೆಳಗಿನ ನಾಲ್ಕು ಗಂಟೆಯ ಸಮಯವಾಗಿರಬಹುದು. ವಾಡೆಯ ಕಾವಲುಗಾರನು ನನ್ನನ್ನು ತಡೆದನು. ನನಗೆ ಅಪ್ಪಾಸಾಹೇಬ ಪಂತ ಅವರನ್ನು ಭೆಟ್ಟಿಯಾಗಬೇಕಾಗಿದೆ. ಎಂದು ನಾನು ಆತನಿಗೆ ಹೇಳಿದೆ. ಆ ಪೋಲಿಸನು ನನಗೆ ಅತ್ಯಂತ ನಮ್ರತೆಯಿಂದ ಕೇಳಿದ: "ಮಹಾರಾಜ, ಇದೇನು ಭೆಟ್ಟಿಯಾಗುವ ಹೊತ್ತೇ ?" ಶ್ರೀಮಂತ ಅಪ್ಪಾಸಾಹೇಬ ಪಂತರು ಕೆಳಗಿನ ಕೋಣೆಯಲ್ಲಿಯೇ ಇರುತ್ತಾರೆಂದು ನನಗೆ ಗೊತ್ತಿತ್ತು. ನಾನು ಕಾವಲುಗಾರನಿಗೆ ಸ್ವಲ್ಪ ಎತ್ತರದ ಧ್ವನಿಯಲ್ಲಿ ಮಾತಾಡಿದೆ. "ಯಾರೋ ಒಬ್ಬ ಗ್ರಹಸ್ಥರು ಬಂದಿದ್ದಾರೆ ಎಂಬದನ್ನಾದರೂ ತಿಳಿಸಬಹುದಲ್ಲ ?" ನನ್ನ ಧ್ವನಿ ಕೇಳಿ ಶ್ರೀಮಂತ ಅಪ್ಪಾಸಾಹೇಬ ಪಂತರು ಎಚ್ಚರಾಗಬೇಕೆಂದು ನನ್ನ ಇಚ್ಛೆ ಇತ್ತು. ಆ ರೀತಿ ಆಗಿಯೂ ಆಯಿತು. ಅಪ್ಪಾಸಾಹೇಬರು ಎಚ್ಚರಾಗಿ ಹೊರಗೆ ಬಂದರು. ಅವರು ನನ್ನ ಧ್ವನಿ ಗುರುತಿಸಿದರು. ಯುರೋಪಿಯನ್ ವೇಷದಲ್ಲಿಯೂ ನನ್ನನ್ನು ಗುರುತಿಸಲಿಕ್ಕೆ ಅವರಿಗೆ ವೇಳೆ ಹಿಡಿಯಲಿಲ್ಲ. ಅವರು ನನ್ನನ್ನು

ಒಳಗೆ ಕರೆದುಕೊಂಡು ಹೋಗಿ ಅಂದರು ; "ಪುಂಡಲೀಕಜಿ, ಇದೇನು ಮಾಡಿದಿರಿ ? ನಮ್ಮ ಮನೆಯಲ್ಲಿಯ ಅಡಿಗೆಯವನೂ ಸಹ ಗುಪ್ತ ಪೋಲೀಸರ ಕೆಲಸ ಮಾಡುವ ಸಂಭವವಿಲ್ಲವೆಂದು ತಿಳಿಯಬೇಡಿರಿ. ನೀವು ಇಲ್ಲಿ ಒಂದು ಕ್ಷಣವೂ ಕೂಡ ನಿಲ್ಲಬೇಡಿರಿ ನೀವು ಪಂಡಿತ ಸಾವಳೇಕರರ ಮನೆಗೆ ಹೋಗಿರಿ. ನಾನು ಅಲ್ಲಿ ಯಾವಾಗಾದರೂ ಬಂದು ನಿಮ್ಮನ್ನು ಭೆಟ್ಟಿಯಾಗುವೆ." ನನ್ನ ಜೊತೆಗೆ ಒಬ್ಬ ಮನುಷ್ಯನನ್ನು ಕೊಟ್ಟು ನನ್ನನ್ನು ಪಂ. ಸಾತವಳೇಕರರ ಮನೆಗೆ ಕಳಿಸಿದರು. ಆಗ ಅವರ ಮನೆಯಲ್ಲಿ ಎಲ್ಲರೂ ಇನ್ನೂ ಮಲಗಿದ್ದರು. ಪಂ. ಸಾತವಳೇಕರರೊಬ್ಬರೇ ಅದೇ ಎದ್ದು ಪ್ರಾತರ್ವಿಧಿ ತೀರಿಸಿ, ಓದುತ್ತ ಕುಳಿತಿದ್ದರು. ಅವರು ಸ್ವತಃ ಬಾಗಿಲು ತೆರೆದು ನನ್ನನ್ನು ಒಳಗೆ ಕರೆದುಕೊಂಡು ಹೋದರು. ನನ್ನ ಸಂಗಡ ಬಂದ ಅಪ್ಪಾ ಅವರ ಮನುಷ್ಯ ತಿರುಗಿ ಹೋದನು. ಪಂ. ಸಾತವಳೇಕರರು ನನ್ನ ಗುರುತು ಹಿಡಿದು, ವಿನೋದದಿಂದ ಅಂದರು: "ಪುಂಡಲೀಕಜಿ, ನಿಮಗೆ 'ಸಾಹೇಬ' ಅಂದು ಯಾರು ಅನ್ನುವರು ? ತಲೆಯಮೇಲಿ ಕೂದಲೇ ಇಲ್ಲ. ಕಾರಣ ಬೈತಲು ತೆಗೆಯುವ ಪ್ರಶ್ನೆಯೇ ಉದ್ಭವಿಸುವದಿಲ್ಲ. ಫೆಲ್ಟ ಹ್ಯಾಟ ತಿರುವಿ ಮುರುವಿ ಹಾಕಿದ್ದೀರಿ. ಅದರಿಂದ ನಿಮ್ಮ ಚಂಡಿಕೆಯ ತುದಿ ಹೊರ ಬಂದಿದೆ. ಕೋಟ ಮತ್ತು ಪ್ಯಾಂಟಿನ ಬಣ್ಣ ಸರಿಹೊಂದುವದಿಲ್ಲ. ಇಷ್ಟೇ ಅಲ್ಲದೆ ವಿಸಂಗತವಾಗಿದೆ. ಕಾಲಲ್ಲಿ ಚಪ್ಪಲಿ ಹಾಕಿದ್ದೀರಿ. ಅವೂ ಸಹ ಹರಿದಿವೆ. ಇದು ಸಾಹೇಬರ ಅಣಕ ಎಂದು ತಿಳಿಯುವದಕ್ಕೆ ಹೆಚ್ಚು ಪ್ರಮಾಣ ಬೇಕಿಲ್ಲ." ಅವರ ಮಗನ ಬೂಟ ಅಲ್ಲಿಯೇ ಬಿದ್ದಿದ್ದವು. ನನ್ನ ಕಾಲಿಗೆ ಬರುವ ಬೂಟುಗಳನ್ನು ಅವರು ನನಗೆ ಕೊಟ್ಟರು. ಪ್ಯಾಂಟಿಗೆ ಕಟ್ಟುವ ಪಟ್ಟಿಯನ್ನು ಕೊಟ್ಟರು. ಫೆಲ್ಟಹ್ಯಾಟದ ಗಂಟು ಯಾವ ಬದಿಗಿರುತ್ತದೆಂಬುದನ್ನು ಅವರು ನನಗೆ ತೋರಿಸಿದರು. ನಾಲ್ಕು ದಿವಸ ಅವರು ನನ್ನನ್ನು ತಮ್ಮ ಮನೆಯಲ್ಲಿಟ್ಟುಕೊಂಡರು.

"ಮರಾಠಿ ಗುಪ್ತ ಪತ್ರಿಕೆಯ ಕನ್ನಡ ಅನುವಾದ ಮಾಡಿ ಮುದ್ರಿಸಿ ಕೊಡಲು ಕನ್ನಡ ಅನುವಾದಕರೂ ಮತ್ತು ಕನ್ನಡ ಪ್ರೆಸ್ ಈ ಊರಲ್ಲಿಲ್ಲ. ಆದ್ದರಿಂದ ಆ ಕೆಲಸ ಇಲ್ಲಿ ಆಗುವದಿಲ್ಲ. ಒಂದು ವೇಳೆ ಪುಣೆಯಲ್ಲಿ ಈ ಕೆಲಸವಾಗಬಹುದು." ಎಂದು ಸಾತವಳೇಕರರು ನನಗೆ ಹೇಳಿದರು. ಔಂಧದಲ್ಲಿ ೭-೮ ದಿವಸ ಇದ್ದು ನಾನು ತಿರುಗಿ ಹೋಗಬೇಕೆಂದು ನಿಶ್ಚಯಿಸಿದೆ. ರೇಲ್ವೆಯಿಂದ ಬುಧಗಾವ (ಮಾಧವನಗರ) ವರೆಗೆ ಹೋಗಬೇಕು. ಬುಧಗಾಂವ ಸ್ಟೇಶನ್ನಮೇಲೆ ಶ್ರೀ ಲಕ್ಷ್ಮಣ ಗಾಡಗೀಳ ಅವರು ಮೋಟರ ತೆಗೆದುಕೊಂಡು ಬಂದು ನನ್ನನ್ನು ಶಹಪೂರಕ್ಕೆ ಮುಟ್ಟಿಸಬೇಕು. ನಾನು ಅಲ್ಲಿಂದ ನಡೆಯುತ್ತ ಹುದಲಿಗೆ ಬಂದು ಸುಲಧಾಳ ಸ್ಟೇಶನ್ನದಿಂದ ಸ್ವಲ್ಪ ದೂರದಲ್ಲಿ ಬೂದಿಹಾಳ ಊರ ಎದುರಿಗಿರುವ ರೇಲ್ವೆ ಸೇತುವೆ ಕೆಡಹುವ ಕಾರ್ಯಕ್ರಮ ನೆರವೇರಿಸಬೇಕು ಆನಂತರ ನಾನು ಪ್ರಕಟವಾಗಿ ಸೆರೆಮನೆಯ ಹಾದಿ ಹಿಡಿಯಬೇಕೆಂದು ಯೋಚಿಸಿದ್ದೆ. ಔಂದದಿಂದ ಮನುಷ್ಯರನ್ನು ಕಳುಹಿಸಿ ಸಂಬಂಧಿತ ಕಾರ್ಯಕರ್ತರಿಗೆ ನಾನು ಈ

ರೀತಿ ತಿಳಿಸಿಯೂ ಇಟ್ಟಿದ್ದೆ. ಸರಿಯಾದ ಸಮಯಕ್ಕೆ ನಿದ್ರೆ ಹತ್ತಬಾರದೆಂದು ಎಲ್ಲ ಎಚ್ಚರಿಕೆಯನ್ನು ನಾನು ತೆಗೆದುಕೊಂಡಿದ್ದೆ. ಆದರೆ ದುರ್ದೈವದಿಂದ ಬುಧಗಾಂವ ಸ್ಟೇಶನ್ನಿನ ಮೇಲೆ ಕೂತ ಕೂತಲ್ಲಿಯೇ ನನಗೆ ಸ್ವಲ್ಪ ಜಂಪು ಹತ್ತಿತು. ಮೋಟರದಲ್ಲಿ ಸಾಕಷ್ಟು ಪೆಟ್ರೋಲ ಹಾಕಿಕೊಂಡು ಶ್ರೀ ಲಕ್ಷ್ಮಣರಾವ ಗಾಡಗೀಳ ಅವರು ಬುಧಗಾವ ಸ್ಟೇಶನ್ನಮೇಲೆ ಮೋಟಾರ ತೆಗೆದುಕೊಂಡು ಬಂದಿದ್ದರು. ಆದರೆ ಬುಧಗಾಂವ ಸ್ಟೆಶನ್ನ ಮೇಲೆ ಒಬ್ಬರೂ ಇಳಿಯಲಿಲ್ಲ, ನನ್ನ ಹೆಸರು ತೆಗೆದುಕೊಂಡು ಕರೆಯುವದು ಅವರಿಗೆ ಸುಲಭ ಹಾಗೂ ಶಕ್ಯವಿರಲಿಲ್ಲ ಗಾಡಿ ಮುಂದೆ ಸಾಗಿತು.

ಪೋಲೀಸರ ಕೈಯೊಳಗಿಂದ ಪಾರಾಗುವ ಪರಾಕಾಷ್ಠೆ

ಮಿರಜ ಸ್ಟೇಶನದ ಮೇಲೆ ಬೆಳಿಗ್ಗೆ ಮೂರು ಗಾಡಿಗಳಿರುತ್ತವೆ. ೧) ಬೆಳಗಾವಿಗೆ ಹೋಗುವ ಗಾಡಿ ೨) ಕೊಲ್ಹಾಪುರದ ಕಡೆಗೆ ಹೋಗುವ ಗಾಡಿ ೩) ಸಾಂಗಲಿ ಕಡೆಗೆ ಹೋಗುವ ಗಾಡಿಗಳು ನಿಂತಿದ್ದವು. ಈ ಪ್ರಕಾರದ ಮೂರು ಗಾಡಿಗಳ ನಡುವೆ ಈಗಿನಂತೆ ಕಬ್ಬಿಣದ ಕಟಾಂಜನ ಆಗ ಇರಲಿಲ್ಲ. ಬೆಳಗಾಂವ ಕಡೆಗೆ ಹೋಗುವ ಗಾಡಿಯಲ್ಲಿ ನಾನು ತೂಕಡಿಸುತ್ತ ಕುಳಿತದ್ದನ್ನು ಕೊಲ್ಹಾಪುರದ ಪೋಲೀಸರು ನೋಡಿ ನನ್ನನ್ನು ಗುರುತಿಸಿ ಎಚ್ಚರಿಸಿದರು. ನಾನೂ ಕೊಲ್ಹಾಪುರದ ಪೋಲೀಸರನ್ನು ಗುರುತಿಸಿ ನನಗೂ ಕೊಲ್ಹಾಪುರಕ್ಕೆ ಹೋಗುವದಿದೆ ಎಂದು ಅವರಿಗೆ ಹೇಳಿದೆ. ನಾನು ಆ ಗಾಡಿಯಿಂದಿಳಿದು ಕೊಲ್ಹಾಪುರಕ್ಕೆ ಹೋಗುವ ಗಾಡಿಯಲ್ಲಿ ಹೋಗಿ ಕುಳಿತೆ. ನನ್ನ ಮೇಲೆ ಪೋಲೀಸರ ಕಣ್ಣು ಇದೆ ಎಂಬುದು ನನಗೆ ಗೊತ್ತಾಗಬಾರದೆಂದು ಕೊಲ್ಹಾಪುರದ ಪೋಲೀಸರು ನಾನು ಕುಳಿತ ಡಬ್ಬಿಯ ಪಕ್ಕದ ಡಬ್ಬಿಯಲ್ಲಿ ಕುಳಿತರು. ಸಾಂಗಲಿಗೆ ಹೋಗುವ ಗಾಡಿ ಮೊದಲು ಬಿಟ್ಟಿತು. ನಾನು ಕೊಲ್ಹಾಪುರದ ಗಾಡಿಯಿಂದಿಳಿದು, ಸಾಂಗಲಿಗೆ ಹೋಗುವ, ಓಡುತ್ತಿರುವ ಗಾಡಿಯಲ್ಲಿ ಹತ್ತಿದೆ. ಗಾರ್ಡನ ಹತ್ತರಿರುವ ಕೊನೆಯ ಡಬ್ಬಿಯೇ ನನಗೆ ಸಿಕ್ಕಿತು. ಕೊಲ್ಹಾಪುರದ ಗಾಡಿಯಲ್ಲಿದ್ದ ಪೋಲೀಸರು ನಾನು ಸಾಂಗಲಿ ಗಾಡಿಯಲ್ಲಿ ಹತ್ತಿದ್ದನ್ನು ನೋಡಿದರು. ಮತ್ತು “ಗಾರ್ಡ, ಗಾರ್ಡ” ಎಂದು ಕೂಗಹತ್ತಿದರು. ಕೊಲ್ಹಾಪುರಕ್ಕೆ ಹೋಗುವ ಗಾಡಿಯ ಗಾರ್ಡನನ್ನು ಯಾರೋ ಕೂಗುತ್ತಿದ್ದಾರೆಂದು ಸಾಂಗಲಿ ಗಾಡಿಯ ಗಾರ್ಡನಿಗನಿಸಿತು. ಗಾಡಿ ಮುಂದೆ ಸಾಗಿತು. ನಾನು ಯಶಸ್ವಿ ರೀತಿಯಿಂದ ಪಾರಾದೆನೆಂದು ನನಗನಿಸಿತು. ವಾನಲೆಸ್‌ವಾಡಿ ಸ್ಟೇಶನ್ನ ಮೇಲೆ ಗಾಡಿಯಿಂದಿಳಿದು ಓಡಿಹೋಗಬೇಕೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದೆ. ಆದರೆ ವಾನಲೆಸ್ ವಾಡಿ ಮತ್ತು ಸಾಂಗಲಿ ಎರಡೂ ಸ್ಟೇಶನ್ನಗಳಿಗೆ ಮಿರಜಿಯಿಂದ ತಂತಿ ಮಾಡಲಾಗಿತ್ತು. ಆದ್ದರಿಂದ ವಾನಲೆಸ್ ವಾಡಿ ಸ್ಟೇಶನ್ ಮೇಲೆ ನನಗೆ ಇಳಿಯಲಿಕ್ಕೆ ಆಗಲಿಲ್ಲ. ಅಂದರೆ ಪೋಲೀಸರು ಇಳಿಯಗೊಡಲಿಲ್ಲ. ಸಾಂಗಲಿ ಸ್ಟೇಶನ್ನ ಮೇಲೆ ಎರಡನೇ ಬದಿಗೆ ಇಳಿದು ಅಭ್ಯಂಕರರ ಬಂಗಲೆಗೆ ಹೋಗಬೇಕೆಂಬ ವಿಚಾರ ನಾನು

ಮಾಡಿದ್ದೆ. ಆದರೆ ಗಾಡಿಯ ಎರಡನೇ ಬದಿಗೇ ಪೋಲೀಸ ಮುಂತಾದವರು ನಿಂತಿದ್ದರು. "ಹೊರಗೆ ಹೋಗುವ ಹಾದಿ ಆ ಕಡೆಗಿದೆ" ಎಂದು ಅವರು ನನಗೆ ಹೇಳಿದರು. ಅವರೊಂದಿಗೆ ವಾದಹಾಕುತ್ತ ಕೂಡದೆ ನಾನು ಸುಮ್ಮನೆ ಎರಡನೇ ಬದಿಗೆ ಇಳಿದೆ. ಒಂದು ಟಾಂಗಾ ಗೊತ್ತುಮಾಡಿದೆ. ಗಜಾನನ ಮಿಲ್ಲಿಗೆ ಹೋಗುವದಿದೆ ಎಂದು ಹೇಳಿ ಆತ ಕೇಳಿದ್ದನ್ನು ಕೊಡುತ್ತೇನೆಂದು ಒಪ್ಪಿಕೊಂಡೆ. ಅದೇ ಟಾಂಗಾದಲ್ಲಿ ಮುಂದಿನ ಬದಿಗೆ ಒಬ್ಬ ಸಾದಾ ಡ್ರೆಸ್ಸಿನ ಪೋಲಿಸ ಬಂದು ಕುಳಿತ. ನಾನು ಟಾಂಗಾದಲ್ಲಿ ಬಂದು ಕೂಡುವಾಗ ನನ್ನ ಹ್ಯಾಟ ಟಾಂಗಾದ ಮೇಲ್ಬದಿಗೆ ಬಡಿದು ಕೆಳಗೆ ಬಿದ್ದಿತು. ಟಾಂಗಾದಲ್ಲಿ ಮುಂದಿನ ಬದಿಗೆ ಸಾದಾ ಡ್ರೆಸ್ಸಿನಲ್ಲಿ ಕುಳಿತ ಪೋಲಿಸ ನನಗೆ ಅಂದ. "ಪುಂಡಲೀಕಜಿ, ನಾನು ನಿಮ್ಮ ವಿದ್ಯಾರ್ಥಿ ಆಗಿದ್ದೆ. ನಾನು ನಿಮ್ಮನ್ನು ಗುರುತಿಸಿದ್ದೇನೆ. ನಿಮ್ಮನ್ನು ಪೋಲೀಸ ಕಚೇರಿಗೆ ಕರೆದುಕೊಂಡು ಹೋಗುತ್ತಿದ್ದೇನೆ." ಆದರೂ ಪಾರಾಗುವ ವಿಷಯದಲ್ಲಿ ನಾನಿನ್ನೂ ನಿರಾಶನಾಗಿದ್ದಿಲ್ಲ. ಪೋಲೀಸ ಆಫೀಸರರು ಆ ದಿವಸ ಪೋಲೀಸ ಠಾಣೆಯಲ್ಲಿಯೇ ಮಲಗಿದ್ದರು. ನಾನು ಅವರಿಗೆ ಹೇಳಿದೆ: "ಸ್ವಲ್ಪ ವಿಚಾರ ಮಾಡಿರಿ. ನಮ್ಮ ಈ ಯುದ್ಧ ಭಾರತದ ಸ್ವಾತಂತ್ರ್ಯಕ್ಕಾಗಿ ಇಂಗ್ಲೀಷರ ವಿರುದ್ಧವಿದೆ. ಸಾಂಗಲಿ ಸಂಸ್ಥಾನದಲ್ಲಿ ನನಗೇನೂ ಮಾಡುವದಿರುವದಿಲ್ಲ. ಇದು ನಿಮಗೂ ಗೊತ್ತು. ಆದ್ದರಿಂದ ನೀವು ನನ್ನನ್ನು ಬಿಡಬೇಕು; ಬಂಧಿಸಬಾರದು. ನಾನು ಹತ್ತು ನಿಮಿಷಗಳೊಳಗೇ ಸಾಂಗಲೀ ಸಂಸ್ಥಾನದ ಸೀಮೆ ಬಿಟ್ಟು ಹೋಗುತ್ತೇನೆ. ಈ ಕಾರ್ಯದಲ್ಲಿ ನೀವೂ ಸಹ ನಮ್ಮಂಥವರಿಗೆ ಸಹಾಯ ಮಾಡಬೇಕು. "ಸ್ವತಂತ್ರ ಭಾರತ" ನಿಮ್ಮ ಈ ಸೇವೆ ಹಾಗೂ ದೇಶಪ್ರೇಮಗಳನ್ನು ಲಕ್ಷಿಸದೆ ಇರಲಿಕ್ಕಿಲ್ಲ. ಇತರ ಸಂಸ್ಥಾನಗಳಲ್ಲಿಯ ಅಧಿಕಾರಿಗಳು ಮತ್ತು ಪೋಲೀಸರು ಈ ಕಾಲದಲ್ಲಿ ಇದೇ ರೀತಿ ಸಹಾನುಭೂತಿಯಿಂದ ವರ್ತಿಸುತ್ತಾರೆ. ನೀವು ಇದಕ್ಕೆ ಅಪವಾದವಾಗಬಾರದು." ಎಂದು ಈ ರೀತಿ ನಾನು ಆ ಪೋಲೀಸ ಅಧಿಕಾರಿಗಳಿಗೆ ತಿಳಿಸಿ ಹೇಳಿದೆ.

ಆದರೂ "ನೀವು ಹೇಳುವದೆಲ್ಲವೂ ನಿಜ. ಭಾರತಕ್ಕೆ ಸ್ವಾತಂತ್ರ್ಯ ಸಿಗಲೇ ಬೇಕೆಂದು ನಮಗೂ ಅನಿಸುತ್ತದೆ" ಎಂದೆನ್ನುತ್ತ ಅವರು ತಮ್ಮ ಸಮವಸ್ತ್ರ ಹಾಕಿಕೊಂಡರು. ಪಿಸ್ತೂಲಿನಲ್ಲಿ ಕಾಡತೂಸ ತುಂಬಿದರು. ಆ ಪಿಸ್ತೂಲನ್ನು ನನ್ನ ಎದೆಗಿಟ್ಟು ಆ ಪೋಲೀಸ ಅಧಿಕಾರಿ ನನಗೆಂದನು! "ನಿಮ್ಮ ಕಿಸೆಯಲ್ಲಿ ಏನಿದೆಯೆಂಬದು ನನಗೆ ಗೊತ್ತು. ಎಚ್ಚರಿಕೆ! ನಿಮ್ಮ ಕಿಸೆಯೊಳಗಿನ ಕೈ ಹೊರಗೆ ತೆಗೆದರೆ ನಾನು ನಿಮಗೆ ಇಲ್ಲಿಂದಿಲ್ಲೇ "ಶೂಟ" (ಗುಂಡು ಹಾಕು) ಮಾಡುತ್ತೇನೆ. ಇದನ್ನು ಲಕ್ಷದಲ್ಲಿಡಿರಿ." ನಿಜವಾಗಿಯೂ ನನ್ನ ಹತ್ತರ ಏನೂ ಇರಲಿಲ್ಲ. ನಾನು ಟಾಂಗಾದಲ್ಲಿ ಬರುವಾಗ ಕನ್ನಡದಲ್ಲಿ ಭಾಷಾಂತರಿಸಿ ಮುದ್ರಿಸುವದಕ್ಕಾಗಿ ಔಂಧಕ್ಕೆ ತೆಗೆದುಕೊಂಡು ಹೋಗಿದ್ದ ಎಲ್ಲ ಬುಲಿಟಿನ್‌ಗಳನ್ನು ನಾನು ಹರಿದು ಹಾಕಿದೆ. ಔಂಧದಲ್ಲಿ ಕುಳಿತು ನಾನು ಸಿದ್ಧಗೊಳಿಸಿದ ಮುಂದಿನ ಕಾರ್ಯದ ಯೋಜನೆಯ ಕಾಗದ ಪತ್ರಗಳನ್ನು ಹರಿದು ರಸ್ತೆಯಲ್ಲಿ ಬೀಸಾಡಿ

ದ್ದೆನು. ಅದ್ದರಿಂದ ಈಗ ನನ್ನ ಕಡೆಗೆ ಹತ್ತು ರೂಪಾಯಿಗಳ ನೋಟಗಳು ಇಪ್ಪತ್ತು ಇದ್ದವು. ಪೋಲೀಸ ಅಧಿಕಾರಿ ಹಿಂದೆ ಸರಿಯುತ್ತ ಸರಿಯುತ್ತ ಬಾಗಿಲ ಹೊರಗೆ ಹೋಗಿ ಇಬ್ಬರು ಸಿಪಾಯಿಗಳಿಗೆ ನನ್ನ ಝಡತಿ ಮಾಡಲು ಹೇಳಿದರು. ಒಂದು ಕೊಲ್ಹಾಪುರಿ ಡ್ರೆಸ್, ನಾನು ನಿತ್ಯ ಉಪಯೋಗಿಸುವ ಡ್ರೆಸ್, ಆಗ ಮೈಮೇಲಿದ್ದ ಯುರೋಪಿಯನ್ ಡ್ರೆಸ್ ಮತ್ತು ಹಜಾಮತಿಯ ಸಾಮಾನು ಇಷ್ಟೇ ಸಾಮಾನು ನನ್ನ ಹತ್ತಿರ ಇದ್ದವು. ಬಹಿರ್ದಿಶೆಗೆ ಹೋಗುವ ನೆವದಿಂದ ನಾನು ಯುರೋಪಿಯನ್ ಡ್ರೆಸ್ ಕಳೆದು ನಿತ್ಯದ ಡ್ರೆಸ್ಸನ್ನು ಹಾಕಿಕೊಂಡೆ. ಇಬ್ಬರು ಸಶಕ್ತ ಪೋಲೀಸರು ನನ್ನ ಕೋಣೆಯಲ್ಲಿ ಬಂದು ಮೊದಲು ನನ್ನನ್ನು ಗಟ್ಟಿಯಾಗಿ ಒತ್ತಿ ಹಿಡಿದರು, ನನ್ನ ಕಿಶೆಯಲ್ಲಿ ಏನೂ ಇಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡರು. ಆ ನಂತರ ನನ್ನ ಪೂರ್ಣ ಶೋಧ ನಡೆಸಿದರು.

ನಮ್ಮ ಹುದಲಿ ಆಶ್ರಮದ ಒಬ್ಬ ಕಾರ್ಯಕರ್ತರಾದ ಶ್ರೀ ದಾದಾಸಾಹೇಬ ಕಾಳೆ, ಬಿ.ಎ. ಅವರ ತಂದೆ ಶೀರ ನಸುಕಿನಲ್ಲಿ ದೇವರ ಪೂಜೆಗೆ ಹೂಗಳನ್ನು ತೆಗೆದುಕೊಂಡು ಹೋಗುವದಕ್ಕೆ ಪೋಲೀಸ ಠಾಣೆಯ ಆವಾರದೊಳಗಿನ ತೋಟಕ್ಕೆ ಬಂದಿದ್ದರು. ನನ್ನ ಹತ್ತಿರ ಇದ್ದ ಯುರೋಪಿಯನ್ ಡ್ರೆಸ್ಸನ್ನು ಅವರ ಕಡೆಗೆ ಕೊಟ್ಟು, ಅಭ್ಯಂಕರರ ಮನೆಗೆ ಕಳಿಸಿದೆ. ಅಭ್ಯಂಕರರ ಹೆಸರು ಎಲ್ಲಿಯೂ ಸಿಗಬಾರದೆಂದು ನಾನು ಮೊದಲಿನಿಂದಲೂ ದಕ್ಷತೆಯನ್ನು ವಹಿಸುತ್ತ ಬಂದಿದ್ದೆನು.

ಟಾಂಗಾದಿಂದ ನನ್ನನ್ನು ಸಾಂಗಲಿ ಸೆರೆಮನೆಗೆ ಕಳಿಸಲಾಯಿತು. ಆ ಟಾಂಗಾದ ಹಿಂದೆ ಮೂರು ಜನ ಸಾಯಕಲ್ ಸವಾರ ಪೋಲೀಸರಿದ್ದರು. ಸೆರೆಮನೆಯಲ್ಲಿ ಶಿರಚ್ಛೇದ ಮಾಡುತ್ತಿದ್ದ ಕೋಣೆಯನ್ನು ಸ್ವಚ್ಛಮಾಡಿ, ಅಲ್ಲಿ ನನ್ನನ್ನಿಟ್ಟರು. ಸಾಂಗಲಿ ಸೆರೆಮನೆಯಲ್ಲಿ ನಾನು ಆರು ದಿವಸ ಇದ್ದೆ. ಸೆರೆಮನೆಯ ಸುಪರಿಂಟೆಂಡೆಂಟರು ತಮ್ಮ ಬೆಳಗಿನ ಫೇರಿ (ತಿರುಗಾಟ) ಯ ಕಾಲಕ್ಕೆ ದಿನಾಲು ನನ್ನ ಕೋಣೆಯ ಕಡೆಗೆ ಬಂದು ಹೋಗುತ್ತಿದ್ದರು. ಆ ಕಾಲದ ಒಂದು ಮೋಜಿನ ಘಟನೆಯ ಉಲ್ಲೇಖ ಇಲ್ಲಿ ಮಾಡದೆ ಇರಲಾರೆ. ಅದು ಈ ರೀತಿ ಇದೆ :—

ಸಾಂಗಲಿ ಸೆರೆಮನೆಯಲ್ಲಿ ನನ್ನನ್ನಿಟ್ಟಿದ್ದ ಕೋಣೆಯ ಎದುರಿಗೆ ಒಂದು ಬಾವಿ ಇತ್ತು. ಕಠಿಣ ಶಿಕ್ಷೆಯಾದ ಅಪರಾಧಿ ಕೈದಿಗಳಿಗೆ ದಿನಾಲು ಮುಂಜಾನೆ ಎರಡು ತಾಸು ಆ ಬಾವಿಯಿಂದ ಮೊಟ್ಟೆ (ಕಪಲಿ) ಜಗ್ಗಲು ಹಚ್ಚುತ್ತಿದ್ದರು. ಅವರಲ್ಲಿ ಸ್ವಲ್ಪ ಲಕ್ಷ ಹಾಕಿ ಅವರನ್ನು ಆ ಮೊಟ್ಟೆ ಹೊಡೆಯುವ ಕೆಲಸದಿಂದ ಮುಕ್ತ ಮಾಡಬೇಕೆಂದು ನನ್ನ ಮನಸ್ಸಿನಲ್ಲಿ ಬಂದಿತು, ಆ ಸೆರೆಯಾಳುಗಳ ವಿಷಯಕ್ಕಿದ್ದ ನನ್ನ ಸದ್ಭಾವನೆ ಮತ್ತು ಪ್ರೇಮಗಳನ್ನು ಅವರಿಗೆ ತಿಳಿಸದ ಹೊರತು ನನಗೆ ಸಮಾಧಾನವಿರಲಿಲ್ಲ. ಜೇಲ ಸುಪರಿಂಟೆಂಡೆಂಟರು ತಮ್ಮ ಬೆಳಗಿನ ಸುತ್ತಿನ ಕಾಲಕ್ಕೆ ನನ್ನ ಕೋಣೆಗೆ ಬಂದಾಗ ನಾನು ಅವರ

ಮಾತಾಡುತ್ತ ಮಾತಾಡುತ್ತ ಆ ಬಾವಿಯ ಹತ್ತಿರ ಹೋದೆನು. ಆ ಸೆರೆಯಾಳುಗಳ ಪ್ರತ್ಯಕ್ಷದಲ್ಲಿಯೇ ನಾನು ಜೇಲ ಸುಪರಿಂಟೆಂಡೆಂಟರಿಗೆ ಹೇಳಿದೆ :—

"ಒಂದು ಮಹತ್ವದ ಮಾತಿನ ಕಡೆಗೆ ನಿಮ್ಮ ಗಮನ ಸೆಳೆಯಬೇಕೆಂದಿದ್ದೇನೆ. ಅಪರಾಧ ಮಾಡಿದ ಕೈದಿಗಳೆಂದರೆ ದನಗಳೇನಲ್ಲ. ಅವರನ್ನು ಪಶುವಿನಂತೆ ನಡೆಸಿ ಕೊಳ್ಳುವದು ಮಹಾ ಅಪರಾಧ. ಮೊಟ್ಟೆ ಜಗ್ಗುವಂಥ ಕೆಲಸಕ್ಕೆ ಎತ್ತುಗಳಂತೆ ಈ ಮನುಷ್ಯರನ್ನು ಹಚ್ಚುವದು ಸರಿಯಲ್ಲ. ಬೇಕಾದರೆ ಅವರಿಗೆ ನೇಯ್ಗೆಯ ಕೆಲಸ ಕಲಿಸಿರಿ. ಎಂಟು ತಾಸು ಕೆಲಸ ಅವರಿಂದ ತೆಗೆದುಕೊಳ್ಳಿರಿ. ಆದರೆ ದನಗಳಂತೆ ಅವರನ್ನು ಮೊಟ್ಟೆ ಎಳೆಯಲಿಕ್ಕೆ ಹಚ್ಚುವದು ಕೂಡಲೆ ನಿಲ್ಲಬೇಕು."

ಇದಕ್ಕೆ ಸುಪರಿಂಟೆಂಡೆಂಟರು ನನಗೆ ಹೇಳಿದರು. "ನೀವು ಹೇಳುವದೆಲ್ಲ ಅತ್ಯಂತ ಯೋಗ್ಯವಿದೆ. ನನಗೂ ನಿಮ್ಮಂತೆಯೇ ಅನಿಸುತ್ತದೆ. ಸೆರೆಮನೆಯ ಶರಾ ಪುಸ್ತಕ ನಿಮ್ಮ ಕಡೆಗೆ ಕಳಿಸುತ್ತೇನೆ. ಅದರಲ್ಲಿ ನೀವು ನಿಮ್ಮ ಟೀಕೆ, ಭಾವನೆ ಮತ್ತು ಸೂಚನೆಗಳನ್ನು ಬರೆದು ಅದನ್ನು ತಿರುಗಿ ನನ್ನ ಕಡೆಗೆ ಕೊಟ್ಟು ಕಳಿಸಿರಿ. ನಾನು ಅದರ ಒಂದು ಪ್ರತಿ ಯನ್ನು ಮುಂಬೈ ಸರಕಾರಕ್ಕೆ ಕಳಿಸುತ್ತೇನೆ."

ಇಷ್ಟು ಮಾತಾಡಿದ ಮೇಲೆ. ಜೇಲ ಸುಪರಿಂಟೆಂಡೆಂಟರು ಹೊರಟು ಹೋದರು. ಅನಂತರ ಆ ಎಲ್ಲ ಅಪರಾಧಿ ಸೆರೆಯಾಳುಗಳು ತಮ್ಮ ಕೆಲಸ ಮುಗಿಸಿ ನನ್ನ ಕೋಣೆಯಕಡೆಗೆ ಬಂದರು. ನಾನು ಅವರ ವಿಷಯಕ್ಕೆ ತೋರಿಸಿದ ಆತ್ಮೀಯತೆ ಅವರಿಗೆ ಮೆಚ್ಚುಗೆಯಾಗಿರಬಹುದು. ಅದಕ್ಕಾಗಿ ಅವರು ನನಗೆ ಧನ್ಯವಾದ ಕೊಡಲಿಕ್ಕೆ ಬರುತ್ತಿ ದ್ದಾರೆಂದು ನನಗೆ ಮೊದಲಿಗೆನಿಸಿತು. ಆದರೆ ವಸ್ತುಸ್ಥಿತಿ ತೀರ ವಿರುದ್ಧವೂ ವಿಪರೀತವೂ ಆಗಿತ್ತು. ಅವರು ನನಗೆ ನಮಸ್ಕಾರ ಮಾಡಿ ಅಂದರು :—

"ನಮ್ಮ ಕಲ್ಯಾಣ ಮಾಡಲಿಕ್ಕೆ ನಿಮಗಾರು ಹೇಳಿದರು ? ನಮ್ಮನ್ನು ಮೊದಲೇ ಸ್ವಲ್ಪ ವಿಚಾರಿಸಿದ್ದರೆ ಒಳ್ಳೆಯದಾಗುತ್ತಿತ್ತು. ಸೆರೆಮನೆಯಲ್ಲಿಯ ಸಂಗತಿಗಳು ನಿಮಗೆ ತಿಳಿಯುವದಿಲ್ಲ. ಚಳವಳಿ ಮಾಡಿ ಸೆರೆಮನೆಗೆ ಬರುವದೆಂದರೆ ಹವೆ ಬದಲಾವಣೆಗೆ ಬಂದಂತೆ. ಇದಕ್ಕಿಂತಲೂ ಅದಕ್ಕೆ ಹೆಚ್ಚಿನ ಮಹತ್ವವಿಲ್ಲ. ನಮಗೆ ಇಲ್ಲಿ ಇಡೀ ಆಯುಷ್ಯವನ್ನೇ ಕಳೆಯಬೇಕಾಗಿದೆ. ಇಲ್ಲಿಯ ಕೆಲವು ಸಂಗತಿಗಳನ್ನೂ ತಿಳಿದುಕೊಳ್ಳಿರಿ. ಮನುಷ್ಯರಿಂದ ಈ ಮೊಟ್ಟೆಯನ್ನು ಜಗ್ಗಿಸುತ್ತಿರುವದರಿಂದ ಇದು ಎತ್ತುಗಳು ಎಳೆಯುವ ಮೊಟ್ಟೆಗಿಂತ ಅರ್ಧದಷ್ಟು ಸಣ್ಣದಿರುತ್ತದೆ. ನಾವು ಯಾವತ್ತೂ ಜನರು ಕೂಡಿ ಇದನ್ನು ಎಳೆಯುತ್ತಿರುವದರಿಂದ ಅದು ಎಷ್ಟೂ ಭಾರವೆನಿಸುವದಿಲ್ಲ. ಬೆಳಿಗ್ಗೆ ಮಾತ್ರ ಎರಡು ತಾಸು ನಾವು ಈ ಕೆಲಸ ಮಾಡುತ್ತೇವೆ. ಇದು ಬಹಳ ಕಷ್ಟದ ಕೆಲಸವೆಂದು ತಿಳಿದು ನಮಗೆ ಹೆಚ್ಚು ಸತ್ವಯುತವಾದ ಆಹಾರ ಕೊಡುತ್ತಾರೆ. ಕೇವಲ ಬೆಳಿಗ್ಗೆ ಎರಡು ತಾಸು ಕೆಲಸ ಮಾಡಿ ನಾವು ಇಡೀ ದಿವಸ ವಿಶ್ರಾಂತಿ ತೆಗೆದುಕೊಳ್ಳುತ್ತೇವೆ. ಇವರಿಗೆ ನೇಯ್ಗೆ ಕೆಲಸ ಕಲಿಸಿರಿ, ಬೇಕಾದರೆ ಅವರಿಂದ ದಿನಾಲು ಎಂಟು ತಾಸು ಕೆಲಸ ತೆಗೆದು

ಕೊಳ್ಳಿರೆಂದು ನೀವು ಸರಳವಾಗಿ ಹೇಳುತ್ತೀರಿ. ಇದರಿಂದ ನಮ್ಮ ಆರಾಮು, ಹೆಚ್ಚಿನ ಆಹಾರ, ಈ ಕೆಲಸದಿಂದ ದೊರೆಯುವ ಹೆಚ್ಚಿನ ಮಾಸಿಕ ಮಾಫಿ (ರಿಯಾಯಿತಿ), ಇಡೀ ದಿವಸದ ವಿಶ್ರಾಂತಿ ಎಲ್ಲವನ್ನೂ ನಾವು ಕಳೆದುಕೊಳ್ಳುತ್ತೇವೆ. ಆದ್ದರಿಂದ ನಮ್ಮ ಕಲ್ಯಾಣ ಮಾಡುವ ಗೊಂದಲದಲ್ಲಿ ನೀವು ಬೀಳಬಾರದು." ಇದರಿಂದ ನಾನು ಬಹಳ ದೊಡ್ಡ ಪಾಠ ಕಲಿತೆನು. ಶರಾ ಪುಸ್ತಕದಲ್ಲಿ ಏನೂ ಬರೆಯದೇ ಅದನ್ನು ತಿರುಗಿ ಕಳಿಸಿದೆನು.

ಒಂದು ದಿವಸ ನನ್ನನ್ನು ಬೇಗನೆ ಬೆಳಗಾವಿಗೆ ಕಳಿಸುತ್ತಾರೆಂದು ತಿಳಿದು ಬಂದಿತು. ಪೋಲೀಸರ ಕೈಯೊಳಗಿಂದ ತಪ್ಪಿಸಿಕೊಂಡು ಹೋಗುವ ವಿಚಾರ ನನ್ನ ತಲೆಯೊಳಗಿಂದ ಇನ್ನೂ ಹೋಗಿರಲಿಲ್ಲ. ದಾರಿಯಲ್ಲಿ ಎಲ್ಲಾದರೂ ಅಂಥ ಸಂಧಿ ದೊರೆತರೆ ಅದರ ಲಾಭ ಪಡೆಯಬೇಕೆಂದು ವಿಚಾರ ಮಾಡುತ್ತಿದ್ದೆ. ನನ್ನ ಸಂಗಡ ಹತ್ತು ಜನ ಪೋಲೀಸರೂ ಒಬ್ಬ ಸಬ್-ಇನಸ್ಪೆಕ್ಟರರೂ ಬೆಳಗಾವಿಯ ವರೆಗೂ ಬಂದಿದ್ದರು. ಮಿರಜ ಸ್ಟೇಶನ್ನಿನ ಮೇಲೆ ಎರಡು ತಾಸು ನಮಗೆ ಗಾಡಿಯ ದಾರಿ ಕಾಯುತ್ತ ಕೂಡ್ರಬೇಕಾಯಿತು. ಮಿರಜಿಯಲ್ಲಿಯ ಅನೇಕ ಜನರು ಬಂದು ನನ್ನನ್ನು ಭೆಟ್ಟಿಯಾಗಿ ಹೋದರು. ಯಾವಾಗಲೂ ಪೋಲೀಸರ ಕಾವಲು ಇದ್ದುದರಿಂದ ಮಿರಜ ಸ್ಟೇಶನ್ನಿನಲ್ಲಿ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗಲಿಲ್ಲ. ಶೇಡಬಾಳ, ಹುಕ್ಕೇರಿರೋಡ ಸ್ಟೇಶನ್ನುಗಳ ಮೇಲೆ ಅಂಥ ಸಂಧಿ ಸಿಕ್ಕಂತೆ ತೋರಿತು. ಆದರೆ ಹತ್ತಿರ ಯಾವಾಗಲೂ ಪೋಲೀಸರು ನಿಂತಿರುತ್ತಿದ್ದರು. ಆ ದಿವಸ ಗಾಡಿ ತಡವಾಗಿ ಬಂದಿತ್ತು. ರಾತ್ರಿ ಹನ್ನೊಂದುವರೆ ಗಂಟೆಗೆ ಗಾಡಿ ಬೆಳಗಾವಿಗೆ ತಲುಪಿತು. ಸ್ಟೇಶನ್ ಮೇಲೆ ಬಹಳ ಜನರು ನೆರೆದಿದ್ದರು. ಸೌ. ರಮುಕ್ಕಾ ಯಾಳಗಿಯವರೂ ಸ್ಟೇಶನ್ನಕ್ಕೆ ಬಂದಿದ್ದರು. ಅವರು ಮತ್ತು ನಾನು ಸಬ್-ಇನಸ್ಪೆಕ್ಟರರಿಗೆ ಹೇಳಿದೆವು : "ಇಷ್ಟು ರಾತ್ರಿ ಹೊತ್ತಿನಲ್ಲಿ ನನ್ನನ್ನು ಕ್ಯಾಂಟೋನಮೆಂಟ ಲಾಕಪ್ಪಿಗೆ ಯಾಕೆ ಕರದುಕೊಂಡು ಹೋಗುತ್ತೀರಿ? ನಾವೆಲ್ಲರೂ ಯಾಳಗಿಯವರ ಬಂಗಲೆಗೆ ಹೋಗೋಣ. ಅಲ್ಲಿ ನಾನು ಊಟ ಮಾಡುತ್ತೇನೆ. ನೀವೂ ಸಹ ಎಲ್ಲರೂ ಯಾಳಗಿಯವರಲ್ಲಿಯೇ ಊಟ ಮಾಡಿರಿ. ರಾತ್ರಿ ನಾವೆಲ್ಲರೂ ಅಲ್ಲಿಯೇ ಮಲಗುವಾ. ಬೆಳಿಗ್ಗೆ ನನ್ನನ್ನು ಹಿಂಡಲಗಿ ಸೆರೆಮನೆಗೆ ಕರೆದುಕೊಂಡು ಹೋಗಬಹುದು." ಈ ನಮ್ಮ ವಿಚಾರವನ್ನು ಪೋಲೀಸರು ಮಾನ್ಯಮಾಡಲಿಲ್ಲ. ಈ ಚರ್ಚೆ ನಡೆದಾಗಲೇ ಸಂಧಿಸಾಧಿಸಿ ಪೋಲೀಸರ ಕೈಯೊಳಗಿಂದ ಪಾರಾಗಿ ಹೋಗುವ ನನ್ನ ಒಂದು ಸ್ವತಂತ್ರ ಯೋಜನೆಯನ್ನು ಸಂಬಂಧಪಟ್ಟ ಜನರಿಗೆ ಹೇಳಿಟ್ಟಿದ್ದೆ. ಅದು ಈ ಪ್ರಕಾರವಿತ್ತು : "ಬೆಳಿಗ್ಗೆ ನಾಲ್ಕು ಗಂಟೆಗೆ ೧೦–೧೨ ಜನರಿಗೆ ಸಾಲುವಷ್ಟು ಶಿರಾ ಮತ್ತು ಕಾಫಿ ತೆಗೆದುಕೊಂಡು ಯಾರಾದರೂ ಕ್ಯಾಂಟೋನಮೆಂಟ ಲಾಕಪ್ಪಿಗೆ ಬರಬೇಕು. ನಾನು ಬೇಗನೆ ಎದ್ದು ಸಿದ್ಧನಾಗಿರುವೆನು. ಆಫೀಸಿನಲ್ಲಿಯೇ ಎಲ್ಲ ಪೋಲೀಸರಿಗೆ ತಿನ್ನಲಿಕ್ಕೆ ಕೊಡಬೇಕು. ಮೋಟರ ಚಾಲೂ ಇಟ್ಟಿರಬೇಕು. ಫಲಹಾರದ ಸಾಮಾನು ಮೋಟಾರದೊಳಗಿಂದ ಆಫೀಸಿನಲ್ಲಿ ತರುವದಕ್ಕಾಗಿ ನಾನೇ ಸ್ವತಃ ಮೋಟಾರ ಕಡೆಗೆ ಹೋಗಬೇಕು. ಮೋಟಾರ

ದೊಳಗಿಂದ ಆಫೀಸಿಗೆ ಫಲಹಾರದ ಸಾಮಾನು ತರುವವರ ಬದಲಾಗಿ ನಾನೇ ಚಾಲೂ ಮೋಟಾರದೊಳಗೆ ಕುಳಿತು ಅಲ್ಲಿಂದ ಫರಾರಿಯಾಗಬೇಕು." ಈ ಯೋಜನೆ ಮೊದಲಿನಿಂದ ಕೊನೆಯವರೆಗೂ ಸರಿಯಾಗಿಯೇ ನಡೆಯಿತು. ಕೊನೆಗೆ ನಾನು ಮೋಟಾರದೊಳಗಿಂದ ಫರಾರಿಯಾಗುವ ಕಾಲಕ್ಕೆ ಆ ಚಾಲೂ ಮೋಟಾರಿನಲ್ಲಿಯೇ ನನಗಿಂತಲೂ ಮೊದಲೇ ಇಬ್ಬರು ಪೋಲೀಸರು ಹೋಗಿ ಕುಳಿತಿದ್ದರು. ಪೋಲೀಸರ ಕೈಯೊಳಗಿಂದ ತಪ್ಪಿಸಿಕೊಂಡು ಹೋಗುವ ನನ್ನ ವಿಚಾರವನ್ನು ನಾನು ಶಾಶ್ವತವಾಗಿ ಬಿಟ್ಟುಬಿಟ್ಟೆ. ಬೆಳಿಗ್ಗೆ ೯ ಗಂಟೆಗೆ ನನ್ನನ್ನು ಹಿಂಡಲಗಿ ತುರಂಗಕ್ಕೆ ಒಯ್ದು ಮುಟ್ಟಿಸಿದರು.

ಹಿಂಡಲಗಿ ಜೇಲಿನೊಳಗಿನ ಒಂದು ದಿವಸದ ಸಂಗತಿಯನ್ನು ಬರೆದು ನಾನು ಈ ಪ್ರಕರಣ ಮುಗಿಸುತ್ತೇನೆ. ಎರಡು ಎರಡೂವರೆ ತಿಂಗಳುಗಳ ವರೆಗೆ ರಾಜಕೀಯ ಕೈದಿಗಳಿಗೆ ವರ್ತಮಾನಪತ್ರಗಳನ್ನು ಕೊಟ್ಟಿರಲಿಲ್ಲ. ಭೆಟ್ಟಿಗೂ ಅವಕಾಶವಿರಲಿಲ್ಲ. ಪತ್ರ ಬರೆಯುವ ಅಥವಾ ಬಂದ ಪತ್ರಗಳನ್ನು ನೋಡುವ ಸೌಲಭ್ಯವನ್ನೂ ಕೊಟ್ಟಿರಲಿಲ್ಲ. ಅದರಿಂದ ಒಳಗಿನ ಕೈದಿಗಳಿಗೆ ಹೊರಗಿನ ನಿಜವಾದ ಸುದ್ದಿ ಸಿಕ್ಕಿರಲಿಲ್ಲ. ನನಗೂ 'ಅ' ವರ್ಗ ಕೊಟ್ಟಿದ್ದರಿಂದ ಹಿರಿಯ ಮುಖಂಡರ ಬರಾಕಿನಲ್ಲಿಯೇ ನನ್ನನ್ನೂ ಇಟ್ಟಿದ್ದರು. ನನ್ನಿಂದ ಹೊರಗಿನ ಪರಿಸ್ಥಿತಿ ತಿಳಿದುಕೊಳ್ಳಲಿಕ್ಕೆ ಎಲ್ಲರೂ ಅತ್ಯಂತ ಉತ್ಸುಕರೂ ಆತುರರೂ ಆಗಿದ್ದರು. ನಾನು ಎಲ್ಲ ಪರಿಸ್ಥಿತಿಯ ಚಿತ್ರವನ್ನು ಕೊಟ್ಟೆನು. ಕಳೆದ ಮೂರು-ಮೂರುವರೆ ತಿಂಗಳಿನಲ್ಲಾದ ಪ್ರಗತಿಯನ್ನೂ ಜೇಲಿನಲ್ಲಿಯ ಜನರ ಮುಂದೆ ಹೇಳಿದೆನು. ಆ ಕಾಲಕ್ಕೆ ಶಾಲೆ, ಕಾಲೇಜದೊಳಗಿನ ಹೊಸ ಹೊಸ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಅಹಮಹಮಿಕೆಯಿಂದಲೂ ಒಳ್ಳೇ ಧೈರ್ಯದಿಂದಲೂ ಆಂದೋಲನದಲ್ಲಿ ಹೇಗೆ ಭಾಗ ತೆಗೆದುಕೊಳ್ಳುತ್ತಾರೆಂಬುದನ್ನು ಹೇಳಿದೆನು. ಅದನ್ನು ಕೇಳಿ ಎಲ್ಲರಿಗೂ ಆನಂದವಾಯಿತು. ಧನ್ಯತೆ ಎನಿಸಿತು. ವಿದ್ಯಾರ್ಥಿ ವಿದ್ಯಾರ್ಥಿನಿಯರ ಧೈರ್ಯದ ಕೆಲವೊಂದು ಉದಾಹರಣೆ ಹೇಳಿದೆನು. ಒಬ್ಬ ಸದ್ಗೃಹಸ್ಥರು "ಅವರಲ್ಲಿ ಕೆಲವು ಪ್ರಮುಖ ವಿದ್ಯಾರ್ಥಿಗಳ ಹೆಸರು ಮತ್ತು ಸಂಗತಿಯನ್ನು ಹೇಳುತ್ತೀರಾ ?" ಎಂದು ನನ್ನನ್ನು ಕೇಳಿದರು. ಖಾಸಗಿ ರೀತಿಯಿಂದ ನಾನು ಹೇಳಬಹುದು. ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಈ ತರುಣ-ತರುಣಿಯರು ಕೆಲಸ ಮಾಡುತ್ತಿದ್ದಾರೆ. ಇಷ್ಟರಿಂದ ಎಲ್ಲವನ್ನೂ ತಿಳಿದುಕೊಳ್ಳಿರಿ "' ಎಂದು ನಾನು ಅವರಿಗೆ ಉತ್ತರಿಸಿದೆನು.

೬ | ಭಾರತ ಮತ್ತು ವಿದೇಶಗಳಲ್ಲಿ ವಿಚಾರ ಮಂಥನ

ಬಿರ್ಲಾ ಭವನದಲ್ಲಿಯ ಗಾಂಧೀ ನಿವಾಸದಲ್ಲಿ ಮುಖಂಡರ ಬಂಧನದ ವಿಷಯಕ್ಕೆ ಮೊದಲಿನಿಂದಲೇ ಗುಜು ಗುಜು ನಡೆದಿರಬೇಕು. ಪಟ್ಟಣದಲ್ಲಿ ಎಲ್ಲ ಕಡೆಗೆ 'ನಾಕಾಬಂದಿ' ಮಾಡಿದ್ದನ್ನು ಕೇಳಿ ಕೆಲವರು ಹೀಗೆ ಊಹಿಸಿರುವ ಸಂಭವವೂ ಇದೆ. ನಿತ್ಯದಂತೆ ಬೆಳಿಗ್ಗೆ ಎದ್ದ ನಂತರ ಗಾಂಧೀಜಿ ಮಹದೇವಭಾಯಿಗೆ ಸಹಜವಾಗಿ ಅಂದರು. "ಮಹಾದೇವ, ನಿನ್ನೆ ರಾತ್ರಿಯ ನನ್ನ ಭಾಷಣ ಕೇಳಿದ ಮೇಲಾದರೂ ಸರಕಾರ ನನ್ನನ್ನು ನಿಶ್ಚಿತವಾಗಿ ಬಂಧಿಸುವದಿಲ್ಲವೆಂದು ನನಗನಿಸುತ್ತದೆ." ಪ್ರಾರ್ಥನೆಯ ನಂತರ ಅವರು ನಿತ್ಯದ ಕಾರ್ಯಕ್ರಮ ಹಾಗೂ ಕೆಲಸ ಪ್ರಾರಂಭ ಮಾಡುವವರಿದ್ದರು. ಅಷ್ಟರಲ್ಲಿ ಅವರಿಗೆ ಸುದ್ದಿ ಬಂತು. "ಪೋಲೀಸ ಕಮಿಶನರರು ಕೆಳಗೆ ಗೇಟದ ಹತ್ತಿರ ಗಾಂಧೀಜಿಯವರ ಕಾರ್ಯದರ್ಶಿಯನ್ನು ಭೆಟ್ಟಿಯಾಗುವದಕ್ಕಾಗಿ ನಿಂತಿದ್ದಾರೆ. ಗಾಂಧೀಜಿ, ಮಹಾದೇವಭಾಯಿ, ಮತ್ತು ಕು. ಮೀರಾಬೆನ್ (Miss Slade) ಅವರನ್ನು ಬಂಧಿಸುವದಕ್ಕಾಗಿ ವಾರಂಟ ತೆಗೆದುಕೊಂಡು ಬಂದಿದ್ದಾರೆ."

ಇದನ್ನು ಕೇಳಿದ ಕೂಡಲೇ ಗಾಂಧೀಜಿ ಪ್ಯಾರೇಲಾಲರನ್ನು ಕರೆದು ಹೇಳಿದರು : "ಪ್ಯಾರೇಲಾಲ, ರಾಷ್ಟ್ರಕ್ಕೆ ನನ್ನ ಸಂದೇಶ ತಿಳಿಸು. 'ಪ್ರತಿಯೊಬ್ಬ ಸತ್ಯಾಗ್ರಹೀ ಸ್ವಾತಂತ್ರ್ಯ ಸೈನಿಕನು.' 'ಮಾಡುವೆ ಇಲ್ಲವೆ ಮಡಿಯುವೆ' ಎಂದು ಒಂದು ಕಾಗದದ ಅಥವಾ ಬಟ್ಟೆಯ ತುಂಡಿನ ಮೇಲೆ ಬರೆದು, ಅದನ್ನು ತನ್ನ ಎದೆಯ ಮೇಲಿನ ಬಟ್ಟೆಗೆ ಹಚ್ಚಿಕೊಳ್ಳಲಿ."

ಆ ಕಾಲಕ್ಕೆ ಅಮೇರಿಕೆಯ ಒಬ್ಬ ಪತ್ರ ಪಂಡಿತ ಲುಯಿ ಫಿಶರ ಗಾಂಧೀಜಿಯವರ ಜೊತೆಗೆ ಭಾರತದಲ್ಲಿದ್ದರು. ಅವರು ಭಾರತದಲ್ಲಿರುವ ವರೆಗೆ ಏನೂ ತಮ್ಮ ತುಟಿ ತೆರೆದಿದ್ದಿಲ್ಲ. ಆದರೂ ಅವರು ಅಮೇರಿಕಾಕ್ಕೆ ಹೋದಕೂಡಲೆ ಭಾರತದ ಪರವಾಗಿ ಅತ್ಯಂತ ಪ್ರಖರವಾದ ಪ್ರಚಾರ ಪ್ರಾರಂಭ ಮಾಡಿದರು. ಅಮೇರಿಕೆಗೆ ಅವರು ಹೋಗುವಾಗ ಗಾಂಧೀಜಿ ಪ್ರೆ. ರುಝುವೆಲ್ಟರಿಗೆ ಮುಟ್ಟಿಸುವದಕ್ಕೆ ಅವರ ಕೈಯಲ್ಲಿ ಒಂದು ಸಂದೇಶ ಕಳುಹಿಸಿದ್ದರು. ಅದರಲ್ಲಿ ಪ್ರೆ. ರುಝುವೆಲ್ಟರಿಗೆ "ನೀವು ಭಾರತದಲ್ಲಿಯ ಬಿಕ್ಕಟ್ಟಿನ ವಿಷಯದಲ್ಲಿ ಮಧ್ಯಸ್ಥಿಕೆಯನ್ನು ಮಾಡಬೇಕಾದೀತು." ಎಂದು ಬರೆದು ತಿಳಿಸಿದ್ದರು. ಆದರೆ ಮುಂದೆ ಆ ಪ್ರಸಂಗವೇ ಬರಲಿಲ್ಲ. ಲುಯಿ ಫಿಶರ ಅವರ ಅಮೇರಿಕೆಯಲ್ಲಿಯ ಪ್ರಚಾರ ಬಹಳೇ ಪರಿಣಾಮಕಾರಿಯಾಯಿತು. ಅಮೇರಿಕೆಯಲ್ಲಿಯ ಒಂದು

ಪ್ರಸಿದ್ಧ ಪತ್ರಿಕಾ 'ಅಟಲಾಂಟಿಕ್ ಮ್ಯಾಗಝಿನ್' ಈ ರೀತಿ ಬರೆದಿತ್ತು : "ಭಾರತದಲ್ಲಿಯ ಬಿಕ್ಕಟ್ಟನ್ನು ಬಿಡಿಸುವದಕ್ಕೆ ಒಂದು ರಚನಾತ್ಮಕ ಮಾರ್ಗವಿದೆ. ಮಿತ್ರರಾಷ್ಟ್ರಗಳಿಗೆ ಜಯವಾದರೆ ಅವರು ಏನು ಮಾಡುವವರಿದ್ದಾರೆ? ಅವರ ಉದ್ದೇಶ ಏನಿದ್ದೀತು? ಭಾರತದಲ್ಲಿಯ ಬಿಕ್ಕಟ್ಟನ್ನು ಬಿಡಿಸುವದಕ್ಕೆ ಇದು ಚರ್ಚೆಯಲ್ಲಿಯ ಒಂದು ವಿಷಯವಾಗಬಹುದೇ ? ಸಾಮಾನ್ಯವಾಗಿ ಅದು ಒಪ್ಪಂದದ ಒಂದು ಅಂಗವಾಗುವದು ಅವಶ್ಯವಿದೆ." ಕ್ಯಾನಡಾದ್ದಾದರೂ ಇದೇ ಅಭಿಪ್ರಾಯವಿದ್ದುದು ಪ್ರಸಿದ್ಧವಾಗಿತ್ತು. ಇಂದು ಮತ್ತು ಜಯದೊರೆತ ನಂತರ ಮಿತ್ರರಾಷ್ಟ್ರಗಳು ಭಾರತಕ್ಕೆ ಸ್ವಾತಂತ್ರ್ಯ ಕೊಡುತ್ತೇವೆಂದು ಇಂದೇ ಘೋಷಿಸಬೇಕು.

ನೋಬೆಲ್ ಬಹುಮಾನ ವಿಜೇತಾ ಶ್ರೀಮತಿ ಪರ್ಲ ಬಕ್ ಮತ್ತು ಚೀನದ ಪ್ರಸಿದ್ಧ ಲೇಖಕ ಲಿಂಗ ಯುತಾನ ಅವರು ತಮ್ಮ ಹರಿತವಾದ ಲೇಖಣಿಕೆಯನ್ನು ಭಾರತದ ಬೇಡಿಕೆಯನ್ನು ಸಮರ್ಥಿಸುವದಕ್ಕೆ ಉಪಯೋಗಿಸಿದ್ದರು.

ಇದೇ ಸಮಯದಲ್ಲಿ ನ್ಯೂಯಾರ್ಕದೊಳಗೆ 'ಫ್ರೀ ವರ್ಲ್ಡ ಕಾಂಗ್ರೆಸ್' ಅಧಿವೇಶನ ಜರುಗಿತ್ತು. ಆ ಅಧಿವೇಶನದಲ್ಲಿ ಅಮೇರಿಕೆಯ ಉಪ ಮುಖ್ಯ ಮಂತ್ರಿ ಶ್ರೀ ವಾಲೇಸ ಅವರು ಒಂದು ಪರಿಣಾಮಕಾರಕ ಭಾಷಣ ಮಾಡಿದರು: "ಜನಕ್ರಾಂತಿ" ಅಥವಾ "ಸಾಧಾರಣ ವ್ಯಕ್ತಿಯ ದೇಶ" ಎಂಬುದು ಅವರ ಭಾಷಣದ ವಿಷಯವಾಗಿತ್ತು. ಅವರ ಈ ಭಾಷಣ ಅಮೇರಿಕೆಯ ಮತ್ತು ಅನ್ಯದೇಶಗಳ ಸಾಮಾನ್ಯ ಮನುಷ್ಯನ ಅಧಿಕಾರ ಕುರಿತು ಬಹಳ ಜಾಗೃತಿಯನ್ನುಂಟು ಮಾಡಿತೆಂದು ಹೇಳುತ್ತಾರೆ. ಅಮೇರಿಕೆಯ ಕೂಲಿಕಾರ ಸಂಘವು ಭಾರತದ ಬೇಡಿಕೆಯನ್ನು ಎತ್ತಿಹಿಡಿಯಿತು. ಬಾಸ್ಟನ್, ಶಿಕಾಗೊ. ನ್ಯೂಯಾರ್ಕ, ವಾಸಿಂಗ್ಟನ್, ಮೆಕ್ಸಿಕೊ ಮತ್ತು ಕೆನಡಾ ಇವುಗಳಲ್ಲಿ ಭಾರತದ ಬಿಕ್ಕಟ್ಟಿನ ವಿಷಯ ಕುರಿತೇ ಚರ್ಚೆ ನಡೆಯುತ್ತಿತ್ತು. ಭಾರತಕ್ಕೆ ಜೀವಂತವಿರುವ ಸಾಮರ್ಥ್ಯವಿದೆಯೆಂಬುದನ್ನು ಸಿದ್ಧಮಾಡಿ ತೋರಿಸುವ ಸಮಯ ಇದೇ ಆಗಿತ್ತು.

"Current History" ಪತ್ರಿಕೆಯಲ್ಲಿ ಒಂದು ಲೇಖ ಬಂದಿತ್ತು. ಅದರಲ್ಲಿ ಈ ರೀತಿ ಸೂಚಿಸಲಾಗಿತ್ತು:— "ಬ್ರಿಟನ್ ತಮ್ಮ ವ್ಹಾಯಿಸರಾಯರನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕು. ಕಾಂಗ್ರೆಸ್ಸಿನೊಡಿಗೆ ಒಪ್ಪಂದ ಮಾಡಿಕೊಳ್ಳಬೇಕು; ಅಮೇರಿಕಾ ಮತ್ತು ಚೀನಗಳ ಒಂದು ಬೋರ್ಡ ರಚಿಸಿ, ಭಾರತದ ಬಿಕ್ಕಟ್ಟನ್ನು ಬಿಡಿಸಬೇಕು. ಕಾಂಗ್ರೆಸ ತನ್ನ ಆಂದೋಲನವನ್ನು ನಿಲ್ಲಿಸಬೇಕು. ಈ ಪಂಚಾಯತಿ ಬೋರ್ಡಿನ ನಿರ್ಣಯವನ್ನು ಇಬ್ಬರೂ ಮಾನ್ಯ ಮಾಡಬೇಕು. ಮತ್ತು ಜಪಾನಿಗಳನ್ನು ಬ್ರಹ್ಮದೇಶ. ಚೀನಗಳಿಂದ ಹೊರಗೆ ಹಾಕಬೇಕು. ಭಾರತದ ಜನತೆ ದಿನದಿನಕ್ಕೆ ಹೆಚ್ಚೆಚ್ಚು ಬ್ರಿಟಿಶರ ವಿರೋಧಿಯಾಗುತ್ತ ನಡೆದಿದೆ. ಆದರೆ ಅದು ಜಪಾನದ ಪಕ್ಷಪಾತಿಯಾಗುತ್ತ ನಡೆದಿದೆ ಎಂದು ತಿಳಿಯಬಾರದು."

"ಅಮೇರಿಕನ್ ರಾವುಂಡ್ ಟೇಬಲ್" ಎಂಬ ಹೆಸರಿನ ಒಂದು ಹೊಸ ಸಂಸ್ಥೆ ಉತ್ಪನ್ನವಾಯಿತು. ಆ ಸಂಸ್ಥೆಯ ಅಧ್ಯಕ್ಷ ರುರ್ಝುವೆಲ್ಟರು ಭಾರತ ಮತ್ತು ಬ್ರಿಟನ್‌ಗಳಲ್ಲಿ ಮಧ್ಯಸ್ಥಿಕೆ ಮಾಡಿ ಒಪ್ಪಂದ ಮಾಡಬೇಕು ಎಂದು ಒಂದು ಗೊತ್ತುವಳಿ ಪಾಸು ಮಾಡಿತು.

ಈ ಕಾಲಕ್ಕೆ ಭಾರತ ಚೀನಗಳಲ್ಲಿ ಸಾಕಷ್ಟು ಬಾಂಧವ್ಯ ಉಂಟಾಗಿತ್ತು. ಗಾಂಧೀಜಿಯವರನ್ನು ಬಂಧಿಸಿದ ಮೂರನೇ ದಿವಸವೇ 'ಚುಂಗ್‌ಕಿಂಗ'ರು ಒಂದು ಸಂದೇಶದಲ್ಲಿ ಅಂದರು : "ಗಾಂಧೀಜಿಯ ಬಂಧನ, ದಬ್ಬಾಳಿಕೆ, ರಕ್ತಪಾತಗಳ ಸುದ್ದಿ ಕೇಳಿ ಚೀನಕ್ಕೆ ಅತ್ಯಂತ ದುಃಖವಾಗುತ್ತಿದೆ. ಆದ್ದರಿಂದ ಭಾರತಕ್ಕೆ ಸಹಾನುಭೂತಿ ವ್ಯಕ್ತಮಾಡಲು ಚೀನಕ್ಕೆ ಯಾವ ಅಭ್ಯಂತರವೂ ಇಲ್ಲ."

ಜನರಲ್ ಸ್ಮಟ್ಸ ಈ ರೀತಿ ಅಂದರು : "ಗಾಂಧೀಜಿಗೆ ದೋಷಕೊಡುವದು ಮಹಾ ಮೂರ್ಖತನ. ಅವರೊಬ್ಬ ಮಹಾನ್ ವ್ಯಕ್ತಿ. ಅವರು ಜಗತ್ತಿನಲ್ಲಿಯ ಒಬ್ಬ ಮಹಾ ಪುರುಷರು. ಆಧ್ಯಾತ್ಮಿಕತೆಯ ಆದರ್ಶದಲ್ಲಿ ಮಗ್ನರಾದ ಗ್ರಹಸ್ಥರು ಅವರು. ಅವರ ಆದರ್ಶಗಳನ್ನು ಈ ಜಗತ್ತಿನಲ್ಲಿ ಸರ್ವತ್ರ ಕಾರ್ಯಗತ ಮಾಡುವ ಸಾಧ್ಯಾಸಾಧ್ಯತೆಯ ಬಗ್ಗೆ ಮತಭೇದವಿರಬಹುದು. ಆದರೆ ಗಾಂಧೀಜಿ ಒಬ್ಬ ಮಹಾನ್ ದೇಶಭಕ್ತ, ಮಹಾಪುರುಷ ಮತ್ತು ಒಬ್ಬ ಆಧ್ಯಾತ್ಮಿಕ ನೇತಾರರಾಗಿದ್ದಾರೆಂಬುದರಲ್ಲಿ ಎರಡು ಮತಗಳಾಗುವದು ಶಕ್ಯವೇ ಇಲ್ಲಾ."

ಮಿ. ಅಮೆರಿ (ತಾ. ೯—ಅಗಸ್ಟ ೧೯೪೨) ಲಂಡನ್‌ದಲ್ಲಿ ಹೇಳಿದರು : "ಸರ್ವವನ್ನೂ ಕೊಡಿರಿ. ಇಲ್ಲದಿದ್ದರೆ ಯಾವುದೂ ಬೇಡ" ಎಂಬುದು ಕಾಂಗ್ರೆಸ್ಸಿನ ವೃತ್ತಿ ಮತ್ತು ನೀತಿಗಳಾಗಿದ್ದರಿಂದ ಒಪ್ಪಂದವಾಗುವದು ಸಾಧ್ಯವಾಗಲಿಲ್ಲ. ಬ್ರಿಟಿಶರು ಮಾಡಿದ ಗೊತ್ತುವಳಿಯನ್ನು ತಿರಸ್ಕೃತ ಮಾಡಿದ್ದರ ಪರಿಣಾಮವಾಗಿ ಭಾರತೀಯ ಜನಮತ ಕಾಂಗ್ರೆಸ್ಸಿನ ವಿರುದ್ಧವಾಗಿದೆ. ಕಾಂಗ್ರೆಸ್ಸಿನ ನೇತೃತ್ವದಲ್ಲಿ ಭಾರತದ ಜನತೆಯ ವಿಶ್ವಾಸ ಈಗ ಉಳಿದಿಲ್ಲ."

ಬ್ರಿಟನ್ನಿನ ಕೂಲಿಕಾರ ಪಕ್ಷವು ಈ ರೀತಿ ಹೇಳಿತು: "ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂಬುದು ಎಷ್ಟೋ ವರ್ಷಗಳಿಂದ ಕೂಲಿಕಾರ ಪಕ್ಷದ ನೀತಿಯಾಗಿದೆ ಇಂದಿಗೂ ಇದೆ. ಯುದ್ಧದ ನಂತರ ಹಿಂದುಸ್ಥಾನವು ಸ್ವತಂತ್ರವಾಗಿಯೇ ತೀರುತ್ತದೆಂದು ಕೂಲಿಕಾರ ಪಕ್ಷಕ್ಕೆ ವಿಶ್ವಾಸವಿದೆ. ಇನ್ನು ಬ್ರಿಟಿಶರಿಗೆ ಅದನ್ನು ತಪ್ಪಿಸುವದು ಸಾಧ್ಯವಿಲ್ಲ."

ಸಪ್ಟಂಬರದಲ್ಲಿ ಬ್ರಿಟಿಶ ಪಾರ್ಲಮೆಂಟ ಸೇರಿದಾಗ ಮಿ. ಚರ್ಚಿಲ್ಲರು ಈ ರೀತಿ ಮಾತಾಡಿದರು : —

"ಕಾಂಗ್ರೆಸ ಪಾರ್ಟಿಯನ್ನು ಬಿಟ್ಟರೂ ಕಾಂಗ್ರೆಸ್ಸಿಗೆ ಮೂಲತಃ ವಿರೋಧಿಯಿದ್ದಂಥ ಮತ್ತು ಪೂರ್ಣ ಸ್ವಯಂ ನಿರ್ಣಯಾಧಿಕಾರವುಳ್ಳಂಥ ಒಂಭತ್ತುಕೋಟಿ

ನಮ್ಮ ಮುಸಲ್ಮಾನರು ಜೊತೆಗಿದ್ದಾರೆ. ಯಾರ ಸ್ಪರ್ಶಮಾತ್ರದಿಂದ ಸವರ್ಣ ಧರ್ಮ ಭ್ರಷ್ಟವಾಗುತ್ತಿದೆಯೋ ಅಂಥ ಐದು ಕೋಟಿ ದಲಿತ ವರ್ಗ ಅಥವಾ ಅಸ್ಪೃಶ್ಯ ಜನರು ನಮ್ಮ ಪಕ್ಷವನ್ನು ಕಟ್ಟುತ್ತಾರೆ. ನಮ್ಮೊಳಗೆ ಕರಾರುಗಳಾದಂಥ ದೇಶೀ ಸಂಸ್ಥಾನಿ ಪ್ರಜರು ಒಂಭತ್ತುವರಿ ಕೋಟಿ ಜನರು ನಮ್ಮೊಂದಿಗಿದ್ದಾರೆ. ಮತ್ತು ಕಾಂಗ್ರೆಸ್ಸಿನ ವಿರೋಧಿ ಯಾಗಿದ್ದಾರೆ. ಈ ರೀತಿ ೩೯ ಕೋಟಿ ಜನರಲ್ಲಿ ಇಪ್ಪತ್ತೂರು ಕೋಟಿ ೫೦ ಲಕ್ಷ ಜನರು ನಮ್ಮ ಜೊತೆಗಿದ್ದಾರೆ. ಇದಲ್ಲದೆ ಬ್ರಿಟಿಶ ಭಾರತದಲ್ಲಿಯ ಹಿಂದೂ, ಶೀಖ ಮತ್ತು ಕ್ರಿಶ್ಚಿಯನ್ ಇವರಲ್ಲಿ ಅನೇಕ ಜನರು ಕಾಂಗ್ರೆಸ್ಸನ್ನು ಸೇರಿಲ್ಲ. ಈಗ ಕಾಂಗ್ರೆಸ್ಸು ಗಾಂಧೀಜಿ ಯವರ ಅನೇಕ ಮಾತುಗಳನ್ನು ಬದಿಗೊತ್ತಿ ಅಹಿಂಸೆಗೆ ತಿಲಾಂಜಲಿಯನ್ನು ಕೊಟ್ಟಿದೆ. ಅದು ನಿಚ್ಚಳವಾಗಿ ಕ್ರಾಂತಿಕಾರಿ ಆಂದೋಲನದಲ್ಲಿ ಬಹಿರಂಗವಾಗಿ ಸೇರ್ಪಡೆಯಾಗಿದೆ. ರೈಲು ಮತ್ತು ತಂತಿಗಳನ್ನು ನಾಶಮಾಡುವದು, ಅವ್ಯವಸ್ಥೆ ಉಂಟು ಮಾಡುವದು. ಅಂಗಡಿಗಳ ಲೂಟಿ ಮಾಡುವದು, ಪೋಲೀಸರ ಮೇಲೆ ಹಲ್ಲೆ ಮಾಡುವದು ಕ್ರೂರ ಅತ್ಯಾಚಾರ ಗಳಾಗಿವೆ. ಈ ಎಲ್ಲ ಕಾರ್ಯಕ್ರಮಗಳ ಅರ್ಥವಿಷ್ಟೇ–ಭಾರತದ ಮೇಲೆ ಆಗುವ ಜಪಾನದ ದಾಳಿಯಿಂದ ಭಾರತವನ್ನು ರಕ್ಷಿಸುವ ನಮ್ಮ ಕೆಲಸದಲ್ಲಿ ಅಡ್ಡಿ-ಆತಂಕಗಳ-ನ್ನೊಡ್ಡುವದು."

"ಆದ್ದರಿಂದಲೇ ಗಾಂಧೀಜಿ ಮತ್ತು ಇತರ ಎಲ್ಲ ಮುಖಂಡರನ್ನು ಬಂಧಿಸಿ ಸೆರೆಮನೆಯಲ್ಲಿಡಲಾಗಿದೆ. ಅವರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ. ಈ ಸಂಕಟ ದೂರವಾಗುವ ವರೆಗೆ ಅವರನ್ನು ಬಿಡುಗಡೆ ಮಾಡುವದಿಲ್ಲ. ಸುದೈವದಿಂದ ಭಾರತ-ದಲ್ಲಿಯ ಯುದ್ಧ ಮಾಡುವ ಜಾತಿಯ ಮೇಲೆ ಕಾಂಗ್ರೆಸ್ಸಿನ ಪ್ರಭಾವ ಎಷ್ಟೂ ಬಿದ್ದಿರುವ ದಿಲ್ಲ. ಕಾಂಗ್ರೆಸ್ಸಿನೊಂದಿಗೆ ಅವರದು ತೀರ ಮತಭೇದವಿದೆ. ಭಾರತದಲ್ಲಿ ಕಾಂಗ್ರೆಸ್ಸಿನ ರಾಜ್ಯ ಬರುವದು ಅವರಿಗೆ ಎಂದಿಗೂ ಸೇರಲಾರದು."

"ಸುಮಾರು ಹತ್ತು ಲಕ್ಷ ಜನರು ಮಿತ್ರರಾಷ್ಟ್ರಗಳ ಸಹಾಯಕ್ಕೆ ಸ್ವೇಚ್ಛೆಯಿಂದ ನಿಂತಿದ್ದಾರೆ. ಒಂದು ಲಕ್ಷ ನಲವತ್ತು ಸಾವಿರ ಜನರು ಹೊಸದಾಗಿ (ರಿಕ್ರೂಟ) ಭರತಿ ಯಾಗಿದ್ದಾರೆ. ಅವರನ್ನು ಅವರ ಕರ್ತವ್ಯದಿಂದ ಚ್ಯುತರನ್ನಾಗಿ ಮಾಡಲು ಕಾಂಗ್ರೆಸ್ಸು ಸಫಲವಾಗಿಲ್ಲ. ಅದೇ ರೀತಿ ಸಾಮಾನ್ಯ ಜನತೆಯ ಮೇಲೂ ಕೂಡ ಕಾಂಗ್ರೆಸ್ಸಿಗೆ ತನ್ನ ಪ್ರಭಾವ ಬೀರಲು ಸಾಧ್ಯವಾಗಿಲ್ಲ. ಭಾರತದಲ್ಲಿ ಎಲ್ಲ ಅಧಿಕಾರಗಳೂ ಭಾರತೀಯರ ಕೈಯಲ್ಲಿಯೇ ಇವೆ. ಭಾರತೀಯ ಸಿವ್ಹಿಲ್ ಸರ್ವೀಸಿನಲ್ಲಿ ಇಂಗ್ಲೀಷರ ಅಂದರೆ ಕೆಂಪು ಜನರ ಸಂಖ್ಯೆ ೬೦೦ಕ್ಕಿಂತ ಕಡಿಮೆ ಇದೆ. ಎಲ್ಲ ರಾಜ್ಯದಾಡಳಿತ ಅಂದರೆ ಸಾರ್ವಜನಿಕ ಸರ್ವೀಸ, ಶಾಸನಗಳು ವ್ಯವಸ್ಥಿತವಾಗಿ ನಡೆದಿವೆ."

"ಕಾಂಗ್ರೆಸ್ಸಿನ ಬಂಡು ಈಗ ಮುಗಿದಿದೆ. ಸಬೋಟೇಜ ಹತ್ತಿಕ್ಕಲ್ಪಟ್ಟಿದೆ. ದಂಗೆ ಹಾಕುವವರನ್ನು ಈಗ ಹಿಡಿತದಲ್ಲಿ ತರಲಾಗಿದೆ. ಈ ಹಿಂಸಾತ್ಮಕ ಆಂದೋಲನ ದಿಂದ ಕಾಂಗ್ರೆಸ್ಸು ರಾಷ್ಟ್ರದ ಪ್ರತಿನಿಧಿತ್ವ ವಹಿಸಲಾರದು. ಭವಿತವ್ಯ ನಿರ್ಣಯಿಸ ಲಾರದೆಂದು ಸಿದ್ಧವಾಗಿದೆ."

"ಈಗ ನಮ್ಮ ಸೈನ್ಯವೂ ಭಾರತಕ್ಕೆ ಹೋಗಿ ಮುಟ್ಟಿದೆ. ಈ ಪೂರ್ವದಲ್ಲಿ ಎಂದೂ ಇಲ್ಲದಷ್ಟು ಸಂಖ್ಯೆಯಲ್ಲಿ ಕೆಂಪು ಸೈನಿಕರು ಭಾರತದಲ್ಲಿ ನುಗ್ಗಿದ್ದಾರೆ. ಆದ್ದರಿಂದ ನಾವು ಗಾಬರಿಯಾಗುವ ಅಥವಾ ನಿರಾಶರಾಗುವ ಕಾರಣವಿಲ್ಲ."

ಮಿ. ಚರ್ಚಿಲ್ಲರು ಹೀಗೂ ಅಂದರು :— "ನಾವು ಈ ಯುದ್ಧದಲ್ಲಿ ಭಾಗ ವಹಿಸಿದ್ದು ರಾಜ್ಯವಿಸ್ತಾರಕ್ಕಾಗಿ ಅಲ್ಲ; ಆದರೆ ಪ್ರತಿಷ್ಠೆ, ನ್ಯಾಯ. ಮತ್ತು ಕರ್ತವ್ಯಗಳ ಪಾಲನೆಗೋಸ್ಕರ. ಆದರೆ ಇದರರ್ಥ ನಾವು ನಮ್ಮ ಸಾಮ್ರಾಜ್ಯದ ದಿವಾಳಿ ತೆಗೆಯುತ್ತೇವೆಂದಲ್ಲ (Liquidate). ನಮಗೆ ಅದನ್ನು ಇಟ್ಟುಕೊಳ್ಳುವದಿದೆ. ಸಾಮ್ರಾಜ್ಯದ ಪ್ರಧಾನ ಮಂತ್ರಿಯಾದ ನಾನು ಬ್ರಿಟಿಶ ಸಾಮ್ರಾಜ್ಯದ ದಿವಾಳಿ ತೆಗೆಯಲಿಕ್ಕೆ ಬಂದಿರುವದಿಲ್ಲ. ಹಾಗೆ ಮಾಡಲು ಬೇರೊಬ್ಬ ಮನುಷ್ಯ ಜನ್ಮವೆತ್ತಿ ಬರಬೇಕು."

ಶ್ರೀ ರಾಜಾಜಿಯವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟು ಇಂಗ್ಲಂಡಿಗೆ ಹೋಗುವ ತಮ್ಮ ಇಚ್ಛೆಯನ್ನು ಪ್ರಕಟಪಡಿಸಿದ್ದರು. ಆದರೆ ಅವರಿಗೆ ಅನುಮತಿ ದೊರೆಯಲಿಲ್ಲ.

ಹಿಂದೂ ಮಹಾಸಭೆಯ ಪ್ರತಿಕ್ರಿಯೆಯೂ ಇದೇ ರೀತಿ ಕಾಂಗ್ರೆಸ್ಸಿನ ವಿರುದ್ಧ ವಾಗಿತ್ತು. ಯಾವುದೇ ಹಿಂದೂ, ಕಾಂಗ್ರೆಸ್ಸಿನ ಸಧ್ಯದ ಧೋರಣೆಗೆ ಸಕ್ರಿಯ ಬೆಂಬಲಕೊಡ ಬಾರದೆಂದು 'ಹಿಂದೂ ರಾಷ್ಟ್ರಪತಿಯು' ಹಿಂದೂ ರಾಷ್ಟ್ರಕ್ಕೆ ಆಜ್ಞೆ ಹೊರಡಿಸಿದ್ದರು.

ಮುಸ್ಲಿಂ ಲೀಗದ ಬ್ಯಾ. ಜಿನ್ನಾ ಗರ್ಜಿಸಿದ್ದರು. ಬ್ರಿಟಿಶ ಸರಕಾರ ಕಾಂಗ್ರೆಸ್ಸಿನ ರಾಜಕಾರಣೆಗಳಿಗೆ ಶರಣು ಬರಬೇಕೆಂದು ಕಾಂಗ್ರೆಸ್ಸು ಈ ಷಡ್‌ಯಂತ್ರ ಹೂಡಿದೆ. 'ಛೋಡೋ ಭಾರತ' ಚಳವಳಿ ಕಾಂಗ್ರೆಸ್ಸಿನ ಸಂತಪ್ತ ಮತ್ತು ಸಿಟ್ಟಿನ ವೃತ್ತಿಯ ಆವಿಷ್ಕರಣವಿದೆ." ಅವರು ಲೀಗದ ಕಾರ್ಯಕಾರೀ ಮಂಡಳಕ್ಕೆ ಈ ರೀತಿ ಕರೆಕೊಟ್ಟರು: "ನಡೆಯಿರಿ. ಕೂಡಲೇ ಒಂದಾಗಿರಿ. ಗಾಂಧೀಜಿ ಬ್ರಿಟಿಶ ಸರಕಾರಕ್ಕೂ ಲೀಗಿಗೂ ಆವ್ಹಾನ ಕೊಟ್ಟಿದ್ದಾರೆ. ಆದರಿಂದ ಅತ್ಯಂತ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಕೂಡಲೇ ವಿಚಾರ ಮಾಡುವದು ಅವಶ್ಯವಾಗಿದೆ."

ಹಿಂದೀ ಕಮ್ಯುನಿಸ್ಟ ಪಕ್ಷದ ಧರ್ಮಾಜ್ಞೆ (ಫತವಾ) ಈ ರೀತಿ ಇತ್ತು: "ಕಾಂಗ್ರೆಸ್ ಮುಖಂಡರು ಸೂಚಿಸಿದ ಮಾರ್ಗವು ಭಾರತವನ್ನು ಸ್ವಾತಂತ್ರ್ಯದತ್ತ ಒಯ್ಯುವ ಬದಲು ಭಾರತವನ್ನು ಸ್ವಾತಂತ್ರ್ಯದಿಂದ ದೂರ ಒಯ್ಯುವಂಥದಾಗಿದೆ. ಇಂಗ್ಲಂಡ ಮತ್ತು ಭಾರತಗಳಲ್ಲಿಯ ಪುರೋಗಾಮಿ ಶಕ್ತಿಗಳಲ್ಲಿ ಅದು ಒಡಕು ಹುಟ್ಟಿಸುವ ಮಾರ್ಗ ವಾಗಿದೆ. ಇದನ್ನು ನಮ್ಮ ದೇಶಭಕ್ತ ಬಂಧುಗಳಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ವನ್ನು ನಾವು ಮಾಡುತ್ತಿದ್ದೇವೆ."

ಭಾರತದ ಕ್ರಿಶ್ಚಿಯನ್ ಬಂಧುಗಳ ಪ್ರತಿಕ್ರಿಯೆ ಕಾಂಗ್ರೆಸ್ಸಿನ ಧೋರಣಕ್ಕೆ ಅನುಕೂಲವಾಗಿತ್ತು. ಕಾಂಗ್ರೆಸ್ಸು ಇಟ್ಟ ಹೆಜ್ಜೆಯನ್ನು ಅದು ಸಮರ್ಥಿಸಿತು.

ಗಾಂಧೀಜಿಯ ಅನುಪಸ್ಥಿತಿಯ ಕಾರಣದಿಂದ ಗಾಂಧೀಜಿಯವರ ಆಂದೋಲನ ಅಹಿಂಸಾತ್ಮಕವಾಗಿ ಉಳಿಯಲಿಲ್ಲ. ಈ ಮಾತಿನ ವಾದ-ವಿವಾದ ಎಷ್ಟೋ ದಿವಸ

ನಡೆದಿತ್ತು. ಗಾಂಧೀಜಿಯ ಅಹಿಂಸಕ ಶಸ್ತ್ರಾಗಾರದಲ್ಲಿ ಇಂಥವು ಏನೇನಿದ್ದವೋ ಅಥವಾ ಅವೆಯೋ ಅಂಥವುಗಳ ಉಪಯೋಗವನ್ನು ಅವರು ಹೊರಗಿದ್ದರೆ ಈ ಆಂದೋಲನ ದಲ್ಲಿ ಮಾಡಬಹುದಾಗಿತ್ತಲ್ಲವೇ? ಗಾಂಧೀಜಿ ಹೊರಗಿದ್ದರೆ ೧೯೨೧, ೧೯೩೦, ೧೯೩೨ರ ಚಳವಳಿಗಿಂತ ಈ ಆಂದೋಲನಕ್ಕೆ ಅಧಿಕ ಯಶ ದೊರೆಯಬಹುದಾಗಿತ್ತೆಂದು ಯಾವ ಆಧಾರದಿಂದ ಅನ್ನಲಿಕ್ಕೆ ಬಂದೀತು? ಈ ಚರ್ಚೆ ಆ ಕಾಲಕ್ಕೆ ಒಳ್ಳೆ ತುರುಸಿನಿಂದ ನಡೆದಿತ್ತು. ಆದರೆ ನನ್ನ ವಿಚಾರದ ಪ್ರಕಾರ ಈ ಚರ್ಚೆ ತಾತ್ವಿಕ ಭೂಮಿಕೆಯ ಮೇಲೆ ನಡೆಯಬೇಕಾಗಿತ್ತು. ಆದರೆ ಆ ರೀತಿ ನಡೆಯಲೇ ಇಲ್ಲ. ಗಾಂಧೀಜಿ ಯಾವಾಗಲೂ ಅನ್ನುತ್ತಿದ್ದರು : 'ಒಂದು ಹೆಜ್ಜೆ ನನಗೆ ಸಾಕು' (One step is enough for me). ಈ ಮಾತು ಸುಪ್ರಸಿದ್ಧವಿದೆ. ಅಹಿಂಸಕ ಯುದ್ಧ ಶಾಸ್ತ್ರಕ್ಕೆ ಜನ್ಮ ಕೊಟ್ಟ ಏಕಮೇವ ತಜ್ಞರಾದ ಅವರಿಗೆ ಆ ಹೊತ್ತಿಗೆ ಏನು ಹೊಳೆಯುತ್ತಿತ್ತೆಂಬುದು ಬುದ್ಧಿಮತ್ತೆಯ ಸಂಘರ್ಷಣೆಯೊಳಗಿಂದ ಹೊರಡುವಂತಹದೇನಲ್ಲ. ಇತಿಹಾಸದ ಜ್ಞಾನದಿಂದ ಅಥವಾ ಒರೆಗಲ್ಲಿನಿಂದ ಇಂಥ ತಾತ್ವಿಕ ಚರ್ಚೆ ಮಾಡು ವದರಲ್ಲಿ ಅರ್ಥವಿದೆಯೆಂದು ಅನಿಸುವದಿಲ್ಲ. ಅಹಿಂಸಕ ಯುದ್ಧ ಶಾಸ್ತ್ರದಿಂದ ಇತಿಹಾಸದಲ್ಲಿ ಒಂದು ಹೊಸ ಪ್ರಕರಣ ಬರೆಯಲ್ಪಡುತ್ತದೆಂಬುದನ್ನು ಮರೆಯಬಾರದು. ನಿಜವಾದ ಸತ್ಯಾಗ್ರಹಿಗೆ ಯಾವ ಪ್ರಸಂಗದಲ್ಲಿ ಎಂಥ ಸ್ಫುರಣವಾದೀತೆಂಬುದನ್ನು ಮುಂಚಿತವಾಗಿ ಯಾರು ಊಹಿಸಬಲ್ಲರು ? ತಾ. ೧೪ನೇ ಆಗಸ್ಟ ೧೯೪೨ ರಿಂದ ಫೆಬ್ರುವರಿ ೧೯೪೩ ರ ಕಾಲದಲ್ಲಿ ಗಾಂಧೀಜಿ ಮತ್ತು ವ್ಹಾಯಿಸರಾಯರ ನಡುವೆ ಆದ ಪತ್ರ ವ್ಯವಹಾರ ಏನು ಪ್ರಕಟವಾಗಿದೆಯೋ ಅದರಿಂದ ನನ್ನ ಈ ಮಾತಿನ ಸ್ಪಷ್ಟ ಕಲ್ಪನೆ ಬರುವಂತಿದೆ.

ಗಾಂಧೀಜಿ ವ್ಹಾಯಿಸರಾಯರ ನಡುವಿನ ಪತ್ರವ್ಯವಹಾರ ಇಂಗ್ಲೀಷಿನಲ್ಲಿದೆ :—

Gandhi himself wrote to Lord Linlithgo that it is the 'Leonine Violence' which goadead the people to act violence— even to the point of madness. He held the drastic and unwarrented action of the Government responsible for the reported violence. Indeed, the point was emphasised again and again by Gandhi in his prolonged correspondence with the Viceroy from 14 August 1942 to February 1943.

I have told my people that this time our method is not courting imprisonment, that we must prepare for much higher sacrifice and so those who choose may peacefully

resist arrest. So a young man who was in the party offered such resistance. He was therefore handled to the prison van. This was ugly enough. But it was a painful sight when an impatient English Sergeant rough handled him and shoved him into a lorry as if he was a log of wood. In my openion the sergeant deserves correction. The struggle has become bitter enough without such scenes.

Gandhi Correspondence— 10th August 1942.

ಮಹಾತ್ಮಾಜಿಯವರ ಮನೋಮಂಥನ

"ಛೋಡೋ ಭಾರತ" ಠರಾವಿನ ಬಗ್ಗೆ ನಮ್ಮ ಹಿರಿಯ ಹಾಗು ಶ್ರೇಷ್ಠ ಮುಂದಾಳುಗಳ ತಲೆಯಲ್ಲಿ ವಿಚಾರ ನಡೆದಿರುವಾಗ ಗಾಂಧೀಜಿಯವರ ಮನಸ್ಸಿನಲ್ಲಿ ಏನು ವಿಚಾರ ನಡೆದಿತ್ತೆಂಬುದರ ಗೌಪ್ಯ ಸ್ಫೋಟವನ್ನು ಇದೀಗ ಪೂ. ವಿನೋಬಾಜಿ ಮಾಡಿದ್ದಾರೆ.

೧೯೪೨ ನೇ ಇಸ್ವಿಯ ಆಂದೋಲನ ಪ್ರಾರಂಭವಾಗುವದಕ್ಕಿಂತ ಮೊದಲು ಈ ಅಂತಿಮ ಯುದ್ಧದ ವಿಷಯಕ್ಕೆ ಗಾಂಧೀಜಿಯವರ ಮನಸ್ಸಿನಲ್ಲಿ ಮನೋಮಂಥನ ನಡೆದಿತ್ತು. ಈ ವಿಷಯ ಕುರಿತು ವಿಚಾರವಿನಿಮಯ ಮಾಡುವದಕ್ಕಾಗಿ ಒಂದು ಸಲ ಗಾಂಧೀಜಿ ವಿನೋಬಾರನ್ನು ತಮ್ಮ ಬಳಿಗೆ ಕರೆಸಿಕೊಂಡಿದ್ದರು. ಆ ಕಾಲಕ್ಕೆ ಗಾಂಧೀಜಿಯವರ ವಿಚಾರ ಈ ಪ್ರಕಾರವಿತ್ತು: "ಈ ಸಾರೆ ಜೇಲಿನೊಳಗೆ ಕಾಲಿಟ್ಟ ಕೂಡಲೇ ಉಪವಾಸ ಪ್ರಾರಂಭಮಾಡತಕ್ಕದ್ದು. ಸೆರೆಮನೆಯಲ್ಲಿ ಬಂಧಿಸ್ತರಾಗಿ ಕೂಡುವ ಮಾತು ಹಳೆಯದಾಗಿದೆ. ಬ್ರಿಟಿಶರ ಆಳಿಕೆ ಮಾನ್ಯ ಮಾಡತಕ್ಕದ್ದಲ್ಲ. ಮತ್ತು ನಾವು ಅವರಿಗೆ ಇಲ್ಲಿಂದ ಹೊರಟು ಹೋಗಲು ಹೇಳುತ್ತಿದ್ದೇವೆ. ಅಂದಮೇಲೆ ಜೇಲಿನೊಳಗೆ ಹೋದ ಕೂಡಲೇ ಉಪವಾಸ ಪ್ರಾರಂಭ ಮಾಡಲು ಯಾವ ಅಭ್ಯಂತರವಿದೆ ?"

ಈ ಪ್ರಕಾರದ ದಿವ್ಯವನ್ನು ಯಾರು ಮಾಡಬಲ್ಲರು ? ಬಲಿದಾನವನ್ನು ಯಾರ ಮನಸ್ಸಿನಲ್ಲಿ ಪ್ರೇಮ ತುಂಬಿತುಳುಕುತ್ತಿದೆಯೊ ಅಂಥವರೇ ಮಾಡಬಲ್ಲರು. ಯಾವದಾದರು ಒಬ್ಬ ವ್ಯಕ್ತಿ ಇದನ್ನು ಮಾಡಬಹುದು, ಆದರೆ ಆದರಿಂದ ಇದು ಆಂದೋಲನವಾಗಬಲ್ಲುದೆ ? ಅದು ಮುಂದುವರಿಯಬಲ್ಲುದೆ ? ಪ್ರೇಮಪೂರ್ವಕ ಉಪವಾಸಮಾಡಿ ಮೃತ್ಯುವನ್ನು ಆಲಂಗಿಸುವದು ಜನ ಆಂದೋಲನವಾಗಬಲ್ಲುದ ? ಸೈನ್ಯದಲ್ಲಿ ಲಕ್ಷಾವಧಿ ಜನರು ಭರತಿಯಾಗುತ್ತಾರೆ. ಅದರಂತೆ ಇದರಲ್ಲಿಯೂ ಭರತಿಯಾಗಬಲ್ಲರೆ ? ಇದು ಆಗಬಲ್ಲದು. ಮತ್ತು ಇದನ್ನು ತಮ್ಮಿಂದಲೇ ಪ್ರಾರಂಭಮಾಡಬೇಕೆಂದು ಗಾಂಧೀಜಿಗೆ ಅನಿಸುತ್ತಿತ್ತು.

ಈ ಪ್ರಕಾರದ ಉಪವಾಸವನ್ನು ಬಾಪೂ ಸ್ವತಃ ಮಾಡಬಹುದೆಂಬುದನ್ನು ಕೇಳಿ ಅವರ ಪರಿಸರದಲ್ಲಿಯ ಎಲ್ಲ ಜನರು ಗಾಬರಿಯಾದರು. ಯಾವದಾದರೂ ಉಪಾಯದಿಂದ ಹೀಗಾಗದಂತೆ ಮಾಡಬೇಕೆಂದು ಎಲ್ಲರೂ ವಿಚಾರಮಾಡತೊಡಗಿದರು. ಬಾಪೂ ಅವರಂತೂ ಇಂಥ ಉಪವಾಸ ಮಾಡಲೇಕೂಡದು, ಹೀಗಾಗದಿದ್ದರೆ ಉಪವಾಸದ ಶ್ರೇಣಿ ನಡೆಯಲಾರದು. ಅಥವಾ ಉಪವಾಸಕ್ಕಾಗಿ ಸೈನ್ಯವೇ ಸಿದ್ಧವಾಗಲಾರದು. ಆಜ್ಞೆಯ ಬಲದಿಂದ ಇಂಥ ಕಾರ್ಯಗಳಾಗಲಾರವು. ಈ ಪ್ರಕಾರದ ವಿಚಾರಗಳು ಬಾಪೂ ಅವರ ಸಮೀಪವರ್ತಿಗಳ ಮನಸ್ಸಿನಲ್ಲಿ ನಡೆದಿದ್ದವು.

ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿಯವರು ವಿಚಾರವಿನಿಮಯಕ್ಕಾಗಿ ವಿನೋಬಾಜಿಯವರನ್ನು ಕರೆಯಿಸಿಕೊಂಡಿದ್ದರು. ಗಾಂಧೀಜಿ ತಮ್ಮ ವಿಚಾರಗಳನ್ನು ವಿನೋಬಾಜಿಯವರ ಮುಂದಿಟ್ಟರು. "ನನಗೆ ಈ ರೀತಿ ಮಾಡುವದಿದೆ" ಎಂದು ಗಾಂಧೀಜಿ ಅಂದರು. ಪ್ರಶ್ನೆ ಗಂಭೀರವಾಗಿತ್ತು. ವಿನೋಬಾಜಿ ನಿಶ್ಚಿತ ಅಭಿಪ್ರಾಯ ಕೊಟ್ಟರು. "ಹೌದು, ಮಾಡಬಲ್ಲೆ. ಯಾವ ಕೆಲಸವನ್ನು ಜ್ಞಾನಿ ಜನರು ಜ್ಞಾನಪೂರ್ವಕ ಮಾಡುತ್ತಾರೆಯೊ ಅದೇ ಕೆಲಸವನ್ನು ಅನುಯಾಯಿಗಳು ಶ್ರದ್ಧೆಯಿಂದ ಮಾಡಬಲ್ಲರು. ಯಾವ ಕೆಲಸವನ್ನು ಶ್ರೀರಾಮನು ಜ್ಞಾನಪೂರ್ವಕ ಮಾಡುತ್ತಾನೆಯೊ ಅದೇ ಕೆಲಸವನ್ನು ಹನುಮಂತನು ಶ್ರದ್ಧಾಪೂರ್ವಕ ಮಾಡುತ್ತಾನೆ."

ಇದಾದನಂತರ ಹೆಚ್ಚು ವಿಚಾರಮಾಡುವಂತಹದೇನೂ ಇರಲಿಲ್ಲ. ವಿನೋಬಾಜಿ ಅಲ್ಲಿಂದ ಹೊರಟು ಹೋದರು. ಬಾಪೂಜಿ ಮತ್ತು ವಿನೋಬಾಜಿಯವರ ನಡುವೆ ಇಷ್ಟೆ ಮಾತುಗಳಾಗಿದ್ದವು.

ಅಗಸ್ಟ ೯ನೇ ತಾರೀಖು ಬೆಳಗಾಯಿತು. ಗಾಂಧೀಜಿಯನ್ನು ಬಂಧಿಸಿದರು. ಆದರೆ ಆ ಕಾಲಕ್ಕೆ ಅವರ ತಲೆಯಲ್ಲಿ ಉಪವಾಸ ಮಾಡುವ ವಿಚಾರವಿರಲಿಲ್ಲ. ಅಂಥ ಪ್ರಸಂಗ ಬಂದಾಗ ಮಾಡುವಾ. ಪ್ರಾರಂಭಕ್ಕೆ ಸರಕಾರದೊಂದಿಗೆ ಏನಾದರೂ ಪತ್ರ ವ್ಯವಹಾರ ನಡೆಯಬಹುದು ಎಂದು ಅವರಿಗನಿಸುತ್ತಿತ್ತು. ಆದರೆ ವಿನೋಬಾಜಿಯವರೊಂದಿಗೆ ಉಪರೋಕ್ತ ಮಾತುಕತೆಗಳಾಗಿದ್ದವು. ಆ ಪ್ರಕಾರ ಸೆರೆಮನೆಗೆ ಹೋದ ಕೂಡಲೇ ಉಪವಾಸ ಪ್ರಾರಂಭ ಮಾಡುವದಿತ್ತು.

ಆ ಕಾಲಕ್ಕೆ ಪ್ಯಾರೆಲಾಲಜಿ ಹೊರಗಿದ್ದರು. ಬಾಪೂಜಿ ಅವರಿಗೆ ಹೇಳಿದರು : "ಜೇಲಿನಲ್ಲಿ ಹೋದ ಕೂಡಲೇ ಉಪವಾಸ ಮಾಡಬಾರದೆಂದು ವಿನೋಬಾಗೆ ತಿಳಿಸಿರಿ." ಯಾಕಂದರೆ ಗಾಂಧೀಜಿಗೆ ಈ ಮಾತು ನಿಶ್ಚಿತವಾಗಿತ್ತು—ಈ ಮನುಷ್ಯ (ವಿನೋಬಾಜಿ) ತಮ್ಮೊಂದಿಗೆ ಇಷ್ಟು ಚರ್ಚೆಮಾಡಿ ಹೋಗಿದ್ದಾರೆ. ಆದ್ದರಿಂದ ಇವರು ಜೇಲಿನಲ್ಲಿ ಕಾಲಿಟ್ಟ ಕೂಡಲೇ ಉಪವಾಸ ಪ್ರಾರಂಭಮಾಡುವವರೇ" ಎಂದು.

ಗಾಂಧೀಜಿ ವಿನೋಬಾಜಿಯವರನ್ನು ಕೇವಲ ಸಲಹೆ ಕೇಳಿದ್ದರು—ಇಂಥ ಉಪವಾಸಗಳು ಜನ-ಆಂದೋಲನ ಆಗಬಲ್ಲವೆ ? ವಿನೋಬಾಜಿಯವರ ಉತ್ತರ "ಹೌದು ಆಗಬಲ್ಲವು" ಎಂದು. ಅಂದರೆ ಆಜ್ಞೆಗಿಂತ ಹೆಚ್ಚು ಬೆಲೆಯ ವಸ್ತು ಒಬ್ಬರಿಗೊಬ್ಬರಿಗೆ ದೊರೆತು ಹೋಗಿತ್ತು. ಅದು ಯಾವುದೇ ರೀತಿಯಿಂದ ಕಮಾಂಡ (ಆದೇಶ) ಕ್ಕಿಂತ ಕಡಿಮೆ ಇರಲಿಲ್ಲ.

ಅದೇ ದಿವಸ ವಿನೋಬಾಜಿಯವರನ್ನೂ ಬಂಧಿಸಿದ್ದರು. ವಿನೋಬಾಜಿ ಸೆರೆಮನೆಯಲ್ಲಿ ಕಾಲಿಟ್ಟಕೂಡಲೇ ಜೇಲರನಿಗೆ ಅಂದರು: "ನಿಮಗೆ ನನ್ನ ಪರಿಚಯವಿದೆ. ನಾನು ಜೇಲಿನ ಎಲ್ಲ ನಿಯಮಗಳನ್ನು ಸೂಕ್ಷ್ಮರೀತಿಯಿಂದ ಪಾಲನಮಾಡುವವ, ಅದರಂತೆ ಇತರರಿಗೂ ಪಾಲನ ಮಾಡಲು ಹಚ್ಚುವವನಿದ್ದೇನೆ. ಆದರೆ ಈ ಸಾರೆ ಅದರಂತೆ ಆಗಲಿಕ್ಕಿಲ್ಲಾ. ಬೆಳಿಗ್ಗೆ ನಾನು ತಿಂದುಬಂದಿದ್ದೇನೆ. ಆದ್ದರಿಂದ ಮಧ್ಯಾಹ್ನ ಊಟದ ಪ್ರಶ್ನೆ ಇಲ್ಲ. ಆದರೆ ಸಾಯಂಕಾಲದಿಂದ ನಾನು ಏನೂ ತಿನ್ನುವದಿಲ್ಲ. ಎಲ್ಲಿಯವರೆಗೆ ತಿನ್ನುವದಿಲ್ಲ ಎಂಬುದು ನನಗೆ ಗೊತ್ತಿಲ್ಲ. ನಿಮ್ಮ ಶಿಸ್ತು ಮುರಿಯುವದಕ್ಕಾಗಿ ನಾನು ಇದನ್ನು ಮಾಡುತ್ತಿರುವದಿಲ್ಲ. ಆದರೆ ನನ್ನವು ಕೆಲವೊಂದು ವಿಶಿಷ್ಟ ಶಿಸ್ತು ಇದೆ ಅವನ್ನು ಪಾಲಿಸುವದಕ್ಕಾಗಿ ಹೀಗೆ ಮಾಡುತ್ತಿದ್ದೇನೆ." ವಿನೋಬಾಜಿ ಆಫೀಸಿನಿಂದ ಜೇಲಿನೊಳಗೆ ಹೋದರು.

ಎರಡು ತಾಸುಗಳಲ್ಲಿ ವಿನೋಬಾಜಿಯವರನ್ನು ಆಫೀಸಿನಲ್ಲಿ ಕರೆಕಳಿಸಿದರು. ಗಾಂಧೀಜಿ ಪ್ಯಾರೇಲಾಲರಿಗೆ ಹೇಳಿದ ಸಂದೇಶವನ್ನು ಅವರು ಶ್ರೀ ಕಿಶೋರಲಾಲರ ಕಡೆಗೆ ಕೊಟ್ಟು ಕಳಿಸಿದರು. ಆಗ ಶ್ರೀ ಕಿಶೋರಲಾಲಜಿ ವರ್ಧಾದಲ್ಲಿದ್ದರು. ಈ ಪ್ರಕಾರದ ಒಂದು ಸಂದೇಶವಿದೆ. ಅದನ್ನು ವಿನೋಬಾಜಿಗೆ ಮುಟ್ಟಿಸಬಹುದೇ ಎಂದು ಶ್ರೀ ಕಿಶೋರಲಾಲಜಿ ಡೆಪ್ಯೂಟಿ ಕಮಿಶನರರನ್ನು ವಿಚಾರಿಸಿದರು. ಡೆಪ್ಯೂಟಿ ಕಮಿಶನರರು ಗವ್ಹರ್ನರರನ್ನು ವಿಚಾರಿಸಿದರು. ಗವ್ಹರ್ನರರು ಹೇಳಿದರು "ಮುಟ್ಟಿಸಲಿಕ್ಕೆ ಬರುತ್ತದೆ."

ಆದರೆ ನಮ್ಮ ನಿರ್ಬಂಧ ಹೀಗಿದೆ : "ಈ ಕರಾರಿನ ಮೇಲೆ ಅದನ್ನು ನಾವು ಮುಟ್ಟಿಸುತ್ತೇವೆ. ಹೆಚ್ಚು ಒಂದಕ್ಷರವನ್ನು ಮಾತಾಡಕೂಡದು. ಇದು ಭೆಟ್ಟಿಯಲ್ಲ. ಉಪವಾಸ ಮಾಡಬಾರದೆಂದು ಬಾಪೂಜಿಯವರ ಆದೇಶವಿದೆ ಎಂದು ಇಷ್ಟೆ ಹೇಳಬೇಕು." ಡೆಪ್ಯುಟಿ ಕಮಿಶನರ ಅಂದರು : "ಒಳ್ಳೆಯದು. ನಿಮ್ಮ ಸಂದೇಶವನ್ನು ನಾವು ವಿನೋಬಾಜಿಗೆ ಮುಟ್ಟಿಸುತ್ತೇವೆ." ಕಿಶೋರಲಾಲಜಿ ಹೇಳಿದರು : "ನಿಮ್ಮ ಹೇಳಿಕೆಯನ್ನು ಮಾನ್ಯಮಾಡುವ ಮನುಷ್ಯರು ಅವರಲ್ಲ. ನಮ್ಮ ಪೈಕಿ ಯಾರಾದರೂ ಈ ಸಂದೇಶ ತೆಗೆದುಕೊಂಡು ಹೋಗಬೇಕಾಗುವದು. ಕೊನೆಗೆ ಈ ಸಂದೇಶ ಮುಟ್ಟಿಸಲು ಶ್ರೀ ವಾಳುಂಜಕರರನ್ನು ನಿಯುಕ್ತ ಮಾಡಲಾಯಿತು. ಈ ಪ್ರಕಾರ ವಿನೋಬಾಜಿ

ಯವರಿಗೆ ಗಾಂಧೀಜಿ ಸಂದೇಶ ಮುಟ್ಟಿಸಲಾಯಿತು. ಪರಿಣಾಮತಃ ವಿನೋಬಾಜಿಯವರ ಉಪವಾಸ ನಿಂತಿತು.

ಕ್ವಿಟ್ ಇಂಡಿಯಾ (ಭಾರತದಿಂದ ತೊಲಗಿರಿ) ಈ ಗೊತ್ತುವಳಿಯನ್ನು ಮಂಡಿಸುವಾಗ ಗಾಂಧೀಜಿಯವರ ಮನೋಭೂಮಿಕೆ ಯಾವ ಪ್ರಕಾರದ್ದಿತ್ತೆಂಬುದನ್ನು ತೋರಿಸುವದಕ್ಕಾಗಿ ನಾನು ಇದನ್ನು ಇಲ್ಲಿ ಉಧೃತ ಮಾಡಿದ್ದೇನೆ.

— **ಪುಂಡಲೀಕಜೀ ಕಾತಗಡೆ**

" ಛೋಡೋ ಭಾರತ ಪರ್ವ "

ಕುಂದರ ನಾಡಿನಲ್ಲಿ ಒಂದು ಅಧ್ಯಾಯ

ಅಗಸ್ಟ ೯, ಆನಂತರ

ಅಂದು ೧೯೪೨ನೇ ಇಸ್ವಿ ಆಗಸ್ಟ ೯ನೇ ತಾರೀಖು. ಎಲ್ಲಿ ನೋಡಿದಲ್ಲಿ ಜನರು ಹೌಹಾರಿದಂತೆ ಕಾಣುತ್ತಾರೆ. ದಿಙ್ಮೂಢರಾಗಿದ್ದಾರೆ. ಯಾವ ಪೂರ್ವ ಸೂಚನೆಯೂ ಇಲ್ಲದೆ ಗಾಂಧೀಜಿ ಹಾಗೂ ವರ್ಕಿಂಗ ಕಮೀಟಿಯ ಸದಸ್ಯರನ್ನು ಬಂಧಿಸಿದ ಸುದ್ದಿ ದೇಶದಲ್ಲೆಲ್ಲ ಹರಡಿದೆ. ಅಲ್ಲಲ್ಲಿ ದೊಂಬಿಗಳಾದುದು ಕೇಳಿ ಬರುತ್ತವೆ. ದೇಶದೊಳಗಿನ ಸಣ್ಣ-ದೊಡ್ಡ ಮುಖಂಡರನ್ನೂ, ಕಾರ್ಯಕರ್ತರನ್ನೂ ಬಂಧಿಸುವ ಸರಕಾರದ ಕೆಲಸ ಅಖಂಡವಾಗಿ ನಡೆದಿದೆ. ಯಾರ ಮೇಲೆ ಸರಕಾರದ ವಕ್ರದೃಷ್ಟಿ ಇನ್ನೂ ಇದೆಯೋ ಯಾರ ಮೇಲೆ ದಾಳಿ ಬರುತ್ತಿದೆಯೋ ಎಂದು ಅನೇಕರು ವಿವಂಚನೆಯಲ್ಲಿದ್ದಾರೆ. ಮುಂದೇನಾಗುವದೋ ಎಂದು ಜನರು ವಿಚಾರಕ್ರಾಂತರಾಗಿದ್ದಾರೆ.

೧೯೪೨ನೇ ಅಗಸ್ಟ ೮ನೆಯ ತಾರೀಖಿನ ದಿವಸ ಮುಂಬೈಯಲ್ಲಿ ಅಖಿಲ ಭಾರತ ಕಾಂಗ್ರೆಸ ಕಮೀಟಿ ಅಧಿವೇಶನ ಸೇರಿ 'ಕ್ವಿಟ್ ಇಂಡಿಯಾ' 'ಬ್ರಿಟಿಶರೇ ಭಾರತದಿಂದ ತೊಲಗಿರಿ' ಎಂಬ ಗೊತ್ತುವಳಿಯನ್ನು ಪಾಸು ಮಾಡಿತು. ಆಂದೋಲನ ಪ್ರಾರಂಭವಾಗುವ ಪೂರ್ವದಲ್ಲಿ ಗಾಂಧೀಜಿ, ವ್ಹಾಯಿಸರಾಯರು, ಮತ್ತು ಬ್ರಿಟಿಶ ಸರಕಾರ, ಇವುಗಳ ನಡುವೆ ಮತ್ತೊಮ್ಮೆ ಸಂಧಾನದ ಮಾತುಕತೆಗಳು ಆಗುವವಿದ್ದವೆಂದು ಅನ್ನುತ್ತಾರೆ. ಆದರೆ ಈ ಗೊತ್ತುವಳಿಯಿಂದ ಬ್ರಿಟಿಶರ ಸಪನೆ ತಪ್ಪಿತು. ಯುರೋಪ ಖಂಡದಲ್ಲಿ ಹೊತ್ತಿದ ಮಹಾಯುದ್ಧದ ಜ್ವಾಲೆ ದಿಗಂತದ ಕಡೆಗೆ ಪಸರಿಸಹತ್ತಿದ್ದವು. ಹಿಂದುಸ್ಥಾನಕ್ಕೂ ಅದರ ತೀಕ್ಷ್ಣವಾದ ಕಾವು ಬಡಿಯದೇ ಇರಲಿಲ್ಲ. ಜಪಾನ ದೇಶ ಪೂರ್ವದಲ್ಲಿ ಅನೇಕ ರಾಷ್ಟ್ರಗಳನ್ನು ಆಗಲೇ ಆಕ್ರಮಿಸಿ ಹಿಂದುಸ್ಥಾನಕ್ಕೆ ತನ್ನ ಕೈ ಚಾಚಿತ್ತು. ಬಂಗಾಲ ಉಪಸಾಗರದಲ್ಲಿ ಗುಪ್ತಚಾರರ ಸುಳಿದಾಟ ನಡೆದಿತ್ತು. ಅಲ್ಲಲ್ಲಿ ಬಾಂಬುಗಳು ಬೀಳತೊಡಗಿದ್ದವು. ಬ್ರಹ್ಮದೇಶದಲ್ಲಿ ಜಪಾನರ ದಾಳಿಯಿಂದ ತೊಂದರೆಗೀಡಾದ ಬ್ರಿಟಿಶ ಸೈನ್ಯ ಅಲ್ಲಿಯ ಜನರನ್ನು ಅವರ ಪಾಡಿಗೆ ಬಿಟ್ಟು ಕಾಲ್ದೆಗೆದಿತ್ತು. ಬ್ರಿಟಿಶರ ಈ ಅಸಹಾಯ ಸ್ಥಿತಿ ಗಾಂಧೀಜಿಯ ಕಣ್ಣಿಗೆ ಕಾಣತೊಡಗಿತು.

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟು ಹಿಂದುಸ್ಥಾನದ ಜನರ ಸಹಾಯ ಬ್ರಿಟಿಶರಿಗೆ ದೊರೆಯುದೆಂದು ಗಾಂಧೀಜಿಗೆ ಮನವರಿಕೆಯಾಯಿತು. ಆಗ ಸಂಧಾನಕ್ಕಾಗಿ ಕ್ರಿಪ್ಸರು ಬಂದರು. ಅವರ ಹಟಮಾರಿತನದಿಂದ ಸಂಧಾನ ಮುರಿದುಹೋಯಿತು. ಗಾಂಧೀಜಿಯವರು ಬೇರೆ ಉಪಾಯ ಕಾಣದೆ 'ಬ್ರಿಟಿಶರೇ ಭಾರತದಿಂದ ತೊಲಗಿರಿ' ಎಂಬ ಧೋರಣೆಯನ್ನು ಸ್ವೀಕರಿಸಬೇಕಾಯಿತು. ಅಖಿಲ ಭಾರತ ಕಾಂಗ್ರೆಸ ಕಮೀಟಿಯು ಅದನ್ನು ಮಾನ್ಯ ಮಾಡಿತು. ಇಂಥ ಪರಿಸ್ಥಿತಿಯಲ್ಲಿ ಸಹ ಬ್ರಿಟಿಶ ಸರಕಾರ ತನ್ನ ಹಟಮಾರಿತನ ಬಿಡದೆ ಕಾಂಗ್ರೆಸ್ಸನ್ನು ಹತ್ತಿಕ್ಕಿಬಿಡಬೇಕೆಂಬ ಉದ್ದೇಶದಿಂದ ಇನ್ನೂ ಸಂಧಾನಕ್ಕೆ ದಾರಿ ಇರುವಾಗಲೇ ಗಾಂಧೀಜಿಯವರನ್ನೂ ವರ್ಕಿಂಗ ಕಮೀಟಿಯ ಸದಸ್ಯರನ್ನೂ ಇತರ ಮುಖಂಡರನ್ನೂ ಬಂಧಿಸಿ ಕಾಂಗ್ರೆಸ್ಸನ್ನು ಯುದ್ಧಕ್ಕೆ ಆವ್ಹಾನಿಸಿತು.

ಬ್ರಿಟಿಶ ಸರಕಾರದ ಈ ಸೇಡಿನ ನೀತಿಯನ್ನು ಕಂಡು ಅದರ ಆವ್ಹಾನವನ್ನು ಯಾವ ರೀತಿಯಿಂದ ಎದುರಿಸಬೇಕೆಂಬವನ್ನು ವಿಚಾರ ಮಾಡುವದಕ್ಕಾಗಿ ಕಲವೊಂದು ಮುಖಂಡರೂ ಕಾರ್ಯಕರ್ತರೂ ತಲೆಮರೆಸಿಕೊಂಡರು.

ಈ ಸಮಯದಲ್ಲಿ ನಾನು ಹುಬ್ಬಳ್ಳಿಯಲ್ಲಿದ್ದೆ. ಆಗ ನನ್ನ ಪತ್ನಿಗೆ ಕಾಯಿಲೆ. ಹುಬ್ಬಳ್ಳಿಯಲ್ಲಿ ಮನೆ ಮಾಡಿ ನನ್ನ ತಾಯಿ, ಪತ್ನಿ, ಹಾಗೂ ನನ್ನ ಮಗಳು ಚಿ. ಪ್ರೇಮಾ ಈ ಮೂವರನ್ನೂ ಅಲ್ಲಿಟ್ಟು ಪತ್ನಿಯ ಔಷಧೋಪಚಾರ ನಡೆಸಿದ್ದೆನು. ಅಗಸ್ಟ ೯ನೆಯ ತಾರೀಖಿನ ದಿವಸ ಎಲ್ಲ ಮುಖಂಡರನ್ನೂ ಬಂಧಿಸಿದ್ದು ನನಗೆ ಗೊತ್ತಾಯಿತು. ಗು. ಗಂಗಾಧರರಾಯರ ಬಂಧನವಾಯಿತೋ ಇಲ್ಲವೋ ಎಂಬುದು ತಿಳಿಯಲಿಲ್ಲ. ನಾನು ಒಮ್ಮೆಲೆ ಬೆಳಗಾವಿಗೆ ಹೋದರೆ ನನ್ನನ್ನೂ ಬಂಧಿಸಬಹುದು, ಅಥವಾ ನಾನೇ ಕಾರ್ಯಕ್ರಮ ಮಾಡಿ ಸೆರೆಮನೆಗೆ ಹೋದರೂ ತಿರುಗಿ ಬರಲು ಬಹಳ ದಿವಸಗಳು ಹಿಡಿಯಬಹುದು. ಈಸಲದ ಆಂದೋಲನ ಹಿಂದಿನ ಆಂದೋಲನಗಳಂತೆ ಆಗಿರದೆ ಉಗ್ರ ಸ್ವರೂಪ ತಾಳುವದೆಂಬುದರಲ್ಲಿ ನನಗೆ ಸಂದೇಹವಿರಲಿಲ್ಲ. ಆದುದರಿಂದ ನಮ್ಮ ಮನೆಯ ವ್ಯವಸ್ಥೆಯನ್ನು ತಕ್ಕಮಟ್ಟಿಗೆ ಮಾಡಿ ಹೋಗಬೇಕೆಂದು ನಾನು ಮತ್ತೆ ನಾಲ್ಕಾರು ದಿವಸ ಹುಬ್ಬಳ್ಳಿಯಲ್ಲಿ ನಿಂತೆನು. ಅಷ್ಟರಲ್ಲಿ ಬೆಳಗಾವಿಯಿಂದ ನನಗೆ ಒಂದು ನಿರೋಪ ಬಂತು 'ನಿಮ್ಮ ಮೇಲೆ ವಾರಂಟ ಇದೆ, ನೀವು ಪೋಲಿಸರ ಕೈಗೆ ಸಿಗಬಾರದು, ಭೂಗತರಾಗಿ ಕೆಲಸ ಮಾಡಬೇಕು.' ಈ ರೀತಿ ಗು. ಗಂಗಾಧರರಾಯರೇ ಹೇಳಿ ಕಳಿಸಿದ್ದರೆಂದು ನಿರೋಪದಲ್ಲಿತ್ತು. ಗು. ಗಂಗಾಧರರಾಯರೇ ಈ ರೀತಿ ಹೇಳಿ ಕಳಿಸಿದ್ದರೋ ಅಥವಾ ಗು. ಗಂಗಾಧರರಾಯರ ಹೆಸರಿನಿಂದ ಬೇರೆಯವರು ಈ ನಿರೋಪ ಕಳಿಸಿದ್ದರೋ ತಿಳಿಯಲಿಲ್ಲ. ಆಂದೋಲನ ಮುಗಿದ ನಂತರ ಸಹ ಇದರ ಬಗ್ಗೆ ನಾನು ಗು. ಗಂಗಾಧರರಾಯರನ್ನೂ ವಿಚಾರಿಸಲಿಲ್ಲ. ಆದರೆ ನಾನಾಗಿಯೇ ಯಾವುದಾದರೂ ಕಾರ್ಯಕ್ರಮ ಮಾಡಿ ಈ ಸಲ ಸೆರೆಮನೆಗೆ ಹೋಗಬಾರದೆಂದು ನಿರ್ಧರಿಸಿದೆ. ಮನೆಯ ವ್ಯವಸ್ಥೆಯನ್ನು ತಕ್ಕಮಟ್ಟಿಗೆ ಮಾಡಿ ನಾನು ಬೆಳಗಾವಿಗೆ ಹೊರಟೆನು. ಬೆಳಗಾವಿಗೆ ಬರುವದರೊಳಗಾಗಿ

೧೯೪೨ರ ಚಲೇಜಾವ್ ಚಳುವಳಿಯಲ್ಲಿಯ ಭೂಗತ ಕಾರ್ಯಕರ್ತರು



ಕುಳಿತವರು (ಎಡದಿಂದ ಬಲಕ್ಕೆ)— ೧) ಭಿ. ನಿ. ಭೂಸಿ, ೨) ನಿ. ಯ. ಠಕ್ಕರ, ೩) ಪುಂಡಲೀಕಜಿ ಕಾತಗಡೆ, ೪) ರಾ. ವೆ. ವಡವಿ ೫) ಬ. ರು. ಪಾಟೀಲ, ೬) ಮ. ನಿ. ಗುಡ್ಡಲ್ಲರ, ೭) ಬಾ. ಬ. ಮಾಳಗಿ, ೮) ಬ. ಮ. ಜಕ್ಕಣ್ಣನವರ

ನಿಂತವರು (ಎಡದಿಂದ ಬಲಕ್ಕೆ)— ೧) ಬ. ಬ. ಪಾವಾಡಿ, ೨) ಮ. ಬಾ. ಮಾಳಗಿ, ೩) ಫ. ಬ. ಬನದವರ, ೪) ಅ. ಸಾ. ಹೂಗಾರ, ೫) ರಾ. ಬ. ಬನದವರ ೬) ಗ. ಬ. ವೋದಿಗಿ, ೭) ರಾ. ಮ. ಗವನಾರ ೮) ಲಕ್ಷ್ಮಣ ಮಾಸ್ತಿಹೊಳಿ

ಗು. ಗಂಗಾಧರರಾಯರು ಬಂಧಿತರಾಗಿದ್ದರು. ಪುಂಡಲೀಕಜೀಯವರು ಭೂಗತರಾಗಿ ಮಿರಜಿಯ ಕಡೆಗೆ ಹೋಗಿ ಅಲ್ಲಿ ಬುಲೆಟಿನ್ ಹೊರಡಿಸಹತ್ತಿದ್ದರು. ನಾನು ಒಮ್ಮೆಲೆ ಹುದಲಿಗೆ ಹೋಗದೆ ಬೆಳಗಾವಿಯಲ್ಲಿ ಶ್ರೀ ಬೋಧರಾವ ನಾಯಕರ ಮನೆಯಲ್ಲಿ ಇದ್ದು ಪರಿಸ್ಥಿತಿಯ ಪರಿಚಯ ಮಾಡಿಕೊಳ್ಳತೊಡಗಿದೆ. ಆಂದೋಲನದ ಗತಿ ಎತ್ತ ತಿರುಗುತ್ತದೆಯೋ ಯಾವ ರೂಪ ತಾಳುತ್ತದೆಯೋ ಎಂಬುದನ್ನು ನಿರೀಕ್ಷಿಸಹತ್ತಿದೆ. ನನ್ನ ಸಹಕಾರಿಗಳಾದ ಶ್ರೀ ವಾಮನರಾವ ದೇಸಾಯಿ, ಬಾ. ಯ. ದೇಶಪಾಂಡೆ (ಅಣ್ಣೂ ಗುರೂಜಿ), ಶ್ರೀರಂಗ ಕಾಮತ, ಚನ್ನಪ್ಪಾ ವಾಲಿ ಮೊದಲಾದವರು ಆಗಲೇ ಭೂಗತರಾಗಿದ್ದರು. ನಾನು ಹುದಲಿಗೆ ರೇಲ್ವೆಯಿಂದ ಹೋಗಬೇಕೆಂದು ಹೊರಟೆನು. ದಾರಿಯಲ್ಲಿ ಶ್ರೀ ದಾದಾಸಾಹೇಬ ದೇಶಪಾಂಡೆಯವರು ಭೆಟ್ಟಿ ಆದರು. ಅವರು ನನಗೆ 'ನಿಮ್ಮ ಮೇಲೆ ವಾರಂಟ ಇದೆ. ಪೋಲೀಸರು ನಿಮ್ಮ ಶೋಧದಲ್ಲಿದ್ದಾರೆ. ನೀವು ರೇಲ್ವೆಯಿಂದ ಹುದಲಿಗೆ ಹೋಗುವದು ಸರಿ ಅಲ್ಲ' ಎಂದು ಸೂಚಿಸಿದರು. ನನಗೂ ಅದು ಯೋಗ್ಯವೆನಿಸಿ ನಾನು ರೇಲ್ವೆಯಿಂದ ಹೋಗುವದನ್ನು ಬಿಟ್ಟು ಹದಿನೇಳು (೧೭) ಮೈಲು ಗುಡ್ಡದ ಮಾರ್ಗವಾಗಿ ನಡೆಯುತ್ತಲೇ ಹುದಲಿಗೆ ಹೋಗಿ ತಲ್ಪಿದೆನು. ಶ್ರೀ ವಾಮನರಾವ ದೇಸಾಯಿ ಅಕ್ಕತಂಗೇರಹಾಳದಲ್ಲಿ, (ಹುದಲಿಯಿಂದ ಐದು ಮೈಲಿನ ಮೇಲೆ) ಅಣ್ಣೂ ಗುರೂಜಿ ಪಾಚ್ಛಾಪುರದಲ್ಲಿ ಭೂಗತರಾಗಿ ಇದ್ದರು. ನಾನು ಬಂದ ಸುದ್ದಿ ಅವರಿಗೆ ಹತ್ತಿತು. ಅವರ ಮತ್ತು ನನ್ನ ನಡುವೆ ಗುಪ್ತರೀತಿಯಿಂದ ಪತ್ರವ್ಯವಹಾರ ನಡೆದವು.

ಕಾರ್ಯಕರ್ತರೊಂದಿಗೆ ಚರ್ಚೆ

ನಾನು ಹುದಲಿಗೆ ಗುಪ್ತವಾಗಿ ಬಂದು ಹೋಗಿ ಮಾಡಹತ್ತಿದೆ. ಆದರೆ ಸುಮ್ಮನೆ ಕೂಡ್ರುವದು ಹೇಗೆ ? ಏನಾದರೂ ಕಾರ್ಯಕ್ರಮ ಮಾಡಬೇಕೆಂದು ವಿಚಾರ ಬಂತು. ಕಾರ್ಯಕರ್ತರನ್ನು ಕೂಡಿಸಿದೆ. ಯಾವ ಕಾರ್ಯಕ್ರಮ ಮಾಡಬೇಕು? ಕಾರ್ಯಕ್ರಮದಲ್ಲಿ ಮೊದಲು ಯಾರು ಭಾಗ ತೆಗೆದುಕೊಳ್ಳಬೇಕು ? ಎಂಬ ಬಗ್ಗೆ ರಾತ್ರಿ ಚರ್ಚೆ ನಡೆಯಿತು. ಮೊದಲು ಪ್ರಭಾತ ಫೇರಿ ಹಾಗೂ ಝೇಂಡಾ ವಂದನೆಯ ಕಾರ್ಯಕ್ರಮ ಮಾಡಬೇಕೆಂದು ಗೊತ್ತಾಯಿತು. ಕಾರ್ಯಕರ್ತರಲ್ಲಿ ಹಿರಿಯರಾದ ಶ್ರೀ ಗಂಗಪ್ಪ ಯಮಕನಮರ್ಡಿಯವರು ಮುಂದಾಗಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಇನ್ನು ಕೆಲವರು ಪ್ರತಿ ಸಲ ಅವರೇ ಮುಂದಾಗುವದು ಬೇಡ. ಈ ಸಾರೆ ಬೇರೆಯವರು ಮುಂದಾಗಲಿ ಎಂದು ನುಡಿದರು. ಶ್ರೀ ಬಿ. ಆರ್. ಪಾಟೀಲರು ವಯಸ್ಸಿನಿಂದ ಚಿಕ್ಕವರು ಅವರ ಗಣನೆ ಹೊಸ ಕಾರ್ಯಕರ್ತರಲ್ಲಿ ಆಗುತ್ತಿತ್ತು. ಅವರೇ ಈ ಸಾರೆ ಮುಂದಾಗಲಿ ಎಂದು ಮತ್ತೆ ಕೆಲವರು ಅಭಿಪ್ರಾಯಪಟ್ಟರು. ಕೊನೆಗೆ ನನ್ನೊಬ್ಬನನ್ನು ಬಿಟ್ಟು ಇತರರೆಲ್ಲರೂ ಪ್ರಭಾತಫೇರಿಯಲ್ಲಿ ಭಾಗ ತೆಗೆದುಕೊಳ್ಳಬೇಕೆಂದು ನಿರ್ಧಾರವಾಯಿತು. ಶ್ರೀ ಅಲ್ಲೀ

ಸಾಹೇಬ ವಾರೀಮನಿ ಅವರು ಈ ಕಾಲದಲ್ಲಿ ಪ್ರಾಯಮರಿ ಶಾಲೆಯಲ್ಲಿ ಶಿಕ್ಷಕರಾಗಿದ್ದು ದರಿಂದ ಫೇರಿಯಲ್ಲಿ ಭಾಗವಹಿಸಲಿಲ್ಲ.

ಜಮನಾಲಾಲ ಖಾದೀ ವಿದ್ಯಾಲಯ

ಪ್ರಭಾತ ಫೇರಿಯ ಬಗ್ಗೆ ಬರೆಯುವ ಪೂರ್ವದಲ್ಲಿ ಆ ಕಾಲಕ್ಕೆ ಹುದಲಿಯಲ್ಲಿ ನಡೆದ ಜಮನಾಲಾಲ ಖಾದೀ ವಿದ್ಯಾಲಯದ ಬಗ್ಗೆ ಎರಡು ಮಾತು ಹೇಳುವದು ಅವಶ್ಯವಿದೆ. ಪರಿಸ್ಥಿತಿಯ ಸ್ಪಷ್ಟ ಕಲ್ಪನೆ ಬರುವದಕ್ಕಾಗಿ ಅದರ ಬಗ್ಗೆ ಸಂಕ್ಷಿಪ್ತ ಮಾಹಿತಿ ಇಲ್ಲಿ ಕೊಡಲಾಗಿದೆ. ೧೯೩೨ನೇ ಇಸ್ವಿಯ ಆಂದೋಲನ ಮುಗಿದ ನಂತರ ನಾವು ನಮ್ಮ ಕಾರ್ಯಕ್ರಮವನ್ನು ಹುದಲಿಯಲ್ಲಿ "ಪುನಶ್ಚ: ಹರಿ ಓಂ" ಎಂದು ಪ್ರಾರಂಭ ಮಾಡಿದೆವು. ಅದರ ಸ್ವರೂಪ ಬರಬರುತ್ತಾ ೧೯೪೧ನೇ ಇಸ್ವಿಯಲ್ಲಿ ಗಾಂಧೀ ವಿಚಾರ, ನೂಲುವ, ನೇಯ್ಯುವ ಪ್ರಕ್ರಿಯೆ ಮುಂತಾದುವನ್ನು ಕಲಿಸುವದಕ್ಕಾಗಿ ಜಮನಾಲಾಲ ಖಾದೀ ವಿದ್ಯಾಲಯ ಸ್ಥಾಪಿಸುವದರಲ್ಲಿ ಪರ್ಯವಸಾನವಾಯಿತು. ಈ ವಿದ್ಯಾಲಯ ಭಾಯಿ ರಘುನಾಥರಾವ ಧೋತ್ರೆ ಅವರ ಹಸ್ತದಿಂದ ಪ್ರಾರಂಭ ವಾಯಿತು. ಅದರ ವಿವರವಾದ ಸಂಗತಿಯನ್ನು ಪುಂಡಲೀಕಜೀಯವರು ಬರೆದ ಮರಾಠಿ "ಸಂಸ್ಮರಣೀಯ ಪರ್ವ" ಎಂಬ ಪುಸ್ತಕದಲ್ಲಿ ಕೊಡಲಾಗಿದೆ. ಈ ವಿದ್ಯಾಲಯದ ಪ್ರಥಮ ಪಥಕದಲ್ಲಿ ನೀಲಕಂಠಯ್ಯಾ ಗಣಾಚಾರಿ, ಪಿ. ಬಿ. ಪಾಟೀಲ, ನಾರಾಯಣ ದೀಕ್ಷಿತ, ಹುದಲಿಯ ಸೋಮಲಿಂಗಪ್ಪಾ ಅ. ಮಳಗಲಿ, ನಿಂಗಪ್ಪಾ ಯ. ತುಕ್ಕರ, ಭೀಮಪ್ಪಾ ಎಲಿಗಾರ, ಅಪ್ಪಯ್ಯಪ್ಪಾ ವಾರೀಮನಿ, ಭೀಮಪ್ಪಾ ಭೂಸಿ, ಕೆಂಚನಗೌಡಾ ಪಾಟೀಲ, ಮುಂತಾದವರಿದ್ದರು. ಈ ಕಾರ್ಯಕರ್ತರು ತಮ್ಮ ತಮ್ಮ ಶಿಕ್ಷಣ ಮುಗಿಸಿಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಮರಳಿ ಹೋದರು. ೧೯೪೨ನೇ ಇಸ್ವಿಯಲ್ಲಿ ದ್ವಿತೀಯ ಪಥಕದ ಶಿಕ್ಷಣ ಪ್ರಾರಂಭವಾಯಿತು. ಈ ಪಥಕದಲ್ಲಿ ಶ್ರೀ. ಜಿ. ನಾರಾಯಣ (ಬೆಂಗಳೂರ ನಗರದ ಹಿಂದಿನ ಮೇಯರ ಮತ್ತು ಈಗಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ) ಅವರೂ ಇದ್ದರು. ಈ ಪ್ರ-ಶಿಕ್ಷಣ-ವಿದ್ಯಾಲಯದೊಳಗಿನ ವಿದ್ಯಾರ್ಥಿಗಳಿಗೆ ನಾನು ಗುಪ್ತ ರೀತಿಯಿಂದ ಹೋಗಿ ಭೆಟ್ಟಿಯಾಗಿ ಬರುತ್ತಿದ್ದೆನು. ವಿದ್ಯಾಲಯದಲ್ಲಿ ಬೌದ್ಧಿಕ ವರ್ಗ ತೆಗೆದುಕೊಳ್ಳುತ್ತಿದ್ದ ಶ್ರೀ ಪುಂಡಲೀಕಜೀ ಭೂಗತರಾಗಿದ್ದರು. ಅದ್ದರಿಂದ ಈ ವಿದ್ಯಾ ಲಯವನ್ನು ಮುಚ್ಚುವದು ಅನಿವಾರ್ಯವಾಗಿ ಬಂತು. ವಿದ್ಯಾರ್ಥಿಗಳು ತಮ್ಮ ತಮ್ಮ ಊರುಗಳಿಗೆ ಹೋಗಬೇಕಾಯಿತು. ವಿದ್ಯಾರ್ಥಿಗಳು ಊರಿಗೆ ಹೊರಡುವ ಸಿದ್ಧತೆಯಲ್ಲಿ ಇದ್ದರು. ಚಿ. ಸೋಮಲಿಂಗ ಮಳಗಲಿಯವರು ಈ ವಿದ್ಯಾಲಯದ ಎರಡನೆಯ ಪಥಕದ ಅಂದರೆ ಪ್ರಸ್ತುತ ಪಥಕದ ಸಂಚಾಲಕರಾಗಿದ್ದರು. ಅವರಿಗೆ ಈ ಪಥಕದ ಎಲ್ಲ ವಿದ್ಯಾರ್ಥಿಗಳು ತಮ್ಮ ತಮ್ಮ ಊರುಗಳಿಗೆ ಹೋಗದೇ ಹುದಲಿಯಿಂದಲೇ ಸೆರೆಮನೆಗೆ ಹೋಗಬೇಕೆಂದು ಅನಿಸುತ್ತಿತ್ತು. ಅದಕ್ಕಾಗಿ ಒಂದು ಯೋಜನೆಯನ್ನು

ಸಿದ್ಧಮಾಡುವವರಲ್ಲಿ ಇದ್ದರು. ಅಥವಾ ತಾನಾಗಿಯೇ ಅದು ಘಟಿಸುವಂತೆ ಯೋಜಿಸಲಾಗಿತ್ತು. ಆದರೆ ಎಲ್ಲಿಂದಲೋ ಈ ಸುದ್ದಿ ಹೊರಬಿದ್ದು ಅದು ವಿದ್ಯಾರ್ಥಿಗಳಿಗೆ ತಿಳಿಯಿತು. ತಮ್ಮ ತಮ್ಮ ಊರುಗಳಿಗೆ ಹೋಗಿ ಅಲ್ಲಿಂದಲೇ ಸೆರೆಮನೆಗೆ ಹೋಗಬೇಕೆಂದು ವಿದ್ಯಾರ್ಥಿಗಳು ವಿಚಾರ ಮಾಡಿದ್ದರು. ಆದ್ದರಿಂದ ಹುದಲಿಯ ಯೋಜನೆ ಕಾರ್ಯಾನ್ವಿತವಾಗುವ ಪೂರ್ವದಲ್ಲಿಯೇ ಈ ವಿದ್ಯಾರ್ಥಿಗಳು ಹುದಲಿಯಿಂದ ತೆಳಕಿತ್ತಿದರು. ಆದರೂ ಅವರಲ್ಲಿ ಶ್ರೀಮತಿ ಭವಾನಿಬಾಯಿ ಕಾನುಗೋ, ಶ್ರೀ ಸೋಮಲಿಂಗ ಮಳಗಲಿ. ಶ್ರೀ ಈರಪ್ಪಾ ಮಾವಿನಕಟ್ಟಿ. ಶ್ರೀ ಜಿ. ನಾರಾಯಣ ಅವರು ಎರಡನೇ ಸಲದ ಪ್ರಭಾತಫೇರಿಯಲ್ಲಿ ಭಾಗವಹಿಸಿ ಹುದಲಿಯಿಂದಲೇ ಸೆರೆಮನೆ ಸೇರಿದರು.

ಪ್ರಭಾತ ಫೇರಿ

ಪ್ರಭಾತ ಫೇರಿಯ ದಿನ ಗೊತ್ತಾಯಿತು. ಕಾರ್ಯಕರ್ತರು ಮೊದಲನೆಯ ದಿನವೇ ಊರಲ್ಲೆಲ್ಲ ತಿರುಗಾಡಿ ಪ್ರಭಾತ ಫೇರಿಯಲ್ಲಿ ಎಲ್ಲರೂ ಭಾಗವಹಿಸಬೇಕೆಂದು ಪ್ರಚಾರ ಮಾಡಿದ್ದರು. ಪೋಲೀಸರಿಗೂ ಇಂಥ ದಿವಸ ಪ್ರಭಾತ ಫೇರಿ ಆಗುತ್ತದೆಂಬ ಸುದ್ದಿ ತಿಳಿದಿತ್ತು. ಆದ್ದರಿಂದ ಪ್ರಭಾತ ಫೇರಿಯ ಮೊದಲನೆಯ ದಿವಸವೇ ಸಬ್ ಇನ್ಸಪೆಕ್ಟರ ಆಪಳೆ ಇವರು ಹತ್ತು ಹದಿನೈದು ಜನ ಪೋಲೀಸರೊಂದಿಗೆ ಬಂದಿದ್ದರು. ಶ್ರೀ ಬಿ. ಆರ್. ಪಾಟೀಲರು ಬೆಳಗಾವಿ ತಾಲೂಕಿನ ಬಡಸ ಗ್ರಾಮದವರು. ಆದರೆ ಅವರು ಚಿಕ್ಕಂದಿನಿಂದಲೂ ಹುದಲಿಯಲ್ಲಿ ಅವರ ಮಾವಂದಿರಾದ ಶ್ರೀ ಬಸನಗೌಡ ಪಾಟೀಲ ಅವರ ಮನೆಯಲ್ಲಿಯೇ ಇದ್ದರು. ಶ್ರೀ ಬಸನಗೌಡ ಪಾಟೀಲರು ಊರ ಪೋಲೀಸ ಪಾಟೀಲರು ಆದರೆ ತುಂಬಾ ರಾಷ್ಟ್ರೀಯ ವೃತ್ತಿಯವರು. ಕಾನೂನು ಪ್ರಕಾರ ಸರಕಾರೀ ಕೆಲಸವೆಷ್ಟೋ ಅಷ್ಟನ್ನು ಮಾತ್ರ ಅವರು ಮಾಡುತ್ತಿದ್ದರು. ಕಾನೂನಿನ ವ್ಯತಿರಿಕ್ತ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಇಷ್ಟೇ ಅಲ್ಲ ಆಂದೋಲನದ ಬಗ್ಗೆ, ಕಾರ್ಯಕರ್ತರ ಬಗ್ಗೆ ಅವರಿಗೆ ತುಂಬ ಸಹಾನುಭೂತಿ ಇತ್ತು. ಅವರು ಊರ ಪೋಲೀಸ ಪಾಟೀಲರಾದುದರಿಂದ ಪೋಲೀಸ ಮುಂತಾದವರು ಬಂದರೆ ಅವರ ಆತಿಥ್ಯ ಮಾಡಬೇಕಾಗುತ್ತಿತ್ತು. ಪೋಲೀಸರು ಸಹ ಯಾವ ಕೆಲಸವನ್ನೂ ಅವರನ್ನು ವಿಚಾರಿಸದೆ ಮಾಡುತ್ತಿರಲಿಲ್ಲ. ಅವರನ್ನು ಬಿಟ್ಟು ಕೆಲಸ ಮಾಡುವದು ಸಾಧ್ಯವೂ ಇರಲಿಲ್ಲ. ಆದುದರಿಂದ ಪೋಲೀಸರ ವಿಚಾರಗಳೆಲ್ಲ ಬಸನಗೌಡರಿಗೆ ಮುಂಚಿತವಾಗಿ ತಿಳಿಯುತ್ತಿದ್ದವು. ಅವರು ತುಂಬ ರಾಷ್ಟ್ರೀಯ ವೃತ್ತಿಯವರೂ ನಮ್ಮ ಹಾಗೂ ನಮ್ಮ ಕಾರ್ಯದ ಬಗ್ಗೆ ಸಹಾನುಭೂತಿಯುಳ್ಳವರೂ ಆದುದರಿಂದ ನಾವು ಸಹ ಯಾವ ಕಾರ್ಯವನ್ನೂ ಅವರಿಂದ ಮರೆ ಮಾಡುತ್ತಿರಲಿಲ್ಲ. ಇಬ್ಬರ ವಿಚಾರಗಳೂ ಅವರಿಗೆ ಮುಂಚಿತವಾಗಿ ಗೊತ್ತಾಗುತ್ತಿದ್ದುದರಿಂದ ಅವುಗಳ ಸಮನ್ವಯ ಮಾಡುವದು ಅವರಿಗೆ ಎಷ್ಟೋ ಸಲ ಕಷ್ಟವಾಗುತ್ತಿತ್ತು. ಆದರೂ ಅವರು ತಮ್ಮ ಚಾಣಾಕ್ಷ ಬುದ್ಧಿಯಿಂದ ಕಾರ್ಯಕರ್ತರ ಮೇಲೆ ಹಾಗೂ ಊರ ಮೇಲೆ ಬಂದ ಎಷ್ಟೋ ಸಂಕಟಗಳನ್ನು ಪಾರು

ಮಾಡಿದರು. ಇವರ ಮನೆಯಲ್ಲಿಯೇ ಶ್ರೀ ಬಿ. ಆರ್. ಪಾಟೀಲ ಇರುತ್ತಿದ್ದುದರಿಂದ ಅವರಿಗೂ ಪೋಲೀಸರಿಗೂ ಪರಿಚಯವಾಗುವದು ಸ್ವಾಭಾವಿಕವಿತ್ತು. ಪ್ರಭಾತ ಫೇರಿಯ ಮೊದಲನೆಯ ದಿವಸ ರಾತ್ರಿ ಪೋಲೀಸರ ಹೇಳಿಕೆಯಂತೆ ಪೋಲೀಸ ಪಾಟೀಲರು ಪ್ರಭಾತ ಫೇರಿಯಲ್ಲಿ ಯಾರೂ ಭಾಗವಹಿಸಬಾರದು. ಭಾಗವಹಿಸಿದರೆ ಅವರನ್ನು ಬಂಧಿಸಿ ಶಿಕ್ಷೆ ವಿಧಿಸಲಾಗುವದು ಎಂದು ಊರಲ್ಲಿ ಡಂಗುರ ಸಾರಿಸಿದರು. ಕಾರ್ಯ ಕರ್ತರೂ ಅಂದೇ ಊರಲ್ಲಿ ತಿರುಗಾಡಿ ಪ್ರಭಾತ ಫೇರಿಯಲ್ಲಿ ಎಲ್ಲರೂ ಭಾಗ ತೆಗೆದು ಕೊಳ್ಳಬೇಕು ಎಂದು ಹೇಳಿ ಬಂದರು. ಆದುದರಿಂದ ಇದು ಸರಕಾರದ ಮತ್ತು ಕಾರ್ಯಕರ್ತರ ಶಕ್ತಿಗಳ ಬಲಾಬಲದ ಒಂದು ಪ್ರಕಾರದ ಪರೀಕ್ಷೆಯೇ ಆಗಿತ್ತು. ಕಾರ್ಯ ಕರ್ತರೂ ಪ್ರಭಾತ ಫೇರಿಯ ಸಿದ್ಧತೆಯಲ್ಲಿ ತೊಡಗಿದರು.

ಪೋಲಿಸರು ದಂಗು ಬಡಿದರು

ಹುದಲಿಯಲ್ಲಿ ಆ ಕಾಲಕ್ಕೆ ಸೇವಾದಲವಿತ್ತು. ಅವರು ಡ್ರಮ್, ಡೊಳ್ಳು ಬಾರಿಸುವದನ್ನು ಕಲಿತಿದ್ದರು. ರಾಷ್ಟ್ರೀಯ ಆಂದೋಲನದ ದಿನಗಳಲ್ಲಿ ಅವನ್ನು ಬಾರಿಸುತ್ತಾ ಊರಲ್ಲಿ ಫೇರಿ ತೆಗೆಯಲಾಗುತ್ತಿತ್ತು. ಇದರ ನಾಯಕರು ಶ್ರೀ ಬಿ. ಆರ್. ಪಾಟೀಲರು. ಪ್ರಭಾತ ಫೇರಿಯ ದಿವಸ ಬೆಳಗಿನ ೮ ಘಂಟೆಗೆ ಡ್ರಮ್, ಡೊಳ್ಳ, ಬಾರಿಸುತ್ತಾ ಫೇರಿ ಹೊರಟಿತು. ಮೊದಲನೆಯ ದಿವಸ ಸರಕಾರ ಪ್ರಭಾತ ಫೇರಿಯಲ್ಲಿ ಯಾರೂ ಭಾಗವಹಿಸಬಾರದೆಂದೂ. ಭಾಗ ವಹಿಸಿದರೆ ಅವರಿಗೆ ದಂಡ, ಶಿಕ್ಷೆ ವಿಧಿಸ ಲಾಗುವದೆಂದೂ ಡಂಗುರ ಸಾರಿದ್ದರೂ ಅದರಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಶ್ರೀ ಬಿ. ಆರ್. ಪಾಟೀಲರೂ ಅದರಲ್ಲಿ ಭಾಗ ತೆಗೆದುಕೊಂಡಿದ್ದರು. ಪ್ರಭಾತ ಫೇರಿ ಊರಲ್ಲೆಲ್ಲ ಸುತ್ತಾಡಿ ಝೇಂಡಾ ಚೌಕಿಗೆ ಬಂದು ಅಲ್ಲಿ ಝೇಂಡಾ ವಂದನೆ ಆಯಿತು. ಪೋಲೀಸರೂ ಫೇರಿಯ ಜೊತೆಗೆ ವ್ಯವಸ್ಥೆಗೆಂದು ಇದ್ದರು. ಫೇರಿಯು ಅತ್ಯಂತ ವ್ಯವಸ್ಥಿತ ರೀತಿಯಿಂದ ನಡೆದದ್ದರಿಂದ ಪೋಲೀಸರಿಗೆ ವ್ಯವಸ್ಥೆ ಮಾಡುವ ಪ್ರಸಂಗವೇ ಬರಲಿಲ್ಲ. ಫೇರಿ ಹಾಗೂ ಝೇಂಡಾ ವಂದನ ಮುಗಿದು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋದರು. ಪೋಲೀಸರೂ ತಮ್ಮ ಠಾಣೆಗೆ ಹೋದರು. ಯಾವ ಗದ್ದಲವೂ ಇಲ್ಲದೆ ಶಾಂತ ರೀತಿಯಿಂದ ಕಾರ್ಯಕ್ರಮ ಮುಗಿಯಿತೆಂದು ನಾವು ಸಮಾಧಾನಪಟ್ಟೆವು. ಪ್ರಭಾತ ಫೇರಿಯ ದಿವಸ ನಾನು ಅದರಲ್ಲಿ ಭಾಗ ತೆಗೆದುಕೊಳ್ಳ ದಿದ್ದರೂ ಅಂದು ನಾನು ಹುದಲಿಯಲ್ಲಿಯೇ ಗುಪ್ತವಾಗಿ ಇದ್ದೆನು.

ಬಂಧನ ಸತ್ರ

ಮೊದಲನೆಯ ಪ್ರಭಾತ ಫೇರಿಯಲ್ಲಿ ಯಾರೂ ಭಾಗ ವಹಿಸಬಾರದು, ಭಾಗ ವಹಿಸಿದರೆ ಶಿಕ್ಷೆಯಾಗುವದೆಂದು ಡಂಗುರ ಸಾರಿದ್ದರೂ ಇಷ್ಟೊಂದು ಜನ ಫೇರಿಯಲ್ಲಿ ಭಾಗವಹಿಸಿದುದನ್ನು ನೋಡಿ ಅವರು ದಂಗುಬಡಿದರು. ಪ್ರಭಾತ ಫೇರಿಯ ಆಗಲಿಕ್ಕಿಲ್ಲ;

ಆದರೂ ಅದರಲ್ಲಿ ಹೆಚ್ಚಾಗಿ ಜನರು ಭಾಗ ವಹಿಸದೇ ನಾಲ್ಕಾರು ಜನರು ಮಾತ್ರ ಕಾರ್ಯಕ್ರಮ ಮಾಡಬಹುದು. ಅವರನ್ನು ಸಹಜವಾಗಿ ಬಂಧಿಸಿಕೊಂಡು ಹೋದರೆ ಆಯಿತು ಎಂದು ಪೋಲೀಸರು ವಿಚಾರ ಮಾಡಿದ್ದರು. ಆದರೆ ಸಾವಿರಾರು ಜನರು ಅದರಲ್ಲಿ ಭಾಗವಹಿಸಿದುದರಿಂದ ಅವರು ಗೊಂದಲದಲ್ಲಿ ಬಿದ್ದರು. ಇದರಲ್ಲಿ ಯಾರನ್ನು ಹಿಡಿಯಬೇಕು, ಯಾರನ್ನು ಬಿಡಬೇಕು ಎಂಬ ವಿಚಾರ ನಡೆಯಿತು. ಎಲ್ಲರನ್ನು ಹಿಡಿಯುವದು ಸಾಧ್ಯವಿರಲಿಲ್ಲ. ಇಷ್ಟೊಂದು ಜನ ಕಾನೂನುಭಂಗ ಮಾಡಿರಲಿಕ್ಕೆ ಯಾರನ್ನೂ ಹಿಡಿಯದೇ ಹಾಗೆಯೇ ಬಿಡುವಂತೆಯೂ ಇರಲಿಲ್ಲ. ಆದುದರಿಂದ ಅವರೊಂದು ಯುಕ್ತಿಯನ್ನು ಹೂಡಿದರು. ಇದರಲ್ಲಿ ಪ್ರಮುಖರಾದ ೧೦-೧೫ ಜನರನ್ನು ಮಾತ್ರ ಬಂಧಿಸಬೇಕೆಂದು ನಿಶ್ಚಯಿಸಿದರು. ೧) ಶ್ರೀ ಗಂಗಪ್ಪ ಬ. ಯಮಕನಮರ್ಡಿ ೨) ವಾಸುದೇವ ನಾಗಪ್ಪ ಕದಮ ೩) ಚನಬಸಪ್ಪ ಮ. ಮಾಳಗಿ ೪) ಬಸಪ್ಪ ಬಾಳಪ್ಪ ಕೊಂತಿ ೫) ಸಿದರಾಯಪ್ಪ ಸೊ. ಥೈಕಾರ ೬) ಮಲ್ಲಪ್ಪ ಕ. ಹೆದನಾಯ್ಕ ೭) ಬಸಪ್ಪ ಗೌಡಪ್ಪ ಭದ್ರಕಾಳಿ ೮) ತಿಪ್ಪಣ್ಣ ಯ. ಬೆಟಗೇರಿ ೯) ವಸಂತ ಗೋಪಾಳ ದೇಶಪಾಂಡೆ ೧೦) ನಾರಾಯಣ ಬಂಡೋ ದೇಶಪಾಂಡೆ ೧೧) ಗೌಡಪ್ಪ ಚನ್ನಪ್ಪ ಭದ್ರಕಾಳಿ ೧೨) ಮಾನಪ್ಪ ಶಿವಲಿಂಗಪ್ಪ ವಾರೀಮನಿ ೧೩) ಬಂಡೋ ಅಪ್ಪಾರಾವ ದೇಶಪಾಂಡೆ ೧೪) ಅಪ್ಪಣ್ಣ ಮರಲಿಂಗಣ್ಣನವರ ಇಷ್ಟು ಜನರನ್ನು ಮಾತ್ರ ಬಂಧಿಸಿ ತಂದು ಚಾವಡಿಯಲ್ಲಿ ಕುಳ್ಳಿರಿಸಿದರು. ಇನ್ನೂ ಅನೇಕರನ್ನು ಬಂಧಿಸಬಹುದೆಂದು ಜನರು ತಿಳಿದಿದ್ದರು. ಆದರೆ ರಾತ್ರಿಯ ಗಾಡಿಗೆ ಪೋಲೀಸರು ಇವರನ್ನಷ್ಟೇ ಕರೆದುಕೊಂಡು ಬೆಳಗಾವಿಗೆ ಹೋದರು. ಈ ಸಂದರ್ಭದಲ್ಲಿ ಒಂದು ಮಾತು ಲಕ್ಷದಲ್ಲಿಡುವಂಥದಾಗಿದೆ. ಪೋಲೀಸರ ಸಹಾಯಕ್ಕೆ ಸೈನಿಕರ ನೆರವು ಹುದಲಿಗೆ ಬಂದು ಮುಟ್ಟಿದ ನಂತರವೇ ಪೋಲೀಸರು ಸತ್ಯಾಗ್ರಹಿಗಳನ್ನು ಬಂಧಿಸತೊಡಗಿದರು.

ಶ್ರೀ. ಬಿ. ಆರ್. ಪಾಟೀಲ

ಶ್ರೀ ಬಿ. ಆರ್. ಪಾಟೀಲರು ವಯಸ್ಸಿನಿಂದ ಎಲ್ಲರಿಗಿಂತಲೂ ಚಿಕ್ಕವರು. ಇವರು ಇನ್ನೂ ವಿದ್ಯಾರ್ಥಿ ದೆಶೆಯಲ್ಲಿ ಇದ್ದಾಗಲೇ ನಮ್ಮ ಸಹವಾಸದಲ್ಲಿ ಬಂದರು. ಇವರಿಗೆ ವ್ಯಾಯಾಮದಲ್ಲಿ ಹೆಚ್ಚು ಅಭಿರುಚಿ. ಆದುದರಿಂದ ಶ್ರೀ ಪುಂಡಲೀಕಜಿ ಯವರು ಇವರನ್ನು ವ್ಯಾಯಾಮ ಶಿಕ್ಷಣಕ್ಕಾಗಿ ಅಮರಾವತಿಗೆ ಕಳಿಸಿದರು. ಶಿಕ್ಷಣ ಪಡೆದು ಬಂದಮೇಲೆ ಇವರು ಹುದಲಿಯಲ್ಲಿ ಸೇವಾದಲ ಪ್ರಾರಂಭ ಮಾಡಿದರು. ತರುಣ ಸಂಘ ಮತ್ತು ಸೇವಾದಲದ ಹುಡುಗರಿಗೆ ವ್ಯಾಯಾಮ – ಡ್ರಿಲ್ – ಲಾಠಿ – ಲೇಝಿಮ್ ಹಾಗೂ ಡ್ರಮ್, ಡೊಳ್ಳು — ಬಾರಿಸುವದನ್ನು ಕಲಿಸಿ ತರಬೇತು ಮಾಡಿದರು. ಇವರು ೧೯೪೨ನೇ ಇಸ್ವಿಯ ಆಂದೋಲನದಲ್ಲಿ ಅತ್ಯಂತ ಧೈರ್ಯ – ಸಾಹಸಗಳಿಂದ ಹೋರಾಡಿ, ಅನೇಕ ಕಠಿಣ ಕಾರ್ಯ ಮಾಡಿದರು. ಅದನ್ನು ವಾಚಕರು ಮುಂದೆ ನೋಡಬಹುದು.

ಇದೇ ಕಾಲಕ್ಕೆ ಶ್ರೀ ಬಿ. ಆರ್. ಪಾಟೀಲರ ವಯಸ್ಸಿನ ವಾಸುದೇವ ಕದಮ, ಭೀಮಪ್ಪ ಭೂಸೆ, ನಿಂಗಪ್ಪ ತುಕ್ಕರ, ಗಂಗಪ್ಪ ಮಾಳಗಿ, ಮೊದಲಾದ ಅನೇಕ ತರುಣರು ಸಾರ್ವಜನಿಕ ಕೆಲಸದಲ್ಲಿ ಕಾಲಿಟ್ಟರು, ಹಾಗೂ ರಾಷ್ಟ್ರೀಯ ಆಂದೋಲನದಲ್ಲಿ ಸೇರಿ ಕೆಲಸ ಮಾಡತೊಡಗಿದರು.

ಶ್ರೀ ಬಿ. ಆರ್. ಪಾಟೀಲರ ಮೇಲೆ ಫಿತೂರಿ ಆರೋಪ

ಪೋಲೀಸರು ಹೆಚ್ಚು ಜನರನ್ನು ಒಡಿಯಲಿಲ್ಲ. ಅಲ್ಲದೆ ಯಾರು ಪ್ರಾಮುಖ್ಯವಾಗಿ ಫೇರಿಯಲ್ಲಿ ಭಾಗವಹಿಸಿದ್ದರೊ ಅವರನ್ನು ಹಿಡಿಯಲಿಲ್ಲ. ಮುಖ್ಯವಾಗಿ ಬಿ. ಆರ್. ಪಾಟೀಲರು ಡ್ರಮ್-ಡೊಳ್ಳು ಬಾರಿಸುತ್ತ ಫೇರಿಯಲ್ಲಿ ಅಗ್ರಭಾಗ ವಹಿಸಿದ್ದರು. ಅವರನ್ನೇಕೆ ಹಿಡಿಯಲಿಲ್ಲಾ? ಕೆಲವು ಊರ ಪಂಚರ ಮಕ್ಕಳೂ ಫೇರಿಯಲ್ಲಿದ್ದರೂ ಅವರನ್ನೂ ಬಂಧಿಸಲಿಲ್ಲ. ಇದರ ಪರಿಣಾಮ ಹೀಗಾಯಿತು :— ಬಿ. ಆರ್. ಪಾಟೀಲ ಹಾಗೂ ಅವರ ಮಾವಂದಿರು – ಪೋಲೀಸ ಪಾಟೀಲರು – ಕೂಡಿ ತಮಗೆ ಬೇಡವಾದವರ ಹೆಸರುಗಳನ್ನು ಮಾತ್ರ ಪೋಲೀಸರಿಗೆ ಕೊಟ್ಟು ಹಿಡಿಸಿದ್ದಾರೆ. ಪೋಲೀಸರಿಗೆ ಫಿತೂರಿ ಆಗಿದ್ದಾರೆ ಎಂದು ಊರಲ್ಲಿ ಜನರು ಮಾತನಾಡತೊಡಗಿದರು. ಹಳ್ಳಿಗಳಲ್ಲಿ ಕೆಲಸಮಾಡುವದು ವಿಶೇಷವಾಗಿ ಇಂಥ ಆಂದೋಲನದ ಕಾಲದಲ್ಲಿ ಕೆಲಸಮಾಡುವದು ಬಹಳೇ ಕಠಿಣ. ನಮ್ಮ ಮಾತಿನಲ್ಲಾಗಲಿ, ಕೃತಿಯಲ್ಲಾಗಲಿ, ಒಂದು ಹೆಜ್ಜೆ ತಪ್ಪಿದರೆ ಸಾಕು. ಇಡಿ ಕೆಲಸವೇ ಕೆಟ್ಟು ಹೋಗುತ್ತದೆ. ಇಷ್ಟೇ ಅಲ್ಲ ಅದರ ವಿಪರೀತ ಪರಿಣಾಮವಾಗುವ ಸಂಭವವೂ ಇರುತ್ತದೆ. ನಾವು ಯಾವ ಕಾರ್ಯವನ್ನೂ ಬುದ್ಧಿ ಪುರಸ್ಸರವಾಗಿ ಮಾಡದಿದ್ದರೂ, ಸ್ವಲ್ಪ ಸಂಶಯಾಸ್ಪದ ರೀತಿಯಲ್ಲಿ ವರ್ತಿಸಿದರೂ ಅನಾಹುತಗಳಾಗುವ ಸಂಭವವಿರುತ್ತದೆ. ಆದುದರಿಂದ ಗ್ರಾಮಸೇವಕರು ಬಹಳ ಜಾಗರೂಗಕತೆಯಿಂದ ವರ್ತಿಸಬೇಕಾಗುತ್ತದೆ. ಆಂದೋಲನದ ಸಮಯದಲ್ಲಿ ಪೋಲೀಸರೂ ಸಹ ಇಂಥ ಕುಚೋದ್ಯಮಾಡಿ, ಕಾರ್ಯಕರ್ತರಲ್ಲಿ ಮತ್ತು ಜನರಲ್ಲಿ ಒಡಕು ಹುಟ್ಟಿಸುವ ಪ್ರಯತ್ನ ಮಾಡುತ್ತಾರೆ. ಅಂತಹದೇ ಇದೊಂದು ಘಟನೆ ನಡೆಯಿತು. ಪೋಲೀಸರು ಕೆಲವರನ್ನೇ ಹಿಡಿದು ಇತರರನ್ನು ಬಿಟ್ಟುದರಿಂದ ಊರಲ್ಲಿ ಒಡಕುಂಟಾಗಿ ಎಲ್ಲಿ ಎರಡು ಬಣಗಳಾಗುತ್ತವೆಯೋ ಏನೋ ಎಂಬ ಭೀತಿ ಉಂಟಾಯಿತು; ಮುಂದಿನ ಕಾರ್ಯವೆಲ್ಲಾ ಎಲ್ಲಿ ಕೆಟ್ಟು ಹೋಗುತ್ತದೆಯೋ ಎಂದು ವಿವಂಚನೆಗೊಳಗಾದೆ ನಾನು. ಊರೊಳಗಿನ ಜನರು ಬಂದು ಶ್ರೀ ಬಿ. ಆರ್. ಪಾಟೀಲರ ವಿರುದ್ಧ ದೂರುಗಳನ್ನು ಹೇಳತೊಡಗಿದರು. ಕೆಲವರಂತೂ ನನಗೆ "ಬಿ. ಆರ್. ಪಾಟೀಲರನ್ನು ಭೆಟ್ಟಿಯಾಗಬೇಡಿರಿ. ಆತ, ನಿಮ್ಮನ್ನು ಹಿಡಿದುಕೊಡುತ್ತಾನ" ಎಂದು ಎಚ್ಚರಿಕೆಯನ್ನು ಕೊಡಹತ್ತಿದರು. ನಾನೇನೂ ಅತ್ತ ಕಡೆಗೆ ಲಕ್ಷ್ಯ ಕೊಡಲಿಲ್ಲ. ಹೀಗೆ ನಾಲ್ಕೆಂಟು ದಿವಸ ಕಳೆದವು. ಒಂದು ದಿವಸ ಶ್ರೀ ಬಿ. ಆರ್. ಪಾಟೀಲರು ತಾವಾಗಿ ನನ್ನ ಬಳಿಗೆ ಬಂದರು. ತಮ್ಮ ಮೇಲೆ ಬಂದ ಆರೋಪ

ಕ್ಕಾಗಿ ಬಹಳ ನೊಂದವರಾಗಿದ್ದರು. "ನಮ್ಮ ಮಾಮಂದಿರು–ಪೋಲೀಸ ಪಾಟೀಲರು–ಇನ್ನೂ ಅನೇಕ ಹೆಸರುಗಳನ್ನು ವಿಶೇಷವಾಗಿ ತರುಣ ಸಂಘದ ಎಲ್ಲ ಹುಡುಗರ ಹೆಸರುಗಳನ್ನು ಪೋಲೀಸರಿಗೆ ಕೊಟ್ಟಿದ್ದು ಅವರಲ್ಲಿ ನನ್ನ ಹೆಸರೂ ಇತ್ತು. ಆದರೆ ಪೋಲೀಸರು ಅವುಗಳಲ್ಲಿ ಆರಿಸಿ ತಮಗೆ ಬೇಕಾದವರನ್ನು ಮಾತ್ರ ಬಂಧಿಸಿದರು. ಇದರಲ್ಲಿ ನಾನು ನಿರ್ದೋಷಿ ಇದ್ದೇನೆ. ಹೀಗಿದ್ದರೂ ಪೋಲೀಸರಿಗೆ ನಾನು ಫಿತೂರಿ ಆಗಿದ್ದೇನೆಂದು ಜನರು ಅನ್ನುತ್ತಾರೆ. ಇದಕ್ಕೆ ನಾನೇನು ಮಾಡಬೇಕು?" ಎಂದು ಶ್ರೀ ಬಿ. ಆರ್. ಪಾಟೀಲರು ನನ್ನನ್ನು ಕೇಳಿದರು. ಇಂತಹ ಪರಿಸ್ಥಿತಿಯಲ್ಲಿ ಜನರ ಬಾಯಿ ಹಿಡಿಯುವದು ಕಷ್ಟ. ಅದರಲ್ಲಿ ಇಂತಹ ಹೊತ್ತಿನಲ್ಲಿ ಜನರಿಗೆ ತಿಳಿಸಿಹೇಳಿ ಅವರ ವಿಚಾರ ಬದಲಿಸುವದು ಇನ್ನೂ ಕಷ್ಟತರವಾದುದು. ತಪ್ಪು ತಿಳುವಳಿಕೆ ದೂರ ಮಾಡುತ್ತ ಹೋದಂತೆ ಅದು ಅತ್ಯಂತ ಭರದಿಂದ ಬೆಳೆಯುತ್ತಲೇ ಹೋಗುತ್ತದೆ. ಆದುದರಿಂದ ನೀನು ಕೆಲಸಮಾಡಿ ತೋರಿಸು. ಅಂದರೆ ಜನರಿಗೆ ನಿಜಾಂಶ ಗೊತ್ತಾಗುತ್ತದೆ. ಈಗ ನಿನ್ನನ್ನು ದೂಷಿಸುವವರು ತಾವು ನಿನ್ನ ಸಲುವಾಗಿ ಆಡಿದ್ದು ತಪ್ಪು ಎಂದು ಅವರಿಗೆ ಆಗ ಅನಿಸುವದು" ಎಂದು ನಾನು ಹೇಳಿದೆ. ಆರೀತಿ ಅವರು ಕೆಲಸ ಮಾಡಿದರು. ಇದರಿಂದ ಅವರ ಮೇಲಿನ ಆರೋಪ ಹೇಗೆ ನಿರಾಧಾರವಾಗಿತ್ತೆಂದು ಗೊತ್ತಾಗುತ್ತದೆ. ಅವರು "ನಾನು ಈಗೇನು ಮಾಡಬೇಕು? ನೀವು ಹೇಳಿದಂತೆ ಮಾಡಲು ನಾನು ಸಿದ್ಧ. ಯಾವುದಾದರೂ ಕಾರ್ಯಕ್ರಮ ಮಾಡಿ ಸೆರೆಮನೆಗೆ ಹೋಗೆಂದರೂ ನಾನು ಹೋಗುತ್ತೇನೆ. ಅಥವಾ ಹೊರಗೆ ನಿಂತು ನಿಮ್ಮ ಸಂಗಡ ಕೆಲಸಮಾಡು ಎಂದು ಹೇಳಿದರೆ ಹಾಗೂ ಮಾಡುತ್ತೇನೆ" ಎಂದು ನುಡಿದರು. ಸ್ವಲ್ಪ ಹೊತ್ತು ವಿಚಾರ ಮಾಡಿ "ನೀನು ಹೊರಗೆ ಇದ್ದು ಕೆಲಸ ಮಾಡು. ಈಗಲೇ ಕಾರ್ಯಕ್ರಮ ಮಾಡಿ ಜೇಲಿಗೆ ಹೋಗುವದು ಬೇಡ" ಎಂದೆ. ಏಕೆಂದರೆ ನಾನು ಹೊರಗೆ ನಿಂತು ಕೆಲಸಮಾಡುವವನಿದ್ದೆ. ಆದುದರಿಂದ ನನಗೆ ಯಾರಾದರೂ ಕರ್ತೃತ್ವ ಶಕ್ತಿಯುಳ್ಳ ವಿಶ್ವಾಸಿಕ ಕಾರ್ಯಕರ್ತರು ಬೇಕಾಗಿದ್ದರು. "ಯಾವುದಾದರೂ ಕಾರ್ಯಕ್ರಮ ಮಾಡಿ ಈಗಲೇ ಸೆರೆಮನೆಗೆ ಹೋಗುವದಕ್ಕಿಂತ ಹೊರಗೆ ಇದ್ದು ಕೆಲಸ ಮಾಡೋಣ. ಕಾರಾಗ್ರಹವಾಸ ತಾನೇ ಬಂದಾಗ ಬರಲಿ" ಎಂದು ನಾನು ಶ್ರೀ ಬಿ. ಆರ್. ಪಾಟೀಲರಿಗೆ ಹೇಳಿದೆ. ಅವರು ಅದನ್ನು ಮಾನ್ಯಮಾಡಿದರು. ಧೈರ್ಯದ ಕೆಲಸಗಳನ್ನು ಮಾಡಿ ತಮ್ಮ ಮೇಲಿನ ಆರೋಪಗಳು ಹೇಗೆ ನಿರಾಧಾರವಾಗಿದ್ದವೆಂದು ಪಾಟೀಲರು ಸಿದ್ಧಮಾಡಿ ತೋರಿಸಿದರು. ಈ ರೀತಿ ಊರಲ್ಲಿ ಉಂಟಾಗ ಬಹುದಾಗಿದ್ದ ಒಡಕು ದೂರಾಯಿತು.

ಹಳೆ ಹೊಸ ವಿಚಾರಗಳ ತಾಕಲಾಟ

೧೯೩೦ ಹಾಗೂ ೧೯೩೨ರ ಆಂದೋಲನಗಳಲ್ಲಿ ಯಾವುದಾದರೊಂದು ಕಾನೂನನ್ನು ಬಹಿರಂಗವಾಗಿ ಭಂಗಮಾಡಿ ಸೆರೆಮನೆಗೆ ಹೋಗುವದು ಮಾತ್ರ ಇತ್ತು.

ಅವುಗಳಲ್ಲಿ ವಿಧ್ವಂಸಕ ಕೃತ್ಯಗಳಾವವೂ ಇರಲಿಲ್ಲ. ಈ "ಕ್ವಿಟ್ ಇಂಡಿಯಾ" ಚಳವಳಿಯಲ್ಲಿ ಮನುಷ್ಯ ಹಿಂಸೆಯೊಂದನ್ನು ಬಿಟ್ಟು ಇತರ ಎಂದರೆ ತಂತಿ ಕಡಿಯುವದು, ರೈಲು ಕಂಬಿ ಕಿತ್ತುವದು. ಸರಕಾರಿ ಕಟ್ಟಡ ಸುಡುವದು, ಸರಕಾರಿ ಕಾಗದ–ಪತ್ರ ಸುಡುವದು ಮುಂತಾದ ವಿಧ್ವಂಸಕ ಕೃತ್ಯಗಳು ಒಳಗೊಳ್ಳುತ್ತವೆಂದು ಸುದ್ದಿಯಾಗಿತ್ತು. ಗಾಂಧೀಜಿಯವರು ಬಂಧಿತರಾಗುವ ಪೂರ್ವದಲ್ಲಿ ಈ ಎಲ್ಲ ಕಾರ್ಯಕ್ರಮಗಳನ್ನು ಅವರೇ ಬರೆದಿಟ್ಟಿದ್ದಾರೆಂದೂ ಮಾತಾಡುತ್ತಿದ್ದರು. ನಾನು ಇತಿಮಿತಿಯಲ್ಲಿ ಬಿದ್ದೆ. "ಗಾಂಧೀಜಿಯವರ ಸತ್ಯಾಗ್ರಹದಲ್ಲಿ ಇವು ಒಳಗೊಳ್ಳುತ್ತವೆಯೆ? ಗಾಂಧೀಜಿ ಸ್ವತಃ ಈ ರೀತಿ ಬರೆದಿಡುವದು ಸಾಧ್ಯವೇ?" ಎಂದು ವಿಚಾರದ ಗೊಂದಲದಲ್ಲಿ ಬಿದ್ದೆನು. ಯಾರನ್ನಾದರೂ ಕೇಳಿ ವಿಚಾರ ಮಾಡಬೇಕೆಂದರೆ ಅಂಥವರು ಯಾರೂ ಹತ್ತಿರ ಇರಲಿಲ್ಲ. ಶ್ರೀ ದಿವಾಕರಜೀಯವರು ಭೂಗತರಾಗಿ ಹೊರಗಿದ್ದು, ಕೆಲಸ ಮಾಡುತ್ತಿದ್ದಾರೆಂದು ಕೇಳಿದ್ದೆ. ಆದರೆ ಅವರ ವಿಳಾಸ ಅಂದರೆ ಅವರೆಲ್ಲಿ ಇರುತ್ತಾರೆಂಬುದನ್ನು ತಿಳಿದುಕೊಂಡು ಅವರನ್ನು ಭೆಟ್ಟಿಯಾಗುವದು ಕಠಿಣ ಕೆಲಸವಾಗಿತ್ತು. ಗು. ಗಂಗಾಧರರಾಯರು, ಶ್ರೀ ನಾರಾಯಣರಾವ್ ಜೋಶಿ ಮೊದಲಾದವರು ಸೆರೆಮನೆಯಲ್ಲಿದ್ದರು. ಆದರೆ ದಿನಾಲು ಅಲ್ಲಿ ತಂತಿ ಕಡಿದರು. ರೈಲುಕಂಬಿ ಕಿತ್ತಿದರು, ಕಚೇರಿ ಸುಟ್ಟರು ಮುಂತಾದ ವೃತ್ತಗಳನ್ನು ಕೇಳುತ್ತಿದ್ದವು, ಆದರೆ ಏನು ಮಾಡಬೇಕೆಂಬುದು ತಿಳಿಯದೆ ನಾನು ಈ ವಿಚಾರಗಳ ತಾಕಲಾಟದಲ್ಲಿ ಬಿದ್ದೆನು.

ಅಖಿಲ–ಭಾರತ ಗುಪ್ತ ಸಂಘಟನೆ

ಗಾಂಧೀಜೀ ಮತ್ತು ಇತರ ಮುಂದಾಳುಗಳನ್ನು ಒಮ್ಮಿಂದೊಮ್ಮೆಲೇ ಬಂಧಿಸಿದ ಸುದ್ದಿಯನ್ನು ಕೇಳಿದ ಕೂಡಲೇ ಜನರು ಅಲ್ಲಲ್ಲಿ ದೊಂಬಿ ಹಾಕತೊಡಗಿದ್ದರು. ಆದರೆ ಮುಂದೆ ಕೆಲವೇ ದಿವಸಗಳಲ್ಲಿ ಈ ದೊಂಬಿ ನಿಂತು ಅಖಿಲ ಭಾರತ ಗುಪ್ತಸಂಘಟನೆ ರೂಪುಗೊಂಡಿತು. ಅದರ ಮಾರ್ಗದರ್ಶನದಲ್ಲಿ ವ್ಯವಸ್ಥಿತವಾಗಿ ಯೋಜನಾಬದ್ಧ ಕಾರ್ಯಕ್ರಮಗಳು ಪ್ರಾರಂಭವಾದವು. ಕಾಂಗ್ರೆಸ ಕಾರ್ಯಕ್ರಮಗಳ ಸುದ್ದಿಯನ್ನು ವರ್ತಮಾನ ಪತ್ರಗಳಲ್ಲಿ ಪ್ರಕಟಿಸಬಾರದೆಂದು ಸರಕಾರೀ ಆಜ್ಞೆ ಹೊರಟಿತ್ತು. ಆದುದರಿಂದ ದೇಶದಲ್ಲಿ ಎಲ್ಲಿ ಏನು ನಡೆದಿದೆ? ಎಂಬುದು ತಿಳಿಯುವದು ಸಾಧ್ಯವಿರಲಿಲ್ಲ. ಆದರೆ ಸರಕಾರವು ಅಪೇಕ್ಷಿಸಿದ ಪರಿಣಾಮ ಅದರಿಂದ ಸಾಧ್ಯವಾಗದೆ ತದ್ವಿರುದ್ಧ ಪರಿಣಾಮವಾಗಹತ್ತಿತು. ಪ್ರತ್ಯಕ್ಷ ಸಂಭವಿಸಿ ಅಥವಾ ಎಷ್ಟೋ ಸಂಭವಿಸದೆ ಇದ್ದ ಘಟನೆಗಳ ಅತಿರಂಜಿತ ಸುದ್ದಿಗಳು ಕರ್ಣೋಪಕರ್ಣವಾಗಿ ಕೇಳಲಿಕ್ಕೆ ದೊರೆಯುತ್ತಿದ್ದವು. ಆ ಸುದ್ದಿಗಳು ಅಸತ್ಯವಾದವುಗಳೋ ಅತಿಶಯೋಕ್ತಿಯಿಂದ ಕೂಡಿದುವೋ ಎಂಬುದನ್ನು ನಿಶ್ಚಯಿಸಲು ಆಧಾರವೇ ಇರಲಿಲ್ಲ. ದೇಶದೊಳಗಿನ ಪ್ರಕ್ಷೋಭ ಮತ್ತು ಚಳವಳಿ ಬೆಳೆಯುವದರಲ್ಲಿಯೇ ಅದರ ಪರ್ಯವಸಾನವಾಯಿತು. 'ಅಖಿಲ ಭಾರತ ಗುಪ್ತ ಸಂಘಟನೆಯಿಂದ' ಎಂದು ಹೇಳಿ ಎಲ್ಲಿಂದಲೋ ಒಂದು ಗುಪ್ತ ರೇಡಿಯೊ ಕೇಂದ್ರದಿಂದ

ದೇಶದೊಳಗೆ ನಡೆಯುತ್ತಿರುವ ವಿಧ್ವಂಸಕ ಕಾರ್ಯಕ್ರಮಗಳ ಸುದ್ದಿ ಬರುತ್ತಿದ್ದವು. ಇಂಥ ದಿವಸ ಇಂಥ ಕಾರ್ಯಕ್ರಮ ನಿಶ್ಚಯ ಮಾಡಲಾಗಿದೆ ಎಂದೂ "ಬುಲೆಟಿನ" ಮುಖಾಂತರ ತಿಳಿಸಲಾಗುತ್ತಿತ್ತು. ಈ ಗುಪ್ತ ಸಂಘಟನೆಯಲ್ಲಿ ಕಾಂಗ್ರೆಸ ಮತ್ತು ಸೋಸಿಯಾಲಿಸ್ಟ ಪಕ್ಷಗಳ ಜನರು ಇದ್ದರು. ಶ್ರೀ ರಂಗರಾವ್ ದಿವಾಕರರು ಮತ್ತು ಕರಮರಕರರು ಇಬ್ಬರೂ ಭೂಗತರಾಗಿ ಮುಂಬೈಯಲ್ಲಿದ್ದು. ಈ ಗುಪ್ತ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದಾರೆಂಬ ಸಂಗತಿ ಕರ್ನಾಟಕದಲ್ಲಿ ಎಲ್ಲರಿಗೂ ಗೊತ್ತಿದ್ದ ಮಾತಾಗಿತ್ತು. ಶ್ರೀ ಜಯಪ್ರಕಾಶ ನಾರಾಯಣ, ಶ್ರೀ ಅಚ್ಯುತರಾವ ಪಟವರ್ಧನ ಮೊದಲಾದವರು ಈ ಗುಪ್ತ ಸಂಘಟನೆಯಲ್ಲಿದ್ದು ಕೆಲಸ ಮಾಡುತ್ತಿದ್ದಾರೆಂದು ಕೇಳಿದ್ದೆವು. ರೇಲ್ವೆ ತಂತಿ ಕಡಿಯುವದು, ರೇಲ್ವೆ ಹಳಿ ಕಿತ್ತುವದು ಇವೇ ಪ್ರಕಾರದ ಇತರ ವಿಧ್ವಂಸಕ ಕೃತ್ಯಗಳು ಗಾಂಧೀಜಿಯವರ ಅಹಿಂಸೆಯಲ್ಲಿ ಸಮಾವಿಷ್ಟವಾಗುತ್ತವೆಂದು ಪೂ. ಕಿಶೋರಿಲಾಲ ಮಶ್ರೂವಾಲಾ ಮತ್ತು ಪೂ. ಕಾಕಾಸಾಹೇಬ ಕಾಲೇಲಕರರು 'ಹರಿಜನ'ದಲ್ಲಿ ಬರೆದಿದ್ದರು. ಅಹಿಂಸಾ ತತ್ವದ ಅಧ್ವರ್ಯುಗಳೇ ಈ ಕೆಲಸದಲ್ಲಿ ತೊಡಗಿರುವಾಗ, ಬೋಧೆಮಾಡು ತ್ತಿರುವಾಗ ಈ ವಿಷಯದಲ್ಲಿ ನನ್ನ ಜ್ಞಾನವೆಷ್ಟು? ಗಾಂಧೀಜಿಯವರು ಸಹ "ಮಾಡು ಇಲ್ಲವೆ ಮಡಿ" ಎಂಬ ಆದೇಶ ಕೊಟ್ಟು ಹೋಗಿದ್ದಾರೆ. ಕೇವಲ ಸೆರೆಮನೆಗೆ ಹೋಗು ವದರಿಂದ "ಮಾಡು ಇಲ್ಲವೆ ಮಡಿ" ಈ ಆದೇಶದ ಪಾಲನೆ ಹೇಗಾಗಬಲ್ಲದು? ಆದುದ ರಿಂದ ಉಪರೋಕ್ತ ವಿಧ್ವಂಸಕ ಕೃತ್ಯಗಳು ವ್ಯಾಪಕವಾದ ಅಹಿಂಸೆಯಲ್ಲಿ ಬರುತ್ತಿರ ಬಹುದು ಎಂಬ ನಿರ್ಧಾರಕ್ಕೆ ಬಂದೆ. ನನ್ನ ಮನಸ್ಸಿನ ಇತಿಮಿತಿ ಇಲ್ಲದಾಯಿತು. ವಿಚಾರಗಳ ತಾಕಲಾಟವೂ ನಿಂತಿತು. ನಾನು ಒಮ್ಮನಸ್ಸಿನಿಂದ ಈ ದಿಶೆಯಲ್ಲಿ ಕಾರ್ಯ ಪ್ರವೃತ್ತನಾದೆ.

ಕಾರ್ಯಕ್ರಮದ ಸಿದ್ಧತೆ

ಮೊದಲನೆಯ ಕಾರ್ಯಕ್ರಮ ರೇಲ್ವೆ ಟೆಲಿಫೋನ ತಂತಿ ಕಡಿಯಬೇಕೆಂದು ಗೊತ್ತುಮಾಡಿದೆವು. ನಾನು ಶ್ರೀ ಬಿ. ಆರ್. ಪಾಟೀಲರನ್ನು ಕರೆಕಳಿಸಿದೆ. ಜನರನ್ನು ಕೂಡಿಸಲು ಹೇಳಿದೆ. ನಾನೂ ಸಹ ನನಗೆ ಭೆಟ್ಟಿಯಾದ ತರುಣರಿಗೆ ಕಾರ್ಯಕ್ರಮದ ಬಗ್ಗೆ ತಿಳಿಸಿದೆ. ಇಪ್ಪತ್ತು-ಇಪ್ಪತ್ತೈದು ಜನರು ಈ ಕಾರ್ಯಕ್ಕೆ ಬರಲು ಸಿದ್ಧರಾದರು. ಆದರೆ ತಂತಿ ಕಂಬ ಕಡಿಯುವದು ಹೇಗೆ? ರೈಲು ಕಂಬ ಕೀಳುವದು ಹೇಗೆ? ಮುಂತಾದವು ಯಾವವೂ ನಮಗೆ ಗೊತ್ತಿರಲಿಲ್ಲ. ರೈಲುಕಂಬಿಯ ನಟ್ಟುಗಳನ್ನು ಉಚ್ಚಲು ಆದರದೇ ಒಂದು ವಿಶಿಷ್ಟ ಪ್ರಕಾರದ 'ಪಾನಾ' ಇರುತ್ತವೆ. ಅವನ್ನು ದೊರಕಿಸುವದು ಹೇಗೆ? ಮೊದಲಾದ ವಿಚಾರಗಳಲ್ಲಿ ನಾವು ಬಿದ್ದೆವು. ಈ ಕೆಲಸದಲ್ಲಿ ನಾವೆಲ್ಲರೂ ಅನಭಿಜ್ಞರು, ನಾವು ಈ ಕೆಲಸವನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ವಿಚಾರ ಮಾಡ ಹತ್ತಿದೆವು.

ವಾಸು ಯಾರು ?

ಈ ರೀತಿ ನಾವು ವಿಚಾರ ಮಾಡುತ್ತಿರುವಾಗ ವಾಸು ಎಂಬ ಹೆಸರಿನ ಮನುಷ್ಯ-ನನ್ನು ನನ್ನೆಡೆಗೆ ಕರೆದುಕೊಂಡು ಶ್ರೀ ಈರಯ್ಯ ಬಂದರು. ಆತ ಕಪ್ಪು ವರ್ಣದ ಕುಳ್ಳ ಮನುಷ್ಯನಾಗಿದ್ದ. ಆತನ ವಯಸ್ಸು ಇಪ್ಪತ್ತೈದು ಮೂವತ್ತು ವರ್ಷ ಇರಬಹುದು. ಆತನಿಗೆ ಕನ್ನಡ ಬರುತ್ತಿರಲಿಲ್ಲ. ಇಂಗ್ಲೀಷ, ಹಿಂದಿ ಮತ್ತು ಮಲಯಾಳೀ ಭಾಷೆ ಬರುತ್ತಿದ್ದವು. ಆತ ಯಾರಸಂಗಡವೂ ವಿಶೇಷ ಮಾತನಾಡುತ್ತಿರಲಿಲ್ಲ. ಆಂದೋಲನ ಪ್ರಾರಂಭವಾಗುವದಕ್ಕಿಂತ ಒಂದೆರಡು ತಿಂಗಳು ಮೊದಲು ಹುದಲಿಯಲ್ಲಿ ಶ್ರೀ ಈರಯ್ಯ ಎಂಬವರ ಚಹದಂಗಡಿಯಲ್ಲಿ 'ತಿನಿಸಿನ' ಸಾಮಾನು ಮಾಡಲಿಕ್ಕೆ ಬಂದು, ಅಲ್ಲಿಯೇ ಇದ್ದ. ಈ ಆಂದೋಲನ ಪ್ರಾರಂಭವಾದ ಕೂಡಲೇ ಆತನೇ ಮುಂದಾಗಿ ತನಗೆ ರೈಲುಕಂಬಿ ಕಿತ್ತುವದು ಗೊತ್ತಿದೆ ಎಂದು ಶ್ರೀ ಈರಯ್ಯನವರಿಗೆ ಹೇಳಿದನಂತೆ. ಅವರು ಆತನನ್ನು ನನ್ನ ಹತ್ತಿರ ಕರೆದುಕೊಂಡು ಬಂದರು. ಆತ ತಾನು ರೇಲ್ವೆ ಇಲಾಖೆಯಲ್ಲಿ ಕೆಲಸ ಮಾಡಿದುದರಿಂದ ತನಗೆ ಕಂಬಿ ಕಿತ್ತುವದು ಗೊತ್ತಿದೆ. ಅದರ ಸಾಧನಗಳನ್ನೂ ದೊರಕಿಸ ಬಲ್ಲೆ ಎಂದು ಹೇಳಿದನು. ಆತನಿಗೆ ಕಂಬಿಯನ್ನು ಕಿತ್ತಲಿಕ್ಕೆ ಬೇಕಾದ ಸಾಮಾನು ದೊರಕಿಸಿಕೊಂಡು ಬರಲು ನಾನು ಹೇಳಿಕಳಿಸಿದೆ.

ವಾಸೂನ ಬಗೆಗೆ ಸಂಶಯ

ವಾಸು ಹೋದ ನಂತರ ಆತನ ಬಗ್ಗೆ ನನ್ನಲ್ಲಿ ಅನೇಕ ವಿಚಾರ ತಲೆದೋರಿದವು. ಆತ ಬೇಹುಗಾರನಿರಬಹುದೆ? ಕುಮರಿ ಆಶ್ರಮದಲ್ಲಿ ತಾವು ಗಾಂಧೀ ತತ್ವಜ್ಞಾನ ಕಲಿಯಲಿಕ್ಕೆ ಬಂದಿರುವೆವೆಂದು ಹೇಳಿ ಬೇಹುಗಾರರು ಬಂದು ಇರುತ್ತಿದ್ದರು. ಆದರೆ ಆಗ ಅಲ್ಲಿ ನಮ್ಮದೇನೂ ಮುಚ್ಚುಮರೆಯ ಕಾರ್ಯಕ್ರಮಗಳಿರಲಿಲ್ಲ. ಆದುದರಿಂದ ನಾವು ಅತ್ತಕಡೆಗೆ ವಿಶೇಷ ಲಕ್ಷ್ಯಕೊಡುತ್ತಿರಲಿಲ್ಲ. ಈಗ ಸರಕಾರದವರೇ ಆತನನ್ನು ಇಲ್ಲಿಗೇಕೆ ಕಳಿಸಿರಬಾರದು? ಹುದಲಿಯು ಚಳುವಳಿಯ ಊರು. ಆದುದರಿಂದ ಬೇಹುಗಾರರನ್ನು ತಂದಿಟ್ಟು ಅವರ ಮುಖಾಂತರವೇ ಇಂತಹ ಕೆಲಸ ಮಾಡಿಸಿ ಅನೇಕರನ್ನು ಬಂಧಿಸಿ ಚಳುವಳಿಯನ್ನು ಬಗ್ಗುಬಡಿಯುವ ವಿಚಾರ ಸರಕಾರ ಏಕೆ ಮಾಡಿರಬಾರದು? ಎಂಬ ವಿಚಾರಗಳು ನನ್ನ ತಲೆಯಲ್ಲಿ ನುಗ್ಗಿದವು. ಶ್ರೀ ಈರಯ್ಯನವರನ್ನೂ ಹಾಗೂ ಇತರರನ್ನೂ ಆತನ ಬಗ್ಗೆ ವಿಚಾರಿಸಿದೆ. ಅವರಿಗೂ ಆತನ ಬಗ್ಗೆ ಹೆಚ್ಚಿಗೇನೂ ಗೊತ್ತಿರಲಿಲ್ಲ. ಕಾರ್ಯಕರ್ತರಲ್ಲಿ ಕೆಲಸಮಾಡುವ ಉತ್ಸಾಹ ಹೆಚ್ಚಾಗಿದ್ದರಿಂದ ಕೊನೆಗೆ ಯಾವ ಸಂಕಟ ಬಂದರೂ ಬರಲಿ, ಆತನ ಸಹಾಯ ಪಡೆದು ಕೆಲಸ ಪ್ರಾರಂಭಿಸುವಾ ಎಂದು ನಿರ್ಧರಿಸಿದೆವು.

"ಮೊದಲನೆಯ ಕಾರ್ಯಕ್ರಮ, — ಟೆಲಿಫೋನ ತಂತಿ ಕಡಿಯುವದು"

ರೈಲು ಕಂಬಿ ಕಿತ್ತುವದು ಬಹಳ ಕಠಿಣ ಕೆಲಸ. ಅಲ್ಲದೇ ಅದು ಅಪಾಯಕರ. ಆದುದರಿಂದ ಸುಲಭವಾದ ತಂತಿ ಕಡಿಯುವ ಕಾರ್ಯಕ್ರಮವನ್ನೇ ನಾವು ಮೊದಲು ಗೊತ್ತುಮಾಡಿದೆವು. ಹೊರಡುವ ದಿವಸ ರಾತ್ರಿ ೧೦ ಗಂಟೆಗೆ ಜನರು ಉಂಡು ಮಲಗಿದ ಮೇಲೆ ಊರಹೊರಗಿನ ನಿರ್ವಾಣೆಪ್ಪನ ದೇವಸ್ಥಾನದ ಹತ್ತಿರ ಎಲ್ಲರೂ ಕೂಡಬೇಕೆಂದು ಗೊತ್ತಾಯಿತು. ಮೊದಲು ಹೇಳಿಟ್ಟ ಜನರೆಲ್ಲರೂ ಬಂದರು. ವಾಸು ಹಾಗೂ ಶ್ರೀ ಬಿ. ಆರ್. ಪಾಟೀಲರೂ ಬಂದಿದ್ದರು. ಸುಲಧಾಳ ಸ್ಟೇಶನ್ನಿನಿಂದ ಬೆಳಗಾವಿಯ ಕಡೆಗೆ ಎರಡು ಮೂರು ಮೈಲು ದೂರ ಹೋಗಿ ತಂತಿ ಕಡಿಯುವ ಕೆಲಸ ಪ್ರಾರಂಭಮಾಡಿದೆವು. ಕೆಲವೊಂದು ಫರ್ಲಾಂಗ ತಂತಿಯನ್ನು ಕಡಿದೆವು. ಕೆಲವರು ಕಂಬಗಳನ್ನು ಕಡಿದರು. ಕಂಬ ಕಡಿಯುವಾಗ ದೊಡ್ಡ ಶಬ್ದವಾಗುತ್ತಿತ್ತು. ಆದರೂ ಆಗ ಈ ಕಾರ್ಯಕ್ರಮ ಹೊಸದಾಗಿ ಇದ್ದುದರಿಂದ ಪೋಲೀಸರ ಲಕ್ಷ್ಯ ಇತ್ತ ಕಡೆಗೆ ಹೋಗಿರಲಿಲ್ಲ. ನಾವು ತಂತಿಕಡಿಯುವ ಸ್ಥಳದ ಎರಡೂ ಬದಿಗೆ ಇಬ್ಬಿಬ್ಬರನ್ನು ದೂರದಲ್ಲಿ ಕಾವಲಿಗೆ ಇಟ್ಟಿದ್ದೆವು. ಕಡಿಯುವ ಕೆಲಸ ಇನ್ನೂ ಭರದಿಂದ ನಡೆದಿತ್ತು. ಒಬ್ಬನು ಕಂಬವೇರಿ ತಂತಿ ಕಡಿಯುವಾಗ ಕಂಬಕ್ಕಿದ್ದ ಕಪ್ಪುಗಳನ್ನು ಒಡೆಯ ತೊಡಗಿದ. ಬಸಪ್ಪಾ ಪಾಡಿ (ಗಾಂಜಿ) ಎಂಬಾತನು ಆ ಕಂಬ ಹಿಡಿದು ಕೆಳಗೆ ನಿಂತಿದ್ದನು. ಒಡೆದು ಅರ್ಧ ಹೋಳಾದ ಕಂಬದ ಕಪ್ಪಿನ ತುಂಡೊಂದು ಆತನ ಮುಂಗೈ ಮೇಲೆ ಬಲವಾಗಿ ಬಿತ್ತು. ಆ ಕಪ್ಪಿನ ತುಂಡು ಹರಿತವಾಗಿದ್ದುದರಿಂದ ಆತನ ಕೈ ಒಡೆದು ರಕ್ತ ಧಾರೆಯಾಗಿ ಸುರಿಯ ತೊಡಗಿತು. ಕೂಡಲೇ ಸೀಟಿ ಹಾಕಿ ಎಲ್ಲರನ್ನೂ ಕರೆದು ಕಾರ್ಯಕ್ರಮ ನಿಲ್ಲಿಸಿದೆವು. ಆತನು ತಲೆಗೆ ಸುತ್ತಿದ ರುಮಾಲುಹರಿದು ರಕ್ತಹೋಗದಂತೆ ಬಿಗಿದು ಕಟ್ಟಿದೆವು. ಊರಿಗೆ ಬಂದು ಊರಲ್ಲಿ ಆತನ ಕೈಗೆ ತಾತ್ಪೂರ್ತಿಕ ಉಪಚಾರ ಮಾಡಿದೆವು. ಆತ ಊರಲ್ಲಿದ್ದರೆ ಈ ಸಂಗತಿ ಪೋಲೀಸರಿಗೆ ಗೊತ್ತಾಗಬಹುದೆಂದು ತಿಳಿದು ಆತನಿಗೆ ಬೇರೆ ಊರಿಗೆ ಹೋಗಿ ಗಾಯ ಮಾಯಿಸಿಕೊಂಡು ಬರಲು ಹೇಳಿ ಆತನ ವೆಚ್ಚಕ್ಕೆ ಸ್ವಲ್ಪ ಹಣ ಕೊಟ್ಟು ಕಳಿಸಿದೆವು. ಇದಾದನಂತರ ನಾನು ಬೆಳಗಾವಿಗೆ ಬಂದೆನು. ಇತರರು ತಮಗೆ ಈ ಕೆಲಸ ಏನೂ ಗೊತ್ತಿಲ್ಲದವರಂತೆ ತಮ್ಮ ದೈನಂದಿನ ಕೆಲಸದಲ್ಲಿ ತೊಡಗಿದ್ದರು.

ಪೋಲೀಸರ ಶೋಧ

ಸಣ್ಣ ಪುಟ್ಟ ಅಜಾಗರೂಕತೆಯಿಂದ ಎಂಥ ಅನಾಹುತಗಳಾಗುತ್ತವೆಂಬುದು ಈ ಘಟನೆಯಿಂದ ಗೊತ್ತಾಗುತ್ತದೆ. ಅಂದಿನ ರಾತ್ರಿಯೇ ರೇಲ್ವೆ ಅಧಿಕಾರಿಗಳಿಗೆ ತಂತಿ ಕಡಿದುದು ಗೊತ್ತಾಯಿತು. ಮರುದಿನ ಪೋಲೀಸರೂ ರೇಲ್ವೆ ಅಧಿಕಾರಿಗಳೂ ತಂತಿ ಕಡಿದ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದರು. ತಂತಿ ಕಡಿದ ಸ್ಥಳದಲ್ಲಿ ಯಾವ

ಕಂಬದ ಹತ್ತಿರ ಬಸಪ್ಪನ ಕೈಗೆ ಪೆಟ್ಟು ಹತ್ತಿತ್ತೋ ಅಲ್ಲಿ ರಕ್ತ ಸೋರಿತ್ತು. ಆತನ ಕೈ ಮೇಲೆ ಬಿದ್ದ ಕಪ್ಪಿನ ತುಂಡಿಗೆ ರಕ್ತ ಹತ್ತಿತ್ತು. ನಾವು ಆ ಕಪ್ಪಿನ ತುಂಡನ್ನು ನಾಶ ಮಾಡಿದ್ದಿಲ್ಲ. ಗಡಿಬಿಡಿಯಲ್ಲಿ ಅದನ್ನು ಅಲ್ಲಿಯೇ ಚೆಲ್ಲಿ ಬಂದಿದ್ದೆವು. ರಕ್ತ ಬಿದ್ದ ಜಾಗೆಯನ್ನು ರಕ್ತದ ಕಲೆ ಹೋಗುವಂತೆ ಸ್ವಚ್ಛ ಮಾಡಿದ್ದಿಲ್ಲ. ಅದೇ ನಮ್ಮ ತಪ್ಪಾಗಿದ್ದಿತು. ರಕ್ತ ಬಿದ್ದಿದೆ. ಮರುದಿನ ಪೋಲೀಸರು ಬಂದು ಸ್ಥಳ ಪರೀಕ್ಷಿಸಿದರೆ ಅವರು ಅದನ್ನು ಗುರುತಿಸಬಹುದು. ಆದುದರಿಂದ ರಕ್ತದ ಕಲೆ ಇಲ್ಲದಂತೆ ಮಾಡಬೇಕು. ರಕ್ತ ಹತ್ತಿದ ಕಪ್ಪಿನ ತುಂಡನ್ನು ದೂರ ಚೆಲ್ಲಬೇಕು, ಎಂಬ ಯಾವ ವಿಚಾರವೂ ನಮ್ಮ ತಲೆಯಲ್ಲಿ ಸುಳಿಯಲಿಲ್ಲ. ಪೋಲೀಸರು ರಕ್ತ ಹತ್ತಿದ ಕಪ್ಪಿನ ತುಂಡನ್ನೂ, ಕಂಬಕ್ಕೆ ತಗಲಿದ ಹಾಗೂ ಕೆಳಕ್ಕೆ ಬಿದ್ದ ರಕ್ತದ ಕಲೆಗಳನ್ನೂ ನೋಡಿ, ಕಪ್ಪು ಒಡಿದು ಯಾರಿಗೋ ಗಾಯವಾಗಿದೆ. ಅದರಿಂದ ಈ ರಕ್ತದ ಕಲೆ ಇಲ್ಲಿ ಬಿದ್ದಿದೆ. ಈ ಕಪ್ಪಿನ ತುಂಡಿಗೆ ರಕ್ತ ಹತ್ತಿದೆ ಎಂದು ಊಹಿಸಿದರು. ಅವರ ಊಹೆ ಸರಿಯಾಗಿತ್ತು. ಇಷ್ಟನ್ನೂ ಅವರು ಗುರುತಿಸದಿದ್ದರೆ, ಅವರೆಂತಹ ಪೋಲೀಸರು! ಆನಂತರ ಅವರು ಈ ಕಾರ್ಯ ಯಾರಿಂದ ಆಗಿರಬೇಕು? ಎಂಬ ವಿಚಾರದಲ್ಲಿ ತೊಡಗಿದರು. ತಂತಿಯನ್ನು ಕಡಿದ ಸ್ಥಳ ಹುದಲಿ ಊರಿಗೆ ಸಮೀಪವಾಗಿತ್ತು. ಆದುದರಿಂದ ಹುದಲಿ ಊರವರೇ ಇದನ್ನು ಮಾಡಿರಬೇಕೆಂದು ನಿಶ್ಚಯಿಸಿ ಸಬ್-ಇನ್ಸಪೆಕ್ಟರ ಹಾಗೂ ಪೋಲೀಸರು ಬಂದು ಹುದಲಿಯಲ್ಲಿ ಶೋಧನಡೆಸಿದರು;

ಪೋಲೀಸಪಾಟೀಲರ ಚಾಣಾಕ್ಷತನದ ಉತ್ತರ

ಪೋಲೀಸರು ಮೊದಲು ಪೋಲೀಸಪಾಟೀಲರನ್ನೇ ವಿಚಾರಿಸಿದರು. "ಈ ಕೆಲಸ ಹುದಲಿ ಊರವರಿಂದ ಆಗಿಲ್ಲ. ಬೇರೆ ಯಾರಾದರೂ ಮಾಡಿರಬೇಕೆಂದು" ತಮ್ಮ ಮೇಲಿನ ಹೊಣೆಯನ್ನು ಅವರು ಹಾರಿಸಿಕೊಂಡು ಬಿಟ್ಟರು. ಅದಕ್ಕೆ ಕಾರಣಗಳನ್ನೂ ಹೇಳಿದರು: "ನೀವು ಈಗಾಗಲೇ ಚಳುವಳಿಗಾರರನ್ನೆಲ್ಲ ಹಿಡಿದುಬಿಟ್ಟಿದ್ದೀರಿ. ಇನ್ನು ಹೊರಗೆ ಇರುವವರೆಂದರೆ ವಡವೀ ಮಾಸ್ತರರೊಬ್ಬರೆ. ಅವರಿಂದ ಈ ಕೆಲಸ ಆಗುವದು ಸಾಧ್ಯ-ವಿಲ್ಲ" ಎಂದು ಹೇಳಿದರು. ಪಾಟೀಲರ ವಾದ ನೋಡಲಿಕ್ಕೆ ಸಮಂಜಸ ಕಾಣುತ್ತಿತ್ತು. ಅದರಿಂದ ಪೋಲೀಸರು ಗೊಂದಲದಲ್ಲಿ ಬಿದ್ದರು. "ಅಕ್ಕತಂಗೇರ ಹಾಳದವರು ಇದನ್ನು ಏಕೆ ಮಾಡಿರಬಾರದು? ಅದೂ ಚಳುವಳಿಯ ಊರು. ಹುದಲಿ ಊರವರ ಮೇಲೆ ಈ ಆರೋಪ ಹೊರಿಸುವದಕ್ಕಾಗಿ ಅವರೇ ಈ ಕೆಲಸ ಮಾಡಿದ್ದರೂ ಮಾಡಿರಬಹುದು" ಎಂದು ಪೋಲೀಸರು ಅಲ್ಲಿಯೂ ಶೋಧ ನಡೆಸಿದರು. ಹುದಲಿಯಲ್ಲಿ ಪೋಲೀಸರು ಕಾಯಂ ತಳವೂರಿದರು. ಊರಲ್ಲಿ ಅತ್ತಿತ್ತ ತಿರುಗಾಡಿ ಏನಾದರೂ ಸುದ್ದಿ ಹೊರಬೀಳುತ್ತದೆಯೋ ಎಂಬುದನ್ನು ನೋಡಹತ್ತಿದರು.

ತಂತಿ ಕಡಿದವರ ಹೆಸರುಗಳ ಸ್ಫೋಟ

ನಾನು ಹಿಂದೆ ಹೇಳಿದಂತೆ ತಂತಿ ಕಡಿದವರಲ್ಲಿ ಯಾರಿಗೋ ಪೆಟ್ಟು ಹತ್ತಿದೆ. ಆತನ ಶೋಧ ಮಾಡಿದರೆ ಇತರ ಎಲ್ಲ ಮಾಹಿತಿ ಹೊರಬೀಳುತ್ತದೆಂದು ಪೋಲೀಸರು ತಮ್ಮಲ್ಲಿ ವಿಚಾರ ಮಾಡಿ ಅದನ್ನು ಗೌಪ್ಯವಾಗಿ ಇಟ್ಟಿದ್ದರು. 'ಗಾಯ ಮಾಯಿಸಿ ಕೊಂಡು ಬಾ' ಎಂದು ಬಸಪ್ಪನಿಗೆ ವೆಚ್ಚಕ್ಕೆ ಕೊಟ್ಟು ಪರಊರಿಗೆ ಕಳಿಸಿದುದು ಹಿಂದೆ ಬಂದಿದೆ. ಆದರೆ ಆತ ಒಂದೆರಡು ದಿವಸಗಳಲ್ಲಿ ಪರಊರಿಗೆ ಹೋಗಿ ಕೂಡಲೇ ತಿರುಗಿ ಬಂದು, ಊರಲ್ಲಿ ಕೈಮುಚ್ಚಿಕೊಂಡು ತಿರುಗಾಡತೊಡಗಿದ. ಒಂದು ದಿವಸ ಆತ ಚಹಾದ ಅಂಗಡಿಯಲ್ಲಿ ಚಹಾ ಕುಡಿದು ಎಡಗೈಯನ್ನು ಮುಚ್ಚಿಕೊಂಡು ಕುಳಿತಿದ್ದ. ಅದೇ ಹೊತ್ತಿಗೆ ಪೋಲೀಸರೂ ಅಲ್ಲಿ ಚಹಾ ಕುಡಿಯಲಿಕ್ಕೆ ಬಂದರು. ಪೋಲೀಸರ ದೃಷ್ಟಿ ಆತನ ಕಡೆಗೆ ಹೋಯಿತು. "ಈತ ಕೈ ಏಕೆ ಮುಚ್ಚಿಕೊಂಡು ಕುಳಿತಿದ್ದಾನೆ?" ಎಂದು ಅವರಿಗೆ ಸಂಶಯ ಬಂದಿತು. ಪೋಲೀಸರು ಆ ಶೋಧದಲ್ಲಿ ಇದ್ದೇ ಇದ್ದರು. ಹತ್ತಿರ ಹೋಗಿ "ನಿನ್ನ ಕೈಗೆ ಏನಾಗಿದೆ?" ಎಂದು ವಿಚಾರಿಸಿದರು. "ಮೊನ್ನೆ ಕಟ್ಟಿಗೆ ಕಡಿಯು ವಾಗ ಸ್ವಲ್ಪ ಪೆಟ್ಟು ತಗಲಿದೆ" ಎಂದು ಹೇಳಿದ. "ಕೈ ತೆಗೆಯಿಸಿ ನೋಡಿದರು." "ನಿಜ ಹೇಳುತ್ತೀಯೋ ಒಂದು ಕಡತ ಬೇಕೋ" ಎಂದರು. ಆತ ಅಂಜಿ ಎಲ್ಲ ಸಂಗತಿ ಹೇಳಿ ಬಿಟ್ಟ. "ತಂತಿಯನ್ನು ಕಡಿಯಲಿಕ್ಕೆ ಯಾರು ಯಾರು ಬಂದಿದ್ದರು?" ಎಂದು ಮತ್ತೆ ಪೋಲೀಸರು ಕೇಳಿದರು. ಆತ ವಡವೀ ಮಾಸ್ತರ, ಬಿ. ಆರ್. ಪಾಟೀಲ, ನಿಂಗಪ್ಪಾ ತುಕ್ಕಾರ, ಭೀಮಪ್ಪಾ ಭೂಸಿ. ಬಸಪ್ಪಾ ಹಳ್ಳೂರಿ, ಬಾಳಪ್ಪಾ ಅಡಕಾಯಿ, ಬಾಳಪ್ಪಾ ಮಾಳಗಿ, ಗಂಗಪ್ಪಾ ಮೋದಗಿ, ರಾಮಪ್ಪಾ ಮಲ್ಲಪ್ಪಾ ಗೌವಣ್ಣವರ, ಮಲ್ಲಪ್ಪಾ ಗುಂಡ್ಲೂರ, ಅಪ್ಪಯ್ಯಾ ಹೂಗಾರ, ಮಲ್ಲನಗೌಡಾ ಭದ್ರಕಾಳಿ. ಫಕೀರಪ್ಪಾ ಬಸದವರ, ರಾಮಪ್ಪಾ ಬಸದವರ, ಮಲ್ಲಪ್ಪಾ ಮಾಳಗಿ, ಬಸವಣ್ಣೆಪ್ಪಾ ಜಕ್ಕಣ್ಣ ನವರ ಇವರೇ ಮೊದಲಾದವರ ಹೆಸರುಗಳನ್ನು ಹೇಳಿದ. ಚಹಾದ ಅಂಗಡಿಯಲ್ಲಿ ಬಸಪ್ಪ ಪೋಲೀಸರ ಕೈಗೆ ಸಿಕ್ಕಿದ್ದಾನೆ, ತಂತಿ ಕಡಿಯಲಿಕ್ಕೆ ಹೋದವರ ಹೆಸರುಗಳನ್ನು ಹೇಳಿದ್ದಾನೆ ಎಂಬ ಸುದ್ದಿ ಊರಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿತು. ಕೂಡಲೇ ತಂತಿಯನ್ನು ಕಡಿಯಲಿಕ್ಕೆ ಬಂದವರೆಲ್ಲರೂ ಊರು ಬಿಟ್ಟು ಹೋಗಿ ತಲೆಮರೆಸಿಕೊಂಡರು.

ಬಿ. ಆರ್. ಪಾಟೀಲರ ಮೇಲೆ ಮೋಸದ ಆರೋಪ

ಬಸಪ್ಪ ಹೇಳಿದ ಹೆಸರುಗಳಲ್ಲಿ ಶ್ರೀ ಬಿ. ಆರ್. ಪಾಟೀಲರ ಹೆಸರೂ ಇತ್ತು. ಅದನ್ನು ನೋಡಿ ಪೋಲೀಸರಿಗೆ ಆಶ್ಚರ್ಯವಾಯಿತು. 'ಪೋಲೀಸಪಾಟೀಲರ ಅಳಿಯನೇ ನಮಗೆ ಮೋಸಮಾಡಿದನಲ್ಲ! ಆತ ಹೀಗೆ ಮಾಡುತ್ತಾನೆಂದು ಗೊತ್ತಿದ್ದರೆ, ಮೊದಲೇ ಆತನನ್ನು ಬಂಧಿಸಿ ಬಿಡುತ್ತಿದ್ದೆವು" ಎಂದು ಅವರು ಅಂದರಂತೆ! ಅಂತೂ "ಶ್ರೀ ಬಿ. ಆರ್. ಪಾಟೀಲರು ಪೋಲೀಸರಿಗೆ ಫಿತೂರಿ ಇದ್ದಾನೆ" ಎಂದು ಜನರು ಮೊದಲೇ ಅನ್ನುತ್ತಿ

ದ್ದರು. ಈಗ ತಮ್ಮನ್ನು ಮೋಸ ಮಾಡಿದನೆಂದು ಪೋಲೀಸರು ಹೇಳಹತ್ತಿದರು. ಇವುಗಳಲ್ಲಿ ಯಾವದು ನಿಜ ಎಂಬುದನ್ನು ಶ್ರೀ ಪಾಟೀಲರ ಕೃತಿಯೇ ನಿರ್ಧರಿಸುತ್ತದೆ. ನಿಜವಾಗಿ ನೋಡಿದರೆ ಇಲ್ಲಿ ಮೋಸದ ಪ್ರಶ್ನೆ ಏನೂ ಇರಲಿಲ್ಲಾ. ಶ್ರೀ ಬಿ. ಆರ್. ಪಾಟೀಲರು ಪೋಲೀಸರಿಗಾಗಲಿ, ಸರಕಾರಕ್ಕಾಗಲಿ "ತಾವು ಯಾವಾಗಲೂ, ಸರಕಾರಕ್ಕೆ ವಿಧೇಯರಾಗಿ ನಡೆದುಕೊಳ್ಳುತ್ತೇವೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗ ತೆಗೆದು ಕೊಳ್ಳುವದಿಲ್ಲಾ" ಎಂದು ಹೇಳಿರಲಿಲ್ಲಾ. ಇವರು ಪೋಲೀಸ ಪಾಟೀಲರ ಆಳಿ ಯಂದಿರು. ಆದುದರಿಂದ ಸರಕಾರಕ್ಕೆ ನಿಷ್ಠರಾಗಿ ಇದ್ದೇ ಇರುತ್ತಾರೆ. ಆಂದೋಲನದಲ್ಲಿ ಭಾಗ ತೆಗೆದುಕೊಳ್ಳುವದಿಲ್ಲ, ಎಂದು ಪೋಲೀಸರೇ ಗ್ರಹಿಕೆ ಮಾಡಿಕೊಂಡಿದ್ದರು.

ಬಸಪ್ಪ ಪೋಲೀಸರಿಗೆ ಹೇಳಿದವರನ್ನೆಲ್ಲ ಬಂಧಿಸಬೇಕೆಂದು ಪೋಲೀಸರು ಮನೆ ಮನೆಗೆ ತಿರುಗಾಡತೊಡಗಿದರು. ಆತ ಹೇಳಿದ ಹೆಸರುಗಳಲ್ಲಿ ಒಬ್ಬರೂ ಪೋಲೀಸರ ಕೈಗೆ ಸಿಗಲಿಲ್ಲ. ಅದರಿಂದ ಪೋಲೀಸರು ಪೋಲೀಸಪಾಟೀಲರ ಮೇಲೆ ಕುಪಿತರಾದರು. "ಇದೆಲ್ಲ ನಿಮ್ಮದೇ ಕೈವಾಡ, ನಿಮಗೆ ಗೊತ್ತಿಲ್ಲದೇ ಈ ಕೆಲಸವಾಗುವದು ಸಾಧ್ಯವಿಲ್ಲ. ಅಲ್ಲದೆ ಈಗ ಸಹ ಇವರಲ್ಲಿ ಒಬ್ಬರೂ ನಮ್ಮ ಕೈಗೆ ಸಿಗಲೊಲ್ಲರು, ಇದರ ಅರ್ಥವೇನು?" ಎಂದು ಮುಂತಾಗಿ ಒದರಾಡತೊಡಗಿದರು. ಆದರೆ ಪೋಲೀಸಪಾಟೀಲರು ಏನು ಮಾಡುತ್ತಾರೆ? ಇಂತಹ ವಿಷಯವೆಲ್ಲ ಅವರಿಗೆ ಮುಂಚಿತವಾಗಿ ಯಾರು ಹೇಳಿ ಮಾಡುತ್ತಾರೆ? ಪೋಲೀಸರು ಹುದಲಿಯಲ್ಲಿಯೇ ತಳವೂರಿ ಕುಳಿತರು. ಸಬ್ ಇನಸ್ಪೆಕ್ಟರರೂ ಅಲ್ಲಿಯೇ ಇರತೊಡಗಿದರು. ಅಂದೇ ರಾತ್ರಿ "ತಂತಿ ಕಡಿದವರಿಗೆ, ರೈಲು ಕಂಬಿಗಳನ್ನು ಕಿತ್ತಿದವರಿಗೆ. ಸರಕಾರಿ ಕಟ್ಟಡ ಸುಟ್ಟವರಿಗೆ ದೇಹಾಂತ ಶಿಕ್ಷೆ ಕೊಡಲಾ ಗುವದೆಂದು" ಡಂಗುರ ಸಾರಲಾಯಿತು.

ಈಗ ನಮ್ಮ ಪಡೆ ಸಿದ್ಧವಾಯಿತು

ಪೋಲೀಸರು ಶೋಧಿಸುತ್ತಿದ್ದ ಎಲ್ಲ ಹುಡುಗರೂ ಬೇಕುಬೇಕಾದಲ್ಲಿ ಓಡಿ ಹೋಗಿದ್ದರು. ತಿರುಗಿ ಮನೆಗೆ ಬರಬೇಕೆಂದರೆ—ಪೋಲೀಸರು ಊರಲ್ಲಿಯೇ ಇದ್ದುದ ರಿಂದ ತಮ್ಮನ್ನು ಹಿಡಿಯಬಹುದೆಂಬ ಭಯ. ಈ ಸುದ್ದಿ ನನಗೆ ತಿಳಿದಕೂಡಲೇ ನಾನು ಬೆಳಗಾವಿಯಿಂದ ಕುಮರಿಗೆ (ಹುದಲಿಯ ಪಕ್ಕದಲ್ಲಿದ್ದ ಆಶ್ರಮ) ಬಂದೆ. ಕಾರ್ಯ ಕರ್ತರಿಗೆ ಮಾರ್ಗದರ್ಶನ ಮಾಡಬೇಕು, ಅವರಿಗೆ ಧೈರ್ಯ ಹೇಳಬೇಕು, ಅವರಿಗೆ ಆಗುವದನ್ನೇ ನಾನೂ ಭೋಗಿಸಬೇಕು, ಎಂದು ನಿರ್ಧರಿಸಿ ಬೆಳಗಾವಿಯಲ್ಲಿ ನಾನು ಸುರಕ್ಷಿತ ಸ್ಥಳದಲ್ಲಿದ್ದರೂ ಅದನ್ನು ಬಿಟ್ಟು ಹುದಲಿಯಂತಹ ಗಂಡಾಂತರ ಸ್ಥಳಕ್ಕೆ ಬಂದು ಕಾರ್ಯಕರ್ತರನ್ನು ಕೂಡಿಕೊಂಡೆ. ಈ ನನ್ನ ಕೃತಿ ಕಾರ್ಯಕರ್ತರ ಮೇಲೆ ಒಳ್ಳೇ ಪರಿಣಾಮ ಮಾಡಿತು. ಕಾರ್ಯಕರ್ತರಲ್ಲಿ ಉತ್ಸಾಹ ಉಂಟಾಯಿತು. ನಾನು ಕುಮರಿಯಲ್ಲಿ ಬಂದದ್ದು ಅವರಿಗೆ ಗೊತ್ತಾಯಿತು. ಆದರಿಂದ ಪೋಲೀಸರು ಯಾರ

ಶೋಧದಲ್ಲಿದ್ದರೋ ಅವರೆಲ್ಲ ಒಬ್ಬೊಬ್ಬರಾಗಿ ಕುಮರಿಗೆ ಬಂದು ಸೇರಹತ್ತಿದರು. ಇದಲ್ಲದೇ ಎಲ್ಲಪ್ಪ ಕರಡಿಗುದ್ದಿ, ನಾಗಪ್ಪ ಭೀಮಪ್ಪ ಉಪರಿ, ಫಕೀರಪ್ಪ ಬಸವಂತಪ್ಪ ಪವಾಡಿ, ಭೀಮಪ್ಪ ನಿಂಗಪ್ಪ ಹಿರತಂಗಿ, ಬಸವಣ್ಣೆಪ್ಪ ಜಕ್ಕಣ್ಣವರ ಸುಲಧಾಳ, ಬಸಪ್ಪ ತೇಲಿ ಸುಲಧಾಳ, ಮಲ್ಲಪ್ಪ ಪಾಟೀಲ, ಲಕ್ಷ್ಮಣ ನಾಯಕ, ಕೆಂಚಪ್ಪ ತೋರಣಗಟ್ಟಿ ಬೆನಕನಮರ್ಡಿ ಮೊದಲಾದವರು ನಮ್ಮ ಕಾರ್ಯಕ್ರಮಗಳಿಗೆ ಬಂದುಹೋಗಿ ಮಾಡು ತ್ತಿದ್ದರು. ಇವರ ಮೇಲೆ ಇನ್ನೂ ವಾರಂಟ ಇರಲಿಲ್ಲ.

ಒಂದೆರಡು ದಿವಸಗಳಲ್ಲಿ ನಮ್ಮ ಪಡೆಯ ಸಂಖ್ಯೆ ೨೫ ರಷ್ಟಾಯಿತು. ಇವರೆಲ್ಲರ ಊಟದ ವ್ಯವಸ್ಥೆಯನ್ನು ಮಾಡಬೇಕಾಯಿತು. ಒಂದೆರಡು ದಿವಸ ಊರಿಂದ ಅವರವರ ಮನೆಯಿಂದಲೇ ಊಟ ಬರುತ್ತಿತ್ತು. ಆದರೆ ಹೀಗೆ ಎಷ್ಟು ದಿವಸ ನಡೆದೀತು? ಮುಂದೆ ಏನು ಮಾಡಬೇಕು? ಹೇಗೆ ಮಾಡಬೇಕು? ಎಂಬ ವಿಚಾರ ನಮ್ಮ ಮುಂದೆ ಬಂದಿತು. ನಾನು ಎಲ್ಲರನ್ನೂ ಬಿಚ್ಚು ಮನಸ್ಸಿನಿಂದ ವಿಚಾರಿಸಿದೆ— "ನೀವು ಪೋಲೀಸರ ಹತ್ತಿರ ಹೋಗಿ ಹಾಜರಾಗುತ್ತೀರಾ ಅಥವಾ ನನ್ನೊಂದಿಗೆ ಹೊರ ಗಿದ್ದು ಕೆಲಸ ಮಾಡುತ್ತೀರಾ? ಎಂದು. ಎಲ್ಲರೂ "ನಾವು ನಿಮ್ಮ ಜೊತೆಗೆ ಹೊರಗಿದ್ದು ಕೆಲಸ ಮಾಡುತ್ತೇವೆ" ಎಂದು ಹೇಳಿದರು. ನಾನು ಈ ಸಲದ ಆಂದೋಲನದ ಪ್ರಖರತೆ ಯನ್ನು ಅವರಿಗೆ ವಿವರಿಸಿದೆ. ಆದರೂ ಅವರೆಲ್ಲರೂ ತಮ್ಮ ನಿರ್ಧಾರದಿಂದ ಚಲಿಸಲಿಲ್ಲ. ಈ ರೀತಿ "ಮಾಡುತ್ತೇವೆ ಇಲ್ಲವೆ ಮಡಿಯುತ್ತೇವೆ" ಎಂಬ ಅಚಲ ನಿರ್ಧಾರದ ನಮ್ಮ ಪಡೆ ಸಿದ್ಧವಾಯಿತು.

ಪಂಚರ ಮತ್ತು ಊರ ಹಿರಿಯರ ಗುಪ್ತ ಸಭೆ

ಹುದಲಿಯ ಊರಲ್ಲಿ ಆಗ ಇನ್ನೂ ಸರಕಾರನಿಯುಕ್ತ ಗ್ರಾಮ ಪಂಚಾಯತಿ ಇರಲಿಲ್ಲ. ಲೋಕಮಾನ್ಯ ಮತ್ತು ಪರಂಪರಾಗತವಾದ ಪಂಚಾಯತಿ ಇತ್ತು. ಊರಲ್ಲಿ ಯಾವದೇ ಉತ್ಸವ ಬರಲಿ, ಜಗಳವಾಗಲಿ, ಯಾವುದೇ ಊರ ಕೆಲಸ ಬರಲಿ ಎಲ್ಲವೂ ಪಂಚರ ಮುಖಾಂತರವೇ ಆಗುತ್ತಿದ್ದವು. ಪಂಚರ ಮಾತನ್ನು ಜನರು ಮನ್ನಿಸು ತ್ತಿದ್ದರು. ಪಂಚರು ಅಪರಾಧಿಗಳಿಗೆ ದಂಡ ವಿಧಿಸುತ್ತಿದ್ದರು. ಕ್ಷಮೆ ಬೇಡಲಿಕ್ಕೆ ಹಚ್ಚು ತ್ತಿದ್ದರು. ತಮ್ಮ ನಿರ್ಣಯವನ್ನು ಕೇಳದವರ ಮೇಲೆ ಬಹಿಷ್ಕಾರ ಸಾರಿ ಅವರು ಶರಣು ಬರುವಂತೆ ಮಾಡುತ್ತಿದ್ದರು. ಹೀಗಿದ್ದರೂ ಪಂಚರು ಕೊಟ್ಟ ತೀರ್ಪನ್ನು ಊರ ಜನರು ಮಾನ್ಯ ಮಾಡುತ್ತಿದ್ದರು. ಆ ಕಾಲದಲ್ಲಿ ಜನರ ಮೇಲೆ ಪಂಚರ ವರ್ಚಸ್ಸು ಚನ್ನಾಗಿತ್ತು. ಮಹತ್ವದ ಕೆಲಸಗಳಲ್ಲಿ ಊರ ಹಿರಿಯರ ಸಹಾಯ— ಸಹಾನುಭೂತಿ ಪಡೆಯದೇ ನಾವೂ ಸಹ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಈಗಂತೂ ಅವರ ಸಹಾನುಭೂತಿಯಿಲ್ಲದೆ ಕಾರ್ಯಕ್ರಮ ಮಾಡುವದು ಸಾಧ್ಯ ವಾಗುತ್ತಿರಲಿಲ್ಲ.

ಊರಲ್ಲಿ ಪಂಚರ ವರ್ಚಸ್ಸು ಕಡಿಮೆಯಾಗಬಾರದೆಂದು ಗು. ಗಂಗಾಧರ ರಾಯರಿಗೆ ಅನಿಸುತ್ತಿತ್ತು. ಒಂದು ಸಲ ಗು. ಗಂಗಾಧರರಾಯರ ಮೇಲೆ ಒಂದು ಪ್ರಸಂಗ ಬಂದಿತು. ಪಂಚರು ಅದನ್ನು ವಿಚಾರ ಮಾಡಿ ತೀರ್ಪು ಕೊಡುವ ಕಾಲಕ್ಕೆ ಗು. ಗಂಗಾಧರರಾಯರು ಸ್ವತಃ ಉಪಸ್ಥಿತರಿದ್ದರು. ಮತ್ತು ಪಂಚರು ತಮ್ಮ ವಿರುದ್ಧ ಕೊಟ್ಟ ತೀರ್ಪನ್ನು ಮಾನ್ಯಮಾಡಿ ಅದರಂತೆ ನಡೆದರು.

ನಾನು ರಾತ್ರಿ ೧೦ ಗಂಟೆಗೆ ಶ್ರೀ ಭಾವುಸಾಹೇಬ ದೇಶಪಾಂಡೆ ಇವರ ವಾಡೆಯಲ್ಲಿ ಪಂಚರ ಗುಪ್ತ ಸಭೆ ಕರೆಯಲು ಹೇಳಿ ಕಳಿಸಿದೆ. ಊರ ಜನರು, ಪಂಚರು ಎಲ್ಲರೂ ನಮಗೆ ಅನಕೂಲರಾಗಿದ್ದರು. ರಾತ್ರಿ ೧೦ ಗಂಟೆಯ ಸುಮಾರಿಗೆ ವಾಡೆಗೆ ಬಂದೆ. ನನ್ನ ಜೊತೆಗೆ ಶ್ರೀ. ಬಿ. ಆರ್. ಪಾಟೀಲರೂ ಇದ್ದರು. ಆ ಕಾಲಕ್ಕೆ ಊರಲ್ಲಿ ಪೋಲೀಸ ಪಾರ್ಟಿ ಇತ್ತು. ಆದರೂ ನಾನು ಈ ಸಭೆಗೆ ಬಂದು ಹಾಜರಾದೆನು. ನಾನು ಈ ಸಭೆಗೆ ಬರುವದು ಅನಿವಾರ್ಯವೇ ಆಗಿತ್ತು. ಅಲ್ಲಿ ಶ್ರೀ ಭಾವುಸಾಹೇಬ ದೇಶಪಾಂಡೆ, ಶ್ರೀ ಅಮೃತರಾವ ದೇಶಪಾಂಡೆ. ಶ್ರೀ ದಾದಾಸಾಹೇಬ ದೇಶಪಾಂಡೆ, ಶ್ರೀ ರಾಮರಾವ ದೇಶಪಾಂಡೆ, ಶ್ರೀ ಯಲ್ಲಪ್ಪ ತುಕ್ಕಾರ, ಶ್ರೀ ಶಿವರಾಯಪ್ಪ ಖಣಗಣ್ಣೆ ಹಾಗೂ ಇನ್ನೂ ಕೆಲವರಿದ್ದರು. ಪೋಲೀಸಪಾಟೀಲರಾದ ಬಸನಗೌಡರೂ ಬಂದಿದ್ದರು. ವಾಡೇದ ನಡು-ಮನೆಯಲ್ಲಿ ಸಭೆ ನಡೆದಿತ್ತು. ಬಾಗಿಲನ್ನು ಹಾಕಿ, ಹೊರಗೆ ಕಾವಲಿಗೆ ಒಬ್ಬಿಬ್ಬರನ್ನು ನಿಲ್ಲಿಸಿದ್ದೆವು. ನಾನು ಸಭೆಗೆ ಬಂದವರಿಗೆ ಈ ಸಲದ ಆಂದೋಲನದ ಭೀಕರತೆಯನ್ನು ವಿವರಿಸಿದೆ. "ನಿಮ್ಮ ಮಕ್ಕಳಿಗೆ ನನ್ನೊಂದಿಗೆ ಹೊರಗೆ ಇದ್ದು ಕೆಲಸ ಮಾಡಲಿಕ್ಕೆ ಹೇಳುತ್ತೀರೋ ಅಥವಾ ಪೋಲೀಸರ ಹತ್ತಿರ ಹೋಗಿ ಹಾಜರಾಗಲು ಹೇಳುತ್ತೀರೊ?" ಎಂದು ನಾನು ವಿಚಾರಿಸಿದೆ. ಅವರಲ್ಲಿ ಕೆಲವೊಂದು ಭೂಗತ ಹುಡುಗರ ಪಾಲಕರೂ ಇದ್ದರು. ಎಲ್ಲರೂ ಇತಿಮಿತಿಯಲ್ಲಿ ಬಿದ್ದರು. ಈಗಲೇ ತಮ್ಮ ಹುಡುಗರಿಗೆ ಹಾಜರಾಗಲು ಹೇಳಿದರೆ ಏನಾಗುತ್ತದೆಯೋ ಏನೋ "ತಂತಿ ಕಡಿದವರಿಗೆ ಗಲ್ಲಿನ ಶಿಕ್ಷೆ" ಎಂದು ನಿನ್ನೆಯೇ ಡಂಗುರ ಸಾರಲಾಗಿದೆ. ಹುಡುಗರಿಗೆ ಈಗಲೇ ಪೋಲೀಸರ ಹತ್ತಿರ ಹೋಗಿ ಹಾಜರಾಗಲು ಹೇಳುವದೆಂದರೆ ಅವರನ್ನು ಶೂಲಕ್ಕೇರಿಸಲು ಕೊಟ್ಟಂತೆ ಎಂಬ ಭೀತಿ ಅಲ್ಲಿ ಕೂಡಿದವರಿಗೆ ಉಂಟಾಗುವದು ಸ್ವಾಭಾವಿಕವಾಗಿತ್ತು. ತಮ್ಮ ಹುಡುಗರಿಗೆ ಎಲ್ಲಿ ಗಲ್ಲಿನ ಶಿಕ್ಷೆಯಾಗುತ್ತದೆಯೋ ಎಂಬ ಭೀತಿ ಒಂದು ಕಡೆಗೆ. ಇನ್ನೊಂದು ಕಡೆಗೆ, ಹೊರಗೆ ಉಳಿದರೆ ಇನ್ನೂ ಎಂತಹ ಪ್ರಸಂಗಗಳು ಬರುತ್ತವೆಯೋ ಎಂಬ ಅಂಜಿಕೆ. ಹೀಗೆ ಅವರ ವಿಚಾರ ಹೊಯ್ದಾಡತೊಡಗಿತ್ತು. ಆಗ ಅಲ್ಲಿ ಕೆಲಹೊತ್ತು ವಾತಾವರಣ ನಿಶ್ಯಬ್ದವಾಗಿತ್ತು. ಕೆಲಹೊತ್ತಿನ ನಂತರ ಅವರಲ್ಲಿ ಒಬ್ಬರು "ಇದೀಗ ವಡವಿ ಮಾಸ್ತರರು ಹೇಳಿದ ಹಾಗೆ ಈ ಸಾರೆಯ ಆಂದೋಲನ ಅಳಿವು-ಉಳಿವಿನ ಪ್ರಶ್ನೆಯಾಗಿದೆ. ಪೋಲೀಸರ ಹತ್ತಿರ ಹೋಗಿ ಹಾಜರ ಆಗಿ ಈಗಲೇ ಗಲ್ಲಿಗೆ ಹೋಗುವದಕ್ಕಿಂತ ವಡವಿ ಮಾಸ್ತರರೊಂದಿಗೆ ಹೊರಗಿದ್ದು ಕೆಲಸ ಮಾಡಲಿ. ಅವರಿಗೆ ಆದದ್ದು ನಮ್ಮ ಹುಡುಗರಿಗೂ ಆಗುತ್ತದೆ"

ಎಂದು ಹೇಳಿದರು. ಅದಕ್ಕೆ ಎಲ್ಲರೂ ಸಮ್ಮತಿಸಿದರು. ಅವರ ಈ ಭೀತಿ ಅರ್ಥವಿಲ್ಲದೆ ಇರಲಿಲ್ಲ. ಆಂದೋಲನ ಆದೇ ಪ್ರಾರಂಭವಾಗಿತ್ತು. ಕೆಲವೆಡೆ ಆಗಲೇ ಉಗ್ರರೂಪ ತಾಳಹತ್ತಿತ್ತು. ಆಂದೋಲನ ಹೆಚ್ಚು ಬೆಳೆಯಬಾರದೆಂಬುದಕ್ಕೆ ವಿಧ್ವಂಸಕ ಕೃತ್ಯ ಮಾಡಿದವರ ಮೇಲೆ ಈ ಪ್ರಕಾರದ ಖಟ್ಲೆ ಹಾಕಿ ಒಬ್ಬಿಬ್ಬರಿಗೆ ಫಾಸಿ ಕೊಟ್ಟು ಚಳವಳಿ ಮಾಡುವವರಿಗೆ ಚಳವಳಿ ಮಾಡದಂತ ಭೀತಿ ನಿರ್ಮಾಣ ಮಾಡುವ ಸಂಭವವೂ ಇತ್ತು. ಇಂತಹ ಪರಿಸ್ಥಿತಿಯಲ್ಲಿ ಹುಡುಗರ ಪಾಲಕರು ವಿವಂಚನೆಗೊಳಗಾಗುವದು ಸ್ವಾಭಾವಿಕವಾಗಿತ್ತು. ಹುಡುಗರು ಹೊರಗುಳಿದು ಕೆಲಸ ಮಾಡಬೇಕೆಂದು ನಿರ್ಧರಿಸಲಾಯಿತು.

ಮತ್ತೊಂದು ತಂತಿ ಕಡಿಯುವ ಕಾರ್ಯಕ್ರಮ

ಪಂಚರ ಹಾಗೂ ತಾಯಿತಂದೆಗಳ ಸಹಾನುಭೂತಿ ಮತ್ತು ಒಂದು ರೀತಿಯ ಸಮ್ಮತಿ ದೊರೆತುದರಿಂದ ನಮ್ಮ ಪಡೆಯೊಳಗಿನ ಹುಡುಗರಿಗೆ ಒಂದು ಪ್ರಕಾರದ ಉತ್ಸಾಹ, ಹುಮ್ಮಸು ಬಂದಂತಾಯಿತು. ತಮಗಾಗುವ ಶಿಕ್ಷೆಯ ಅಂಜಿಕೆಗಿಂತ ತಾಯಿ ತಂದೆಗಳು ತಮಗೆ ಏನೆನ್ನುತ್ತಾರೆಂಬ ಭಯವೇ ಅವರಿಗೆ ಹೆಚ್ಚಾಗಿತ್ತು. ಈಗ ಅವರ ಸಮ್ಮತಿ ದೊರೆತುದರಿಂದ ಅವರಿಗೆ ಸಮಾಧಾನವಾಯಿತು. "ಇನ್ನು ಯಾವ ಬೇಕಾದ ಕೆಲಸ ಹೇಳಿರಿ ಅದನ್ನು ಮಾಡಿತೋರಿಸುತ್ತೇವೆ" ಎಂದು ಅನ್ನತೊಡಗಿದರು. "ತೊಯಿಸಿ ಕೊಂಡವರಿಗೆ ಮಳೆಯ ಅಂಜಿಕೆ ಏತರದು ? ಒಮ್ಮೆ ತಂತಿ ಕಡಿದರೂ ಫಾಶಿ ಶಿಕ್ಷೆ, ಹತ್ತು ಸಲ ತಂತಿ ಕಡಿದರೂ ಫಾಶಿ ಶಿಕ್ಷೆಯೆ. ಹತ್ತುಸಲ ತಂತಿ ಕಡಿದ್ದರೆ ಹತ್ತುಸಲ ಫಾಶಿ ಶಿಕ್ಷೆ ಕೊಡುತ್ತಾರೆಯೆ" ಎಂದು ತಮ್ಮತಮ್ಮೊಳಗೆ ವಿನೋದದಿಂದ ಮಾತಾಡ ತೊಡಗಿದರು. ಮೊದಲಿಗೆ ಅವರನ್ನು ಆವರಿಸಿದ್ದ ಭೀತಿ ಈಗ ಮಾಯವಾಗಿತ್ತು. ಇಂದು ಯಾವ ಕೆಲಸ ಮಾಡಬೇಕು? ನಾಳೆ ಯಾವ ಕೆಲಸ ಮಾಡಬೇಕು? ಎಂದು ಯಾವಾಗಲೂ ಅವರು ವಿಚಾರ ಮಾಡತೊಡಗಿದರು. ಈ ಉತ್ಸಾಹದ ಭರದಲ್ಲಿಯೇ ಮತ್ತೊಂದು ದಿವಸ ತಂತಿ ಕಡಿಯುವ ಕಾರ್ಯಕ್ರಮವನ್ನು ಗೊತ್ತುಮಾಡಿದೆವು. ಪಂಚರ ಸಭೆ ನಡೆದು ಹೋದ ಮೂರು-ನಾಲ್ಕು ದಿವಸಗಳಲ್ಲಿಯೇ ಈ ಕಾರ್ಯಕ್ರಮ ಗೊತ್ತುಮಾಡಲಾಗಿತ್ತು. ಈಗ ತಂತಿ ಕಡಿಯುವ ಅನುಭವವೂ ಬಂದಿತ್ತು. ಸುಳೇಭಾವಿ-ಸುಲಧಾಳ ಸ್ಟೇಶನ್ನಿನ ನಡುವಿನ ಅಂತರ ಸುಮಾರು ೭-೮ ಮೈಲು ಆಗುತ್ತದೆ. ಸುಳೇಭಾವಿ ಸ್ಟೇಶನ್ನಿನಿಂದ ಸುಲಧಾಳ ಕಡೆಗೆ ಒಂದು-ಒಂದುವರಿ ಮೈಲಿನ ಮೇಲೆ ಒಂದು ಹಳ್ಳವಿದೆ. ಆ ಹಳ್ಳದ ಪೂಲಿನಿಂದ ಪ್ರಾರಂಭ ಮಾಡಿ ಸುಮಾರು ಮೂರು ಮೈಲುದ್ದ ತಂತಿಯನ್ನು ಯಶಸ್ವಿ ರೀತಿಯಿಂದ ಕಡಿಯಲಾಯಿತು. ಈ ರೀತಿ ತಂತಿ ಕಡಿಯುವ ಕಾರ್ಯಕ್ರಮ ಮೇಲಿಂದ ಮೇಲೆ ನಡೆಯತೊಡಗಿದವು.

ಡೇಂಜರ ಝೋನ

ನಾನು ಬೆಳಗಾವಿಯನ್ನು ಬಿಟ್ಟು ಕಾರ್ಯಕರ್ತರೊಂದಿಗೆ ಕುಮರಿಯಲ್ಲಿಯೇ ಇರಹತ್ತಿದೆ. ನಮ್ಮೆಲ್ಲರ ಮೇಲೆ ವಾರಂಟ ಇದ್ದವು. ಆದರಿಂದ ನಾವು ವಿಶೇಷ ತಿರುಗಾಡುವಂತಿರಲಿಲ್ಲ. ಭೂಗತ ಕಾರ್ಯಕರ್ತರಿಗೆ ಅನೇಕ ಜನರ ಸಹಾಯ ಬೇಕಾಗುತ್ತದೆ. ಅಲ್ಲದೆ ಕೇವಲ ಊಟಮಾಡಿ ಸುಮ್ಮನೇ ಕೂಡುವದು ನಮ್ಮ ಉದ್ದೇಶವಿರಲಿಲ್ಲ. ಏನಾದರೂ ಕಾರ್ಯಕ್ರಮ ಮಾಡುವದಕ್ಕಾಗಿಯೇ ನಾವು ಹೊರಗುಳಿದದ್ದು. ದಿನಾಲು ಎಲ್ಲರ ಊಟವನ್ನು ಊರಿಂದ ತರಿಸುವದು ಸಾಧ್ಯವಿರಲಿಲ್ಲ. ಆದುದರಿಂದ ಕುಮರಿಯಲ್ಲಿಯೇ ಅಡಿಗೆಯ ವ್ಯವಸ್ಥೆ ಮಾಡಿದೆವು. ವೆಚ್ಚಕ್ಕಾಗಿ ಊರಲ್ಲಿ ಜೋಳ ಹಾಗೂ ಸ್ವಲ್ಪ ಹಣ ಎತ್ತಿದೆವು. ನಾವು ಹಗಲೆಲ್ಲ ಗುಡ್ಡದಲ್ಲಿಯೇ ಇದ್ದು ಕೆಲಸ ತೀರಿಸಿಕೊಂಡು ರಾತ್ರಿ ಮಲಗುವದಕ್ಕಾಗಿ ಕುಮರಿಗೆ ಬರುತ್ತಿದ್ದೆವು. ದಿನಬಿಟ್ಟು ದಿನ ತಂತಿ ಕಡಿಯುವ ಕಾರ್ಯಕ್ರಮ ನಡೆಯಿತು. ಸುಳೇಭಾವಿ ಸ್ಟೇಶನ್ನಿನಿಂದ ಸುಲಧಾಳ ಸ್ಟೇಶನ್ನಿನ ವರೆಗೆ ಹೆಚ್ಚಿನ ಭಾಗ ಗುಡ್ಡಗಾಡು ಪ್ರದೇಶವಿದೆ. ನಾವು ಇದೇ ಭಾಗದಲ್ಲಿ ಕೆಲಸ ಮಾಡುತ್ತಿದ್ದೆವು. ಅಕ್ಕತಂಗೇರಹಾಳದಲ್ಲಿ ಶ್ರೀ ವಾಮನರಾವ ದೇಸಾಯಿಯವರ ಒಂದು ಪಥಕವಿತ್ತು. ಅವರು ಸುಲಧಾಳ ಸ್ಟೇಶನ್ನಿನಿಂದ ಉತ್ತರಕ್ಕೆ ಪಾಚ್ಛಾಪೂರ ವರೆಗಿನ ಭಾಗದಲ್ಲಿ ತಂತಿ ಕಡಿಯುವ ಕೆಲಸ ನಡೆಸಿದ್ದರು. ಪಾಚ್ಛಾಪುರದಲ್ಲಿ ಶ್ರೀ ಅಣ್ಣೂ ಗುರೂಜಿಯವರದೊಂದು ಪಥಕವಿತ್ತು. ಪಾಚ್ಛಾಪುರದಿಂದ ಗೋಕಾಕ ವರೆಗಿನ ಭಾಗದಲ್ಲಿ ಅವರು ಕೆಲಸ ಮಾಡುತ್ತಿದ್ದರು. ಸುಳೇಭಾವಿಯಿಂದ ಗೋಕಾಕ ವರೆಗಿನ ಭಾಗದಲ್ಲಿ ದಿನಾಲೂ ಒಂದು ಕಡೆಗೆ ತಂತಿ ಕತ್ತರಿಸಲಾಗುತ್ತಿತ್ತು, ಹಳಿ ಕಿತ್ತಲಾಗುತ್ತಿತ್ತು. ಆದರಿಂದ ರೇಲ್ವೆ ಅಧಿಕಾರಿಗಳಿಗೂ ಪೋಲೀಸರಿಗೂ ತಲೆಬೇಸರವಾಗಿರಬಹುದು. ಅದನ್ನು ದುರಸ್ತಿ ಮಾಡದೇ ಗತ್ಯಂತರವಿರಲಿಲ್ಲ. ಅವರು ಹಗಲು ತಂತಿಯನ್ನು ಸರಿಮಾಡುತ್ತಿದ್ದರು. ರಾತ್ರಿಯಲ್ಲಿ ಮತ್ತೆ ಅದನ್ನು ಕತ್ತರಿಸಲಾಗುತ್ತಿತ್ತು. ಆದರಿಂದ ಬೆಳಗಾವಿಯಿಂದ ಗೋಕಾಕ ವರೆಗಿನ ಭಾಗವನ್ನು 'ಡೇಂಜರ ಝೋನ' ಎಂದು ಸರಕಾರ ಸಾರಿತು.

ಪಾಯಿಲೆಟ್ ಗಾಡಿ

ರೇಲ್ವೆ ಅಧಿಕಾರಿಗಳು 'ಡೇಂಜರ ಝೋನ' ಎಂದು ಸಾರಿ ಸುಮ್ಮನೇ ಕೂಡ್ರಲಿಲ್ಲ. ಬೆಳಗಾವಿಯಿಂದ ಹುಕ್ಕೇರಿರೋಡಿನ (ಘಟಪ್ರಭಾ) ವರೆಗೆ ರಾತ್ರಿ ಒಂದು ಪಾಯಿಲೆಟ ಗಾಡಿಯನ್ನು ಓಡಾಡಿಸತೊಡಗಿದರು. ಒಂದು ಇಂಜಿನ್ನು ಅದರ ಹಿಂದೆ ಒಂದು ಸಶಸ್ತ್ರ ಪೋಲೀಸರ ಡಬ್ಬಿ, ಅದರ ಹಿಂದೆ ಗಾರ್ಡನ ಡಬ್ಬಿ ಇದೇ ಪಾಯಿಲೆಟ್ ಗಾಡಿ. ಪಾಯಿಲೆಟ್ ಗಾಡಿಯನ್ನು ಪ್ಯಾಸೆಂಜರ ಗಾಡಿ ಬರುವದಕ್ಕಿಂತ ಅರ್ಧತಾಸ ಮುಂಚೆ ಓಡಿಸುತ್ತಿದ್ದರು. ರೈಲಿನ ಎರಡೂ ಬದಿಗೆ ಒಂದು ಫರ್ಲಾಂಗ ಅಂತರದೊಳಗೆ ಯಾರೂ ಬರಬಾರದು. ಬಂದರೆ ಅವರನ್ನು ಗುಂಡಿಕ್ಕಿ ಕೊಲ್ಲಲಾಗುವದೆಂದು ಸರಕಾರ

ಜಾಹೀರ ಮಾಡಿತ್ತು. ಈ ಗಾಡಿ ಹೋಗುವಾಗ ಪೋಲೀಸರು ಡಬ್ಬಿಯೊಳಗಿಂದಲೇ ಸಪ್ಪಳವಾದ ಕಡೆಗೆ ಗುಂಡುಹಾರಿಸುತ್ತ ಹೋಗುತ್ತಿದ್ದರು. ಅದರೀಂದ ಕಾರ್ಯಕ್ರಮ ಮಾಡುವವರಿಗೆ ಭಯವುಂಟಾಗಿ ಕಾರ್ಯಕ್ರಮ ಮಾಡಬಾರದೆಂಬುದೇ ಅವರ ಉದ್ದೇಶವಾಗಿತ್ತು.

ಶ್ರೀ ವಡವೀಯವರನ್ನು ಹಿಡಿದುಕೊಟ್ಟವರಿಗೆ ೫೦೦೦ ರೂಪಾಯಿ ಬಹುಮಾನ

ಹುವಲಿ. ಅಕ್ಕತಂಗೇರಹಾಳ. ಪಾಚ್ಛಾಪುರಗಳಲ್ಲಿ ಭೂಗತರಾಗಿ ಕೆಲಸಮಾಡುವ ಗುಂಪುಗಳಿದ್ದಂತೆ ಸಂಪಗಾಂವಿಯಲ್ಲಿ ಶ್ರೀ ಚನ್ನಪ್ಪ ವಾಲಿ, ಬೆಳಗಾಂವಿಯಲ್ಲಿ ಶ್ರೀರಂಗ ಕಾಮತ ಇವರೂ ಗುಂಪು ಕಟ್ಟಿಕೊಂಡು ಕೆಲಸ ಮಾಡುತ್ತಿದ್ದರು. ಅದರಿಂದ ಚನ್ನಪ್ಪ ವಾಲಿ, ಶ್ರೀರಂಗ ಕಾಮತ ಮತ್ತು ಅಣ್ಣೂ ಗುರೂಜಿ, ರಾಮಚಂದ್ರ ವಡವಿ ಹೀಗೆ ಬೆಳಗಾವಿ ಜಿಲ್ಹೆಯಲ್ಲಿ ಈ ನಾಲ್ವರನ್ನು ಹಿಡಿದುಕೊಟ್ಟವರಿಗೆ ಪ್ರತಿಯೊಬ್ಬರಿಗೂ ಐದು–ಐದು ಸಾವಿರ ರೂಪಾಯಿ ಬಹುಮಾನ ಕೊಡುವದಾಗಿ ಸರಕಾರವು ಜಾಹೀರ ಮಾಡಿತು. ಅದರಿಂದ ಜನ ಚಿಂತೆಗೊಳಗಾದರು. ನಾವೂ ಸಹ– ಇಷ್ಟೊಂದು ದೊಡ್ಡ ಹಣದ ಆಶೆಗಾಗಿ ಯಾರಾದರೂ ನಮ್ಮನ್ನು ಎಲ್ಲಿ ಹಿಡಿದುಕೊಡುತ್ತಾರೆಯೋ– ಎಂದು ವಿವಂಚನೆಗೊಳಗಾದೆವು. ಶ್ರೀರಂಗ ಕಾಮತ ಮತ್ತು ಅಣ್ಣೂ ಗುರೂಜಿ ಇವರು ಬೇಗನೇ ಪೋಲೀಸರ ಕೈಗೆ ಸಿಕ್ಕರು. ಕೆಲವು ದಿವಸಗಳ ನಂತರ ಚನ್ನಪ್ಪ ವಾಲಿಯವರನ್ನೂ ಹಿಡಿದರು. ಆದರೆ ವಾಮನರಾವ ದೇಸಾಯಿ, ಮತ್ತು ಶ್ರೀ ವಡವಿ (ನನ್ನನ್ನು) ಯವರನ್ನು ಹಿಡಿಯುವದು ಪೋಲೀಸರಿಗೆ ಸಾಧ್ಯವಾಗಲಿಲ್ಲ.

ರೈಲು–ಕಂಬಿ–ಕಿತ್ತಿದುದು

ವಾಸುದೇವ ರೈಲು ಕಂಬಿ ಕಿತ್ತಬೇಕೆಂದು ಹಾತೊರೆಯುತ್ತಿದ್ದ. ಒಂದು ದಿವಸ ರಾತ್ರಿ ಹತ್ತು ಗಂಟೆಗೆ ಕಂಬಿಗಳನ್ನು ಕಿತ್ತಲಿಕ್ಕೆ ಹೋಗುವದೆಂದು ಗೊತ್ತು ಮಾಡಿದೆವು. ನಮ್ಮ ಪಡೆಯ ಜನರಲ್ಲದೆ ನಮ್ಮ ಕಾರ್ಯಕ್ರಮಕ್ಕೆ ಬರುವ ಜನರಿಗೂ ಹೇಳಿಕಳಿಸಿದೆವು. ರೈಲುಗಾಡಿ, ಯಾವ ಸಮಯಕ್ಕೆ ಬರುತ್ತದೆ, ಯಾವ ಸಮಯಕ್ಕೆ ಹೋಗುತ್ತದೆ ಎಂಬುದನ್ನು ತಿಳಿದುಕೊಂಡೆವು. ಪಾಯಲೆಟ್ ಗಾಡಿ ಬರುವ ಸಮಯವನ್ನೂ ಲಕ್ಷ್ಯದಲ್ಲಿ ತೆಗೆದುಕೊಂಡೆವು. ರಾತ್ರಿ ೧೧ ಗಂಟೆಯಿಂದ ಬೆಳಗಿನ ಮೂರು ಗಂಟೆಯ ವರೆಗೆ ಯಾವ ಪ್ಯಾಸೆಂಜರ ಗಾಡಿಯೂ ಇರಲಿಲ್ಲ. ರೈಲು ಕಂಬಿ ಕಿತ್ತಲಿಕ್ಕೆ ನಾವು ಇದೇ ಸಮಯವನ್ನು ನಿಶ್ಚಯಿಸಿದೆವು. ಕಂಬಿ ಕಿತ್ತುವ ಸಾಧನಗಳನ್ನು ಕೂಡಿಸಿದೆವು. ಕೆಲವು ಹಾರಿ ಹಾಗೂ ಗುದ್ದಲಿಗಳನ್ನು ಸಂಗಡ ಒಯ್ದಿದ್ದೆವು. ವಾಸುದೇವನು ಪಾನಾದಿಂದ ನಟ್‌ಬೋಲ್ಟ ಹೇಗೆ ಉಚ್ಚಬೇಕು—ಫಿಶ್-ಪ್ಲೇಟ ಹೇಗೆ ತೆಗೆಯಬೇಕು—

ಎಂಬುದನ್ನು ತೋರಿಸಿದ. ತಾನೂ ಕೆಲಸ ಮಾಡತೊಡಗಿದ. ಕೆಲವರು ಸುದ್ದಿ ತಿಳಿಯ ಬಾರದೆಂದು ರೈಲುದಾರಿಯ ಎರಡೂ ಬದಿಯ ತಂತಿಗಳನ್ನು ಕತ್ತರಿಸಿದರು. ಇನ್ನು ಕೆಲವರು ಫಿಶ್-ಪ್ಲೇಟುಗಳನ್ನು ಉಚ್ಚಹತ್ತಿದರು. ಉಚ್ಚಿದ ನಂತರ ಹಾರಿಯನ್ನು ಹಾಕಿ, ಕಂಬಿಗಳನ್ನು ಕೀಳಲಾಗುತ್ತಿತ್ತು. ಹೀಗೆ ಎರಡು-ಮೂರು ಫರ್ಲಾಂಗು ಕಿತ್ತಿರ ಬಹುದು. ಅಷ್ಟರಲ್ಲಿ ಯಾವದೋ ಒಂದು ರೈಲು ಬಂದು ಕೂಗತೊಡಗಿತು. ಇಂತಹ ಕೆಲಸಗಳನ್ನು ಮಾಡುವಾಗ ಪ್ಯಾಸೆಂಜರ ಇರುವ ಗಾಡಿಗಳಿಗೆ ಅಪಾಯವಾಗದಂತೆ ಆಚೀಚೆ ಬದಿಗಳಲ್ಲಿ ಕೆಂಪು ನಿಶಾನೆಯನ್ನು ನಿಲ್ಲಿಸಲಾಗುತ್ತಿತ್ತು. ಆ ಪ್ರಕಾರ ನಿಶಾನೆ ಗಳನ್ನು ನಿಲ್ಲಿಸಿ, ನಾವು ಕೆಲಸಬಿಟ್ಟು ನಮ್ಮ ಸ್ಥಳಕ್ಕೆ ಬಂದೆವು. ಇತರರು ತಮ್ಮ ತಮ್ಮ ಮನೆಗಳಿಗೆ ಹೋದರು.

ನಾವು ಯಾವಾಗಲೂ ಒಂದೆರಡು ಮಾತುಗಳ ಬಗ್ಗೆ ಬಹಳ ಎಚ್ಚರ ತೆಗೆದು ಕೊಳ್ಳುತ್ತಿದ್ದೆವು. ಕಾರ್ಯಕ್ರಮ ಮಾಡುವಾಗ ಅಥವಾ ಇತರ ಯಾವದೇ ಕಾಲದಲ್ಲಿ ಅಧಿಕಾರಿಗಳಿಗಾಗಲಿ ಅಥವಾ ಅವರ ಕರ್ಮಚಾರಿಗಳಿಗಾಗಲಿ ಪ್ರಾಣಹಾನಿ ಆಗಕೂಡದು. ಪ್ರಸಂಗ ಬಂದರೆ ನಾವು ಕಾರ್ಯಕರ್ತರು—ನಮ್ಮ ಜೀವಕ್ಕೆರವಾದರೂ ಅಡ್ಡಿ ಇಲ್ಲ ಎಂಬ ನೀತಿಯನ್ನು ಅನುಸರಿಸುತ್ತಿದ್ದೆವು. ಇದು ಒಂದು. ಇನ್ನೊಂದು ಮಾತೆಂದರೆ ಪೋಷ್ಟ ಮುಂತಾದುವನ್ನು ಒಡೆಯುವಾಗ ವೈಯಕ್ತಿಕ ಹಣ ದೊರೆತರೆ ಅದಕ್ಕೆ ಕೈ ಹಚ್ಚತಕ್ಕದ್ದಲ್ಲ—ಮತ್ತು ವೈಯಕ್ತಿಕ ಆಸ್ತಿಯನ್ನು ನಾಶಮಾಡತಕ್ಕದ್ದಲ್ಲ. ಈ ಎರಡೂ ಮಾತುಗಳನ್ನು ನಾವು ಕೊನೆಯವರೆಗೆ ಪಾಲಿಸಿದೆವು. ಇದರ ವಿವರಣೆ ಮುಂದೆ ಬರುತ್ತದೆ.

ಹಣಮಂತರಾವ ಕೌಜಲಗಿಯವರ ಭೆಟ್ಟಿ

ನಮಗೆ ಬೇರೆಕಡೆಯಿಂದ ಹಣದ ಸಹಾಯವೇನೂ ಇರಲಿಲ್ಲ. ಗು. ಗಂಗಾಧರ ರಾಯರು ಮೊದಲೇ ಸೆರೆಮನೆಗೆ ಹೋಗಿದ್ದರು. ಪುಂಡಲೀಕಜಿ ಭೂಗತರಾಗಿ ಮಿರಜಿ ಯಲ್ಲಿ ಕೆಲಸಮಾಡುತ್ತಿದ್ದರು. ಯಾಳಗಿಯವರ ಮನೆಯಲ್ಲಿ ದೊಡ್ಡವರೆಲ್ಲರನ್ನೂ ಸೆರೆಮನೆಗೆ ಹಿಡಿದುಕೊಂಡು ಹೋಗಿದ್ದರು. ಬೆಳಗಾಂವಿಯಲ್ಲಿ ಕಾಂಗ್ರೆಸ್ ಮುಂದಾಳು ಗಳಾದ ಶ್ರೀ ನಾರಾಯಣರಾವ ಜೋಶಿ ಮೊದಲಾದವರೂ ಜೇಲಿನಲ್ಲಿದ್ದರು. ಈ ದಿವಸಗಳಲ್ಲಿ ಇತರರನ್ನು ಭೆಟ್ಟಿ ಆಗುವದು ಕಷ್ಟ. ಆದರೆ ದಿನಾಲು ೨೫–೩೦ ಜನರಿಗೆ ಎರಡು ಹೊತ್ತು ಊಟ-ಉಪಹಾರವಾಗಬೇಕು. ಇತರ ವೆಚ್ಚಕ್ಕೂ ಹಣಬೇಕು. ಊರವರಾದರೂ ಎಷ್ಟಂತ ಕೊಡಬೇಕು. ಆದುದರಿಂದ ನಾವು ಬಹಳ ತೊಂದರೆ ಯಲ್ಲಿದ್ದೆವು. ಈ ವಿಷಯ ಹಣಮಂತರಾಯರಿಗೆ ಗೊತ್ತಾಯಿತು. ಆಗ ಅವರು ಘಟಪ್ರಭೆಯಲ್ಲಿ ಕರ್ನಾಟಕ ಆರೋಗ್ಯಧಾಮದಲ್ಲಿದ್ದರು. ಅವರು ತಮ್ಮನ್ನು ಭೆಟ್ಟಿ ಯಾಗಲಿಕ್ಕೆ ಹೇಳಿಕಳಿಸಿದರು. ನಾನು, ಬಿ. ಆರ್. ಪಾಟೀಲ ಒಬ್ಬರಿಗೇ ಎಲ್ಲಿ ಹೋಗು

ತ್ತೇನೆಂಬುದನ್ನು ಹೇಳಿ. ಎರಡು ದಿವಸಗಳಲ್ಲಿ ತಿರುಗಿಬರುತ್ತೇನೆಂದು ತಿಳಿಸಿದೆನು. ಅಕ್ಕತಂಗೇರಹಾಳಕ್ಕೆ ಹೋಗಿ ಅಲ್ಲಿ ಅಣ್ಣಾ ಬಸಪ್ಪ. ನಿಂಗಪ್ಪ ಕರಲಿಂಗಣ್ಣವರ, ಹಾಗೂ ತಮ್ಮಾ ಬಸಪ್ಪ ಇವರೊಂದಿಗೆ ಗುಡ್ಡದಲ್ಲಿ ನಡೆಯುತ್ತ ಆರೋಗ್ಯಧಾಮಕ್ಕೆ ಹೋದೆವು ಹುದಲಿಯಿಂದ ಆರೋಗ್ಯಧಾಮ ಸುಮಾರು ೨೦ ಮೈಲು ಆಗಬಹುದು. ನಾವು ಆರೋಗ್ಯಧಾಮ ತಲುಪಿದಾಗ ಸಾಧಾರಣ ೧೨ ಗಂಟೆಯಾಗಿತ್ತು. ಸ್ನಾನ, ಊಟ ತೀರಿಸಿಕೊಂಡು ನಾವು ಸ್ವಲ್ಪ ವಿಶ್ರಾಂತಿ ತೆಗೆದುಕೊಂಡೆವು. ಅನಂತರ ಹಣಮಂತರಾಯರನ್ನು ಕಂಡು ಒಂದು ಗಂಟೆ ಮಾತನಾಡಿದೆವು. ನಮ್ಮ ಗುಂಪಿನ ಪರಿಸ್ಥಿತಿ ನಾವು ಮಾಡುತ್ತಿರುವ ಕೆಲಸ— ಎಲ್ಲವನ್ನೂ ತಿಳಿಸಿದೆವು. ನಮ್ಮ ವೆಚ್ಚಕ್ಕೆಂದು ಅವರು ಒಂದು ನೂರು ರೂಪಾಯಿ ಕೊಟ್ಟರು. ನಮಗೆ ಆಯಾಸವಾದ್ದರಿಂದ ರಾತ್ರಿ ಅಲ್ಲಿಯೇ ಉಳಿದೆವು. ಹಣಮಂತರಾಯರು ಹೊರಗೆ ನಿಂತು ಚಳವಳಿಗಾರರಿಗೆ ಸಹಾಯ ಮಾಡುತ್ತಾರೆಂದು ಸರಕಾರಕ್ಕೆ ಸಂಶಯವಿತ್ತು. ಅದರಿಂದ ಅವರ ಮೇಲೂ ಪೋಲೀಸರು ಕಣ್ಣಿಟ್ಟಿದ್ದರು. ಅವರ ಕಡೆಗೆ ಯಾರು ಬರುತ್ತಾರೆ. ಯಾರು ಹೋಗುತ್ತಾರೆ ಎಂಬುದನ್ನು ನೋಡುತ್ತಿದ್ದರು. ನಾವು ಅಲ್ಲಿಂದ ಮರಳಿದ ಮೇಲೆ ಪೋಲೀಸರು ಆರೋಗ್ಯಧಾಮಕ್ಕೆ ಬಂದು ಶೋಧಿಸಿ ಹೋದರಂತೆ.

ಮರುದಿನ ಬೆಳಗಿನಲ್ಲಿ ಎದ್ದು ನಾವು ಹೊರಟೆವು. ಆಗ ನನ್ನ ಕಾಲಿಗೆ ಸ್ವಲ್ಪ ಬಾವು ಬಂದಿತ್ತು. ಆದರೆ ಮತ್ತೆ ನಡೆದುಹೋಗದೆ ವಿಧಿಯಿರಲಿಲ್ಲ. ಮೆಲ್ಲಗೆ ನಡೆಯುತ್ತ ಪಾಚ್ಛಾಪೂರವನ್ನು ತಲುಪಿದೆವು. ಮಧ್ಯಾಹ್ನ ಎರಡು ಗಂಟೆಯಾಗಿರಬಹುದು. ಆಗ ನವರಾತ್ರಿ ಹಬ್ಬ. ನಮಗೆ ನಡೆದು ಆಯಾಸವೂ ಆಗಿತ್ತು, ಹಸಿವೂ ಆಗಿತ್ತು. ತಮ್ಮಾ ಬಸಪ್ಪ ಅವರ ಮೇಲೆ ಪೋಲೀಸರ ಕಣ್ಣು ಇರಲಿಲ್ಲ. ಶ್ರೀ ಎಕ್ಕುಂಡಿಯವರು ಪಾಚ್ಛಾಪೂರದಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಹಿಂದೆ ನಿಂತು ಚಳವಳಿಗಾರರಿಗೆ ಎಲ್ಲ ಸಹಾಯ ಮಾಡುತ್ತಿದ್ದರು. ತಮ್ಮಾ ಬಸಪ್ಪ ಅವರನ್ನು ಎಕ್ಕುಂಡಿ ಮಾಸ್ತರರ ಕಡೆಗೆ ಕಳಿಸಿ "ನಾವು ಇಲ್ಲಿಗೆ ಬಂದಿದ್ದೇವೆ, ಹಸಿವು ಬಹಳವಾಗಿದೆ. ಏನಾದರೂ ತಿನ್ನಲಿಕ್ಕೆ ಕೊಟ್ಟು ಕಳಿಸಿರಿ" ಎಂದು ಹೇಳಿಕಳಿಸಿದೆವು. ಏನಾದರೂ ಊಟ ಬರುತ್ತದೆಂದು ನಮಗೆ ಗೊತ್ತಿತ್ತು. ನಾವು ಸ್ನಾನಮಾಡಿ ಸಿದ್ಧರಾದೆವು. ತಮ್ಮಾ ಬಸಪ್ಪ ಶ್ರೀ ಎಕ್ಕುಂಡಿಯವರ ಬಳಿಗೆ ಹೋದಾಗ ಎಲ್ಲರ ಊಟ ಮುಗಿದುಹೋಗಿತ್ತು. ಹೊಸ ಅಡಿಗೆ ಮಾಡಿ ಕಳಿಸುವಷ್ಟು ಸಮಯವಿರಲಿಲ್ಲ. ಅವರು ಇಬ್ಬರು ಹುಡುಗರನ್ನು ನಾಲ್ಕಾರು ಮನೆಗಳಿಗೆ ಕಳಿಸಿ, "ನಮ್ಮ ಮನೆಗೆ ನಾಲ್ಕಾರು ಜನ ಅತಿಥಿಗಳು ಬಂದಿದ್ದಾರೆ. ಈಗಲೇ ಅವರಿಗೆ ತಿರುಗಿ ಹೋಗಬೇಕಾಗಿದೆ. ಅವರ ಊಟಕ್ಕೆ ನಿಮ್ಮ ಮನೆಯಲ್ಲಿ ಇದ್ದುದನ್ನು ಕೊಟ್ಟು ಕಳಿಸಿರಿ" ಎಂದು ಹೇಳಿಕಳಿಸಿದರು. ಈ ಹೊತ್ತಿನಲ್ಲಿ ಎಕ್ಕುಂಡಿ ಮಾಸ್ತರರು ಹೇಳಿ ಕಳಿಸುವರೆಂದರೆ, ಯಾರೋ ಚಳವಳಿಗಾರರು ಬಂದಿರಬೇಕೆಂದು ಎಲ್ಲರೂ ತರ್ಕಿಸಿದರು. ಎಲ್ಲರೂ ತಮ್ಮಲ್ಲಿದ್ದ ಹೋಳಿಗೆ, ಕಡಬು, ಅನ್ನ, ಎಲ್ಲವನ್ನೂ ಕೊಟ್ಟು ಕಳಿಸಿದರು.

ಅದನ್ನೆಲ್ಲ ಇಬ್ಬರು ಹುಡುಗರ ಮೇಲೆ ಹೊರಿಸಿಕೊಂಡು ಶ್ರೀ ಎಕ್ಕುಂಡಿ ಮಾಸ್ತರರು ಸ್ವತಃ ನಾವಿದ್ದಲ್ಲಿಗೇ ಬಂದರು. ನಾವು ಸ್ನಾನಮಾಡಿ ಒಂದು ಗಿಡದ ಬುಡದಲ್ಲಿ ಕುಳಿತಿದ್ದೆವು. ಅಲ್ಲಿ ಹೊಟ್ಟೆತುಂಬ ಊಟಮಾಡಿ ಹೊರಟೆವು. ಶ್ರೀ ಅಣ್ಣಾಬಸಪ್ಪ ಇವರನ್ನು ಕರೆದುಕೊಂಡು ನಾನು ರಾತ್ರಿ ಬಹಳಹೊತ್ತಿಗೆ ಕುಮರಿಗೆ ಬಂದು ತಲುಪಿದೆನು.

ಪುರಸ್ಕಾರದ ಬದಲು ಸೆರೆಮನೆ ವಾಸ

ಊರಿದ್ದಲ್ಲಿ ಹೊಲಗೇರಿ (ಕೊಳಚೆಯ ಪ್ರದೇಶ) ಎಂಬ ಗಾದೆಯ ಮಾತಿನಂತೆ ಹುದಲಿಯ ಊರ ಪಂಚರು, ಪೋಲೀಸ ಪಾಟೀಲರು ಮತ್ತು ಊರ ಜನರು ನಮಗೂ ಹಾಗೂ ಚಳವಳಿಗೂ ಅನುಕೂಲವಿದ್ದರೂ, ಊರಲ್ಲಿ ನಾಲ್ಕೆಂಟು ಜನರು ಚಳುವಳಿಯ ವಿರೋಧಿಗಳಿದ್ದರು. ಅವರು ತಾವೇ ತಮ್ಮನ್ನು ಸರಕಾರದ ಪಕ್ಷದವರೆಂದು ತಿಳಿದುಕೊಳ್ಳುತ್ತಿದ್ದರು. ಭೂಗತರ ಚಲನವಲನೆ ಮತ್ತು ಕಾರ್ಯಕ್ರಮ ತಿಳಿದುಕೊಂಡು ಅವುಗಳನ್ನು ಪೋಲೀಸರಿಗೆ ತಿಳಿಸುತ್ತಿದ್ದರು. ಹೀಗೆ ಮಾಡುವದರಿಂದ ತಮಗೆ ಸರಕಾರದಿಂದ ಪುರಸ್ಕಾರ ಸಿಗಬಹುದೆಂದು ಅವರು ಭಾವಿಸಿದ್ದರು. ಆದರೆ ಅವರಿಗೆ ಪುರಸ್ಕಾರ ದೊರೆಯುವ ಬದಲು, ಸೆರೆಮನೆವಾಸವೇ ದೊರೆಯಿತು. ಈ ಕುಚೋದ್ಯೋಗಿಗಳು ಭೂಗತರ ಚಲನವಲನೆ ಮತ್ತು ಕಾರ್ಯಕ್ರಮಗಳ ವಿವರವನ್ನು ಕರ್ಣೋಪಕರ್ಣವಾಗಿ ತಿಳಿದುಕೊಂಡು ಅವನ್ನು ಪೋಲೀಸರಿಗೆ ತಿಳಿಸುತ್ತಿದ್ದರು. ಆದರೆ ಊರ ಜನರು ಪೋಲೀಸರ ಚಲನವಲನೆಯ ಮೇಲೆ ಕಣ್ಣಿಟ್ಟಂತೆ ಇವರ ಮೇಲೂ ಕಣ್ಣಿಟ್ಟಿದ್ದರು. ಇವರಲ್ಲಿ ಯಾರಾದರೂ ಪೋಲೀಸರ ಕಡೆಗೆ ಹೋದರೆ ಅದನ್ನು ಊರ ಜನರು ಯಾರಾದರೂ ನೋಡಿಯೇ ನೋಡುತ್ತಿದ್ದರು. ಒಬ್ಬಿಬ್ಬರ ಕಣ್ಣು ತಪ್ಪಿಸಬಹುದು. ಇಡೀ ಊರ ಜನರ ಕಣ್ಣು ತಪ್ಪಿಸುವದು ಹೇಗೆ ಸಾಧ್ಯ? ನೋಡಿದವರು ಇದನ್ನು ಕೂಡಲೇ ಭೂಗತರಿಗೆ ತಿಳಿಸುತ್ತಿದ್ದರು. ಅದರಿಂದ ಭೂಗತರು ಆ ಕಾರ್ಯಕ್ರಮ ಬದಲುಮಾಡಿ ಬೇರೊಂದು ಕಾರ್ಯಕ್ರಮ ಗೊತ್ತುಮಾಡುತ್ತಿದ್ದರು.

ಪೋಲೀಸರು ಈ ಕುಚೋದ್ಯೋಗಿಗಳ ಮಾತನ್ನು ನಂಬಿ ಅವರು ಹೇಳಿದ ಸ್ಥಳಕ್ಕೆ ದಾಳಿ ಹಾಕುತ್ತಿದ್ದರು. ಆದರೆ ಅಲ್ಲಿ ಏನೂ ಇರುತ್ತಿದ್ದಿಲ್ಲ. ಇಷ್ಟೇ ಅಲ್ಲ, ಅಲ್ಲಿ ಭೂಗತರು ಬಂದುಹೋದ ಸುಳಿವು ಸಹ ಇರುತ್ತಿದ್ದಿಲ್ಲ. ಹೀಗೆ ಪೋಲೀಸರ ದಾಳಿಗಳು ವ್ಯರ್ಥವಾಗುತ್ತಿದ್ದವು. ಪೋಲೀಸರು ನಿರಾಶೆಯಿಂದ ತಿರುಗಿ ಹೋಗುತ್ತಿದ್ದರು. ಅದರಿಂದ ಪೋಲೀಸರ ಮನಸ್ಸಿನಲ್ಲಿ ಈ ಜನರ ಬಗ್ಗೆ ಸಹ ಸಂಶಯ ಉಂಟಾಗಹತ್ತಿತು. ಇವರು ಹೇಳುವ ಮಾತಿನಲ್ಲಿ ಒಂದಾದರೂ ನಿಜವಿರುವದಿಲ್ಲ. ಇವರೂ ಸಹ ಚಳವಳಿಗಾರರಿಗೆ ಅನುಕೂಲವಾಗಿಯೇ ಇದ್ದು, ನಮ್ಮ ಲಕ್ಷ್ಯವನ್ನು ಬೇರೆ ಕಡೆಗೆ ಸೆಳೆಯುವದಕ್ಕಾಗಿ ಈ ರೀತಿ ಇವರು ಏಕೆ ಸುಳ್ಳು ಸುದ್ದಿ ಕೊಡುತ್ತಿರಬಾರದು? ಎಂಬ ಸಂಶಯ

ಪೋಲೀಸರ ಮನಸ್ಸಿನಲ್ಲಿ ಬರತೊಡಗಿತು. ಇದೇ ಕಾಲಕ್ಕೆ ಊರಲ್ಲಿ ಕೆಲವರು ಈ ಕುಚೋದ್ಯೋಗಿಗಳ ಹೆಸರಿನ ಒಂದು ಪಟ್ಟಿ ಮಾಡಿ. "ಇವರೆಲ್ಲರೂ ಚಳವಳಿಗಾರರಿಗೆ ಅನುಕೂಲರಾಗಿದ್ದಾರೆ. ಇವರು ನಿಮಗೆ ಮೋಸ ಮಾಡುವದಕ್ಕಾಗಿ ನಿಮ್ಮ ಹತ್ತಿರ ಬಂದು ಇಲ್ಲದ ಸುಳ್ಳು ಸುದ್ದಿಗಳನ್ನು ಹೇಳುತ್ತಾರೆ. ಇವರನ್ನು ಬಂಧಿಸದೆ ಊರಲ್ಲಿಯ ಚಳವಳಿ ಶಾಂತವಾಗುವದಿಲ್ಲ" ಎಂದು ಒಂದು ಗುಪ್ತ ಪತ್ರವನ್ನು ಪೋಲೀಸ ಅಧಿಕಾರಿಗೆ ಬರೆದರು. ಪೋಲೀಸರೂ ಇದೇ ಸಂಶಯದಲ್ಲಿದ್ದರು. ಆದುದರಿಂದ ಕೂಡಲೇ ಈ ಕುಚೋದ್ಯೋಗಿಗಳನ್ನೆಲ್ಲ ಬಂಧಿಸಿ ಅವರ ಮೇಲೆ ಖಟ್ಲೆ ಹಾಕಿದರು. ಅವರೆಲ್ಲರಿಗೂ ನಾಲ್ಕು ನಾಲ್ಕು ತಿಂಗಳು ಸಕ್ತಮಜೂರಿ ಶಿಕ್ಷೆಯಾಯಿತು. ಕುಚೋದ್ಯೋಗಿಗಳಿಗೆ ಚಳವಳಿಗಾರರ ಸುದ್ದಿಗಳನ್ನು ಹೇಳಿದ್ದಕ್ಕಾಗಿ ಸರಕಾರದಿಂದ ಪುರಸ್ಕಾರ ದೊರೆಯುವ ಬದಲು ಸೆರೆಮನೆವಾಸ ದೊರೆಯಿತು. ಆದರೆ ಈ ಸೆರೆಮನೆವಾಸ ಸಹ ಅವರಿಗೆ ಈಗ ಒಂದು ರೀತಿಯ ಪುರಸ್ಕಾರವೇ ಆಗಿದೆ. ಸ್ವಾತಂತ್ರ್ಯಯೋಧರ ಮಾಲಿಕೆಯಲ್ಲಿ ಇವರೂ ಬಂದಿದ್ದಾರೆ! ಇವರಿಗೂ ವಿರಾಮವೇತನ ದೊರೆಯುತ್ತದೆ!

ಪೋಲೀಸರು – ಪಾಳ್ಯ – ಬಿಟ್ಟರು

ಹುದಲಿ, ಅಕ್ಕತಂಗೇರಹಾಳ, ಪಾಚ್ಛಾಪುರದ ಭಾಗದಲ್ಲಿ ಮೇಲಿಂದ ಮೇಲೆ ವಿಧ್ವಂಸಕ ಚಟುವಟಿಕೆಗಳು ನಡೆಯುತೊಡಗಿದವು. ಪೋಲೀಸರಿಗೆ ದಿನಾಲು ಬೆಳಗಾವಿಯಿಂದ ಬಂದು-ಹೋಗುವದು ತ್ರಾಸದಾಯಕವೆನಿಸಿತು, ಆದುದರಿಂದ ಈ ಮೂರು ಊರುಗಳಿಗೆ ಮಧ್ಯವರ್ತಿಯಾದ ಗುಜನಾಳ ಎಂಬ ಊರಲ್ಲಿ ಸುಮಾರು ಒಂದು–ಒಂದೂವರೆನೂರು ಜನ ಪೋಲೀಸರೂ ಮೂರು–ನಾಲ್ಕು ಜನ ಸಬ್ ಇನ್‌ಸ್ಪೆಕ್ಟರರೂ, ಡಿ. ವಾಯ್. ಎಸ್. ಪಿ. ಮೊದಲಾದವರು ಪಾಳ್ಯ ಬಿಟ್ಟರು. ಗುಜನಾಳ ಊರು ಸುಲಧಾಳ ಸ್ಟೇಶನ್ನದಿಂದ ನಾಲ್ಕು ಫರ್ಲಾಂಗು ಅಂತರದ ಮೇಲೆ ಇದೆ. ಹುದಲಿಯಿಂದ ಒಂದು ಮೈಲಿನ ಮೇಲಿದೆ. ಅಲ್ಲಿ ಇನಾಮದಾರರ ಒಂದು ದೊಡ್ಡ ವಾಡೆ ಇದೆ. ಇನಾಮದಾರರ ಪೈಕಿ ಅಲ್ಲಿ ಯಾರೂ ಇರುತ್ತಿದ್ದಿಲ್ಲ. ಖಾಲಿ ಇದ್ದುದರಿಂದ ಪೋಲೀಸರು ಅದನ್ನು ತಮಗೆ ಇರಲಿಕ್ಕೆ ಉಪಯೋಗ ಮಾಡಿಕೊಂಡರು. ಅಲ್ಲಿಂದ ಅವರು ಅಕ್ಕ-ತಂಗೇರಹಾಳ. ಹುದಲಿ. ಪಾಚ್ಛಾಪೂರಗಳಿಗೆ ಒಂದೊಂದು ಬ್ಯಾಚ್ ಕಳಿಸಹತ್ತಿದರು.

ಗುಡ್ಡದಲ್ಲಿ ವಾಸ

ಪೋಲೀಸರು ಬೆಳಗಾಂವಿಯಿಂದ ಬಂದು ಹೋಗಿ ಮಾಡುತ್ತಿದ್ದಾಗ ನಮಗೆ ಅವರು ಯಾವ ಗಾಡಿಗೆ ಬರುತ್ತಾರೆಂಬುದು ತಿಳಿಯುತ್ತಿತ್ತು. ಸ್ಟೇಶನ್ನಿನ ಮೇಲೆ ಪೋಲೀಸರ ಚಲನವಲನ ನೋಡಲು ನಾವು ಒಬ್ಬಿಬ್ಬರನ್ನು ಇಡುತ್ತಿದ್ದೆವು. ಪೋಲೀಸರು ಗಾಡಿಯಿಂದ ಇಳಿದು ಹುದಲಿಯ ಕಡೆಗೆ ಬರತೊಡಗಿದ ಕೂಡಲೇ ಕಾರ್ಯಕರ್ತರ ಬೇಹುಗಾರರು ಸಾಯಕಲ್ಲ ಮೇಲಿಂದ ಮುಂದೆ ಬಂದು ಪೋಲೀಸರು ಬರುವ ಸುದ್ದಿ

ಯನ್ನು ನಮಗೆ ತಿಳಿಸುತ್ತಿದ್ದರು. ಆದರೆ ಗುಜನಾಳದಲ್ಲಿ ಪೋಲೀಸರು ಬೀಡುಬಿಟ್ಟಿದ್ದ ರಿಂದ ಅವರ ಚಲನವಲನೆಯ ಮೇಲೆ ಕಣ್ಣಿಡುವದು ಕಷ್ಟವಾಯಿತು. ಅವರು ರಾತ್ರಿ-ಹಗಲು ಯಾವಾಗ ಬೇಕಾದಾಗ ನಮ್ಮ ಶೋಧ ಮಾಡಲಿಕ್ಕೆ ಬರತೊಡಗಿದರು. ಅವರಿಗೆ ನಮ್ಮನ್ನು ಹಿಡಿಯುವದು ಒಂದೇ ಉದ್ಯೋಗವಾಗಿತ್ತು. ನಾವು ಹಗಲು ಗುಡ್ಡದಲ್ಲಿದ್ದು, ರಾತ್ರಿ ಕಾರ್ಯಕ್ರಮ ತೀರಿಸಿಕೊಂಡು ಕುಮರಿಯಲ್ಲಿ ಮಲಗಲು ಬರುತ್ತಿದ್ದೆವೆಂದು ಹಿಂದೆ ಹೇಳಿದೆ. ಇದು ಪೋಲೀಸರಿಗೆ ಗೊತ್ತಾದುದರಿಂದ ಅವರು ರಾತ್ರಿಯಲ್ಲಿಯೇ ಬಂದು ಕುಮರಿಯ ಮೇಲೆ ದಾಳಿ ಮಾಡತೊಡಗಿದರು. ಶ್ರೀ ಬಿ. ಆರ್. ಪಾಟೀಲರು ಈ ಕಾರ್ಯದಲ್ಲಿ ತೊಡಗಿದ್ದುದರಿಂದ ಪೋಲೀಸ ಪಾಟೀಲರ ಮೇಲಿನ ವಿಶ್ವಾಸವೂ ಹೋಗಿತ್ತು. ಪೋಲೀಸ ಪಾಟೀಲರು ಚಳವಳಿಗಾರರಿಗೆ ಅನುಕೂಲರಿದ್ದರೆಂದು ಪೋಲೀಸರು ತಿಳಿದಿದ್ದರು. ಅದು ನಿಜವೂ ಇತ್ತು. ಅದರಿಂದ ಪೋಲೀಸರು ಪೋಲೀಸ ಪಾಟೀಲರಿಗೆ ತಮ್ಮ ದಾಳಿಯ ಸುದ್ದಿಯನ್ನು ತಿಳಿಸದೆ ನೇರವಾಗಿ ಕುಮರಿಗೆ ಬರಲಾರಂಭಿಸಿದರು. ನಾವು ರಾತ್ರಿ ಕುಮರಿಯಲ್ಲಿ ಮಲಗುವದನ್ನು ಬಿಟ್ಟು ಹಗಲು-ರಾತ್ರಿ ಗುಡ್ಡದಲ್ಲಿಯೇ ಇರತೊಡಗಿದೆವು.

ಬೇಡರು

ಬೇಡರ ಬಗ್ಗೆ ಒಂದೆರಡು ಮಾತು ಹೇಳದೆ ಅವರ ಜೀವನದ ಕಲ್ಪನೆ ಇತರರಿಗೆ ಬಾರದು. ಅದರಿಂದ ಅವರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಇಲ್ಲಿ ಬರೆಯುತ್ತಿದ್ದೇನೆ. ಬೇಗಾವಿಯ ಹತ್ತರವಿರುವ ಕಣಬರಗಿಯಿಂದ ಕಾಗತಿಯ ವರೆಗೆ ಹದಿನೈದು ಇಪ್ಪತ್ತು ಮೈಲು ಅಗಲ ನಾವಿದ್ದ ಆ ಗುಡ್ಡ ಹಬ್ಬಿದೆ. ಇದು ಸಹ್ಯಾದ್ರಿ ಪರ್ವತದ ಶಾಖೆ ಎಂದು ಹೇಳುತ್ತಾರೆ. ಈ ಗುಡ್ಡ ಕಲ್ಲಿನಿಂದ ಕೂಡಿದ್ದರಿಂದ. ಸಾಗು ಮುಂತಾದ ಮರಗಳು ಎತ್ತರವಾಗಿ ಬೆಳೆಯುವದಿಲ್ಲ. ಆದರೆ ತುಗಲಿ. ವೊಸಿವಾಳ ಮುಂತಾದ ಚಿಕ್ಕ ಚಿಕ್ಕ ಉರವಲ ಗಿಡಗಳು ನಿಬಿಡವಾಗಿ ಬೆಳೆಯುತ್ತವೆ. ಈ ಗುಡ್ಡದ ಭಾಗದಲ್ಲಿಯೇ ಬೇಡರು ಗುಡ್ಡದ ತುದಿಯಲ್ಲಿ ಗುಡಿಸಲು ಕಟ್ಟಿಕೊಂಡು ವಾಸಮಾಡುತ್ತಾರೆ. ಅವರಿಗೆ ನೀರು ಬೇಕಾದರೆ ಕೆಳಗೆ ಕೊಳ್ಳಕ್ಕೇ ಬರಬೇಕು. ಹೆಚ್ಚಾಗಿ ಅವರಿಗೆ ನೀರು ಬೇಕಾಗುವದೇ ಇಲ್ಲ. ಅಡಿಗೆಗೆ ಮತ್ತು ಕುಡಿಯಲಿಕ್ಕೆ ಒಂದೆರಡು ಕೊಡ ಒಯ್ದರೆ ಆಯಿತು. ಅವರು ನೀರಿನ ಹತ್ತಿರ ಇರುವದನ್ನು ಬಿಟ್ಟು ಗುಡ್ಡದ ತುದಿಯಲ್ಲಿ ಗುಡಿಸಲು ಕಟ್ಟಿಕೊಂಡು ಇರುವದಕ್ಕೂ ಒಂದು ಕಾರಣವಿದೆ. ಅವರಿಗೆ ಉಪಜೀವನಕ್ಕೆ ಜಮೀನಾಗಲಿ. ಇತರ ಉದ್ಯೋಗಗಳಾಗಲಿ ಯಾವವೂ ಇರುವದಿಲ್ಲ. ಅವರ ಉಪಜೀವಿಕೆಯ ಮುಖ್ಯ ಉದ್ಯೋಗವೆಂದರೆ ದನಗಳನ್ನು ಕದಿಯುವದು. ಭಟ್ಟಿಸೆರೆ ಮಾಡುವದು. ಇವೇ ಆಗಿವೆ. ಅವರ ಹತ್ತಿರ ಕವಣೆಗಲ್ಲು, ಕುಡಗೋಲು. ಚಪಗೊಡಲಿ. ಭರ್ಚಿ, ಲಾಯಿಸೆನ್ಸ ಇಲ್ಲದ ಬಂದೂಕು. ಮುಂತಾದ ಆಯುಧಗಳಿರುತ್ತವೆ. ಅವರ ಹೆಣ್ಣುಮಕ್ಕಳು ಮಾತ್ರ ಗುಡ್ಡದಲ್ಲಿಯ ಉರವಲು ಕಟ್ಟಿಗೆ ಕಡಿದು ತಲೆಹೊರೆಯಿಂದ ತಂದು ಹುದಲಿ ಮುಂತಾದ

ಊರುಗಳಲ್ಲಿ ನಾಲ್ಕಾರು ಆಣೆಗೆ ಮಾರಿ ಏನಾದರೂ ಮನೆಗೆ ಬೇಕಾಗುವ ಸಾಮಾನು ತೆಗೆದುಕೊಂಡು ಹೋಗುತ್ತಾರೆ. ಈ ಬೇಡರ ಗಂಡಸರ ಮೇಲೆ ಒಂದಿಲ್ಲೊಂದು ತುಡುಗಿನ ಖಟ್ಲೆ ಇರುತ್ತದೆ. ಊರುಗಳೆಂದರೆ, ಇಪ್ಪತ್ತು–ಇಪ್ಪತ್ತೈದು ಗುಡಿಸಲುಗಳ ಒಂದು ಗುಂಪು. ಊರೆಲ್ಲ ಒಗ್ಗಟ್ಟು. ಯಾರೇ ತುಡುಗು ಮಾಡಿದರೂ ಒಬ್ಬರ ವಿರುದ್ಧ ಮತ್ತೊಬ್ಬರು ಚಾಡಿ ಹೇಳುವದಿಲ್ಲ. ಊರಹೋಗೆ ಮುದಕರನ್ನಾಗಲಿ, ಸಣ್ಣ ಹುಡುಗರನ್ನಾಗಲಿ ಕಾವಲಿಗೆ ಇಡುತ್ತಾರೆ. ಯಾರಾದರೂ ಅಪರಿಚಿತರು ಊರ ಕಡೆಗೆ ಬರುತ್ತಿದ್ದರೆ ಅವರು ಒಂದು ವಿಶಿಷ್ಟ ರೀತಿಯ ಶಿಳ್ಳು ಹೊಡೆದು ಊರೊಳಗಿನ ಜನರಿಗೆ ಎಚ್ಚರಿಕೆ ಕೊಡುತ್ತಾರೆ. ಊರು ಗುಡ್ಡದ ನೆತ್ತಿಯ ಮೇಲೆ ಇರುವುದರಿಂದ ಊರಿಗೆ ಬರುವವರು ಸಹಜವಾಗಿ ಕಾಣುತ್ತಾರೆ. ಶಿಳ್ಳು ಹೊಡೆದ ಕೂಡಲೇ ಊರ ಪ್ರಮುಖರು ಮೆಲ್ಲಗೆ ಬಂದು ಯಾರು ಬರುತ್ತಾರೆಂಬುದನ್ನು ನೋಡುತ್ತಾರೆ. ತಮ್ಮ ಪರಿಚಯದವರಿದ್ದರೆ, ಸುಮ್ಮನಿರುತ್ತಾರೆ. ಅಪರಿಚಿತರಿದ್ದರೆ, ಕಲ್ಲು ಒಗೆದು ಗುಂಡುಗಳನ್ನು ಹಾರಿಸಿ, ಅವರನ್ನು ಅಂಜಿಸಿ ಓಡಿಸಿ ಬಿಡುತ್ತಾರೆ, ಬಹುಸಂಖ್ಯೆಯಲ್ಲಿ ಪೋಲೀಸರು ಬರುತ್ತಿದ್ದರೆ, ಊರ ಜನರೆಲ್ಲರೂ ಹೆಂಗಸರೂ ಗಂಡಸರೂ ಗುಡ್ಡದೊಳಗೆ ಓಡಿಹೋಗುತ್ತಾರೆ. ಊರಲ್ಲಿ ಏಳಲಿಕ್ಕೆ ಬಾರದ ಒಬ್ಬಿಬ್ಬರು ಮುದುಕರು ಮಾತ್ರ ಉಳಿಯುತ್ತಾರೆ. ಗುಡಿಸಲದಲ್ಲಿ ಝಡತಿ ಮಾಡಿದರೆ, ಅಲ್ಲಿ ಒಂದೆರಡು ಗಡಿಗೆ, ಮಡಿಕೆಗಳ ಹೊರತು ಬೇರೆ ಏನೂ ಇರುವದಿಲ್ಲ. ಬಂದವರು ಹಾಗೆಯೇ ತಿರುಗಿ ಹೋಗಬೇಕಾಗುತ್ತದೆ. ಇದು ಆಗಿನ ಅವರ ಸ್ಥಿತಿ. ಈಗ ಅವರ ಇರುವಿಕೆಯಲ್ಲಿ ಬಹಳ ಬದಲಾವಣೆಯಾಗಿದೆ.

ಬೇಡರ ಬಂಧುಗಳೊಂದಿಗೆ ನಮ್ಮ ಸಂಬಂಧ

೧೯೪೨ನೇ ಇಸ್ವಿಯಲ್ಲಿ ಕುಮರಿ ಆಶ್ರಮ ಜಪ್ತಾಗಿ ಬಂದಾಗಿತ್ತೆಂದು ಹಿಂದೆ ಬಂದಿದೆ. ೧೯೪೪ರಲ್ಲಿ ಆಂದೋಲನವೆಲ್ಲ ಮುಗಿದು ನಾವು ಹುದಲಿಗೆ ಬಂದೆವು. ಆಗ ಗಾಂಧೀಜೀಯವರು ಸಮಗ್ರ ಗ್ರಾಮಸೇವಾ ವಿಚಾರವನ್ನು ದೇಶದ ಮುಂದಿಟ್ಟಿದ್ದರು. ೧೯೪೨ನೇ ಇಸ್ವಿ ಆಂದೋಲನದ ಕಾಲಕ್ಕೆ ಪೋಲೀಸರು ಆಶ್ರಮ ಜಪ್ತಮಾಡಿ ಅದನ್ನು ತಮ್ಮ ವಶದಲ್ಲಿ ತೆಗೆದುಕೊಂಡಿದ್ದರು. ಆ ಕಾಲಕ್ಕೆ ಪೋಲೀಸರು ಅದನ್ನೆಲ್ಲ ನಾಶ ಮಾಡಿದ್ದರು. ಆದುದರಿಂದ ನಾವು ನಮ್ಮ ಕಾರ್ಯವನ್ನು ಹುದಲಿಯ ಊರಲ್ಲಿಯೇ ಪ್ರಾರಂಭ ಮಾಡಿದವು. ನಾನು ಇಲ್ಲಿ ಹುದಲಿಯಲ್ಲಾದ ವಿಧಾಯಕ ಕಾರ್ಯದ ಸಮಗ್ರ ಇತಿಹಾಸವನ್ನು ಬರೆಯುತ್ತಿರುವದಿಲ್ಲ. ಹಳ್ಳಿಯ ಬೇಡರಿಗೂ ನಮಗೂ ಹೇಗೆ ಸಂಬಂಧ ಬಂದಿತೆಂಬುದನ್ನು ಮಾತ್ರ ಇಲ್ಲಿ ಕೊಡುತ್ತಿದ್ದೇನೆ. ಏಕೆಂದರೆ ಆಂದೋಲನದ ಕಾಲಕ್ಕೆ ಈ ಬೇಡರ ಮಧ್ಯದಲ್ಲಿಯೇ ನಾವಿದ್ದು ಕೆಲಸ ಮಾಡಿದೆವು. ಬೇಡರು ದನಗಳನ್ನು ತುಡುಗು ಮಾಡುತ್ತಿರುವರೆಂದು ಹಿಂದೆ ಬಂದಿದೆ. ಹುದಲಿಯ ಊರ ದನಗಳೆಲ್ಲಾ ಬೇಡರು ಇದ್ದ ಗುಡ್ಡಕ್ಕೇ ಮೇಯಲಿಕ್ಕೆ ಹೋಗುತ್ತಿದ್ದವು. ದನಗಳನ್ನು ಕಾಯಲಿಕ್ಕೆ ಹುಡುಗರೋ ಮುದುಕರೋ ಹೋಗುತ್ತಿದ್ದರು. ಸಾಯಂಕಾಲ ತಿರುಗಿ ಬರುವಾಗ

ದನಗಳ ಗುಂಪಿನಿಂದ ಬೇಡರು ಒಂದನ್ನು ಮೆಲ್ಲಗೆ ಓಡಿಸಿಕೊಂಡು ಗಿಡಗಳ ಗುಂಪಿನಲ್ಲಿ ಮರೆಯಾಗುತ್ತಿದ್ದರು. ಎರಡು ಎತ್ತು ಇಟ್ಟುಕೊಂಡು ಹೊಲಮಾಡುವ ಬಡರೈತ ಒಂದು ಎತ್ತನ್ನು ಕಳೆದುಕೊಂಡರೆ ಅವನ ಮನೆತನವೇ ಹಾಳಾಗುತ್ತಿತ್ತು. ಅದರಂತೆ ಒಂದು ಎಮ್ಮೆ ಸಾಕಿ ಅದರಿಂದ ಉಪಜೀವನ ನಡೆಸುತ್ತಿರುವ ಬಡವಿಯ ಆ ಎಮ್ಮೆ ಕಳವಾಗಿ ಹೋದರೆ ಆಕೆ ನಿರ್ಗತಿಕಳಾಗುತ್ತಿದ್ದಳು. ಸಾಮಾನ್ಯವಾಗಿ ಬಡವರ ದನಕರುಗಳೇ ಹೆಚ್ಚಾಗಿ ಕಳವಾಗಿ ಹೋಗುತ್ತಿದ್ದವು. ದೇಸಾಯಿ, ದೇಶಪಾಂಡೆ, ಇನಾಮದಾರ, ಪಾಟೀಲ, ಮುಂತಾದವರ ದನ ಕಳುವಾಗಿ ಹೋಗುತ್ತಿರಲಿಲ್ಲ. ಇದಕ್ಕೆ ಒಂದು ಕಾರಣವಿತ್ತು. ಇವರು ಬೇಡರಿಗೆ ವರ್ಷಕ್ಕೆ ಇಂತಿಷ್ಟು ಜೋಳ, ಬೆಲ್ಲ ಕೊಡುವದನ್ನು ಗೊತ್ತು ಮಾಡಿ ತಮ್ಮ ದನಕರುಗಳು ಕಳುವಾದರೆ ಅವನ್ನು ಹುಡುಕಿ ತಂದು ಕೊಡಬೇಕೆಂದು ಅವರೊಂದಿಗೆ ಕರಾರು ಮಾಡಿಕೊಳ್ಳುತ್ತಿದ್ದರು. ಅದರಿಂದ ಅವರ ದನಕರುಗಳು ಹೋಗುತ್ತಿರಲಿಲ್ಲ. ಹೋದರೂ ಬೇಡರು ಅವನ್ನು ಹುಡುಕಿ ತಂದುಕೊಡುತ್ತಿದ್ದರು. ಬಡಜನರ ಈ ಸ್ಥಿತಿಯನ್ನು ನೋಡಿ ನನಗೆ ಮರುಕ ಹುಟ್ಟಿತು. ನಾನು ಊರೊಳಗಿನ ಪಂಚರನ್ನೂ, ಪ್ರಮುಖರನ್ನೂ ಕೂಡಿಸಿದೆ. ಊರ ಜನರೆಲ್ಲರೂ ಸಭೆಗೆ ಬಂದಿದ್ದರು. ದನಕರುಗಳು ತುಡುಗಾಗದಂತೆ ಏನಾದರೂ ಯೋಜನೆ ಕೈಕೊಳ್ಳಬೇಕೆಂದು ಹೇಳಿದೆ. ಅವರ ಮುಂದೆ ಒಂದು ಯೋಜನೆಯನ್ನೂ ಇಟ್ಟೆ. ಊರಲ್ಲಿ ಯಾರ ದನಕರು ತುಡುಗಾದರೂ ಶ್ರೀಮಂತರದೆ ಇರಲಿ; ಬಡವರದೆ ಇರಲಿ; ಊರವರೆಲ್ಲರೂ ಕೂಡಿ ಅದನ್ನು ಹುಡುಕಿ ತರಬೇಕು. ಅದನ್ನು ಹುಡುಕಲಿಕ್ಕೆ ಪ್ರತಿ ಮನೆಯಿಂದ ಒಬ್ಬೊಬ್ಬರು ಬರಬೇಕೆಂದು ಹೇಳಿದೆ. ಇದಕೆ ಎಲ್ಲರೂ ಒಪ್ಪಿದರು. ಇದಾದ ಕೆಲವೇ ದಿನಗಳಲ್ಲಿ ಹರಿಜನರ ಪೈಕಿ ಒಬ್ಬನ ಎಮ್ಮೆ ಕಳುವಾಯಿತು. ಮರುದಿನ ಎಮ್ಮೆ ಹುಡುಕಲಿಕ್ಕೆ ಹೋಗುವದಿದೆ. ಮನೆಗೊಂದಾಳು ಬೆಳಗಿನ ೮ ಗಂಟೆಗೆ ಅಂಗಡಿ ಕಟ್ಟೆಗೆ ಕೂಡಬೇಕೆಂದು ಡಂಗುರ ಸಾರಲಾಯಿತು. ೮ ಗಂಟೆಗೆ ಸರಿಯಾಗಿ ಎಲ್ಲರೂ ಸಿದ್ಧರಾಗಿ ಹೊರಟರು. ಜನರಲ್ಲಿ ತುಂಬಾ ಉತ್ಸಾಹವಿತ್ತು. ಶ್ರೀ ಖಾಸೇಖಾನ ದೇಸಾಯರೂ ತಮ್ಮ ಬಂದೂಕನ್ನೇ ತೆಗೆದುಕೊಂಡು ನಮ್ಮ ಜೊತೆಗೆ ಹೊರಟರು. ಬೇಡರು ದನಗಳನ್ನು ತುಡುಗು ಮಾಡಿದ ಕೂಡಲೇ ಅವುಗಳನ್ನು ಕೊಲ್ಲುವದಿಲ್ಲ. ಗುಡ್ಡದಲ್ಲಿ ದಟ್ಟವಾಗಿ ಬೆಳೆದ ಗಿಡಗಂಟಿಗಳ ಗುಂಪಿನಲ್ಲಿ ಸ್ವಲ್ಪ ಬಯಲು ಮಾಡುತ್ತಾರೆ. ಅಲ್ಲಿ ಒಬ್ಬನೇ ಮನುಷ್ಯ ಹೋಗುವಷ್ಟು ದಾರಿ ಮಾಡಿರುತ್ತಾರೆ. ಕದ್ದು ಒಯ್ದ ಎಮ್ಮೆ, ಎತ್ತು ಮುಂತಾದುವನ್ನು ಅಲ್ಲಿ ಒಯ್ದು ಕಟ್ಟಿ ಅದರ ನಾಲಿಗೆಗೆ ಒಂದು ದೊಡ್ಡ ಮುಳ್ಳು ಚುಚ್ಚುತ್ತಾರೆ. ನಾಲಿಗೆಗೆ ಮುಳ್ಳು ಚುಚ್ಚುವ ಕಾರಣವೆಂದರೆ ಅವು ಒದರಬಾರದೆಂದು ಒದರಿದರೆ ಇತರರಿಗೆ ಗೊತ್ತಾಗುತ್ತದೆ. ಹೀಗೆ ಅದನ್ನು ಕಟ್ಟಿ ತಾವು ಹೊರಗೆ ಬಂದು ಆ ದಾರಿಗೆ ಮುಳ್ಳುಕಂಟಿಗಳನ್ನು ಇಟ್ಟುಬಿಡುತ್ತಾರೆ. ಅದರಿಂದ ಯಾರಿಗೂ ಏನೂ ಗೊತ್ತಾಗುವದಿಲ್ಲ. ಊರೂರುಗಳಲ್ಲಿ ಬೇಡರ ದಲ್ಲಾಳಿಗಳಿರುತ್ತಾರೆ. ಅಂಥವರು ಯಾರು ಎಂಬದು ಜನರಿಗೂ ಗೊತ್ತಿರುತ್ತದೆ. ದನ ಕಳೆದುಕೊಂಡವರು ಈ ದಲ್ಲಾಳಿಗಳ ಹತ್ತರ ಹೋಗಿ ಕಳವಾದ ದನದ ಬೆಲೆಯ

ಮಾನದಿಂದ ಹಣಕೊಟ್ಟರೆ ದಲ್ಲಾಳಿಗಳು ಅದನ್ನು ಹುಡುಕಿಕೊಡುತ್ತೇವೆಂದು ಹೇಳಿ ಸಂಜೆಯ ಒಳಗೆ ಆ ಪಶು ಮನೆಗೆ ಬರುವಂತೆ ಮಾಡುತ್ತಾರೆ. ಬೇಡರು ಈ ರೀತಿ ಮೂರು ದಿವಸಗಳ ವರೆಗೆ ಹಾದೀ ಕಾಯುತ್ತಾರೆ. ಅಷ್ಟರಲ್ಲಿ ಯಾರೂ ಬರದಿದ್ದರೆ ಅದನ್ನು ಕಡಿದು ತಿಂದುಬಿಡುತ್ತಾರೆ. ಇದು ಅವರ ರೀತಿ. ಆದರೆ ಬಡವರು ಈ ರೀತಿ ಹಣಕೊಟ್ಟು ತಮ್ಮ ದನ ಬಿಡಿಸಿಕೊಳ್ಳಲಿಕ್ಕಾಗದೆ ಅವನ್ನು ಕಳೆದುಕೊಳ್ಳುತ್ತಿದ್ದರು. ಆದುದರಿಂದ ನಾವು ಯಾವ ದಲ್ಲಾಳಿಗೂ ಏನೂ ಕೊಡದೆ ನಾವೇ ಸಾಯಂಕಾಲದ ವರೆಗೆ ಹಳ್ಳಿ ಹಳ್ಳಿ ಗುಡ್ಡ ಗುಡ್ಡ ತಿರುಗಾಡಿ ಎಮ್ಮೆಯನ್ನು ಹುಡುಕಿ ತಂದೆವು. ಎಮ್ಮೆ ಕದ್ದು ಒಯ್ದವನನ್ನೂ ಹಿಡಿದು ತಂದೆವು. ಎಮ್ಮೆಯ ಹಾಗೂ ಎಮ್ಮೆ ಕದ್ದವನ ಮೆರೆವಣಿಗೆ ಮಾಡಲಾಯಿತು. ಆತನ ಮೇಲೆ ಖಟ್ಲೆ ಹಾಕಬೇಕೆಂದು ವಿಚಾರ ನಡೆಯಿತು. ನಾನು ಬೇಡ ಎಂದೆ. ಆತನಿಗೆ ಬುದ್ಧಿವಾದ ಹೇಳಿ ಆತನನ್ನು ಬಿಟ್ಟುಬಿಟ್ಟೆವು.

ಬೇಡರಲ್ಲಿ ವಿಧಾಯಕ ಕಾರ್ಯ—ಧಾನ್ಯ ಕೋಠಿ

ನಮಗೆ ಇಷ್ಟರಿಂದ ಸಮಾಧಾನವಾಗಲಿಲ್ಲ. ಈ ರೀತಿ ಬಹಳ ದಿವಸ ನಡೆಯಲಿಕ್ಕಿಲ್ಲವೆಂದು ಎನಿಸಿತು. ನಾವು ಏನಾದರೂ ಸ್ಥಾಯೀ ಯೋಜನೆ ಮಾಡಬೇಕೆಂದು ಯೋಚಿಸಿದೆವು. ಬೇಡರ ಮನೋವೃತ್ತಿಯನ್ನೇ ಬದಲು ಮಾಡದೆ ಇದು ಸಾಧ್ಯವಾಗಲಾರದೆಂದು ತಿಳಿದೆವು. ಹಿಂಸಾಚಾರದಿಂದಾಗಲಿ, ಕಾನೂನಿನಿಂದಾಗಲೀ, ಸಾಮಾಜಿಕ ಸುಧಾರಣೆ ಆಗುವದಿಲ್ಲ ಎಂಬ ಗಾಂಧೀಜೀಯವರ ನುಡಿ ನೆನಪಾಯಿತು. ಮೊದಲು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕೆಂದೆನಿಸಿತು. ಅದಕ್ಕಾಗಿ ನಮ್ಮಲ್ಲಿ ಜಮೀನು ಇರಲಿಲ್ಲ. ಉದ್ಯೋಗ ಕೊಡಬೇಕೆಂದರೆ ಅಂತಹ ಉದ್ಯೋಗಗಳೂ ಇರಲಿಲ್ಲ. ಅವರು ಊರೊಳಗಿನ ದೊಡ್ಡ ರೈತರ ಹಾಗೂ ಸಾವುಕಾರರ ಕಡೆಯಿಂದ ವಾತದಿಂದ ಜೋಳ ತೆಗೆದುಕೊಂಡು ಹೋಗುತ್ತಿದ್ದರು. ಸುಗ್ಗಿಯಾದ ನಂತರ ತಾವು ತೆಗೆದುಕೊಂಡು ಹೋದ ಜೋಳದ ಇಮ್ಮಡಿ ಜೋಳ ತಂದುಕೊಡುತ್ತಿದ್ದರು. ಮೊದಲು ಇದನ್ನು ಬಂದು ಮಾಡುವ ವಿಚಾರದಿಂದ ಅವರಿಗಾಗಿ ಧಾನ್ಯ ಕೋಠಿ (grain bank) ಯನ್ನು ಪ್ರಾರಂಭಿಸಿದೆವು. ಒಂದೊಂದು ಊರಿಗೆ ಆ ಊರ ಇಬ್ಬರು ಬೇಡರ ಪ್ರಮುಖರನ್ನು ಗೊತ್ತು ಮಾಡಿದವು. ನಮಗೆ ಬೇಡರ ಹಳ್ಳಿಗಳಲ್ಲಿ ಎಲ್ಲ ಜನರ ಪರಿಚಯವಿರಲಿಲ್ಲ. ಆದುದರಿಂದ ಪ್ರಮುಖರು ಯಾರಿಗೆ ಎಷ್ಟು ಜೋಳ ಕೊಡಿರೆಂದು ಹೇಳುತ್ತಿದ್ದರೋ ಅಷ್ಟು ಜೋಳ ಕೊಡುತ್ತಿದ್ದೆವು. ಅದರಿಂದ ಕೊಟ್ಟ ಜೋಳ ವಸೂಲ ಮಾಡುವ ಭಾರವೂ ಅವರ ಮೇಲೆ ಬೀಳುತ್ತಿತ್ತು. ಸುಗ್ಗಿಯಾದ ನಂತರ ಅವರೇ ಜೋಳವನ್ನು ತಿರುಗಿ ತಂದು ಕೊಡಬೇಕೆಂದು ಹೇಳಿದ್ದೆವು; ತಿರುಗಿ ಕೊಡುವಾಗ ಅದಕ್ಕೆ ೧೦೦ಕ್ಕೆ ೨೫ರಷ್ಟು ಕೂಡಿಸಿ ಕೊಡಬೇಕೆಂದು ತಿಳಿಸಿದ್ದೆವು. ಈ ರೀತಿ ಒಂದೆರಡು ವರ್ಷ ಈ ಕೆಲಸ ಬಹಳ ಚೆನ್ನಾಗಿ ನಡೆಯಿತು. ನನ್ನ ಜ್ಞಾಪಕದ ಪ್ರಕಾರ ಜೋಳ ಒಯ್ದು

ವರು ಬಹುತರ ಯಾರೂ ಜೋಳವನ್ನು ತಿರುಗಿ ಕೊಡದೆ ಇರಲಿಲ್ಲ. ಇದರಿಂದ ನಮ್ಮ ಹಾಗೂ ಬೇಡರ ಸಂಬಂಧ ಬೆಳೆಯಿತು. ಈ ಕೆಲಸಕ್ಕೆ ಶ್ರೀ ತಿಪ್ಪಣ್ಣಾ ಬೆಟಗೇರಿ ಎಂಬವರನ್ನು ನಿಯುಕ್ತ ಮಾಡಲಾಗಿತ್ತು. ಅವರು ಈ ಕೆಲಸವನ್ನು ಬಹಳ ಉತ್ಸಾಹ ದಿಂದ ಮಾಡುತ್ತಿದ್ದರು. ೧೯೪೨ನೇ ಇಸ್ವಿ ಆಂದೋಲನದ ಕಾಲಕ್ಕೆ ನಾವೆಲ್ಲರೂ ಸೆರೆ ಮನೆಗೆ ಹೋದುದರಿಂದ ಈ ಕೆಲಸ ಅಲ್ಲಿಗೇ ನಿಂತಿತು.

ಬೇಡರ ಊರುಗಳಲ್ಲಿ ಪ್ರಾಥಮಿಕ ಶಾಲೆ

೧೯೩೮ರಲ್ಲಿ ನಡುಗಾಲ ಸರಕಾರ ಅಸ್ತಿತ್ವದಲ್ಲಿ ಬಂದಾಗ ಅನೇಕ ಪ್ರಾಂತಗಳಲ್ಲಿ ಕಾಂಗ್ರೆಸ್ಸು ಅಧಿಕಾರದಲ್ಲಿ ಬಂತು. ಆಗ ಅಲ್ಲಲ್ಲಿ Grant-in-aid ಸ್ಕೂಲುಗಳು ಆರಂಭವಾದುವು. ನಾವು ನಮ್ಮ ಸಮಗ್ರ ಗ್ರಾಮ ಸೇವಾ ಸಮಿತಿಯ ಪರವಾಗಿ ಸುತ್ತ ಲಿನ ಹಳ್ಳಿಗಳಲ್ಲಿ ಎಂಟು–ಹತ್ತು ಶಾಲೆಗಳನ್ನು ತೆರೆದೆವು. ನಾಲ್ಕು ಬೇಡರ ಹಳ್ಳಿಗಳಲ್ಲಿ ನಾಲ್ಕು ಶಾಲೆಗಳನ್ನು ಪ್ರಾರಂಭಿಸಿದೆವು. ಇದುವರೆಗೆ ಆ ಜನರಿಗೆ ಸುಶಿಕ್ಷಿತ ಜನರ ಸಂಪರ್ಕವೇ ಇರಲಿಲ್ಲ. ಅಲ್ಲಿಗೆ ಹೋಗುವವರೆಂದರೆ ಪೋಲಿಸರು ಮತ್ತು ದಲ್ಲಾಳಿಗಳು ಮಾತ್ರ. ಶಾಲೆಗೆ ಹುದಲಿಯ ಊರವರೇ ನಾಲ್ಕು ಜನ ತರುಣರನ್ನು ಶಿಕ್ಷಕರನ್ನಾಗಿ ನಿಯಮಿಸಿದ್ದೆವು. ೧) ಬಸವಣ್ಣೆಪ್ಪ ಮೊದಗಿ ೨) ಬಸವಣ್ಣೆಪ್ಪ ಖಣಗಣ್ಣೆ ೩) ಬಸ ವಣ್ಣೆಪ್ಪ ಕೊಂಡಿ ೪) ಕಾಸೀಮ ಸಾ॥ ತಾಹಶೀಲದಾರ. ಒಂದು ದಿವಸ ಶಾಲೆಯ ಇನಸ್ಪೆಕ್ಶನ್ ಮಾಡಲಿಕ್ಕೆ ಏ. ಡಿ. ಈ. ಆಯ್ ಶ್ರೀ ಹುಯಿಲಗೋಳ ಬಂದರು. ಅವರು ಹ್ಯಾಟು, ಬೂಟು, ಸೂಟು. ಹಾಕಿಕೊಂಡು ಹೊರಟಿದ್ದರು. ಮುಂದೆ ಪಟ್ಟೆವಾಲಾ ಸಿಪಾಯಿ ಹಿಂದೆ ಹುಯಿಲಗೋಳ ಸಾಹೇಬರು ಅವರ ಹಿಂದೆ ನಾನು. ಶಾಲಾ ಮಾಸ್ತ ರರು ಮೊದಲೇ ಹೋಗಿ ಶಾಲೆಯನ್ನು ಪ್ರಾರಂಭ ಮಾಡಿದ್ದರು. ಶಾಲೆಯ ಮಕ್ಕಳು ದೂರದಿಂದ ಹ್ಯಾಟು ಬೂಟು ಹಾಕಿದ ಸಾಹೇಬರನ್ನು ನೋಡಿ ಶಾಲೆ ಬಿಟ್ಟು ಓಡಿ ಹೋದರು. ಮಾಸ್ತರರು ಎಷ್ಟು ಹೇಳಿದರೂ ಕೇಳಲಿಲ್ಲ. ನಾವು ಶಾಲೆಗೆ ಹೋದಾಗ ಶಾಲೆಯಲ್ಲಿ ಮಾಸ್ತರರೊಬ್ಬರೇ ಇದ್ದರು. "ಹೀಗೇಕೆ ?" ಎಂದು ಕೇಳಿದರೆ "ಸಾಹೇಬರ ವೇಷ ನೋಡಿ ಮಕ್ಕಳು ಅಂಜಿ ಓಡಿಹೋದರು" ಎಂದು ಹೇಳಿದರು. ಅಂದಿನಿಂದ ಹುಯಿಲಗೋಳ ಸಾಹೇಬರು ಧೋತರ ಉಟ್ಟು ಗಾಂಧೀಟೊಪ್ಪಿಗೆ ಹಾಕಿಕೊಂಡು ಈ ಶಾಲೆಗೆ ಭೆಟ್ಟಿ ಕೊಡತೊಡಗಿದರು.

ಬೇಡರಲ್ಲಿಯ ಸದ್ಗುಣಗಳು

ಬೇಡರ ಬಗ್ಗೆ ಇನ್ನೊಂದು ಮಾತು ಹೇಳುವದು ಅವಶ್ಯ. ಅವರಲ್ಲಿ ಮೇಲೆ ಹೇಳಿದ ಕೆಟ್ಟ ನಡತೆ ಇದ್ದರೂ ಒಂದೆರಡು ಸದ್ಗುಣಗಳೂ ಇಲ್ಲದಿಲ್ಲ. ಅವರು ಒಮ್ಮೆ ವಚನ ಕೊಟ್ಟರೆಂದರೆ, ಅದನ್ನು ಎಂದೂ ಮುರಿಯುವದಿಲ್ಲ. ಉಪ್ಪು ಉಂಡವರ ಮೇಲೆ

ಕೈ ಮಾಡುವದಿಲ್ಲ. ಯಾರಾದರೂ ಅವರಿಗೆ ಉಪಕಾರ ಮಾಡಿದ್ದರೆ ಅವರಿಗೆ ಎಂದೂ ಅವರು ದ್ರೋಹ ಬಗೆಯುವದಿಲ್ಲ. ಇವೆಲ್ಲ ಮಾತುಗಳು ಹಳ್ಳಿಯ ಬೇಡರ ವಿಷಯಕ್ಕೆ ಮಾತ್ರ. ಈಗ ಕೆಲವು ಜನ ಬೇಡರು ದೊಡ್ಡ ದೊಡ್ಡ ಊರುಗಳಲ್ಲಿ ಬಂದು ಹೊಲ ಮನೆ ಮಾಡಿಕೊಂಡು ಇತರರಂತೆ ಇರತೊಡಗಿದ್ದಾರೆ. ಸುಳ್ಳು, ವಂಚನೆ ಮುಂತಾದ ನವನಾಗರೀಕತೆಯ ಸದ್ಗುಣಗಳು ಅವರಲ್ಲಿಯೂ ಬರತೊಡಗಿವೆ. ಇದನ್ನೆಲ್ಲ ಬರೆಯುವ ಕಾರಣವಿಷ್ಟೇ. ನಾವು ಇಂತಹ ಜನರಲ್ಲಿ ವಾಸ ಮಾಡತೊಡಗಿದೆವು. ಚಳವಳಿಯ ಕಾಲದಲ್ಲಿ ಈ ಜನರಿಂದ ಅನೇಕ ರೀತಿಯ ಸಹಾಯವಾಯಿತು. ಅದನ್ನು ಮುಂದೆ ನೋಡಬಹುದು. ನಾವು ಕುಮರಿಯಲ್ಲಿದ್ದಾಗ, ಗುಡ್ಡದಲ್ಲಿರುವಾಗ ಬೇಡರಂತೆ ನೇಕಾರ ಜನರ ಸಹಾಯವು ಬಹಳವಾಯಿತು. ಅವರಲ್ಲಿ ಕೆಲವರು ನಮ್ಮ ಜೊತೆಯಲ್ಲಿಯೇ ಸೇರಿ ಕೆಲಸ ಮಾಡಿದರು. ಸೆರೆಮನೆಗೂ ಹೋದರು.

ಸುಲದಾಳ ಶಾಲೆ, ಹುದಲಿಯ ಧರ್ಮಶಾಲೆ ಅಗ್ನಿಗಾಹುತಿಯಾದವು

ಈ ರೀತಿ ನಾವು ಗುಡ್ಡದಲ್ಲಿ ಇರುತ್ತಿದ್ದರೂ ನಮ್ಮ ಕಾರ್ಯಕ್ರಮಗಳು ನಡೆದೇ ಇದ್ದವು. ಸುಲಧಾಳ ಹಾಗೂ ಹುದಲಿಯಲ್ಲಿ ಸರಕಾರಿ ಚಾವಡಿಗಳಿರಲಿಲ್ಲ. ಸರಕಾರಿ ಅಧಿಕಾರಿಗಳು ಅಥವಾ ಪೋಲೀಸರು ಬಂದರೆ, ಶಾಲೆ ಮತ್ತು ಧರ್ಮಶಾಲೆಯಲ್ಲಿ ವಾಸ್ತವ್ಯ ಮಾಡುತ್ತಿದ್ದರು. ಅದರಿಂದ ಇವನ್ನು ಸುಡಬೇಕೆಂದು ವಿಚಾರ ಮಾಡಿದೆವು. ಆ ರೀತಿ ಒಂದು ರಾತ್ರಿ ಹೋಗಿ ಅವಕ್ಕೆ ಬೆಂಕಿಹಚ್ಚಲಾಯಿತು. ಅವನ್ನು ಆರಿಸಲಿಕ್ಕೆ ಊರವರು ಯಾರೂ ಬರಲಿಲ್ಲ. ಇದು ಕಾಂಗ್ರೆಸ್ಸಿಗರ ಕೃತಿ ಎಂದು ಜನರಿಗೆ ಗೊತ್ತಿತ್ತು. ಸುಲಧಾಳ ಶಾಲೆಯನ್ನು ಸುಟ್ಟದ್ದರಿಂದ ಸುಲಧಾಳದಲ್ಲಿ ಬಸವಣ್ಣೆಪ್ಪ ಜಕ್ಕಣ್ಣವರ, ಬಸಪ್ಪ ತೇಲಿ, ಮಲ್ಲಪ್ಪ ಪಾಟೀಲ ಮುಂತಾದ ಮೂರು–ನಾಲ್ಕು ಜನರ ಮೇಲೆ ವಾರಂಟ ಹುಟ್ಟಿದವು. ಇದುವರೆಗೆ ಅವರು ನಮ್ಮ ಕಾರ್ಯಕ್ರಮಕ್ಕೆ ಗುಪ್ತವಾಗಿ ಬಂದು ಕೆಲಸಮಾಡಿ ಹೋಗುತ್ತಿದ್ದರು. ಈಗ ಅವರೂ ಸಹ ಭೂಗತರಾದರು. ಈ ರೀತಿ ಆ ಕ್ಷೇತ್ರದಲ್ಲಿಯ ಅನೇಕ ಚಾವಡಿಗಳು ಭಸ್ಮವಾದವು.

ಗುಪ್ತ ಸಭೆಗಳು

ಆಂದೋಲನ ಪ್ರಾರಂಭವಾಗಿ ಮೂರು–ನಾಲ್ಕು ತಿಂಗಳಾಗುತ್ತ ಬಂದಿತ್ತು. ಭೂಗತರ ಗುಪ್ತ ಸಂಘಟನೆಯು ಚನ್ನಾಗಿ ರೂಪತಾಳಹತ್ತಿತ್ತು. ಶ್ರೀ ದಿವಾಕರ ಹಾಗೂ ಶ್ರೀ ದ. ಪ. ಕರಮರಕರರು ಭೂಗತರಾಗಿ ಮುಂಬಯಿಯಲ್ಲಿ ಕೆಲಸ ಮಾಡುತ್ತಿದ್ದರು. ಆಂದೋಲನದ ಮಾರ್ಗದರ್ಶನವನ್ನು ಅವರೇ ಮಾಡುತ್ತಿದ್ದರು. ಬುಲೆಟಿನ್‌ಗಳನ್ನೂ ಹೊರಡಿಸುತ್ತಿದ್ದರು. ಮೇಲಿಂದ ಮೇಲೆ ಬೇರೆ ಬೇರೆ ಸ್ಥಳಗಳಲ್ಲಿ ಭೂಗತ ಕಾರ್ಯಕರ್ತರ ಗುಪ್ತ ಸಭೆಗಳನ್ನು ಸೇರಿಸುತ್ತಿದ್ದರು. ಈ ಸಭೆಗಳಲ್ಲಿ ವಿಧ್ವಂಸಕ ಕಾರ್ಯ

ಕ್ರಮಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಸಂಘಟಿತವಾಗಿ ಕೆಲಸಗಳನ್ನು ಹೇಗೆ ಮಾಡಬೇಕೆಂಬ ಯೋಜನೆಗಳು ಸಿದ್ಧವಾಗುತ್ತಿದ್ದವು. ರೇಲ್ವೆ ಸ್ಟೇಶನ್ ಸುಟ್ಟರೆ ಅಂದು ಎಲ್ಲ ಕಡೆಗೂ ಅದೇ ಕಾರ್ಯಕ್ರಮ ನಡೆಯಬೇಕು. ಟಪಾಲು ಹೊಡೆಯುವ ಕಾರ್ಯಕ್ರಮವಾದರೆ ಅದು ಅಂದು ನೂರಾರು ಸ್ಥಳಗಳಲ್ಲಿ ಅದೇ ಕಾರ್ಯಕ್ರಮವಾಗಬೇಕು. ಅಂದರೆ ಸರಕಾರಕ್ಕೆ ನಮ್ಮ ಸಂಘಟಣೆಯ ಅರಿವು ಆಗುತ್ತದೆಂದು ಈ ರೀತಿ ಯೋಚಿಸಲಾಗುತ್ತಿತ್ತು.

ದ. ಪ. ಕರಮರಕರರೊಂದಿಗೆ ವಾದ–ವಿವಾದ

ಒಂದು ಸಲ ಕೊಲ್ಹಾಪೂರದಲ್ಲಿ ಇಂತಹದೇ ಒಂದು ಗುಪ್ತ ಸಭೆ ನಡೆಯಿತು. ಶ್ರೀ ಕರಮರಕರರು ಆ ಸಭೆಗೆ ಬಂದಿದ್ದರು. ಶ್ರೀ ದಿವಾಕರರು ಬಂದಿರಲಿಲ್ಲ. ಅಲ್ಲಿ "ವಿಧ್ವಂಸಕ ಚಟುವಟಿಕೆ ಗಾಂಧೀಜಿಯ ಅಹಿಂಸೆಯಲ್ಲಿ ಸಮಾವೇಶವಾಗುತ್ತದೆಯೆ ?" ಎಂದು ಯಾರೋ ಪ್ರಶ್ನೆ ಎತ್ತಿದರು. ೨೫–೩೦ ಜನ ಬೇರೆ ಬೇರೆ ಕಡೆಯಿಂದ ಈ ಸಭೆಗೆ ಬಂದಿದ್ದರು. ಎಲ್ಲರೂ ತಲೆಮರೆಸಿಕೊಂಡವರೆ. ಗಾಂಧೀಜಿಯ ಅಹಿಂಸೆಯಲ್ಲಿ ಇವೆಲ್ಲ ಬರುತ್ತವೆ ಎಂದು ಶ್ರೀ ಕರಮರಕರರು ಹೇಳಿದರು. ನಾನು ಅದನ್ನು ವಿರೋಧಿಸಿ ಗಾಂಧೀಜಿಯ ವಾಕ್ಯಗಳ ಒಂದೆರಡು ಉದಾಹರಣೆ ಕೊಟ್ಟೆ. ಶ್ರೀ ಕರಮರಕರರಿಗೆ ಇದು ಸರಿಬರಲಿಲ್ಲ. ಅವರು ಶ್ರೀ ಕಾಕಾ ಕಾಲೇಲಕರ ಹಾಗೂ ಶ್ರೀ ಕಿಶೋರಿಲಾಲ ಮಶ್ರುವಾಲಾ ಇವರ ಲೇಖನದ ಉದಾಹರಣೆ ಕೊಟ್ಟು ಸಭೆಯ ಕೆಲಸ ಮುಗಿಸಿದರು. ಶ್ರೀ ಕರಮರಕರರಿಗೆ ಗಾಂಧೀಜಿ ವಿಚಾರ ಗೊತ್ತಿರಲಿಲ್ಲವೆಂತಲ್ಲ. ಆದರೆ ಇದು ಆ ರೀತಿ ಚರ್ಚೆ ಮಾಡುವ ಸ್ಥಳವೂ ಆಗಿರಲಿಲ್ಲ, ಕಾಲವೂ ಆಗಿರಲಿಲ್ಲ, ನಾನು ಆ ರೀತಿ ಮಾತಾಡಿದುದು ತಪ್ಪೆಂದು ನನಗೂ ಹಿಂದಿನಿಂದ ಅನಿಸಿತು. ಬೇರೆ ಬೇರೆ ಕಡೆಯಿಂದ ಜನರು ಬಂದಿದ್ದರು. ಅವರ ಬುದ್ಧಿ ಭೇದವಾಗುವ ಸಂಭವವಿತ್ತು. ಶ್ರೀ ಕರಮರಕರರು ಆಗ ನನಗೇನೂ ಇದರ ಬಗ್ಗೆ ಮಾತಾಡಲಿಲ್ಲ.

ಕೌಜಲಗಿ ಹನುಮಂತರಾಯರ ಬುದ್ಧಿಮಾತು

ಇದಾದ ಕೆಲವು ದಿವಸಗಳ ಮೇಲೆ ನಾನು ಮುಂಬೈಗೆ ಹೋದೆ. ಅಲ್ಲಿ ಶ್ರೀ ಆರ್. ಎ. ಜಹಾಗೀರದಾರರ ಮನೆಯಲ್ಲಿ ಶ್ರೀ ಹನುಮಂತರಾಯರು ಬಂದಿದ್ದರು. ನಾನು ಮುಂಬೈಗೆ ಬಂದ ಸುದ್ದಿ ಅವರಿಗೆ ಗೊತ್ತಾದುದರಿಂದ ಅವರು ನನ್ನನ್ನು ತಮ್ಮ ಭೆಟ್ಟಿಗೆ ಕರೆಕಳಿಸಿದರು. ನಾನು ಜಹಾಗೀರದಾರರ ಮನೆಗೆ ಹೋಗಿ ಅವರನ್ನು ಭೆಟ್ಟಿಯಾದೆ. ಅವರು ನನ್ನ ಆರೋಗ್ಯದ ಬಗ್ಗೆ, ಕೆಲಸದ ಬಗ್ಗೆ, ಎಲ್ಲ ವಿಚಾರಿಸಿದರು. ಮಾತುಗಳೆಲ್ಲ ಮುಗಿದನಂತರ "ಪಡವಿಯುವರೇ. ಈ ಕಾಲದಲ್ಲಿ ಎಲ್ಲರೂ ಶಹಾಣೇರು ಆಗಬಾರದು. ಇದು ಯುದ್ಧದ ಕಾಲ. ಅಳಿವು–ಉಳಿವಿನ ಪ್ರಶ್ನೆ ಇದೆ" ಎಂದು

ಅಂದರು. ಅವರ ಮೊದಲನೆಯ ವಾಕ್ಯವನ್ನು ಕೇಳಿದ ಕೂಡಲೇ ನನಗೆ ಇದು ಕೊಲ್ಲಾಪುರದ ಸಭೆಯ ವಿಷಯಕ್ಕೇ ಎಂದು ಗೊತ್ತಾಯಿತು. "ನಾನು ಆಂದೋಲನದ ಕಾಲದಲ್ಲಿ ಗುಪ್ತಸಭೆಯಲ್ಲಿ ಮಾತಾಡುತ್ತಿದ್ದೇನೆ ಎಂಬುದನ್ನು ಮರತೇ ಬಿಟ್ಟೆ. ಆದುದರಿಂದ ಹೀಗಾಯಿತು. ಹಿಂದಿನಿಂದ ನನಗೂ ಅದರ ಕಲ್ಪನೆ ಬಂತು" ಎಂದು ಹೇಳಿದೆ. ಅವರು ನಗುತ್ತ "ಆಗಲಿ ಹೋಗಿರಿ. ಸ್ವಲ್ಪ ಜಾಗರೂಕತೆಯಿಂದ ಕೆಲಸಮಾಡಿರಿ" ಎಂದು ಹೇಳಿ ಕಳಿಸಿದರು. ಶ್ರೀ ಕರಮರಕರರು ಹನುಮಂತರಾಯರಿಗೆ ಭೆಟ್ಟಿಯಾದಾಗ ಕೊಲ್ಲಾಪೂರದ ಘಟನೆಯ ಸುದ್ದಿಯನ್ನು ಅವರಿಗೆ ಹೇಳಿರಬೇಕೆಂದು ನನಗೆನಿಸಿತು.

ಭೂಗತ ಕಾರ್ಯಕರ್ತರ ಭೂಗತ ವಿವಾಹ

ನಾನು ಭೂಗತನಿದ್ದಾಗ ಇನ್ನೊಂದು ಘಟನೆ ನಡೆಯಿತು. ೧೯೪೨ನೇ ಇಸ್ವಿ "ಭಾರತದಿಂದ ತೊಲಗಿರಿ" ಆಂದೋಲನ ದೀರ್ಘಕಾಲದ್ದಾಗಿತ್ತು. ಈ ಅವಧಿಯಲ್ಲಿ ಅನೇಕ ಶುಭಾಶುಭ ಘಟನೆಗಳು ಸಂಭವಿಸಿದವು. ಕಾರ್ಯಕರ್ತರು ಭೂಗತರಿದ್ದಾಗ ಎಷ್ಟೋ ಜನರು ತಮ್ಮ ತಾಯಿ–ತಂದೆಗಳನ್ನು ಕಳೆದುಕೊಂಡರು. ಎಷ್ಟೋ ಜನರು ಹೆಂಡಂದಿರಿಗೆ ಎರವಾದರು. ಎಷ್ಟೋ ಕಾರ್ಯಕರ್ತರ ಹೊಲ–ಮನೆಗಳು ಜಪ್ತಾದವು. ಅದೇ ರೀತಿ ಕಾರ್ಯಕರ್ತರು ಭೂಗತರಿದ್ದಂತೆ ಅವರ ವಿವಾಹಗಳೂ ಭೂಗತವಾಗಿಯೇ ನಡೆದವು. ಅಂತಹ ಒಂದು ಘಟನೆಯನ್ನು ಇಲ್ಲಿ ಉದಾಹರಿಸುತ್ತೇನೆ. ನಾನು ಭೂಗತನಿದ್ದಾಗ ನಡು–ನಡುವೆ ಬೆಳಗಾಂವಿಗೆ ಹೋಗುವ ಪ್ರಸಂಗ ಬರುತ್ತಿತ್ತು. ಆಗ ಅಲ್ಲಿ ಒಂದೇ ಸ್ಥಳದಲ್ಲಿರುವ ಬದಲು ಬೇರೆ ಬೇರೆ ಕಡೆಗೆ ಸ್ಥಳ ಬದಲಾಯಿಸುತ್ತಿದ್ದೆ. ಬೆಳಗಾಂವಿಯಲ್ಲಿ ಕುಮಾರೀ ಪ್ರಮೀಲಾ ದೇಶಪಾಂಡೆ. (ಸೌ. ಪ್ರಮೀಲಾತಾಯಿ ಕಾಮತ) ಮತ್ತೂ ಕೆಲವರು ಕೂಡಿ ಕನ್ನಡ ಮರಾಠಿ ಬುಲೆಟಿನ್‌ಗಳನ್ನು ಹೊರಡಿಸುತ್ತಿದ್ದರು. ಆ ಬುಲೆಟಿನ್ನುಗಳ ಬೇರೆ ಬೇರೆ ಕಟ್ಟುಮಾಡಿ ಬೇರೆ ಬೇರೆ ಊರುಗಳಿಗೆ ಕಳಿಸಲಾಗುತ್ತಿತ್ತು. ಶ್ರೀ ಶಂಕರ ಗ್ರಾಮೋಪಾಧ್ಯಾಯ ಬೆಳಗಾಂವಿ ಮತ್ತು ಅಪ್ಪಯ್ಯಾ ಹೂಗಾರ, ಹುದಲಿ. ಇವರು ನಾವಿದ್ದಲ್ಲಿಗೆ ಗುಪ್ತವಾಗಿ ಬಂದು ಆ ಕಟ್ಟುಗಳನ್ನು ತೆಗೆದುಕೊಂಡುಹೋಗಿ ಬೆಳಗಾಂವಿ ಹಾಗೂ ಜಿಲ್ಲೆಯ ಇತರ ಭಾಗಗಳಿಗೆ ಕಳಿಸಿ ಅವುಗಳ ಪ್ರಚಾರ ಮಾಡುತ್ತಿದ್ದರು. ಜಿಲ್ಲಾಧಿಕಾರಿ ಮತ್ತು ಇತರ ಅಧಿಕಾರಿಗಳಿಗೆ ಪೋಷ್ಟ ಮುಖಾಂತರ ಕಳಿಸಲಾಗುತ್ತಿತ್ತು.

ಇದರಂತೆ ಅನೇಕ ತರುಣ–ತರುಣಿಯರು ಈ ಆಂದೋಲನದಲ್ಲಿ ಭಾಗವಹಿಸಿದ್ದರಿಂದ ಅವರಲ್ಲಿ ಪ್ರೇಮ ಸಂಬಂಧ ಉಂಟಾಗುವದು ಸ್ವಾಭಾವಿಕವಾಗಿತ್ತು. ಆದರೆ ಅವರ ಮೇಲೆ ವಾರಂಟ ಇದ್ದುದರಿಂದ ಬಹಿರಂಗವಾಗಿ ಮದುವೆ ಆಗುವದು ಹೇಗೆ ? ಶ್ರೀ ಶಂಕರ ಕುರ್ತಕೋಟಿಯವರು ಆಂದೋಲನದ ಕಾಲಕ್ಕೆ ಭೂಗತರಾಗಿ ಕೆಲಸ ಮಾಡುತ್ತಿದ್ದರು. ಶ್ರೀ ದಾಬಡೆ ಮೊದಲಾದವರು ಬೆಳಗಾಂವಿಗೆ ಗುಪ್ತವಾಗಿ ಬಂದು

ಹೋಗಿ ಮಾಡುವಂತೆ ಶ್ರೀ ಕುರ್ತಕೋಟಿಯವರೂ ಮೇಲಿಂದ ಮೇಲೆ ಬೆಳಗಾಂವಿಗೆ ಬರುತ್ತಿದ್ದರು. ಅವರ ಮೇಲೆ ವಾರಂಟ ಇತ್ತು. ಪ್ರಮೀಲಾ ದೇಶಪಾಂಡೆ ಮೊದಲಾದ ಹುಡುಗಿಯರು ಆಂದೋಲನದಲ್ಲಿ ಭಾಗವಹಿಸಿ ಭೂಗತ ಕಾರ್ಯಕರ್ತರಿಗೆ ಸಹಾಯ ಮಾಡುತ್ತಿದ್ದಂತೆ ಕುಮಾರಿ ಶಕುಂತಲಾ ಥಾಮಣಕರರು. (ಈಗಿನ ಶಕುಂತಲಾ ಕುರ್ತಕೋಟಿ) ಆಂದೋಲನದಲ್ಲಿ ಭಾಗವಹಿಸಿ ಕೆಲಸಮಾಡುತ್ತಿದ್ದರು.

ಶ್ರೀ ಶಂಕರ ಕುರ್ತಕೋಟಿ ಮತ್ತು ಕುಮಾರಿ ಶಕುಂತಲಾ ಇವರ ಪರಿಚಯವಾಯಿತು. ಆ ಪರಿಚಯ ಪ್ರೇಮದಲ್ಲಿ ಪರಿಣಮಿಸಿತು. ಮದುವೆ ಮಾಡಿಕೊಳ್ಳುವದು ನಿಶ್ಚಿತವಾಯಿತು. ಆದರೆ ಶ್ರೀ ಶಂಕರ ಕುರ್ತಕೋಟಿಯವರ ಮೇಲೆ ವಾರಂಟ ಇದ್ದುದರಿಂದ ಬಹಿರಂಗವಾಗಿ ಮದುವೆಯಾಗುವದು ಹೇಗೆ ? ಆಂದೋಲನ ದೀರ್ಘಕಾಲ ನಡೆದಿತ್ತು. ಎಂದು ಮುಗಿಯುತ್ತದೆ ಎಂಬುದು ಅನಿಶ್ಚಿತವಾಗಿತ್ತು. ಆದುದರಿಂದ ಅವರಿಬ್ಬರೂ ತಮ್ಮ ವಿವಾಹವನ್ನು ಮುಂಬೈಯಂಥ ಊರಲ್ಲಿ ಗುಪ್ತವಾಗಿಯೇ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದರು. ವಿವಾಹವೂ ಭೂಗತವಾಗಿಯೇ ಜರುಗಿತು. ವಿವಾಹಕ್ಕೆ ವಧುವರರ ತಾಯಿ. ತಂದೆ. ಆಪ್ತೇಷ್ಟರು ಯಾರೂ ಬಂದಿರಲಿಲ್ಲ. ಮುಂಬೈಯಲ್ಲಿದ್ದ ಕರ್ನಾಟಕದ ಭೂಗತ ಕಾರ್ಯಕರ್ತರಲ್ಲಿ ಅನೇಕರು ಬಂದಿದ್ದರು. ಶ್ರೀ ವಡವಿಯವರೇ ಕನ್ಯೆಯ ಮಾತಾಪಿತೃ ಸ್ಥಾನ ವಹಿಸಿದಂತಾಗಿತ್ತು. ಆಂದೋಲನದ ಕಾಲದ ನಿಚ್ಚಳವಾದ ಚಿತ್ರ ವಾಚಕರ ಕಣ್ಣೆದುರಿಗೆ ಬರಲೆಂಬ ಉದ್ದೇಶದಿಂದ ಇದನ್ನು ಇಲ್ಲಿ ಉದಹರಿಸಲಾಗಿದೆ.

ಪುಂಡಲೀಕಜಿಯವರ ಬಂಧನ ಹಾಗೂ ಬಿಡುಗಡೆಯ ಪ್ರಯತ್ನ

ಪುಂಡಲೀಕಜೀ ಭೂಗತರಾಗಿ ಮಿರಜಿಯಲ್ಲಿದ್ದ ವಿಷಯ ಹಿಂದೆ ಬಂದಿದೆ. ಅವರಿಗೆ ಇತ್ತ ಕಡೆಗೆ ಬಂದು ನಮ್ಮ ಗುಂಪಿನಲ್ಲಿ ಸೇರಿ ಕೆಲಸಮಾಡಬೇಕೆಂದು ಬಹಳ ಆಶೆಯಿತ್ತು. ಆದರೆ ಬರುವ ಬಗೆ ಹೇಗೆ ? ಅವರು ಬೆಳಗಾವಿಯಲ್ಲಿ ಮೇಲಿಂದ ಮೇಲೆ ವ್ಯಾಖ್ಯಾನ ಮಾಡುತ್ತಿದ್ದುದರಿಂದ ಪೋಲೀಸರಿಗೆಲ್ಲ ಅವರ ಪರಿಚಯವಿತ್ತು. ಅದರಿಂದ ಅವರು ಇತ್ತಕಡೆಗೆ ಬರುವದು ಕಠಿಣವಾಗಿತ್ತು. ಒಂದು ದಿವಸ ವೇಷ ಬದಲಾಯಿಸಿ ಇತ್ತಕಡೆಗೆ ಬರಬೇಕೆಂದು ಹೊರಟರು. ಪೋಲೀಸರಿಗೆ ಸಾಂಗ್ಲಿಯಲ್ಲಿ ಅವರ ಗುರುತು ಹತ್ತಿ ಅವರನ್ನು ಬಂಧಿಸಿ ಸಾಂಗಲಿ ಜೇಲಿನಲ್ಲಿಟ್ಟರು. ಈ ಸುದ್ದಿ ನಮಗೆ ತಿಳಿಯಿತು. ಅವರನ್ನು ಯಾವ ಗಾಡಿಗೆ ತರುತ್ತಾರೆಯೊ ಆ ಗಾಡಿಗೆ ಗೋಕಾಕ ಸ್ಟೇಶನ್‌ದಲ್ಲಿ ನಾಲ್ಕು ಜನ ಹತ್ತಬೇಕು. ಸುಲಧಾಳ ಹಾಗೂ ಸುಳೇಭಾವಿ ನಡುವೆ ಗುಡ್ಡದಲ್ಲಿ ನಾವು ಹತ್ತಿಪ್ಪತ್ತು ಜನ ನಿಂತಿರಬೇಕು. ಗಾಡಿ ದೂರದಲ್ಲಿ ಬರುವಾಗ ನಾವು ಬ್ಯಾಟರಿ ತೋರಿಸಬೇಕು. ಗಾಡಿಯಲ್ಲಿದ್ದವರು ಚೇನ ಎಳೆದು ಗಾಡಿ ನಿಲ್ಲಿಸಬೇಕು. ಆಗ ಪುಂಡಲೀಕಜೀ ಗಾಡಿಯಿಂದ ಜಿಗಿಯಬೇಕು. ಗಾಡಿಯಲ್ಲಿದ್ದವರು ಪೋಲೀಸರ ಬಂದೂಕ ಕಸಿದು ಒಗೆದು ತಾವೂ ಜಿಗಿದು ಬರಬೇಕು ಎಂದು ಯೋಜಿಸಿದ್ದೆವು. ಆದರೆ ಈ

ವಿಚಾರ ಒಂದೂ ಉಪಯೋಗಕ್ಕೆ ಬೀಳಲಿಲ್ಲ. ಆದುದರಿಂದ ಶ್ರೀ ಪುಂಡಲೀಕಜಿ ಯವರನ್ನು ನೇರವಾಗಿ ಬೆಳಗಾಂವಿಗೆ ಕರೆದೊಯ್ದು ಹಿಂಡಲಗಿ ಜೇಲಿಗೆ ಕಳಿಸಿದರು.

ಪೋಸ್ಟ ಲೂಟಿ ಕಾರ್ಯಕ್ರಮ

ನಾವು ಈ ಕಾಲಕ್ಕೆ ಸುಳೇಭಾವಿ ಸ್ಟೇಶನ್ನಿನ ಹತ್ತಿರ ಗುಡ್ಡದಲ್ಲಿದ್ದೆವು. ಅಂದು ಎಲ್ಲ ಕಡೆಗೂ ಪೋಸ್ಟ ಒಡೆಯಬೇಕೆಂದು ಸಂದೇಶ ಬಂದಿತ್ತು. ಸುಳೇಭಾವಿ ಊರು ಸ್ಟೇಶನ್ನಿನಿಂದ ಒಂದೂವರೆ ಮೈಲು ದೂರದಲ್ಲಿದೆ. ದಿನಾಲು ಸುಳೇಭಾವಿಯಿಂದ ರನ್ನರನು ಸ್ಟೇಶನ್ನಿಗೆ ಬಂದು ಪೋಸ್ಟ ಬ್ಯಾಗ ಒಯ್ಯುತ್ತಾನೆ. ನಾವು ಈ ಪೋಸ್ಟನ್ನೇ ಹೊಡೆಯಬೇಕೆಂದು ವಿಚಾರ ಮಾಡಿದೆವು. ಗಾಡಿ ಸ್ಟೇಶನ್ನಿಗೆ ಬರುವ ಮೊದಲೇ ನಮ್ಮ ಪಡೆಯಲ್ಲಿಯ ನಾಲ್ಕು ಜನರು ಸುಳೇಭಾವಿ ದಾರಿಯ ಮೇಲೆ ಹೋಗಿ ಕುಳಿತರು. ರನ್ನರನು ಪೋಸ್ಟಬ್ಯಾಗ ತೆಗೆದುಕೊಂಡು ಸುಳೇಭಾವಿಯ ಕಡೆಗೆ ಮುಂದಾದನು. ನಮ್ಮ ಕಾರ್ಯಕರ್ತರೇ ಆತನ ಹಿಂದಿನಿಂದ ಹೋಗಿ ಆತನನ್ನು ತೆಕ್ಕೆಯಿಂದ ಹಿಡಿದು ಆತನ ಕೈಯಲ್ಲಿಯ ಪೋಸ್ಟಬ್ಯಾಗ ಕಸಿದುಕೊಂಡು ಬಂದರು. ಆತ ಬರಿಗೈಯಿಂದ ಸುಳೇಭಾವಿ ಊರ ಕಡೆಗೆ ಹೋದನು.

ಮನಿಯಾರ್ಡರ ಹಾಗೂ ರಜಿಸ್ಟರುಗಳನ್ನು ಪರತ ಮಾಡಿದೆವು

ಟಪಾಲ ಚೀಲ ಒಡೆದೆವು. ಅದರಲ್ಲಿ ಒಂದೆರಡು ಮನಿಯಾರ್ಡರುಗಳು ಹಾಗೂ ಒಂದು ರಜಿಸ್ಟರ ಇದ್ದವು. ಅವು ಯಾವದೋ ವೈಯಕ್ತಿಕ ಹೆಸರಿಗೆ ಇದ್ದವು. ನಾವು ವೈಯಕ್ತಿಕವಾಗಿದ್ದ ಯಾವ ಹಣವನ್ನೂ ಮುಟ್ಟಬಾರದು ಹಾಗೂ ಯಾರಿಗೂ ಅಪಾಯ ಮಾಡಬಾರದೆಂದು ನಿಶ್ಚಯಿಸಿದ್ದೆವು. ಆದುದರಿಂದ ಆ ಎರಡೂ ಮನಿ-ಆರ್ಡರ, ಹಾಗೂ ರಜಿಸ್ಟರನ್ನು ಅವರವರ ಹೆಸರಿಗೆ ಕಳಿಸಿಕೊಟ್ಟೆವು. ಇತರ ಟಪಾಲನ್ನು ಅಲ್ಲಿಯೇ ಸುಟ್ಟುಹಾಕಿದೆವು.

ಹುದಲಿಯ ಪೋಸ್ಟ ಲೂಟಿ

ಹುದಲಿಯ ಊರಲ್ಲಿ ಆಗ ಶ್ರೀ ಗೋಪಾಳರಾವ ಚಿಕ್ಕೋಡಿ ಎಂಬವರು ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರಿದ್ದರು. ಅವರ ಕಡೆಗೆ ಪೋಸ್ಟಿನ ಕೆಲಸವಿತ್ತು. ಅವರು ನಾವಿರುವ ಮನೆಯ ಎದುರಿಗೇ ಇರುತ್ತಿದ್ದರು. ಆದುದರಿಂದ ನಮ್ಮ ಅವರಲ್ಲಿ ಸ್ನೇಹವುಂಟಾಗಿ ಒಂದೇ ಮನೆಯವರಂತೆ ನಡೆದುಕೊಳ್ಳುತ್ತಿದ್ದೆವು. ನಾನು ಭೂಗತನಾದ ಮೇಲೆ ಅವರ ಹತ್ತಿರ ಪೋಲೀಸರು ಬಂದು "ವಡವೀ ಮಾಸ್ತರರು ಎಲ್ಲಿದ್ದಾರೆ ? ಹೇಳಿರಿ" ಎಂದು ಆಗಾಗ ಅವರಿಗೆ ತ್ರಾಸ ಕೊಡುತ್ತಿದ್ದರು. ಅವರ ತಮ್ಮ ಕೃಷ್ಣಪ್ಪ ಎಂಬುವವನೇ ಪೋಸ್ಟಮನ್ ಕೆಲಸ ಮಾಡುತ್ತಿದ್ದ. ಆತ ಭೋಳೆ ಸ್ವಭಾವದ ಮನುಷ್ಯ.

ಒಂದು ದಿವಸ ಆತ ಟಪಾಲ ಚೀಲ ತೆಗೆದುಕೊಂಡು ಸ್ಟೇಶನ್ನಿಗೆ ಹೋಗುವಾಗ ಬಸಪ್ಪ ಕೊಂತಿ. ಭೀಮಪ್ಪಾ ಎಲಿಗಾರ, ಮಲ್ಲಪ್ಪಾ ರಾಮಪ್ಪಾ ಹೆಗ್ಗನಾಯಿಕ, ಘಟಿಗೆಪ್ಪಾ ಯಮಕನಮರ್ಡಿ (ಮೋಹನ ದೇಸಾಯಿ, ಈಗಿನ ಲೋಕದರ್ಶನದ ಸಂಪಾದಕರು) ಮತ್ತು ಮಲ್ಲಪ್ಪಾ ಕಂಠಿ ಎಂಬ ಹುಡುಗರು ಹೋಗಿ ಟಪಾಲಚೀಲವನ್ನು ಕಸಿದು ಕೊಂಡು ಫರಾರಿಯಾದರು. ಪೋಸ್ಟಮನ್ ಕೃಷ್ಣಪ್ಪ ಅಳುತ್ತ ಬಂದು ಟಪಾಲ ಬಡಿದ ಸುದ್ದಿಯನ್ನು ಪೋಸ್ಟ ಮಾಸ್ತರರಿಗೆ ಹೇಳಿದ. ಪೋಸ್ಟ ಮಾಸ್ತರರು ಪೋಲೀಸ ಪಾಟೀಲರಿಗೆ ವರದಿ ಕೊಟ್ಟರು. ಪೋಲೀಸ ಪಾಟೀಲರು ಪೋಲೀಸರಿಗೆ ರಿಪೋರ್ಟ ಮಾಡಿದರು. ಪೋಲೀಸರು ಬಂದು ಕೃಷ್ಣಪ್ಪನ ಜವಾಬು ತೆಗೆದುಕೊಂಡರು. "ಟಪಾಲ ಬಡಿದವರು ಯಾರು ಹೇಳು. ನೀನು ಊರವನಿದ್ದು ಊರವರ ಗುರುತು ಹತ್ತುವ ದಿಲ್ಲವೇ ? ಸುಳ್ಳು ಹೇಳಬೇಡ. ನೀನು ನಿಜ ಸಂಗತಿ ಹೇಳಿದರೆ ಒಳ್ಳೆಯದು. ಇಲ್ಲ ವಾದರೆ ನಿನ್ನ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ" ಎಂದು ಗದರಿಸಿದರು. ಆತ "ನಾನು ಟಪಾಲ ಚೀಲ ತೆಗೆದುಕೊಂಡು ಹೊರಟಿದ್ದೆ. ಹಿಂದಿನಿಂದ ಯಾರೋ ಬಂದು ನನ್ನ ಕೈಯೊಳಗಿನ ಚೀಲ ಕಸಿದುಕೊಂಡು ಓಡಿ ಹೋದರು. ಅವರು ಮುಖಕ್ಕೆ ಕಪ್ಪು ಬಡಿದುಕೊಂಡಿದ್ದರು. ಆದರಿಂದ ನನಗೆ ಅವರು ಯಾರೆಂಬುದರ ಗುರುತು ಹತ್ತಲಿಲ್ಲ. ಆದರೆ ಅವರು ಓಡಿ ಹೋಗುವಾಗ, 'ಭೀಮಾ ಬಾರೋ' ಎಂದು ಕೂಗಿದರು. ಯಾವ ಭೀಮ ಎಂಬದು ನನಗೆ ಗೊತ್ತಿಲ್ಲ", ಎಂದು ಇದ್ದ ಸಂಗತಿಯನ್ನು ಹೇಳಿದ.

'ಭೀಮ'ಗಳ ಪರೇಡು

ಮರುದಿನ ಬೆಳಗಿನಲ್ಲಿ ಭೀಮಗಳ ಪರೇಡ ನಡೆಯಿತು. ಊರಲ್ಲಿ ಭೀಮ ಎಂಬ ಹೆಸರಿನವರನ್ನೆಲ್ಲ ಹಿಡಿದುಕೊಂಡು ಬಂದು ಇನಾಮದಾರರ ವಾಡೆಯ ಬಯಲಿ ನಲ್ಲಿ ಸಾಲಾಗಿ ನಿಲ್ಲಿಸಿದರು. ಭೀಮ ಎಂಬ ಹೆಸರು ಹಿಂದುಗಳಲ್ಲಿ ಸಾಮಾನ್ಯವಾದುದು. ಬ್ರಾಹ್ಮಣ, ಲಿಂಗಾಯತ, ಮರಾಠಾ, ಹರಿಜನ, ಎಲ್ಲ ಜಾತಿಗಳಲ್ಲಿಯೂ ಆ ಹೆಸರನ್ನಿಡು ತ್ತಾರೆ. ಆದುದರಿಂದ ಊರಲ್ಲಿ ಭೀಮ ಎಂಬ ಹೆಸರಿನ ನೂರಾರು ಜನ ಇದ್ದರು. ಅವರೆಲ್ಲರನ್ನೂ ಹಿಡಿದುತಂದು ನಿಲ್ಲಿಸಲಾಯಿತು. ಪೋಸ್ಟಮನ್ ಕೃಷ್ಣಪ್ಪನನ್ನು ತಂದು ಇವರಲ್ಲಿ ಪೋಸ್ಟ ಬಡಿದ ಭೀಮ ಯಾರು ? ತೋರಿಸು ಎಂದು ಹೇಳಿದರು. "ಅವರು ಮೋರೆಗೆ ಕಪ್ಪು ಬಡಿದುಕೊಂಡಿದ್ದರಿಂದ ಅವರ ಗುರುತು ನನಗೆ ಹತ್ತಲಿಲ್ಲ ಎಂದು ನಾನು ನಿನ್ನೆಯೇ ಹೇಳಿದ್ದೇನಲ್ಲ" ? ಎಂದು ಹೇಳಿದ. ಪೋಲೀಸರು ತಾಸೆರಡು ತಾಸು ಗೊಂದಲಹಾಕಿ ಎಲ್ಲರನ್ನೂ ಬಿಟ್ಟು ಬಿಟ್ಟರು. ಟಪಾಲು ಬಡಿದ ನಿಜವಾದ ಭೀಮ ಅವ ರಲ್ಲಿ ಇರಲೇ ಇಲ್ಲ. ಟಪಾಲ ಬಡಿದ ನಾಲ್ಕೂ ಹುಡುಗರು ಭೂಗತರಾದರು. ಎಷ್ಟು ಹುಡುಕಿದರೂ ಆ ಹುಡುಗರು ಪೋಲೀಸರಿಗೆ ಸಿಗದ್ದರಿಂದ ಬಸವಣ್ಣೆಪ್ಪ ಕೊಂತಿ ಇವರ ತಂದೆ ಬಾಳಪ್ಪ ಇವರನ್ನು ಬಂಧಿಸಿ ಸುಲಧಾಳ ಸ್ಟೇಶನಕ್ಕೆ ಕರೆದುಕೊಂಡು ಹೋದರು.

ಈ ಸುದ್ದಿ ಆತನ ಮಗನಾದ ಬಸವಣ್ಣೆಪ್ಪ ಕೊಂತಿ ಈತನಿಗೆ ಹತ್ತಿದ ಕೂಡಲೇ ತಮ್ಮ ತಂದೆಯನ್ನು ಬಡಿಯುತ್ತಾರೆಂಬ ಅಂಜಿಕೆಯಿಂದ ತಾನೇ ಹೋಗಿ ಪೋಲೀಸರ ಮುಂದೆ ಹಾಜರಾದನು.

ಗುಜನಾಳ ಪೋಲೀಸ ಸ್ಟೇಶನ್ನಿಗೆ ಆತನನ್ನು ಕರೆದುಕೊಂಡು ಹೋಗಿ "ಭೂಗತರು ಎಲ್ಲಿದ್ದಾರೆ ? ಪಡವೀ ಮಾಸ್ತರರು ಎಲ್ಲಿದ್ದಾರೆ, ತೋರಿಸು" ಎಂದು ಅನೇಕ ತರಹದಿಂದ ಪೀಡಿಸಹತ್ತಿದರು. ಟಪಾಲ ಲೂಟಿಯಾದ ಪೋಸ್ಟಬ್ಯಾಗದ ಬಗ್ಗೆಯೂ ಕೇಳಿದರು. ಅವನ ಬಾಯಿಂದ ಯಾವ ಸಂಗತಿಯೂ ಹೊರಡಲಿಲ್ಲ. ಪೋಲೀಸ ಇನ್‌ಸ್ಪೆಕ್ಟರ ನಿಜಾಮುದ್ದೀನ ಆತನ ಕಪಾಳಕ್ಕೆ ಹೊಡೆದರು. ಅದನ್ನು ಸಹಿಸಿಕೊಳ್ಳುವದು ಆತನಿಂದಾಗಲಿಲ್ಲ. ಅವನು ತಿರುಗಿ ಪೋಲೀಸ ಇನ್‌ಸ್ಪೆಕ್ಟರರ ಕಪಾಳಕ್ಕೆ ಹೊಡೆದ. ಆಗ ಆತನ ಕೈಗೆ ಬೇಡಿ ಹಾಕಿ ಅವನನ್ನು ಇಡೀ ರಾತ್ರಿ ಹೊಡೆದರು. ಹೊಡೆತದಿಂದ ಆತನ ಒಂದು ಕೈ ಬೆರಳು ಮುರಿಯಿತು. ಮರುದಿನ ಇನ್‌ಸ್ಪೆಕ್ಟರರು ಅವನ ಎದೆಗೆ ಪಿಸ್ತೂಲ ಹಿಡಿದು ಜವಾಬು ತೆಗೆದುಕೊಂಡರು. ಆಗ ಸಹ ಆತ ಭೂಗತರ ಬಗೆಗೆ ಒಂದು ಅಕ್ಷರಸಹಿತ ಹೊರಗೆಡುವಲಿಲ್ಲ. ಅದಾದನಂತರ ಅವನನ್ನು ಮ್ಯಾಜಿಸ್ಟ್ರೇಟರ ಮುಂದೆ ಕರೆದುಕೊಂಡು ಹೋದರು. ಆತನು ಮ್ಯಾಜಿಸ್ಟ್ರೇಟರಿಗೆ "ಪೋಲೀಸರು ಬಹಳೇ ಬಡಿದು ನನ್ನ ಬೊಟ್ಟು ಮುರಿದಿದ್ದಾರೆಂದು ಹೇಳಿದ. ಆದರೆ ಅವರು 'ನಿನಗೆ ಏನಾದರೂ ಗಾಯವಾಗಿದೆಯೇ'? ಎಂದು ಕೇಳಿದರು. ಇಲ್ಲವೆಂದು ಆತ ಹೇಳಿದ. ಪೋಲೀಸರು ಮತ್ತೆ ಆತನನ್ನು ಗುಜನಾಳಕ್ಕೆ ತಂದರು.

ಕೆಲವು ದಿವಸಗಳನಂತರ ಹುದಲಿ ಟಪಾಲ ಲೂಟಿ ಮಾಡಿದ ಇತರ ಹುಡುಗರು ಸಿಕ್ಕರು. ಅವರನ್ನೂ ಸಹ ಬಹಳೇ ಹೊಡೆದು ಬಡಿದು ಉಳಿದ ಭೂಗತರ ಬಗೆಗೆ ಕೇಳಿದರು. ಆದರೆ ಅವರಲ್ಲಿ ಒಬ್ಬನೂ ಒಂದು ಮಾತೂ ಕೂಡ ಹೇಳಲಿಲ್ಲ. ಅವರೆಲ್ಲರ ಮೇಲೆ ಖಟ್ಲೆ ಹಾಕಲಾಯಿತು. ಬಸವಣ್ಣೆಪ್ಪ ಕೊಂತಿ ಅವರೊಬ್ಬರನ್ನು ಬಿಟ್ಟು ಇತರರಿಗೆ ಒಂದೊಂದು ವರ್ಷ ಕಠಿಣ ಶಿಕ್ಷೆ, ಒಂದೊಂದು ನೂರು ರೂಪಾಯಿ ದಂಡ ವಿಧಿಸಲಾಯಿತು. ಇದಾದ ಕೆಲವು ದಿವಸಗಳನಂತರ ಹುದಲಿ ಪೋಸ್ಟ ಆಫೀಸಿನಲ್ಲಿಯ ಎಲ್ಲ ಕಾಗದ ಪತ್ರಗಳನ್ನು ಯಲ್ಲಪ್ಪಾ ಲೋಕರಿ, ಲಕ್ಷ್ಮಣ ಉಪರಿ ಮುಂತಾದವರು ಸೇರಿ ಸುಟ್ಟು ಬೂದಿಮಾಡಿದರು.

ಠಳಕವಾಡಿಯ ಟಪಾಲ ಲೂಟಿ

ಪೋಸ್ಟ ಲೂಟಿ ಮಾಡುವದು ಮತ್ತು ತಂತಿ ಕಡಿಯುವದು ಭೂಗತ ಕಾರ್ಯಕರ್ತರಿಗೆ ಒಂದು ಆಟವಾಗಿತ್ತು. ಇಬ್ಬರು–ಮೂವರು ಎಲ್ಲಿಯಾದರೂ ಹೋಗುವಾಗ ಪೋಸ್ಟಮನ್ ಟಪಾಲು ಚೀಲ ಒಯ್ಯುತ್ತಿದ್ದರೆ, ಅದನ್ನು ಬಿಡದೇ ಲೂಟಿ ಮಾಡುತ್ತಿ

ದ್ದರು. ಆದರೆ ಒಂದು ಸಲ ಬೆಳಗಾಂವಿಯಂತಹ ಜಿಲ್ಹಾ ಸ್ಥಳದಲ್ಲಿಯೂ ಇಂತಹ ಘಟನೆ ನಡೆಯಿತು. ತಳಕವಾಡಿಯ ಪೋಸ್ಟ್ ಆಫೀಸಿಗೆ ದಿನಾಲು ಸಾಯಕಲ್ಲಿನ ಮೇಲಿಂದ ಒಬ್ಬ ಪೇದೆ ಟಪಾಲುಚೀಲ ತರುತ್ತಿದ್ದ. ಆತ ಯಾಳಗಿಯವರ ಮನೆಯ ಮುಂದೆಯೇ ಹಾಯ್ದು ಹೋಗುತ್ತಿದ್ದ. ಶ್ರೀ ಯಾಳಗಿ ಕೃಷ್ಣರಾಯರ ಮಗ ಶ್ರೀ ಗಜಾನನ ಯಾಳಗಿ ಹಾಗೂ ಶ್ರೀ ಬಿ. ಆರ್. ಪಾಟೀಲ ಇಬ್ಬರೂ ಕೂಡಿ ಅದನ್ನು ಲೂಟಿ ಮಾಡಬೇಕೆಂದು ಯೋಚಿಸಿದರು. ಆ ರೀತಿ ಮರುದಿನ ಟಪಾಲಿನವನು ಬರುವ ಹೊತ್ತಿಗೆ ಮುಂದೊಬ್ಬರು ಹಿಂದೊಬ್ಬರು ಸಾಯಕಲ್ಲು ತೆಗೆದುಕೊಂಡು ಸ್ವಲ್ಪ ಅಂತರದಲ್ಲಿ ಸಜ್ಜಾಗಿ ನಿಂತಿದ್ದರು. ಟಪಾಲಿನವ ಬರುತ್ತಲಿದ್ದುದನ್ನು ನೋಡಿದ ಕೂಡಲೇ ಬಿ. ಆರ್. ಪಾಟೀಲರು ಮುಂದಿನಿಂದ ಬಂದು ಆತನ ಸಾಯಕಲ್ಲಿಗೆ ಡಿಕ್ಕಿ ಹೊಡೆದು ಆತನನ್ನು ಕೆಡವಿದರು. ಹಿಂದಿನಿಂದ ಶ್ರೀ ಗಜಾನನ ಯಾಳಗಿ ಬಂದು ಟಪಾಲ ಚೀಲವನ್ನು ಎತ್ತಿಕೊಂಡು ಸಾಯಕಲ್ಲು ಮೇಲಿಂದ ಫರಾರಿಯಾದರು. ಶ್ರಿ ಬಿ. ಆರ್. ಪಾಟೀಲರೂ ಸಾಯಕಲ್ಲು ಹತ್ತಿ ಹಿಂದಿನಿಂದಲೇ ಹೊರಟು ಹೋದರು. ಬೆಳಗಾಂವಿಯಂತಹ ಊರಲ್ಲಿ ಮುಂಜಾನೆ ೧೦ ಗಂಟೆಯ ಸುಮಾರಿಗೆ ಈ ರೀತಿ ಟಪಾಲು ಲೂಟಿಯಾದುದನ್ನು ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು.

ಹುದಲಿ ಗ್ರಾಮಸ್ಥರ ದಪ್ತರ ದಹನ

ಒಂದೊಂದು ಸಲ ಒಂದೊಂದು ಕಾರ್ಯಕ್ರಮ ಮಾಡಬೇಕೆಂದು ಮೇಲಿನಿಂದ ಆದೇಶಗಳು ಬರುತ್ತಿದ್ದವು. ಇಡೀ ರಾಷ್ಟ್ರದಲ್ಲಿ ಒಂದೇ ದಿನ ಒಂದೇ ಕಾರ್ಯಕ್ರಮಗಳು ಆಗುವದರಿಂದ ಇದು ಸಂಘಟಿತವಾದ ಕಾರ್ಯಕ್ರಮವೆಂದು ಸರಕಾರಕ್ಕೆ ಮನವರಿಕೆಯಾಗುತ್ತಿತ್ತು. ಒಂದು ಸಾರೆ ಟಪಾಲು ಲೂಟಿಯಾದರೆ ಮತ್ತೊಂದು ಸಾರೆ ಸರಕಾರಿ ಕಾಗದಪತ್ರಗಳನ್ನು ಸುಡುವದು. ಇನ್ನೊಂದು ಸಾರೆ ತಂತಿ ಕಡಿಯುವದು. ಇತ್ಯಾದಿ ನಡೆಯುತ್ತಿದ್ದವು. ಟಪಾಲು ಲೂಟಿ ಮಾಡುವ ಕಾರ್ಯಕ್ರಮ ಮುಗಿದ ನಂತರ ಸರಕಾರಿ ಕಾಗದಪತ್ರ ಸುಡುವ ಕಾರ್ಯಕ್ರಮ ನಡೆಯಿತು. ಗ್ರಾಮಗಳಲ್ಲಿ ಕುಲಕರ್ಣಿಗಳ ಹತ್ತಿರವೇ ಸರಕಾರಿ ಕಾಗದ ಪತ್ರಗಳು ಇರುತ್ತಿದ್ದವು. ಒಂದು ದಿನ ರಾತ್ರಿ ಒಂದು ಗಂಟೆಯ ಸುಮಾರಿಗೆ ಎಂಟು-ಹತ್ತು ಜನ ಹುದಲಿಯ ಕುಲಕರ್ಣಿಯವರ ಮನೆಗೆ ಹೋಗಿ ಬಾಗಿಲು ಬಡಿದೆವು. ಯಾರೋ ಬಂದಿದ್ದಾರೆ ಎಂದು ಅವರು ಬಾಗಿಲು ತೆರೆದರು. ನಾವು ಸರಕಾರಿ ದಪ್ತರಗಳನ್ನು ಕೊಡಿರೆಂದು ಕೇಳಿದೆವು. ಅವರು ಯಾವದೇ ಮರು ಮಾತಾಡದೇ ಅವುಗಳನ್ನು ನಮ್ಮ ವಶಕ್ಕೆ ಕೊಟ್ಟು ಬಿಟ್ಟರು. ನಾವು ಅವನ್ನು ಅಲ್ಲಿಯೇ ಒಂದು ಬೈಲಿನಲ್ಲಿ ಸುಟ್ಟು ಜಯ-ಜಯಕಾರ ಮಾಡುತ್ತ ಹೊರಟು ಹೋದೆವು. ಇದಾದನಂತರ ಹುದಲಿಯ ಸುತ್ತಲಿನ ಗ್ರಾಮಗಳ ಕಾಗದ ಪತ್ರಗಳನ್ನೂ ಸುಡಲಾಯಿತು.

ಧಾರವಾಡದಲ್ಲಿ ಭೂಗತ ಕಾರ್ಯಕರ್ತರ ಸಭೆ

ಧಾರವಾಡ ಹಾಗೂ ಬೆಳಗಾಂವಿ ಜಿಲ್ಲೆಯ ಮುಖ್ಯ ಮುಖ್ಯ ಕಾರ್ಯಕರ್ತರು ಕೂಡಿ ಬೇರೆ ಬೇರೆ ಕಡೆಗೆ ಸಭೆಮಾಡುತ್ತಿದ್ದೆವು. ಇದು ಧಾರವಾಡದಲ್ಲಿ ಒಮ್ಮೊಮ್ಮೆ ಕರ್ನಾಟಕ ಕಾಲೇಜಿನ ಹತ್ತಿರ ಮೊಕಾಶಿಯವರ ಬಂಗ್ಲೆಯಲ್ಲಿ ಆಗುತ್ತಿತ್ತು. ಶ್ರೀಮತಿ ಸೀತಾಬಾಯಿ (ಠಕೂತಾಯಿ) ಮೊಕಾಶಿ ಎಂದರೆ ಗು. ಗಂಗಾಧರರಾವ ದೇಶಪಾಂಡೆ ಯವರ ಮಗಳು. ಅವರಿಗೆ ತಮ್ಮ ಮನೆಯಲ್ಲಿ ಇಂತಹ ಸಭೆಗಳಾದರೆ, ತುಂಬ ಉತ್ಸಾಹ. ಅವರು ದೇ. ಭ. ಗಂಗಾಧರರಾಯರ ಮಕ್ಕಳಲ್ಲವೆ ? ಸಭೆ ಮುಗಿದ ಮೇಲೆ ನಾನೊ-ಬ್ಬನೇ ಅವರಲ್ಲಿ ಉಳಿಯುತ್ತಿದ್ದೆ. ಆಗ ನಾನು ಅವರಿಗೆ 'ಪೋಲೀಸರಿಗೆ ನಾವು ಇಲ್ಲಿ ಬರುವದು ಗೊತ್ತಾದರೆ ನಿಮ್ಮನ್ನೂ ಹಿಡಿದುಕೊಂಡು ಹೋಗುತ್ತಾರೆ' ಎಂದು ವಿನೋದ ದಿಂದ ಹೇಳುತ್ತಿದ್ದೆ. ಅದಕ್ಕೆ ಅವರು 'ನಮ್ಮ ತಂದೆಯವರೇ ಜೇಲಿಗೆ ಹೋದಾಗ ನಾನೇಕೆ ಅಂಜಲಿ ?' ಎಂದು ಅನ್ನುತ್ತಿದ್ದರು. 'ಇಂತಹ ದಿವಸ ಸಭೆ' ಎಂದು ನಾನು ಮುಂಚಿತವಾಗಿ ಅವರಿಗೆ ತಿಳಿಸುತ್ತಿದ್ದೆ. ಆಗ ಅವರು ನಮಗೆ ತಿನ್ನಲಿಕ್ಕೆ ಏನಾದರೂ ಮಾಡಿಟ್ಟು ಪಕ್ಕದ ಮನೆಗೆ ಕೂಡ್ರಲಿಕ್ಕೆ ಹೋಗುತ್ತಿದ್ದರು.

ಸಭೆಗೆ ಶ್ರೀ ಬಿಂದುಮಾಧವ ಬುರ್ಲಿ, ನರಸಿಂಹ ದಾಬಡೆ, ಶ್ರೀರಂಗ ಕಾಮತ ಮೊದಲಾದವರು ಬರುತ್ತಿದ್ದರು. ಶ್ರೀ ಬಿಂದುಮಾಧವ ಬುರ್ಲಿಯವರು ಹಿಂದಿನ ಕಾಲದ ಪ್ರೊಫೆಸರರಂತೆ ಧೋತರ ಉಟ್ಟು ಕರಿಯ ಬಣ್ಣದ ಉದ್ದ ಕೋಟು ತೊಟ್ಟು ರುಮಾಲು ಸುತ್ತಿ, ಕೈಯಲ್ಲಿ ಬಡಿಗೆ ಹಿಡಿದುಕೊಂಡು ಬರುತ್ತಿದ್ದರು. ತಾಸು, ಅರ್ಧ ತಾಸು ಕುಳಿತು ಮಾತನಾಡಬೇಕಾದುದನ್ನು ಮಾತಾಡಿ, ಹೊರಟು ಹೋಗುತ್ತಿದ್ದರು. ಧಾರವಾಡದಲ್ಲಿಯ ಪೋಲೀಸರಿಗೆ ನನ್ನ ಪರಿಚಯ ವಿಶೇಷ ಇಲ್ಲದುದರಿಂದ ನಾನು ಅವರ ಮನೆಯಲ್ಲಿಯೇ ಒಂದೆರಡು ದಿವಸ ಇದ್ದು ವಿಶ್ರಾಂತಿ ಪಡೆದು ಅನಂತರ ಮತ್ತೆ ನನ್ನ ಸ್ಥಳಕ್ಕೆ ಹೋಗುತ್ತಿದ್ದೆ.

ರೇಲ್ವೆ ಸೇತುವೆ ನಾಶ

ಯಾವುದಾದರೊಂದು ದೊಡ್ಡ ಕಾರ್ಯ ಮಾಡಿದ ಬಳಿಕ ಪೋಲೀಸರ ಅಬ್ಬರ ಉಬ್ಬರಿಸುತ್ತಿತ್ತು. ಅದು ಶಾಂತವಾಗುವವರೆಗೆ ನಾವೂ ಸುಮ್ಮನೆ ಗುಪ್ತವಾಗಿ ಇರುತ್ತಿದ್ದೆವು. ಮತ್ತೆ ನಾಲ್ಕಾರು ದಿವಸ ಬಿಟ್ಟು ನಮ್ಮ ಕೆಲಸ ಪ್ರಾರಂಭವಾಗುತ್ತಿತ್ತು. ಈ ಸಾರೆ ಒಂದು ದೊಡ್ಡ ರೇಲ್ವೆ ಪೂಲ ಕೆಡವುವದೆಂದು ಗೊತ್ತು ಮಾಡಿದೆವು. ಹುದಲಿ ಯಿಂದ ಎರಡು ಮೈಲು ದೂರ ತುಮರ-ಗುದ್ದಿಯ ಹಳ್ಳಕ್ಕೆ ಒಂದು ರೇಲ್ವೆ ಪೂಲು ಇತ್ತು. ಅದು ಸಾಧಾರಣ ದೊಡ್ಡ ಪೂಲು. ಹಾರಿ ಗುದ್ದಲಿಯ ಹೊರತು ನಮ್ಮ ಹತ್ತಿರ ಹೆಚ್ಚಿನ ಸಾಧನಗಳು ಇರಲಿಲ್ಲ. ಅವುಗಳನ್ನೇ ತೆಗೆದುಕೊಂಡು ೨೫–೩೦ ಜನರು ರಾತ್ರಿ ೧೦ ಗಂಟೆಯನಂತರ ಪೂಲಿನ ಬಳಿ ಹೋದೆವು. ಮೊದಲು ಕೆಲವರು ಎರಡೂ

ಬದಿಯ ತಂತಿಯನ್ನು ಕಡಿದರು. ರೈಲು ಬರಬಾರದೆಂದು ರೈಲು ಕಂಬಿ ಕಿತ್ತಿದರು. ಇತರರು ಪೂಲಿನ ಪ್ಯಾರಾಪೇಟ ಗೋಡೆಯನ್ನು ಕೆಡವಿದರು. ಪೂಲಿನ ಕಮಾನು ಕೆಡವು ವದು ಕಷ್ಟದಾಯಕ ಕೆಲಸ. ಕಮಾನಿಗೆ "ಸ್ಟೋನ್" (ಕಳಾಸಿ ಕಲ್ಲು) ಇರುವದರಿಂದ ಅದನ್ನು ಸಹಜವಾಗಿ ಗುದ್ದಲಿ ಅಥವಾ ಹಾರಿಯಿಂದ ಕೆಡುವಲಿಕ್ಕೆ ಬರುವದಿಲ್ಲ. ಅದನ್ನು ಬ್ಲಾಸ್ಟ ಮಾಡಿ ಎಂದರೆ ಸುರಂಗ ಹಾಕಿ ಕೆಡುವಬೇಕಾಗುತ್ತದೆ. ಆ ಸಾಧನ ನಮ್ಮಲ್ಲಿರಲಿಲ್ಲ. ಇದ್ದರೂ ಅದು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ರೈಲುಗಾಡಿ ಬರುವದರೊಳಗೇ ಕೆಲಸಮಾಡಿ ಮುಗಿಸಬೇಕಾಗುತ್ತಿತ್ತು. ಅಲ್ಲದೆ ಮೇಲಿಂದ ಮೇಲೆ ಇಂತಹ ವಿಧ್ವಂಸಕ ಕೃತಿಗಳಾಗಹತ್ತಿದ್ದರಿಂದ ರೇಲ್ವೆಯವರು ಬೆಳಗಾಂವಿಯಿಂದ ಗೋಕಾಕದ ವರೆಗೆ ಒಂದು 'ಪಾಯಲೆಟ್' ಗಾಡಿಯನ್ನು ಬಿಡುತ್ತಿದ್ದರು. ಆ ಪಾಯಲೆಟ್ ಗಾಡಿ ರೈಲು ಗಾಡಿ ಬರುವದಕ್ಕಿಂತ ಅರ್ಧ ತಾಸು ಮುಂಚೆ ಬರುತ್ತಿತ್ತು. ರಾತ್ರಿ ರೈಲು ಕಂಬಿಯ ಎರಡೂ ಬದಿಗೆ ಒಂದು ಫರ್ಲಾಂಗಿನೊಳಗೆ ಯಾರೂ ಬರಬಾರದೆಂದೂ ಬಂದರೆ ಗುಂಡಿಕ್ಕಿ ಕೊಲ್ಲಲಾಗುವದೆಂದೂ ಆಜ್ಞೆ ಹೊರಡಿಸಿದ್ದರು. ಯಾರೇ ಇರಲಿ ಬಿಡಲಿ ಪೋಲೀಸರು ಗಾಡಿ ಹೋಗುತ್ತಿರುವಾಗಲೇ ಗಾಡಿಯೊಳಗಿನಿಂದ ಗುಂಡುಹಾರಿಸುತ್ತಲೇ ಹೋಗುತ್ತಿದ್ದರು. ಈ ವಿಷಯ ಹಿಂದೆ ಬಂದಿದೆ. ಆದುದರಿಂದ ಈ ಕೆಲಸವನ್ನು ಬಹಳ ಜಾಗರೂಕತೆಯಿಂದ ಮಾಡಬೇಕಾಗುತ್ತಿತ್ತು. ಅಂತೂ ಕಷ್ಟಪಟ್ಟು ನಾಲ್ಕಾರು ಕಮಾನಿನ ಕಲ್ಲುಗಳನ್ನು ಕೆಡವಿದೆವು. ಗಾಡಿ ಹೋಗದಷ್ಟು ಪೂಲು ನಾಶವಾಯಿತು. ನಾವು ತಿರುಗಿ ಬಂದೆವು. ಮರುದಿನ ಅದೆಲ್ಲ ಸರಿಮಾಡಿ ಗಾಡಿ ಓಡಾಡಬೇಕಾದರೆ, ಎಂಟು–ಹತ್ತು ತಾಸು ಹಿಡಿದವು. ಇಂತಹ ಕೆಲಸ ಮಾಡುವಾಗ ನಾವು ಸಂಗಡ ಎರಡು ತುಂಡು ಕೆಂಪು ಬಟ್ಟೆಯನ್ನು ಒಯ್ಯುತ್ತಿದ್ದೆವು. ತಿರುಗಿ ಬರುವಾಗ ಅದನ್ನು ಒಂದು ಗಳಕ್ಕೆ ಹಾಕಿ ರೈಲು ಕಂಬಿ ಕಿತ್ತಿದ ಎರಡೂ ಬದಿಗೆ ದೂರದಲ್ಲಿ ನಿಲ್ಲಿಸಿ ಬರುತ್ತಿದ್ದೆವು. ರೈಲಿನ ಓಡಾಟಕ್ಕೆ ಅಡ್ಡಿ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿತ್ತೇ ಹೊರತು ಪ್ರಾಣ ಹಾನಿಯನ್ನು ಮಾಡಬೇಕೆಂದು ಇರಲಿಲ್ಲ.

ಸಶಸ್ತ್ರ ಮೆರವಣಿಗೆ

ಒಂದು ದಿವಸ ನಾವು ಕುಮರಿಯ ಆಚೆಯ ಗುಡ್ಡದಲ್ಲಿದ್ದೆವು. ತಮ್ಮೊಳಗಿನ ಯಾವದೋ ಒಂದು ಕೆಲಸಕ್ಕಾಗಿ ಸುತ್ತಲಿನ ಹಳ್ಳಿಗಳ ಬೇಡರೆಲ್ಲ ಕೂಡಿದ್ದರು. ಸುಮಾರು ಆರೇಳುನೂರು ಜನ ಇರಬಹುದು. ಅವರೆಲ್ಲರ ಹತ್ತಿರ ಬೇರೆ ಬೇರೆ ತರದ ಆಯುಧಗಳಿದ್ದವು. ಅನೇಕರ ಹತ್ತಿರ ಬಿನ್-ಲಾಯಿಸನ್ಸ ಬಂದೂಕುಗಳೂ ಇದ್ದವು. ಅವರಲ್ಲಿ ಅನೇಕರು ಕುಡಿದಿದ್ದರು. ನಾವು ಅವರ ಸಮೀಪದಲ್ಲಿಯೇ ಕುಳಿತು ಸುಲಧಾಳ ಸ್ಟೇಶನ್ ಸುಡುವ ಕಾರ್ಯಕ್ರಮದ ವಿಚಾರ ಮಾಡುತ್ತಿದ್ದೆವು. ಅವರಲ್ಲಿ ಕೆಲವರು ಇದನ್ನು ಕೇಳಿದರು. ನಾವು ಇದುವರೆಗೆ ಅವರನ್ನು ನಮ್ಮ ಕೆಲಸಕ್ಕೆ ಎಂದೂ ಕರೆದಿರಲಿಲ್ಲ. ಯಾಕೆಂದರೆ ಅವರನ್ನು ಈ ಕೆಲಸಕ್ಕೆ ಹಚ್ಚುವದು ಸುಲಭ. ಆದರೆ ಅವರನ್ನು ಹಿಡಿತದಲ್ಲಿಟ್ಟುಕೊಳ್ಳು

ವದು ಕಠಿಣ. ಅವರನ್ನು ಕೆಲಸಕ್ಕೆ ಕರೆದೊಯ್ದರೆ, ಹಿಂಸಾಚಾರ ಎಲ್ಲಿ ಆಗುತ್ತದೆಯೋ ಎಂಬ ಭಯ. ಆದುದರಿಂದ ಅವರನ್ನು ಈ ಕೆಲಸಗಳಿಂದ ದೂರ ಇಟ್ಟಿದ್ದೆವು. ಆದರೆ ನಮ್ಮ ಮಾತನ್ನು ಕೇಳಿದ ಬೇಡರು ಇತರ ಬೇಡರಿಗೆ "ನಡೆಯಿರಿ ಸುಲಧಾಳ ಸ್ಟೇಶನ್ ಸುಡಬೇಕಂತೆ ! ಇದೇನು ಮಹಾಕೆಲಸ ! ನಾವೆಲ್ಲರೂ ಹೋಗಿ ಈ ಕೆಲಸ ಮಾಡಿ ಬರೋಣ"ಎಂದು ಅಂದರು.ಎಲ್ಲರೂ ಕೇಕೆಹಾಕುತ್ತ ಕೈಯೊಳಗಿನ ಕೊಡಲಿ ಕುಡಗೋಲು ಬಡಿಗೆಬರ್ಚಿಗಳನ್ನು ಬೀಸುತ್ತ ಬಂದೂಕು ಹಿಡಿದುಕೊಂಡು ಹುದಲಿಯ ಊರ ಕಡೆಗೆ ಹೊರಟೇ ಬಿಟ್ಟರು. ಕುಡಿದಿದ್ದ ಅವರು ನಾನು ಏನೂ ಹೇಳಿದರೂ ಕೇಳುವ ಪರಿಸ್ಥಿತಿ ಯಲ್ಲಿರಲಿಲ್ಲ.

ಸುಲಧಾಳ ಸ್ಟೇಶನ್ನಿಗೆ ಹುದಲಿ ಊರಮೇಲಿಂದಲೇ ಹಾಯ್ದು ಹೋಗಬೇಕು. ನಾವೂ ಅವರ ಹಿಂದೆ ಹೊರಟೆವು. ಎಲ್ಲರೂ ಗಾಂಧೀಜಿಯವರ ಜಯ ಜಯಕಾರ ಮಾಡುತ್ತ ಕೇಕೆಹಾಕುತ್ತ ಹೊರಬಿದ್ದರು. ಸಾಯಂಕಾಲ ೫ ಗಂಟೆಯಾಗಿರಬಹುದು. ಈ ಗದ್ದಲ ಕೇಳಿ ಹುದಲಿಯ ಊರವರು ಹೌಹಾರಿ ಹೋದರು. ಹುದಲಿಯ ಊರಿಗೆ ಸಶಸ್ತ್ರ ದರೋಡೆ ತಂಡ ಬಂತೆಂದು ತಿಳಿದು ಎಷ್ಟೋ ಜನರು ತಮ್ಮ ಮನೆ ಬಾಗಿಲು ಹಾಕಿಕೊಂಡು ಕುಳಿತರು. ಊರ ಅಗಸಿಯ ಹತ್ತಿರ ನಾವೆಲ್ಲರೂ ಬಂದಾಗ ಊರ ಪ್ರಮುಖರಲ್ಲೊಬ್ಬರಾದ ಶ್ರೀ ಯಲ್ಲಪ್ಪ ತುಕ್ಕರ ಇವರು ಬಂದು "ಮಾಸ್ತರರೇ ಘಾತವಾಗುತ್ತದೆ. ೨೦–೩೦ ಜನ ಪೋಲೀಸರು, ಸಬ್ ಇನಸ್ಪೆಕ್ಟರರೂ ಊರಲ್ಲಿ ಇದ್ದಾರೆ. ಈ ಹೊತ್ತು ಇಲ್ಲಿ ಅನೇಕ ಹೆಣ ಬೀಳುತ್ತವೆ. ಈ ನಿಮ್ಮ ದಂಡನ್ನೆಲ್ಲ ಕರೆದುಕೊಂಡು ಹಿಂದೆಹೋಗಿರಿ" ಎಂದು ಹೇಳಿದರು. (ನನಗೆ ಈ ಬೇಡರನ್ನು ಕರೆದುಕೊಂಡು ಇಂತಹ ಹೊತ್ತಿನಲ್ಲಿ ಸುಲಧಾಳ ಸ್ಟೇಶನ್ನು ಸುಡಲಿಕ್ಕೆ ಹೋಗುವದು ಸರಿಯಲ್ಲವೆಂದು ಅನಿಸು ತ್ತಿತ್ತು). (ಅವರನ್ನಷ್ಟೇ ಮುಂದೆ ಬಿಟ್ಟು ನಾವು ಹಿಂದೆ ಉಳಿಯುವದು ಸರಿಯಿರಲಿಲ್ಲ. ಆದರಿಂದ ನಾವೂ ಅವರ ಜೊತೆಗೆ ಹೊರಟೆವು. ಹೇಗಾದರೂ ಮಾಡಿ ಸುಲಧಾಳ ಸ್ಟೇಶನ್ ಸುಡುವ ಕಾರ್ಯಕ್ರಮ ಇವತ್ತು ರಹಿತ ಮಾಡಬೇಕೆಂದು ಯೋಚಿಸುತ್ತಿದ್ದೆವು). ಈ ಸೂಚನೆಯಿಂದಂತೂ ಹೇಗಾದರೂ ಮಾಡಿ ಬೇಡರು ಮುಂದೆ ಹೋಗುವದನ್ನು ತಡೆಯಬೇಕೆಂದು ನಾವೂ ಓಡಿ ಅವರ ಬೆನ್ನು ಹತ್ತಿದೆವು. ಇಷ್ಟರಲ್ಲಿ ಮುಂದೆ ಹೋಗಿದ್ದ ಅವರನ್ನು ತಡೆದು, ನಾನು "ಮೊದಲು ಹುದಲಿ ಊರಲ್ಲಿ ಮೆರವಣಿಗೆ ತೆಗೆಯುವಾ, ಆ ನಂತರ ಸ್ಟೇಶನಕ್ಕೆ ಹೋಗುವಾ" ಎಂದು ಹೇಳಿದೆ. ಇದಕ್ಕೆ ಎಲ್ಲರೂ ಒಪ್ಪಿದರು. ಪೋಲೀಸರು ಈ ಸಶಸ್ತ್ರ ಸೈನ್ಯ ನೋಡಿ ಗಾಬರಿಯಾದರು. ಅವರಲ್ಲಿ ಕೆಲವರು ಹೆಚ್ಚಿನ ಪೋಲೀಸರನ್ನು ತರುವದಕ್ಕಾಗಿ ಗುಜನಾಳಕ್ಕೆ ಓಡಿ ಹೋದರು. ಇನ್ನೂ ಕೆಲವರು ಶ್ರೀ ದೇಸಾಯಿಯವರ ಅಟ್ಟದ ಮೇಲೆ ಅಡಗಿ ಕುಳಿತುಕೊಂಡರು. ನಾವು ಗಾಂಧೀಜಿಯವರ ಜಯ ಜಯಕಾರ ಮಾಡುತ್ತ ಊರೊಳಗೆ ಹೊರಟಿದ್ದೆವು. ಇದರಲ್ಲಿ ನಾವೆಲ್ಲರೂ ಇರುವೆವೆಂದು ಗೊತ್ತಾದ ಮೇಲೆ ಬಾಗಿಲನ್ನು ಮುಚ್ಚಿದವರು ಬಾಗಿಲಾ

ತೆರೆದು ಮೆರವಣಿಗೆಯನ್ನು ನೋಡಲಾರಂಭಿಸಿದರು. ಊರಲ್ಲಿ ಮೆರವಣಿಗೆ ಮಾಡಿ ಕೊಂಡು ಅಗಸಿಯ ಹೊರಗೆ ಬಂದು ಎಲ್ಲರನ್ನೂ ಕೂಡಿಸಿ ಸಭೆ ಮಾಡಿದೆವು. ಅಷ್ಟರಲ್ಲಿ ಎರಡು ಮೂರು ಚೀಲ ಚುರುಮುರಿ*. ಅರ್ಧ ಚೀಲ ಶೇಂಗಾ ಕಾಳು‡. ಮತ್ತು ಎರಡು ಪೆಂಟಿ ಬೆಲ್ಲ ಕೊಟ್ಟು ಕಳಿಸಲು ನಮ್ಮ ಕಾರ್ಯಕರ್ತರಲ್ಲಿಯೇ ಒಬ್ಬ ವ್ಯಾಪಾರಸ್ಥರಾದ ಶ್ರೀ ಶಿವರಾಯಪ್ಪ ಥೈಕಾರ ಇವರಿಗೆ ಹೇಳಿಕಳಿಸಿದ್ದೆ. ಆ ಪ್ರಕಾರ ಅವರು ಅವುಗಳನ್ನು ಕೊಟ್ಟು ಕಳಿಸಿದ್ದರು. ಅದನ್ನು ಎಲ್ಲರಿಗೂ ಕೊಡುವಷ್ಟರಲ್ಲಿ ಕತ್ತಲಾಯಿತು. "ಇಂದು ಸ್ಟೇಶನ್ ಸುಡುವ ಕೆಲಸಬೇಡ" ಇನ್ನೊಂದು ದಿವಸ ಮಾಡೋಣವೆಂದು ಹೇಳಿ ಎಲ್ಲ ರನ್ನೂ ಅವರವರ ಊರುಗಳಿಗೆ ಹೋಗಲು ಹೇಳಿದೆ. ಅಷ್ಟು ಹೊತ್ತಿಗೆ ಅವರ ನಿಶೆಯೂ ಇಳಿದಿತ್ತು. ನನ್ನ ಮಾತು ಕೇಳಿ ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೋದರು. ನಾವೂ ಸಹ ಅವರೊಂದಿಗೆ ಹೋಗಿ ಗುಡ್ಡ ಸೇರಿದೆವು.


ಇದರ ಪರಿಣಾಮವಾಗಿ ನಮ್ಮ ಹತ್ತಿರ ಶಸ್ತ್ರಗಳಿವೆಯೆಂದೂ ನಮ್ಮ ಸಹಾ ಯಕ್ಕೆ ಸಾವಿರಾರು ಜನ ಸಶಸ್ತ್ರ ಬೇಡರು ಸಿದ್ಧರಿದ್ದಾರೆಂದೂ ಎಲ್ಲ ಕಡೆಗೂ ಸುದ್ದಿ ಯಾಯಿತು. ಪೋಲೀಸರಿಗೂ ಹಾಗೆಯೇ ಅನಿಸಿತು.

ನಂಬಿಗಸ್ಥ ಬೇಡರು

ನಾವು ಬೇಡರ ಮಧ್ಯದಲ್ಲಿದ್ದು ಕೆಲಸ ಮಾಡಿದುದು ಹಿಂದೆ ಬಂದಿದೆ. ಅದ ರಿಂದ ನಮ್ಮ ಬಗೆಗೆ ಅವರಲ್ಲಿ ಪ್ರೀತಿ, ವಿಶ್ವಾಸ ಉಂಟಾಗಿದ್ದವು. ಮೊದ ಮೊದಲು ನಮಗೆ ಅವರ ವಿಷಯದಲ್ಲಿ ಭಯವಿತ್ತು. ಸರಕಾರದವರು ನನ್ನನ್ನು ಹಿಡಿದುಕೊಟ್ಟರೆ ೫೦೦೦/– ರೂ. ಇನಾಮು ಜಾಹೀರ ಮಾಡಿದ್ದು ಹಿಂದೆ ಬಂದಿದೆ. ದನಕರುಗಳನ್ನು ತುಡುಗು ಮಾಡುವವರು ಇಷ್ಟೊಂದು ದೊಡ್ಡ ಮೊತ್ತದ ಹಣದಾಸೆಗೆ ಬಲಿ ಬೀಳದೆ ಹೇಗೆ ಇದ್ದಾರು ? ಹಣದ ಆಸೆಗಾಗಿ ನಾವಿರುವ ಸ್ಥಳವನ್ನು ಪೊಲೀಸರಿಗೆ ತಿಳಿಸಿದರೆ ಹೇಗೆ ? ಮುಂತಾದ ವಿಚಾರಗಳು ತಲೆಯಲ್ಲಿ ಸುಳಿಯದೆ ಇರಲಿಲ್ಲ. ಆದರೆ ನಮಗೆ ಬೇರೆ ಉಪಾಯವೇ ಇರಲಿಲ್ಲ. ಇಷ್ಟೊಂದು ಜನರು ಊರಲ್ಲಿ ಇರುವದು ಕಷ್ಟ. ಬೇರೆ ಎಲ್ಲಿಯಾದರೂ ಹೋಗಿ ಅಡಗಿ ಕುಳಿತರೆ ಕಾರ್ಯವಾಗುತ್ತಿರಲಿಲ್ಲ. ಆದುದರಿಂದ ನಾವು. "ಬಂದದ್ದು ಬರಲಿ ಗೋವಿಂದನ ದಯವೊಂದಿರಲಿ" ಎಂದು ಅವರ ಮಧ್ಯದಲ್ಲಿ ಗುಡ್ಡದಲ್ಲಿರುವದನ್ನೇ ನಿಶ್ಚಯ ಮಾಡಿದೆವು. ಬೇಡರ ಮುಖಂಡರನ್ನು ಕರೆದು "ನೀವು ನಮಗೆ ಸಹಾಯ ಮಾಡಬೇಕು" ಎಂದು ಹೇಳಿದೆವು. ಅದಕ್ಕೆ ಅವರು "ನೀವು ಏನೂ ಚಿಂತಿಸಬೇಡಿರಿ, ನಾವು ನಮ್ಮ ಕೈಯಿಂದಾಗಬಹುದಾದ ಎಲ್ಲ ಸಹಾಯ ಮಾಡು ತ್ತೇವೆ. ನಿಮ್ಮ ಕೆಲಸ ಮತ್ತು ಉದ್ದೇಶ ನಮಗೆ ಗೊತ್ತಿವೆ" ಎಂದು ಹೇಳಿದರು.

---

*ಮಂಡಕ್ಕಿ ‡ಕಡಲೆಕಾಯಿ



ಬೇಡರ ಸಶಸ್ತ್ರ ಮೆರವಣಿಗೆ

ನಾವಿರುವ ಗುಡ್ಡದಲ್ಲಿ ಗಿಡಗಂಟಿಗಳು ದಟ್ಟವಾಗಿ ಬೆಳೆದಿದ್ದವು. ಅಲ್ಲಿಯ ಕಾಲುದಾರಿಗಳು ಯಾವಾಗಲೂ ಅಲ್ಲಿ ತಿರುಗಾಡುವ ಜನರಿಗೆ ಮಾತ್ರ ಗೊತ್ತಾಗುತ್ತವೆ. ಇತರರಿಗೆ ಸುಲಭವಾಗಿ ಅವು ಗೊತ್ತಾಗುವದಿಲ್ಲ. ನಾವು ದಿನಾಲು ಒಂದೊಂದು ಗುಡ್ಡಕ್ಕೆ ನಮ್ಮ ಸ್ಥಳ ಬದಲಿಸುತ್ತಿದ್ದೆವು. ನಾವಿರುವ ಸ್ಥಳ ಬೇಡರಿಗೆ ಮಾತ್ರ ಗೊತ್ತಿರುತ್ತಿತ್ತು. ಪೋಲೀಸರು ಬಂದು "ಚಳುವಳಿಗಾರರು ಎಲ್ಲಿರುತ್ತಾರೆ ಹೇಳಿರಿ" ಎಂದು ಅವರನ್ನು ಬಹಳ ಪೀಡಿಸುತ್ತಿದ್ದರು. ಕೆಲವು ಸಲ ಅವರನ್ನು ಚನ್ನಾಗಿ ಹೊಡೆಯುತ್ತಿದ್ದರು. ಬಹಳ ತೊಂದರೆ ಕೊಡಹತ್ತಿದಾಗ ಬೇಡರಲ್ಲಿ ಯಾರಾದರೂ ಗುಡ್ಡದ ಒಳದಾರಿಯಿಂದ ಬಂದು ನಮ್ಮನ್ನು ಬೇರೆ ಸ್ಥಳಕ್ಕೆ ಕರೆದೊಯ್ಯುತ್ತಿದ್ದರು. ಅನಂತರ ಪೋಲೀಸರನ್ನು ಮೊದಲು ನಾವಿದ್ದ ಸ್ಥಳಕ್ಕೆ ಕರೆತಂದು ಬಂದು ತೋರಿಸುತ್ತಿದ್ದರು. ಚಳವಳಿಯುವರು ನಿನ್ನೆ ಇಲ್ಲಿಯೇ ಇದ್ದರು. ಇವತ್ತು ಮತ್ತೆಲ್ಲಿಗೋ ಹೋಗಿದ್ದಾರೆ ಎಂದು ಹೇಳುತ್ತಿದ್ದರು. ನಾವಿದ್ದ ಸ್ಥಳದಲ್ಲಿ ಕಾಗದದ ಚೂರು, ಕಟ್ಟಿಗೆ ಹೊತ್ತಿಸಿ ಉರಿಮಾಡಿದ ಗುರುತುಗಳು ಇರುತ್ತಿದ್ದವು. ಪೋಲೀಸರು ನಿರುಪಾಯರಾಗಿ ಹಿಂದಿರುಗಿ ಹೋಗುತ್ತಿದ್ದರು. ಈ ಬಗೆಯಾಗಿ ಬೇಡರು ಯಾವ ಲೋಭಕ್ಕೂ ಬೀಳದೆ ಕೊನೆಯವರೆಗೆ ತಮ್ಮಿಂದ ಆದ ಸಹಾಯ ಮಾಡಿದರು. ಆದರಿಂದಲೇ ನಮಗೆ ಭೂಗತವಾಗಿರುವದು ಸಾಧ್ಯವಾಯಿ ತೆನ್ನಲು ಅಡ್ಡಿಯಿಲ್ಲ.

ಅರಣ್ಯವಾಸದ ಅನುಭವಗಳು

ಈ ಆಂದೋಲನದ ಕಾಲದಲ್ಲಿ ಸುಮಾರು ಎರಡು ವರ್ಷ ಕಾಲ ನಾವು ಅರಣ್ಯದಲ್ಲಿ ವಾಸ ಮಾಡಬೇಕಾಯಿತು. ಆಗ ನನಗೆ ಎಷ್ಟೋ ಸಾರೆ ಶ್ರೀ ರಾಮ ಚಂದ್ರನು ಹದಿನಾಲ್ಕು ವರ್ಷಕಾಲ ಅರಣ್ಯದಲ್ಲಿ ವಾಸಿಸಿದ ವಿಷಯ ಜ್ಞಾಪಕವಾಗು ತ್ತಿತ್ತು. ಅವನಿಗೆ ರಾಕ್ಷಸರ ಕಾಟವಿತ್ತು. ನಮಗೆ ರಾಕ್ಷಸರ ಬದಲು ಪೋಲೀಸರ ಹಾಗೂ ಸೈನಿಕರ ಕಾಟವಿತ್ತು. ಶ್ರೀ ರಾಮಚಂದ್ರನು ತಂದೆಯ ಆಜ್ಞೆಯ ಪಾಲನೆಗಾಗಿ ಎಷ್ಟೊಂದು ಕಷ್ಟಪಟ್ಟನು! ಅದನ್ನು ನೋಡಿದರೆ ನಾವು ನಮ್ಮ ಭೂಮಿ ತಾಯಿಯ ಸ್ವಾತಂತ್ರ್ಯಕ್ಕಾಗಿ ಪಡುತ್ತಿರುವ ಕಷ್ಟ ಏನೂ ಅಲ್ಲ ಎಂದು ಎನಿಸುತ್ತಿತ್ತು. ಆದರೂ ಆಂದೋಲನ ಕಾಲದಲ್ಲಿ ಕಾರ್ಯಕರ್ತರು ಕಲ್ಪನಾತೀತ ಕಷ್ಟನಷ್ಟಗಳನ್ನು ಅನುಭವಿಸ ಬೇಕಾಗುತ್ತಿತ್ತು. ಅದರ ನಿಜವಾದ ಚಿತ್ರ ಓದುಗರಿಗೆ ಬರಲೆಂದು ಅರಣ್ಯವಾಸದ ಒಂದೆ ರಡು ಅನುಭವಗಳನ್ನು ಇಲ್ಲಿ ಕೊಡುತ್ತಿದ್ದೇನೆ.

ನಿರಶನ ದಿನಗಳು

ನಾವು ಕುಮರಿಯ ಸಮೀಪದಲ್ಲಿಯ ಗುಡ್ಡದಲ್ಲಿದ್ದೇವೆಂದು ಪೋಲೀಸರಿಗೆ ಗೊತ್ತಿತ್ತು. ಅನೇಕ ಸಲ ನೂರಾರು ಜನ ಪೋಲೀಸರು ಗುಡ್ಡದಲ್ಲೆಲ್ಲಾ ತಿರುಗಾಡಿ

ಹುಡುಕಿ ಹೋಗುತ್ತಿದ್ದರು. ಬೇಡರನ್ನು ಬಡಿದು, ಹೊಡೆದು, ನಾವಿರುವ ಸ್ಥಳ ತೋರಿಸಿರೆಂದು ಕೇಳುತ್ತಿದ್ದರು. ಆದರೂ ನಾವು ಅವರಿಗೆ ಸಿಗುತ್ತಿರಲಿಲ್ಲ. ಇಷ್ಟೇ ಅಲ್ಲ, ನಮ್ಮ ಕಾರ್ಯಕ್ರಮಗಳು ಅಪ್ರ್ಯಾಹತವಾಗಿ ನಡೆದೇ ಇದ್ದವು. ಅವರು ನಮ್ಮನ್ನು ಹಿಡಿಯುವದಕ್ಕಾಗಿ ಒಂದು ಹೊಸ ಯುಕ್ತಿ ಹೂಡಿದರು. ಮೊದಲು ನಾವು ಕುಮರಿ ಯಲ್ಲಿಯೇ ಅಡಿಗೆ ಮಾಡಿಸಿ ಊಟ ಮಾಡುತ್ತಿದ್ದೆವು. ಪೋಲೀಸರು ಅಲ್ಲಿಗೆ ಬರ ತೊಡಗಿದನಂತರ ನಾವು ಗುಡ್ಡದಲ್ಲಿದ್ದು ರೊಟ್ಟಿ, ಪಲ್ಲೆ ಮಾಡಿಸಿ ಗುಡ್ಡಕ್ಕೇ ತರಿಸಿ ಅಲ್ಲಿಯೇ ಊಟ ಮಾಡುತ್ತಿದ್ದೆವು. ೨೫–೩೦ ಜನರಿಗೆ ಗುಡ್ಡದಲ್ಲಿ ದಿನಾಲು ಊಟ ಯಾರು ಕೊಡುತ್ತಾರೆ ? ಎಂಬುದನ್ನು ನೋಡಬೇಕೆಂದು ಕುಮರಿಯಿಂದ ಗುಡ್ಡದ ಕಡೆಗೆ ಹೋಗಿ ಬರುವವರೆಲ್ಲರ ಮೇಲೆ ಪೋಲೀಸರು ಕಣ್ಣಿಡತೊಡಗಿದರು. ಅದರಿಂದ ಎಷ್ಟೋ ಸಲ ಕುಮರಿಯಲ್ಲಿ ಮಾಡಿಟ್ಟ ಅಡಿಗೆ ಅಲ್ಲಿಯೇ ಉಳಿಯತೊಡಗಿತು. ಅದನ್ನು ತಂದು ನಮಗೆ ಮುಟ್ಟಿಸುವದು ಕೂಡ ಆಗುತ್ತಿರಲಿಲ್ಲ. ಆ ದಿನವನ್ನು ನಾವು ಉಪವಾಸ ದಿಂದ ಕಳೆಯಬೇಕಾಗುತ್ತಿತ್ತು. ಅದರಿಂದ ನಾವು ನಮ್ಮ ಹೆಗಲು ಚೀಲದಲ್ಲಿ ಶೇಂಗಾ, ಬೆಲ್ಲ, ಇಡತೊಡಗಿದೆವು. ಇಂತಹ ಪ್ರಸಂಗ ಬಂದಾಗ ಅದನ್ನೇ ತಿಂದು ಕಾಲ ಕಳೆಯುತ್ತಿ ದ್ದೆವು. ಆದರೆ ದಿನಾಲು ಮೂರು ನಾಲ್ಕುಸಾರೆ ನಾಲ್ಕು ನಾಲ್ಕು ರೊಟ್ಟಿತಿಂದು ಹೊಲ ದಲ್ಲಿ ದುಡಿಯುವ ರೈತರ ಮಕ್ಕಳಿಗೆ ಕೇವಲ ಶೇಂಗಾದ ಮೇಲೆ ಎಷ್ಟು ದಿವಸ ಇರಲಿಕ್ಕಾಗುತ್ತದೆ ? ಆದುದರಿಂದ ನಾವು ಬೇರೊಂದು ಉಪಾಯ ಹುಡುಕಿದೆವು. ನಾವು ಇರುತ್ತಿದ್ದ ಗುಡ್ಡಕ್ಕೆ ಹುದಲಿಯ ಊರ ಹುಡುಗರು ದನಕಾಯಲಿಕ್ಕೆ ಬರುತ್ತಿದ್ದರು. ಅವರ ಮುಖಾಂತರ ಊಟ ತರಿಸಹತ್ತಿದೆವು. ಈ ರೀತಿ ಕೆಲವು ದಿವಸ ಕಳೆದವು. ನಮ್ಮ ಚಲನವಲನಗಳ ಮೇಲೆ ಪೋಲೀಸರ ಕಣ್ಣು, ಅವರ ಚಲನವಲನಗಳ ಮೇಲೆ ನಮ್ಮ ದೃಷ್ಟಿ ಹೀಗೆ ನಡೆದೇ ಇತ್ತು. ನಮಗೆ ಊಟ ಬರುವದನ್ನು ನಿಲ್ಲಿಸಿದರೆ ನಾವಾಗಿ ಬಂದು ಹಾಜರಾಗುತ್ತೇವೆ ಅಥವಾ ನಾವಿದ್ದ ಸ್ಥಳವನ್ನಾದರೂ ಬಿಟ್ಟು ಹೋಗುತ್ತೇವೆ. ಅದರಿಂದ ಈ ಭಾಗದಲ್ಲಾಗುವ ಚಟುವಟಿಕೆಗಳಾದರೂ ನಿಲ್ಲಬಹುದೆಂದು ಅವರು ತಿಳಿದಿದ್ದರು. ಅವರ ತಿಳುವಳಿಕೆ ಸರಿಯಾಗಿತ್ತು. ನಾವು ಈ ಸ್ಥಳದಿಂದ ಬೇರೆ ಕಡೆಗೆ ಹೋದರೆ ಕಾರ್ಯಕ್ರಮಗಳು ನಿಲ್ಲುವವಷ್ಟೇ ಅಲ್ಲ, ನಾವು ಹೊರಗಿರುವದೂ ಕಷ್ಟವಾಗು ತ್ತಿತ್ತು. ಏಕೆಂದರೆ ಇಲ್ಲಿ ಎಲ್ಲರೂ ನಮಗೆ ಬೇಕಾದವರು. ನಮಗೆ ಸಹಾಯ ಮಾಡು ವವರು ಬೇರೆ ಕಡೆಗೆ ಹೋದರೆ ಈ ಸೌಲಭ್ಯ ಅಲ್ಲಿ ಹೇಗೆ ದೊರೆಯಬೇಕು ? ಆದುದ ರಿಂದ ಏನೇ ಆದರೂ ಇಲ್ಲಿಯೇ ಇರಬೇಕೆಂದು ನಾವು ನಿಶ್ಚಯಿಸಿದ್ದೆವು.

ಒಂದು ದಿವಸ ಪೋಲೀಸರು, ಹುದಲಿ ಹಾಗೂ ಕುಮರಿಗಳಿಂದ ಹೊರಗೆ ಯಾರೇ ಹೋಗಲಿ. ದನಕಾಯುವವರಿರಲಿ. ಬೇರೆ ಯಾರೇ ಇರಲಿ ಅವರು ಏನು ಒಯ್ಯುತ್ತಾರೆಂಬುದನ್ನು ಶೋಧಿಸಿಬಿಡತೊಡಗಿದರು. ಎರಡೂ ಕಡೆಗೂ ಪೋಲೀಸರು ತಳವೂರಿ ಬಿಟ್ಟರು. ಬೆಳಗಾವಿಯ ಸೈನಿಕರು ನಾವಿದ್ದ ಗುಡ್ಡದಲ್ಲಿಯೇ ತಿರುಗಾಡ

ಪ್ರಾರಂಭಿಸಿದರು. ನಾವು ಬೇಡರು ಕದ್ದುತಂದ ವಸಗಳನ್ನು ಕಟ್ಟುತ್ತಿದ್ದ-ದಟ್ಟವಾಗಿ ಬೆಳೆವ-ಗಿಡಗಳ ಝುಡಪಿನಲ್ಲಿ ಅಡಗಿ ಕುಳಿತುಕೊಂಡೆವು. ನಾವಿದ್ದ ಸ್ಥಳದ ಸುತ್ತಲೂ ದಟ್ಟವಾದ ಗಿಡಗಳೂ ಕಂಟಿಗಳೂ ಬೆಳೆದುದರಿಂದ ನಾವು ಯಾರಿಗೂ ಕಾಣಿಸುತ್ತಿರಲಿಲ್ಲ. ಹೀಗೆ ಇಡೀ ಒಂದು ಹಗಲು, ಒಂದು ರಾತ್ರಿ ಅನ್ನನೀರಿಲ್ಲದೆ ಕಳೆದೆವು. ಮರುದಿನ ಮಿಲಿಟರಿ ಜನರು ಅಲ್ಲಿಂದ ಹೊರಟು ಹೋದರು. ನಾವೂ ಅಲ್ಲಿಂದ ಬೇರೆ ಗುಡ್ಡಕ್ಕೆ ಹೋದೆವು.

ಇನ್ನೊಂದು ಅನುಭವ

ಮಳೆಗಾಲದಲ್ಲಿ ಗುಡ್ಡದಲ್ಲಿರುವದು ಬಹಳೇ ಕಠಿಣವಾಗುತ್ತಿತ್ತು. ಬಟ್ಟೆಗಳೆಲ್ಲ ತೊಯ್ದು ಹೋಗುತ್ತಿದ್ದವು. ನೆಲವೆಲ್ಲ ಹಸಿಯಾದುದರಿಂದ ಮಲಗಲು ಸ್ಥಳವೂ ಇರುತ್ತಿದ್ದಿಲ್ಲ. ಆದುದರಿಂದ ನಾವು ರಾತ್ರಿ ಮಲಗಲಿಕ್ಕೆ ಕುಮರಿಗೆ ಬರುತ್ತಿದ್ದೆವು. ಇದು ಪೋಲೀಸರಿಗೆ ತಿಳಿಯಿತು. ಅದಕ್ಕಾಗಿ ಮಳೆ ಬಂದ ದಿವಸ ಅವರು ಬೇಕಂತಲೇ ಕುಮರಿಗೆ ಬರುತ್ತಿದ್ದರು. ಇದರಿಂದ ನಮಗೆ ಮಲಗಲು ಸ್ಥಳವಿಲ್ಲದಾಯಿತು. ನಾವು ರಾತ್ರಿಯನ್ನೂ ಸಹ ಗುಡ್ಡದಲ್ಲಿಯೇ ಕಳೆಯಹತ್ತಿದೆವು. ನಮ್ಮ ಗುಂಪಿನಲ್ಲಿ (ರೈತ ತರುಣರೊಡನೆ) ಲಕ್ಷ್ಮಣ ಮಾಸ್ತಿಹೊಳಿ ಎಂಬ ಬೇಡರ ತರುಣನೂ ಇದ್ದ. ಅವನಿಗೆ ಗುಡ್ಡದೊಳಗಿನ ಕಾಲುದಾರಿ, ಗುಪ್ತವಾಗಿರುವ ಸ್ಥಳ, ಇತರ ವೈಶಿಷ್ಟ್ಯವೆಲ್ಲವೂ ಗೊತ್ತಿದ್ದವು. ಆದ್ದರಿಂದ ಹೇಗಾದರೂ ಮಲಗಲು ಒಂದು ಸ್ಥಳ ತಯಾರಾಗುತ್ತಿತ್ತು.

ನಮ್ಮ ಸಂಗಡ ಎಲ್ಲರಿಗೂ ಒಂದೊಂದು ಕಂಬಳಿ ಇರುತ್ತಿತ್ತು. ಇಡೀ ದಿನ ಮಳೆ ಹತ್ತಿದಾಗ ಬಟ್ಟೆಗಳೊಡನೆ ನಮ್ಮ ಕಂಬಳಿ ಸಹ ತೊಯ್ದು ಹೋಗುತ್ತಿತ್ತು. ರಾತ್ರಿ ಚಳಿಯಿಂದ ನಡುಗು ಹತ್ತುತ್ತಿತ್ತು. ಗುಡ್ಡದಲ್ಲಿ ಗೊರವಿಯ ಕಟ್ಟಿಗೆ ಎಂದು ಒಂದು ಜಾತಿಯ ಕಟ್ಟಿಗೆ ಇರುತ್ತದೆ. ಅದು ಎಷ್ಟೇ ಹಸಿಯಾಗಿದ್ದರೂ ಚನ್ನಾಗಿ ದೀವಟಿಗೆಯಂತೆ ಉರಿಯುತ್ತದೆ. ಬೇಡರು ಹಾಗೂ ರೈತರು ರಾತ್ರಿ ಇದನ್ನು ಹಚ್ಚಿಕೊಂಡು ಪಿಲಾಲಿನಂತೆ ಕೈಯಲ್ಲಿ ಹಿಡಿದುಕೊಂಡು ಹೊಲಗಳಿಗೆ ಹೋಗುತ್ತಾರೆ. ಅದು ಚನ್ನಾಗಿ ಬೆಳಕು ಕೊಡುತ್ತದೆ. ನಮ್ಮ ಗುಂಪಿನಲ್ಲಿದ್ದ ಹುಡುಗರು ಆ ಕಟ್ಟಿಗೆಯನ್ನು ತಂದು ಬೇರೆ ಬೇರೆ ಕಡೆಗೆ ಬೆಂಕಿಯ ಡೋಣಿ (ಉರಿ) ಮಾಡುತ್ತಿದ್ದರು. ನಾವೆಲ್ಲರೂ ಅದರ ಸುತ್ತಲೂ ನಿಂತು ನಮ್ಮ ಬಟ್ಟೆಗಳನ್ನು ಒಣಗಿಸಿಕೊಳ್ಳುತ್ತಿದ್ದೆವು. ನೆಲವೆಲ್ಲ ಹಸಿಯಾಗಿದ್ದುದರಿಂದ ತೊಪ್ಪಲನ್ನು ಕಡಿದು ಹಾಕಿ ನನಗೆ ಹಾಸಿಗೆ ಮಾಡಿ ಕೊಡುತ್ತಿದ್ದರು. ತಾವೂ ಹಾಸಿಗೆ ಮಾಡಿಕೊಂಡು ಮಲಗುತ್ತಿದ್ದರು. ಇದರಲ್ಲಿಯೇ ಮಧ್ಯರಾತ್ರಿ ಕಳೆದು ಹೋಗುತ್ತಿತ್ತು. ಮಲಗಿದ ಕೂಡಲೇ ಅಂತಹ ಹಾಸಿಗೆಯ ಮೇಲೆಯೇ ಗಾಢ ನಿದ್ರೆ ಹತ್ತುತ್ತಿತ್ತು. ಆದರೂ ಬೆಳಿಗ್ಗೆ ಕೋಳಿ ಕೂಗುವದಕ್ಕಿಂತ ಮೊದಲು ಎದ್ದು ಮುಂದೆ ಹೊರಡಬೇಕಾ

ಗುತ್ತಿತ್ತು. ಈ ರೀತಿ ನಾವು ಎಷ್ಟೋ ದಿನಗಳನ್ನು ಕಳೆದಿದ್ದೇವೆ. ಇಂತಹ ಇನ್ನೂ ಅನೇಕ ಅನುಭವಗಳನ್ನು ಹೇಳಬಹುದು. ಆದರೆ ಇದರಿಂದ ಪುಸ್ತಕದ ಗಾತ್ರ ದೊಡ್ಡದಾಗುವದೆಂದು ತಿಳಿದು ವಾಚಕರ ಗಮನಕ್ಕೆ ಬರಲೆಂದು ಒಂದೆರಡು ಮಾತ್ರ ಉದಹರಿಸಲಾಗಿದೆ.

ಕಾರ್ಯಕರ್ತರ ಅದಮ್ಯ ಉತ್ಸಾಹ

ಇಷ್ಟೆಲ್ಲ ಕಷ್ಟಗಳನ್ನು ಅನುಭವಿಸುತ್ತಿದ್ದರೂ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿ ತುಳುಕುತ್ತಿತ್ತು. ಎಲ್ಲರೂ ತರುಣರು. ಅವರು ತಮ್ಮ ಕಷ್ಟದ ಕಡೆಗೆ ಎಷ್ಟೂ ಲಕ್ಷ ಕೊಟ್ಟಿರಲಿಲ್ಲ. ತಾವು ಅನುಭವಿಸುತ್ತಿರುವದು ಕಷ್ಟವೆಂದೂ ಅನಿಸುತ್ತಿರಲಿಲ್ಲ. "ವಿಧ್ವಂಸಕ ಕೃತ್ಯ ಮಾಡಬಾರದು. ಮಾಡಿದವರಿಗೆ ಫಾಶಿ ಶಿಕ್ಷೆ" ಎಂದು ಸಾರಲಾಗಿತ್ತು. ಪೋಲೀಸರ ಕೈಯಲ್ಲಿ ಸಿಕ್ಕರೆ ಯಾವ ಖಟ್ಲೆ ಹಾಕುತ್ತಾರೆಯೋ ಮುಂದೆ ಏನಾಗುತ್ತವೆಯೋ ಎಂಬ ಭೀಕರ ದೃಶ್ಯ ಅವರ ಕಣ್ಣು ಮುಂದೆ ಇತ್ತು. ಇಷ್ಟೇ ಅಲ್ಲ, ಈ ರೀತಿ ಓಡಾಟದಲ್ಲಿ ನಾವು ಓಡಿ ಹೋಗುವಾಗ ಪೋಲೀಸರ ಕಣ್ಣಿಗೆ ಬಿದ್ದರೆ ಗುಂಡು ಹಾಕಿ ಕೊಲ್ಲುವ ಅಧಿಕಾರವೂ ಪೋಲೀಸರಿಗಿತ್ತು. ಹೀಗಿದ್ದರೂ ಕಾರ್ಯಕರ್ತರು ಯಾವಾಗಲೂ ನಗುತ್ತ, ಕೆಲೆಯುತ್ತ, ಹಾಡುತ್ತ ಉತ್ಸಾಹದಲ್ಲಿಯೇ ಇರುತ್ತಿದ್ದರು. ಅವರು ಎಂದೂ "ನಾವು ಈ ಚಳವಳಿಯಲ್ಲಿ ಬಿದ್ದು ತಪ್ಪು ಮಾಡಿದೆವು" ಎಂದು ಯಾರೂ ಅನ್ನುತ್ತಿರಲಿಲ್ಲ. ತರುಣರ ಈ ಅದಮ್ಯ ಉತ್ಸಾಹ ಧೈರ್ಯಗಳನ್ನು ನೋಡಿ ಎಷ್ಟೋ ಸಾರೆ ಕಂಠ ಬಿಗಿದು ಬರುತ್ತಿತ್ತು. ಭಾರತಮಾತೆಯ ಪುತ್ರರೆಲ್ಲ ಈ ರೀತಿ ಧೈರ್ಯಶಾಲಿಗಳಾಗಿ ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಟೊಂಕ ಕಟ್ಟಿದರೆ, ಭಾರತದಲ್ಲಿ ಬ್ರಿಟಿಶರ ಆಳಿಕೆ ಹೆಚ್ಚು ದಿನ ಉಳಿಯಲಾರದೆಂದು ಅನಿಸುತ್ತಿತ್ತು. ಇಷ್ಟೇ ಅಲ್ಲ, ಈ ತರುಣರಿಗೆ ದಿನಾಲು ಒಂದು ಕಾರ್ಯಕ್ರಮ ಮಾಡದೇ ಅವರಿಗೆ ಸಮಾಧಾನವೂ ಆಗುತ್ತಿರಲಿಲ್ಲ. ಪೋಲೀಸರ ಚಲನವಲನ ಹೆಚ್ಚಾದಾಗ ನಾನೇ ಅವರನ್ನೆಲ್ಲ ಎಷ್ಟೋ ಸಲ ತಡೆಹಿಡಿಯುತ್ತಿದ್ದೆ.

ಅಯಶಸ್ವಿ ಕಾರ್ಯಕ್ರಮ

ಕಾರ್ಯಕರ್ತರು ಇಷ್ಟೊಂದು ಕಷ್ಟದಲ್ಲಿದ್ದರೂ ಅವರ ಉತ್ಸಾಹ ಅದಮ್ಯವಾಗಿತ್ತೆಂದು ಮೇಲೆ ಹೇಳಿದೆ. ಈ ಸಾರೆ ಯಾವದಾದರೊಂದು ದೊಡ್ಡ ಕಾರ್ಯಕ್ರಮ ಮಾಡಬೇಕೆಂದು ನಮ್ಮ ಮನಸ್ಸಿನಲ್ಲಿ ಬಂತು. ಅಲ್ಲಲ್ಲಿ ಸ್ಟೇಶನ್ ಸುಟ್ಟ ಸುದ್ದಿ ಕೇಳಿ ಬರುತ್ತಿದ್ದವು. ಆದ್ದರಿಂದ ನಾವೂ ಸಹ ಸ್ಟೇಶನ್ ಸುಡಬೇಕೆಂದು ಗೊತ್ತುಮಾಡಿದೆವು. ಆದರೆ ಕೇಂದ್ರದಿಂದ ಈ ಬಗ್ಗೆ ನಮಗೆ ಆದೇಶ ಬಂದಿರಲಿಲ್ಲ. ಆದರೂ ಈ ಕಾರ್ಯಕ್ರಮ ಮಾಡಬೇಕೆಂದು ನಿಶ್ಚಯಿಸಿದೆವು.

ಆ ಕಾಲಕ್ಕೆ ಬೆಂಗಳೂರಿನ ಶ್ರೀ ಗರುಡ ಶರ್ಮರು ಹುಬಲಿಯ ಪಡೆಯಲ್ಲಿ ಬಂದು ಕೂಡಿಕೊಂಡಿದ್ದರು. ಇದಕ್ಕೂ ಮೊದಲು ಅವರು ಧಾರವಾಡ, ಗದಗಗಳಲ್ಲಿ ಕೆಲಸ ಮಾಡುತ್ತಿದ್ದರು. ಒಂದು ದಿವಸ ನಾವು ಸುಳೇಭಾವಿ ಸ್ಟೇಶನ್ ಸುಡಬೇಕೆಂದು ನಿಶ್ಚಯಿಸಿದೆವು. ಎಲ್ಲ ಸಿದ್ಧತೆಯನ್ನೂ ಮಾಡಿದೆವು. ಒಂದು ರೇಲ್ವೆ ಗಾಡಿ ಹೊರಟುಹೋದ ನಂತರ ಇನ್ನೊಂದು ಗಾಡಿ ಬರುವದರೊಳಗೆ ಈ ಕೆಲಸ ಮಾಡಿ ಮುಗಿಸಬೇಕಾಗಿತ್ತು. ರಾತ್ರಿ ಏಳು ಗಂಟೆಗೆ ಕುಮರಿಯಿಂದ ಹೊರಟು ಗುಡ್ಡದ ಒಳಗೆ ನಡೆದು ಸುಳೇಭಾವಿ ಸ್ಟೇಶನ್ನಿನ ಹತ್ತರ ಬಂದು ಕುಳಿತೆವು.

ರಾತ್ರಿ ೧೧ ಗಂಟೆಯ ಸುಮಾರಿಗೆ ಸ್ಟೇಶನ್ನಿನಲ್ಲಿ ಪೋಲೀಸರು ಇದ್ದಾರೋ ಇಲ್ಲವೋ ನೋಡುವದಕ್ಕೆ ನಮ್ಮಲ್ಲಿ ಒಬ್ಬನನ್ನು ಕೊಟ್ಟು ಕಳಿಸಿದೆವು. ಆದರೆ ಬಹಳ ಸಮಯವಾದರೂ ಹೋದ ಕಾರ್ಯಕರ್ತ ತಿರುಗಿ ಬರಲೇ ಇಲ್ಲ. ಆದ್ದರಿಂದ ಅಲ್ಲಿ ಪೋಲೀಸರು ಇದ್ದದ್ದು ಇಲ್ಲದ್ದು ತಿಳಿಯಲಿಲ್ಲ. ಮೊದಲ ಗಾಡಿ ಹೋಗಿ ಬಹಳ ಹೊತ್ತಾಗಿತ್ತು. ಇನ್ನೊಂದು ಗಾಡಿ ಬರುವ ಸಮಯ ಹತ್ತಿರ ಬರುತ್ತಿದ್ದುದರಿಂದ ನಾವೇ ಅತ್ತಕಡೆಗೆ ಹೊರಟೆವು. ಗರುಡ ಶರ್ಮರು ಲಠ್ಠಮುಟ್ಟ ಆಳು. ಅವರೇ ಮುಂದಾಗಿದ್ದರು. ಅವರ ಹಿಂದೆ ಇತರರೆಲ್ಲರೂ ಸಾಲಾಗಿ ನಡೆದಿದ್ದರು. ಮೂರನೇ ವರ್ಗದ ಪ್ರತೀಕ್ಷಾಲಯದಲ್ಲಿ ಅನೇಕ ಪ್ರವಾಸಿಗರು ಮಲಗಿದ್ದರು. ಸ್ಟೇಶನ್ನಿನಲ್ಲಿ ದೀಪ ಇರಲಿಲ್ಲ. ಎಲ್ಲಿ ನೋಡಿದಲ್ಲಿ ನಿಶ್ಶಬ್ದವಾಗಿತ್ತು. ನಾವೆಲ್ಲರೂ ಸ್ಟೇಶನ್ನಿನ ಎರಡನೆಯ ಬದಿಯಿಂದ ಹಳಿದಾಟಿ ಪ್ಲ್ಯಾಟಫಾರ್ಮಿನ ಮೇಲೆ ಬರುತ್ತಿದ್ದೆವು. ಇಷ್ಟರಲ್ಲಿ ಗರುಡ ಶರ್ಮರ ಕಾಲು ತಂತಿಗೆ ಸಿಕ್ಕು ಅವರು ಅಯ್ಯೋ ಎಂದು ಚೀರಿದರು. ಅವರ ಚಿತ್ಕಾರದಿಂದ ಪ್ರತೀಕ್ಷಾಲಯದಲ್ಲಿ ಮಲಗಿದ ಪ್ರವಾಸಿಗಳೆಲ್ಲ ಎಚ್ಚರಾಗಿ ಯಾರೋ ತ್ರುಡುಗರು ಬಂದಿರಬೇಕೆಂದು ಕೂಗಾಡಹತ್ತಿದರು.

ಸ್ಟೇಶನ್‌ಮಾಸ್ತರ, ಪೋರ್ಟರ. ಎಲ್ಲರೂ ಎದ್ದು ಗದ್ದಲ ಮಾಡತೊಡಗಿದರು. ಅದೇ ಕಾಲಕ್ಕೆ 'ಪಾಯಲೆಟ್' ಗಾಡಿ ಬರುವದು ಕಾಣಿಸಿತು. ಆದುದರಿಂದ ನಾವು ಆ ದಿವಸದ ಕಾರ್ಯಕ್ರಮ ಸ್ಥಗಿತ ಮಾಡಿ ತಿರುಗಿ ಹೋದೆವು. ಆದರೆ ಈ ಕಾರ್ಯಕ್ರಮವನ್ನು ಇಂದಿಲ್ಲ ನಾಳೆ ಮಾಡಿಯೇ ತೀರುವಾ ಎಂಬ ದೃಢನಿರ್ಧಾರದಿಂದಲೇ ನಾವು ತಿರುಗಿ ಹೊರಟಿದ್ದೆವು.

ರಂಗಧೋಳಿ ಪ್ರಕರಣ

ಇದೊಂದು ಪೂರ್ವ ಕುಂದರನಾಡಿನಲ್ಲಿಯೇ ಗಡಿಬಿಡಿ ಎಬ್ಬಿಸಿದ ಘಟನೆ. ಕೇಂದ್ರದ ಆದೇಶದಂತೆ ಒಂದು ದಿನ ಎಲ್ಲ ಕಡೆಗೂ ಸ್ಟೇಶನ್ ಸುಡುವ ಕಾರ್ಯಕ್ರಮವಿತ್ತು. ಅಕ್ಕತಂಗೇರಹಾಳದ ಪಥಕದವರು ಸುಲಧಾಳ ಸ್ಟೇಶನ್ ಸುಡಬೇಕೆಂದೂ

ಗೊತ್ತಾಗಿತ್ತು. ನಾವು ಆಗ ಹುದಲಿಯಿಂದ ಮೂರು ಮೈಲಿನ ಮೇಲೆ ರಂಗಧೋಳಿ ಎಂಬ ಚಿಕ್ಕ ಗ್ರಾಮದಲ್ಲಿದ್ದೆವು. ಆ ಗ್ರಾಮದ ಸುತ್ತಲೂ ಗುಡ್ಡ. ಅವುಗಳ ಮಧ್ಯದಲ್ಲಿ ಮಾರ್ಕಂಡೇಯ ನದಿ. ಆ ನದಿಯ ದಂಡೆಯ ಮೇಲೆ ಗು. ಗಂಗಾಧರರಾಯರದೇ ಆದ ಒಂದು ಕಬ್ಬಿನ ತೋಟ. ತೋಟದ ಮಧ್ಯದಲ್ಲಿ ಒಂದು ದೊಡ್ಡ ಮಾವಿನಮರವಿದೆ. ನಾವು ಮರದ ಅಡಿಯಲ್ಲಿಯೇ ಅಡಿಗೆ ಊಟಮಾಡಿ ಇರುತ್ತಿದ್ದೆವು. ಸಿದಲಿಂಗಪ್ಪ ತರಬರಿ ಹಾಗೂ ಆತನ ಮಗಳು ಬಸಲಿಂಗವ್ವ ತರಬರಿ ಎಂಬವರು ಆ ತೋಟವನ್ನು ಮಾಡುತ್ತಿದ್ದರು. ಅವರು ಅಡಿಗೆಗೆ ಪಾತ್ರೆ ಮುಂತಾದವುಗಳನ್ನು ಕೊಟ್ಟು ನಮಗೆ ಸಹಾಯ ಮಾಡಿದ್ದರು.

ಅನಿರೀಕ್ಷಿತ ಪೋಲೀಸರ ದಾಳಿ

ನಾವು ಸಾಯಂಕಾಲ ಊಟ ಮುಗಿಸಿಕೊಂಡು ಅಂದೇ ರಾತ್ರಿ ಸುಳೇಭಾವಿ ಸ್ಟೇಶನ್ ಸುಡಬೇಕೆಂದು ಯೋಜನೆ ಹಾಕಿದ್ದೆವು. ಈ ಮೊದಲೇ ಆ ಸ್ಟೇಶನ್ ಸುಡಲಿಕ್ಕೆ ಹೋಗಿ ಅಯಶಸ್ವಿಯಾಗಿ ಬಂದದ್ದು ಹಿಂದೆ ಬಂದಿದೆ. ಆದರೆ ಈ ಸಾರೆ ಅದನ್ನು ಏನೇ ಆದರೂ ಸುಡಬೇಕೆಂಬ ನಿರ್ಧಾರ ಮಾಡಿದ್ದೆವು. ಅದರಂತೆ ಸಾಯಂಕಾಲ ಆರು ಗಂಟೆಯ ಸಮಯ. ಎಲ್ಲರ ಎಲೆಯಲ್ಲಿ ಅನ್ನ ಬಡಿಸಿತ್ತು. ಕೆಲವರು ಆಗಲೇ ಊಟಕ್ಕೆ ಕುಳಿತಿದ್ದರು. ಇನ್ನು ಕೆಲವರು ಕೂಡಬೇಕೆಂದಿದ್ದರು. ಅಷ್ಟರಲ್ಲಿ ನದಿಯ ದಂಡೆಗಿದ್ದ ಬಾವಿಯ ಮೇಲೆ ಕಪ್ಪಲಿ (ಮೊಟ್ಟೆ) ಹೊಡೆಯುತ್ತಿದ್ದ ರಾಮ–೧೨ ವರ್ಷದ ಬಾಲಕ ನದಿಯ ಆಚೆಯ ದಂಡೆಗೆ ನೂರಾರು ಜನ ಸಶಸ್ತ್ರ ಪೋಲೀಸರು ಸಾಲುಗಟ್ಟಿ ಬರುತ್ತಿರುವದನ್ನು ಕಂಡ. ಆತ ಓಡುತ್ತ ಬಂದು "ಮಾಸ್ತರರೇ ಏಳಿರಿ, ಏಳಿರಿ, ಪೋಲೀಸರು ಇಲ್ಲಿಯೇ ಬಂದರು" ಎಂದು ಹೇಳಿದ. ಊಟದ ಎಲೆ ಸಾಮಾನು ಮುಂತಾದವುಗಳನ್ನು ಅಲ್ಲಿಯೇ ಬಿಟ್ಟು ಪ್ರತಿಯೊಬ್ಬರೂ ಸಿಕ್ಕಕಡೆಗೆ ಓಡಿದರು. ನಮ್ಮ ಗುಂಪು ಚದುರಿತು. ನಾನು, ಶ್ರೀ ಪಾಟೀಲ ಹಾಗೂ ಇನ್ನಿಬ್ಬರು ಕಬ್ಬಿನ ಹೊಲದ ಆ ಬದಿಯಲ್ಲಿದ್ದ ಜೋಳದ ಹೊಲದಲ್ಲಿ ಓಡಿದೆವು. ಪೋಲೀಸರು ಬಂದು ಕಬ್ಬಿನ ತೋಟವನ್ನೆಲ್ಲ ಸುತ್ತುವರಿದರು. ಕಬ್ಬಿನ ತೋಟದಲ್ಲಿ ಕಬ್ಬು ಕಟ್ಟುವ ಜನರ ಶಬ್ದ ಕೇಳಿಸುತ್ತಿತ್ತು. ಅದರಿಂದ ಪೋಲೀಸರ ದೃಷ್ಟಿ ಅತ್ತ ಹೋಯಿತು. ಜೋಳದ ನಿಲುವು ಎದೆಮಟ್ಟ ಎತ್ತರವಿತ್ತು. ನಾವು ಓಡುವದನ್ನು ನಾಲ್ಕಾರು ಜನ ಪೋಲೀಸರು ನೋಡಿದರು. ಅವರು ನಮ್ಮ ಬೆನ್ನು ಹತ್ತಿ ಗುಂಡು ಹಾರಿಸತೊಡಗಿದರು. ನಮಗೂ ಅವರಿಗೂ ಒಂದು ಒಂದೂವರೆ ಫರ್ಲಾಂಗ ಅಂತರ ಮಾತ್ರವಿತ್ತು. ಜೋಳದ ಹೊಲದಲ್ಲಿ ಮಧ್ಯ ಮಧ್ಯ ಹೆಸರು ಮುಂತಾದ ಬಳ್ಳಿಗಳಿದ್ದವು. ನಾನು ಓಡುವಾಗ ಒಂದು ಬಳ್ಳಿ ಕಾಲಲ್ಲಿ ಸಿಕ್ಕು ಕೆಳಗೆ ಬಿದ್ದೆ. ಶ್ರೀ. ಬಿ. ಆರ್. ಪಾಟೀಲರು ನನ್ನ ಹತ್ತಿರವೇ ಇದ್ದರು. ಇನ್ನಿಬ್ಬರು ಸ್ವಲ್ಪ ಮುಂದಾಗಿದ್ದರು. ಆ ಹೊಲ ದಾಟಿದರೆ ಗುಡ್ಡ ಬರುತ್ತಿತ್ತು. ಆದರೆ

ನಾನು ಬಿದ್ದುದನ್ನು ನೋಡಿ, ಪಾಟೀಲರು ಅಲ್ಲಿಯೇ ನಿಂತರು. ನಾನು ಅವರಿಗೆ "ನೀವು ಬೇಗ ಹೋಗಿರಿ ಗುಂಡು ಬಡಿದೀತು. ಎಲ್ಲರೂ ಸಾಯುವದು ಬೇಡ" ಎಂದೆ. ಅವರು ಕೇಳಲಿಲ್ಲ. "ಆಪದ್ದು ಇಬ್ಬರಿಗೂ ಆಗಲಿ ನಿಮ್ಮನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗುವದಿಲ್ಲ" ಎಂಬ ಅವರ ಈ ಮಾತನ್ನು ಕೇಳಿ ನನ್ನ ಕಣ್ಣುಗಳು ಆನಂದಾಶ್ರುಗಳಿಂದ ನೆನೆದವು. ನಾನು ಸಾವರಿಸಿಕೊಂಡು ಎದ್ದೆ. ನಾವಿಬ್ಬರೂ ಬಾಗಿಕೊಂಡು ಮುಂದೆ ನಡೆದೆವು. ಆಗ ಮಬ್ಬಾಗುತ್ತ ಬಂದಿತ್ತು. ನಮ್ಮ ಸುದೈವದಿಂದಲೋ ಅಥವಾ ನಮ್ಮ ಹತ್ತಿರ ಶಸ್ತ್ರಗಳಿವೆ ಮತ್ತು ನಮ್ಮ ಸಹಾಯಕ್ಕೆ ಸಶಸ್ತ್ರ ಬೇಡರಿದ್ದಾರೆ ಎಂಬ ಭೀತಿಯಿಂದಲೋ ಪೋಲೀಸರು ಮುಂದೆ ಬರಲಿಲ್ಲ. ಅಂತೂ ಅಂದು ನಾವು ಸುರಕ್ಷಿತ ಪಾರಾದೆವು. ಮುಂದೆ ಹೋದ ನಮ್ಮ ಜೊತೆಗಾರರಿಬ್ಬರು ನಮ್ಮನ್ನು ಬಂದು ಕೂಡಿಕೊಂಡರು.

ರಂಗಧೋಳಿ ಗುಡ್ಡದಿಂದ ವಂಟಮುರಿಗೆ

ನಾವು ನಾಲ್ವರೂ ಗುಡ್ಡಹತ್ತಿ ಪೋಲೀಸರು ಬೆನ್ನಟ್ಟಿ ಬಂದಿಲ್ಲವೆಂಬುದನ್ನು ಮತ್ತೊಮ್ಮೆ ಖಾತ್ರಿಮಾಡಿಕೊಂಡೆವು. ಅಲ್ಲಿ ಒಂದೆರಡು ತಾಸು ಕುಳಿತು ವಿಚಾರಮಾಡಿದೆವು. ನಮ್ಮ ಇತರ ಜೊತೆಗಾರರು ಎಲ್ಲಿಗೆ ಹೋದರು? ಯಾರಾದರೂ ಪೋಲೀಸರ ಕೈಗೆ ಸಿಕ್ಕರೆ? ಗುಂಡಿನೇಟು ಯಾರಿಗಾದರೂ ತಾಗಿತೆ?—ಎಂಬ ಅನೇಕ ವಿಚಾರಗಳು ನಮ್ಮ ತಲೆಯಲ್ಲಿ ಸುಳಿದವು. ಆದರೆ ಆ ಕಾಲದಲ್ಲಿ ನಾವು ಏನೂ ಮಾಡುವಂತಿರಲಿಲ್ಲ. ಯಾವ ಸುದ್ದಿಯೂ ನಮಗೆ ದೊರೆಯುವಂತಿದ್ದಿಲ್ಲ. "ನಾವು ಮುಂದೇನು ಮಾಡಬೇಕು, ಎಲ್ಲಿಗೆ ಹೋಗಬೇಕು?" ಎಂಬ ಪ್ರಶ್ನೆ ನಮ್ಮ ಮುಂದೆ ಬಂತು. "ಊರಿಗೆ ಹೋಗೋಣವೆ? ಕುಮರಿಗೆ ಹೋಗೋಣವೇ?" ಅದು ಸರಿಯಲ್ಲ—ಎನಿಸಿತು. "ಪೋಲೀಸರ ದಾಳಿಯಿಂದ ತಪ್ಪಿಸಿಕೊಂಡು ನಾವು ಅಲ್ಲಿಗೆ ಬರಬಹುದೆಂದು ಅಲ್ಲಿಯೂ ಪೋಲೀಸರನ್ನು ಇಟ್ಟಿರಬಹುದು. ನಾವು ಅಲ್ಲಿಗೆ ಹೋದರೆ ನಾವಾಗಿಯೇ ಹೋಗಿ ಅವರ ಕೈಯಲ್ಲಿ ಸಿಕ್ಕಂತಾಗುತ್ತದೆ. ಅಲ್ಲಿ ಹೋಗುವದು ಸರಿಯಲ್ಲ. ರಾತ್ರಿ ಗುಡ್ಡದಲ್ಲಿಯೇ ಇದ್ದು ಬೆಳಗಿನಲ್ಲಿ ಮತ್ತೆ ತೋಟಕ್ಕೆ ಹೋಗೋಣವೇ?" ಅದು ಮೂರ್ಖತನದ್ದೆನಿಸಿತು. ಆ ರಾತ್ರಿ ನಮಗೆ ಎಲ್ಲಿ ನೋಡಿದಲ್ಲಿ ಪೋಲೀಸರೇ ಪೋಲೀಸರು ಕಾಣತೊಡಗಿದರು. ರಾತ್ರಿಯನ್ನು ಹೇಗಾದರೂ ಗುಡ್ಡದಲ್ಲಿ ಕಳೆಯಬಹುದು. ಆದರೆ ಬೆಳಗಾದಮೇಲೆ ಎಲ್ಲಿಗೆ ಹೋಗಬೇಕು?—ಎಂದು ವಿಚಾರ ಮಾಡುತ್ತ ರಾತ್ರಿಯನ್ನು ಕಳೆದೆವು. ಆಗ ಅರುಣೋದಯವಾಗುತ್ತ ಬಂತು. ಇನ್ನು ಬಹಳಹೊತ್ತು ಇಲ್ಲಿದ್ದು ಪ್ರಯೋಜನವಿಲ್ಲ—ಎಲ್ಲಿಯಾದರೂ ಹೋಗಬೇಕು ಎಂದು ವಿಚಾರ ಮಾಡಿದೆವು. ವಂಟಮುರಿಯಲ್ಲಿ ನಮ್ಮದೊಂದು ಖಾದಿಕೇಂದ್ರವಿತ್ತು. ವಾಮನರಾವ ಕುಲಕರ್ಣಿಯವರು ಆಗ ಸುಲ್ತಾನಪುರದಿಂದ ವಂಟಮುರಿಗೆ ಬಂದಿದ್ದರು. ಅವರ ಕಡೆಗೇ ಹೋಗ

ಬೇಕೆಂದು ನಿಶ್ಚಯಿಸಿ ಹೊರಟೆವು. ವಂಟಮುರಿ ನಾವಿದ್ದ ಸ್ಥಳದಿಂದ ೯–೧೦ ಮೈಲು ದೂರದಲ್ಲಿತ್ತು. ನಾವು ಒಂದು ಗುಡ್ಡದ ತುದಿಯಲ್ಲಿ ಇದ್ದೆವು. ಅದನ್ನು ಇಳಿದು ಮುಂದಿನ ಗುಡ್ಡ ಹತ್ತಿ ವಂಟಮುರಿಗೆ ಹೋಗಬೇಕಾಗುತ್ತಿತ್ತು. ಎರಡೂ ಗುಡ್ಡಗಳ ನಡುವಿನ ಕೊಳ್ಳದಲ್ಲಿ ಗಿಡಗಳು ನಿಬಿಡವಾಗಿ ಬೆಳೆದಿದ್ದವು. ಅವುಗಳ ಕೆಳಗೆ ಗಿಡಗಂಟಿಗಳೂ ದಟ್ಟವಾಗಿ ಹಬ್ಬಿದ್ದವು. ಅದನ್ನು ದಾಟಿಹೋಗಲು ಸುಲಭಸಾಧ್ಯವಾಗುತ್ತಿರಲಿಲ್ಲ. ಸುತ್ತುವರಿದು ಹೋದರೆ ೩–೪ ಮೈಲು ಹಾದಿ ಬಳಸಿಕೊಂಡು ಹೋಗಬೇಕಾಗುತ್ತಿತ್ತು. ಅಲ್ಲದೆ ಪೋಲೀಸರ ಭಯ ಬೇರೆ. ನಾವು ಮುಂದೇನು ಮಾಡಬೇಕೆಂಬ ವಿಚಾರದಲ್ಲಿದ್ದೆವು. ನಮ್ಮ ಜೊತೆಯಲ್ಲಿದ್ದ ಬೇಡರ ಹುಡುಗ "ಈ ಕೊಳ್ಳದೊಳಗಿಂದ ಆಚೆಯ ಗುಡ್ಡಕ್ಕೆ ಹೋಗಲು ಒಂದು ಕಾಲುದಾರಿ ಇದೆ. ಅದು ನನಗೆ ಗೊತ್ತಿದೆ. ಆದರೆ ಅದನ್ನು ದಾಟುವದು ಬಹಳ ಕಷ್ಟ. ಬಾಗಿ ಸರಿಯುತ್ತಲೇ ಹೋಗಬೇಕು" ಎಂದು ಹೇಳಿದ. ನಾವು ಆಗಲಿ ನೋಡೋಣ ಎಂದೆವು. ಆತ ಮುಂದಾದ. ನಾವು ಆತನ ಹಿಂದಿನಿಂದ ಹೊರಟೆವು. ಗುಡ್ಡ ಇಳಿದನಂತರ ಕಂಟಿಗಳ ಗುಂಪಿನಲ್ಲಿ ಗುಹೆಯು ಭೂಮಿ ಇದ್ದಂತೆ ಒಂದು ಸಣ್ಣ ಕಿಂಡಿ ಇತ್ತು. ಅದರಲ್ಲಿ ಆತ ಬಗ್ಗಿ ಅಂಬೆಗಾಲಿಟ್ಟು ನಡೆಯತೊಡಗಿದ. ನಮಗೂ ಹಾಗೆಮಾಡಲು ಹೇಳಿದ. ನಾವೂ ಸಹ ಅಂಬೇಗಾಲಿಟ್ಟೇ ಸರಿಯುತ್ತ ನಡೆದೆವು. ಕತ್ತಲೆಯಲ್ಲಿ ಮುಂದೇನಿದೆ ಎಂಬುದು ಕಾಣುತ್ತಿರಲಿಲ್ಲ. ಮೇಲೆ ಏಳುವಂತಿರಲಿಲ್ಲ. ಹೀಗೆ ಸ್ವಲ್ಪ ಮುಂದೆ ಹೋದಮೇಲೆ ಕೂಡಲಿಕ್ಕೆ ಬರುವಷ್ಟು ಎತ್ತರವಾಗಿತ್ತು ಆ ಕಂಟಿಯ ಗುಹೆ. ಸ್ವಲ್ಪ ಕುಳಿತು ಹಾಗೇ ಕುಳಿತುಕೊಂಡೇ ಮುಂದೆ ಸಾಗಿದೆವು. ಹೀಗೆ ಸ್ವಲ್ಪ ಹೋದಮೇಲೆ ಮತ್ತೆ ಅಂಬೇಗಾಲಿಡುವದು, ಕೆಲಹೊತ್ತು ಕೂತು ನಡೆಯುವದು, ಕೆಲಹೊತ್ತು ಬಗ್ಗಿ ನಡೆಯುವದು ಹೀಗೆ ೨–೩ ಫರ್ಲಾಂಗ ಹೋದ ಮೇಲೆ ಗುಡ್ಡದ ಆಚೆಯ ತಳದಂಚನ್ನು ತಲುಪಿದೆವು. ಗುಡ್ಡವನ್ನು ಏರಲಿಕ್ಕೆ ಒಂದು ಕಾಲುದಾರಿ ಇತ್ತು. ಗುಡ್ಡ ಏರುವ ಮೊದಲು ಸ್ವಲ್ಪ ಕುಳಿತು ವಿಶ್ರಮಿಸಿದೆವು. "ಈರೀತಿ ಈ ದಾರಿಯನ್ನು ದಾಟುವಾಗ ಇದರಲ್ಲಿ ಹುಲಿ, ಚಿರ್ಚ ಮುಂತಾದವು ಇರಲಿಕ್ಕಿಲ್ಲವೆ ? ಹಾವು ಅಡ್ಡಬಂದರೆ ಹೇಗೆ ? ಮುಂತಾದ ವಿಚಾರಗಳಿಂದ ಭಯವುಂಟಾಗುತ್ತಿತ್ತು. ಆದರೆ ಆ ಬೇಡರ ಹುಡುಗ ಯಾವ ಭಯವೂ ಇಲ್ಲದೆ ಮುಂದೆ ಸಾಗಿದ್ದ. ಈರೀತಿ ದಾಟಿ ಬರುವಾಗ ಗಳಗನಾಥರು ಕಾದಂಬರಿಯೊಳಗೆ ವರ್ಣಿಸಿದ ಗುಹೆಗಳ ನೆನಪಾಗದೆ ಇರಲಿಲ್ಲ. ಅನಂತರ ಮತ್ತೆ ಗುಡ್ಡ ಏರಿ ಸಮಪಾತಳಿ ಮೇಲೆ ಬಂದೆವು. ಅಲ್ಲಿಂದ ಸ್ವಲ್ಪುಹೊತ್ತು ನಡೆದು ವಂಟಮುರಿಯನ್ನು ತಲುಪಿದೆವು. ನಾನು ಮತ್ತು ಪಾಟೀಲ ಇಬ್ಬರೂ ಊರಹೊರಗೇ ಕುಳಿತೆವು. ನಮ್ಮ ಜೊತೆಗಾರರಿಬ್ಬರನ್ನು ಖಾದೀ ಕೇಂದ್ರಕ್ಕೆ ಕಳಿಸಿ ವಾಮನರಾಯರಿಗೆ ಬರಹೇಳಿದೆವು. ಅವರು ಬಂದಮೇಲೆ ಅವರಿಗೆ ನಮ್ಮ ಸ್ಥಿತಿಯನ್ನೆಲ್ಲ ಹೇಳಿದೆವು. ಅವರು ಊರಿಂದ ಒಂದು ಒಂದೂವರಿ ಮೈಲು ದೂರದಲ್ಲಿದ್ದ ಆ ಊರ ದೇಸಾಯರ ಹುಲ್ಲುಗಾವಲ (ಕರಡದ ಮಾಳಾ)ಕ್ಕೆ ನಮ್ಮನ್ನು ಕರೆದುಕೊಂಡು ಹೋಗಿ ಅದರ ಮಧ್ಯದಲ್ಲಿದ್ದ ಒಂದು ಚಿಕ್ಕ ಬಯಲಿನಲ್ಲಿ ಕೂಡಿಸಿ, ತಿಂಡಿ ಊಟ ಕಳಿಸಿ

ಕೊಡುವದಾಗಿ ಹೇಳಿಹೋದರು. ಆ ಹುಲ್ಲುಗಾವಲು ೩-೪ ಮೈಲು ವಿಸ್ತೀರ್ಣ ವಾಗಿತ್ತು. ಆಗ ಮನುಷ್ಯನುದ್ದಕ್ಕೂ ಎತ್ತರವಾಗಿ ಹುಲ್ಲು ಬೆಳೆದಿತ್ತು. ಅದರಲ್ಲಿ ಯಾರಾದರೂ ಹೋದರೆ ಹುಡುಕುವದು ಸಾಧ್ಯವಿರಲಿಲ್ಲ. ನಮಗೆ ಬಹಳ ಆಯಾಸ ವಾಗಿತ್ತು. ಅಲ್ಲಿಯೇ ಸುಮ್ಮನೆ ಕುಳಿತೆವು. ಸ್ವಲ್ಪ ಹೊತ್ತಿನಮೇಲೆ ಶೇಂಗಾ, ಬೆಲ್ಲ, ನೀರು ಬಂತು. ನಾವು ಅದನ್ನು ತಿಂದು ಅಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳತೊಡಗಿ ದೆವು. ಆದರೆ ನಮಗೆ ನಮ್ಮ ಜೊತೆಗಾರರ ಆಲೋಚನೆ ಹತ್ತಿತ್ತು. ನಾವು ಅಲ್ಲಿಂದ ಬಂದಮೇಲೆ ಏನಾಯಿತು ಎಂದು ತಿಳಿದುಕೊಳ್ಳಬೇಕೆಂಬ ಉತ್ಕಟ ಇಚ್ಛೆಯುಂಟಾ ಯಿತು. ನಾವು ವಾಮನರಾಯರಿಗೆ ನಮ್ಮ ವಿಚಾರ ತಿಳಿಸಿ ಯಾರಾದರೂ ಒಬ್ಬ ಚಾಣಾಕ್ಷ ರೈತ ಮನುಷ್ಯನನ್ನು ಕಳಿಸಿ ಅಲ್ಲಿಯ ಸುದ್ದಿ ತರಿಸಲು ಹೇಳಿದೆವು. ಆವರು ಆರೀತಿ ಒಬ್ಬ ಮನುಷ್ಯನನ್ನು ಕಳಿಸಿಕೊಟ್ಟರು.

ಹುಲ್ಲುಗಾವಲಿನಲ್ಲಿ (ಕರಡು ಮಾಳಾ) ವಾಸ

ಮಧ್ಯಾಹ್ನ ೧೨ ಗಂಟೆಗೆ ರೊಟ್ಟಿ, ಪಲ್ಲೆ ಬಂತು. ನಾವು ಅದನ್ನು ತಿಂದು ಮಲಗಿದೆವು. ಸಾಯಂಕಾಲವಾಯಿತು. ರಾತ್ರಿ ೧೦ಗಂಟೆ ಹೊಡೆಯಿತು. ವಾಮನರಾಯರು ಬರಲಿಲ್ಲ. ಯಾರೂ ಸುಳಿಯಲಿಲ್ಲ. ವಾಮನರಾಯರು ಹೀಗೆಂದೂ ಮಾಡುವವರಲ್ಲ. ಏನಾಯಿತೋ ಏನೋ ಎಂದು ವಿಚಾರಕ್ಕೊಳಗಾದೆವು. 'ಶಯ್ಯಾ ಭೂಮೀ ತಲಂ' ಎಂಬಂತೆ ಅಂದು ನಮಗೆ ಭೂಮಿಯೇ ಹಾಸಿಗೆಯಾಯಿತು. ಆಕಾಶವೇ ಹೊದಿಕೆಯಾ ಯಿತು. ಅನಿರೀಕ್ಷಿತ ದಾಳಿಯ ಕಾಲಕ್ಕೆ ನಾವು ನಮ್ಮ ಹಾಸಿಗೆ ಅಂದರೆ ಕಂಬಳಿ, ಬಟ್ಟೆ ಎಲ್ಲವನ್ನೂ ಅಲ್ಲಿಯೇ ಬಿಟ್ಟು ಬಂದಿದ್ದೆವು. ಆ ರಾತ್ರಿ ಹಾಗೆ ಕಳೆದೆವು. ಮರುದಿನ ಬೆಳಗಿನಲ್ಲಿ ಶ್ರೀ ವಾಮನರಾಯರು ಒಂದು ಕೊಡ ನೀರು ಹಾಗೂ ಸ್ವಲ್ಪ ಉಪಹಾರ ಹೊರಿಸಿಕೊಂಡು ಬಂದರು. ನಿನ್ನೆ ಏಕೆ ಬರಲಿಲ್ಲವೆಂದದ್ದಕ್ಕೆ "ಊರಲ್ಲಿ ಪೋಲೀಸರು ಬಂದಿದ್ದರು. ನಮ್ಮ ಮನೆಯ ಮೇಲೆ ಅವರ ಕಣ್ಣು ಇದ್ದಂತೆ ಕಾಣಿಸಿತು. ಅದರಿಂದ ಬರಲಿಲ್ಲ" ಎಂದು ಅವರು ಹೇಳಿದರು.

ರಂಗಧೋಳಿ ತೋಟದತ್ತ

ನಾವು ತೋಟವನ್ನು ಬಿಟ್ಟಮೇಲೆ ಅಲ್ಲಿ ಏನಾಯಿತೆಂಬುದನ್ನು ತಿಳಿದುಕೊಂಡು ಬರಲಿಕ್ಕೆ ಕಳಿಸಿದ್ದೆವಷ್ಟೆ? ಆತನು ತಿರುಗಿ ಬಂದಮೇಲೆ ಆತನಿಂದ ನಮಗೆ ಕೆಳಗಿನ ಸುದ್ದಿ ತಿಳಿಯಿತು.

ತೋಟದಲ್ಲಿ ಒಂದು ಬದಿಗೆ ಕಬ್ಬುಕಟ್ಟುವ ಕೂಲಿ ಆಳುಗಳಿದ್ದರು. ಅವರು ಕೆಲಸ ಮುಗಿಸಿ ಮನೆಗೆ ಹೋಗುವ ಅವಸರ ನಡೆಸಿದ್ದರು. ಆ ಸದ್ದು ಕೇಳಿ ನಾವು

ನಾಲ್ಕು ಜನರು ಓಡಿಹೋದರೂ ಇತರರು ಸಿಕ್ಕಿರಲ್ಲ ಎಂಬ ವಿಚಾರದಿಂದ ಪೋಲೀಸರು ಇಡೀ ತೋಟವನ್ನೇ ಸುತ್ತುವರಿದು ನಿಂತರು. ಕಬ್ಬು ಕಟ್ಟುವವರು ತೋಟದೊಳಗಿಂದ ಹೊರಗೆ ಬಂದನಂತರ ಪೋಲೀಸರು ಅವರನ್ನು ಹಿಡಿದು ಇಡೀ ರಾತ್ರಿ ಅಲ್ಲಿಯೇ ಕೂಡ್ರಿಸಿದರು. ನಮಗೆ ಬಡಿಸಿದ ಊಟದ ಎಲೆಗಳು ಅನ್ನ ಸಹಿತ ಹಾಗೇ ಇದ್ದವು. ಅಡಿಗೆ ಮಾಡಿದ ಪಾತ್ರೆಗಳು ಅಲ್ಲಿಯೇ ಅಸ್ತವ್ಯಸ್ತವಾಗಿ ಬಿದ್ದಿದ್ದವು. ಹಾಸಿಗೆ ಹೊದಿಕೆ ಬಟ್ಟೆಗಳೂ ಅಲ್ಲಿಯೇ ಇದ್ದವು. ಪೋಲೀಸರು ಎಲೆಗಳನ್ನು ಎಣಿಸಿದರು. ೨೦ ಎಲೆಗಳು ಇದ್ದವು. ಅದರಿಂದ ನಾವು ೨೦–೨೫ ಜನರಿರಬೇಕೆಂದು ಅವರು ತರ್ಕಿಸಿದರು. ರಾತ್ರಿ ಯಾದುದರಿಂದ ಅವರಿಗೆ ಏನೂ ಮಾಡಲಿಕ್ಕೆ ಬರುವಂತಿರಲಿಲ್ಲ. ಬಡಿಸಿದ ಎಲೆಗಳ ಮೇಲೆ ಪೋಲೀಸರೇ ಕೂತು ಬಾಯಿ ಚಪ್ಪರಿಸಿದರು. ನಮ್ಮ ಜನರು ಇನ್ನೂ ತೋಟ ದಲ್ಲಿಯೇ ಅಡಗಿಕೊಂಡಿರುವರೆಂದು ಬ್ಯಾಟರಿಗಳ ಸಹಾಯದಿಂದ ಇಡೀ ರಾತ್ರಿ ತೋಟ ವನ್ನು ಕಾಯುವದರಲ್ಲಿ ಕಳೆದರು. ತೋಟದಲ್ಲಿ ನರಿಗಳಿದ್ದವು. ಅವು ಕಬ್ಬು ಕಡಿದು ತಿನ್ನುವಾಗ ಸಪ್ಪಳವಾಗುತ್ತಿತ್ತು. ಅದನ್ನು ಕೇಳಿ ಪೋಲೀಸರು “ದೇಖೋರೇ ದೇಖೋ ವಹಾ ಹೈ!” ಎಂದು ಟಾರ್ಚ ಬಿಟ್ಟು ಗುಂಡುಹಾರಿಸುತ್ತಿದ್ದರು. ಆ ಸಪ್ಪಳದಿಂದ ನರಿ ಗಳು ಕೆಲಹೊತ್ತು ಸುಮ್ಮನಾಗಿ ಮತ್ತೆ ಸಪ್ಪಳ ಮಾಡುತ್ತಿದ್ದವು. ಆಗ ಪೋಲೀಸರು ಮತ್ತೆ ಗುಂಡು ಹಾರಿಸುತ್ತಿದ್ದರು. ಇಡೀ ರಾತ್ರಿ ಹೀಗೆಯೇ ಕಳೆಯಿತು. ಬೆಳಿಗ್ಗೆ ನಾಲ್ಕಾರು ನರಿಗಳು ಆ ತೋಟದೊಳಗಿಂದ ಗುಡ್ಡದ ಕಡೆಗೆ ಓಡಿಹೋದವು. ಅದನ್ನು ನೋಡಿ ರಾತ್ರಿ ಸಪ್ಪಳವಾದದ್ದು ಚಳವಳಿಗಾರರದಲ್ಲ ನರಿಗಳದು ಎಂದು ಪೋಲೀಸರಿಗೆ ಗೊತ್ತಾಯಿತು. ಗುಡ್ಡ ಅಗಿದು ಇಲಿ ತೆಗೆದಂತಾಯಿತಲ್ಲ ಎಂದು ಅವರು ಪಶ್ಚಾತ್ತಾಪ ಪಟ್ಟಿರಬೇಕು. ನಾವಿರುವ ಸ್ಥಳದ ಹಾಗೂ ನಮ್ಮ ಕಾರ್ಯಕ್ರಮದ ಮಾಹಿತಿಯನ್ನು ಅವರಿಗೆ ಯಾರೋ ಸರಿಯಾಗಿ ಕೊಟ್ಟಿದ್ದರು. ಆದುದರಿಂದ ಅವರು ನಾವು ಊಟಕ್ಕೆ ಕೂಡ್ರುವ ಸಮಯದಲ್ಲಿ ಬಂದು ದಾಳಿ ಮಾಡಿದರು. ಚಳವಳಿಗಾರರು ಇನ್ನೂ ತೋಟ ದಲ್ಲಿರಬೇಕೆಂದು ಬೆಳಗಾದ ಮೇಲೆಯೂ ಎಲ್ಲ ತೋಟ ಹುಡುಕಿದರು. ಯಾರೂ ಸಿಗಲಿಲ್ಲ ವಾದುದರಿಂದ ಅವರು ನಿರಾಶರಾದರು.

ನಾವು ಓಡಿಹೋಗುವಾಗ ಬಿಟ್ಟುಹೋಗಿದ್ದ ಅನ್ನಸಹಿತ ಊಟದಎಲೆ,ಅಡಿಗೆ-ಮಾಡಿದ ಪಾತ್ರೆ, ನಮ್ಮ ಹಾಸಿಗೆ ಹೊದಿಕೆ ಎಲ್ಲವನ್ನೂ ಮರುದಿನ ಬೆಳಗಿನಲ್ಲಿ ಪೋಲೀ ಸರು ಮಹಜರು ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು.

ತೋಟದ ರೈತ ಸಿದ್ದಲಿಂಗಪ್ಪನನ್ನು ಬಹಳ ಹೊಡೆದು, ನೀನು ಚಳುವಳಿಗಾರ ರಿಗೆ ಸಹಾಯ ಮಾಡುತ್ತೀಯಾ? ಎಂದು ಬೆದರಿಸಿದರು. ಆತ "ನಾನು ಧನಿಯರ (ಗಂಗಾಧರರಾಯರ) ತೋಟಮಾಡುತ್ತೇನೆ. ಇವರು ಧನಿಯರ ಜನರು. ಅಡಿಗೆ ಮಾಡುತ್ತೇವೆ ಎಂದು ಅಂದರು. ಆದುದರಿಂದ ಅವರಿಗೆ ಪಾತ್ರೆ ಕೊಟ್ಟೆ. ಚಳುವಳಿ

ಯುದು ನನಗೇನೂ ಗೊತ್ತಿಲ್ಲ" ಎಂದು ನಿಜ ಸಂಗತಿ ಹೇಳಿದ. ಆದರೂ ಪೋಲೀಸರು ಕೇಳದೆ ಆತನನ್ನು ಬಂಧಿಸಿದರು.

ನಮ್ಮ ಮೇಲೆ ದಾಳಿಮಾಡುವ ದಿವಸವೇ ಬೆಳಗಿನಲ್ಲಿ–ಮಧುಕರ ಬಾವಡೇಕರರು– (ಮೋಹನರಾವ ದೇಶಪಾಂಡೆ ಎಮ್. ಎಲ್. ಸಿ. ಅವರ ತಮ್ಮಂದಿರು) ಯಾವದೋ ನಿರೋಪ ತೆಗೆದುಕೊಂಡು ನಮ್ಮ ಕಡೆಗೆ ಬಂದುಹೋಗಿದ್ದರು. ಸುದೈವದಿಂದ ಅವರು ಪೋಲೀಸರ ಕೈಯೊಳಗಿಂದ ಪಾರಾದರು. ಪೋಲೀಸರ ಕೈಗೆ ಸಿಕ್ಕಿದ್ದರೆ ಅವರೂ ಪೋಲೀಸರ ಹೊಡೆತಕ್ಕೆ ಗುರಿಯಾಗಬೇಕಾಗುತ್ತಿತ್ತು.

ದಾಳಿಯ ಮರುದಿನ

ಅಕ್ಕತಂಗೇರಹಾಳದಿಂದ ಅಣ್ಣಾಬಸಪ್ಪ ಮರಲಿಂಗಣ್ಣವರ ಇವರು "ಇಂದು ಸ್ಟೇಶನ್ ಸುಡುವದಿದೆ" ಎಂದು ನಮಗೆ ನಿರೋಪ ತಿಳಿಸಲಿಕ್ಕೆ ಬರುತ್ತಿದ್ದರು. ದಾರಿಯಲ್ಲಿ ಅವರು ಪೋಲೀಸರ ಕೈಗೆ ಸಿಕ್ಕರು. ಅಣ್ಣಾಬಸಪ್ಪ ಅವರ ಮೇಲೆ ವಾರಂಟ ಇರಲಿಲ್ಲ. ಆದುದರಿಂದ ಅವರು ತಮ್ಮ ನಿತ್ಯದ ಖಾದಿ ಉಡುಪನ್ನೇ ಉಡುತ್ತಿದ್ದರು. ಅಣ್ಣಾಬಸಪ್ಪ ಅವರು ೧೯೨೫ ರಿಂದಲೂ ನಮ್ಮ ಆಶ್ರಮದ ಜನರೊಂದಿಗೆ ಕೂಡಿ ಕೆಲಸ ಮಾಡಿದವರು. ಕುಮರಿಯಲ್ಲಿ ಖಾದಿ ಕೆಲಸ ಪ್ರಾರಂಭವಾದಕೂಡಲೇ ಇವರು ಅಕ್ಕ-ತಂಗೇರಹಾಳದ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ತಿರುಗಾಡಿ ನೂಲು ಖರೀದಿ ಮಾಡುವ ಕೆಲಸ ಮಾಡುತ್ತಿದ್ದರು. ಅಂದಿನಿಂದ ಇಂದಿನವರೆಗೆ ಇವರ ಮೈಮೇಲೆ ಖಾದಿ ಬಟ್ಟೆ ಇದ್ದವು. ಪೋಲೀಸರು ಅವರನ್ನೂ ಬಂಧಿಸಿ ತರಬರೆಯವರ ತೋಟಕ್ಕೆ ಕರೆದುಕೊಂಡು ಬಂದು ಕೂಡ್ರಿಸಿದರು.

ಆ ದಿನ ಪೋಲೀಸರು ತೋಟದಲ್ಲಿಯೇ ತಳಊರಿ ಅಲ್ಲಿ ಹಾದುಹೋಗುವವರನ್ನೆಲ್ಲ ಶೋಧಿಸಿ ಬಿಡುತ್ತಿದ್ದರು. ಸಂಶಯ ಬಂದವರನ್ನು ಹಿಡಿದು ಕೂಡ್ರಿಸುತ್ತಿದ್ದರು. ನಮ್ಮ ಮೇಲೆ ಒಮ್ಮಿಂದೊಮ್ಮೆಲೆ ದಾಳಿಯಾದ ಕೂಡಲೆ ನಮ್ಮ ಗುಂಪಿನ ಜನರು ಏನೂ ತೋಚದೆ ದಾರಿಸಿಕ್ಕತ್ತ ಓಡಿಹೋದರು. ನಮ್ಮ ಗುಂಪಿನ ನಿಂಗಪ್ಪ ತುಕ್ಕಾರ, ಭೀಮಪ್ಪ ಭೂಶಿ, ರಾಮಪ್ಪ ಬನದವರ, ಬಾಳಪ್ಪ ಮಾಳಗಿ ಮತ್ತು ನಾಗಯ್ಯ ಹಿರೇಮಠ ಎಂಬವರು ನಾವು ಏರಿಹೋದ ಪಕ್ಕದ ಗುಡ್ಡವನ್ನೇ ಹತ್ತಿದ್ದರು. ಅವರು ನಮ್ಮನ್ನು ನೋಡಿದ್ದರು. ನಾವು ಅವರನ್ನು ನೋಡಿರಲಿಲ್ಲ. ಅವರು ಗುಡ್ಡ ಏರಿ ಹೋಗಿ ಅಂದು ರಾತ್ರಿಯನ್ನು ಅಲ್ಲಿಯೇ ಕಳೆದರು. ಎಲ್ಲಿಯಾದರೂ ಹೊರಟುಹೋಗಬೇಕೆಂಬ ವಿಚಾರ ಅವರಿಗೆ ಬರಲಿಲ್ಲ. ನಮ್ಮ ಕಡೆಗೂ ಬರಲಿಲ್ಲ. ಮರುದಿನ ಮದ್ಯಾಹ್ನದವರೆಗೆ ಅಲ್ಲಿಯೇ ಕುಳಿತರು. ಮೊದಲನೆಯ ರಾತ್ರಿ ಊಟವಿಲ್ಲ. ಈಗ ಮದ್ಯಾಹ್ನವಾದರೂ ಊಟವಿಲ್ಲ. ಸಣ್ಣ ಹುಡುಗರು. ಈ ಐವರಲ್ಲಿ ನಾಗಯ್ಯ ಎಂಬಾತನು

ದಿನಾಲು ಸುತ್ತಲಿನ ಹಳ್ಳಿಗಳಲ್ಲಿ ' ಶಿವ ಕೋರಾನ್ನದ ಭಿಕ್ಷೆ ' ಎಂದು ಹೋಗುತ್ತಿದ್ದನು. ಅದರಿಂದ " ನೀನು ತೋಟಕ್ಕೆ ಹೋಗಿ ಅಲ್ಲಿಂದ ಪೋಲೀಸರು ಹೋಗಿರುವರೋ ಹೇಗೆ? ನಮ್ಮ ಜನರಲ್ಲಿ ಯಾರಾದರೂ ಪೋಲೀಸರ ಕೈಗೆ ಸಿಕ್ಕಿರುವರೋ ಹೇಗೆ? ಎಂಬುದನ್ನು ನೋಡಿಕೊಂಡು ಬಾ. ಪೋಲೀಸರು ಕೇಳಿದರೆ ನಾನು ಊರ ಅಯ್ಯ ಎಂದು ಹೇಳು " ಎಂದು ಹೇಳಿಕಳಿಸಿದರು. ಆ ಪ್ರಕಾರ ನಾಗಯ್ಯ ತೋಟಕ್ಕೆ ಬಂದು ತರಬರಿಯುವರ ಮನೆಗೆ ಹೋದ. ಅಲ್ಲಿ ಪೋಲೀಸರು ಕುಳಿತೇ ಇದ್ದರು. ಅವರು ಈತನಿಗೆ " ನೀನು ಯಾರು ? " ಎಂದು ಕೇಳಿದರು. ಮೊದಲೇ ಆತನಿಗೆ ಕಲಿಸಿಕೊಟ್ಟಂತೆ " ನಾನು ಊರ ಅಯ್ಯ " ಎಂದು ಹೇಳಿದ. ಪೋಲೀಸರಿಗೆ ಸಂಶಯ ಬಂದಿತು. ಅವರು ಆತನನ್ನು ಹಿಡಿದು ಮೈಯನ್ನೆಲ್ಲ ಶೋಧಿಸಿದರು. ಆತ ತನ್ನ ನಡುವಿಗೆ ಒಂದು ಕವಣೆಯನ್ನು ಕಟ್ಟಿದ್ದ. ಅದರಿಂದ ಪೋಲೀಸರ ಸಂಶಯ ಇಮ್ಮಡಿಸಿತು. ಅವರು ಆತನಿಗೆ ಒಂದು ಕಪಾಳಕ್ಕೆ ಹೊಡೆದು " ಖರೆ ಹೇಳುತ್ತೀಯೊ ಇಲ್ಲವೋ ? " ಎಂದರು. ಪಾಪ! ಆತ ಎಂದೂ ಪೋಲೀಸರ ಕೈಗೆ ಸಿಕ್ಕವನಲ್ಲ. ಅವರ ಬಾಯಿಗೆ ಹಾಗೂ ಹೊಡೆತಕ್ಕೆ ಅಂಜಿ " ಅಲ್ಲಿ ಇದ್ದಾರೆ, ತೋರಿಸುತ್ತೇನೆ ಬರ್ರಿ " ಎಂದ. ಪೋಲೀಸರಿಗೆ ಅದೇ ಬೇಕಾಗಿತ್ತು. ಇಷ್ಟೆಲ್ಲ ಪ್ರಯತ್ನ ಮಾಡಿಯೂ ಪೋಲೀಸರ ಕೈಗೆ ಯಾರೂ ಸಿಗದ್ದರಿಂದ ನಿರಾಶರಾಗಿದ್ದರು. ಇಂಥ ಹೊತ್ತಿನಲ್ಲಿ ನಾವೆಲ್ಲ ಸಿಗುತ್ತೇವೆಂಬ ವಿಚಾರ ಅವರನ್ನು ಆನಂದಸಾಗರದಲ್ಲಿ ಕೆಡಹಿರಬೇಕು.

ಭೀತಿಭೂತದೊಡನೆ ಘನಘೋರ ಯುದ್ಧ

ಚಿಕ್ಕ ವಯಸ್ಸಿನ ನಿರ್ಭಯ ವೃತ್ತಿಯ ನಾಲ್ಕು ಭೂಗತ ಹುಡುಗರು ಒಂದು ಬದಿಗೆ. ಇನ್ನೊಂದು ಬದಿಗೆ ಐವತ್ತು ಅರವತ್ತು ಸಶಸ್ತ್ರ ಪೋಲೀಸರು. ಇವರ ನಡುವೆ ಭೀತಿಭೂತದ ಕಾರಣದಿಂದಾದ ಘನಘೋರ ಯುದ್ಧದ ಸುದ್ದಿ ಅತ್ಯಂತ ನಾಟ್ಯಪೂರ್ಣ ಮತ್ತು ಮನೋರಂಜಕವಾಗಿದೆ.

ಭೂಗತ ಕಾರ್ಯಕರ್ತರ ಹತ್ತಿರ ಶಸ್ತ್ರಗಳಿವೆ. ಅವರಿಗೆ ಸಹಾಯ ಮಾಡುವ ನೂರಾರು ಆಯುಧ ಪಾಣಿಗಳಾದ ಬೇಡರಿದ್ದಾರೆ. ಎಂಬ ಭೀತಿಯಿಂದ ಭೂತಗ್ರಸ್ತರಾದ ೫೦–೬೦ ಸಶಸ್ತ್ರ ಪೋಲೀಸರು ತಮ್ಮ ಜೀವವನ್ನು ಉಳಿಸಿಕೊಂಡು ಸರಕಾರದ ಕೆಲಸವನ್ನು ಪ್ರಾಮಾಣಿಕ ರೀತಿಯಿಂದ ಮಾಡಲು ಹೊರಟ ದೃಶ್ಯ ಇಲ್ಲಿದೆ.

ಪೋಲೀಸರು ನಾಗಯ್ಯನನ್ನು ಪ್ರಶ್ನಿಸಿದಾಗ ಎಷ್ಟು ಜನ ಭೂಗತ ಕಾರ್ಯಕರ್ತರು ಗುಡ್ಡದ ಮೇಲಿದ್ದಾರೆಂದು ಕೇಳಲಿಲ್ಲ. ನಾಗಯ್ಯನಿಗೆ ಅದನ್ನು ಹೇಳುವ ಅವಶ್ಯಕತೆಯೂ ಬೀಳಲಿಲ್ಲ.

ಎಲ್ಲ ಕಾರ್ಯಕರ್ತರೂ ಈಗ ಸಿಗುತ್ತಾರೆಂಬ ಆನಂದದಿಂದ ಈ ಸಶಸ್ತ್ರಬೇಡರಿಂದ ರಕ್ಷಿತ (?) ೨೫ ಜನ ಭೂಗತರೊಂದಿಗೆ ಯುದ್ಧ ಮಾಡಬೇಕಾಗುತ್ತದೆಂಬ ಕಲ್ಪನೆ

ಮನಸ್ಸಿನಲ್ಲಿ ಮಾಡಿಕೊಂಡು ಈ ಸಶಸ್ತ್ರ ಪೋಲೀಸರು ಯುದ್ಧದ ಸಿದ್ಧತೆಯಲ್ಲಿ ತೊಡಗಿದರು.

ಭಯಭೀತ ಸಶಸ್ತ್ರ ಪೋಲೀಸರ ಗುಂಪು ಯುದ್ಧದ ವ್ಯೂಹ ರಚನೆಯನ್ನು ಮಾಡುವದರಲ್ಲಿ ತಮ್ಮ ಜ್ಞಾನದ ಮತ್ತು ಅನುಭವದ ಉಪಯೋಗ ಹೇಗೆ ಮಾಡಲಿಕ್ಕೆ ಬಂದೀತೆಂಬುದರ ವಿಚಾರ ಮಾಡುತ್ತಿದ್ದರು. ಕಾರ್ಯಕರ್ತರು ಸಶಸ್ತ್ರರಿದ್ದಾರೆ, ಎತ್ತರದ ಸ್ಥಳದಮೇಲೆ ಇದ್ದಾರೆ. ತಾವು ಗುಡ್ಡಹತ್ತಿ ಏರಿಯನ್ನು ಏರಿ ಹೋಗಬೇಕಾಗುತ್ತದೆ, ಎಂಬ ವಿಚಾರವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅನುಭವಿಕ ಪೋಲೀಸರು ತಮ್ಮ ವ್ಯೂಹ ರಚಿಸಿದರು. ಭೂಗತರು ಕುಳಿತ ಗುಡ್ಡಕ್ಕೆ ಸುತ್ತುವರಿದು ಮುತ್ತಿಗೆ ಹಾಕಿದರು. ಆ ಮುತ್ತಿಗೆಯ ವರ್ತುಲವನ್ನು ಚಿಕ್ಕದನ್ನಾಗಿ ಮಾಡುತ್ತ ಪೋಲೀಸರು ಗುಡ್ಡವನ್ನು ಏರುತ್ತ ಮೇಲೆ ಹೊರಟರು.

ಯುದ್ಧಶಾಸ್ತ್ರದ ದೃಷ್ಟಿಯಿಂದ ಭೂಗತ ಕಾರ್ಯಕರ್ತರು, ಅವರ ರಕ್ಷಕರಾದ ಬೇಡರು ಎತ್ತರದ ಸ್ಥಳದಲ್ಲಿ ಇದ್ದುದರಿಂದ ಘರ್ಷಣದಲ್ಲಿ ತಮ್ಮ ಪರಾಜಯವಾದರೆ ಅವಮಾನಕ್ಕೆ ಪಾರಾವಾರವೇ ಉಳಿಯಲಿಕ್ಕಿಲ್ಲವೆಂದು ಪೋಲೀಸರು ಬಹಳ ಎಚ್ಚರಿಕೆಯಿಂದ ನಡೆದಿದ್ದರು. ಮಾಹಿತಿ ಕೊಡುವ ನಾಗಯ್ಯ ಈ ಗಡಿಬಿಡಿಯಲ್ಲಿ ತಮಗೆ ಕೈಕೊಟ್ಟು (ತಪ್ಪಿಸಿಕೊಂಡು) ಹೋದರೆ ತಾವು ತಲೆ ತಗ್ಗಿಸಬೇಕಾಗುವದೆಂದು ತಿಳಿದು ನಾಗಯ್ಯನನ್ನು ಪೋಲೀಸ ಇನ್ಸ್‌ಪೆಕ್ಟರ ನಿಜಾಮುದ್ದೀನರು ಗಟ್ಟಿಯಾಗಿ ತಮ್ಮ ಎಡಗೈ ಬಗಲಲ್ಲಿ ಹಿಡಿದುಕೊಂಡಿದ್ದರು. ಪೋಲೀಸರು ತಮ್ಮ ವ್ಯೂಹ ರಚನೆಯಂತೆ ಒಂದೊಂದೆ ಹೆಜ್ಜೆ ಇಡುತ್ತ ನಾಲ್ಕೂ ದಿಕ್ಕಿನಿಂದ ಮುಂದೆ ಮುಂದೆ ಮೇಲೆ ಏರುತ್ತಿದ್ದರು.

ಇತ್ತ ಭೂಗತ ನಾಲ್ಕು ಹುಡುಗರು ನಾಗಯ್ಯನ ದಾರಿ ನೋಡುತ್ತಾ ಕುಳಿತಿದ್ದರು. ಅವರು ಕಳೆದ ಎರಡು ದಿನಗಳಿಂದಲೂ ಉಪವಾಸ ಇದ್ದರೂ ಕೂಡ ತಿನ್ನಲಿಕ್ಕೆ ಯಾವಾಗ ಸಿಗಬಹುದು ? ಇದರ ಕಡೆಗೆ ಅವರ ಲಕ್ಷ್ಯವಿದ್ದಿಲ್ಲ. ತಮ್ಮ ಸಹಕಾರಿಗಳ ನಿಜ ಸಂಗತಿ ಅವರಿಗೆ ಬೇಕಾಗಿತ್ತು. ಆದ್ದರಿಂದ ಈ ಹುಡುಗರು ಗಿಡದಮೇಲೆ ಹತ್ತಿ ನಾಗಯ್ಯ ಬರುವ ದಾರಿಯನ್ನು ದಿಟ್ಟಿಸಿ ನೋಡಿದರು. ಆದರೆ ಅವರಿಗೆ ಆತನ ಸುಳಿವು ಏನೂ ಕಾಣಲಿಲ್ಲ.

ಸ್ವಲ್ಪ ಹೊತ್ತಿನಮೇಲೆ ನಾಲ್ಕೂ ಬದಿಯಿಂದ ದೊಡ್ಡ ಸಂಖ್ಯೆಯಲ್ಲಿ ಸಶಸ್ತ್ರ ಪೋಲೀಸರು ಬರುವದು ಅವರಿಗೆ ಕಾಣಿಸಿತು. ಅಲ್ಲಿಂದ ಅವರಿಗೆ ತಪ್ಪಿಸಿಕೊಂಡು ಹೋಗಲು ಆಸ್ಪದವೇ ಇರಲಿಲ್ಲ. ಈ ಎಲ್ಲ ಭೂಗತರು ಕೈವಶವಾಗುತ್ತಾರೆಂದು ಪೋಲೀಸರಿಗೆ ಅನಿಸಿತ್ತು. ಯುದ್ಧಶಾಸ್ತ್ರದ ನಿಯಮದ ಪ್ರಕಾರ ಯುದ್ಧ ಕೈದಿಗಳನ್ನು ಹಿಡಿಯುವ ಪೂರ್ವದಲ್ಲಿ ಅವರಿಗೆ ಅವರ ಶಸ್ತ್ರಾಸ್ತ್ರಗಳನ್ನು ಕೆಳಗೆ ಇಡಲು ಹೇಳುತ್ತಾರೆ ಮತ್ತು ನಾಲ್ಕು ಹೆಜ್ಜೆ ಮುಂದೆ ಬರಲು ಹುಕುಂ ಕೊಡುತ್ತಾರೆ. ಇವೆಲ್ಲ ಪ್ರಕಾರಗಳನ್ನು

ಪೋಲೀಸರು ಈ ನಾಲ್ಕು ಹುಡುಗರ ಮೇಲೆ ಮಾಡಿದರು. ಈ ನಾಲ್ಕು ಅಲ್ಪ ವಯ-ಸ್ಸಿನ ಭೂಗತ ಹುಡುಗರಿಗೆ ಯುದ್ಧಶಾಸ್ತ್ರದ ಯಾವ ಜ್ಞಾನವೂ ಇದ್ದಿಲ್ಲ.

"ಎಚ್ಚರಿಕೆ! ಎದ್ದರೆ, ಅಲುಗಾಡಿದರೆ, ಗುಂಡು ಹಾಕಲಾಗುವದು" ಎಂದು ಒದರುತ್ತ ಪೋಲೀಸರು ಒಂದೊಂದೇ ಹೆಜ್ಜೆ ಮುಂದೆ ಇಡುತ್ತಿದ್ದರು. ಪೋಲೀಸರು ಹುಡುಗರಿಗೆ "ಕೈಮೇಲೆ ಎತ್ತಿಹಿಡಿಯಿರಿ" ಎಂದು ಆಜ್ಞೆ ಮಾಡಿದರೂ ಹುಡುಗರು ಬಂಡೆಗಲ್ಲಿನ ಮೇಲೆ ಹಾಗೆಯೇ ಕುಳಿತಿದ್ದರು. ಏಕೆಂದರೆ ಒದರುತ್ತಿರುವ ಅರ್ಥ ಮತ್ತು ಉದ್ದೇಶ ಅವರಿಗೆ ತಿಳಿಯುತ್ತಿದ್ದಿಲ್ಲ. ಅವರು ತಮ್ಮ ತಮ್ಮ ಸಾಮಾನುಗಳನ್ನು ತಮ್ಮ ಎದುರಿಗೆ ಸ್ವಲ್ಪ ದೂರದಲ್ಲಿಟ್ಟಿದ್ದರು. ಆ ಸಾಮಾನುಗಳಲ್ಲಿ ಯಾವಯಾವ ಶಸ್ತ್ರಗಳಿರ ಬಹುದೆಂಬುವದನ್ನು ಯಾರು ಹೇಳಬೇಕು? ಈ ಅಂಜಿಕೆಯಿಂದ ಭೂಗತ ಕಾರ್ಯಕರ್ತರ ಸಾಮಾನಿಗೆ ಕೈಹಚ್ಚುವ ಧೈರ್ಯ ಸಶಸ್ತ್ರ ಪೋಲೀಸರಿಗೆ ಆಗಲಿಲ್ಲ. ಕಾರ್ಯಕರ್ತರ ಸಂರಕ್ಷಕ ರಾದ ಆಯುಧಧಾರಿ ಬೇಡರು ಒಮ್ಮೆಲೆ ಬಂದು ಪೋಲೀಸರಿಗೆ ಮುತ್ತಿಗೆ ಹಾಕುವ ಸಂಭವವಿದೆ ಎಂಬ ನಿರಾಧಾರ ಮತ್ತು ಕಾಲ್ಪನಿಕ ಅಂಜಿಕೆಯಿಂದ ಪೋಲೀಸರು ಎಲ್ಲ ದೃಷ್ಟಿ ಯಿಂದ ಜಾಗರೂಕರಾಗಿದ್ದರು. ಒಮ್ಮೆ ಅವರು ಧೈರ್ಯಮಾಡಿ ಆ ಹುಡುಗರ ರಟ್ಟೆ ಯನ್ನು ಹಿಡಿದು ಅವರ ಝಡತಿ ಮಾಡಿದರು. ಅನಂತರ ಅನಿರೀಕ್ಷಿತ ದಾಳಿಯ ಕಾಲಕ್ಕೆ ನನ್ನ ಹಾಸಿಗೆಯನ್ನು ಈ ಹುಡುಗರು ತಮ್ಮ ಕಡೆಗೆ ತೆಗೆದುಕೊಂಡು ಬಂದಿ ದ್ದರು. ಆ ಕಟ್ಟಿದ ಹಾಸಿಗೆ ಹಾಗೆಯೇ ಇತ್ತು. ಆ ಹಾಸಿಗೆಯನ್ನು ಆ ಹುಡುಗ ರಿಂದ ಬಿಚ್ಚಿಸಿ ನೋಡಿದರು. ಅವರ ಇತರ ಸಾಮಾನುಗಳನ್ನು ಶೋಧಿಸಿದರು. ಆದರೆ ಆ ಸಾಮಾನಿನಲ್ಲಿ ಪೋಲೀಸರಿಗೆ ಏನು ಸಿಗಬೇಕು? ಅವರಲ್ಲಿ ಶಸ್ತ್ರ ಇತ್ಯಾದಿ ಯಾವದೂ ಇರಲಿಲ್ಲ. ಒಂದು ಹೆಗಲಿಗೆ ಹಾಕುವ ಚೀಲ, ಅದರಲ್ಲಿ ಒಂದು ಕಂಬಳಿ, ಧೋತರ, ಶರ್ಟು ಮತ್ತು ಸ್ವಲ್ಪ ಶೇಂಗಾದಕಾಳು, ಬೆಲ್ಲ ಅದನ್ನು ನೋಡಿ ಪೋಲೀಸರಿಗೆ ತಮ್ಮ ಕಲ್ಪನೆ ಮತ್ತು ಅಂಜಿಕೆ ನಿರಾಧಾರವಾಗಿದ್ದವು ಎಂದು ಅನಿಸಿರಬೇಕು. ಇತರರೂ ನಿಮ್ಮ ಜತೆ ಗಾರರು ಎಲ್ಲಿದ್ದಾರೆಂದು ಕೇಳಿದಾಗ ನಿನ್ನೆ ನಿಮ್ಮ ಅನಿರೀಕ್ಷಿತ ದಾಳಿಯ ಕಾಲಕ್ಕೆ ಎಲ್ಲ ಕಾರ್ಯಕರ್ತರೂ ಬೇರೆಬೇರೆ ಕಡೆಗೆ ಓಡಿಹೋದರು. ಯಾರು ಎಲ್ಲಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ ಎಂದು ಹೇಳಿದರು. ಇಷ್ಟು ದೊಡ್ಡ ಪೋಲೀಸಪಡೆ ಇಂತಹ ಘನ ಘೋರ ಯುದ್ಧಮಾಡಿ (?) ಐದು ಭೂಗತರನ್ನು ಹಿಡಿದುದಕ್ಕೆ ಸಮಾಧಾನ ಹೊಂದಿತು.

ಪೋಲೀಸರ ಕಡೆಗೆ ಹಗ್ಗವಿದ್ದಿದ್ದಿಲ್ಲ. ಒಬ್ಬ ಪೋಲೀಸನ ಪಟಕಾದಿಂದ ಐದು ಜನರ ಕೈಗಳನ್ನು ಕಟ್ಟಿ ೫೦-೬೦ ಸಶಸ್ತ್ರ ಪೋಲೀಸರ ಕಾವಲಿನಲ್ಲಿ ತರಬರಿಯವರ ತೋಟಕ್ಕೆ ಅವರನ್ನು ಕರೆದುಕೊಂಡು ಬಂದರು. ದಾಳಿಯಾದ ಕಾಲಕ್ಕೆ ಕಬ್ಬಿನ ತೋಟ ದಲ್ಲಿ ಕಬ್ಬು ಕಟ್ಟುವ ಕೂಲಿಯವರನ್ನು ಈ ಹೊತ್ತಿನವರೆಗೆ ಅಲ್ಲಿಯೇ ಕೂಡ್ರಿಸಿದ್ದರು. ಶ್ರೀ ಅಣ್ಣಾಬಸಪ್ಪಾ ಇವರನ್ನೂ ಸಹ ಹಿಡಿದುತಂದು ಅಲ್ಲಿಯೇ ಕುಳ್ಳಿರಿಸಿದ್ದರು.

ಈ ಘಟನೆಗಿಂತ ತುಸು ಮೊದಲು ಪೋಲೀಸರು ತೋಟದ ಸುತ್ತುಮುತ್ತು ಅಡ್ಡಾಡುವ ಕಾಲಕ್ಕೆ ದಾರಿಯಲ್ಲಿ ಒಬ್ಬನು ಭೆಟ್ಟಿಯಾದ. ಆತ ತಮ್ಮ ಹೊಲಕ್ಕೆ ಹೊರಟಿದ್ದನು. ಆತನ ಹೆಸರು ಕೇಳಿದಕೂಡಲೆ ಅವನು ಹೇಳಿದ "ನನ್ನ ಹೆಸರು ಗಂಗಾಧರ ದೇಶಪಾಂಡೆ" ಎಂದು. ಪೋಲೀಸರಿಗೆ ಆಕಾಲಕ್ಕೆ ಪ್ರತಿಯೊಂದು ವಸ್ತುವಿನಬಗ್ಗೆ ಪ್ರತಿಯೊಬ್ಬ ಮನುಷ್ಯನ ಬಗ್ಗೆ ಸಂಶಯ ಬರುತ್ತಿದ್ದುದರಿಂದ ಈ ಗಂಗಾಧರರಾಯರನ್ನೂ ಹಿಡಿದುತಂದು ಕೂಡ್ರಿಸಿದರು. ಈ ಗಂಗಾಧರರಾಯರಿಗೂ ಚಳವಳಿಗೂ ಯಾವ ಸಂಬಂಧವೂ ಇರಲಿಲ್ಲ. ಈ ಭೂಗತರೊಂದಿಗೆ ಅಣ್ಣಾಬಸಪ್ಪಾ ಮರಲಿಂಗಣ್ಣವರ, ಸಿದ್ದಲಿಂಗಪ್ಪ ತರಬರಿ ಮತ್ತು ಗಂಗಾಧರ ದೇಶಪಾಂಡೆ ಇವರ ಯಾತ್ರೆಯೂ ಹೊರಟಿತು. ಯಾತ್ರೆ ಹೊರಡುವ ಮುನ್ನ ಹಿಡಿದಿಟ್ಟ ಕಬ್ಬುಕಟ್ಟುವ ಕೂಲಿಕಾರರನ್ನು ಬಿಟ್ಟುಬಿಟ್ಟರು. ಇಡೀ ರಾತ್ರಿ ಮತ್ತು ಅಂದು ಮಧ್ಯಾಹ್ನದ ವರೆಗೆ ಅವರನ್ನು ಹಾಗೆಯೇ ಹಿಡಿದು ಕೂಡಿಸಿದ್ದರು. ಬಂಧಿಸಿದವರೆಲ್ಲರನ್ನು ಹುದಲಿಗೆ ಕರೆದುಕೊಂಡು ಬಂದರು. ಊರಲ್ಲಿ ಬಂದಕೂಡಲೆ ಉತ್ಸಾಹದ ಭರದಲ್ಲಿ ಒಬ್ಬ ಭೂಗತ ಕಾರ್ಯಕರ್ತ (ನಿಂಗಪ್ಪ ಯಲ್ಲಪ್ಪ ತಿಕ್ಕಾರ) "ಮಹಾತ್ಮಾ ಗಾಂಧೀಜೀಕಿ ಜೈ" ಎಂದು ಜಯಜಯಕಾರ ಮಾಡಿದ. ಊರಲ್ಲಿಯ ಜನರನ್ನು ಕೂಡಿಸಲು ಈತನು ಜಯಜಯಕಾರ ಮಾಡುತ್ತಾನೆಂದು ಪೋಲೀಸರಿಗೆ ಅನಿಸಿತು. ಆದ್ದರಿಂದ ಆತನಿಗೆ ಪೋಲೀಸರಿಂದ ಹೊಡೆತ ತಿನ್ನಬೇಕಾಯಿತು.

ಬಂಧಿತರನ್ನು ಬಿಡಿಸುವ ಪ್ರಯತ್ನ

ಹುದಲಿ ಊರಲ್ಲಿ ಕೆಲವು ತರುಣರು ಈ ಹುಡುಗರನ್ನು ಪೋಲೀಸರಿಂದ ಬಿಡಿಸಬೇಕೆಂದು ವಿಚಾರ ಮಾಡಿದ್ದರು. ಆ ರೀತಿ ಅವರು ಒಂದು ಯೋಜನೆಯನ್ನು ಸಿದ್ಧಗೊಳಿಸಿದ್ದರು. ಈ ವಿಚಾರ ಊರಲ್ಲಿ ಹಿರಿಯರಿಗೆ ತಿಳಿಯಿತು. ಆಗ ಅವರು— "ಈ ಪ್ರಯತ್ನವನ್ನು ಈಗ ಮಾಡಬೇಡಿರಿ. ಹಾಗೆ ಮಾಡಿದರೆ ಈ ಊರಲ್ಲಿ ಅನೇಕ ಹೆಣಗಳು ಬೀಳುವವು. ಮತ್ತು ಈ ಹುಡುಗರ ಜೀವವೂ ಗಂಡಾಂತರಕ್ಕೀಡಾಗುವದು." ಎಂದು ಒತ್ತಾಯದ ಸಲಹೆಯನ್ನು ಮಾಡಿದರು. ಹಿರಿಯರ ಸಲಹೆಯನ್ನು ತರುಣರು ಮಾನ್ಯಮಾಡಿ ಈ ಭೂಗತರನ್ನು ಬಿಡಿಸಿ ಒಡಿಸುವ ವಿಚಾರ ಬಿಟ್ಟುಬಿಟ್ಟರು.

ಈ ಬಂಧಿತರನ್ನು ಗುಜನಾಳದಲ್ಲಿಯ ಪೋಲೀಸ ಠಾಣೆಗೆ ಒಯ್ದರು. ಗುಜನಾಳ ಊರು ಸುಲಧಾಳ ಸ್ಟೇಶನ್ನಿನಿಂದ ೪ ಫರ್ಲಾಂಗ ದೂರದಲ್ಲಿ ಇರುತ್ತದೆ. ಬಂಧಿತರನ್ನು ಸುಲಧಾಳ ಸ್ಟೇಶನ್ ಮೇಲಿಂದ ದೊಡ್ಡ ದಾರಿಯಿಂದ ಒಯ್ಯದೆ ನಡುವಿನ ದಾರಿಯಿಂದ ಗುಜನಾಳಕ್ಕೆ ಕರೆದುಕೊಂಡು ಹೋದರು. ಪೋಲೀಸರಿಗೆ ೩-೪ ದಿನಗಳಿಂದ ನಿದ್ರೆ ಇರಲಿಲ್ಲ. ಹೊತ್ತುಹೊತ್ತಿಗೆ ಊಟ ಸಿಗುತ್ತಿರಲಿಲ್ಲ. ವಿಶ್ರಾಂತಿಯೂ ಸಿಕ್ಕಿದ್ದಿಲ್ಲ. ಅವರಿಗೆ ತಮ್ಮ ಸಮವಸ್ತ್ರಗಳನ್ನು ತೆಗೆದಿಡಲೂ ಒಂದು ಕ್ಷಣವು ಸಹ ಬಿಡುವು ದೊರೆ

ತಿದ್ದಿಲ್ಲ. ಆದ್ದರಿಂದ ಪೋಲೀಸರು ತಮ್ಮ ಸಮುಪಸ್ತ್ರ ತೆಗೆದಿಡುವ ಸಿದ್ಧತೆಯಲ್ಲಿದ್ದರು. ಇಷ್ಟರಲ್ಲಿ ಇನ್ನೊಂದು ಘಟನೆ ಯೋಗಾಯೋಗದಿಂದ ಸಂಭವಿಸಿತು.

ಸುಲಧಾಳ ಸ್ಟೇಶನ್ ಅಗ್ನಿಗಾಹುತಿ

ಇದೇ ಹೊತ್ತಿಗೆ ಸುಲಧಾಳ ಸ್ಟೇಶನ್ ಸುಡುವ ಕಾರ್ಯಕ್ರಮವನ್ನು ಅಕ್ಕತಂಗೇರಹಾಳದ ಪಥಕದವರು ಕೈಕೊಂಡಿದ್ದರು. ರಂಗಧೋಳಿಯಿಂದ ಓಡಿದು ತಂದ ಭೂಗತರನ್ನು ಸುಲಧಾಳ ಸ್ಟೇಶನ್ ಮಾರ್ಗದಿಂದ ಗುಜನಾಳಕ್ಕೆ ಕರೆದುಕೊಂಡು ಹೋಗಿದ್ದರೆ ಸುಲಧಾಳ ಸ್ಟೇಶನ್ ಸುಡುವ ಕಾರ್ಯಕ್ರಮು ಆ ದಿವಸ ಒಂದುವೇಳೆ ಸಂಭವಿಸುತ್ತಿರಲಿಲ್ಲ. ಆದರೆ ವಿಧಿಲಿಖಿತ ಹಾಗಿರಲಿಲ್ಲ.

ಅಕ್ಕತಂಗೇರಹಾಳ ಕಾರ್ಯಕರ್ತರು ಸುಲಧಾಳ ಸ್ಟೇಶನ್ ಸುಡುವ ಕಾರ್ಯಕ್ರಮುಪನ್ನು ಯಶಸ್ವಿಯಾಗಿ ಮುಗಿಸಿ, ಅವರು ಪಕ್ಕದ ಒಂದು ಜೋಳದ ಹೊಲದಲ್ಲಿ ಹೋಗಿ ಕುಳಿತರು. ಅದರ ಪ್ರತಿಕ್ರಿಯೆ ಏನಾಗುತ್ತದೆಂಬುದನ್ನು ತಿಳಿದುಕೊಳ್ಳುವ ಉದ್ದೇಶ ಅವರದಾಗಿತ್ತು. ರಂಗಧೋಳಿಯಿಂದ ಹುದಲಿಗೆ ಭೂಗತರನ್ನು ತರುವಾಗ್ಗೆ ಶ್ರೀ ಗಂಗಾಧರ ದೇಶಪಾಂಡೆ ಇವರನ್ನೂ ಓಡಿದುಕೊಂಡು ಬಂದಿದ್ದರು. ಈ ಸುದ್ದಿ ಅವರ ಅಣ್ಣ ಬಂಡೋಪಂತರಿಗೆ ತಿಳಿದಕೂಡಲೇ ಅವರು ಗಂಗಾಧರರಿಗೆ ಊಟ ತೆಗೆದು ಕೊಂಡು ಸುಲಧಾಳ ಸ್ಟೇಶನ್ ರಸ್ತೆಯಿಂದ ಗುಜನಾಳಕ್ಕೆ ಹೊರಟರು. ಸುಲಧಾಳ ಸ್ಟೇಶನ್ನಿಗೆ ಬೆಂಕಿಹತ್ತಿ ಉರಿಯುತ್ತಿರುವ ದೃಶ್ಯ ಇವರಿಗೆ ಕಾಣಿಸಿತು. ಗುಜನಾಳದ ಪೋಲೀಸ ಠಾಣೆಗೆ ಹೋದಕೂಡಲೆ ಅವರು ಪೋಲೀಸ ಅಧಿಕಾರಿಗೆ ಹೇಳಿದರು. " ರಾವಸಾಹೇಬ, ಇದೀಗ ಸುಲಧಾಳ ಸ್ಟೇಶನ್ನಿಗೆ ಬೆಂಕಿಹತ್ತಿದೆ. ನನ್ನ ತಮ್ಮನಿಗೆ ಊಟ ತರುವಾಗ ಅದನ್ನು ನೋಡಿದೆ ".

ಸಂಶಯಪಿಶಾಚಗ್ರಸ್ತ ಪೋಲೀಸರಿಗೆ ಇದು ನಿಜವೆನಿಸಲಿಲ್ಲ. ಸುಲಧಾಳ ಸ್ಟೇಶನ್ ಸುಟ್ಟ ಸುದ್ದಿ ಹಬ್ಬಿಸಿ. ನಾವು ಪೋಲೀಸರನ್ನು ಸುಲಧಾಳ ಸ್ಟೇಶನ್ ಕಡೆಗೆ ಕಳಿಸಿ ಈ ಭೂಗತ ಕಾರ್ಯಕರ್ತರನ್ನು ಓಡಿಸಿಕೊಂಡು ಹೋಗುವ ಯುಕ್ತಿ ನಮ್ಮದಿರ ಬೇಕೆಂದು ಪೋಲೀಸರಿಗೆ ಅನಿಸಿತು. ಅವರು ಹೊರಗೆ ಬಂದು ನೋಡಿದರು. ಅವರಿಗೂ ಸ್ಟೇಶನ್ನಿಗೆ ಬೆಂಕಿಹತ್ತಿ ಉರಿಯುವದು ಕಾಣಿಸಿತು. ಆದ್ದರಿಂದ ರಂಗಧೋಳಿ ಗುಡ್ಡದಲ್ಲಿ ಬಂಧಿಸಿದ ಭೂಗತ ಕಾರ್ಯಕರ್ತರ ಕಾವಲಿಗಾಗಿ ೧೦ ಜನ ಸಶಸ್ತ್ರ ಪೋಲೀಸರನ್ನಿಟ್ಟು ಉಳಿದ ಪೋಲೀಸರನ್ನು ತಮ್ಮ ಸಂಗಡ ಕರೆದುಕೊಂಡು ಸುಲಧಾಳ ಸ್ಟೇಶನ್ನಿಗೆ ಹೊರ ಟರು. ಈ ಗಡಿಬಿಡಿಯಲ್ಲಿ ಪೋಲೀಸರಿಗೆ ತಮ್ಮ ಯುನಿಫಾರ್ಮ ಇಳಿಸುವದಕ್ಕೂ. ಊಟ-ವಿಶ್ರಾಂತಿ ತೆಗೆದುಕೊಳ್ಳುವದಕ್ಕೂ ಸಮಯ ದೊರೆಯಲಿಲ್ಲ. ಪೋಲೀಸರು

ಸ್ಟೇಶನ್ನಿಗೆ ಬಂದು ಮುಟ್ಟುವಷ್ಟರಲ್ಲಿ ಅದು ಸಂಪೂರ್ಣ ಸುಟ್ಟುಹೋಗಿತ್ತು. ಪೋಲೀಸರು ಸುಲಧಾಳ ಸ್ಟೇಶನ್ನಿಗೆ ಹೋಗುವಾಗ ಭೂಗತರ ಕಾವಲಿಗಿಟ್ಟ ಪೋಲೀಸರಿಗೆ ನಿಷ್ಠುರವಾದ ಕಟ್ಟಪ್ಪಣೆ ವಿಧಿಸಿದ್ದರು: "ಇಲ್ಲಿ ಯಾರಾದರೂ ಬಂದು ಭೂಗತ ಕಾರ್ಯಕರ್ತರಿಗೆ ಭೆಟ್ಟಿ ಆಗುವ ಪ್ರಯತ್ನ ಮಾಡಿದರೆ ಅವರಿಗೆ ಗುಂಡುಹಾಕಬೇಕು, ಯಾರನ್ನೂ ವಾಡೇದ ಒಳಗೆ ಬಿಡಬಾರದು."

ಲಾಕಪ್ಪಿನಲ್ಲಿ ಕಾರ್ಯಕರ್ತರ ಭವಣೆ

ಮುಂದೆ ಎರಡು ದಿವಸಗಳ ತರುವಾಯ ರಂಗಧೋಳಿಯಲ್ಲಿ ಬಂಧಿಸಿದ ಭೂಗತ ಕಾರ್ಯಕರ್ತರನ್ನು ಬೆಳಗಾಂವಿ "ಲಾಕಪ್ಪಿ"ನಲ್ಲಿ ಒಯ್ದಿಟ್ಟರು. ಅಲ್ಲಿ ಅವರಿಗೆ ಜೀವ ಧಾರಣೆಗೆ ಬೇಕಾಗುವಷ್ಟೇ ಅನ್ನವನ್ನು ಕೊಡುತ್ತಿದ್ದರು. ಮುಂದೆ ಅವರ ಮೇಲೆ ಖಟ್ಲೆ ಹಾಕಲಾಯಿತು. ಆದರೆ ಅವರ ಅಪರಾಧದ ಬಗ್ಗೆ ಒಂದೂ ಪುರಾವೆ ಉಪಲಬ್ಧ ವಾಗದ್ದರಿಂದ ಅವರನ್ನು ನಿರ್ದೋಷಿಗಳೆಂದು ಮ್ಯಾಜಿಸ್ಟ್ರೇಟರು ಬಿಡುಗಡೆ ಮಾಡಿದರು. ಆದರೆ ಪೋಲೀಸರು ಅವರನ್ನು ಕೂಡಲೆ ಕೋರ್ಟಿನ ಹೊರಗೆ ಬಂಧಿಸಿ ಅವರ ಮೇಲೆ ಸುಳೇಭಾವಿ ಟಪಾಲ ಲೂಟಿಯ ಖಟ್ಲೆ ಹಾಕಿದರು. ಆ ಕಾಲಕ್ಕೆ ಸುಳೇ ಭಾವಿ ಸಾಂಗ್ಲಿ ಸಂಸ್ಥಾನದಲ್ಲಿತ್ತು. ಆದುದರಿಂದ ಈ ಖಟ್ಲೆ ಶಹಾಪೂರದಲ್ಲಿ ೩ ತಿಂಗಳ ವರೆಗೆ ನಡೆಯಿತು. ಈ ಅವಧಿಯಲ್ಲಿ ಅವರನ್ನು ಶಹಾಪೂರ ಲಾಕಪ್ಪಿನಲ್ಲಿ ಇಟ್ಟಿದ್ದರು. ಈ ಕಾಲದಲ್ಲಿ ಸಹ ಅವರಿಗೆ ಜೀವ ಹಿಡಿಯುವಷ್ಟೇ ಅನ್ನ ಕೊಡುತ್ತಿದ್ದರು. ಸ್ನಾನಕ್ಕೆ ನೀರು ಕೊಡುತ್ತಿದ್ದಿಲ್ಲ. ಬಟ್ಟೆ ಬದಲು ಮಾಡಲು ಸಹ ಕೊಟ್ಟಿದ್ದಿಲ್ಲಾ. ಈ ರೀತಿ ಶಹಾಪೂರ ಲಾಕಪ್ಪಿನಲ್ಲಿದ್ದಾಗ ಈ ಕಾರ್ಯಕರ್ತರು ಬಹಳ ಕಷ್ಟ ಅನುಭವಿಸಬೇಕಾ ಯಿತು. ಶಹಾಪೂರ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಈ ಖಟ್ಲೆ ಸೆಶನ್ ಕಮಿಟ್ ಆಯಿತು. ಆದುದರಿಂದ ಸಾಂಗ್ಲಿ ಶೆಶನ್ ಕೋರ್ಟಿನಲ್ಲಿ ಖಟ್ಲೆ ನಡೆಯಿತು. ಅಲ್ಲಿ ಸಹ ಈ ಆರೋಪಿ ಗಳು ನಿರ್ದೋಷಿಗಳೆಂದು ತೀರ್ಪು ಕೊಟ್ಟರು. ಆಗ ಪೋಲೀಸರು ಹಾಯ್ ಕೋರ್ಟಿಗೆ ಅಪೀಲು ಮಾಡಿದರು. ಅಲ್ಲಿ ಸಹ ಈ ಆರೋಪಿಗಳು ನಿರ್ದೋಷಿಗಳೆಂದು ಹೇಳಿದ್ದ ರಿಂದ ಕಾರ್ಯಕರ್ತರ ಬಿಡುಗಡೆ ಆಯಿತು.

ವಾಸು ಮಾಯವಾದ

ಅನಿರೀಕ್ಷಿತ ದಾಳಿಯ ಸಮಯ ಬಂದುದರಿಂದ ಇತರರಂತೆ ವಾಸೂ ಸಹ ಓಡಿ ಹೋದ. ಆತ ಎತ್ತಹೋದನೆಂಬದು ಯಾರಿಗೂ ಗೊತ್ತಾಗಲೇ ಇಲ್ಲ. ಆತ ಎಲ್ಲಿಯೋ ಮಾಯವಾದ. ಆಂದೋಲನ ಮುಗಿದ ನಂತರ ಸಹ ಆತ ಹುದಲಿಗೂ ಬರಲಿಲ್ಲ. ಯಾರಿಗೂ ಭೆಟ್ಟಿಯೂ ಆಗಲಿಲ್ಲಾ. ಆತ ಯಾರು ? ಯಾತಕ್ಕೆ ಬಂದಿದ್ದ ? ತಿರುಗಿ ಎಲ್ಲಿಗೆ ಹೋದ ? ಎಂಬ ಸಂಗತಿ ಗೂಢವಾಗಿಯೇ ಉಳಿಯಿತು.

ಪೋಲೀಸ ಪಾಟೀಲರ ರಾಜೀನಾಮೆ

ಆ ಕಾಲಕ್ಕೆ ಕೃಷ್ಣಾಜಿ ಗಣೇಶ ದೇಶಪಾಂಡೆ ಇವರು ರಂಗಧೋಳಿ, ಗುತ್ತಿ, ಪಣಗುತ್ತಿ, ನಿಂಗ್ಯಾನಟ್ಟಿ ಮುಂತಾದ ಹಳ್ಳಿಗಳ ಗೌಡಿಕೆಯನ್ನು ಮಾಡುತ್ತಿದ್ದರು. ಈ ಗ್ರಾಮಸ್ಥರು (ಗೌಡ, ಕುಲಕರ್ಣಿಯವರು) ತಮ್ಮ ಸ್ಥಳಗಳಿಗೆ ರಾಜಿನಾಮೆ ಕೊಡಬೇಕೆಂಬ ಆದೇಶ ಕೇಂದ್ರ ಗುಪ್ತ ಕಚೇರಿಯಿಂದ ಬಂದಿತ್ತು. ನಾನು ಹುದಲೀ ಭಾಗದ ಎಲ್ಲ ಪಾಟೀಲ ಕುಲಕರ್ಣಿಯವರಿಗೆ, ರಾಜೀನಾಮೆ ಕೊಟ್ಟು ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಬೇಕು ಎಂದು ಬರೆದು ತಿಳಿಸಿದ್ದೆನು. ಸಾಧ್ಯವಿದ್ದವರನ್ನು ಗುಪ್ತ ರೀತಿಯಿಂದ ಭೆಟ್ಟಿಯಾಗಿ ಮೇಲೆ ಹೇಳಿದ ರೀತಿ ಉಪದೇಶ ಮಾಡುತ್ತಿದ್ದೆ. ಹುದಲಿ ಪೋಲೀಸ ಪಾಟೀಲರಾದ ಶ್ರೀ ಬಸನಗೌಡರು ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಡಲು ಸಿದ್ಧರಾಗಿದ್ದರು. ಆದರೆ ಅವರು ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಟ್ಟರೆ, ಅವರ ಸ್ಥಳದಲ್ಲಿ ಬೇರೆ ಯಾರಾದರೂ ಬರಬಹುದು. ಅದರಿಂದ ನಮ್ಮ ಆಂದೋಲನಕ್ಕೆ ಹೆಚ್ಚು ತೊಂದರೆ ಆಗಬಹುದೆಂದೂ ಈಗಿದ್ದ ಪೋಲೀಸ ಪಾಟೀಲರಾದ ಶ್ರೀ ಬಸನಗೌಡರು ನಮ್ಮ ಕೆಲಸಕ್ಕೆ ಅನುಕೂಲವಾಗಿರುವದರಿಂದಲೂ ನಾನು ಅವರಿಗೆ ಅವರ ಸ್ಥಳಕ್ಕೆ ರಾಜೀನಾಮೆ ಕೊಡಬೇಡಿರೆಂದು ಹೇಳಿದೆ. ಶ್ರೀ ಕೃಷ್ಣಾಜಿ ಗಣೇಶ ದೇಶಪಾಂಡೆ ಇವರು ರಂಗಧೋಳಿ ಪ್ರಕರಣ ಆದಕೂಡಲೇ ತಮ್ಮ ಪೋಲೀಸ ಗೌಡಿಕಿಗೆ ರಾಜೀನಾಮೆ ಕೊಟ್ಟರು. ಮುಂದೆ ಸಹ ಅವರು ಪಾಟೀಲಕಿಯನ್ನು ಮಾಡಲೇ ಇಲ್ಲ.

ಜೋಶಿ ನಾರಾಯಣರಾಯರ ಮನೆಯಲ್ಲಿ

ನಾನು ಹಾಗೂ ಶ್ರೀ ಬಿ.ಆರ್. ಪಾಟೀಲ ಇಬ್ಬರೂ ವಂಟಮುರಿಯಿಂದ ಬೆಳಗಾವಿಗೆ ಹೋಗಬೇಕೆಂದು ಗೊತ್ತುಮಾಡಿದೆವು. ನಮ್ಮ ಜೊತೆಗಿದ್ದವರಿಗೆ ಸ್ವಲ್ಪ ಖರ್ಚಿಗೆ ಕೊಟ್ಟು ೧೦-೧೫ ದಿವಸ ಬೇರೆ ಎಲ್ಲಿಯಾದರೂ ಹೋಗಲು ತಿಳಿಸಿದೆವು. ವಂಟಮುರಿಯಿಂದ ಮಣಗುತ್ತಿ ಎಂಬ ಹಳ್ಳಿಗೆ ಬಂದು ಅಲ್ಲಿ ಒಂದು ಎತ್ತಿನ ಗಾಡಿ ಮಾಡಿಕೊಂಡು ಬೆಳಗಾಂವಿಗೆ ಬಂದೆವು. ಬೆಳಗಾಂವಿಯಲ್ಲಿ ಎಲ್ಲಿ ಹೋಗಬೇಕೆಂಬ ಪ್ರಶ್ನೆ ಬಂದಿತು. ಗಾಡಿಯು ಲಿಂಗರಾಜ ಕಾಲೇಜಿನ ಮುಂದೆ ಹಾಯ್ದು ಕೇಳಕರಬಾಗಿನ ಹತ್ತಿರ ಬಂತು. ಅಲ್ಲಿಯೇ ನಾರಾಯಣರಾಯರ ಮನೆ ಇತ್ತು. ಬಿ. ಆರ್. ಪಾಟೀಲರಿಗೆ ನಾನು ಇಲ್ಲಿಯೇ ಇಳಿಯುತ್ತೇನೆ. ನೀವು ಬೇರೆಕಡೆ ಹೋಗಿರಿ ಎಂದು ಹೇಳಿ ಅಲ್ಲಿಯೇ ಇಳಿದೆ. ಆಗ ಮಧ್ಯಾಹ್ನ ೨ಗಂಟೆಯ ಸಮಯವಾಗಿರಬಹುದು. ಮನೆಯೊಳಗೆ ಹೋದಾಗ ನಾರಾಯಣರಾಯರ ತಮ್ಮಂದಿರಾದ ಡಾ. ಜೋಶಿ ಹಾಗೂ ಕೃಷ್ಣರಾವ ಜೋಶಿ ಇದ್ದರು. ಅವರು ನನ್ನನ್ನು ನೋಡಿ ಗಾಬರಿಯಾದರು. ಇವರು ಇಷ್ಟು ಹೊತ್ತಿನಲ್ಲಿ ಹೇಗೆಬಂದರು—ಎಂದು. ನಾನು ಸ್ವಲ್ಪದರಲ್ಲಿ ಎಲ್ಲ ವಿಷಯ ತಿಳಿಸಿದೆ. ಅಂದು ಯಾವದೋ ಹಬ್ಬವಿತ್ತು. ಎಲ್ಲರ

ಊಟ ಮುಗಿದಿತ್ತು. ನಾನು ಸ್ನಾನ ತೀರಿಸಿ ಊಟ ಮುಗಿಸಿದೆ. ಸಾಯಂಕಾಲದವರೆಗೆ ಅಲ್ಲಿಯೇ ಇದ್ದು ರಾತ್ರಿಗಾಡಿಯಿಂದ ಧಾರವಾಡಕ್ಕೆ ಹೋದೆನು.

ಬೆಟಗೇರಿ ಕೃಷ್ಣಶರ್ಮರ ಮನೆಯಲ್ಲಿ

ಇದೇ ಸಂದರ್ಭದಲ್ಲಿ ಇಂಥವೇ ಇನ್ನೆರಡು ಸಂಗತಿಗಳನ್ನು ಹೇಳಬಯಸು ತ್ತೇನೆ. ಧಾರವಾಡದಲ್ಲಿ ನಾನು ನಾಲ್ಕೆಂಟು ದಿವಸ ಇದ್ದೆ. ಆಗ ಕೃಷ್ಣಶರ್ಮರು ಭೆಟ್ಟಿಯಾದಾಗ ಒಂದುದಿವಸ ಊಟಕ್ಕೆ ಬರಲು ಹೇಳಿದ್ದರು. ನಾನು ಒಪ್ಪಿದೆ. ಕೃಷ್ಣ ಶರ್ಮರಿಗೂ ನನಗೂ ಮೊದಲಿನಿಂದಲೂ ಸ್ನೇಹ. ಸಾಮಾನ್ಯ ದಿನಗಳಲ್ಲಿ ನಾನು ಆಗಾಗ ಅವರ ಮನೆಗೆ ಹೋದಾಗ ತಿಂಡಿತಿನಿಸು ಆಗಿಯೇ ಆಗುತ್ತಿತ್ತು. ಈಗ ನಾನು ಊಟಕ್ಕೆ ಹೋದ ದಿವಸ ಶೀಗೇಹುಣ್ಣಿವೆಯ ಹಬ್ಬವಿತ್ತು. ಕರಿಗಡಬಿನೂಟ ಮಾಡಿಸಿದ್ದರು. ಮಧ್ಯಾಹ್ನ ೧೨ ಗಂಟೆಯ ಸಮಯದಲ್ಲಿ ಊಟಕ್ಕೆ ಕುಳಿತೆವು. ಊಟ ರುಚಿಕರವಾಗಿತ್ತು. ಅವರ ಪತ್ನಿ ನನ್ನನ್ನು ಸಹೋದರನಂತೆ ಕಾಣುತ್ತಿದ್ದರು. ಅವರು ಅಕ್ಕರೆಯಿಂದ ಬಡಿ ಸುತ್ತಿದ್ದರು. ನಾನು ನಿದಾನವಾಗಿ ಊಟ ಮಾಡುತ್ತಿದ್ದೆ. ಕೃಷ್ಣಶರ್ಮರಿಗೆ ಮಾತ್ರ ಎದೆಗುದಿ. ರಸ್ತೆಯಲ್ಲಿ ಸ್ವಲ್ಪ ಸಪ್ಪಳವಾದರೆ ಸಾಕು, ತಮ್ಮ ಮಕ್ಕಳನ್ನು ಹೊರಗೆ ನೋಡಿಬಾ ಎಂದು ಕಳಿಸುತ್ತಿದ್ದರು. ನನ್ನ ಎಲೆಯೊಳಗಿನ ಕಡಬು ಮುಗಿಯುವದರೊಳಗೆ ತಮ್ಮ ಪತ್ನಿಗೆ ಅನ್ನ ತೆಗೆದುಕೊಂಡು ಬಾ, ಮೊಸರು ತಾ ಎಂದು ಗಡಿಬಿಡಿ ಮಾಡುತ್ತಿ ದ್ದರು. ಅವರ ಪತ್ನಿಗೆ ಇವರ ಗಡಿಬಿಡಿಯ ಅರ್ಥವಾಗದು. ಹೀಗೇಕೆ ಗಡಿಬಿಡಿ ಮಾಡುತ್ತೀರಿ. ಬಹಳ ದಿವಸಕ್ಕೆ ಬಂದಿದ್ದಾರೆ, ಸಾವಕಾಶ ಊಟಮಾಡಲಿ ಎಂದು ಅನ್ನುತ್ತಿದ್ದರು. ಕೃಷ್ಣಶರ್ಮರಿಗೆ ನಾನು ಇವರನ್ನು ಊಟಕ್ಕೆ ಏಕೆ ಕರೆದೆನೋ ಎನಿ ಸಿರಬೇಕು. ಇದರ ಕಾರಣವಿಷ್ಟೆ. ಈಗ ನಾನು ಒಬ್ಬನೆ ಇರಲಿಲ್ಲ. ಸರಕಾರದವರು ನನ್ನ ಬೆನ್ನಿಗೆ ಐದು ಸಾವಿರ ರೂಪಾಯಿಗಳ ಗಂಟು ಕಟ್ಟಿದ್ದರು. ಅದು ಎಲ್ಲರಿಗೂ ಭಾರವಾಗು ತ್ತಿತ್ತು. ಅವರ ಮನೆಯಲ್ಲಿ ನಾನು ಸಿಕ್ಕರೆ ಐದು ಸಾವಿರ ರೂಪಾಯಿಗಳ ಆಶೆಗಾಗಿ ನಾವು ಇವರನ್ನು ಹಿಡಿದುಕೊಟ್ಟೆವಲ್ಲಾ ಎಂದು ಜನರು ಎಲ್ಲಿ ಅನ್ನುತ್ತಾರೋ ಎಂಬ ಭಯ ಅವರಿಗೆ.

ದಾದಾಸಾಹೇಬ ದೇಶಪಾಂಡೆಯವರಲ್ಲಿ

ಇನ್ನೊಮ್ಮೆ ಇಂಥದೇ ಪ್ರಸಂಗವುಂಟಾಯಿತು. ಅಂದು ದಸರೆಯ ಹಬ್ಬ. ನಾವು ಕುಮುಟಹತ್ತಿರವೇ ಇದ್ದೆವು. ಸಾಯಂಕಾಲ ಕತ್ತಲಾದಮೇಲೆ ಊರಲ್ಲಿ ಬಂದು ಹಿರಿಯರಿಗೆಲ್ಲ ಬನ್ನಿಯನ್ನುಕೊಟ್ಟು ಅವರ ಆಶೀರ್ವಾದ ಪಡೆದುಕೊಂಡು ಹೋಗ ಬೇಕೆಂದು ವಿಚಾರ ಮಾಡಿದೆವು. ಸಾಯಂಕಾಲ ೭ ಗಂಟೆಯ ಸುಮಾರಿಗೆ ಊರಲ್ಲಿ ಬಂದು ಹಿರಿಯರಿಗೆಲ್ಲ ಬನ್ನಿಯನ್ನು ಕೊಟ್ಟೆವು. ದಾದಾಸಾಹೇಬ ದೇಶಪಾಂಡೆಯವರ ಮನೆಗೆ ಬಂದೆವು. ಅವರ ತಂದೆ ಕಲ್ಲೋಪಂತರ ಕಾಲದಿಂದಲೂ ಅವರಿಗೂ ನನಗೂ ಗಾಢ

ಸ್ನೇಹ. ಹುದಲಿಗೆ ಹೋದಾಗ ನಾನು ಅವರಲ್ಲಿಯೇ ಊಟ ಮಾಡುತ್ತಿರುತ್ತೇನೆ. ಅಂದು ಅವರ ತಾಯಿಗೆ ಬನ್ನಿಯನ್ನು ಕೊಟ್ಟನಂತರ ನಮ್ಮನ್ನು ಊಟಮಾಡುತ್ತೀರಾ ? ಎಂದು ಕೇಳಿದರು. ನಾವು ಆಗಲಿ ಎಂದೆವು. ಹಬ್ಬವಾದುದರಿಂದ ಸಿಹಿ ಊಟ ಇದ್ದೇ ಇತ್ತು. ನಾವು ಸಾವಕಾಶವಾಗಿ ಊಟ ಮಾಡತೊಡಗಿದೆವು. ದಾದಾಸಾಹೇಬರಿಗೆ ಗಡಿಬಿಡಿ. ಹೊರಗೆಹೋಗಿ ನೋಡುವುದು ಒಳಗೆ ಬಂದು ಊಟವಾಯಿತೇ ? ಎಂದು ಕೇಳುವುದು ಮಾಡಹತ್ತಿದರು. ಅವರ ತಾಯಿ "ಸಾವಕಾಶವಾಗಿ ಮಾಡಲಿ ಹೀಗೇಕೆ ಗಡಿಬಿಡಿ ಮಾಡುತ್ತೀ" ಎಂದರು. "ಊರಲ್ಲಿ ಪೋಲೀಸರ ಗಡಿಬಿಡಿ ನಡೆದಿದೆ ಆದಷ್ಟು ಬೇಗ ಇಲ್ಲಿಂದ ಹೋಗುವದು ಒಳ್ಳೇದು" ಎಂದರು ದಾದಾಸಾಹೇಬರು. ಇದನ್ನೆಲ್ಲ ಹೇಳುವ ಕಾರಣವಿಷ್ಟೇ, ಆಗಿನ ಕಾಲದಲ್ಲಿ ಆಪ್ತರಿರಲಿ, ಮಿತ್ರರಿರಲಿ, ಯಾರೇ ಆಗಲಿ ನಮ್ಮನ್ನು ತಮ್ಮ ಮನೆಯೊಳಗೆ ಬರಮಾಡಿಕೊಳ್ಳುವದೆಂದರೆ ಒಂದು ದೊಡ್ಡ ಗಂಡಾಂ-ತರವೆಂದು ತಿಳಿಯುತ್ತಿದ್ದರು.

ಕಾರ್ಯಕರ್ತರ ಕೌಟುಂಬಿಕ ಪರಿಸ್ಥಿತಿ

ಇದುವರೆಗೆ ಆಂದೋಲನದ ಕಾಲದಲ್ಲಿ ಕಾರ್ಯಕರ್ತರು ಯಾವ ರೀತಿ ಕಷ್ಟ ಸಹಿಸಬೇಕಾಗುತ್ತಿತ್ತು— ಯಾವ ರೀತಿ ಕೆಲಸ ಮಾಡಬೇಕಾಗುತ್ತಿತ್ತು ಎಂಬುದರ ಚಿತ್ರ ದರ್ಶನ ಮಾಡಲಾಯಿತು. ಆದರೆ ಆಗಿನ ಅವರ ಕೌಟುಂಬಿಕ ಪರಿಸ್ಥಿತಿಯ ಬಗೆಗೆ ಒಂದೆರಡು ಮಾತು ಹೇಳದೆ ಹೋದರೆ ನಿಜವಾದ ಆಂದೋಲನ ಕಾಲದ ಚಿತ್ರ ವಾಚಕರಿಗೆ ಪೂರ್ಣವಾಗಿ ಅರ್ಥವಾಗದು. ಅದಕ್ಕಾಗಿ ಕಾರ್ಯಕರ್ತರ ಕೌಟುಂಬಿಕ ಪರಿಸ್ಥಿತಿಯ ಬಗೆಗೂ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲಾಗಿದೆ. ಇಲ್ಲಿ ನನ್ನ ಕೌಟುಂಬಿಕ ಪರಿಸ್ಥಿತಿ ಯನ್ನೇ ಚಿತ್ರಿಸಿದ್ದರೂ ಅದು ಹೆಂಡಿರು ಮಕ್ಕಳ ಕಷ್ಟ–ನಷ್ಟಗಳನ್ನು ಗಣಿಸದೆ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ತಮ್ಮ ಸಾರಸರ್ವಸ್ವವನ್ನು ಧಾರೆಯೆರೆದು ಹೋರಾಡಿ ದರೋ,ಅಂಥವರ ಕೌಟುಂಬಿಕ ಪರಿಸ್ಥಿತಿಯು ಆ ಕಾಲಕ್ಕೆ ಎಷ್ಟು ಕಷ್ಟಮಯವಾಗಿತ್ತೆಂಬು ದರ ಪ್ರತೀಕವಾಗಿದೆ. ಅಂತಹ ಕಾರ್ಯಕರ್ತರ ಕೌಟುಂಬಿಕ ಪರಿಸ್ಥಿತಿ ಆಗಿನಕಾಲದಲ್ಲಿ ಮಾತ್ರ ಕಷ್ಟಮಯವಾಗಿತ್ತೆಂದಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಅನೇಕ ಕಾರ್ಯ ಕರ್ತರು ಇಂದಿಗೂ ಸಹ ಅನ್ನಾನ್ನಗತಿಕರಾಗಿದ್ದಾರೆ. ಆದರೆ ಅವರ ಕಡೆಗೆ ನೋಡು-ವವರಾರು ? ಇದು ಸ್ವರಾಜ್ಯವಲ್ಲವೆ ! ಇದೇ ನಮ್ಮ ಸ್ವರಾಜ್ಯವೆ ? ಎಂದು ಅವರು ಉದ್ಗಾರತೆಗೆದರೆ ಆಶ್ಚರ್ಯವೇನು ?

೧೯೪೨ ರ ಆಂದೋಲನ ಪ್ರಾರಂಭವಾಗುವ ಕಾಲಕ್ಕೆ ಔಷಧೋಪಚಾರ ಕ್ಕೆಂದು ನನ್ನ ಪತ್ನಿ, ನನ್ನ ತಾಯಿ, ಮಗಳು ಚಿ. ಪ್ರೇಮಾ ಇವರನ್ನು ಹುಬ್ಬಳ್ಳಿಯಲ್ಲಿಟ್ಟಿ ದ್ದೆನೆಂದು ಹಿಂದೆಯೆ ಹೇಳಿದೆ. ನನ್ನ ಮಗ ಅಚ್ಯುತ ಆಗ ಬೆಳಗಾಂವಿಯ ಮಾಡೆಲ್ ಹೈಸ್ಕೂಲಿನಲ್ಲಿ ಕಲಿಯಲಿಕ್ಕೆ ಇದ್ದ. ಆತನಿಗೆ ಅಲ್ಲಿ ವಾರದ ಮನೆಗಳನ್ನು ಹಚ್ಚಿ ಇಡ ಲಾಗಿತ್ತು. ನಾನು ಭೂಗತನಾದ ಮೇಲೆ ಪೋಲೀಸರು ನನ್ನನ್ನು ಹಿಡಿಯಬೇಕೆಂದು

ವಿವಿಧ ಪ್ರಯತ್ನ ನಡೆಯಿಸಿದರು. ನಮ್ಮ ಮನೆಯವರನ್ನೆಲ್ಲ ಹಿಡಿದು ಅವರಿಗೆ ತೊಂದರೆ ಕೊಟ್ಟರೆ ನಾನೇ ಹೊರಬೀಳುತ್ತೇನಲ್ಲಾ— ಎಂದು, ಮೂಗು ಹಿಡಿದರೆ ಬಾಯಿ ತಾನೇ ತೆಗೆಯುತ್ತದಲ್ಲಾ—ಹಾಗೆ. ನನ್ನ ಪತ್ನಿ ಹುಬ್ಬಳ್ಳಿಯಲ್ಲಿದ್ದುದು ಅವರಿಗೆ ಎಷ್ಟೋ ದಿವಸ ಗೊತ್ತಾಗಲಿಲ್ಲ. ಅಚ್ಯುತನು ಮಾಡೆಲ್ ಹೈಸ್ಕೂಲಿನಲ್ಲಿರುವದು ಮಾತ್ರ ಗೊತ್ತಾಯಿತು. ಆತನಿಗೆ ಪೋಲೀಸರು ಮೇಲಿಂದ ಮೇಲೆ ತೊಂದರೆ ಕೊಡತೊಡಗಿದರು. ನಾನು ಅವನಿಗೆ ಶಾಲೆಬಿಟ್ಟು ಹುಬ್ಬಳ್ಳಿಗೆ ಹೋಗಲು ಹೇಳಿದೆ. ಆ ಪ್ರಕಾರ ಆತ ಶಾಲೆಬಿಟ್ಟು ಹುಬ್ಬಳ್ಳಿಗೆ ಹೋದ. ಒಂದು ವರ್ಷ ಶಾಲೆ-ಕಾಲೇಜುಗಳನ್ನು ಬಹಿಷ್ಕರಿಸಬೇಕು ಎಂದು ಕಾಂಗ್ರೆಸ ಆದೇಶ ಇದ್ದುದರಿಂದ ಆತ ಹುಬ್ಬಳ್ಳಿಯಲ್ಲಿಯೂ ಶಾಲೆಗೆ ಹೆಸರು ಹಚ್ಚಲಿಲ್ಲ. ಆವರ್ಷ ಹಾಗೆಯೇ ಹೋಯಿತು. ಹುಬ್ಬಳ್ಳಿಯಲ್ಲಿ ನಾಲ್ಕಾರು ತಿಂಗಳು ಇದ್ದ ಮೇಲೆ ನಮ್ಮ ಮನೆಯವರು ಇದ್ದ ಸ್ಥಳ ಪೋಲೀಸರಿಗೆ ಗೊತ್ತಾಯಿತು. ಅವರು ಮೇಲಿಂದ ಮೇಲೆ ಬಂದು ನಾನು ಎಲ್ಲಿದ್ದೇನೆ ಹೇಳಿರಿ; ಇಲ್ಲದಿದ್ದರೆ ನಿಮ್ಮನ್ನೆಲ್ಲ ಹಿಡಿದುಕೊಂಡು ಹೋಗುತ್ತೇವೆ. ಎಂದು ಬೆದರಿಕೆ ಹಾಕತೊಡಗಿದರು. ಮನೆಯಲ್ಲಿ ಗಂಡಸರು ಯಾರೂ ಇರಲಿಲ್ಲ. ಕೇವಲ ಹುಡುಗರು, ಹೆಣ್ಣು ಮಕ್ಕಳು. ನಮ್ಮ ಅಣ್ಣ-ತಮ್ಮಂದಿರು ಕರ್ಜಗಿಯಲ್ಲಿದ್ದರು. ಅವರು ಅಪ್ಪಟ ಸನಾತನಿಗಳು. ಕರ್ಜಗಿ ಬ್ರಾಹ್ಮಣರ ಬಗೆಗೆ ನಮ್ಮ ಮಿತ್ರನೊಬ್ಬ ಮೇಲೀದ ಮೇಲೆ ನನಗೆ ವಿನೋದ ಮಾಡುತ್ತಿದ್ದ: "ಇಂಗ್ಲಿಷರೂ, ಕರ್ಜಗಿ ಬ್ರಾಹ್ಮಣರೂ ಒಂದೇ ಜಾತಿಯವರು ನೋಡು!" ಎಂದು. ನನಗೆ ಎಷ್ಟೋ ದಿವಸ ಇದು ಅರ್ಥವಾಗಿರಲಿಲ್ಲ. ಒಂದು ದಿವಸ ನಾನು ಆತನನ್ನು "ಇಂಗ್ಲಿಷರಿಗೂ ಕರ್ಜಗಿ ಬ್ರಾಹ್ಮಣರಿಗೂ ಏನು ಸಂಬಂಧ?" ಎಂದು ವಿಚಾರಿಸಿದೆ. ಆತ ನಗುತ್ತ ಹೇಳಿದ "ಇಂಗ್ಲಿಷರಲ್ಲಿ ಒಂದು ರೂಢಿ ಇದೆ ಅಂತೆ! ಇಬ್ಬರು ಅಪರಿಚಿತರು ಒಂದೇ ಸ್ಥಳದಲ್ಲಿ ಒಂದು ವರ್ಷ ಕಾಲವಿದ್ದರೂ ಒಬ್ಬರಿಗೊಬ್ಬರು ಮಾತನಾಡುವದಿಲ್ಲವಂತೆ! ಮೂರನೆಯವನು ಬಂದು ಅವರ ಪರಿಚಯ ಮಾಡಿಕೊಟ್ಟಾಗಲೇ ಅವರ ಮಾತಿಗೆ ಪ್ರಾರಂಭವಂತೆ! ಅವರಲ್ಲಿ ಯಾರಾದರೂ ಸಾಯುವ ಪ್ರಸಂಗ ಬಂದರೂ "ಅಯ್ಯೋ ಪರಿಚಯ ಮಾಡಿಕೊಡುವವರು ಯಾರೂ ಇಲ್ಲವಲ್ಲಾ! ಯಾರಾದರೂ ಪರಿಚಯ ಮಾಡಿಕೊಟ್ಟಿದ್ದರೆ ನಾನು ಆತನಿಗೆ ಸಹಾಯ ಮಾಡಬಹುದಿತ್ತಲ್ಲಾ" ಎಂದು ಅನ್ನುತ್ತಾರಂತೆ! ಹಾಗೆಯೇ ನಿಮ್ಮ ಕರ್ಜಗಿಯ ಬ್ರಾಹ್ಮಣರು ನದಿಯ ದಂಡೆಯ ಮೇಲೆ ಸ್ನಾನಮಾಡಿ ನಿಂತಾಗ ನದಿಯಲ್ಲಿ ಯಾರಾದರೂ ಮುಳುಗುತ್ತಿದ್ದರೆ "ಅಯ್ಯೋ! ಮೈಲಿಗೆ ಆಗುತ್ತದಲ್ಲ! ಇಲ್ಲದಿದ್ದರೆ ಆತನನ್ನು ಈಸಿ ತೆಗೆಯುತ್ತಿದ್ದೆನಲ್ಲ!" ಎಂದು ಅನ್ನುತ್ತಾರೆ ಎಂದ. ಕರ್ಜಗಿ ಬ್ರಾಹ್ಮಣರೆಂದರೆ ಇಷ್ಟು ಮಡಿವಂತರು. ಅಪ್ಪಟ ಸನಾತನಿಗಳು. ನಾನು ನನ್ನ ಪತ್ನಿ ಇಂತಹ ಅಪ್ಪಟ ಸನಾತನಿಗಳ ಮನೆಯಲ್ಲಿಯೇ ಹುಟ್ಟಿದವರು. ನಮ್ಮ ಅಣ್ಣ-ತಮ್ಮಂದಿರಿಗೆ—ಆಪ್ತೇಷ್ಟರಿಗೆ—ನಮ್ಮ ಮನೆಗೆ ಬಂದು ಹೋಗಿ ಮಾಡಿದರೆ 'ಪೋಲೀಸರು ತಮ್ಮನ್ನು ಎಲ್ಲಿ ಹಿಡಿಯುತ್ತಾರೆಯೋ ತಾವು ಜೇಲಿಗೆ ಎಲ್ಲಿ ಹೋಗಬೇಕಾಗುತ್ತದೆಯೊ—ಅಪರೀಪ ತಮ್ಮ ಧರ್ಮಕ್ಕೆ ಎಲ್ಲಿ ಚ್ಯುತಿ ಬರುತ್ತ

ದೆಯೋ' ಎಂಬ ಭಯವಾದುದರಿಂದ ಯಾರೂ ಬರುತ್ತಿರಲಿಲ್ಲ. ಆದರೂ ನಮ್ಮ ಎರಡನೆಯ ಅಣ್ಣ ಶ್ರೀ ತಮ್ಮಣ್ಣಾಚಾರ್ಯರಿಗೆ—ಧರ್ಮರಾಜನಿಗೆ ಒಂದು ಕ್ಷಣ ಕಾಲವಾದರೂ ನರಕದ ದರ್ಶನವಾದಂತೆ—ಕೆಲವೊಂದು ದಿವಸಗಳಾದರೂ ಜೇಲನ್ನು ಅನುಭವಿಸಬೇಕಾಯಿತು. ಆ ವಿಷಯ ಮುಂದೆ ಬರುತ್ತದೆ. ನನ್ನ ಪತ್ನಿಯ ತಂದೆ–ತಾಯಿ ಇಬ್ಬರೂ ಚಿಕ್ಕಂದಿನಲ್ಲಿ ತೀರಿಕೊಂಡಿದ್ದರು, ನಮ್ಮ ತಾಯಿಯೇ ಆಕೆಯ ಪಾಲನೆ ಪೋಷಣೆ ಮಾಡಿದ್ದಳು. ಆದುದರಿಂದ ಇಂತಹ ಕಾಲದಲ್ಲಿ ಆಕೆಯೊಬ್ಬಳನ್ನ ಬಿಟ್ಟಿರುವದು ಹೇಗೆ ? ಎಂದು ನಮ್ಮ ತಾಯಿ ಆಕೆಯ ಜೊತೆಗೇ ಬಂದು ಇರತೊಡಗಿದ್ದಳು. ಹುಬ್ಬಳ್ಳಿಯಲ್ಲಿ ಪೋಲೀಸರ ತೊಂದರೆಯಾಗಹತ್ತಿದ ಮೇಲೆ ಧಾರವಾಡಕ್ಕೆ ಹೋಗಿ ಇರತೊಡಗಿದರು. ನಮ್ಮ ಹುಡುಗ ಕರ್ನಾಟಕ ಹೈಸ್ಕೂಲಿನಲ್ಲಿ ಹೆಸರನ್ನು ಹಚ್ಚಿದ. ಸುಮಾರು ಒಂದು ವರ್ಷ ಇದ್ದಿರಬಹುದು. ನಾನು ಇನ್ನೂ ಪೋಲೀಸರ ಕೈಗೆ ಸಿಕ್ಕಿರಲಿಲ್ಲ. ಆದುದರಿಂದ ನಮ್ಮ ಮನೆಯವರ ಶೋಧ ನಡೆದೇ ಇತ್ತು. ಅಂತು ಧಾರವಾಡದಲ್ಲಿದ್ದುದನ್ನು ಪೋಲೀಸರು ಹೇಗೋ ಗೊತ್ತುಮಾಡಿ ಅಲ್ಲಿ ಮತ್ತೆ ತೊಂದರೆ ಕೊಡತೊಡಗಿದರು. ಆದರಿಂದ ನಮ್ಮ ಮನೆಯವರು ಧಾರವಾಡವನ್ನು ಬಿಟ್ಟು ಮತ್ತೆ ಹುಬ್ಬಳ್ಳಿಗೆ ಬರಬೇಕಾಯಿತು. ಹುಬ್ಬಳ್ಳಿಗೆ ಬಂದನಂತರ ನನ್ನ ಮಗ ಅಚ್ಯುತ ಸಿಟಿ ಹೈಸ್ಕೂಲಿನಲ್ಲಿ ಹೆಸರು ಹಚ್ಚಿ, ಅಭ್ಯಾಸ ಮುಂದುವರಿಸಿದ. ಪೋಲೀಸರ ಕಾಟಕ್ಕಾಗಿ ಮನೆಯವರೂ ಸಹ ಭೂಗತರಾಗಿ ಇರಬೇಕಾಯಿತು.

ಆರ್ಥಿಕ ಪರಿಸ್ಥಿತಿ

ಆಗ ನನಗೆ ಗಾಂಧಿ ಸೇವಾಸಂಘದಿಂದ ತಿಂಗಳೊಂದಕ್ಕೆ ೪೦ ರೂಪಾಯಿ ಮಾತ್ರ ಸಿಗುತ್ತಿತ್ತು. ಆಂದೋಲನ ಪ್ರಾರಂಭವಾದ ಮೇಲೆ ಇದೂ ಸಹ ನಿಂತು ಹೋಯಿತು. ಯಾರಾದರೂ ಮಿತ್ರರಿಂದ ಬೇಡಿ ಇಸಿದುಕೊಂಡು ಅವರಿಗೆ ಕಳಿಸಬೇಕಾಗುತ್ತಿತ್ತು. ಅದು ಹೊತ್ತಿಗೆ ಸರಿಯಾಗಿ ಮುಟ್ಟುತ್ತಿರಲಿಲ್ಲ. ಅಲ್ಲದೆ ಧಾರವಾಡ ಹುಬ್ಬಳ್ಳಿಯಂಥ ಊರಲ್ಲಿ ಮನೆ ಬಾಡಿಗೆ ಕೊಟ್ಟು ತಾಯಿ, ಪತ್ನಿ ಹಾಗೂ ಮೂರುಜನ ಮಕ್ಕಳು ಸಂಸಾರ ಮಾಡುವದು ಕಷ್ಟದಾಯಕವಿತ್ತು. ಅಷ್ಟರಲ್ಲಿಯೇ ನಮ್ಮ ತಾಯಿ ಹಾಗೂ ಪತ್ನಿ ಹೇಗೋ ಸಂಸಾರ ಸಾಗಿಸಿಕೊಂಡು ಹೋಗುತ್ತಿದ್ದರು. ಎಷ್ಟೋ ದಿವಸ ಒಂದೇ ಹೊತ್ತು ಊಟ ಮಾಡಿ ಇರುತ್ತಿದ್ದರಂತೆ! ನನ್ನ ಹೆಂಡತಿ ಅತ್ಯಂತ ಅಭಿಮಾನಿ. ಎಷ್ಟೇ ಕಷ್ಟ ಬಂದರೂ ತನ್ನ ಕಷ್ಟವನ್ನು ಎರಡನೆಯವರಾರಿಗೂ ಹೇಳುತ್ತಿರಲಿಲ್ಲ; ಯಾರನ್ನೂ ಬೇಡುತ್ತಿರಲಿಲ್ಲ. ಆಕೆ ಉಡುವ ಖಾದಿ ಸೀರೆ ಶೀರ ಹರಿದಿದ್ದವು. ಖಾದಿ ಕೇಂದ್ರಗಳೆಲ್ಲ ಬಂದಾಗಿದ್ದವು. ಒಂದೆರಡು ನಡೆಯುತ್ತಿದ್ದರೂ ಅಲ್ಲಿ ಸೀರೆ ತಯಾರಾಗುತ್ತಿರಲಿಲ್ಲ. ಆದುದರಿಂದ ಖಾದಿ ಸೀರೆ ಸಿಗುತ್ತಿರಲಿಲ್ಲ. ಸಿಕ್ಕರೂ ಅವುಗಳನ್ನು ಕೊಳ್ಳಲು ನನ್ನ ಹತ್ತಿರ ಹಣ ಇರಲಿಲ್ಲ. ಆದುದರಿಂದ "ಈಗ ಸಧ್ಯ ಗಿರಣಿ ಸೀರೆಗಳನ್ನು ಉಟ್ಟುಕೋ" ಎಂದು ನಾನು ಪತ್ರ ಬರೆದೆ. ಆದರೆ ಆಕೆ "ಒಮ್ಮೆ ನಾನು ಖಾದಿ ಸೀರೆ ಉಡತೊಡಗಿ

ದ್ದೇನೆ, ಅವನ್ನು ಬಿಟ್ಟು ಏನನ್ನೂ ಉಡುವದಿಲ್ಲ. ನಿಮಗೆ ಹಣದ ಅನುಕೂಲತೆ ಯಾವಾಗ ಆಗುತ್ತದೆಯೋ ಆಗ ಕೊಡಿಸಿರಿ!" ಎಂದು ಹೇಳಿಕಳಿಸಿದ್ದಳು. ಆಂದೋಲನ ಮುಗಿದು ನಾನು ತಿರುಗಿ ಹೋಗುವವರೆಗೆ ಹರಿದ ಸೀರೆಗಳನ್ನೇ ತೇಪೆ ಹಚ್ಚಿ ಆಕೆ ಉಡುತ್ತಿದ್ದಳು. ನಮ್ಮ ಮನೆಯವರು ಧಾರವಾಡದಲ್ಲಿದ್ದಾಗ ನನ್ನ ಚಿಕ್ಕಮಗುವೊಂದು ತೀರಿಕೊಂಡಿತು. ಆದರೆ ಅದರ ಅಂತ್ಯಕ್ರಿಯೆಗೂ ಬಹಳ ಹೊತ್ತಿನ ವರೆಗೆ ಯಾರೂ ಬರಲಿಲ್ಲವಂತೆ! ನಮ್ಮ ಮನೆಗೆ ಬಂದರೆ ಪೋಲೀಸರು ಎಲ್ಲಿ ಏನು ಮಾಡುತ್ತಾರೆಯೋ ಎಂಬ ಭೀತಿ ಜನರಿಗೆ! ಇದು ಆಗಿನ ಭಯಾನಕ ಪರಿಸ್ಥಿತಿಯ ಭೀಕರ ಚಿತ್ರ!

ಫೋಟೋ ಪ್ರಕರಣ

ಪೋಲೀಸರು ನಮ್ಮನ್ನು ಹಿಡಿಯಬೇಕೆಂದು ನಮ್ಮ ಬೆನ್ನು ಹತ್ತಿದಂತೆ ನಾವೂ ಅವರ ಕಣ್ಣು ತಪ್ಪಿಸಿ ಮೇಲಿಂದ ಮೇಲೆ ಕಾರ್ಯಕ್ರಮ ಮಾಡಿ ಅವರನ್ನು ಗೊಂದಲದಲ್ಲಿ ಕೆಡವುತ್ತಿದ್ದೆವು. ಈ ಕಾಲದಲ್ಲಿ ಬೆಳಗಾಂವಿಗೆ ಮುಂಬೈ ಗವ್ಹರ್ನರ ಬಂದಿದ್ದರು. "ಇಡೀ ಪ್ರಾಂತದಲ್ಲಿ ಆಂದೋಲನ ನಿಂತಿರುವಾಗ ಬೆಳಗಾಂವ ಜಿಲ್ಲೆಯಲ್ಲಿ ಇನ್ನೂ ಆಂದೋಲನ ನಿಂತಿಲ್ಲ. ಇದನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಉಗ್ರಕ್ರಮ ಕೈಕೊಳ್ಳಲಾಗುವದು." ಎಂದು ಅಧಿಕಾರಿಗಳ ಸಭೆಯಲ್ಲಿ ಅವರು ಮಾತಾಡಿದ್ದರಂತೆ! ಆದುದರಿಂದ ಪೋಲೀಸರು ನಮ್ಮನ್ನು ಹಿಡಿಯಬೇಕೆಂದು ಹೆಚ್ಚು ಆಸ್ಥೆಯಿಂದ ಕೆಲಸ ನಡೆಸಿದರು. ನನ್ನ ಶೋಧಕ್ಕಾಗಿ ನಮ್ಮ ಮನೆಯವರಿಗೆ ತೊಂದರೆ ಕೊಡುತ್ತಿದ್ದರೆಂದು ಹಿಂದೆ ಹೇಳಿದ್ದೇನೆ. ಆದರೆ ಅದರಿಂದ ಅವರಿಗೆ ವಿಶೇಷ ಪ್ರಯೋಜನವಾಗಲಿಲ್ಲ. ಪೋಲೀಸರಿಗೆ ನನ್ನ ಪರಿಚಯವಿರಲಿಲ್ಲ. ನನ್ನ ಹೆಸರನ್ನು ಕೇಳಿದ್ದರೇ ಹೊರತು ಅವರು ನನ್ನನ್ನು ಪ್ರತ್ಯಕ್ಷವಾಗಿ ನೋಡಿರಲಿಲ್ಲ. ಏಕೆಂದರೆ ಪ್ಲಾಟಫಾರ್ಮಿನ ಮೇಲೆ ಹೋಗಿ ನಾನು ಎಂದೂ ಭಾಷಣ ಮಾಡುತ್ತಿರಲಿಲ್ಲ. ಆದುದರಿಂದ ನನ್ನ ಫೋಟೋ ಒಂದನ್ನು ತೆಗೆದುಕೊಂಡು ಅದರ ಪ್ರತಿಯನ್ನು ಎಲ್ಲರಿಗೂ ಕೊಡಬೇಕೆಂದು ವಿಚಾರ ಮಾಡಿದರು. ನನ್ನ ಫೋಟೋದ ಸಲುವಾಗಿ ಅವರು ಅನೇಕ ಕಡೆಗೆ ಶೋಧ ನಡೆಸಿದ್ದರು. ಆದರೆ ಅದು ಅವರಿಗೆ ಸಿಗಲಿಲ್ಲ. ಸಿಗುವದಾದರೂ ಹೇಗೆ! ನನಗೆ ಫೋಟೋ ತೆಗೆಸಿಕೊಳ್ಳುವ ಹುಚ್ಚು ಇರಲಿಲ್ಲ. ಶ್ರೀ ಮುರಾರಜಿ ದೇಸಾಯಿಯವರು ಮುಂಬೈ ಪ್ರಾಂತದ ಮಂತ್ರಿಗಳಿದ್ದಾಗ ಹುದಲಿಗೆ ಬಂದಿದ್ದರು. ಆಗ ಅಲ್ಲಿಯ ಸೊಸಾಯಿಟಿಯವರು ಒಂದು ಗ್ರುಪ್ ಫೋಟೋ ತೆಗೆಸಿದ್ದರು. ಅದರಲ್ಲಿ ನನ್ನ ಫೋಟೋ ಇತ್ತು. ಅದರ ಪ್ರತಿಯೊಂದು ಶ್ರೀ ಆರ್. ವ್ಹಿ. ದೇಶಪಾಂಡೆಯವರ ಮನೆಯಲ್ಲಿತ್ತು. ಅದು ಪೋಲೀಸರ ಕೈಗೆ ಸಿಕ್ಕಿತು. ಆದರೂ ಫೋಟೋ ಅವರ ಮನೆಯಿಂದ ಪೋಲೀಸರ ಕೈಸೇರಿತಲ್ಲ! ಇದು ಜನರ ಸಂಶಯಕ್ಕೆ ಆಸ್ಪದವಾಯಿತು. ಶ್ರೀ ಆರ್. ವ್ಹಿ. ದೇಶಪಾಂಡೆಯವರಿಗೂ ಪೋಲೀಸರಿಗೂ ವಿಶೇಷ ಸ್ನೇಹವಿದ್ದುದರಿಂದ ಅವರೇ ಅದನ್ನು (ಫೋಟೋ) ಪೋಲೀಸರಿಗೆ ಕೊಟ್ಟರೆಂದು ಊರಲ್ಲೆಲ್ಲ ಸುದ್ದಿಯಾಯಿತು.

ಹಗೆಯೊಳಗಿನ ಜೋಳ ಬಡವರ ಪಾಲು

ಆಗಿನ ವಾತಾವರಣವೇ ವಿಚಿತ್ರವಾಗಿತ್ತು. ಸರಕಾರದ ಪಕ್ಷ ಹಿಡಿದರೆ ಜನರ ವಿರೋಧ ಕಟ್ಟಿಕೊಳ್ಳಬೇಕಾಗುತ್ತಿತ್ತು. ಜನರ ಪಕ್ಷ ಹಿಡಿದರೆ ಸರಕಾರದ ವಿರೋಧ ಕಟ್ಟಿಕೊಳ್ಳಬೇಕಾಗುತ್ತಿತ್ತು. ಆ ಕಾಲದಲ್ಲಿ ಜನತೆ ಆಂದೋಲನಕ್ಕೆ ಅನುಕೂಲವಾಗಿಯೇ ಇತ್ತು. ಆದುದರಿಂದ ಯಾರಾದರೂ ಚಳುವಳಿ ಅಥವಾ ಚಳುವಳಿಗಾರರ ವಿರುದ್ಧ–ಪ್ರತ್ಯಕ್ಷ ಏನೂ ಮಾಡದೆ ಸ್ವಲ್ಪ ಸಂಶಯ ಬರುವಂತೆ ವರ್ತಿಸಿದರೂ ಜನತೆ ಪ್ರಕ್ಷುಬ್ಧಗೊಳ್ಳುತ್ತಿತ್ತು. ಶ್ರೀ ಆರ್. ವ್ಹಿ. ದೇಶಪಾಂಡೆಯವರು ಹುದಲಿ ಊರಲ್ಲಿ ಒಬ್ಬ ಪ್ರತಿಷ್ಠಿತ ವ್ಯಕ್ತಿ. ಅಂಥವರ ಬಗೆಗೆ ಸಹ ಈ ಸುದ್ದಿ ಹುಟ್ಟಿದ ಕೂಡಲೆ ಊರಲ್ಲಿಯ ಕೆಲವು ಜನರು ಕೂಡಿ ಅವರ ಹಗೆಯನ್ನು ತೆಗೆದು, ಹಗೆಯಲ್ಲಿಯ ಎಲ್ಲ ಜೋಳವನ್ನು ಬಡವರಿಗೆ ಹಂಚಿದರಂತೆ ! ಈ ಕೆಲಸಕ್ಕೂ ಭೂಗತರಿಗೂ ಯಾವ ಸಂಬಂಧವೂ ಇರಲಿಲ್ಲ. ಅವರಿಗೆ ಗೊತ್ತೂ ಕೂಡ ಇರಲಿಲ್ಲ. ನನಗೆ ಈ ವಿಷಯ ಮೊದಲೇ ಗೊತ್ತಾಗಿದ್ದರೆ ನಾನು ಇದನ್ನು ಮಾಡಗೊಡುತ್ತಿರಲಿಲ್ಲ.

ಸದುದ್ದೇಶಕ್ಕಾಗಿ ದುರ್ವ್ಯಾಪಾರ

ಈ ಸಂದರ್ಭದಲ್ಲಿ ಇನ್ನೊಂದು ವಿಚಿತ್ರ ಸಂಗತಿಯನ್ನು ಹೇಳಬಯಸುತ್ತೇನೆ. ಆಂದೋಲನದ ಕಾಲದಲ್ಲಿ ಗುಂಪಿನ ನಾಯಕರ ಮನಸ್ಸಿನ ತೂಕತಪ್ಪಿ ಇತರರನ್ನು ಅಂಕಿತದಲ್ಲಿಟ್ಟುಕೊಳ್ಳುವ ಶಕ್ತಿ ಇಲ್ಲದಿದ್ದರೆ ಎಂಥೆಂತಹ ಅನಾಹುತಗಳಾಗುತ್ತಿದ್ದವೆಂಬುದು ಇದರಿಂದ ಗೊತ್ತಾಗುತ್ತದೆ. ನಾವು ಆಂದೋಲನದ ಕಾಲದಲ್ಲಿ ಬೇಡರ ಮಧ್ಯದಲ್ಲಿ ವಾಸಮಾಡಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದ ಸಂಗತಿ ಹಿಂದೆ ಬಂದಿದೆ. ಬೇಡರಿಗೆ ನಮ್ಮ ಬಗೆಗೆ ಗೌರವ–ಆದರಗಳಿದ್ದುದರ ಉಲ್ಲೇಖವೂ ಹಿಂದೆ ಬಂದಿದೆ. ನಾವು ಪಡುತ್ತಿದ್ದ ಕಷ್ಟವನ್ನು ನೋಡಿ, ಬೇಡರಿಗೆ ನಮ್ಮ ಬಗೆಗೆ ಕನಿಕರವುಂಟಾಯಿತು. ನಾವು ಆರ್ಥಿಕ ತೊಂದರೆಯಲ್ಲಿರಬೇಕೆಂದೂ ಅದಕ್ಕಾಗಿ ನಮಗೆ ಏನಾದರೂ ಸಹಾಯ ಮಾಡಬೇಕೆಂದೂ ಅವರ ಮನಸ್ಸಿನಲ್ಲಿ ಬಂದಿತು. ವಿಧ್ವಂಸಕ ಕೃತ್ಯಗಳಲ್ಲಿ ನಾವು ಅವರನ್ನು ಸಾಮೂಹಿಕವಾಗಿ ಕರೆದುಕೊಳ್ಳುತ್ತಿದ್ದಿಲ್ಲ. ಕಾರ್ಯಕ್ರಮಕ್ಕೆ ಹೋಗುವಾಗ ೩–೪ ಜನ ನಮ್ಮ ಜೊತೆಗೆ ಬರುತ್ತಿದ್ದರು. ಅವರು ನಮ್ಮ ಅಂಕಿತದಲ್ಲಿ ಉಳಿಯಲಿಕ್ಕಿಲ್ಲವೆಂಬ ವಿಚಾರದಿಂದಲೇ ನಾವು ಅವರನ್ನು ಆದಷ್ಟು ಈ ಕೆಲಸದಿಂದ ದೂರ ಇಡುತ್ತಿದ್ದೆವು. ಆದರೂ ಅವರು ಸದುದ್ದೇಶಪೂರ್ವಕವಾಗಿ ನಮಗೆ ಏನಾದರೂ ಆರ್ಥಿಕ ಸಹಾಯ ಮಾಡಬೇಕೆಂದು ವಿಚಾರ ಮಾಡಿದರು. ಆರ್ಥಿಕ ಸಹಾಯ ಮಾಡಲು ಅವರಲ್ಲಿ ಹಣವೆಲ್ಲಿ? ಯಾರದಾದರೂ ಮನೆಯಲ್ಲಿ ಕಳವು ಅಥವಾ ದರೋಡೆ ಮಾಡಿ ನಮಗೆ ಸಹಾಯ ಮಾಡಬೇಕು ! ಅವರು ಇದೇ ವಿಚಾರ ಮಾಡಿ ಸುಳೇಭಾವಿ ಹಾಗೂ ಹುದಲಿ ಊರಲ್ಲಿ ಮೂರು ನಾಲ್ಕು ಜನ ಶ್ರೀಮಂತರ ಮನೆಗಳಿಗೆ ದರೋಡೆ ಹಾಕಿ, ಬಂದ ಹಣವನ್ನು

ನಮಗೆ ಕೊಡಬೇಕೆಂದು ನಿಶ್ಚಯಿಸಿದ್ದರು. ಆಪ್ರಕಾರ ಒಂದು ದಿನ ಹುದಲಿಯ ಊರ ಅಗಸಿಯ ಹೊರಗೆ–ರಾತ್ರಿ ೧೨ ಗಂಟೆಗೆ ೫೦–೬೦ ಜನ ಬೇಡರು ಸೇರಿದರು.

ಅವರು ಇನ್ನು ತಮ್ಮ ಕೆಲಸ ಪ್ರಾರಂಭ ಮಾಡುವವರು. ಅಷ್ಟರಲ್ಲಿ ಅವರಲ್ಲಿ ಒಬ್ಬನಿಗೆ ಒಂದು ಸಂಶಯ ಬಂತು "ದರೋಡೆ ಹಾಕಿದ ಮೇಲೆ ಬಂದ ಹಣ ಹಾಗೂ ಒಡವೆಗಳನ್ನು ಯಾರ ಕೈಯಲ್ಲಿ ಕೊಡಬೇಕು" ಅವುಗಳನ್ನು ನಮಗೆ ಮುಟ್ಟಿಸುವದಕ್ಕೆ ಬೇಡರಲ್ಲಿಯೇ "ಒಬ್ಬರ ಕೈಯಲ್ಲಿ ಕೊಟ್ಟರೆ ಚಳವಳಿಗಾರರಿಗೆ ಅವು ಮುಟ್ಟುತ್ತವೆಯೋ ಇಲ್ಲವೋ" ಎಂಬ ವಿಶ್ವಾಸ ಅವರವರಿಗೇ ಇಲ್ಲದಾಯಿತು. "ಪಡವಿ ಮಾಸ್ತರರನ್ನು ಇಲ್ಲಿ ಕರೆಯಿಸಬೇಕು. ಊರ ಹೊರಗೆ ಅವರನ್ನು ಕೂಡ್ರಿಸಬೇಕು. ದರೋಡೆಯಿಂದ ಬಂದ ಹಣ ಹಾಗೂ ಒಡವೆಗಳನ್ನು ಎಲ್ಲರ ಸಮಕ್ಷಮ ಅವರ ಕೈಯಲ್ಲಿ ಕೊಟ್ಟು ನಾವು ತಿರುಗಿ ಹೊರಟು ಹೋಗಬೇಕು" ಎಂದು ಅವರಲ್ಲೊಬ್ಬ ಅಂದನು. ಅದು ಎಲ್ಲರಿಗೂ ಸಮ್ಮತ ವಾಯಿತು.

ಆ ಕಾಲಕ್ಕೆ ನಾವು ಕುಮುರಿ ಹತ್ತಿರದ ಗುಡ್ಡದೊಳಗೆ ಇರುತ್ತಿದ್ದುದು ಅವರಿಗೆ ಗೊತ್ತಿತ್ತು. ಬೇಡರಲ್ಲಿ ಇಬ್ಬರು ನನ್ನನ್ನು ಕರೆಯಲು ಬಂದರು. ಆದರೆ ನನಗೆ ನೇರ ವಾಗಿ ಇದನ್ನು ಹೇಳಲು ಅವರಿಗೆ ಧೈರ್ಯಸಾಲಲಿಲ್ಲ. ಅವರು ಬಿ. ಆರ್. ಪಾಟೀಲ, ಗಂಗಪ್ಪ ಮೋದಗಿ ಇವರ ಮುಂದೆ ಈ ವಿಚಾರವನ್ನು ಇಟ್ಟರು. ಅವರೂ ಕೂಡ ನನ್ನನ್ನು ವಿಚಾರಿಸದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಆಗ ಅವರು ಬೇಡರನ್ನು ನನ್ನ ಹತ್ತಿರವೇ ಕರೆದುಕೊಂಡು ಬಂದರು. ಬೇಡರು ತಮ್ಮ ವಿಚಾರವನ್ನೆಲ್ಲ ಹೇಳಿ ದರು. ಅದನ್ನು ಕೇಳಿ "ನನ್ನ ಮೈ ಜುಮ್ಮೆಂದಿತು." ನಾವು ಯಾವ ಉದ್ದೇಶಕ್ಕಾಗಿ ಹೊರಟಿದ್ದೇವೆ ಮತ್ತು ಇದು ಏನು ನಡೆದಿದೆ ? ಎಂದು ಎನಿಸಿತು. ನಾನು ಕೂಡಲೇ ಅವರಿಗೆ ಸ್ಪಷ್ಟವಾಗಿ ಹೇಳಿದೆ "ನಮಗೆ ಎಷ್ಟೇ ಕಷ್ಟ ಬಂದರೂ ಬರಲಿ ನಾವು ಅನುಭವಿ ಸಲು ಸಿದ್ಧರೇ ಇದ್ದೇವೆ. ಆದರೆ ಇಂತಹ ಕೆಲಸಕ್ಕೆ ಮಾತ್ರ ಕೈ ಹಾಕಬೇಡಿರಿ. ನೀವು ಇಂಥ ಕೆಲಸ ಮಾಡುವುದಾದರೆ ನಾನೇ ನಾಳೆ ಹೋಗಿ ಪೋಲೀಸರಲ್ಲಿ ಹಾಜರಾಗು ತ್ತೇನೆ" ಎಂದೆ. ಇದರ ಪರಿಣಾಮ ಅವರ ಮೇಲೆ ಆಗದೆ ಇರಲಿಲ್ಲ. "ಇದನ್ನು ನಿಮ್ಮ ಸಲುವಾಗಿಯೇ ಮಾಡಬೇಕೆಂದು ಯೋಚಿಸಿದ್ದೆವು. ನಿಮಗೇ ಬೇಡವಾದರೆ ನಾವೇಕೆ ಮಾಡೋಣ ?" ಎಂದರು. "ಹಾಗಾದರೆ ಬಂದಹಾಗೆ ತಿರುಗಿ ಹೋಗಿರಿ" ಎಂದೆ. ಅವರು ಸ್ವಲ್ಪ ವಿಚಾರ ಮಾಡಿ "ನೀವು ನಮ್ಮ ಜೊತೆಗೆ ಊರವರೆಗೆ ಬಂದು, ಕೂಡಿದ ನಮ್ಮ ಜನ ರಿಗೆ ನೀವೇ ಈ ಮಾತನ್ನು ಹೇಳಬೇಕು.ಅವರು ನಮ್ಮ ಮಾತನ್ನು ಕೇಳಲಿಕ್ಕಿಲ್ಲ" ಎಂದರು. ತಡಮಾಡಿದರೆ ಅನಾಹುತ ಸಂಭವಿಸಬಹುದೆಂದು ತಿಳಿದು ನಾನು ಕೂಡಲೆ ಹೊರಟೆ. ನನ್ನ ಜೊತೆಗೆ ಬಿ. ಆರ್. ಪಾಟೀಲ ಹಾಗೂ ಗಂಗಪ್ಪ ಇವರೂ ಬಂದರು. ಊರ ಹತ್ತಿರ ಬಂದಾಗ ಎಲ್ಲರೂ ಸ್ತಬ್ಧರಾಗಿ ಕುಳಿತಿದ್ದರು. ಇಂತಹ ಹೊತ್ತಿನಲ್ಲಿ ಅವರ ಶಿಸ್ತು ಮಿಲಿಟರಿ ಶಿಸ್ತು ಇದ್ದಂತೆ ಇರುತ್ತದೆ. ಒಬ್ಬನೇ ನಾಯಕ, ಅವನು ಹೇಳಿದಂತೆ

ಎಲ್ಲರೂ ನಡೆಯಬೇಕು, ಕೂಡು ಎಂದರೆ ಕೂಡಬೇಕು, ಏಳು ಎಂದರೆ ಏಳಬೇಕು, ಮಲಗು ಎಂದರೆ ಮಲಗಬೇಕು, ಎಲ್ಲವೂ ಶಿಳ್ಳಿನ ಸಂಜ್ಞೆಗಳ ಮೇಲೆ ನಡೆಯುತ್ತವೆ. ಇತ್ತೀಚೆಗೆ ಕೆಲವರು ಶೀಟಿಗಳನ್ನು ಉಪಯೋಗಿಸತೊಡಗಿದ್ದಾರೆ. ಹೆಚ್ಚು ಗಟ್ಟಿಯಾಗಿ ಮಾತಾಡುವಂತಿರಲಿಲ್ಲ. ೩ ೪ ಜನ ಅವರಲ್ಲಿಯ ಪ್ರಮುಖರನ್ನು ಕರೆದು ನನ್ನ ವಿಚಾರ ತಿಳಿಸಿದೆ. ಅವರು ಹೆಚ್ಚಾಗಿ ಚರ್ಚೆಮಾಡಲಿಲ್ಲ. ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ಸೀಟಿಗಳ ಸಂಜ್ಞೆಯಿಂದ ಬೇರೆಬೇರೆ ಗುಂಪು ಮಾಡಿಕೊಂಡು ಹೊರಟುಹೋದರು. ಮುಂದೆ ಅವರು ಈ ವಿಚಾರವನ್ನು ಬಿಟ್ಟುಬಿಟ್ಟರು. ಸೂಳೇಭಾವಿಗೂ ಹೋಗಲಿಲ್ಲ. ಈ ಹೊತ್ತಿನಲ್ಲಿ ನನ್ನ ಮನಸ್ಸಿನ ತೂಕತಪ್ಪಿ ನಾನು ನನ್ನ ಸಮ್ಮತಿ ಅಥವಾ ಮೂಕ ಸಮ್ಮತಿ ಸೂಚಿಸಿದ್ದರೂ ಭಯಂಕರ ಅನಾಹುತಗಳಾಗುತ್ತಿದ್ದುವು. ಇದುವರೆಗೆ ನಾವು ಮಾಡಿದ ಕಾರ್ಯ ನೀರಲ್ಲಿ ಹೋಮ ಮಾಡಿದಂತೆ ಆಗುತ್ತಿತ್ತು. ನಾವು ಇದುವರೆಗೆ ಹೊರಗಿದ್ದು ಕಾರ್ಯ ಮಾಡುತ್ತಿದ್ದುದು ಜನರ ಸಹಾಯದಿಂದ, ಸಹಾನುಭೂತಿಯಿಂದ, ಇವೆರಡೂ ಇಲ್ಲದಿದ್ದರೆ ನಾವು ಒಂದು ದಿವಸ ಸಹ ಹೊರಗಿರುವುದು ಸಾಧ್ಯವಿರಲಿಲ್ಲ. ಸಣ್ಣಮಕ್ಕಳು, ಹೆಣ್ಣುಮಕ್ಕಳು, ಗಂಡಸರು, ಪ್ರತಿಯೊಬ್ಬರೂ ನಮಗೆ ಸಹಾಯ ಮಾಡುತ್ತಿದ್ದರೆಂಬುದನ್ನು ಹಿಂದಿನ ಅನೇಕ ಪ್ರಕರಣಗಳಲ್ಲಿ ನೋಡಬಹುದು.

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ಪರಕೀಯರ ಆಳಿಕೆಯನ್ನು ನಿರ್ನಾಮ ಮಾಡುವದಕ್ಕಾಗಿ, ನಾವು ಹೋರಾಡುತ್ತಿದ್ದೇವೆ. ಅದಕ್ಕಾಗಿಯೇ ಇಷ್ಟೊಂದು ಕಷ್ಟಪಡುತ್ತಿದ್ದೇವೆ ಎಂಬ ತಿಳುವಳಿಕೆಯಿಂದಲೇ ಎಲ್ಲ ಜನರ ಸಹಾಯ-ಸಹಾನುಭೂತಿ ನಮಗೆ ದೊರಕಿದ್ದವು. ಸ್ವಲ್ಪ ಅಡ್ಡದಾರಿ ಹಿಡಿದಿದ್ದರೆ ನಾವು ಇವೆಲ್ಲಕ್ಕೂ ಎರವಾಗುತ್ತಿದ್ದೆವು. ಆ ಕಾಲದಲ್ಲಿ ಗಾಂಧೀಜಿಯವರು "ಉದ್ದೇಶದಂತೆ ಸಾಧನಗಳೂ ಶುದ್ಧವಾಗಿರಬೇಕೆಂದು" ಹೇಳುತ್ತಿದ್ದುದರ ನಿಜವಾದ ಅರ್ಥವಾಯಿತು.

ಹಪ್ತೆಲೂಟಿ ಕಾರ್ಯಕ್ರಮ

ದೇಶದಲ್ಲೆಲ್ಲ ಹಪ್ತೆಲೂಟಿ ಕಾರ್ಯಕ್ರಮ ನಡೆಯಿತು. ಮಧ್ಯವರ್ತಿ ಗುಪ್ತ ಸಂಸ್ಥೆಯಿಂದ ಆ ರೀತಿ ಆದೇಶ ಬಂದಿತ್ತು. ಮೊದ ಮೊದಲು ಸರಕಾರ ಸಾಮಾನ್ಯ ದಿನಗಳಂತೆ ಪ್ರತಿ ಗ್ರಾಮಕ್ಕೆ ಶಾನಭೋಗರನ್ನು ಕಳಿಸಿ ಹಪ್ತೆ (ಭೂಕಂದಾಯ) ವಸೂಲ ಮಾಡುತ್ತಿತ್ತು. ಹಪ್ತೆಲೂಟಿ ಕಾರ್ಯಕ್ರಮ ಪ್ರಾರಂಭವಾದಕೂಡಲೆ ಅಲ್ಲಲ್ಲಿ ಹಪ್ತೆಯ ಹಣದ ಲೂಟಿಯೂ ಆಗಹತ್ತಿತು. ಸರಕಾರದವರು ಪ್ರತಿ ಗ್ರಾಮದಲ್ಲಿ ಹಪ್ತೆ ವಸೂಲಿ ಮಾಡುವದನ್ನು ಬಿಟ್ಟು ದೊಡ್ಡ ದೊಡ್ಡ ಊರುಗಳಲ್ಲಿ ಪೋಲೀಸರ ರಕ್ಷಣೆಯಲ್ಲಿ ಹಪ್ತೆ ವಸೂಲಿಯನ್ನು ಪ್ರಾರಂಭಿಸಿದರು. ಸುತ್ತಲಿನ ಹಳ್ಳಿಯ ಜನರಿಗೆ "ನಿಗದಿ*ಯಾದ

* ನಿಶ್ಚಿತ

ಊರಿಗೆ ಬಂದು ಹಪ್ತೆಕೊಟ್ಟು ಹೋಗಬೇಕು" ಎಂದು ಸರಕಾರ ಆಜ್ಞೆ ವಿಧಿಸಿತು. ಎಷ್ಟೇ ಬಿಗುವಿದ್ದರೂ ಹಪ್ತೆಲೂಟಿ ಕಾರ್ಯಕ್ರಮಗಳು ಪ್ರಾಂತದಲ್ಲಿ ನಡೆದೇ ಇದ್ದವು.

ಮಹಾದೇವಪ್ಪ ಮೈಲಾರ ಅವರು ಪೋಲೀಸರ ಗುಂಡಿಗೆ ಆಹುತಿ ಆದರು

ಇತರ ಜಿಲ್ಲೆಗಳಲ್ಲಿದ್ದಂತೆ ಧಾರವಾಡ ಜಿಲ್ಲೆಯಲ್ಲಿಯೂ ಭೂಗತ ಕಾಂಗ್ರೆಸ ಕಾರ್ಯಕರ್ತರ ಗುಂಪುಗಳು ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿದ್ದವು. ಅವುಗಳಲ್ಲಿ ಮಹಾದೇವಪ್ಪ ಮೈಲಾರರ ಗುಂಪೂ ಒಂದಿತ್ತು. ಅದು ಹಾವೇರಿ, ಶಿರಹಟ್ಟಿ, ಗದಗ ತಾಲೂಕುಗಳಲ್ಲಿ ತನ್ನ ಚಟುವಟಿಕೆಗಳಿಂದ ಸರಕಾರವನ್ನು ದಿಙ್ಮೂಢ ಮಾಡಿತ್ತು. ಒಂದು ದಿನ ಹೊಸರಿತ್ತಿಯಲ್ಲಿ ಹಪ್ತೆ ವಸೂಲಿಯ ಕೆಲಸ ನಡೆಯಿತು. ಚಾವಡಿಗಳೆಲ್ಲ ಮೊದಲೇ ಸುಟ್ಟು ಹೋದದ್ದರಿಂದ ಒಂದು ದೇವಸ್ಥಾನದಲ್ಲಿ ಈ ಕೆಲಸವನ್ನು ಪ್ರಾರಂಭಿಸಿದ್ದರು.

ಹೊಸರಿತ್ತಿ ಮಹಾದೇವಪ್ಪನವರ ಕಾರ್ಯಕ್ಷೇತ್ರ. ಅದರ ಹತ್ತಿರ ಕೊರಡೂರಲ್ಲಿ ಅವರು "ಗಾಂಧೀ ಆಶ್ರಮ" ಸ್ಥಾಪನೆ ಮಾಡಿ ಅಲ್ಲಿ ಅನೇಕ ವರ್ಷ ಕೆಲಸ ಮಾಡಿದ್ದರು. ಹೊಸರಿತ್ತಿಯಲ್ಲಿ ಶ್ರೀ ಹಳ್ಳಿಕೇರಿ ಗುದ್ಲೆಪ್ಪ ಮತ್ತು ವೆಂಕಟೇಶ ಮಾಗಡಿ ಇಬ್ಬರೂ "ಗಾಂಧೀ ಆಶ್ರಮ" ಸ್ಥಾಪಿಸಿ ಜನಜಾಗ್ರತಿಯನ್ನು ಮಾಡಿದ್ದರು. ಆದುದರಿಂದ ಅದು ರಾಜಕೀಯ ದೃಷ್ಟಿಯಿಂದ ಜಾಗ್ರತ ಊರಾಗಿತ್ತು. ಅದರಿಂದ ಸರಕಾರ ಇಲ್ಲಿ ಹಪ್ತೆ ವಸೂಲಿಗಾಗಿ ಬಹಳ ಎಚ್ಚರಿಕೆ ವಹಿಸಿತ್ತು. ಕರ್ನಾಟಕದ ಪೋಲೀಸರು ಕಾರ್ಯಕರ್ತರ ವಿಷಯಕ್ಕೆ ಸಹಾನುಭೂತಿ ತೋರಿಸಬಹುದೆಂದು ಅನ್ಯ ಪ್ರಾಂತದ ಪೋಲೀಸರನ್ನು ತಂದಿಟ್ಟಿದ್ದರು. ಏನೇ ಆದರೂ ಈ ಹಪ್ತೆಯನ್ನು ಲೂಟ ಮಾಡಿಯೇ ತೀರಬೇಕೆಂದು ಮಹಾದೇವಪ್ಪನವರ ಪಥಕ ಹಟ ತೊಟ್ಟಿತ್ತು.

ಒಂದು ದಿವಸ ಚುಮು ಚುಮು ನಸುಕಿನಲ್ಲಿಯೇ ಮಹಾದೇವಪ್ಪನವರು ತಮ್ಮ ಸಂಗಡಿಗರೊಂದಿಗೆ ಹೊಸರಿತ್ತಿಗೆ ಬಂದರು. ಅವರ ಕೆಲವು ಸಂಗಡಿಗರು ನದಿಯಲ್ಲಿ ಮುಖ ತೊಳೆಯಲಿಕ್ಕೆ ಹಿಂದೆ ನಿಂತರು. ಆಗ ಮಹಾದೇವಪ್ಪ ದೇವಸ್ಥಾನಕ್ಕೆ ಅಂದರೆ ಹಪ್ತೆ ವಸೂಲಿಯ ಸ್ಥಳಕ್ಕೆ ಬಂದರು. ಅಲ್ಲಿ ಮೂರೇ ಜನರು ಪೋಲೀಸರಿದ್ದರು. ಇತರರು ಮುಖಮಾರ್ಜನ ಮಾಡಲಿಕ್ಕೆ ನದಿಗೆ ಹೋಗಿದ್ದರು. ಅಷ್ಟರಲ್ಲಿ ಅವರ ನಚ್ಚಿನ ಸಂಗಡಿಗರಾದ ವೀರಯ್ಯ ಹಾಗೂ ತಿರುಕಪ್ಪ ಬಂದರು. ದಾಳಿಮಾಡಲು ಈ ಸಮಯ ಒಳ್ಳೆಯದಾಗಿದೆಯೆಂದು ಕೂಡಲೆ ಕಾರ್ಯೋನ್ಮುಖರಾದರು. ಒಬ್ಬ ಪೋಲೀಸ ಗರ್ಭ ಗುಡಿಯೊಳಗಿದ್ದ. ಇಬ್ಬರು ಹೊರಗೆ ಇದ್ದರು. ಹೊರಗಿದ್ದವರನ್ನು ಹಿಡಿದು ಕಟ್ಟಿ ಹಾಕಲಾಯಿತು. ಇದನ್ನು ನೋಡಿ ಒಳಗಿದ್ದ ಪೋಲೀಸ ಗಾಬರಿಯಾದವನಂತೆ ನಟಿಸಿ–

ಮಹಾದೇವಪ್ಪನವರಿಗೆ ಕೈಮುಗಿಯತೊಡಗಿದ. ಮಹಾದೇವಪ್ಪನವರು ದಯೆಯಿಂದ ಅವನೆಡೆಗೆ ದುರ್ಲಕ್ಷಮಾಡಿ ಹಪ್ತೆವಸೂಲಾದ ಪೆಟ್ಟಿಗೆಗೆ ಕೈಹಾಕಿದರು. ಅಷ್ಟರಲ್ಲಿ ಅವನು ಅಲ್ಲಿಯೆ ಇದ್ದ ಬಂದೂಕ ತಕ್ಕೊಂಡು ಮಹಾದೇವಪ್ಪನವರಿಗೆ ಗುಂಡು ಹೊಡೆದ. ಅದು ಅವರಿಗೆ ತಾಕಿತು. ಅವರು ಹೊರಳಿ ನೋಡಿದರು. ಅಷ್ಟರಲ್ಲಿ ಅವರ ತಲೆಗೆ ಮತ್ತೊಂದು ಗುಂಡು ಬಡೆಯಿತು. ಅವರು ನೆಲಕ್ಕೆ ಬಿದ್ದರು. ಒಳಗಿದ್ದ ಪೋಲೀಸನ ಪಾರುಪತ್ಯ ಮಾಡಬೇಕೆಂದು ವೀರಯ್ಯ ಹಾಗೂ ತಿರುಕಪ್ಪ ಧಾವಿಸಿ ಬಂದರು. ಮಹಾದೇವಪ್ಪ ಆ ಸ್ಥಿತಿಯಲ್ಲಿ ಸಹ ಆ ಪೋಲೀಸನ ಮೇಲೆ ಕೈಮಾಡಬೇಡಿರೆಂದು ಹೇಳಿದರು. ಅಷ್ಟರಲ್ಲಿ ಅವರಿಗೂ ಗುಂಡು ಬಡಿದು ಅವರೂ ನೆಲಕ್ಕುರುಳಿದರು. ಗುಂಡಿನ ಸಪ್ಪಳಕೇಳಿ, ನದಿಗೆ ಹೋದ ಪೋಲೀಸರೂ ಅಲ್ಲಿಂದಲೇ ಗುಂಡು ಹಾರಿಸುತ್ತ ಬಂದರು. ಮಹಾದೇವಪ್ಪ ನವರಿಗೆ ಮತ್ತೊಂದು ಗುಂಡನ್ನು ಹೊಡೆದರು. ಅಂದು ಎಪ್ರೀಲ ೧ನೆಯ ತಾರೀಖು. ಆದಿನ ಮೂರು ಪ್ರಾಣಾಹುತಿಗಳಾದವು.

ವಡವಿ ಆಚಾರ್ಯರು ಯಾರು ?

ಮುಂದೆ ಅವರ ಗುಂಪಿನ ಅನೇಕ ಜನರನ್ನು ಬಂಧಿಸಲಾಯಿತು. ಅವರ ಬಾಯಿಂದ ಈ ಕಾರ್ಯಕ್ರಮಕ್ಕೆ ಯಾರು ಯಾರು ಬಂದಿದ್ದರೆಂಬುದನ್ನು ಕೇಳಿ ತಿಳಿದು ಕೊಂಡರು. ಈ ಗುಂಪಿನಲ್ಲಿ ವಡವಿ ಊರಿನ ವೆಂಕಣ್ಣಾಚಾರ್ಯ ವಾಯಿ ಎಂಬವರೂ ಕೆಲಸ ಮಾಡುತ್ತಿದ್ದರು. ಅವರ ಪೂರ್ಣ ಹೆಸರು ಗುಂಪಿನ ಜನರಿಗೆ ಯಾರಿಗೂ ಗೊತ್ತಿರ ಲಿಲ್ಲ. ಅವರನ್ನು ವಡವಿ ಆಚಾರ್ಯರೆಂದೇ ಎಲ್ಲರೂ ಕರೆಯುತ್ತಿದ್ದರು. ಪೋಲೀಸರಿಗೂ ಅದೇ ಹೆಸರನ್ನೇ ಹೇಳಿದ್ದರು. ಪೋಲೀಸರು ದಿಗಿಲಿನಲ್ಲಿ ಬಿದ್ದರು. ಈ ಇನ್ನೊಬ್ಬ ವಡವಿ ಆಚಾರ್ಯರು ಯಾರು ? ವಡವಿ ಅಂಥದೇನು ಚಳವಳಿಯ ಊರು ಅಲ್ಲ. ವಡವಿಯ ಊರಿಂದ ಚಳವಳಿಯಲ್ಲಿ ಬಿದ್ದವನೆಂದರೆ ನಾನೊಬ್ಬನೆ ಎಂದು ಪೋಲೀಸರ ಕಲ್ಪನೆ. ಆದರೆ ನಾನು ಅನೇಕ ದಿವಸಗಳಿಂದ ಬೆಳಗಾಂವಿ ಜಿಲ್ಹೆಯಲ್ಲಿ ಕೆಲಸ ಮಾಡುತ್ತಿದ್ದೇ ನೆಂಬುದು ಅವರಿಗೆ ಗೊತ್ತಿತ್ತು. ಹಾಗಾದರೆ ಮತ್ತೆ ಯಾರಿರಬಹುದು ?–ಎಂಬ ಯೋಚನೆಯಲ್ಲಿ ಪೋಲೀಸರು ಬಿದ್ದರು. ಕರಜಗಿ ಊರಲ್ಲಿ ನಮ್ಮ ಎರಡನೇ ಅಣ್ಣಂದಿ ರಾದ ತಮ್ಮಣ್ಣಾಚಾರ್ಯರು ಒಕ್ಕಲುತನ ಮಾಡಿಕೊಂಡು ಇದ್ದರು. ಅವರು ಅತ್ಯಂತ ಧಾರ್ಮಿಕ ವೃತ್ತಿಯವರು. ಕೋರ್ಟು ಕಚೇರಿಗಳನ್ನು ಎಂದೂ ಕಂಡವರಲ್ಲ, ಪೋಲೀ ಸರ ಮುಖ ನೋಡಿದವರಲ್ಲ. ರಾಜಕೀಯ ಆಂದೋಲನಕ್ಕೂ ಅವರಿಗೂ ಯಾವ ಸಂಬಂಧವೂ ಇರಲಿಲ್ಲ. ಇಷ್ಟೇ ಅಲ್ಲ ನಾನು ಸಹ ಅವರನ್ನು ವರ್ಷಕ್ಕೆ ಎರಡು ವರ್ಷಕ್ಕೆ ಹೋಗಿ ಭೆಟ್ಟಿಯಾಗುತ್ತಿದ್ದೆ. ಈ ಆಂದೋಲನದ ಕಾಲದಲ್ಲಂತೂ ಅವರ ಭೆಟ್ಟಿಯಾಗಿ ರಲೇ ಇಲ್ಲ. ಇದು ಊರೊಳಗೆ ಎಲ್ಲರಿಗೂ ಗೊತ್ತಿತ್ತು. ಕರಜಿಗಿಗೂ ಹೊಸರಿತ್ತಿಗೂ ಕೇವಲ ೬ ಮೈಲು ಅಂತರ. ಒಂದುವೇಳೆ "ಈ ತಮ್ಮಣ್ಣಾಚಾರ್ಯರೇ ವಡವಿ ಆಚಾರ್ಯ-

ರೇಕಾಗಿರಬಾರದು ?"–ಎಂದು ಊಹಿಸಿ ಪೋಲೀಸರು ಅವರನ್ನು ಹಿಡಿದುಕೊಂಡು ಹೋಗಿ ಜೇಲಿನಲ್ಲಿಟ್ಟರು. ಅವರ ಎತ್ತುಗಳನ್ನು ಜಪ್ತ ಮಾಡಿಕೊಂಡು ಹೋದರು. ಇವರನ್ನು ಹಿಡಿದರೆ ನಾನು ಬಂದು ಹಾಜರಾಗಬಹುದಲ್ಲ ಎಂಬ ವಿಚಾರವಿದ್ದರೂ ಇರ ಬಹುದು. ಆದರೆ ಅವರ ತರ್ಕ ನಿಷ್ಫಲವಾಯಿತು.

ಮುಂದೆ ಕೆಲವು ದಿವಸಗಳ ತರುವಾಯ ವಡವಿ ವೆಂಕಣ್ಣಾಚಾರ್ಯ ವಾಯಿ ಯವರು ಈ ಗುಂಪಿನಲ್ಲಿದ್ದು ಕೆಲಸ ಮಾಡುತ್ತಿದ್ದುದು ಪೋಲೀಸರಿಗೆ ಗೊತ್ತಾಗಿ ಅವರನ್ನೂ ಬಂಧಿಸಿದರು. ನಮ್ಮ ಅಣ್ಣಂದಿರು ಈ ಕೆಲಸಕ್ಕೆ ಸಂಬಂಧಿಸಿದವರಲ್ಲವೆಂದು ತಿಳಿದು ಅವರನ್ನು ಬಿಡುಗಡೆ ಮಾಡಿದರು. ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ ! ಇದು ಆಗಿನ ಸರಕಾರದ ನೀತಿ !

ತೊಲಗಿ ಹಪ್ತೆಯ ಲೂಟಿ

ಹಪ್ತೆ ಲೂಟಿ ಚಳವಳಿ ಬೆಳಗಾಂವಿ ಜಿಲ್ಹೆಯಲ್ಲಿಯೂ ಅನೇಕ ಕಡೆಗೆ ನಡೆ ಯಿತು. ಖಾನಾಪೂರ ತಾಲೂಕಿನ ತೊಲಗಿಯಲ್ಲಿ ಹಪ್ತೆ ವಸೂಲಿ ನಡೆದಿತ್ತು. ಅದನ್ನು ಲೂಟಿ ಮಾಡಬೇಕೆಂದು ಚನ್ನಪ್ಪ ವಾಲಿಯವರ ಗುಂಪಿನವರು ನಿಶ್ಚಯಿಸಿದರು. ಆ ಕಾಲದಲ್ಲಿ ನಮ್ಮ ಗುಂಪಿನಿಂದ ಬಿ. ಆರ್. ಪಾಟೀಲ ಮತ್ತು ನಾಗಪ್ಪ ಬಾಗೇವಾಡಿ ಇವರು ಗುಂಪಿನಲ್ಲಿ ಸೇರಿ ಅತಿ ಸಾಹಸದ ಕೆಲಸವನ್ನು ಮಾಡಿದರು. ಸಾಯಂಕಾಲ ೪ ಗಂಟೆಯ ಸಮಯ ಚಾವಡಿಯಲ್ಲಿ ಹಪ್ತೆ ವಸೂಲಿ ನಡೆದಿತ್ತು. ಇಬ್ಬರು ಪೋಲೀ ಸರು ಕಟ್ಟೆಯ ಕೆಳಗೆ ಬಂದೂಕು ಹಿಡಿದುಕೊಂಡು ನಿಂತಿದ್ದರು. ಅನೇಕ ರೈತರು ಬಂದು ಹಪ್ತೆ ಕೊಟ್ಟು ಕೊಟ್ಟು ಹೋಗುತ್ತಿದ್ದರು. ಈ ಗುಂಪಿನವರು ಕೆಲವರು ರೈತರ ವೇಷ ದಲ್ಲಿ ಹಪ್ತೆ ಕೊಡುವವರಂತೆ ಕೈಯಲ್ಲಿ ನೋಟು ಹಿಡಿದುಕೊಂಡು ಮುಂದೆ ಹೋದರು. ಬಿ. ಆರ್. ಪಾಟೀಲ ಹಾಗೂ ನಾಗಪ್ಪ ಬಾಗೇವಾಡಿ ಇವರು ಕೆಳಗೆ ಬಂದೂಕು ಹಿಡಿದು ಕೊಂಡು ನಿಂತಿದ್ದ ಪೋಲೀಸರನ್ನು ಒಬ್ಬೊಬ್ಬರು ತಮ್ಮ ತೆಕ್ಕೆಯಲ್ಲಿ ಹಿಡಿದರು. ಹಿಡಿಯುವ ಗದ್ದಲದಲ್ಲಿ ಪೋಲೀಸನ ಕೈಯೊಳಗಿನ ಬಂದೂಕು ಹಾರಿ ಗುಂಡು ಬಿ. ಆರ್. ಪಾಟೀಲರ ಬೆರಳಿಗೆ ತಾಕಿ ಹೋಯಿತು. ಅದರಿಂದ ಅವರಿಗೆ ಸ್ವಲ್ಪ ಗಾಯ ವಾಯಿತು. ಇಷ್ಟರಲ್ಲಿ ಮತ್ತೆ ೩–೪ ಜನರು ಇವರ ಸಹಾಯಕ್ಕೆ ಬಂದು ಪೋಲೀಸರ ಕೈಯೊಳಗಿನ ಬಂದೂಕನ್ನು ಕಸಿದುಕೊಂಡು ಅವರನ್ನು ಕಟ್ಟಿಹಾಕಿದರು. ಹಪ್ತೆ ಕೊಡು ವವರಂತೆ ಮುಂದೆ ಹೋದವರಲ್ಲಿ ಕೆಲವರು ಮೇಲಿದ್ದ ಪೋಲೀಸರನ್ನು ಹಿಡಿದರು. ದೇವಲಾಪುರದ ಶಿವನಗೌಡ ಪಾಟೀಲ (ಸಳಕಿ) ಇವರು ಅಲ್ಲಿಯೇ ಮೂಲೆಯಲ್ಲಿಟ್ಟಿದ್ದ ಎಲ್ಲ ಬಂದೂಕುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಹೋದರು. ಇನ್ನು ಕೆಲವರು ಹಪ್ತೆ ವಸೂಲಿಯ ಪೆಟ್ಟಿಗೆಯನ್ನು ತೆಗೆದುಕೊಂಡು ಹೊರಟರು. ಶಾನುಭೋಗರ ಹತ್ತಿರ ಇದ್ದ ಕಾಗದ ಪತ್ರಗಳನ್ನು ಅವರು ತೆಗೆದುಕೊಂಡು ಹೋದರು. ಈ ಗದ್ದಲ

ನೋಡಿ ಹಪ್ತೆ ಕೊಡಲಿಕ್ಕೆ ಬಂದವರೆಲ್ಲ ಓಡಿ ಹೋದರು. ಈ ರೀತಿ ಹಪ್ತೆ ಲೂಟಿಯನ್ನು ಯಶಸ್ವಿರೀತಿಯಿಂದ ಮುಗಿಸಿಕೊಂಡು ಎಲ್ಲರೂ ಹೊರಟು ಹೋದರು.

ಸೂಳೇಭಾವಿ ಸ್ಟೇಶನ್ ದಹನ

ಇಷ್ಟೆಲ್ಲ ಕಾರ್ಯಗಳಾದರೂ ಸೂಳೇಭಾವಿ ಸ್ಟೇಶನ್ ಸುಡಬೇಕೆಂಬ ವಿಚಾರ ನಮ್ಮ ಪಡೆಯ ಕಾರ್ಯಕರ್ತರ ಮನಸ್ಸಿನಲ್ಲಿ ಇದ್ದೇ ಇತ್ತು. ಆ ಕೆಲಸ ಅಯಶಸ್ವಿಯಾಗಿತ್ತು. ಅದನ್ನು ಪೂರ್ತಿ ಮಾಡದೆ ಕಾರ್ಯಕರ್ತರಿಗೆ ಸಮಾಧಾನವಿರಲಿಲ್ಲ. ಅದಕ್ಕಾಗಿ ಸುವ್ಯವಸ್ಥಿತವಾದ ಯೋಜನೆಯೊಂದನ್ನು ತಯಾರಿಸಲಾಯಿತು. ಅದು ಬಹಳ ಮನೋರಂಜಕವಿದೆ. ಈ ಕಾಲದಲ್ಲಿ ನಮ್ಮ ಗುಂಪಿನ ಜನರು ಕಡಿಮೆಯಾಗಿದ್ದರು. ಈ ಕೆಲಸಕ್ಕೆ ಹೊರಗಿನ ಕೆಲವರನ್ನು ಸಹಾಯಕ್ಕೆ ಕರೆದುಕೊಳ್ಳಲಾಯಿತು.

ಸೂಳೇಭಾವಿ ಸ್ಟೇಶನ್ ಸುಡುವ ಅಯಶಸ್ವೀ ಪ್ರಯತ್ನವಾದಾಗಿನಿಂದ ಅಲ್ಲಿ ಪೋಲೀಸರ ಸರ್ಪಗಾವಲು ನಡೆದಿತ್ತು. ಇಂದಿಲ್ಲ ನಾಳೆ ಭೂಗತರು ಸ್ಟೇಶನ್ ಸುಟ್ಟೇ ಸುಡುವರೆಂದು ಪೋಲೀಸರಿಗೆ ಗೊತ್ತು. ಆದುದರಿಂದ ಹಗಲು ರಾತ್ರಿ ಸಶಸ್ತ್ರ ಪೋಲೀಸರನ್ನಿಟ್ಟು ಕಾವಲು ನಡೆಸಿದ್ದರು. ಸ್ಟೇಶನ್ನಿನ ಮೇಲೆ ಆರು ಜನ ಪೋಲೀಸರಿದ್ದರು. ಇಬ್ಬರು ಕೈಯಲ್ಲಿ ಬಂದೂಕು ಹಿಡಿದುಕೊಂಡು ಪ್ಲಾಟಫಾರ್ಮಿನ ಮೇಲೆ ಗಸ್ತಿ ತಿರುಗುತ್ತಿದ್ದರು. ಆಗ ಕಾರ್ತೀಕ ಮಾಸ. ಮರುದಿನ ತುಳಸಿಯ ಮದುವೆ. ಹುವಲಿ, ಸುಲಧಾಳ, ಸೂಳೇಭಾವಿಗಳಿಂದ ರೈತರು ತಮ್ಮ ಹೊಲದೊಡೆಯರಿಗೆ ತುಳಸಿಯ ಮದುವೆಗಾಗಿ ಕಬ್ಬು ಮುಂತಾದುವನ್ನು ಒಯ್ಯುತ್ತಿರುತ್ತಾರೆ. ಈ ಸಂಧಿಯ ಲಾಭವನ್ನು ಈ ಯೋಜನೆಗೆ ಉಪಯೋಗ ಮಾಡಿಕೊಳ್ಳಲಾಯಿತು. ಬೆಳಗಾಂವಿಗೆ ಹೋಗುವ ರೈಲು ಸೂಳೇಭಾವಿಗೆ ಮಧ್ಯಾಹ್ನ ೨ ಗಂಟೆಗೆ ಬರುತ್ತಿತ್ತು. ರೈಲು ಸೀಟಿ ಹೊಡೆದು ಪ್ಲಾಟಫಾರ್ಮ ಬಿಡುವ ಹೊತ್ತಿಗೆ ಇಬ್ಬರು ಕಬ್ಬಿನ ಹೊರೆ ಹೊತ್ತುಕೊಂಡು ಪ್ಲಾಟ್‌ಫಾರ್ಮಿನ ಮೇಲೆ ಬರಬೇಕು, ಇನ್ನಿಬ್ಬರು ರೈಲಿಗೆ ಹೋಗುವವರು ಗಾಡಿ ತಪ್ಪಿದಂತೆ ಓಡುತ್ತ ಬರಬೇಕು. ಹೀಗೆ ಬೇರೆ ಬೇರೆ ಜನರು ಬೇರೆ ಬೇರೆ ದಾರಿಗಳಿಂದ ಬಂದು ಸ್ಟೇಶನ್‌ನಲ್ಲಿ ೧೫–೨೦ ಜನರು ಸೇರಬೇಕೆಂದು ಗೊತ್ತಾಯಿತು. ಆ ಪ್ರಕಾರ ಎಲ್ಲರೂ ಬಂದರು. ಅದರಲ್ಲಿ ಇಬ್ಬರು ಮಣ್ಣಿನ ಕೊಡದಲ್ಲಿ ಚಿಮಣಿ ಎಣ್ಣೆಯನ್ನು ತುಂಬಿಕೊಂಡು ಕಬ್ಬಿನ ಗಣಿಕೆ ಹಾಕಿ ಕಬ್ಬಿನ ಹಾಲು ತಂದವರಂತೆ ಬಂದರು. ಕಬ್ಬಿನ ಹೊರೆ ಹೊತ್ತವರು ಅವನ್ನು ಇಳಿಸಿ ಓಡುತ್ತ ಬಂದವರಂತೆ ಬೆವರು ಒರೆಸಿಕೊಳ್ಳ ತೊಡಗಿದರು.

ಕಬ್ಬನ್ನು ನೋಡಿ ಪೋಲೀಸರ ಬಾಯೊಳಗೆ ನೀರು ಬಿಟ್ಟವು. ಅವರು ಕಬ್ಬನ್ನು ಬೇಡಿದರು. ಇವರಿಗೂ ಅದೇ ಬೇಕಾಗಿತ್ತು. ಆದರೂ "ನಾಳೆ ತುಳಸಿಯ ಮದುವೆ. ನಮ್ಮ ಹೊಲದೊಡೆಯರಿಗೆ ಅವನ್ನು ಒಯ್ಯಬೇಕಾಗಿದೆ" ಎಂದರು. "ಒಂದೋಮು

ಕೊಡು ಅದಕ್ಕೇನಾಗುತ್ತದೆ” ಎಂದು ಪೋಲೀಸರು ಕೇಳಿದರು. ಒಲ್ಲದ ಮನಸ್ಸಿನವರಂತೆ ಒಂದೊಂದು ಕಬ್ಬು ಹಿರಿದು ಕೊಟ್ಟರು. ಪೋಲೀಸರು ಬಂದೂಕನ್ನು ಕೆಳಗಿಟ್ಟು ಕಬ್ಬು ಮುರಿದು ತಿನ್ನತೊಡಗಿದರು. ಎಲ್ಲರೂ ರೈತರ ಹುಡುಗರು. ಅದೇ ವೇಷದಲ್ಲಿದ್ದರು. ಅದರಿಂದ ಪೋಲೀಸರಿಗೆ ಸಂಶಯ ಬರುವ ಕಾರಣವಿರಲಿಲ್ಲ. ಅವರು ಕಬ್ಬು ತಿನ್ನುವದರಲ್ಲಿ ಮೈಮರೆತರು. ಇದನ್ನು ನೋಡಿ ಬಿ. ಆರ್. ಪಾಟೀಲ ಹಾಗೂ ನಾಗಪ್ಪ ಬಾಗೇವಾಡಿಯವರು ಬಂದು ಪೋಲೀಸರನ್ನು ತೆಕ್ಕೆಯಲ್ಲಿ ಒತ್ತಿ ಹಿಡಿದರು. ಮತ್ತಿಬ್ಬರು ಅವರ ಸಹಾಯಕ್ಕೆ ಬಂದು ಪೋಲೀಸರ ಬಂದೂಕುಗಳನ್ನು ವಶಕ್ಕೆ ತೆಗೆದುಕೊಂಡರು. ಅವರ ಕೈಕಾಲು ಕಟ್ಟಿದರು. ಪ್ರತೀಕ್ಷಾಲಯದಲ್ಲಿಯ ನಾಲ್ಕು ಜನ ಪೋಲೀಸರು ಸುಮ್ಮನೆ ಪೆಟ್ಟಿಗೆಯ ಮೇಲೆ ಕುಳಿತಿದ್ದರು. ಆ ಪೆಟ್ಟಿಗೆಯಲ್ಲಿ ಕಾಡತೋಸು ಮುಂತಾದವುಗಳಿದ್ದವು. ಅದರ ಮಗ್ಗುಲಲ್ಲಿಯೇ ರಾಯಫಲಗಳನ್ನಿಟ್ಟಿದ್ದರು. ಪ್ಲಾಟಫಾರ್ಮ ಮೇಲಿನ ಪೋಲೀಸರನ್ನು ಹಿಡಿದಕೂಡಲೇ ಬೇರೆ ಕೆಲವು ಕಾರ್ಯಕರ್ತರು ಈ ಪೋಲೀಸರನ್ನು ಹಿಡಿಯಲು ಬಂದರು. ಅಷ್ಟರಲ್ಲಿ ಶ್ರೀ ಬಿ. ಆರ್. ಪಾಟೀಲ ಮತ್ತು ನಾಗಪ್ಪ ಇವರೂ ಅಲ್ಲಿಗೆ ಧಾವಿಸಿದರು. ಇದೆಲ್ಲವನ್ನು ನೋಡಿ ಪ್ರತೀಕ್ಷಾಲಯದಲ್ಲಿಯ ಪೋಲೀಸರು ಅಂಜಿ ಕೈ ಮುಗಿಯಹತ್ತಿದರು. ಅವರೆಲ್ಲರನ್ನು ಬಂಧಿಸಿ ಅವರ ಕೈಕಾಲುಗಳನ್ನು ಕಟ್ಟಿ ಹಾಕಲಾಯಿತು. ಅವರ ಹತ್ತಿರ ಇದ್ದ ರೈಫಲ್, ಕಾಡತೋಸುಗಳನ್ನು ಕಾರ್ಯಕರ್ತರು ತಮ್ಮ ವಶಕ್ಕೆ ತೆಗೆದುಕೊಂಡರು. ಈ ಗದ್ದಲ ನೋಡಿ ಸ್ಟೇಶನ್ ಮಾಸ್ತರರು ಬೆಳಗಾಂವಿಗೆ ಫೋನ ಮಾಡಹತ್ತಿದ್ದರು. ಶ್ರೀ ಚನಬಸಪ್ಪ ತೇಲಿ ಓಡಿಹೋಗಿ ಸ್ಟೇಶನ್ ಮಾಸ್ತರರನ್ನು ಹಿಡಿದರು. ಇತರರು ಅವರ ಸಹಾಯಕ್ಕೆ ಹೋಗಿ ಮಾಸ್ತರರನ್ನು ಹೊರಗೆ ತಂದರು. ಈ ಎಲ್ಲ ಕೆಲಸ ಏಕಕಾಲಕ್ಕೆ ಆಗಬೇಕಾಗಿತ್ತು. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿದ್ದರೆ ಅನಾಹುತವಾಗುತ್ತಿತ್ತು. ಯೋಜನೆಯ ಪ್ರಕಾರ ಎಲ್ಲರನ್ನು ಬಂಧಿಸಿದ ನಂತರ ಸ್ಟೇಶನ್ನಿಗೆ ಬೆಂಕಿ ಹಚ್ಚಲಾಯಿತು. ಸುಡುವ ಸಾಹಿತ್ಯವನ್ನೆಲ್ಲ ಮೊದಲೇ ಸಿದ್ಧಮಾಡಿಕೊಂಡು ಬಂದಿದ್ದರಿಂದ ಬೆಂಕಿ ಹಚ್ಚಲಿಕ್ಕೆ ವಿಶೇಷ ತೊಂದರೆಯಾಗಲಿಲ್ಲ. ಆನಂತರ ಪೋಲೀಸರಿಂದ ವಶಪಡಿಸಿಕೊಂಡಿದ್ದ ರೈಫಲ್, ಕಾಡತೋಸುಗಳನ್ನು ಯಲ್ಲಪ್ಪಾ ಕರಡೀಗುಡ್ಡ ಮತ್ತು ನಾಗಪ್ಪ ಉಪರಿ ಈ ಇಬ್ಬರು ನೇಕಾರ ಹುಡುಗರು ತಮ್ಮ ಸಂಗಡ ತೆಗೆದುಕೊಂಡು ಹೋದರು. ಇತರರು ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಈ ರೀತಿ ಸ್ಟೇಶನ್ ಸುಟ್ಟದ್ದನ್ನು ನೋಡಿ ಎಲ್ಲರೂ ಈ ಕಾರ್ಯಕ್ರಮವನ್ನು ಮನಸಾರೆ ಹೊಗಳತೊಡಗಿದರು.

ಸೇತುವೆ ದಹನ

ಇದೇ ಕಾಲಕ್ಕೆ ಇನ್ನೊಂದು ಘಟನೆ ನಡೆಯಿತು. ಸೂಳೇಭಾವಿ ಸ್ಟೇಶನದಿಂದ ನಾಲ್ಕೈದು ಮೈಲಿನ ಮೇಲೆ ಸಂಬರಗಿ (ಸಾಂಬ್ರಾ) ಎಂಬ ಊರು ಇದೆ. ಅದರ ಹತ್ತಿರವೇ ವಿಮಾನ ನಿಲ್ದಾಣವಿದೆ. ಮಿಲಿಟರಿ ಠಾಣೆಯೂ ಅಲ್ಲಿಯೇ ಇದೆ. ಸೂಳೇಭಾವಿ

ಸ್ಟೇಶನ್ ಸುಡುವಾಗ ಮಿಲಿಟರಿಯವರಿಗೆ ಗೊತ್ತಾಗಿ ಅವರು ಇತ್ತ ಬರಬಾರದೆಂದು ಹುದಲಿ ಊರೊಳಗಿನ ಬೇರೆ ಕಾರ್ಯಕರ್ತರು ಆ ಕಾಲಕ್ಕೆ ಒಂದು ಯೋಜನೆ ಮಾಡಿದ್ದರಂತೆ. ಬೆಳಗಾಂವಿ ಬಾಗಲಕೋಟೆಗಳ ಹೆದ್ದಾರಿಯ ಮೇಲೆ ಸಂಬರಗಿ, ಮಾರೀಹಾಳ ನಡುವೆ ಒಂದು ದೊಡ್ಡ ಕಟ್ಟಿಗೆಯ ಸೇತುವೆ ಇತ್ತು. ಸ್ಟೇಶನ್ ಸುಡುವ ಕಾಲಕ್ಕೆ ಇದಕ್ಕೂ ಬೆಂಕಿ ಹಚ್ಚಿದರೆ ಮಿಲಿಟರಿ ಜನರ ಲಕ್ಷ ಅತ್ತ ಹೋಗುತ್ತದೆ. ಅಲ್ಲದೆ ಸೇತುವೆ ಸುಟ್ಟಿದ್ದರಿಂದ ಅವರಿಗೆ ಸೂಳೇಭಾವಿ ಸ್ಟೇಶನಕ್ಕೆ ಬರಲಿಕ್ಕೂ ಆಗುವದಿಲ್ಲವೆಂದು ತಿಳಿದು ಊರೊಳಗಿನ ಕಾರ್ಯಕರ್ತರು ಈ ರೀತಿ ಯೋಚಿಸಿದ್ದರಂತೆ. ಹುದಲಿ ಊರ ಕೆಲವರು ಸಂಬರಗಿ, ಸುತ್ತಮುತ್ತಲಿನ ಊರಿನ ಕೆಲವರನ್ನು ಕರೆದುಕೊಂಡು ಸೂಳೇಭಾವಿ ಸ್ಟೇಶನಕ್ಕೆ ಬೆಂಕಿ ಹಚ್ಚುವ ಕಾಲಕ್ಕೇ ಈ ಸೇತುವೆಗೂ ಬೆಂಕಿ ಹಚ್ಚಿದರು. ಸೂಳೇಭಾವಿ ಸ್ಟೇಶನ್ ಮತ್ತು ಈ ಕಟ್ಟಿಗೆಯ ಸೇತುವೆ ಏಕಕಾಲಕ್ಕೆ ಉರಿಯಹತ್ತಿದವು. ಆದರೆ ನಮಗಾರಿಗೂ ಈ ವಿಷಯ ಗೊತ್ತಿರಲಿಲ್ಲ. ಜನರೇ ತಮ್ಮ ಸ್ವೇಚ್ಛೆಯಿಂದ ಈ ಕೆಲಸ ಮಾಡಿದ್ದರು.

ಸೂಳೇಭಾವಿ ಸ್ಟೇಶನ ಸುಟ್ಟನಂತರ

ಜಿಲ್ಲೆಯೊಳಗಿನ ಇತರ ತಂಡಗಳಲ್ಲಿಯ ಬಹುತರ ಎಲ್ಲ ಕಾರ್ಯಕರ್ತರನ್ನು ಈ ಮೊದಲೇ ಬಂಧಿಸಿದ್ದರಿಂದ ಅವರ ಚಟುವಟಿಕೆಗಳೂ ನಿಂತಿದ್ದವು. ಆದರೆ ಹುದಲಿ ಪಡೆಯ ಕಾರ್ಯಕ್ರಮಗಳು ನಡೆದೇ ಇದ್ದವು. ಸೂಳೇಭಾವಿ ಸ್ಟೇಶನ ಸುಟ್ಟನಂತರ ಹುದಲಿ ಪಡೆಯಮೇಲೆ ಸರಕಾರದ ರೊಚ್ಚು ಹೆಚ್ಚಾಯಿತು. ಹೇಗಾದರೂ ಮಾಡಿ ಈ ಪಡೆಯ ಜನರನ್ನು ಹಿಡಿಯಬೇಕೆಂದು ಪೋಲೀಸರು ಕಾರ್ಯತತ್ಪರರಾದರು. ಈಗಂತೂ ಹುದಲಿ ಊರಲ್ಲಿ, ಕುಮರಿಯಲ್ಲಿ ಅಥವಾ ಗುಡ್ಡದಲ್ಲಿ ಭೂಗತರು ಇರುವದು ಕಠಿಣವಾಯಿತು. ಪೋಲೀಸ ಮತ್ತು ಮಿಲಿಟರಿ ಜನರು ಯಾವಾಗಲೂ ಊರಲ್ಲಿ ಮತ್ತು ಗುಡ್ಡದಲ್ಲಿ ತಿರುಗಾಡಹತ್ತಿದರು. ಭೂಗತರ ಶೋಧ ನಡೆಸಿದರು.

ಪ್ರತಿಯೊಂದು ಕಾರ್ಯಕ್ರಮ ಮುಗಿದನಂತರ, ಹುದಲಿ ಪಡೆಯ ಪ್ರತಿಯೊಬ್ಬ ಕಾರ್ಯಕರ್ತನು ಕೆಲವು ದಿವಸ ತಮ್ಮ ತಮ್ಮ ಗುರುತಿನ ಸ್ಥಳಗಳಿಗೆ ಹೋಗಹತ್ತಿದನು. ನಾನು ಈ ಮಧ್ಯಂತರದಲ್ಲಿ ಬೆಳಗಾಂವಿಗೆ ಬಂದು ಇರಹತ್ತಿದೆ. ಶ್ರೀ ದಾಬಡೆ ಮೊದಲಾದ ಧಾರವಾಡ ಜಿಲ್ಹೆಯ ಭೂಗತ ಕಾರ್ಯಕರ್ತರು ಬಂದಾಗ ಅವರಿಗೆ ಇರಲಿಕ್ಕೆಂದು ಬೆಳಗಾಂವಿಯಲ್ಲಿ ಫುಲಬಾಗ ಗಲ್ಲಿಯಲ್ಲಿ ಶ್ರೀ ಅಸುಂಡಿಯವರ ಮನೆಯ ಹಿಂದಿನ ಬದಿಗೆ ಒಂದು ಕೋಣೆಯನ್ನು ಬಾಡಿಗೆಯಿಂದ ಹಿಡಿಯಲಾಗಿತ್ತು. ನಾನು ಬೆಳಗಾಂವಿಗೆ ಹೋದಾಗ ಇದೇ ಕೋಣೆಯಲ್ಲಿರುತ್ತಿದ್ದೆ. ಕೆಲವೊಂದುಸಾರೆ ಶ್ರೀ ರಾಮಭಾವು ಕುಲ-ಕರ್ಣಿಯವರ ಮನೆಯಲ್ಲಿಯೂ ಇರುತ್ತಿದ್ದೆ.

ಜನರೊಂದಿಗೆ ಅನ್ಯಾಯವಾಗಿ ಭೀಭತ್ಸ ವರ್ತನೆ

ಹುದಲಿ ಪಡೆಯ ಕಾರ್ಯಕರ್ತರಿಗೆ ಹುದಲಿ ಊರ ಜನರು ಸಹಾಯ ಮಾಡುತ್ತಾರೆ. ಆ ಊರಲ್ಲಿ ಎಲ್ಲ ಜನರನ್ನು ಬಂಧಿಸಿದರೆ ನಮ್ಮ ಪಡೆಯ ಎಲ್ಲ ಭೂಗತ ಕಾರ್ಯ

ಕರ್ತ್ರರು ಹೊರಗೆ ಬಂದು ಹಾಜರಾಗುವರೆಂದು ಪೋಲೀಸರು ಯೋಚಿಸಿದರು. ಒಂದು ದಿವಸ ಹುವಲಿಯ ಜನರು ಏಳುವ ಮೊದಲೇ ಪೋಲೀಸರು ಇಡೀ ಹುದಲಿ ಊರಿಗೆ ಮುತ್ತಿಗೆ ಹಾಕಿದರು. ಪ್ರತಿಯೊಂದು ಅಗಸಿಗೂ ೮–೧೦ ಪೋಲೀಸರು ಒಬ್ಬೊಬ್ಬ ಸಬ್ ಇನ್ಸಪೆಕ್ಟರರು ನಿಂತರು. (ಹಳ್ಳಿಗಳಲ್ಲಿ ಸಾಮಾನ್ಯವಾಗಿ ಜನರು ಬಹಿರ್ದೆಸೆಗೆ ಊರಹೊರಗೇ ಹೋಗುತ್ತಾರೆ.) ಬಹಿರ್ದೆಸೆಗೆ ಹೋಗುವವರನ್ನು, ಹೊಲಕ್ಕೆ ಹೋಗುವವರನ್ನು ಪೋಲೀಸರು ಬಂಧಿಸತೊಡಗಿದರು. ಕೈಗೆ ಸಿಕ್ಕವರನ್ನು ಹಿಡಿದು ಇಬ್ಬಿಬ್ಬರಿಗೆ ಕೂಡಿ ಬೇಡಿಹಾಕಿ ಬಹಿರ್ದೆಸೆಗೆ ಕೂಡಿಸುತ್ತಿದ್ದರು. ಹೀಗೆ ಅನ್ಯಾಯವಾಗಿ ಜನರೊಂದಿಗೆ ಭೀಭತ್ಸ ರೀತಿಯಿಂದ ವರ್ತಿಸಿದರು. ಹಿಡಿದವರನ್ನೆಲ್ಲ ಬೆಳಗಾಂವಿ ಕಿಲ್ಲೆಯ ಜೇಲಿನಲ್ಲಿ ಒಯ್ದಿಟ್ಟರು. ಕೆಲವರನ್ನು ಗುಜನಾಳ ಪೋಲೀಸ ಕ್ಯಾಂಪಿಗೆ ಒಯ್ದು ಭೂಗತರೆಲ್ಲಿದ್ದಾರೆ ಹೇಳಿರಿ ಎಂದು ಕೇಳಿ ಅವರನ್ನು ಬೆದರಿಸುತ್ತಿದ್ದರು. ಅವರಿಂದ ಯಾವ ಸಂಗತಿಯೂ ಸಿಗದ್ದರಿಂದ ಕೆಲಹೊತ್ತಿನ ನಂತರ ಅವರನ್ನು ಬಿಟ್ಟುಬಿಡುತ್ತಿದ್ದರು. ಮೊದಲನೆಯ ದಿವಸ ಸಿಗದವರನ್ನು ಎರಡನೆಯ ದಿವಸ ಬಂಧಿಸಿದರು. ಆಗ ಹುದಲಿಯ ಜನಸಂಖ್ಯೆ ಸುಮಾರು ಮೂರು ಸಾವಿರ ಇತ್ತು. ಈ ಬಂಧನದಲ್ಲಿ ಹುದಲಿ ಊರಲ್ಲಿ ಆರೇಳು ನೂರು ಜನರನ್ನು ಬಂಧಿಸಿದರು. ಅಂದರೆ ಬಹುಶಃ ಆ ಊರಲ್ಲಿಯ ಎಲ್ಲ ಪ್ರೌಢ ಪುರುಷರನ್ನು ಹಿಡಿದುಕೊಂಡು ಹೋದಂತಾಗಿತ್ತು.

ಬಂಧನ ಪರ್ವ

ಶ್ರೀ ಬಿ. ಆರ್, ಪಾಟೀಲರು ಧಾರವಾಡದಲ್ಲಿ ಪೋಲೀಸರ ಕೈಗೆ ಸಿಕ್ಕರು. ಅವರಿಗೆ ಪೋಲೀಸರು ಹೊಡೆಯುವದು ಬಡಿಯುವದು ಯಾವದನ್ನು ಮಾಡಲಿಲ್ಲ. ಇತರ ಕಾರ್ಯಕರ್ತರು ಒಬ್ಬರ ಹಿಂದೊಬ್ಬರು ಸಿಗಹತ್ತಿದರು. ಸೂಳೇಭಾವಿ ಸ್ಟೇಶನ ಸುಡುವ ಕಾಲಕ್ಕೆ ಪೋಲೀಸರ ಕೈಯೊಳಗಿಂದ ಕಸಿದುಕೊಂಡುಹೋದ ರಾಯಫಲ್ ಮುಂತಾದವುಗಳನ್ನು ಯಲ್ಲಪ್ಪ ಕರಡಿಗುದ್ದಿ, ನಾಗಪ್ಪ ಉಪರಿ. ಈ ಇಬ್ಬರು ನೇಕಾರ ಹುಡುಗರು ತಮ್ಮ ಜೊತೆಗೆ ಒಯ್ದು ಕುಮರಿ ಗುಡ್ಡದಲ್ಲಿ ಮುಚ್ಚಿ ಇಟ್ಟಿದ್ದರು. ಪೋಲೀಸರಿಗೆ ಅವುಗಳನ್ನು ಶೋಧಮಾಡಬೇಕಾಗಿತ್ತು. ಅವರಿಬ್ಬರನ್ನೂ ಪೋಲೀಸರು ಹಿಡಿದು ಹೆಣಮುರಿ ಹೊಡೆದು ಬಂದೂಕು,ಕೊಡುತ್ತೀರೋ ? ಭರಮಪ್ಪ ಬೇಕೊ ?" ಎಂದು ಕೇಳಹತ್ತಿದರು.

ಭರಮಪ್ಪ ಎಂದರೆ ಭೂಗತ ಕಾರ್ಯಕರ್ತ್ರರು ಪೋಲೀಸರ ಕೈಗೆ ಸಿಕ್ಕಕೂಡಲೆ ಅವರನ್ನು ಲಾಕಪ್ಪಿನಲ್ಲಿಟ್ಟು ಅವರಿಂದ ನಡೆದ ಸಂಗತಿ ತಿಳಿದುಕೊಳ್ಳುವದಕ್ಕಾಗಿ ಚೆನ್ನಾಗಿ ಹೊಡೆಯಲು ಉಪಯೋಗಿಸುವ ಚರ್ಮದ ಪಟ್ಟಿ. ಆ ಪಟ್ಟಿಗೆ ನೀರು ಹಚ್ಚಿ ಕಾರ್ಯಕರ್ತರನ್ನು ನಗ್ನಮಾಡಿ ಹೊಡೆಯುತ್ತಿದ್ದರು. ಇದರಿಂದ ಮಾಹಿತಿ ಸಿಗದಿದ್ದರೆ ಅವರ ಮೊಣಕಾಲಿನ ಎಲುವಿನಮೇಲೆ ಹಾರಿಯಿಟ್ಟು ಅದರ ಮೇಲೆ ಇಬ್ಬರು ಪೋಲೀಸರು

ನಿಂತು ಅದನ್ನು ಉರುಳಿಸುತ್ತಿದ್ದರು. ಅಥವಾ ಸರಿಸುತ್ತಿದ್ದರು. ಆಂದೋಲನದ ಕಾಲದಲ್ಲಿ ಈ ಭರಮಪ್ಪ ಎಂಬ ಶಬ್ದ ಬಹಳ ರೂಢಿಯಲ್ಲಿ ಬಂದಿತ್ತು. ಪೋಲೀಸರ ಹೊಡೆತ ಸಹನ ಮಾಡುವದಾಗದ್ದರಿಂದ ಮೇಲೆ ಹೇಳಿದ ಇಬ್ಬರು ಹುಡುಗರು ಪೋಲೀಸರಿಗೆ ರಾಯುಫಲ್ ಮುಂತಾದವುಗಳನ್ನು ಕೊಟ್ಟುಬಿಟ್ಟರು. ನನ್ನ ಹೊರತಾಗಿ ನಮ್ಮ ಪಡೆಯ ಎಲ್ಲ ಕಾರ್ಯಕರ್ತರು ಮತ್ತು ನಮ್ಮ ಸಹಾಯಕ್ಕೆ ಬರುವ ಇತರ ಎಲ್ಲಾ ಕಾರ್ಯಕರ್ತರು ಬಂಧಿತರಾದರು.

ಅಲೀಸಾಹೇಬ ವಾರೀಮನಿ ಇವರ ಧೈರ್ಯ ಹಾಗೂ ಸಹನಶೀಲತೆ

ಅಲೀಸಾಹೇಬ ವಾರೀಮನಿ ಇವರು ಜಾತಿಯಿಂದ ಮುಸಲ್ಮಾನರು. ಇವರು ೧೯೩೦ ನೇ ಇಸ್ವಿಯ ಪೂರ್ವದಲ್ಲಿಯೇ ನಮ್ಮ ಸಂಪರ್ಕದಲ್ಲಿ ಬಂದರು. ಸಾರ್ವಜನಿಕ ಕೆಲಸದಲ್ಲಿ ಭಾಗವಹಿಸುತ್ತಿದ್ದರು. ೧೯೩೦ ಹಾಗೂ ೧೯೩೨ ನೇ ಇಸ್ವಿ ಆಂದೋಲನದಲ್ಲಿ ಭಾಗವಹಿಸಿ ಸೆರೆಮನೆಗೂ ಹೋಗಿದ್ದರು. ಅನಂತರ ಅವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ಆದುದರಿಂದ ಅವರ ಮೇಲೆ ಪೋಲೀಸರ ಕಣ್ಣು ವಿಶೇಷ ಇರಲಿಲ್ಲ. ಒಂದೆರಡು ಸಾರೆ ಕುಮರಿಯಿಂದ ಬರುವಾಗ ಇವರು ಪೋಲೀಸರ ಕೈಗೆ ಸಿಕ್ಕಿದ್ದರೂ ಪೋಲೀಸರಿಗೆ ಇವರ ಮೇಲೆ ಸಂಶಯ ಬರಲಿಲ್ಲ. ಕಾರ್ಯಕರ್ತರೆಲ್ಲರನ್ನೂ ಬಂಧಿಸಿದಾಗ ಅವರ ಬಾಯಿಂದ ಯಾರು ಯಾರು ಸಹಾಯ ಮಾಡುತ್ತಿದ್ದರೆಂಬುದನ್ನು ತಿಳಿದು ಕೊಂಡರು. ಅವರಲ್ಲಿ ಅಲೀಸಾಹೇಬರು ಒಂದೆನಿಂತು ಭೂಗತರಿಗೆ ಸಹಾಯ ಮಾಡು ತ್ತಿದ್ದರೆಂಬುದು ಪೋಲೀಸರಿಗೆ ಗೊತ್ತಾಯಿತು. ಕೂಡಲೆ ಅವರನ್ನು ಬಂಧಿಸಿ ಬಹಳ ಹಿಂಸಿಸಿದರು. ಭರಮಪ್ಪನಿಂದ ದಿನಾಲು ಹೊಡೆಯುತ್ತಿದ್ದರು. ಮತ್ತು ಕಾಲಮೇಲೆ ಹಾರಿಯುನ್ನಿಟ್ಟು ಅರೆಯುತ್ತಿದ್ದರು. ಈ ಪ್ರಕಾರ ಎಷ್ಟ ದಿವಸ ಹಿಂಸಿಸಿದರೂ ಅವರ ಬಾಯಿಂದ ಏನೂ ಹೊರಡಲಿಲ್ಲ. ವಿಶೇಷವಾಗಿ "ವಡವಿ ಮಾಸ್ತರರು ಎಲ್ಲಿದ್ದಾರೆಂಬುದು ನಿನಗೆ ಗೊತ್ತಿದೆ ಅವರ ವಿಳಾಸ ಹೇಳು. ನಿನ್ನನ್ನು ಹೊರಗೆ ಬಿಡುತ್ತೇವೆ. ಅವರ ಸಂಪರ್ಕ ಬೆಳಿಸಿಕೊಂಡು ಅವರನ್ನು ನಮಗೆ ತೋರಿಸಿಕೊಡು" ಎಂದು ಮುಂತಾಗಿ ಕೇಳಿ ಅವರನ್ನು ಹಿಂಸಿಸುತ್ತಿದ್ದರು. ಆದರೆ ಅವರ ಬಾಯಿಂದ ಯಾವ ಮಾಹಿತಿಯೂ ಹೊರಬೀಳಲಿಲ್ಲ.

ಸೂಳೇಭಾವಿ ಸ್ಟೇಶನ್ ಖಟ್ಲೆ ಮತ್ತು ಆರೋಪಿಗಳ ಬಿಡುಗಡೆ

ಈ ಆಂದೋಲನದ ಕಾಲದಲ್ಲಿ ಪೋಲೀಸರು ತಮಗೆ ಬೇಡವಾದವರನ್ನೂ ಎಷ್ಟೋ ಜನ ಶ್ರೀಮಂತರನ್ನೂ ಬಂಧಿಸಿ ಅವರಿಂದ ಹಣ ತೆಗೆದುಕೊಂಡು ಬಿಡುಗಡೆ ಮಾಡುತ್ತಿದ್ದರು. ಅದಕ್ಕಾಗಿ ತಮಗೆ ಬೇಡವಾದವರ ಹೆಸರನ್ನು ಹೇಳಿರೆಂದು ಕಾರ್ಯ ಕರ್ತರನ್ನು ಹೊಡೆಯುತ್ತಿದ್ದರು. ಈ ರೀತಿ ಕಾರ್ಯಕರ್ತರಿಗೆ ಅನೇಕ ರೀತಿಯಿಂದ ಪೋಲೀಸರು ಹಿಂಸೆಕೊಡುತ್ತಿದ್ದರು.

ಶ್ರೀ ಬಿ. ಆರ್. ಪಾಟೀಲರು ಧಾರವಾಡದಲ್ಲಿ ಪೋಲೀಸರ ಕೈಗೆ ಸಿಕ್ಕಮೇಲೆ ಅವರನ್ನು ಬಂಧಿಸಿ ಬೆಳಗಾಂವಿಗೆ ತಂದು ಹಿಂಡಲಗಿ ಜೇಲಿನಲ್ಲಿಟ್ಟರು. ಸೂಳೇಭಾವಿ ಸ್ಟೇಶನ ಸುಟ್ಟವರ ಮೇಲೆ ಖಟ್ಲೆ ಹಾಕಲಾಯಿತು. ಸ್ಟೇಶನ ಸುಡಲಿಕ್ಕೆ ಹೋದವರು ೨೦ ಜನ ಮಾತ್ರ. ಆದರೆ ೩೫ ಜನರ ಮೇಲೆ ಖಟ್ಲೆ ಹಾಕಲಾಯಿತು. ಆರೋಪಿತರು ತಮ್ಮ ಪರವಾಗಿ ವಕೀಲರನ್ನು ಕೊಟ್ಟಿದ್ದರು. ಖಟ್ಲೆ ಒಟ್ಟು ೯ ತಿಂಗಳು ನಡೆಯಿತು. ಈ ಅವಧಿಯಲ್ಲಿ ಎಲ್ಲ ಆರೋಪಿಗಳನ್ನು ಹಿಂಡಲಗಿ ಜೇಲಿನಲ್ಲಿಯೇ ಇಟ್ಟಿದ್ದರು. ಜ್ಯೂರಿಗಳು ಒಮ್ಮತದಿಂದ ಎಲ್ಲ ಆರೋಪಿಗಳು ನಿರ್ದೋಷಿಗಳೆಂದು ಹೇಳಿದರು. ಅದರಿಂದ ನ್ಯಾಯಾಧೀಶರಿಗೆ ಏನೂ ಮಾಡಲಿಕ್ಕೆ ಬಾರದಂತಾಯಿತು. ಎಲ್ಲರನ್ನೂ ನಿರ್ದೋಷಿಗಳೆಂದು ಬಿಟ್ಟುಬಿಟ್ಟರು.

ನನ್ನ ಬಂಧನ

೧೯೪೪ ನೇ ಇಸ್ವಿ ಮೇ ತಿಂಗಳಲ್ಲಿ ಗಾಂಧೀಜಿಯವರ ಬಿಡುಗಡೆಯಾಗಿತ್ತು. ಅವರು ತಮ್ಮ ನಿಲುವೆಯನ್ನು ಸ್ಪಷ್ಟಪಡಿಸಿದ್ದರು. ಪೂಜ್ಯ ದಿವಾಕರರು ಅವರನ್ನು ಗುಪ್ತವಾಗಿ ಭೆಟ್ಟಿಯಾದಾಗ ಭೂಗತರೆಲ್ಲ ಕೂಡಲೇ ಹಾಜರಾಗಬೇಕೆಂದು ಗಾಂಧೀಜಿ ಆಜ್ಞೆವಿಧಿಸಿದರು. ಆದರೆ ಆದಿನವಿನ್ನೂ ಗೊತ್ತಾಗಿರಲಿಲ್ಲ. ಈ ಕಾಲದಲ್ಲಿ ನಾನು ಬೆಳಗಾಂವಿಯಲ್ಲಿ ಫುಲಬಾಗಗಲ್ಲಿಯಲ್ಲಿ ಅಸುಂಡಿಯವರ ಮನೆಯ ಹಿಂದಿನ ಕೋಣೆ ಯಲ್ಲಿದ್ದೆ. ಈ ವರೆಗೆ ನನ್ನ ಸಹವರ್ತಿ ಕಾರ್ಯಕರ್ತರು ಬಹುತೇಕ ಎಲ್ಲರೂ ಬಂಧಿಸಲ್ಪಟ್ಟಿ ದ್ದರು. ನಾನೊಬ್ಬನೇ ಹೊರಗಿದ್ದೆ. ನನ್ನ ಸಹಾಯಕ್ಕೆ ಶ್ರೀ ಶಂಕರ ಗ್ರಾಮೋಪಾ-ಧ್ಯಾಯ ಹಾಗೂ ಶ್ರೀ ಶಂಕರ ಕಣಗಲಿ ಎಂಬ ಕಾರ್ಯಕರ್ತರಿದ್ದರು. ಈ ಸಮಯ ನಾನು ಜ್ವರ ಹಾಗೂ ಅಮಾಂಶದಿಂದ ಬಳಲುತ್ತಿದ್ದೆ. ಆದರೂ ಇಲ್ಲಿ ಇರತೊಡಗಿ ೧೦-೧೫ ದಿವಸಗಳಾದುದರಿಂದ ಸ್ಥಳ ಬದಲಾಯಿಸಬೇಕೆಂದು ನನ್ನ ಸಹಾಯಕರಿಗೆ ಹೇಳಿದ್ದೆ. ಅಂದು ರಾತ್ರಿ ಆ ಸ್ಥಳ ಬಿಡುವುದೂ ಗೊತ್ತಾಗಿತ್ತು. ಆದರೆ ಅಂದೇ ಸಾಯಂಕಾಲ ೫ ಗಂಟೆಯ ಸಮಯಕ್ಕೆ ಫಂಟಿ ಫೌಜದಾರರು ೮-೧೦ ಜನ ಪೋಲೀಸ ರನ್ನು ಕರೆದುಕೊಂಡು ಬಂದು ನನ್ನ ಕೋಣೆಗೆ ಮುತ್ತಿಗೆ ಹಾಕಿದರು. ನಾನು ಕೋಣೆಯ ಬಾಗಿಲನ್ನು ಮುಂದೆ ಮಾಡಿಕೊಂಡು ಶೌಚಕೂಪಕ್ಕೆ ಹೋಗಿದ್ದೆ. ಕೋಣೆಯಲ್ಲಿ ನಾನಿಲ್ಲ ದಿರುವದನ್ನು ನೋಡಿ ಅವರು ನಾನು ಮತ್ತೆ ಎಲ್ಲಿ ತಪ್ಪಿಸಿಕೊಂಡೆನೊ ಎಂದು ಗಾಬರಿ ಯಾದರು. ಪೋಲೀಸರು ಅಲ್ಲಿಯೇ ಕುಳಿತ ಆ ಮನೆಯ ಹೆಣ್ಣುಮಕ್ಕಳನ್ನು ನನ್ನ ಬಗೆಗೆ ಕೇಳತೊಡಗಿದರು. ನನ್ನ ಚಟುವಟಿಕೆಗಳನ್ನರಿಯದ ಅವರು ಗಾಬರಿಯಾಗಿ ನಾನು ಶೌಚಕೂಪಕ್ಕೆ ಹೋಗಿರುವೆನೆಂದು ಹೇಳಿದರು. ಪೋಲೀಸರು ಕೂಡಲೆ ಬಂದು ಶೌಚಕೂಪದ ಬಾಗಿಲವನ್ನು ಬಡಿಯುತೊಡಗಿದರು. ನಾನು ಹೊರಗೆ ಬಂದ ಕೂಡಲೆ ಫಂಟಿಫೌಜದಾರ ಹಾಗೂ ಇನ್ನೊಬ್ಬ ಪೋಲೀಸ ಬಲವಾಗಿ ನನ್ನ ಎರಡೂ ರಟ್ಟೆಗಳನ್ನು ಹಿಡಿದರು. ಅವರೊಂದಿಗೆ ನಾನು ಕೋಣೆಗೆ ಬಂದು ನನ್ನ ಸಾಮಾನುಗಳನ್ನು ತೆಗೆದು

ಕೊಂಡು ಅವರೊಂದಿಗೆ ಹೊರಟೆ. ಒಂದೆರಡು ದಿವಸ ನನ್ನನ್ನು ಲಾಕಪ್ಪಿನಲ್ಲಿ ಇಟ್ಟು ಅನಂತರ ಜೇಲಿಗೆ ಕರೆದುಕೊಂಡು ಹೋದರು.

ನನ್ನ ಮೇಲೆ ಖಟ್ಲೆ

ನಾನು ಒಂದೆರಡು ತಿಂಗಳು ಡೆಟಿನ್ಯೂಯೆಂದು ಇದ್ದೆ. ನನ್ನನ್ನು ಕೊನೆಯ ವರೆಗೆ ಡೆಟಿನ್ಯೂಯೆಂದು ಇಡಬಹುದು. ಇಲ್ಲವೆ ಯಾವುದಾದರೊಂದು ದೊಡ್ಡ ಖಟ್ಲೆ ಹಾಕಿ ನಾಲ್ಕಾರು ವರ್ಷ ಶಿಕ್ಷೆ ಕೊಡಬಹುದೆಂದು ನಾನು ತಿಳಿದಿದ್ದೆ. ನನ್ನ ಸಹೋದ್ಯೋಗಿಗಳೂ ಅದೇರೀತಿ ತಿಳಿದಿದ್ದರು. ಆದರೆ ನನ್ನಮೇಲೆ ಪ್ರಭಾತಫೇರಿಯ ಖಟ್ಲೆ ಹಾಕಿದರು. ನಿಜವಾಗಿ ನಾನು ಪ್ರಭಾತಫೇರಿಯಲ್ಲಿ ಭಾಗವನ್ನೇ ವಹಿಸಿರಲಿಲ್ಲ. ಆದರೂ ಈ ಖಟ್ಲೆಹಾಕಿ ನನಗೆ ನಾಲ್ಕು ತಿಂಗಳ ಶಿಕ್ಷೆ ವಿಧಿಸಿದರು. ಇಷ್ಟೊಂದು ಕೆಲಸಮಾಡಿ ಕೊನೆಗೆ ನಾಲ್ಕೇ ತಿಂಗಳು ಶಿಕ್ಷೆಯಾದುದಕ್ಕೆ ಎಲ್ಲರಿಗೂ ಆಶ್ಚರ್ಯವಾಯಿತು.

ಜೇಲಿನಿಂದ ಕೋರ್ಟಿಗೆ ಹೋಗಿಬರುವದು

ನನ್ನ ಮೇಲಿನ ಖಟ್ಲೆ ಅತಿ ಸಾಮಾನ್ಯ ಖಟ್ಲೆಯಾಗಿತ್ತು. ಆದರೂ ಖಟ್ಲೆಯ ನಿರ್ಣಯ ಬೇಗ ಆಗಲಿಲ್ಲ. ಕೋರ್ಟಿನ ಮುದ್ದತ್ತಿಗಾಗಿ ನನ್ನನ್ನು ಜೇಲಿನಿಂದ ಕೋರ್ಟಿಗೆ ಅನೇಕಸಲ ಕರೆದುಕೊಂಡು ಹೋಗುತ್ತಿದ್ದರು. ನನ್ನನ್ನು ಕೋರ್ಟಿಗೆ ಕರೆದುಕೊಂಡು ಹೋಗುವಾಗ ಕೈಗೆ ಬೇಡಿ ಹಾಕಿ ರಟ್ಟೆಗೆ ಹಗ್ಗ ಕಟ್ಟುತ್ತಿದ್ದರು. ಇದನ್ನು ಪ್ರತಿಭಟಿಸಿ ಕೈಗೆ ಹಾಕಿದ ಬೇಡಿಗಳನ್ನು ತೆಗೆದು ರಟ್ಟೆಗೆ ಕಟ್ಟಿದ ಹಗ್ಗಗಳನ್ನು ಉಚ್ಚದೆ ನಾನು ಮೋಟರ ಹತ್ತುವದಿಲ್ಲ ಅಥವಾ ಮೋಟರಿನಿಂದ ಕೆಳಗೆ ಇಳಿಯುವದಿಲ್ಲವೆಂದು ಖಂಡಿತ ಹೇಳಿದ್ದೆ. ಆಗ ಪೋಲೀಸರು ನನ್ನನ್ನೆತ್ತಿ ಮೋಟರಿನಲ್ಲಿ ಹಾಕುತ್ತಿದ್ದರು. ಮೋಟರದೊಳಗಿಂದ ಇಳಿದು ಮ್ಯಾಜಿಸ್ಟ್ರೇಟರ ಮುಂದೆ ಹೋಗುವಾಗ ಸಹ ಇದೇರೀತಿ ನನ್ನನ್ನು ಹೊತ್ತುಕೊಂಡು ಹೋಗುತ್ತಿದ್ದರು. ಈ ಸುದ್ದಿ ಹಿಂಡಲಗಿ ಜೇಲಿನಲ್ಲೂ ಮತ್ತು ಬೆಳಗಾಂವಿ ಊರಲ್ಲಿಯೂ ಹಬ್ಬಿತು. ನನ್ನ ಖಟ್ಲೆಯ ಮುದ್ದತ್ತು ಇದ್ದ ದಿವಸ ಈ ದೃಶ್ಯ ನೋಡುವದಕ್ಕಾಗಿ ಬೆಳಗಾಂವಿಯ ಅನೇಕ ಜನರು ಕೋರ್ಟಿಗೆ ಬರುತ್ತಿದ್ದರು.

ನನ್ನ ಬಿಡುಗಡೆ ಹಾಗೂ ಮುಂದಿನ ಕಾರ್ಯ

೧೯೪೪ರಲ್ಲಿ ನನ್ನ ಬಿಡುಗಡೆಯಾಯಿತು. ಈ ಮೊದಲೇ ಸರಕಾರ ಗಾಂಧೀಜಿ ಹಾಗೂ ವರ್ಕಿಂಗ ಕಮೀಟಿಯ ಎಲ್ಲ ಸದಸ್ಯರನ್ನೂ ಬಿಡುಗಡೆ ಮಾಡಿತ್ತು. ಬ್ರಿಟಿಷ ಸರಕಾರದೊಂದಿಗೆ ಸಂಧಾನದ ಮಾತುಕತೆ ನಡೆದಿದ್ದವು. ಪುಂಡಲೀಕಜಿ ಹಾಗೂ ಇತರ ನನ್ನ ಸಹಕಾರಿಗಳ ಬಿಡುಗಡೆಯಾಗಿ ಅವರು ಮತ್ತೆ ಕಾರ್ಯೋನ್ಮುಖರಾಗಿದ್ದರು. ಚರಖಾ ಸಂಘದ ಹೊಸ ಯೋಜನೆಯಂತೆ ಪುಂಡಲೀಕಜೀಯವರು ಹುದಲಿಯಲ್ಲಿ ಸಮಗ್ರ

ಗ್ರಾಮಸೇವಾ ಸಮಿತಿಯನ್ನು ಸ್ಥಾಪಿಸಿ ಅದರ ಮುಖಾಂತರ ಖಾದಿಯ ಕೆಲಸ ಪ್ರಾರಂಭಿಸಿದ್ದರು. ನನ್ನ ಬಿಡುಗಡೆಯಾದ ಮೇಲೆ ನಾನು ಮುಂದೆ ಏನು ಮಾಡಬೇಕೆಂಬ ಪ್ರಶ್ನೆ ನನ್ನ ಮುಂದೆ ಉಪಸ್ಥಿತವಾಯಿತು. ಹುದಲಿಯಲ್ಲಿಯೇ ನಿಂತು ವಿಧಾಯಕ ಕೆಲಸ ಮಾಡುತ್ತ ಹೋಗಬೇಕೇ ? ಅಥವಾ ಬೇರೆ ಏನಾದರೂ ಕೆಲಸ ಮಾಡಬೇಕೇ ?–ಎಂಬ ಪ್ರಶ್ನೆ ನನ್ನ ಮುಂದೆ ಬಂತು. ಅದೇ ಹೊತ್ತಿಗೆ ಕರ್ನಾಟಕ ಚರಖಾಸಂಘದ ಕಾರ್ಯದರ್ಶಿಯೆಂದು ನನ್ನ ಹೆಸರು ಸೂಚಿಸಲಾಗಿತ್ತು. ನಾನು ಅದನ್ನು ಸ್ವೀಕರಿಸಬೇಕೋ ಸ್ವೀಕರಿಸಬಾರದೋ ಎಂಬ ಬಗೆಗೆ ಬಹಳ ಚರ್ಚೆ ನಡೆಯಿತು. ಕೊನೆಗೆ ಅದನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಲಾಯಿತು. ನನ್ನ ಒಪ್ಪಿಗೆಯನ್ನು ನಾನು ಬಾಪೂಜಿಯವರಿಗೆ ಬರೆದು ತಿಳಿಸಿದೆನು. ಆಗ ವೆಂಕಟರಾಮಯ್ಯನವರು ಕಾರ್ಯದರ್ಶಿ ಇದ್ದರು. ಅವರ ಸ್ಥಳದಲ್ಲಿ ನನ್ನ ನಿಯುಕ್ತಿಯಾಯಿತು.

ಅಹಿಂಸಾ ಅಚ್ಛೀತರಹಸೇ ಸೀಖಾ

ನನ್ನ ಬಿಡುಗಡೆಯಾದ ಸ್ವಲ್ಪ ದಿನಗಳ ನಂತರ ನಾನು ವರ್ಧಾಕ್ಕೆ ಹೋಗಿದ್ದೆ. ಅಲ್ಲಿ ಒಂದು ದಿವಸ ಪೂಜ್ಯ ಕಿಶೋರಲಾಲಜಿಯವರನ್ನು ಭೆಟ್ಟಿಯಾಗಿ ಮಾತನಾಡುತ್ತ ಕುಳಿತಿದ್ದೆ. ಬಹಳ ದಿವಸಗಳನಂತರ ಭೆಟ್ಟಿಯಾದುದರಿಂದ ಅವರು ನನ್ನ ಯೋಗಕ್ಷೇಮ ಕೇಳಿ ಅಂದೋಲನದ ಕಾಲದಲ್ಲಿ ನಾನು ಏನೇನು ಮಾಡಿದೆನೆಂದು ವಿಚಾರಿಸಿದರು. ಪೂಜ್ಯ ಕಿಶೋರಲಾಲಜಿಯವರು ತಮ್ಮ ಹರಿಜನದಲ್ಲಿಯ ಲೇಖನದಿಂದ ಪ್ರಭಾವಿತರಾಗಿ ಎಷ್ಟು ಜನ ಗಾಂಧೀವಾದಿಗಳು ವಿಧ್ವಂಸಕ ಕೃತಿಗಳಿಗೆ ತೊಡಗಿದ್ದರೆಂಬುದನ್ನು ಅರಿತುಕೊಳ್ಳುತ್ತಿದ್ದರು. ಅದರಿಂದ ಅವರ ಭೆಟ್ಟಿಗೆ ಬಂದ ಗಾಂಧೀವಾದಿಗಳಿಗೆಲ್ಲ ಈ ಪ್ರಶ್ನೆ ಮಾಡಿ ಅವರಿಂದ ಮಾಹಿತಿ ತಿಳಿದುಕೊಳ್ಳುತ್ತಿದ್ದರು. ನಾನು, ನಾವು ಮಾಡಿದ ವಿಧ್ವಂಸಕ ಕೃತಿಗಳನ್ನೆಲ್ಲ ಅವರಿಗೆ ವಿವರಿಸಿದೆ. ಅವರು ಎಲ್ಲವನ್ನೂ ನಗುನಗುತ್ತ ಕೇಳುತ್ತ ಕುಳಿತಿದ್ದರು. ಸಾಯಂಕಾಲ ೫ ಗಂಟೆಯಾಗಿರಬಹುದು; ಗಾಂಧೀಜಿ ತಿರುಗಾಡಲಿಕ್ಕೆ ಹೊರಬಿದ್ದರು. ಕಿಶೋರಲಾಲಜಿಯವರು ಅವರನ್ನು ನೋಡಿದ ಕೂಡಲೆ "ನೀವು ಇದನ್ನೆಲ್ಲ ಗಾಂಧೀಜಿಗೆ ಹೇಳಿದಿರಾ"? ಎಂದು ಕೇಳಿದರು ನಾನು "ಇಲ್ಲ" ಎಂದೆ. "ಹಾಗಾದರೆ ಹೋಗಿ ಹೇಳಿ" ಎಂದರು. ಅಷ್ಟರಲ್ಲಿ ಗಾಂಧೀಜಿಯವರು ಮನೆಯ ಹತ್ತಿರವೇ ಬಂದರು. ಕಿಶೋರಲಾಲಜಿಯವರು ಗಾಂಧೀಜಿಗೆ "ರಾಮಚಂದ್ರಜಿ ನಿಮ್ಮ ಸಂಗಡ ಮಾತನಾಡಬೇಕೆನ್ನುತ್ತಾರೆ" ಎಂದರು. ಅವರು ಕೂಡಲೆ "ಚಲೋ ರಾಮಚಂದ್ರ" ಅಂದರು. ನಾನು ಅವರ ಜತೆಯಲ್ಲಿಯೇ ಹೊರಟೆ. ಅವರು ನನ್ನ ಯೋಗಕ್ಷೇಮ ವಿಚಾರಿಸಿ, "ಅಂದೋಲನದ ಕಾಲಕ್ಕೆ ನೀನು ಏನೇನು ಮಾಡಿದೆ ?"–ಎಂದು ತಾವಾಗಿಯೇ ಪ್ರಶ್ನೆ ಎತ್ತಿದರು. ನನಗೂ ಅದನ್ನೇ ಹೇಳುವುದಿದೆ. ಎಂದು ಅವರೆದುರು ನಾನು ಮಾಡಿದುದನ್ನೆಲ್ಲ ಸಂಕ್ಷಿಪ್ತವಾಗಿ ಹೇಳಿದೆ. ಅದನ್ನೆಲ್ಲ ಕೇಳಿ ಅವರು ನಗುತ್ತಾ ನನ್ನ ಕುತ್ತಿಗೆಯ ಮೇಲೆ ಮೆಲ್ಲಗೆ ಚಪ್ಪರಿಸಿ "ನೀನು ಆಶ್ರಮದಲ್ಲಿದ್ದು ಅಹಿಂಸೆಯನ್ನು ಚೆನ್ನಾಗಿ ಕಲಿತೆ"

ಎಂದರು. ಪೂಜ್ಯ ಕಿಶೋರಲಾಲಜಿ, ಪೂಜ್ಯ ಕಾಕಾಸಾಹೇಬರು ಹರಿಜನದಲ್ಲಿ ಬರೆದುದರಿಂದ ನಾನು ಇದರಲ್ಲಿ ತೊಡಗಿದೆ. ಎಂದೆ. ಅದಕ್ಕೆ ಅವರು "ಹೌದು ಅವರ ಲೇಖನಗಳು ಅನೇಕರನ್ನು ಈ ದಾರಿಗೆ ಒಯ್ದಿವೆ" ಎಂದು ನುಡಿದರು. ಈಗ ಹೆಚ್ಚಿನ ವಾದ ವಿವಾದಕ್ಕೆ ಆಸ್ಪದವೇ ಇರಲಿಲ್ಲ. ಗಾಂಧೀಜಿ ತಮ್ಮ ನಿಲುಮೆಯನ್ನು ಆಗಲೇ ಸ್ಪಷ್ಟಪಡಿಸಿದ್ದರು. ಪೂಜ್ಯ ಕಿಶೋರಲಾಲಜಿಯವರು ತಮ್ಮ ವಿಷಾದ ವ್ಯಕ್ತಮಾಡಿದ್ದರು. ನಾನು ಅಂದು ಪ್ರಾರ್ಥನೆ ಮುಗಿಸಿಕೊಂಡು ಗಾಂಧೀಜಿಗೆ ನಮಸ್ಕಾರ ಮಾಡಿ ಮರುದಿನ ಊರಿಗೆ ಬಂದೆನು. ಅದೇ ಗಾಂಧೀಜಿಯವರ ಕೊನೆಯ ಸ್ಪರ್ಶ. ಕೊನೆಯ ದರ್ಶನ.

ಓಂ ಶಾಂತಿಃ ಶಾಂತಿಃ ಶಾಂತಿಃ

೧೯೩೦–೩೨ ನೇ ಇಸ್ವಿ ಆಂದೋಲನದ ಕಾಲಕ್ಕೆ ನಡೆದ

ಮಹತ್ವಪೂರ್ಣ ಹಾಗೂ ಸ್ವಾರಸ್ಯಮಯ ರೋಮಾಂಚಕಾರಿ ಘಟನೆಗಳು

(೧೯೩೦ ಹಾಗೂ ೧೯೩೨ ನೇ ಇಸ್ವಿ ಆಂದೋಲನಗಳ ಕಾಲಕ್ಕೆ ಅನೇಕ ಮಹತ್ವಪೂರ್ಣ ಮತ್ತು ಸ್ವಾರಸ್ಯಪೂರ್ಣ ಘಟನೆಗಳು ಜರುಗಿದವು. ವಾಚಕರ ಅವಗಾಹನೆಗಾಗಿ ಅವುಗಳಲ್ಲಿ ಕೆಲವೊಂದನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಈ ಆಂದೋಲನಗಳ ಹಿನ್ನೆಲೆ ತಿಳಿಯದೇ ಈ ಘಟನೆಗಳ ಸರಿಯಾದ ಅರ್ಥ ಆಗದೆಂದು ಆ ಕಾಲದ, ಮುಖ್ಯವಾಗಿ ೧೯೩೨ ನೇ ಇಸ್ವಿಯ ಆಂದೋಲನದ ಹಿನ್ನೆಲೆಯನ್ನು ಇಲ್ಲಿ ಕೊಡಲಾಗಿದೆ.)

೧೯೩೨ ನೇ ಇಸ್ವಿಯ ಆಂದೋಲನ ಪ್ರಾರಂಭವಾದ ಬಗೆ ಎಂತು

೧೯೩೦ ನೇ ಇಸ್ವಿಯ ಉಪ್ಪಿನ ಸತ್ಯಾಗ್ರಹದಲ್ಲಿ ಸರಕಾರದ ಪರಾಭವವಾಯಿತು. ಆಗಿನ ವ್ಹಾಯಿಸರಾಯರಾದ ಲಾರ್ಡ ಆಯರ್ವಿನ್‌ರು ಕಾಂಗ್ರೆಸ್ಸು ಮತ್ತು ಮಹಾತ್ಮಾ ಗಾಂಧಿಯವರೊಂದಿಗೆ ಒಪ್ಪಂದ ಮಾಡಿಕೊಂಡರು. ಲಂಡನ್ನಿನಲ್ಲಿ ದುಂಡು ಮೇಜಿನ ಪರಿಷತ್ತನ್ನು ಕರೆದು ಅದರಲ್ಲಿ ಭಾರತಕ್ಕೆ ಸ್ವರಾಜ್ಯ ಕೊಡುವ ಬಗ್ಗೆ ವಿಚಾರ ವಿನಿಮಯ ಮಾಡಬೇಕೆಂದು ಗೊತ್ತಾಯಿತು. ಆದರೆ ಇದು ಲಂಡನ್ನಿನಲ್ಲಿಯ ಬ್ರಿಟೀಶ ಸರಕಾರಕ್ಕೂ ಆಗ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರಿಗೂ ಮನಸ್ಸಿಗೆ ಬರಲಿಲ್ಲ. ಭಾರತದ ಫಕೀರ (ಮಹಾತ್ಮಾ ಗಾಂಧಿ) ನೊಂದಿಗೆ ಬ್ರಿಟೀಶ ಸಾಮ್ರಾಜ್ಯಶಾಹಿಯು ಒಪ್ಪಂದಮಾಡಿಕೊಳ್ಳುವದೆಂದರೇನು ? ಬ್ರಿಟೀಶ್ ಸಾಮ್ರಾಜ್ಯಶಾಹಿಗೆ ಇದು ದೊಡ್ಡ ಅಪಮಾನವೆಂದು ತಿಳಿದರು. ಹೇಗಾದರೂ ಮಾಡಿ ಇದರ ಸೇಡನ್ನು ತೀರಿಸಿಕೊಳ್ಳಬೇಕೆಂದು ಅವರು ಯೋಚಿಸಿದರು.

ದುಂಡುಮೇಜಿನ ಪರಿಷತ್ತು ಸೇರಿತು. ಕಾಂಗ್ರೆಸ್ಸಿನ ಪರವಾಗಿ ಗಾಂಧೀಜಿಯವರೊಬ್ಬರೇ ಏಕಮೇವ ಪ್ರತಿನಿಧಿಯಾಗಿ ಆ ಪರಿಷತ್ತಿನಲ್ಲಿ ಭಾಗವಹಿಸಿದ್ದರು.

ಗಾಂಧೀಜಿಗೆ ಸ್ವರಾಜ್ಯದ ತಿರುಳನ್ನು ಕೊಡಿರೆಂದು ಕೇಳಿದರು. ಬ್ರಿಟೀಶ ಸರಕಾರವು ಸ್ವರಾಜ್ಯದ ಬರಡು ಕೊಡಲು ಮುಂದೆ ಬಂದಿತು. ಯಾವ ಸಿರ್ಧಾರಕ್ಕೆ ಬಾರದೇ ದುಂಡುಮೇಜು ಪರಿಷತ್ತು ಸಮಾಪ್ತಗೊಂಡಿತು. ಗಾಂಧೀಜಿಯವರು ಬರಿಗೈಯಿಂದ ಭಾರತಕ್ಕೆ ಹಿಂದಿರುಗಿ ಬಂದರು.

ಗಾಂಧೀಜಿಯವರನ್ನು ಸ್ವಾಗತಿಸಲು ಎಲ್ಲ ಪ್ರಾಂತಗಳಿಂದಲೂ ಕಾಂಗ್ರೆಸ್ ಮುಖಂಡರು ಮುಂಬೈಗೆ ಬಂದಿದ್ದರು. ಸಾಮ್ರಾಜ್ಯಾಧಿಪತಿಗೂ ಆಗದ ಗೌರವ ಸತ್ಕಾರ ಮತ್ತು ರಾಜ–ವೈಭವದ ಮೆರವಣಿಗೆಗಳು ಗಾಂಧೀಜಿಗೆ ಆದವು. ಮೂರು ದಿನಗಳವರೆಗೆ ಗಾಂಧೀಜಿ ಪ್ರಾಂತೀಯ ಮುಖಂಡರೊಡನೆ ಚರ್ಚೆ ನಡೆಸಿ ದೇಶದ ರಾಜ ಕೀಯ ಪರಿಸ್ಥಿತಿಯನ್ನು ಅರಿತುಕೊಂಡರು.

ಗಾಂಧಿ–ಆಯರ್ವಿನ್ ಒಪ್ಪಂದದ ಕಾಲಕ್ಕೆ ಶೆರೆ ಸಿಂದಿ ಅಂಗಡಿ ಪಿಕೆಟಿಂಗು, ಪರದೇಶಿ ಬಟ್ಟೆ ಅಂಗಡಿಗಳ ನಿರೋಧನ ಮುಂತಾದವುಗಳನ್ನು ಶಾಂತರೀತಿಯಿಂದ ಮಾಡಬಹುದೆಂದು ಗೊತ್ತಾಗಿತ್ತು. ಆದರೆ ದುಂಡುಮೇಜು ಪರಿಷತ್ತಿನ ನಾಟಕ ಮಾಡಿ ಈ ಕಾಲಕ್ಕೆ ತಮ್ಮ ಯುದ್ಧದ ಸಿದ್ಧತೆ ಮಾಡಿಕೊಂಡು ಕಾಂಗ್ರೆಸ್ಸಿನ ವಿರುದ್ಧ ಮತ್ತೆ ಯುದ್ಧ ಸಾರಿ ಅದನ್ನು ನಾಮಶೇಷ ಮಾಡಬೇಕೆಂದು ಟೋರಿ ಸರಕಾರ ನಿಶ್ಚಯಿಸಿತ್ತು. ಆ ಪ್ರಕಾರ ಇಂಗ್ಲಂಡದಲ್ಲಿ ದುಂಡುಮೇಜಿನ ಪರಿಷತ್ತು ನಡೆದಾಗಲೇ ಹಿಂದುಸ್ಥಾನದಲ್ಲಿ ಮತ್ತೆ ದಬ್ಬಾಳಿಕೆ ಪ್ರಾರಂಭವಾಯಿತು. ಗಡಿನಾಡ ಪ್ರಾಂತ, ಉತ್ತರ ಪ್ರದೇಶ ಹಾಗೂ ಬಂಗಾಲಗಳಲ್ಲಿ ಹೊಸ ಹೊಸ ರಾಜಾಜ್ಞೆಗಳನ್ನು ಹೊರಡಿಸಲಾಯಿತು. ಗಡಿನಾಡಿನಲ್ಲಿ ಖಾನ ಅಬ್ದುಲ್ ಗಫಾರಖಾನರನ್ನು ಬಂಧಿಸಲಾಯಿತು. ಅನೇಕ ಕಡೆಗೆ ಗೋಳಿಬಾರ ಆದವು. ಆ ಗೋಳಿಬಾರಿನಲ್ಲಿ ಅನೇಕರು ಗುಂಡಿಗೆ ಬಲಿಯಾದರು. ಜವಾಹರಲಾಲ ನೆಹರೂರನ್ನು ಬಂಧಿಸಲಾಯಿತು. ಬಂಗಾಲದಲ್ಲಿ ಯುದ್ಧ ಕಾಲದಲ್ಲಿಯೂ ಬರದಂಥ ಉಗ್ರವಾದ ರಾಜಾಜ್ಞೆ ಹೊರಡಿಸಿ ದಬ್ಬಾಳಿಕೆ ನಡಿಸಿತು. ಈ ರಾಜಾಜ್ಞೆಯ ಪ್ರಕಾರ ಯಾವದೇ ಮನೆಯನ್ನು ಯಾವದೇ ಕಾಲಕ್ಕೆ ಪೂರ್ವಸೂಚನೆ ಇಲ್ಲದೇ ವಶಪಡಿಸಿ ಕೊಳ್ಳುವ ಅಧಿಕಾರ ಮ್ಯಾಜಿಸ್ಟ್ರೇಟರಿಗೆ ಕೊಡಲಾಗಿತ್ತು. ಬೇಕಾದವರನ್ನು ವಾರಂಟ ಇಲ್ಲದೇ ಬಂಧಿಸಿ ದಿವಸೆರಡು ದಿವಸ ಬಂಧನದಲ್ಲಿಡುವ ಅಧಿಕಾರ ಪೋಲೀಸರಿಗೆ ಕೊಡಲಾಗಿತ್ತು.

ಇದೆಲ್ಲವನ್ನು ಕೇಳಿ ಗಾಂಧೀಜಿಯವರಿಗೆ ಕೆಡುಕೆನಿಸಿತು. ಅವರು ಎಲ್ಲ ಪರಿಸ್ಥಿತಿ ಯನ್ನು ಉಲ್ಲೇಖಿಸಿ ವ್ಹಾಯಿಸರಾಯರಿಗೆ ಪತ್ರ ಬರೆದರು. ಕಾಂಗ್ರೆಸ್ ವರ್ಕಿಂಗ ಕಮಿಟಿ ಕೂಡಿತು. ಅದು ಸಹ ದೇಶದೊಳಗೆ ನಡೆದ ದಬ್ಬಾಳಿಕೆಯನ್ನು ಉಲ್ಲೇಖಿಸಿ ಕೂಡಲೇ ದಬ್ಬಾಳಿಕೆ ನಿಲ್ಲದಿದ್ದರೆ ಸರಕಾರ ಗಾಂಧಿ ಆಯರ್ವಿನ್‌ರ ಒಪ್ಪಂದವನ್ನು ಮುರಿದು ಕಾಂಗ್ರೆಸ್ಸನ್ನು ಮತ್ತೆ ಯುದ್ಧಕ್ಕೆ ಆವ್ಹಾನಿಸುತ್ತದೆ ಎಂದು ಭಾವಿಸುತ್ತದೆ.

ಮತ್ತು ಹೋರಾಟ ಪ್ರಾರಂಭವಾದರೆ ಈ ಹೊಣೆ ಸರಕಾರದ್ದೇ ಎಂದು ತಿಳಿಯ ಲಾಗುವದು ಎಂಬಾಶಯದ ಠರಾವು ಪಾಸು ಮಾಡಿ ಅದನ್ನು ವ್ಹಾಯಿಸರಾಯರಿಗೆ ಕಳಿಸಿತು.

ಇದಕ್ಕೆ ಉತ್ತರವೆಂಬಂತೆ ಜನವರಿ ನಾಲ್ಕನೆಯ ತಾರೀಖಿನ ದಿವಸ ಬೆಳಿಗ್ಗೆ ಗಾಂಧೀಯವರನ್ನು ಮತ್ತು ಕಾಂಗ್ರೆಸ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲ ರನ್ನೂ ಬಂಧಿಸಿತು. ಎಲ್ಲ ಪ್ರಾಂತಗಳಲ್ಲಿ ಏಕಕಾಲಕ್ಕೆ ಕಾಂಗ್ರೆಸ್ ಮುಖಂಡರನ್ನೂ ಕಾರ್ಯಕರ್ತರನ್ನೂ ಬಂಧಿಸಿ ಸರಕಾರ ಆಕ್ರಮಶೀಲ ಯುದ್ಧ ಸಾರಿತು.

ಹೊಸ ರಾಜಾಜ್ಞೆಯ ಪ್ರಕಾರ ಎಲ್ಲ ಕಾಂಗ್ರೆಸ ಕಮೀಟಿ, ಆಶ್ರಮ, ರಾಷ್ಟ್ರೀಯ ಶಾಲೆ, ಹಾಗೂ ರಾಷ್ಟ್ರೀಯ ಸಂಸ್ಥೆಗಳು ಆಕ್ರಮವೆಂದು ಘೋಷಿಸಿತು. ಕರ್ನಾಟಕದಲ್ಲಿ ಕುಮರಿ ಆಶ್ರಮ (ಬೆಳಗಾವಿ ಜಿಲ್ಹಾ) ಜಪ್ತಮಾಡಿ ಸರಕಾರ ಅದನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಸರದಾರ ವಲ್ಲಭಭಾಯಿ ಪಟೇಲರು ತಮ್ಮ ಬಂಧನವಾಗಬಹುದೆಂದು ಮೊದಲೇ ಊಹಿಸಿದ್ದರು. ಆದುದರಿಂದ ತಮ್ಮ ತರುವಾಯ ಕಾಂಗ್ರೆಸ ಅಧ್ಯಕ್ಷರ ಸ್ಥಳ ಬರಿದು ಬೀಳಬಾರದೆಂದು ಮತ್ತು ಒಬ್ಬರನ್ನು ಬಂಧಿಸಿದರೆ ಅವರ ಸ್ಥಾನದಲ್ಲಿ ಮತ್ತೊಬ್ಬರು ಬರಬೇಕೆಂದು ಗೊತ್ತುಮಾಡಿದ್ದರು. ಈ ಸ್ಥಳಕ್ಕೆ ಯಾರು ಯಾರು ಬರಬೇಕೆಂಬುದರ ಹೆಸರಿನ ಪಟ್ಟಿಯನ್ನು ಮಾಡಿಟ್ಟಿದ್ದರು. ಅವರಲ್ಲಿ ಗು. ಗಂಗಾಧರರಾಯರು ಕೆಲವೊಂದು ದಿವಸ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು.

ಸರಕಾರದ ಆವ್ಹಾನ ಸ್ವೀಕರಿಸಿ ಕಾಂಗ್ರೆಸ್ಸು ಯುದ್ಧಕ್ಕೆ ಸಿದ್ಧವಾಯಿತು. ಸರಕಾರದ ಬಂಧನದ ಕಾಲಕ್ಕೆ ಅನೇಕ ಕಾಂಗ್ರೆಸ ಮುಖಂಡರೂ, ಕಾರ್ಯಕರ್ತರೂ ತಲೆ ಮರೆಸಿಕೊಂಡು ಕಾಂಗ್ರೆಸ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಸಭೆ ಮೆರವಣಿಗೆಗಳು ಪ್ರಾರಂಭವಾದವು. ಶೆರೆ ಸೇಂದಿ ಅಂಗಡಿ, ಹಾಗೂ ಪರದೇಶಿ ಬಟ್ಟೆ ಅಂಗಡಿಗಳ ನಿರೋಧನ ನಡೆದವು. ರಾಜಾಜ್ಞೆಯ ಪ್ರಕಾರ ಇವೆಲ್ಲ ಪ್ರತಿಬಂಧಿಸಲ್ಪಟ್ಟಿದ್ದವು. ಅದರಂತೆಯೇ ಕಾಂಗ್ರೆಸ್ಸಿನ ಯಾವದೇ ಸುದ್ದಿಯನ್ನು ಮುದ್ರಿಸಬಾರದೆಂದು ಆಜ್ಞೆ ವಿಧಿಸಲಾಗಿತ್ತು. ಅದರಿಂದ ಗುಪ್ತ ಹಸ್ತಪತ್ರಿಕೆ (ಬುಲಿಟಿನ್) ತೆಗೆಯುವದು ಪ್ರಾರಂಭವಾಯಿತು. ಅದರಲ್ಲಿ ದೇಶದಲ್ಲಿ ನಡೆದ ಕಾಂಗ್ರೆಸ ಚಟುವಟಿಕೆಗಳನ್ನು ಮತ್ತು ಕಾಂಗ್ರೆಸ ಕಾರ್ಯಕರ್ತರು ಮುಂದೆ ಮಾಡಬೇಕಾದ ಕಾರ್ಯಕ್ರಮಗಳನ್ನು ಕೊಡಲಾಗುತ್ತಿತ್ತು. ನ್ಯಾಶನಲ್ ಪೋಸ್ಟಲ್ ಸರ್ವೀಸ ಪ್ರಾರಂಭವಾಯಿತು. ಸರಕಾರದವರು ವಶಪಡಿಸಿ ಕೊಂಡ ಆಶ್ರಮಗಳನ್ನು ದಾಳಿಮಾಡಿ (Raid) ತಿರುಗಿ ವಶಪಡಿಸಿಕೊಳ್ಳುವದೂ ಕಾರ್ಯಕ್ರಮದಲ್ಲಿ ಒಂದಾಗಿತ್ತು. ಕುಮರಿ ಆಶ್ರಮವನ್ನು ಹೇಗೆ ವಶಪಡಿಸಿಕೊಳ್ಳಲಾಯಿತು ಎಂಬುದನ್ನು ಮುಂದೆ ನೋಡಬಹುದು.

ಕಾಂಗ್ರೆಸ ಅಧಿವೇಶನ, ಪ್ರಾಂತೀಯ ಪರಿಷತ್ತು, ಜಿಲ್ಲಾ ಮಟ್ಟದ ಪರಿಷತ್ತುಗಳನ್ನು ಕೂಡಿಸುವದು ಕಾಂಗ್ರೆಸ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಪೋಲೀಸರು ಇವು ಕೂಡದಂತೆ ಮುಂಜಾಗ್ರತೆ ವಹಿಸುತ್ತಿದ್ದರು. ಒಂದು ಸಲ ದಿಲ್ಲಿ ಚಾಂದನೀಚೌಕದಲ್ಲಿ ಕಾಂಗ್ರೆಸ ಅಧಿವೇಶನ ಕೂಡುವದೆಂದು ಜಾಹೀರ ಮಾಡಲಾಗಿತ್ತು. ಈ ಅಧಿವೇಶನಕ್ಕೆ ಪಂಡಿತ ಮದನಮೋಹನ ಮಾಳವಿಯಾ ನಿಯೋಜಿತ ಅಧ್ಯಕ್ಷರಾಗಿದ್ದರು. ಕಾಂಗ್ರೆಸ ಮುಖಂಡರಲ್ಲಿ ಹೊರಗಿದ್ದವರೆಂದರೆ ಅವರೊಬ್ಬರೇ. ಕಾಂಗ್ರೆಸ್ಸಿನ ಅಧ್ಯಕ್ಷತೆ ವಹಿಸಲು ಅವರು ಹೊರಟಾಗ ಅವರನ್ನು ಹಾದಿಯಲ್ಲಿಯೇ ಬಂಧಿಸಿದರು. ಅಧಿವೇಶನಕ್ಕೆ ಬೇರೆ ಬೇರೆ ಪ್ರಾಂತಗಳಿಂದ ಬರುವ ಪ್ರತಿನಿಧಿಗಳನ್ನೂ ಕಾರ್ಯಕರ್ತರನ್ನೂ, ದಾರಿಯಲ್ಲಿಯೇ ಬಂಧಿಸಿದರು. ಆದರೂ ಅಧಿವೇಶನ ಅಹಮದಾಬಾದಿನ ಶ್ರೀ ರಣಛೋಡದಾಸ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪೋಲೀಸ ಕಾವಲಿದ್ದರೂ ಅದನ್ನು ತಪ್ಪಿಸಿಕೊಂಡು ೫೦೦ ಪ್ರತಿನಿಧಿಗಳು ಈ ಅಧಿವೇಶನಕ್ಕೆ ಬಂದಿದ್ದರು. ಹೆಚ್ಚು ಜನ ಪೋಲೀಸರು ಬಂದು ಪ್ರತಿನಿಧಿಗಳನ್ನು ಚದುರಿಸುವ ಪೂರ್ವದಲ್ಲಿ ನಾಲ್ಕೈದು ಠರಾವು ಪಾಸು ಮಾಡಿ ಕಾಂಗ್ರೆಸ ಕಾರ್ಯಕಲಾಪಗಳನ್ನು ಮುಗಿಸಿದ್ದರು. ಈ ಅಧಿವೇಶನಕ್ಕೆ ಕರ್ನಾಟಕದಿಂದ ಪ್ರತಿನಿಧಿಯಾಗಿ ಶ್ರೀ ಬಾ. ಯ. ದೇಶಪಾಂಡೆಯವರು ಗುಪ್ತರೀತಿಯಿಂದ ಹೋಗಿ ಬಂದರೆಂದು ನನಗೆ ಜ್ಞಾಪಕ.

೧೯೩೨ನೇ ಇಸ್ವಿ ಆಂದೋಲನದ ವೈಶಿಷ್ಟ್ಯವೆಂದರೆ ಮಿತಿಮೀರಿ ಲಾಠಿಚಾರ್ಜ. ಇಂಗ್ಲಂಡದಲ್ಲಿ ದುಂಡುಮೇಜಿನ ಪರಿಷತ್ತು ನಡೆದಾಗ ಇಲ್ಲಿಯ ಸರಕಾರ, ಕಾಂಗ್ರೆಸ್ಸಿನೊಂದಿಗೆ ಭಾವಿ ಯುದ್ಧದ ಸಿದ್ಧತೆಗಾಗಿ ಲಕ್ಷಾವಧಿ ಲಾಠಿ ಖರೀದಿ ಮಾಡುವದರಲ್ಲಿ ತೊಡಗಿತ್ತಂತೆ ! ಜನರು ಜೇಲಿಗೆ ಅಂಜದೇ ನಾಮುಂದೆ, ನೀಮುಂದೆ ಎಂದು ಸತ್ಯಾಗ್ರಹಕ್ಕೆ ಬರುತ್ತಿದ್ದರು. ಜೇಲುಗಳೆಲ್ಲ ತುಂಬಿದವು. ಹೊಸಹೊಸ ಕ್ಯಾಂಪಗಳನ್ನು ತಯಾರಿಸಿದರು. ಅವು ಸಹ ಸಾಲದಾದವು. ಅದ್ದರಿಂದ ಸರಕಾರ ಲಾಠಿ ಚಾರ್ಜಮಾಡಿ ಜನರನ್ನು ಬಿಟ್ಟುಬಿಡುತ್ತಿತ್ತು. ಕೆಲವು ಪ್ರಮುಖ ಕಾರ್ಯಕರ್ತರನ್ನಷ್ಟೆ ಹಿಡಿದು ಜೇಲಿನಲ್ಲಿ ಇಡುತ್ತಿತ್ತು. ಇಷ್ಟಾದರೂ ಆ ಕಾಲಕ್ಕೆ ಒಂದು ಲಕ್ಷಕ್ಕೆ ಕಡಿಮೆ ಇಲ್ಲದಷ್ಟು ಜನ ಜೇಲಿನಲ್ಲಿದ್ದರು.

೧೯೩೨ನೇ ಇಸ್ವಿ ಆಂದೋಲನದ ಪ್ರಾರಂಭದಲ್ಲಿ ನನ್ನ ಸಹಕಾರಿಗಳಿಗೆಲ್ಲ ಒಂದು ವರ್ಷ, ಎರಡು ವರ್ಷ ಶಿಕ್ಷೆಯಾಯಿತು. ಆದರೆ ನನಗೆ ಮಾತ್ರ ನಾಲ್ಕೇ ತಿಂಗಳು ಶಿಕ್ಷೆಯಾಯಿತು. ಆದುದರಿಂದ ನನ್ನ ಬಿಡುಗಡೆಯು ಬೇಗನೆ ಆಯಿತು. ನಾನು ಜೇಲಿನಿಂದ ಬಿಡುಗಡೆಯಾಗಿ ಬಂದಾಗ ಕಾಂಗ್ರೆಸ ಮುಖಂಡರು ಯಾರೂ ಹೊರಗೆ ಇರಲಿಲ್ಲ. ಶ್ರೀ ಕೃಷ್ಣರಾವ ಯಾಳಗಿಯವರು ಮಾತ್ರ ಹೊರಗಿದ್ದರು. ಶ್ರೀ ಕೃಷ್ಣರಾಯರು ತಮ್ಮ ಸರಾಫ ಅಂಗಡಿಯಲ್ಲಿ ಕುಳಿತೇ ಎಲ್ಲ ಕಾಂಗ್ರೆಸ್ಸಿಗರಿಗೆ ಸಹಾಯ ಮಾಡುತ್ತಿದ್ದರು. ಸಲಹೆಗಳನ್ನು ಕೊಡುತ್ತಿದ್ದರು. ಆದರೆ ಅವರು ಫೇದಪೀಠಿಕೆಯ ಮೇಲೆ

ಹೋಗಿ ಎಂದೂ ಭಾಷಣ ಮಾಡುತ್ತಿರಲಿಲ್ಲ. ಆದುದರಿಂದ ಪೋಲೀಸರ ಕಣ್ಣು ಅವರ ಮೇಲೆ ಬಿದ್ದಿರಲಿಲ್ಲ.

ನಾನು ಮುಂದೇನು ಮಾಡಬೇಕೆಂಬ ಬಗ್ಗೆ ವಿಚಾರಿಸಿದೆ. ಅದಕ್ಕೆ ಶ್ರೀ ಯಾಳಗಿ ಯವರು ಹೀಗೆ ಹೇಳಿದರು : "ನೀವು ಯಾವುದಾದರೂ ಕಾರ್ಯಕ್ರಮ ಮಾಡಿ ಜೇಲಿನಲ್ಲಿ ಹೋಗಿ ಕೂಡಬಹುದು. ಆದರೆ ಚಳುವಳಿ ಈಗಾಗಲೇ ತಣ್ಣಗಾಗುತ್ತ ಬಂದಿದೆ. ಕಾರ್ಯಕರ್ತರು ಯಾರೂ ಹೊರಗಿಲ್ಲ. ನೀವೂ ಹೋಗಿಬಿಟ್ಟರೆ ಚಳುವಳಿ ಪೂರ್ತಿ ನಿಂತಂತೆಯೆ ಆಗುತ್ತದೆ. ಆದ್ದರಿಂದ ಹೊರಗಿದ್ದು ಸಂಘಟನೆಮಾಡಿ ಕಾಂಗ್ರೆಸ ಕಾರ್ಯ ಕ್ರಮಗಳನ್ನು ಮುಂದುವರಿಸುತ್ತಾ ಹೋಗುವದು ನೆಟ್ಟಗೆ. ಹೀಗೆ ಕೆಲಸ ಮಾಡುವಾಗ ನೀವು ಬಂಧಿಸಲ್ಪಟ್ಟರೆ ಆಗ ಜೇಲಿಗೆ ಹೋಗಿರಿ. ನೀವಾಗಿಯೇ ಕಾರ್ಯಕ್ರಮ ಮಾಡಿ ಹೋಗುವದು ಬೇಡ," ಅದು ನನಗೂ ಸರಿ ಎನಿಸಿತು. ನಾನು ಹೊರಗೆ ನಿಂತು ಕೆಲಸ ಮಾಡಹತ್ತಿದೆ. ಸ್ವಲ್ಪ ದಿನಗಳಲ್ಲಿ ನನ್ನಮೇಲೆ ವಾರಂಟ ಹೊರಟಿತು. ಆದುದರಿಂದ ನಾನು ದೀರ್ಘಕಾಲ ಗುಪ್ತವಾಗಿದ್ದೇ ಕೆಲಸ ಮಾಡಬೇಕಾಯಿತು. ಆ ಕಾಲಕ್ಕೆ ಅನೇಕ ಮಹತ್ವದ ಮತ್ತು ಸ್ವಾರಸ್ಯಮಯವಾದ ಘಟನೆಗಳು ಸಂಭವಿಸಿದವು. ಅವುಗಳಲ್ಲಿ ಕೆಲ ವೊಂದನ್ನು ಮಾತ್ರ ಇಲ್ಲಿ ಕೊಡಲಾಗಿದೆ.

೧. ದೊಡ್ಡ ನಮಸ್ಕಾರ Good gracious ! (೧೯೩೦)

ನನ್ನನ್ನು 'ಬಿ' ಕ್ಲಾಸಿನಿಂದ 'ಸಿ' ಕ್ಲಾಸಿಗೆ ತಂದಂತೆ, ಇನ್ನೂ ಅನೇಕ ಜನರನ್ನು 'ಸಿ' ಕ್ಲಾಸಿಗೆ ತಂದರು. ಅವರಲ್ಲಿ ನನ್ನ ಮಿತ್ರರಾದ ಶ್ರೀ ಪುಂಡಲೀಕಜಿ, ವಾಮನರಾವ ದೇಸಾಯಿ, ಬಾ. ಯ. ದೇಶಪಾಂಡೆ (ಅಣ್ಣೂ ಗುರೂಜಿ) ಮೊದಲಾದವರು ಇದ್ದರು. ಅವರನ್ನು ನಾನಿದ್ದ ಬರಾಕಿಗೇ ತಂದು, ಅವರಿಗೂ ಜಮಖಾನೆ ನೇಯುವ ಕೆಲಸವನ್ನೇ ಕೊಟ್ಟರು.

ಜೇಲ್ ಸುಪರಿಂಟೆಂಡೆಂಟರು ಒಂದು ನಿಯಮ ಮಾಡಿದ್ದರು. 'ಒಂದೇ ಊರ ರಾಜಕೀಯ ಕೈದಿಗಳನ್ನು ಒಂದೇ ಬರಾಕಿನಲ್ಲಿ ಇಡಬಾರದು. ಮತ್ತು ಅವರಿಗೆ ಒಂದೇ ಕೆಲಸವನ್ನು ಕೊಡಬಾರದು' ಎಂದು. ನಾಲ್ಕು ಜನರನ್ನೂ ಒಂದೇ ಬರಾಕಿನಲ್ಲಿಟ್ಟು ಎಲ್ಲರಿಗೂ ಒಂದೇ ಕೆಲಸವನ್ನು ಕೊಟ್ಟಿದ್ದರು. ಅದರ ಕಾರಣವೆಂದರೆ ನಮ್ಮ 'ಹಿಸ್ಟ್ರಿ ಪುಸ್ತಕ'ದಲ್ಲಿ ನಮ್ಮ ಊರುಗಳ ಹೆಸರುಗಳು ಬೇರೆಬೇರೆ ಯಾಗಿದ್ದವು. ನನ್ನ ಊರು ವಡವಿ, ಪುಂಡಲೀಕಜಿಯವರದು ಮಿರಜಿ, ಅಣ್ಣೂಗುರೂಜಿ ಯವರದು ಹಾಚ್ಛಾಪುರ, ವಾಮನರಾಯರದು ಬಿದರಿ ಎಂದು. ಆದರೆ ನಾವೆಲ್ಲರೂ ಒಂದೇ ಕಡೆಯಲ್ಲಿದ್ದು, ಒಂದೇ ಧ್ಯೇಯಕ್ಕಾಗಿ ದುಡಿಯುತ್ತಿದ್ದೇವೆ ಎಂಬುದು ಜೇಲ್ ಅಧಿಕಾರಿಗಳಿಗೆ ಏನು ಗೊತ್ತು ? ಈರೀತಿ ಒಂದೆರಡು ತಿಂಗಳು ನಮ್ಮನ್ನು ಒಟ್ಟಿಗೆ

ಇಟ್ಟಿದ್ದರು. ನಾಲ್ಕೂ ಜನರಿಗೆ ಕೂಡಿ ಒಂದೇ ಜಮಖಾನೆಯನ್ನು ನೇಯಲು ಒಂದೇ ಮಗ್ಗ ಕೊಟ್ಟಿದ್ದರು. ನಾವು ಜಮಖಾನೆ ನೇಯಲಿಕ್ಕೆ ಹೋದಾಗ, ಆ ಕೆಲಸವನ್ನೇನೂ ಮಾಡುತ್ತಿರಲಿಲ್ಲ. ಪುಂಡಲೀಕಜೀಯವರು ನಮಗೆ ಗೀತಾರಹಸ್ಯ ಹೇಳುತ್ತಿದ್ದರು. ನಾವು ಅದನ್ನು ಕೇಳುತ್ತಿದ್ದೆವು. ಅಲ್ಲದೆ ಬೇರೆ ರಾಜಕೀಯ ಹಾಗೂ ಸಾಮಾಜಿಕ ಮಾತುಗಳಲ್ಲಿ ಹೊತ್ತು ಕಳೆಯುತ್ತಿದ್ದೆವು. ಜೇಲ್ ಸುಪರಿಂಟೆಂಡೆಂಟರಾದ ಪ್ಲ್ಯಾಂಕೆಟ ಅವರು ಮೇಲಿಂದಮೇಲೆ ತಪಾಸಣೆಗೆ ಬರುತ್ತಿದ್ದರು. ಆದರೆ ಅವರು ನಮ್ಮ ಕಡೆಗೆ ಬಂದಾಗ ನಮ್ಮ ಕೆಲಸವನ್ನು ನೋಡಿರಲಿಲ್ಲ. ಒಂದುಸಲ ಅವರು ಬಂದ ದಿವಸ ಯಾರೋ ಒಬ್ಬರು ಒಂದು ಮೇಣದ ಚೋಳು ಮಾಡಿ ನಮ್ಮ ಮಗ್ಗದ ಹತ್ತಿರ ಗೋಡೆಗೆ ಅದನ್ನು ಅಂಟಿಸಿದ್ದರು. ಚೇಳನ್ನು ಚನ್ನಾಗಿ ಮಾಡಿದ್ದರು. ಅದು ನಿಜ ವಾದ ಚೇಳಿನಂತೆಯೇ ಕಾಣುತ್ತಿತ್ತು. ಪ್ಲಾಂಕೆಟ್‌ರ ದೃಷ್ಟಿ ಆ ಚೇಳಿನ ಕಡೆಗೆ ಹೋಯಿತು. ಕೂಡಲೇ ಅವರು ತಮ್ಮ ಕೈಯೊಳಗಿನ ಬಡಿಗೆಯಿಂದ ಅದನ್ನು ಹೊಡೆದರು. ಆದರೆ ಅದು ಚೇಳಿಗೆ ಬಡಿಯದೆ ಅದರ ಪಕ್ಕದಲ್ಲಿ ಗೋಡೆಗೆ ತಾಕಿತು. ಮೇಣದ ಚೇಳು ಕೆಳಗೆ ಬಿದ್ದಿತು. ಅವರು ಅದನ್ನು ನೋಡತೊಡಗಿದರು. ಪುಂಡಲೀಕಜಿಯವರು 'ಅದು ನಿಜವಾದ ಚೇಳಲ್ಲ. ಮೇಣದಿಂದ ಮಾಡಿದ್ದು' ಎಂದು ಹೇಳಿದರು.

ಅವರು ಅದರ ಕಡೆಗೆ ನೋಡುವುದನ್ನು ಬಿಟ್ಟು, ನಮ್ಮ ಮಗ್ಗದ ಕಡೆಗೆ ಹೊರಳಿದರು. "ಎಷ್ಟು ನೇಯ್ದಿರುವಿರಿ" ಎಂದು ಅವರು ಪುಂಡಲೀಕಜಿಯವರನ್ನು ಕೇಳಿದರು. "ಮೂರು ಇಂಚು ಆಗಿದೆ" ಎಂದು ಅವರು ತಿಳಿಸಿದರು. 'ಈಗಾಗಲೇ ಒಂದು ಜಮಖಾನೆಯನ್ನು ನೇಯ್ದಿರುವಿರಾ' ಎಂದು ಪ್ಲ್ಯಾಂಕೆಟ್ ಪುನಃ ವಿಚಾರಿಸಿದರು. 'ಇಲ್ಲ, ಇದೇ ಮೊದಲನೆಯದು' ಎಂದರು ಪುಂಡಲೀಕಜಿ. ಈ ಉತ್ತರವನ್ನು ಕೇಳಿ ಪ್ಲಾಂಕೆಟ್‌ರು ಮತ್ತೆ ಕೇಳಿದರು : "ಎಷ್ಟು ದಿನಗಳಿಂದ ಇದನ್ನು ನೇಯುತ್ತಿದ್ದೀರಿ?" 'ಸುಮಾರು ಎರಡು ತಿಂಗಳುಗಳಿಂದ' ಎಂದು ಪುಂಡಲೀಕಜಿ ಉತ್ತರ ಕೊಟ್ಟರು. ಈ ಮಾತು ಕೇಳಿ ಪ್ಲ್ಯಾಂಕೆಟ್‌ರು ನಮ್ಮೆಲ್ಲರಿಗೂ Good gracious ದೇವಡ್ಡ ನಮಸ್ಕಾರ!" ಎಂದರು. 'ನೀವೆಲ್ಲರೂ ಯಾವಯಾವ ಊರಿನವರು ?' ಎಂದು ಪ್ರಶ್ನಿಸಿದರು. ಅದಕ್ಕೆ 'ನಾವೆಲ್ಲರೂ ಬೇರೆಬೇರೆ ಊರವರಾದರೂ ಹೊರಗೆ ನಾವೆಲ್ಲರೂ ಕೂಡಿಯೇ ಇರು ತ್ತೇವೆ; ಕೂಡಿಯೇ ಕೆಲಸ ಮಾಡುತ್ತೇವೆ' ಎಂದು ಹೇಳಿದೆವು. ಇಷ್ಟೆಲ್ಲವನ್ನು ಕೇಳಿ ಕೊಂಡು ಸುಪರಿಂಟೆಂಡೆಂಟರು ಅಲ್ಲಿಂದ ಹೊರಟುಹೋದರು.

ಸಾಯಂಕಾಲದ ಹೊತ್ತಿಗೆ ನಾವು ನಾಲ್ವರನ್ನೂ ಬೇರೆಬೇರೆ ಬರಾಕುಗಳಿಗೆ ಒಯ್ದು ಇಟ್ಟರು. ಕೆಲಸಗಳನ್ನು ಸಹ ಬೇರೆ ಬೇರೆಯಾಗಿಯೇ ಕೊಟ್ಟರು. ಅದರಿಂದ ನಮ್ಮ ಗೀತಾರಹಸ್ಯದ ಅಭ್ಯಾಸ ಅಲ್ಲಿಗೇ ನಿಂತುಬಿಟ್ಟಿತು.

೨. ರಾಮಚಂದ್ರ ವಡವಿ ರಾಮಭಟ್ಟನಾದುದು (೧೯೩೦)

ನಾನು ಸೆರೆಮನೆಯಿಂದ ಬಿಡುಗಡೆಯಾಗಿ ಹೊರಗೆ ಬಂದೆನು. ಆಗ ಗು. ಗಂಗಾಧರರಾಯರೂ ಬಿಡುಗಡೆ ಹೊಂದಿ ಬಂದಿದ್ದರು. ಅವರು ಮುಂದೆ "ಏನು ಮಾಡುತ್ತೀರಿ ?" ಎಂದು ವಿಚಾರಿಸಿದರು. 'ನೀವು ಹೇಳಿದ್ದನ್ನು ಮಾಡುತ್ತೇನೆ' ಎಂದು ಹೇಳಿದೆ.

'ಅಂಕೋಲೆಯ ಕರನಿರಾಕರಣೆಯ ಆಂದೋಲನ ನಡೆಸಲು ಕಾರ್ಯಕರ್ತರು ಬೇಕಾಗಿದ್ದಾರಂತೆ. ನೀವು ಅಲ್ಲಿಗೆ ಹೋಗುತ್ತೀರಾ ?' ಎಂದು ಕೇಳಿದರು. ಆಗ ನಾನು 'ಆಗಲಿ' ಎಂದು ಅವರಿಗೆ ಹೇಳಿದೆ. ಅವರ ಆದೇಶದಂತೆ ಅಂಕೋಲೆಗೆ ಬಂದೆ. ಅಲ್ಲಿ ಶ್ರೀ ದ. ಪ. ಕರಮರಕರರು ಅಧಿನಾಯಕರಾಗಿ ಕೆಲಸ ಮಾಡುತ್ತಿದ್ದರು. ಅವರು ನನಗೆ ಸುರ್ವೆ ಭಾಗದಲ್ಲಿ ಕೆಲಸ ಮಾಡಲು ಹೇಳಿದರು. ನಾನು ಸುರ್ವೆ ಊರಲ್ಲಿ ಶ್ರೀ ನಾರಾಯಣ ನಾಯಕರ ಮನೆಯಲ್ಲಿ ಇರತೊಡಗಿದೆ. ನಾರಾಯಣ ನಾಯಕರು ಅಲ್ಲಿಯ ಪ್ರತಿಷ್ಠಿತ ಗೃಹಸ್ಥರು. ಸರಕಾರಿ ನವಕರರಿಗೂ ಅವರ ಬಗ್ಗೆ ಆದರವಿತ್ತು. ನಾನು ಅಲ್ಲಿದ್ದುಕೊಂಡು ಒಂದೆರಡು ತಿಂಗಳು ಕೆಲಸ ಮಾಡಿರಬಹುದು. ಅಲ್ಲಿ ಪೋಲೀಸರ ಹಾವಳಿ ಹೆಚ್ಚಾಯಿತು.

ಘಟ್ಟದ ಮೇಲಿನ ಜನರಿಂದಲೇ ಈ ಚಳುವಳಿ ನಡೆದಿದೆ ಎಂದು ಸರಕಾರದ ಕಲ್ಪನೆಯಾಗಿತ್ತು. ಅದು ಕೆಲಮಟ್ಟಿಗೆ ಸರಿಯಾಗಿತ್ತು. ಆದುದರಿಂದ ಘಟ್ಟದ ಮೇಲಿನ ಜನರು ಯಾರಾದರೂ ಅಲ್ಲಿ ಬಂದರೆ ಅಥವಾ ಹೊಸ ಮುಖ ಕಂಡರೆ ಪೋಲೀಸರು ಅವರನ್ನು ಬಂಧಿಸಿಕೊಂಡು ಹೋಗುತ್ತಿದ್ದರು. ಊರವರು ಪೋಲೀಸರು ಬಂದಕೂಡಲೇ ನಮ್ಮನ್ನು ಅಡಗಿಸಿ ಇಡುತ್ತಿದ್ದರು. ಒಂದು ದಿನ ನಾನು ಪೋಲೀಸರ ಕೈಯಲ್ಲಿ ಸಿಕ್ಕೆ. ಅವರು ನನ್ನನ್ನು ಕರೆದುಕೊಂಡು ಹೊರಟರು. ಈ ಸುದ್ದಿ ನಾರಾಯಣ ನಾಯಕರಿಗೆ ತಿಳಿಯಿತು. ಕೂಡಲೇ ಅವರು ಪೋಲೀಸರ ಹತ್ತಿರ ಬಂದು "ಈತನನ್ನು ಏಕೆ ಹಿಡಿದಿದ್ದೀರಿ ? ಈತನು ನಮ್ಮ ಮನೆಯ ದೇವರ ಪೂಜೆಯನ್ನು ಮಾಡಲು ಬಂದಿದ್ದಾನೆ. ಈತನು ಘಟ್ಟದ ಮೇಲಿನ ಹೆಗಡೆ ರಾಮಭಟ್ಟ. ಅವರ ತಂದೆಯವರು ಕಾಯಿಲೆ ಬಿದ್ದುದರಿಂದ ಈ ಹುಡುಗನನ್ನು ಕಳುಹಿಸಿ ಕೊಟ್ಟಿದ್ದಾರೆ." ಎಂದು ಹೇಳಿದರು.

ಆಗ ಪೋಲೀಸರು ಶ್ರೀ ನಾಯಕರ ಮಾತನ್ನು ಕೇಳಿ ನಾನು ರಾಮಭಟ್ಟನೇ ಎಂದು ನಂಬಿ, ನನ್ನನ್ನು ಬಿಡುಗಡೆ ಮಾಡಿದರು. ಅಂದಿನಿಂದ ನನ್ನನ್ನು ಎಲ್ಲರೂ 'ರಾಮಭಟ್ಟರೇ' ಎಂದು ಕರೆಯತೊಡಗಿದರು. ಪೋಲೀಸರ ಕಾಟದಿಂದ ನಾನು ಮುಕ್ತನಾದೆ.

ಮುಂದೆ ಕೆಲವೇ ದಿನಗಳಲ್ಲಿ ಗಾಂಧೀ ಆಯರ್ವಿನ್ ಒಪ್ಪಂದವಾಯಿತು. ಕರನಿರಾಕರಣೆ ಆಂದೋಲನವೂ ನಿಂತಿತು. ಈ ಆಂದೋಲನದ ಕಾರ್ಯಕರ್ತರೆಲ್ಲರೂ ತಮ್ಮ ತಮ್ಮ ಊರುಗಳಿಗೆ ಹೋಗತೊಡಗಿದರು. ಅದರಂತೆ ನಾನೂ ನಮ್ಮ ಊರಿಗೆ ಮರಳಿದೆನು.

ಶ್ರೀಮತಿ ಕೃಷ್ಣಾಬಾಯಿ ಪಣಜೀಕರ ಅವರಿಗೆ ಪೋಲೀಸರಿಂದ ಆದ ಅವಮಾನ

ಗಂಗಪ್ಪ ಯಮಕನಮರ್ಡಿಯವರಿಗೆ ಹೊಡೆತ (೧೯೩೦)

ಇದು ೧೯೩೦ ನೆಯ ಇಸ್ವಿಯ ಮಾತು. ಗಾಂಧೀಜಿಯವರು ಬ್ರಿಟಿಶ್ ಸಾಮ್ರಾಜ್ಯಶಾಹಿ ವಿರುದ್ಧ ಉಪ್ಪಿನ ಸತ್ಯಾಗ್ರಹ ಹೂಡಿ, ಇಡೀ ಜಗತ್ತನ್ನೇ ಆಶ್ಚರ್ಯ ಚಕಿತ ಮಾಡಿದ್ದರು. ಭರತಖಂಡದಲ್ಲೆಲ್ಲ ನೂರಾರು ವರುಷಗಳಿಂದ ಸುಪ್ತವಾಗಿ ಮಲಗಿದ್ದ ಜನತೆ ಚೇತರಿಸಿಕೊಂಡು ಎದ್ದು, ಎಲ್ಲಿ ನೋಡಿದಲ್ಲಿ ಬ್ರಿಟಿಶ್ ಸರಕಾರದ ವಿರುದ್ಧ ಸತ್ಯಾಗ್ರಹವನ್ನು ಪ್ರಾರಂಭಿಸಿತ್ತು. ಪೋಲೀಸರ ಹಾಗೂ ಬ್ರಿಟಿಶ್ ಸರಕಾರದ ಭಯ ಮಾಯವಾಗಿತ್ತು. ಜೇಲುಗಳೆಲ್ಲ ತುಂಬಿ ಹೋಗಿದ್ದವು. ಬೆಳಗಾವಿ ಜಿಲ್ಹೆಯಲ್ಲಿ ಗು. ಗಂಗಾಧರರಾವ ದೇಶಪಾಂಡೆ ಹಾಗೂ ಶ್ರೀ ಜೋಶಿ ನಾರಾಯಣರಾಯರು ಉಪ್ಪಿನ ಸತ್ಯಾಗ್ರಹ ಮಾಡಿ ಜೇಲಿಗೆ ಹೋಗಿದ್ದರು. ಜಿಲ್ಹೆಯಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ಪ್ರಚಾರ ಮಾಡುವದಕ್ಕಾಗಿ ಕೆಲವು ಗುಂಪುಗಳನ್ನು ಮಾಡಿ, ಬೇರೆ ಬೇರೆ ತಾಲೂಕುಗಳಿಗೆ ಕಳಿಸಲಾಗಿತ್ತು. ನಾನೂ ಸಹ ನಾಯಕನಾಗಿ ಗೋಕಾಕ ತಾಲೂಕಿನಲ್ಲಿ ಪ್ರಚಾರಕ್ಕಾಗಿ ಹೋಗಿದ್ದೆನು. ನನ್ನ ಜೊತೆಗೆ ಹುದಲಿಯ ೩೦ ಜನ ತರುಣರಿದ್ದರು. ಮುಂದೆ ಗೋಕಾಕ ಹಾಗೂ ಯಾದವಾಡ ಗ್ರಾಮದ ಕೆಲವು ತರುಣರು ಬಂದು ನಮ್ಮನ್ನು ಕೂಡಿಕೊಂಡರು. ನಾವು ಊರು ಊರಿಗೆ ಹೋಗಿ ಭಾಷಣ ಮಾಡುತ್ತಿದ್ದೆವು. ಪ್ರಭಾತಫೇರಿಯನ್ನು ತೆಗೆಯುತ್ತಿದ್ದೆವು. ಹಳ್ಳದ ನೀರು ತಂದು ಸಾಧ್ಯವಿದ್ದಲ್ಲಿ ಬಹಿರಂಗವಾಗಿ ಉಪ್ಪನ್ನು ತಯಾರಿಸುತ್ತಿದ್ದೆವು. ಸಿಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದೆವು.

ಆಗ ಗೋಕಾಕದಲ್ಲಿ ಶ್ರೀ ಗುಡಿ ಎಂಬವರು ಫೌಜದಾರರಿದ್ದರು. ನಾವು ಏನೇ ಮಾಡಿದರೂ ಅವರು ನಮ್ಮನ್ನು ಹಿಡಿಯಲಿಲ್ಲ. ನಮ್ಮ ಸಹಕಾರಿಗಳಲ್ಲಿ ಅನೇಕರು ಜೇಲಿಗೆ ಹೋಗಿದ್ದರಿಂದ ನಾವು ಬೇಗನೆ ಜೇಲಿಗೆ ಹೋಗುವುದಕ್ಕೆ ಆತುರರಾಗಿದ್ದೆವು. ಆದರೆ ಶ್ರೀ ಗುಡಿಯವರು ನಮ್ಮನ್ನು ಹಿಡಿಯದ್ದರಿಂದ ನಿರಾಶರಾಗಿ ನಾವು ತಿರುಗಿ ಹುದಲಿಗೆ ಬಂದೆವು. ಮುಂದೇನು ಮಾಡಬೇಕೆಂಬ ಬಗ್ಗೆ ಯೋಚಿಸತೊಡಗಿದೆವು. ಆಗ ಸಿಂದೀ ಗಿಡಗಳನ್ನು ಕಡಿಯುವ ಕಾರ್ಯಕ್ರಮ ಆರಂಭವಾಗಿದ್ದರಿಂದ ನಾವು ಅದನ್ನು ಮಾಡಬೇಕೆಂದು ನಿಶ್ಚಯಿಸಿದೆವು. ಹುದಲಿಯಿಂದ ನಾಲ್ಕು ಮೈಲುಗಳ ಮೇಲೆ ತಳಹಟ್ಟಿ ಹತ್ತಿರ ಒಂದು ದೊಡ್ಡ ಸಿಂದೀ ಬನವಿದೆ. ಅದನ್ನು ಕಡಿಯಲು ಹೋಗಬೇಕೆಂದು ನಿಶ್ಚಯಿಸಿದೆವು. ಮರುದಿನ ಸೋಮವಾರವಿದ್ದಿತು. ಅಂದು ರೈತರಿಗೆಲ್ಲ ಬಿಡುವು. ಆದ್ದರಿಂದ ಅಂದಿನ ದಿವಸವೇ ಸಿಂದೀಗಿಡ ಕಡಿಯಲು ಹೋಗಬೇಕೆಂದು ಗೊತ್ತುಮಾಡಿ, ಸೋಮವಾರ ಬೆಳಿಗ್ಗೆ ೧೦ ಗಂಟೆಗೆ ಎಲ್ಲರೂ ಊಟಮಾಡಿಕೊಂಡು ಸಿಂದೀಗಿಡ ಕಡಿಯಲು ಬರಬೇಕೆಂದು ಡಂಗುರ ಸಾರಿದೆವು.

ಸೋಮವಾರ ದಿನ ಬೆಳಿಗ್ಗೆ ನೂರಾರು ಜನರು ಊಟಮಾಡಿ ಗಂಗಾಧರ ರಾಯರ ಮನೆಯ ಮುಂದೆ ಸಿಂದೀಗಿಡ ಕಡಿಯಲು ಸಜ್ಜಾಗಿ ಬಂದರು. ಹರಿಜನರು ರಣವಾದ್ಯ ಬಾರಿಸುತ್ತಿದ್ದರು. ಕಪಳೆಯುವನೂ ಬಂದಿದ್ದ. ಎಲ್ಲರಿಗೂ ಒಂದು ಪ್ರಕಾರದ ಉತ್ಸಾಹವೇ ಉತ್ಸಾಹ. ನಾವು ಸ್ವಯಂಸೇವಕರು. ಗಂಗಾಧರರಾಯರ ಮನೆಯಲ್ಲಿ ಊಟಕ್ಕೆ ಕುಳಿತಿದ್ದೆವು. ನಮ್ಮ ಊಟ ಮುಗಿಯುತ್ತ ಬಂದಿತ್ತು. ಊಟ ಮುಗಿದಕೂಡಲೇ ಎಲ್ಲರೂ ಸಿಂದೀಗಿಡ ಕಡಿಯಲು ಹೊರಡುವದಕ್ಕೆ ಸಿದ್ಧರಾಗಿದ್ದರು. ಅಷ್ಟರೊಳಗೆ ಹುದಲಿಯ ಹಿರಿಯರಲ್ಲಿ ಒಬ್ಬರಾದ ಶ್ರೀ ಭಾವೂಸಾಹೇಬ ದೇಶಪಾಂಡೆಯವರು ನನ್ನ ಹತ್ತಿರ ಬಂದು ಶ್ರೀ ಗುಡಿ ಫೌಜದಾರರು ನಿಮ್ಮನ್ನು ಹಿಡಿಯಲಿಕ್ಕೆ ಬಂದಿದ್ದಾರೆ ಎಂದು ಹೇಳಿದರು. ಅದನ್ನು ಕೇಳಿ ನನಗೆ ಸಂತೋಷವಾಯಿತು. ಯಾಕೆಂದರೆ ಹೊರಗಿದ್ದು ಕೆಲಸ ಮಾಡುವದಕ್ಕಿಂತ ಜೇಲಿಗೆ ಹೋಗುವದು ಆಗಿನ ಕಾಲದಲ್ಲಿ ಶೂರತನ ಎಂದೆನಿಸುತ್ತಿತ್ತು. ಈ ಸುದ್ದಿಯನ್ನು ಕೇಳಿ ಜನರು ನಿರುತ್ಸಾಹಿಗಳಾದರು.

ಸಿಂದೀಗಿಡ ಕಡಿಯುವ ಕಾರ್ಯಕ್ರಮವು ತಪ್ಪಿತಲ್ಲ ಎಂದು ಹಳಹಳಿಸಿದರು. ಗುಡಿ ಫೌಜದಾರರು ಬಂದು ನಿಮ್ಮನ್ನು ಅರೆಸ್ಟ ಮಾಡಿದೆ ಎಂದು ಹೇಳಿದರು. ಆಗಲಿ, ನಾನು ಸಿದ್ಧವಾಗಿಯೇ ಇದ್ದೇನೆ–ಎಂದು ಹೇಳಿದೆ. ಆದರೆ ಕೂಡಿದ ಜನರು ಹಾಗೆಯೇ ಎಲ್ಲಿ ಬಿಡುತ್ತಾರೆ ? ಅವರು ಗು. ಗಂಗಾಧರರಾಯರ ಮನೆಯೊಳಗೆ ಹೋದರು. ರಾಯರ ದೊಡ್ಡ ಕುದುರೆಯನ್ನು ಹೊರಕ್ಕೆ ತಂದರು. ನನ್ನನ್ನು ಆ ಕುದುರೆಯಮೇಲೆ ಕುಳ್ಳಿರಿಸಿ ನನ್ನ ಮೆರವಣಿಗೆ ತೆಗೆದರು. ಕೊರಳಿಗೆ ಮಾಲೆಯನ್ನು ಹಾಕಿ, ಹಣೆಗೆ ಕುಂಕುಮವನ್ನು ಹಚ್ಚಿ ಆರತಿ–ಬೆಳಗಿದರು. ಶ್ರೀ ದತ್ತೋಪಂತ ಅಧ್ಯಾಪಕರು ಆ ದಿನ ಹುದಲಿಯಲ್ಲಿಯೇ ಇದ್ದರು.

ಮೆರವಣಿಗೆಯು ಅಂಗಡಿ ಕಟ್ಟೆಗೆ ಬಂದಕೂಡಲೇ ಅಲ್ಲಿ ಒಂದು ಚಿಕ್ಕ ಭಾಷಣ ಮಾಡಿದರು. ನನಗೆ ಭಾಷಣ ಮಾಡಲಿಕ್ಕೆ ಆಗಲಿಲ್ಲ. ಆಗ ನಾನು ನನ್ನ ಕೊರಳೊಳಗಿನ ಮಾಲೆಯನ್ನು ತೆಗೆದು ಅಧ್ಯಾಪಕರ ಕೊರಳಿಗೆ ಹಾಕಿ "ಮುಂದಿನ ಕಾರ್ಯದ ಹೊಣೆ ನಿಮ್ಮದು. ತಾಳಹಟ್ಟಿ ಕಾರ್ಯಕ್ರಮ ಬಿಡಬೇಡಿರಿ" ಎಂದು ಹೇಳಿದೆ. ಎಲ್ಲರೂ ಹರ್ಷೋದ್ಗಾರಗಳಿಂದ ಆ ಕಾರ್ಯ ಮುಂದುವರಿಸುವ ಬಗ್ಗೆ ಆಶ್ವಾಸನ ಕೊಟ್ಟರು. ಹುದಲಿಯ ಊರಿನಿಂದ ರೇಲ್ವೆ ಸ್ಟೇಶನ್ ಒಂದು ಮೈಲು ಆಗುತ್ತದೆ. ಅಲ್ಲಿಯವರೆಗೆ ಜನರು ನನ್ನನ್ನು ಮೆರವಣಿಗೆಯಿಂದಲೇ ಕರೆದುಕೊಂಡು ಹೋದರು. ಮೆರವಣಿಗೆಯಲ್ಲಿ ಸಾವಿರಾರು ಜನ ಕೂಡಿದ್ದರು. ಗುಡಿ ಫೌಜದಾರರು ನಾಲ್ಕೇ ಜನ ಪೋಲೀಸರನ್ನು ಮಾತ್ರ ಕರೆದುಕೊಂಡು ಬಂದಿದ್ದರು. ಅವರು ಬಹಳ ಧೂರ್ತತನದಿಂದ ವರ್ತಿಸಿದರು. ಕೂಡಿದ ಜನರಲ್ಲಿ ಕೆಲವರು ಪೋಲೀಸರ ಕೈಯೊಳಗಿನ ಬಂದೂಕನ್ನು ಕಸಿದುಕೊಂಡರು. ಮತ್ತೆ ಕೆಲವರು ಅವರ ತಲೆಯಮೇಲಿನ ಟೊಪ್ಪಿಗೆ ತೆಗೆದು ಗಾಂಧಿಟೊಪ್ಪಿಗೆ

ಹಾಕಿದರು. ಮತ್ತು ಅವರಿಗೆ ಗಾಂಧೀಕಿ ಜೈ ಎಂದು ಜಯಘೋಷ ಮಾಡಲು ಹೇಳಿದರು. ಪೋಲೀಸರು ಇದೆಲ್ಲವನ್ನು ನಗು-ನಗುತ್ತಲೇ ಸಹನಮಾಡಿಕೊಳ್ಳುತ್ತಿದ್ದರು. ಫೌಜದಾರರೂ ಸಹ ನಮ್ಮನ್ನುದ್ದೇಶಿಸಿ "ತಮ್ಮಗಳಿರಾ, ನೀವು ಹೀಗೆಲ್ಲ ಮಾಡಬಾರದು. ಬಂದೂಕುಗಳನ್ನು ಹಿಡಿಯಬಾರದು. ನೀವು ಅಹಿಂಸಾವಾದಿಗಳಲ್ಲವೇ?" ಎಂದು ವಿನೋದವಾಗಿ ಮಾತಾಡುತ್ತಿದ್ದರು. ಅಷ್ಟರಲ್ಲಿ ಸ್ಟೇಶನ್ ಬಂದಿತು. ನನ್ನನ್ನು ಸ್ಟೇಶನ್ ಮಾಸ್ತರರ ಕೋಣೆಯಲ್ಲಿ ಕುಳ್ಳಿರಿಸಿದರು. ಯಾರಿಗೂ ಒಳಗೆ ಬಿಡದಂತೆ ಪೋಲೀಸರಿಗೆ ಆಜ್ಞೆಮಾಡಿದರು. ಮತ್ತು ಜನರಿಗೆ ಹೀಗೆ ಹೇಳಿದರು: 'ಇದುವರೆಗೆ ನಿಮ್ಮ ರಾಜ್ಯವಿತ್ತು. ಈಗ ನಮ್ಮ ರಾಜ್ಯ ಅಂದರೆ ಪೋಲೀಸರ ರಾಜ್ಯವಾಗಿದೆ. ಆದ್ದರಿಂದ ಗದ್ದಲ ಹಾಕಬೇಡಿರಿ' ಎಂದು ಗದ್ದರಿಸಿದರು.

ಅಷ್ಟರಲ್ಲಿ ಗಾಡಿ ಬಂತು. ನನ್ನನ್ನು ಗೋಕಾಕಕ್ಕೆ ಕರೆದೊಯ್ದರು. ಮ್ಯಾಜಿಸ್ಟ್ರೇಟರ ಮುಂದೆ ನನ್ನ ಖಟ್ಲೆಯ ವಿಚಾರಣೆ ನಡೆಯಿತು. ನಾನು ಖಟ್ಲೆಯ ವಿಚಾರಣೆಯಲ್ಲಿ ಭಾಗವಹಿಸಲಿಲ್ಲ, ಮ್ಯಾಜಿಸ್ಟ್ರೇಟ ಸಾಹೇಬರು ನನಗೆ ಏಳೂವರಿ ತಿಂಗಳ ಕಠಿಣಶಿಕ್ಷೆ ವಿಧಿಸಿದರು. ಇದಾದ ಕೆಲವು ದಿನಗಳ ಮೇಲೆ ಗಣೇಶಚವತಿಯ ಹಬ್ಬ ಬಂದಿತು. ಬೆಳಗಾಂವ ಜಿಲ್ಹೆಯಲ್ಲಿ ಸಾರ್ವಜನಿಕ ಗಣಪತಿ ಉತ್ಸವವು ಆಗಿನ ಕಾಲಕ್ಕೆ ಒಳ್ಳೇ ವಿಜೃಂಭಣೆಯಿಂದ ನಡೆಯುತ್ತಿತ್ತು. ಉತ್ಸವದ ಅಂಗವಾಗಿ ಮನರಂಜನೆಯ ಕಾರ್ಯಕ್ರಮಗಳನ್ನಲ್ಲದೆ ದೊಡ್ಡ ದೊಡ್ಡ ಭಾಷಣಕಾರರನ್ನು ಕರೆಯಿಸಿ ಭಾಷಣ ಮಾಡಿಸಲಾಗುತ್ತಿತ್ತು. ಆ ಸಲ ಗೋಕಾಕ ಸಾರ್ವಜನಿಕ ಗಣಪತಿ ಉತ್ಸವದ ಮಂಡಲಿಯವರು ಶ್ರೀಮತಿ ಕೃಷ್ಣಾಬಾಯಿ ಪಣಜೀಕರ ಅವರನ್ನು ಭಾಷಣಕ್ಕೆ ಆಮಂತ್ರಿಸಿದ್ದರು.

ಶ್ರೀಮತಿ ಕೃಷ್ಣಾಬಾಯಿಯವರು ಗೋಕಾಕ್ಕೆ ಬರುತ್ತಾರೆಂಬ ಸುದ್ದಿ ಕೇಳಿ ಹುದಲಿಯ ತರುಣರು ಅವರನ್ನು ತಮ್ಮಲ್ಲಿಗೂ ಕರೆಯಿಸಬೇಕೆಂದು ವಿಚಾರಮಾಡಿದರು. ಶ್ರೀ ದತ್ತೋಪಂತ ಅಧ್ಯಾಪಕ ಮತ್ತು ಗಂಗಪ್ಪ ಯಮಕನಮರಡಿ—ಈ ಉಭಯತರು ಕೃಷ್ಣಾಬಾಯಿಯವರನ್ನು ಕರೆದುಕೊಂಡು ಬರಲು ಗೋಕಾಕಕ್ಕೆ ಹೋದರು. ಗೋಕಾಕದಲ್ಲಿ ಶ್ರೀಮತಿ ಕೃಷ್ಣಾಬಾಯಿ ಆವರ ಭಾಷಣ ಮುಗಿದ ಮೇಲೆ ಅವರಿಗೆ ಭೆಟ್ಟಿಯಾಗಿ ಹುದಲಿಗೆ ಬಗಲು ಬಿನ್ನವಿಸಿಕೊಂಡರು. ಅದಕ್ಕೆ ಶ್ರೀಮತಿಯವರು "ಹುಕ್ಕೇರಿರೋಡಿನ ಸ್ಟೇಶನ್ ಹತ್ತಿರದ ಧರ್ಮಶಾಲೆಯಲ್ಲಿ ನನ್ನ ಮಾವಂದಿರು ಇದ್ದಾರೆ. ಅವರನ್ನು ವಿಚಾರಿಸಿ ಬರುವೆನು" ಎಂದು ಹೇಳಿದರು.

ಶ್ರೀಮತಿ ಕೃಷ್ಣಾಬಾಯಿ, ಅಧ್ಯಾಪಕ, ಗಂಗಪ್ಪ ಯಮಕನಮರಡಿ ಮತ್ತು ಶ್ರೀ ಮಹಾಜನ ವಕೀಲ ಮೊದಲಾದವರು ಮೋಟಾರಿನಲ್ಲಿ ಕುಳಿತು ಹುಕ್ಕೇರಿರೋಡ್ ಸ್ಟೇಶನ್ ಮೇಲಿನ ಧರ್ಮಶಾಲೆಗೆ ಬಂದರು. ಇವರ ಜತೆಗೆ ಇನ್ನು ಕೆಲವು ಸ್ವಯಂ ಸೇವಕರೂ ಇದ್ದರು. ಗೋಕಾಕದಿಂದ ಹುಕ್ಕೇರಿರೋಡಿಗೆ ಬರುವಾಗ ಸತ್ಯಪ್ಪಾ ವಡ್ಡರ

ಈತನ ಬಂಗ್ಲೆ ಪತ್ತುತ್ತದೆ. ಅದರ ಪಕ್ಕದಲ್ಲಿಯೇ ಆತನದೊಂದು ಸಿಂದೀಗಿಡಗಳ ಬನವಿದೆ. ಅಲ್ಲಿ ಯಾವಾಗಲೂ ೧೦–೨೦ ಆಳುಗಳು ಕಾವಲು ಮಾಡುತ್ತಿರುತ್ತಾರೆ. ಸತ್ಯಪ್ಪಾ ವಡ್ಡರ ಆಗಿನ ಕಾಲಕ್ಕೆ ಸೆರೆ–ಸಿಂದಿ ವ್ಯಾಪಾರದ ದೊಡ್ಡ ಗುತ್ತಿಗೆದಾರನಾಗಿದ್ದನು. ಅದೇ ಕಾರಣದಿಂದ ಸರಕಾರಕ್ಕೂ ಬೇಕಾದವನಾಗಿದ್ದ. ಇಂಥ ಜನರನ್ನೇ ಹಿಡಿದು ಬ್ರಿಟಿಶ್ ಸರಕಾರ ರಾಜ್ಯಕಾರಭಾರ ನಡೆಸಬೇಕಾಗಿತ್ತು. ಸತ್ಯಪ್ಪಾ ವಡ್ಡರ ಬೆಳಗಾಂವ ಜಿಲ್ಹೆಯಲ್ಲಿಯ ದೊಡ್ಡ ದೊಡ್ಡ ಸಿಂದೀ ಬನಗಳನ್ನು ಸವಾಲಿನಲ್ಲಿ ತೆಗೆದುಕೊಂಡು, ಟ್ರಕ್ಕುಗಳ ಮುಖಾಂತರ ಜಿಲ್ಹೆಯ ಎಲ್ಲ ಭಾಗಗಳಿಗೂ ಸಿಂದಿಯನ್ನು ಮುಟ್ಟಿಸುತ್ತಿದ್ದ. ಸರಕಾರದಲ್ಲಿ ಪ್ರತಿಷ್ಠೆ, ಕೈಯಲ್ಲಿ ಹಣ ಇದ್ದುದರಿಂದ ಪೋಲೀಸರೂ ಸಹ ಅವನ ವಶವರ್ತಿಗಳಾಗಿದ್ದರು.

ಶ್ರೀಮತಿ ಕೃಷ್ಣಾಬಾಯಿಯವರನ್ನು ಕರೆದುಕೊಂಡು ಸತ್ಯಪ್ಪನ ಬಂಗಲೆಯ ಮುಂದೆ ಬಂದ ಕೂಡಲೇ ಅದರೊಳಗಿದ್ದ ಸ್ವಯಂಸೇವಕರು ಮಹಾತ್ಮಾಗಾಂಧೀಕಿ ಜೈ ಎಂದು ಜಯಜಯಕಾರ ಮಾಡುತ್ತ ಬಂದರು. ಅವರು ಹುಕ್ಕೇರಿರೋಡಿನ ಧರ್ಮಶಾಲೆಗೆ ಬಂದು ಕೃಷ್ಣಾಬಾಯಿಯವರ ಮಾವಂದಿರಿದ್ದ ಕೋಣೆಯೊಳಗೆ ಹೋಗಿ, ಅವರೊಡನೆ ಮಾತಾಡುತ್ತ ಕುಳಿತರು. ಕೃಷ್ಣಾಬಾಯಿಯವರ ಮಾವಂದಿರು ಡಿ. ಡಿ. ಸಿ. ಆಗಿದ್ದರು. ಸ್ವಯಂಸೇವಕರು ಸತ್ಯಪ್ಪನ ಬಂಗಲೆಯ ಮುಂದೆ ಜಯಜಯಕಾರ ಮಾಡಿದ್ದರಿಂದ ಅವನಿಗೆ ಅಪಮಾನವೆನಿಸಿತೋ ಅಥವಾ ತನ್ನ ಸಿಂದೀ ಬನವನ್ನು ಕಡಿಯಲು ಬಂದಿರುವರೆಂಬ ಭಯವುಂಟಾಯಿತೋ ಏನೋ ! ಆತ ಕೂಡಲೇ ಮೋಟಾರಿನಲ್ಲಿ ಏಳೆಂಟು ಜನ ಪೋಲೀಸರನ್ನೂ ಮತ್ತು ೮–೧೦ ಜನ ಆಳುಗಳನ್ನೂ ಕರೆದುಕೊಂಡು ಸ್ವಲ್ಪ ಹೊತ್ತಿನಲ್ಲಿಯೇ ಇವರಿದ್ದ ಸ್ಥಳಕ್ಕೆ ಬಂದನು. ಶ್ರೀಮತಿ ಕೃಷ್ಣಾಬಾಯಿ ಹಾಗೂ ಇತರರು ಕುಳಿತಿದ್ದ ಕೋಣೆಗೆ ಪೋಲೀಸರು ಬಂದರು.

ಪೋಲೀಸರು ಅವರನ್ನುದ್ದೇಶಿಸಿ "ನೀವು ಹೊರಗೆ ಬನ್ನಿರಿ" ಎಂದರು. ತಮ್ಮನ್ನು ಹಿಡಿಯಲಿಕ್ಕೆ ಬಂದಿದ್ದಾರೆಂದು ತಿಳಿದು ಶ್ರೀಮತಿ ಕೃಷ್ಣಾಬಾಯಿಯವರು ತಮ್ಮ ಕೈಯಲ್ಲಿದ್ದ ಬಂಗಾರದ ಬಳೆಗಳನ್ನು ತೆಗೆದು ತಮ್ಮ ಮಾವಂದಿರ ಕೈಯಲ್ಲಿ ಕೊಟ್ಟು ಹೊರಗೆ ಬಂದರು., ಶ್ರೀ ಮಹಾಜನ ವಕೀಲ, ಅಧ್ಯಾಪಕ, ಗಂಗಪ್ಪ ಯಮಕನಮರಡಿ ಇವರಿಗೂ ಸಹ ಹೊರಗೆ ಬರಲು ಹೇಳಲಾಯಿತು. ಅವರೆಲ್ಲರೂ ಹೊರಗೆ ಬಂದರು. ಗಂಗಪ್ಪ ಯಮಕನಮರಡಿ ಅವರು ಬಂದು ಕಂಬದ ಹತ್ತಿರ ನಿಂತಿದ್ದರು. ಒಬ್ಬ ಪೋಲೀಸ ಅಲ್ಲಿಗೆ ಬಂದವನೇ ಗಂಗಪ್ಪನ ತಲೆಗೆ ಏಟು ಕೊಟ್ಟ. ಅವನ ತಲೆ ಕಂಬಕ್ಕೆ ಬಡಿಯಿತು. ಪೋಲೀಸರು ಅವರೆಲ್ಲರನ್ನೂ ಹಿಡಿದುಕೊಂಡು ಮೋಟಾರಿನಲ್ಲಿ ಕೂಡ್ರಿಸಿ, ಎಲ್ಲರ ರಟ್ಟೆಗೂ ಹಗ್ಗ ಕಟ್ಟಿ ಮೋಟಾರಿಗೆ ಬಿಗಿದರು. ಕೃಷ್ಣಾಬಾಯಿಯವರಿಗೂ ಮೋಟಾರಿನಲ್ಲಿ ಕೂಡ್ರಲು ಹೇಳಿದರು. ಆ ಪ್ರಕಾರ ಅವರೂ ಸಹ ಮೋಟಾರಿನಲ್ಲಿ ಕುಳಿತರು. ಅಷ್ಟರಲ್ಲಿ ಯಾರೋ ಒಬ್ಬರು ಪೋಲೀಸರಿಗೆ ಕೃಷ್ಣಾಬಾಯಿಯವರು

ಡಿ. ಡಿ. ಸಿ. ಯವರ ಸೊಸೆ. ಅವರನ್ನು ಹಿಡಿಯಬೇಡಿರಿ. ಅವರನ್ನು ಹಿಡಿದರೆ ಮುಂದೆ ನಿಮ್ಮ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ಎಂದು ಸೂಚಿಸಿದರು. ಅದನ್ನು ಕೇಳಿ ಪೋಲೀಸರು ಕೃಷ್ಣಾಬಾಯಿಯವರನ್ನು ಮೋಟಾರಿನಿಂದ ಕೆಳಗೆ ಇಳಿಸಿದರು. ಉಳಿದವರನ್ನು ಸತ್ಯಪ್ಪನ ಬಂಗಲೆಗೆ ಕರೆದುಕೊಂಡು ಹೋದರು. ಅವರೆಲ್ಲರನ್ನೂ ಬೆಳಗಾಂವ ವರೆಗೆ ಮೋಟಾರಿನಲ್ಲಿಯೇ ಕೂಡ್ರಿಸಿದ್ದರು. ರಸ್ತೆಯ ಒಂದು ಬದಿಗೆ ಸತ್ಯಪ್ಪ ಪಡ್ನರ ಈತನ ಬಂಗಲೆ ಇದೆ. ರಸ್ತೆಯ ಇನ್ನೊಂದು ಬದಿಗೆ ಸಿಂದೀ ಬನ ಇದೆ. ರಸ್ತೆ ಹಾಗೂ ಸಿಂದೀ ಬನದ ಮಧ್ಯದಲ್ಲಿ ಸ್ವಲ್ಪ ಕೊಳಚಿ ಪ್ರದೇಶವಿದೆ. ಸಿಂದೀ ಬನಕ್ಕೆ ಹೋಗಬೇಕಾದರೆ ಈ ಕೊಳಚಿ ಪ್ರದೇಶವನ್ನು ದಾಟಿ ಹೋಗಬೇಕಾಗುವದು.

ಸತ್ಯಪ್ಪನು ತನ್ನ ಆಳುಗಳಿಂದ ನಾಲ್ಕಾರು ಸಿಂದೀ ಮರಗಳನ್ನು ಕಡಿಸಿದನು. ಬೆಳಗಾದ ನಂತರ ಗೋಕಾಕಕ್ಕೆ ಹೋಗಿ 'ತನ್ನ ಸಿಂದೀ ಬನಕ್ಕೆ ಸಿಂದೀ ಮರಗಳನ್ನು ಕಡಿಯುಲಿಕ್ಕೆ ಕೆಲವರು ಬಂದಿದ್ದರೆಂದೂ ಅವರನ್ನು ಹಿಡಿದು ಹಾಕಿರುವೆನೆಂದೂ' ಪೋಲೀಸರಿಗೆ ವರದಿ ಕೊಟ್ಟನು. ಆಗ ಗೋಕಾಕದಲ್ಲಿ ಶ್ರೀ ಗುಡಿಯವರೇ ಫೌಜದಾರರಾಗಿದ್ದರು. ಗುಡಿ ಅವರು ೪–೮ ಪೋಲೀಸರನ್ನು ಕರೆದುಕೊಂಡು ಸತ್ಯಪ್ಪನ ಬಂಗಲೆಗೆ ಬಂದರು. ಸಿಂದೀ ಗಿಡಗಳನ್ನು ಕಡಿದವರು ಯಾರು ಎಂದು ನೋಡಲಾಗಿ, ಎಲ್ಲರೂ ಅವರ ಪರಿಚಯದವರೇ. ಅವರನ್ನು ನೋಡಿದ ಕೂಡಲೇ ಇದೆಲ್ಲ ಸುಳ್ಳು ಎಂದು ಅನಿಸಿತು. ಮಹಾಜನ ವಕೀಲರೂ, ಹಾಗೂ ಅಧ್ಯಾಪಕರೂ ಮತ್ತು ಗಂಗಪ್ಪ ಯಮಕನಮರಡಿ ಇವರಿಂದ ಸಿಂದೀಗಿಡ ಕಡಿಯುವದು–ಅದು ಸಹ ರಾತ್ರಿಯಲ್ಲಿ ಕಡಿಯುವದು ಸಾಧ್ಯವಿಲ್ಲ ಎಂಬುವದು ಅವರಿಗೆ ಮನವರಿಕೆಯಾಯಿತು. ಆದರೆ ಮಾಡುವುದೇನು ? ಸರಕಾರೀ ನವಕರರಾದ್ದರಿಂದ ತಮ್ಮ ಕೆಲಸ ಮಾಡಿಯೇ ತೀರಬೇಕಲ್ಲವೇ ?

ಸತ್ಯಪ್ಪನು ಹೇಳಿದಂತೆ ಎಲ್ಲ ಪಂಚನಾಮೆ ಬರೆದುಕೊಂಡರು. ಸಾಕ್ಷಿಗಳ ಹೇಳಿಕೆಗಳನ್ನು ಬರೆದುಕೊಂಡರು. ಕೊನೆಗೆ ನಿಮಗೆ ಏನಾದರೂ ಹೇಳುವುದಿದೆಯೋ ಎಂದು ಆರೋಪಿಗಳನ್ನು ಕೇಳಿದರು. ಆಗ ಗಂಗಪ್ಪ ಯಮಕನಮರಡಿ ಅವರು "ಸಿಂದೀ ಮರಗಳು ಕೊಳಚೆಯಾಚೆಗೆ ಇವೆ. ಅವುಗಳನ್ನು ಕಡಿಯಬೇಕಾದರೆ ಆ ಕೊಳಚೆಯನ್ನು ದಾಟಿ ಹೋಗಬೇಕು. ನಮ್ಮ ಕಾಲುಗಳು ಕೆಸರಾಗಿರಬೇಕು. ಅದನ್ನು ವಿಚಾರ ಮಾಡುವಿರಾ ?" ಎಂದು ಹೇಳಿದರು. ಇದನ್ನು ಕೇಳಿ ಗುಡಿಯವರು 'ಅಹುದು. ನೀವನ್ನುವುದೂ ನಿಜ. ನಿಮ್ಮ ಕಾಲುಗಳನ್ನು ತೆಗೆಯಿರಿ ನೋಡುವಾ' ಎಂದರು.

ಆಗ ಯಾರ ಕಾಲುಗಳೂ ಕೆಸರಾಗಿರಲಿಲ್ಲ. ಅದನ್ನು ತಮ್ಮ ಪಂಚನಾಮೆಯಲ್ಲಿ ಬರೆದುಕೊಂಡರು. ಇದನ್ನು ನೋಡಿ ಸತ್ಯಪ್ಪ ಸಿಟ್ಟಿಗೆದ್ದನು. ಗುಡಿಯವರನ್ನುದ್ದೇಶಿಸಿ "ನೀವು ಇದನ್ನು ಏಕೆ ಬರೆದುಕೊಳ್ಳುತ್ತೀರಿ" ಎಂದು ಕೇಳಿದನು. ಆಗ ಗುಡಿಯವರು ಎಲ್ಲವನ್ನೂ ಬರೆದುಕೊಳ್ಳುವದು ನನ್ನ ಕರ್ತವ್ಯ. ಕೋರ್ಟಿನಲ್ಲಿ ಬೇಕಾ

ವರೆ ನೀವಿದನ್ನು ಅಲ್ಲಗಳೆಯುಬಹುದು" ಎಂದರು. ಆರೋಪಿಗಳನ್ನು ಕರೆದುಕೊಂಡು ಗೋಕಾಕಕ್ಕೆ ಹೋದರು. ಮತ್ತು ಎಲ್ಲರನ್ನೂ ಜಾಮಿೂನಿನ ಮೇಲೆ ಬಿಟ್ಟರು. ಖಟ್ಲೆ ನಡೆಯಿತು. ಸತ್ಯಪ್ಪನಿಗೆ ದಂಡ ಹಾಗೂ ಶಿಕ್ಷೆಯಾಯಿತು. ಅಪೀಲಿನಲ್ಲಿ ಸತ್ಯಪ್ಪ ಬಹಳ ಹಣ ವೆಚ್ಚಮಾಡಿ ತನಗಾಗಿದ್ದ ಶಿಕ್ಷೆ ಹಾಗೂ ದಂಡವನ್ನು ರದ್ದುಮಾಡಿಸಿಕೊಂಡನೆಂದು ಸುದ್ದಿ ಕೇಳಿದೆವು.

ಸತ್ಯಪ್ಪ ವಡ್ಡರ ಈತನು ಶ್ರೀಮತಿ ಕೃಷ್ಣಾಬಾಯಿಯವರ ಹಾಗೂ ಇತರರನ್ನು ಅವಮಾನಗೊಳಿಸಿದ್ದರ ಸೇಡನ್ನು ಹುದಲಿ ಗುಂಪಿನವರು ತೀರಿಸಿಕೊಂಡ ಸಂಗತಿ ಮುಂದೆ ಬರುತ್ತದೆ.

೪. ತಳಹಟ್ಟಿ ಸಿಂದೀ-ಬನ ಕಡಿಯುವ ಪ್ರಕರಣ (೧೯೩೦)

ನನ್ನ ಬಂಧನದ ಕಾಲಕ್ಕೆ ನನ್ನ ಕೊರಳೊಳಗಿನ ಮಾಲೆಯನ್ನು ಶ್ರೀ ದತ್ತೋಪಂತ ಅಧ್ಯಾಪಕರ ಕೊರಳಿಗೆ ಹಾಕಿ "ಮುಂದಿನ ಕಾರ್ಯದ ಹೊಣೆ ನಿಮ್ಮದು. ತಳಹಟ್ಟಿ ಕಾರ್ಯಕ್ರಮ ಬಿಡಬೇಡಿರಿ" ಎಂದು ನಾನು ಹೇಳಿದ್ದೆನು. ನನಗೆ ಶಿಕ್ಷೆಯಾದ ನಂತರ ದತ್ತೋಪಂತ ಅಧ್ಯಾಪಕ, ಗಂಗಪ್ಪಾ ಯಮಕನಮರಡಿ ಮೊದಲಾದ ಕಾರ್ಯಕರ್ತರು, ತಳಹಟ್ಟಿ ಕಾರ್ಯಕ್ರಮವನ್ನು ಗೊತ್ತುಪಡಿಸಿದರು. ಹಿಂದಿನಂತೆಯೇ ಅಂದು ಸೋಮವಾರವಾಗಿದ್ದಿತು. ಜನರು ಊಟ ಮುಗಿಸಿಕೊಂಡು, ಕೈಯಲ್ಲಿ ಕೊಡಲಿ ಹಿಡಿದುಕೊಂಡು ಸಜ್ಜಾಗಿ ಬಂದರು. ರಣಹಲಿಗೆ ಬಾರಿಸಹತ್ತಿತು. ಕಹಳೆ ಊದತೊಡಗಿತು. ಎಲ್ಲರೂ ಉತ್ಸಾಹದಿಂದ ರಣವಾದ್ಯವನ್ನು ಬಾರಿಸುತ್ತಲೇ ಹೊರಟರು.

ಹುದಲಿಯಿಂದ ತಳಹಟ್ಟಿಗೆ ಹೋಗುವಾಗ ಹಾದಿಯಲ್ಲಿ ಸುಲಧಾಳ, ಅಂಕಲಗಿ, ಅಕ್ಕತಂಗೇರಹಾಳ ಗ್ರಾಮಗಳು ಹತ್ತುತ್ತವೆ. ಕುಂದರನಾಡಿನಲ್ಲಿ ಹುದಲಿ, ಅಕ್ಕತಂಗೇರಹಾಳ ಹಾಗೂ ಪಾಚ್ಛಾಪುರ ಇವು ಸ್ವಾತಂತ್ರ್ಯಸಂಗ್ರಾಮದ ಹೋರಾಟದ ಕೇಂದ್ರಗಳಾಗಿದ್ದವು. ನಾನು ಮತ್ತು ಪುಂಡಲೀಕಜಿ ಹುದಲಿಯಲ್ಲಿ ವಾಮನರಾವ ದೇಸಾಯಿ ಅಕ್ಕ-ತಂಗೇರಹಾಳದಲ್ಲಿ ಮತ್ತು ಬ್ಹಾ. ಯ. ದೇಶಪಾಂಡೆ (ಅಣ್ಣೂ ಗುರೂಜಿ) ಅವರು ಪಾಚ್ಛಾಪುರದಲ್ಲಿ ೧೯೨೪ರಿಂದಲೇ ವಿಧಾಯಕ ಕಾರ್ಯವನ್ನು ಮಾಡುತ್ತಿದ್ದೆವು. ಅದರಿಂದ ಜನತೆಯಲ್ಲಿ ಜಾಗೃತಿಯಾಗಿತ್ತು. ಆದರೆ ಅಂಕಲಗಿ ಊರು ಮಾತ್ರ ಸರಕಾರದ ಪಕ್ಷದ್ದೆಂದೇ ತಿಳಿಯಲಾಗುತ್ತಿತ್ತು. ಅಲ್ಲಿಯ ದೇಸಾಯರು ಮುಸಲ್ಮಾನರು. ಅಷ್ಟೊಂದು ಕಲಿತವರೂ ಅಲ್ಲ. ಆದರೂ ತಾವು ಸರಕಾರದ ಪ್ರತಿನಿಧಿಗಳೆಂದೇ ಭಾವಿಸುತ್ತಿದ್ದರು.

ಅಂಕಲಗಿ ಊರು ವ್ಯಾಪಾರದ ಸ್ಥಳ. ಅಲ್ಲಿಯ ವ್ಯಾಪಾರಸ್ಥರು ತಮಗೆ ದಂಡ ಶಿಕ್ಷೆ ಆಗಿ, ತಮ್ಮ ವ್ಯಾಪಾರ ಎಲ್ಲಿ ಹಾಳಾಗುತ್ತದೆಯೋ ಏನೋ ಎಂಬ ಭಯದಿಂದ

ನಮ್ಮ ಆಂದೋಲನದಿಂದ ದೂರ ಇರುತ್ತಿದ್ದರು. ಆದರೂ ಆ ಊರಿಂದ ಯಾರೂ ಭಾಗ ತೆಗೆದುಕೊಂಡಿರಲಿಲ್ಲವೆಂದಲ್ಲ. ಶ್ರೀಶೈಲಪ್ಪ ಕಾಕತೀಕರ, ಬಂಡೋಪಂತ ಹಾರದಿ ಎಂಬ ಒಬ್ಬಿಬ್ಬರು ವ್ಯಾಪಾರಸ್ಥರು ಆಂದೋಲನದಲ್ಲಿ ಭಾಗವಹಿಸಿದ್ದರು. ಹುದಲಿಯ ಜನರು ಆದಿನ ಊರೊಳಗಿಂದ ರಣಹಲಗೆ ಬಾರಿಸುತ್ತ ಸಿಂದೀಗಿಡ ಕಡಿಯಲು ಹೋಗುತ್ತಿರುವುದನ್ನು ನೋಡಿ, ಸುಲಧಾಳ ಊರಲ್ಲಿಯ ಕೆಲವು ತರುಣರು ನಮ್ಮ ಜನರೊಂದಿಗೆ ಕೂಡಿಕೊಂಡರು. ಮುಂದೆ ಮಾರ್ಚ, ಅಂಕಲಗಿ ಊರೊಳಗಿಂದ ಹಾಯ್ದು, ಹಾಗೆಯೇ ಅಕ್ಕತಂಗೇರಹಾಳ ಊರ ಮೇಲಿಂದ ತಳಹಟ್ಟಿ ಸಿಂದೀಬನದ ಕಡೆಗೆ ಹೋಯಿತು. ಹುದಲಿ ಊರಿನವರು ತಳಹಟ್ಟಿ ಸಿಂದೀಗಿಡ ಕಡಿಯಲಿಕ್ಕೆ ಹೋಗುತ್ತಾರೆ ಎಂಬ ಸುದ್ದಿ ಅಂಕಲಗಿ ದೇಸಾಯರಿಗೆ ಹತ್ತಿತು. ಅವರಿಗೂ ತಳಹಟ್ಟಿ ಸಿಂದೀಬನಕ್ಕೂ ಯಾವ ಸಂಬಂಧವೂ ಇರಲಿಲ್ಲ. ಆ ಸಿಂದೀಬನ ಸರಕಾರಕ್ಕೆ ಸೇರಿದ್ದು. ಆದರೂ ತಾವು ಸರಕಾರದ ಪ್ರತಿನಿಧಿಯಾಗಿರುವಾಗ ತಮ್ಮ ಕಣ್ಣಮುಂದೆ ಬನ ಕಡಿಯುವ ಧೈರ್ಯ ಯಾರದು ಎಂಬ ಹೆಮ್ಮೆಯಿಂದ ೧೫-೨೦ ಜನ ಬೇಡರನ್ನು ಕರೆದುಕೊಂಡು ಹೆಗಲಮೇಲೆ ಬಂದೂಕನ್ನು ತೆಗೆದುಕೊಂಡು ಸಿಂದೀಬನದ ಕಡೆಗೆ ಹೊರಟರು. ಅವರು ಮತ್ತು ಅವರ ಸಂಗಡಿಗರು ಅಕ್ಕತಂಗೇರಹಾಳ ದಾಟಿ ಸಿಂದೀಬನದ ಕಡೆಗೆ ಹೋದುದನ್ನು ಅಕ್ಕತಂಗೇರಹಾಳದ ಕೆಲವು ಜನರು ನೋಡಿದರು.

ಅಂದು ಅಕ್ಕತಂಗೇರಹಾಳದ ಜಾತ್ರೆ. ಜಾತ್ರೆಯ ಕಾರ್ಯಕ್ರಮದ ಅಂಗವಾಗಿ ಕುಸ್ತಿಗಳು ನಡೆದಿದ್ದವು. ನೋಡಲು ಸಾವಿರಾರು ಜನರು ನೆರೆದಿದ್ದರು. ಹುದಲಿಯ ಜನರು ಸಿಂದೀಬನ ಕಡಿಯುವದಕ್ಕೆ ಹೋಗುವುದನ್ನು ಅವರು ನೋಡಿದ್ದರು. ಆದರೆ ಅವರು ಯಾರೂ ಅತ್ತಕಡೆಗೆ ವಿಶೇಷ ಲಕ್ಷ್ಯಕೊಟ್ಟಿರಲಿಲ್ಲ. ಎಲ್ಲರೂ ಕುಸ್ತಿ ನೋಡುವದರಲ್ಲಿ ಮಗ್ನರಾಗಿದ್ದರು. ನಂತರ ದೇಸಾಯರು ಬಂದೂಕು ತೆಗೆದುಕೊಂಡು ಬೇಡರನ್ನು ಕರೆದುಕೊಂಡು ಅತ್ತಕಡೆಗೆ ಹೋದಕೂಡಲೇ ಅದನ್ನು ನೋಡಿದವರು ಕುಸ್ತಿಯ ಕಣಕ್ಕೆ ಬಂದು, "ಕುಸ್ತಿಯನ್ನು ಏನು ನೋಡುತ್ತೀರಿ? ಏಳಿರಿ. ಅಂಕಲಗಿಯ ದೇಸಾಯರು ಸಿಂದೀಗಿಡ ಕಡಿಯಲಿಕ್ಕೆ ಹೋದವರನ್ನು ಗುಂಡುಹಾಕಿ ಕೊಲ್ಲಲಿಕ್ಕೆ ಹೊರಟಿದ್ದಾರೆ; ಘಾತವಾಗುತ್ತದೆ. ಬೇಗನೆ ಏಳಿರಿ" ಎಂದು ಕೂಗಿಕೊಂಡರು. ಆಯಿತು. ಆಗಲೇ ಕುಸ್ತಿ ಕಣ ಒಡೆಯಿತು. ಜನರು ತಮ್ಮ ಕೈಗೆ ಬಂದ ಸಾಧನಗಳನ್ನು ತೆಗೆದುಕೊಂಡು ಸಿಂದೀಬನದ ಕಡೆಗೆ ಓಡತೊಡಗಿದರು.

ಅಕ್ಕತಂಗೇರಹಾಳದ ಜನರು ಎರಡುಮೂರು ಫರ್ಲಾಂಗು ದೂರದಲ್ಲಿ ಬರುತ್ತಿದ್ದರು. ಅವರೆಲ್ಲರೂ "ದೇಸಾಯರನ್ನು ಹಿಡಿಯಿರಿ, ಬಡಿಯಿರಿ, ಹೊಡೆಯಿರಿ" ಎಂದು ಕೂಗುತ್ತಿದ್ದರು. ಇದನ್ನು ಕೇಳಿ ದೇಸಾಯರ ಕಡೆಯ ಜನರು ಹಿಂತಿರುಗಿ ನೋಡಿದರು. ಅಕ್ಕತಂಗೇರಹಾಳದ ಜನರು ತಮ್ಮನ್ನು ಹೊಡೆಯಲಿಕ್ಕೆ ಬರುತ್ತಾರೆಂದು ಅವರಿಗೆ

ಗೊತ್ತಾಯಿತು. ಮುಂದೆ ಬಸವ ಕಡೆಗೆ ಹೋದರೆ ಹುದಲಿಯ ಜನರು, ಹಿಂದೆ ಹೋದರೆ ಅಕ್ಕತಂಗೇರಹಾಳದ ಜನರು. ಮಧ್ಯದಲ್ಲಿ ದೇಸಾಯಿ ಹಾಗೂ ಅವರ ಜನರು ಸಿಕ್ಕಿಕೊಂಡು ಬಿದ್ದರು. ಅವರೆಲ್ಲರೂ ಗಾಬರಿಯಾದರು. ಹತ್ತಿರದಲ್ಲಿಯೇ ಎಡಬದಿಗೆ ಇದ್ದ ಮದವಾಲ ಊರಿನ ಕಡೆಯತ್ತ ಓಡತೊಡಗಿದರು. ಅಕ್ಕತಂಗೇರಹಾಳದ ಜನರು ಅವರನ್ನು ಬೆನ್ನಟ್ಟಿದರು. ಸಿಂದೀಗಿಡ ಕಡಿಯುವವರಿಗೂ ಈ ಸುದ್ದಿ ತಿಳಿಯಿತು. ಅವರು ಮರ ಕಡಿಯುವುದನ್ನು ಬಿಟ್ಟು ಮದವಾಲದ ಕಡೆಗೆ ಧಾವಿಸಿದರು.

ದೇಸಾಯರ ಸಂಗಡ ಇದ್ದ ಜನರು ದಾರಿ ಸಿಕ್ಕಕಡೆಗೆ ಓಡಿಹೋದರು. ದೇಸಾಯರು ಅಲ್ಲಿಯೇ ಪಕ್ಕದಲ್ಲಿದ್ದ ಕುಂಬಾರನ ಆವಿಗೆಯಲ್ಲಿ ಹೋಗಿ, ಬಂದೂಕು ಹಿಡಿದು ಕುಳಿತುಕೊಂಡರು. ಇನ್ನುಮೇಲೆ ಅವರು ಬಂದೂಕನ್ನೆತ್ತಿ ಜನರಮೇಲೆ ಹಾರಿಸಬೇಕೆಂಬ ಸಿದ್ಧತೆಯಲ್ಲಿದ್ದರು. ಅಷ್ಟರಲ್ಲಿ ಯಾರೋ ನೇರವಾಗಿ ಅವರ ಕೈಗೆ ಕಲ್ಲನ್ನು ಹೊಡೆದರು. ಬಂದೂಕು ಕೆಳಗೆ ಬಿದ್ದಿತು. ಜನರು ಅವರನ್ನು ಹಿಡಿದು ಹೊರಗೆಳೆದರು. ಹೊಡೆಯುವವರಿದ್ದರು. ಅಷ್ಟರಲ್ಲಿ ಹುದಲಿಯ ಕಾರ್ಯಕರ್ತರು ಅಲ್ಲಿಗೆ ಬಂದು ಜನರಿಗೆ ಶಾಂತವಾಗಲು ವಿನಂತಿಸಿಕೊಂಡರು. ಆದರೂ ಜನ ಬಹಳೇ ರೊಚ್ಚಿಗೆದ್ದಿತ್ತು. ಎಲ್ಲಿ ನೋಡಿದಲ್ಲಿ 'ದೇಸಾಯರನ್ನು ಹಿಡಿಯಿರಿ, ಬಡಿಯಿರಿ, ಹೊಡೆಯಿರಿ' ಎಂಬ ಒಂದೇಒಂದು ಕೂಗು ಕೇಳಬರುತ್ತಿತ್ತು.

ಸಿಟ್ಟಿಗೆದ್ದ ಜನಜಂಗುಳಿಯ ಕೈಯಲ್ಲಿ ದೇಸಾಯರನ್ನು ಕೊಟ್ಟುಬಿಟ್ಟಿದ್ದರೆ, ಅವರ ಪ್ರಾಣವುಳಿಯುವುದು ಅಂದು ಕಠಿಣವಾಗಿತ್ತು. ಅವರ ಪಕ್ಷದವರಾರೂ ದೇಸಾಯರ ಹತ್ತಿರವಿರಲಿಲ್ಲ. ಆಗಿನ ಪ್ರಸಂಗವೇ ಅಂತಹದಾಗಿತ್ತು. ಸರಕಾರ ಹಾಗೂ ಸರಕಾರದ ಪರವಾಗಿದ್ದ ಜನರ ಮೇಲೆ ಜನತೆ ಅತಿ ಸಿಟ್ಟಿಗೇಳುತ್ತಿತ್ತು. ಹೀಗೆ ಜನರೆಲ್ಲ ಕೂಗಾಡಹತ್ತಿರುವಾಗ ಅಧ್ಯಾಪಕರು ಹಾಗೂ ಇತರ ಕಾರ್ಯಕರ್ತರು ದೇಸಾಯರ ಹತ್ತಿರ ಬಂದರು. ಜನರನ್ನು ದೂರ ಸರಿಸಿದರು. ೪–೮ ಜನ ಕಾರ್ಯಕರ್ತರು ಅವರನ್ನು ತಮ್ಮ ಮಧ್ಯದಲ್ಲಿರಿಸಿಕೊಂಡು ಅವರ ರಕ್ಷಣೆ ಮಾಡತೊಡಗಿದರು. ದತ್ತೋಪಂತ ಅಧ್ಯಾಪಕರು ಸ್ವಲ್ಪ ಎತ್ತರದ ಸ್ಥಳದ ಮೇಲೆ ನಿಂತುಕೊಂಡು, ಜನರನ್ನುದ್ದೇಶಿಸಿ 'ಶಾಂತರಾಗಿರಿ. ನಾವು ಗಾಂಧೀಜಿಯವರ ಅನುಯಾಯಿಗಳು; ಅಹಿಂಸಾವಾದಿಗಳು; ಎರಡನೆಯವರ ಮೇಲೆ ಕೈಮಾಡುವದು ಬೇಡ. ನಮ್ಮ ತತ್ವಕ್ಕೆ ಭಂಗ ಬರುತ್ತದೆ. ಚಳುವಳಿಗೆ ಹಾನಿ ತಟ್ಟುತ್ತದೆ' ಎಂದು ಕೂಗಿಕೊಂಡು ಹೇಳತೊಡಗಿದರು.

ಎಷ್ಟೋ ಹೊತ್ತಿನ ಮೇಲೆ ಜನರು ಸ್ವಲ್ಪ ಶಾಂತರಾದರು. ಆದರೂ ಕೂಡಿದವರಲ್ಲಿ ಕೆಲವರು ದೇಸಾಯರ ತಲೆಯ ಮೇಲಿನ ಫರ್‌ಕ್ಯಾಪ್ ತೆಗೆದು, ಗಾಂಧೀ ಟೊಪ್ಪಿಗೆಯೊಂದನ್ನು ಹಾಕಿದರು. ಗಾಂಧೀಮಹಾರಾಜಕೀ ಜೈ ಎಂದು ಕೂಗಹತ್ತಿದರು. ದೇಸಾಯರೂ ಸಹ ಜನರ ಹೇಳಿಕೆಯಂತೆ ವರ್ತಿಸಿದರು. ಆಗ ಅವರು ಅತ್ಯಂತ ಭಯ

ಭೀತರಾಗಿದ್ದರು. ಅವರ ಸಂಗಡ ಬಂದವರೆಲ್ಲ ಮೊದಲೇ ತಮ್ಮ ಕಾಲಿಗೆ ಬುದ್ಧಿ ಹೇಳಿದ್ದರು. ಕಾರ್ಯಕರ್ತರು ಜನರಿಗೆ ತಮ್ಮ ತಮ್ಮ ಊರುಗಳಿಗೆ ಹಿಂತಿರುಗಲು ಪ್ರಾರ್ಥಿಸಿಕೊಂಡರು. ದೇಸಾಯರನ್ನು ಕರೆದುಕೊಂಡು ಬಂದು ಒಂದು ಮನೆಯಲ್ಲಿ ಕೂಡ್ರಿಸಿದರು. ತಾವು ಅವರ ಕಾವಲಿಗೆ ನಿಂತರು. ಸ್ವಲ್ಪ ಹೊತ್ತಿನ ಮೇಲೆ ಜನರು ತಮ್ಮ ತಮ್ಮ ಊರುಗಳಿಗೆ ಹೊರಟರು.

ಗದ್ದಲ ಕಡಮೆಯಾದ ಮೇಲೆ ಹುದಲಿಯ ಕಾರ್ಯಕರ್ತರು ಹಾಗೂ ಇನ್ನೂ ಕೆಲವರು ಕೂಡಿ ದೇಸಾಯರನ್ನು ಅಂಕಲಗಿಗೆ ಕರೆದುಕೊಂಡು ಬಂದು ಸುರಕ್ಷಿತವಾಗಿ ಅವರ ಮನೆಗೆ ಮುಟ್ಟಿಸಿದರು. ಸುದೈವದಿಂದ ಅಂದಿನ ಅನಾಹುತ ತಪ್ಪಿತು. ಅಂದು ದೇಸಾಯರ ಪ್ರಾಣಕ್ಕೆ ಏನಾದರೂ ಅಪಾಯವಾಗಿದ್ದರೆ, ದತ್ತೋಪಂತ ಅಧ್ಯಾಪಕ ಹಾಗೂ ಇನ್ನಿತರ ೩–೪ ಜನ ಕಾರ್ಯಕರ್ತರು ಗಲ್ಲಿನ ಶಿಕ್ಷೆಗೆ ಗುರಿಯಾಗಬೇಕಾಗುತ್ತಿತ್ತು. ಅಂತೂ ಕಾರ್ಯಕರ್ತರ ಮೇಲೆ ಬಂದ ಸಂಕಟ ದೇವರ ಕೃಪೆಯಿಂದ ದೂರಾಯಿತು.

ಕಾರ್ಯಕರ್ತರು ದೇಸಾಯರ ಪ್ರಾಣವನ್ನು ಈ ರೀತಿಯಾಗಿ ಉಳಿಸಿದ್ದರೂ ಕಾರ್ಯಕರ್ತರ ಮೇಲಿನ ದ್ವೇಷ ಅವರಿಗೆ ಕಡಮೆಯಾಗಿರಲಿಲ್ಲ. ಈ ಘಟನೆ ಸಂಭವಿಸಿದ್ದು ಅವರ ಮಾನ–ಮರ್ಯಾದೆ ಗೌರವಕ್ಕೆ ಧಕ್ಕೆ ತಟ್ಟಿದಂತಾಗಿದ್ದಿತು. ಆದ್ದರಿಂದ ಕಾರ್ಯಕರ್ತರ ಬಗೆಗಿನ ಅವರ ದ್ವೇಷ ಇಮ್ಮಡಿ ಹೆಚ್ಚಿತು. ಅವರು ಪೋಲೀಸರ ಸಹಾಯದಿಂದ ಹುದಲಿ ಹಾಗೂ ಅಕ್ಕತಂಗೇರಹಾಳದ ಕಾರ್ಯಕರ್ತರ ಮೇಲೆ ಖಟ್ಲೆ ಹಾಕಿದರು. ಅನೇಕರಿಗೆ ಅದರಲ್ಲಿ ಶಿಕ್ಷೆಯಾಯಿತು.

೫. ಬ್ರಿಟಿಶ್ ಸರಕಾರದ ನ್ಯಾಯದಾನದ ಮಾದರಿ (೧೯೩೨)

ಈ ಚಳುವಳಿಯ ಕಾಲದಲ್ಲಿ ಬ್ರಿಟಿಶ್ ಸರಕಾರವು ಯಾವ ರೀತಿಯಾಗಿ ನ್ಯಾಯದಾನ ಮಾಡುತ್ತಿತ್ತು ಎಂಬದರ ಮನೋರಂಜಕ ಉದಾಹರಣೆಯೊಂದು ಇಲ್ಲಿದೆ. ಜಿಲ್ಹೆಯೊಳಗಿನ ಚಳುವಳಿ ಕುರಿತು ಶ್ರೀ ಪುಂಡಲೀಕಜಿಯೊಂದಿಗೆ ವಿಚಾರವಿನಿಮಯ ಮಾಡಲು ಶ್ರೀ ಬಾಬುರಾವ ಕೋಠಾವಳೆಯವರು ನಿಪ್ಪಾಣಿಯಿಂದ ಹುದಲಿಗೆ ಬಂದಿದ್ದರು. ಶ್ರೀ ಪುಂಡಲೀಕಜಿಯೊಂದಿಗೆ ಅವರ ಮಾತುಕತೆಗಳು ಮುಗಿದ ಕೂಡಲೇ ಅವರು ತಿರುಗಿ ನಿಪ್ಪಾಣಿಗೆ ಹೋಗುವವರಿದ್ದರು. ಹುದಲಿಯಲ್ಲಿ ಶ್ರೀ ಭಾಸ್ಕರರಾವ ಕಾಳೆ–ದಾದಾ ಕಾಳೆ–ಅವರ ಸತ್ಯಾಗ್ರಹ ಆಗುವದಿತ್ತು. ಅಂದರೆ ಸತ್ಯಾಗ್ರಹ ಸಭೆಯಲ್ಲಿ ಅವರು ಭಾಷಣ ಮಾಡುವವರಿದ್ದರು. ಸತ್ಯಾಗ್ರಹ ಮಾಡುವವರನ್ನು ಬಂಧಿಸಲಿಕ್ಕೆ ಬೆಳಗಾಂವಿಯಿಂದ ಪೋಲೀಸ ಅಧಿಕಾರಿ ಮತ್ತು ಪೋಲೀಸ ಪಾರ್ಟಿ ಹುದಲಿಗೆ ಬಂದಿತ್ತು.

ಈ ಸಭೆಗೆ ಹೊರಗಿನ ಮಾನ್ಯ ಅತಿಥಿ ಶ್ರೀ ಬಾಬುರಾವ ಕೋಠಾವಳೆಯವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ವಿಚಾರ ಬಂದಿತು. ಒಂದು ವಿಶಿಷ್ಟ ಯೋಜ

ನೆಯ ಪ್ರಕಾರ ನಿಪ್ಪಾಣಿಯ ಭಾಗದಲ್ಲಿಯೇ ಸತ್ಯಾಗ್ರಹ ಮಾಡಬೇಕೆಂದು ಅವರ ವಿಚಾರವಿತ್ತು. ಆದ್ದರಿಂದ ಅವರು ಅಂದಿನ ಸಭೆಯ ಅಧ್ಯಕ್ಷರಾಗಲು ಸಿದ್ಧರಿರಲಿಲ್ಲ. ಅವರು ಪುಂಡಲೀಕಜಿಯ ಸಲಹೆಯನ್ನು ಕೇಳಿದರು. "ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿರಿ. ಅಂದರೆ ಸಭೆಯ ಕಾರ್ಯಕ್ರಮ ಮುಗಿಯಿತೆಂದು ಮಾತ್ರ ಹೇಳಿರಿ. ಇದಕ್ಕಿಂತ ಹೆಚ್ಚಿನದೇನನ್ನೂ ಮಾತಾಡಬೇಡಿ" ಎಂದು ಶ್ರೀ ಪುಂಡಲೀಕಜಿ ಅವರಿಗೆ ಸಲಹೆಯನ್ನಿತ್ತರು.

ಶ್ರೀ ಬಾಬುರಾವ ಕೋಠಾವಳೆಯವರು ಇದನ್ನು ಮಾನ್ಯಮಾಡಿದರು. ಸಭೆಯ ಅಧ್ಯಕ್ಷಸ್ಥಾನದಲ್ಲಿ ಅವರೇ ಸ್ಥಾನಾಪನ್ನರಾಗಿದ್ದರು. ಶ್ರೀ ದಾದಾ ಕಾಳೆಯವರ ಭಾಷಣವಾಯಿತು. ಆ ಸಭೆಯಲ್ಲಿ ಇನ್ನಾರದೂ ಭಾಷಣವಾಗಲಿಲ್ಲ. ಆಭಾರಮನ್ನಿಸುವದನ್ನೂ ಸಹ ರದ್ದು ಮಾಡಲಾಗಿತ್ತು. ಕೊನೆಗೆ ಅಧ್ಯಕ್ಷರೆದ್ದು "ಇಂದಿನ ಕೆಲಸ ಮುಗಿಯಿತು" ಎಂದಿಷ್ಟೇ ಹೇಳಿದರು.

ಈ ಸಭೆ ಮುಗಿಯುತ್ತಲೇ ಪೋಲೀಸ ಅಧಿಕಾರಿಗಳು ವ್ಯಾಖ್ಯಾನ ಮಾಡಿದ ಶ್ರೀ ದಾದಾ ಕಾಳೆಯವರನ್ನೂ ಅಧ್ಯಕ್ಷತೆ ವಹಿಸಿದ್ದ ಶ್ರೀ ಬಾಬುರಾವ ಕೋಠಾವಳೆಯವರನ್ನೂ ಬಂಧಿಸಿದರು. ಅಧ್ಯಕ್ಷರು ಏನನ್ನೂ ಮಾತಾಡಿರಲಿಲ್ಲ. ಆದ್ದರಿಂದ ಅವರನ್ನು ಬಂಧಿಸುವರೆಂಬ ಕಲ್ಪನೆ ನಮಗಾರಿಗೂ ಬಂದಿರಲಿಲ್ಲ. ಇದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು.

ಪೋಲೀಸರು ಅವರಿಬ್ಬರನ್ನೂ ಹಿಡಿದುಕೊಂಡು ರಾತ್ರಿಯ ಗಾಡಿಗೇ ಬೆಳಗಾವಿಗೆ ಒಯ್ದರು. ಮರುದಿವಸ ಅವರ ಮೇಲೆ ಖಟ್ಲೆ ಹಾಕಿದರು. ಕೋರ್ಟಿನಲ್ಲಿ ಅದು ನಡೆಯಿತು. ಖಟ್ಲೆಯಲ್ಲಿ ಇಬ್ಬರೂ ಭಾಗತೆಗೆದುಕೊಳ್ಳುವದಿಲ್ಲೆಂದು ಹೇಳಿದ್ದರಿಂದ ಅದರ ತೀರ್ಪನ್ನು ಅಂದೇ ಹೇಳಿದರು. ಸತ್ಯಾಗ್ರಹಿ ವ್ಯಾಖ್ಯಾನಕಾರರಿಗೆ ೪ ತಿಂಗಳು ಸಕ್ತ ಮಜೂರಿ ಶಿಕ್ಷೆ ಮತ್ತು ಸಭೆಯಲ್ಲಿ ಏನನ್ನೂ ಮಾತನಾಡದ ಸಭಾಧ್ಯಕ್ಷರಿಗೆ ೨ ವರುಷ ಸಶ್ರಮ ಶಿಕ್ಷೆ ವಿಧಿಸಲಾಯಿತು. ಸಾಯಂಕಾಲವಾಗುವ ಮೊದಲೇ ಅವರಿಬ್ಬರೂ ಹಿಂಡಲಗಿ ಸೆರೆಮನೆಯಲ್ಲಿದ್ದರು.

೬. ಬುಲೆಟಿನ್ ಮುಖಾಂತರ ಆಂದೋಲನದ ಪ್ರಚಾರ (೧೯೩೨)

ಆಂದೋಲನವು ಪ್ರಾರಂಭವಾದಂದಿನಿಂದ ೪–೫ ತಿಂಗಳುಗಳಲ್ಲಿಯೇ ಎಲ್ಲ ಕಾರ್ಯಕರ್ತರು ಸೆರೆಮನೆಗೆ ಹೋದುದರಿಂದ ಹೊರಗಿನ ವಾತಾವರಣವು ಶಾಂತವಾಗುತ್ತ ಬಂದಿತ್ತು. ಆಂದೋಲನದ ಸುದ್ದಿಗಳನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಬಾರ

ದೆಂದು ಸರಕಾರವು ಕಟ್ಟಪ್ಪಣೆ ವಿಧಿಸಿದುದರಿಂದ ವರ್ತಮಾನ ಪತ್ರಿಕೆಗಳಲ್ಲಿ ಆಂದೋಲನದ ಸುದ್ದಿಗಳು ಬರುತ್ತಿದ್ದಿಲ್ಲ. ಆದರಿಂದ ಆಂದೋಲನವು ನಿಂತುಹೋಯಿತೆಂಬ ಭಾವನೆ ಜನರಲ್ಲಿ ಬರುವುದು ಸ್ವಾಭಾವಿಕವಾಗಿತ್ತು. ಆದಕಾರಣ ಬುಲೆಟಿನ್ ಹೊರಡಿಸಿ ದೇಶದೊಳಗೆ ಅಲ್ಲಲ್ಲಿ ನಡೆಯುವ ಆಂದೋಲನದ ಸುದ್ದಿಗಳನ್ನು ಜನರಿಗೆ ತಿಳಿಸಬೇಕೆಂದು ನಾವು ನಿಶ್ಚಯಿಸಿದೆವು. ಒಂದು ಸಾಯಕ್ಲೋಸ್ಟಾಯಿಲ್ ಯಂತ್ರ ದೊರಕಿಸಿಕೊಂಡೆವು. ಶಹಾಪೂರದಲ್ಲಿ ಶ್ರೀ ಬಾಳೇಕುಂದರಗಿ ಎಂಬವರ ಮನೆಯಲ್ಲಿ ಬುಲೆಟಿನ್ ಹೊರಡಿಸುವ ಕೆಲಸವನ್ನು ಆರಂಭಿಸಿದೆವು.

ನಾನೂ ಸಹ ಅವರ ಮನೆಯಲ್ಲಿಯೇ ಹೊರಗಿನ ಕೋಣೆಯಲ್ಲಿ ಇರುತ್ತಿದ್ದೆ. ಪ್ರತಿ ವಾರಕ್ಕೊಮ್ಮೆ ತಪ್ಪದೆ ಬುಲೆಟಿನ್ ಹೊರಡತೊಡಗಿತು. ಕೆಲವು ಸ್ವಯಂ ಸೇವಕರನ್ನು ಬುಲೆಟಿನ್ ಹಂಚುವ ಕೆಲಸಕ್ಕೆ ಇಟ್ಟಿದ್ದೆವು. ಸ್ವಯಂಸೇವಕರಾರೂ ನಾನಿದ್ದ ಸ್ಥಳಕ್ಕೆ ಬರುತ್ತಿದ್ದಿಲ್ಲ. ಶ್ರೀ ಅಪ್ಪಣ್ಣ ದೇಶಪಾಂಡೆ, ಹುದಲಿಯವರೊಬ್ಬರೇ ಮಾತ್ರ ನನ್ನ ಹತ್ತಿರ ಬಂದು, ಬುಲೆಟಿನ್ ತೆಗೆದುಕೊಂಡು ಹೋಗಿ, ಸ್ವಯಂಸೇವಕರಿಗೆ ಕೊಡುತ್ತಿದ್ದರು. ಅವರು ಸಾಯಕಲ್ ಮೇಲಿಂದ ಬೇರೆ ಬೇರೆ ಭಾಗಗಳಿಗೆ ಹೋಗಿ ಬುಲೆಟಿನ್ ಹಂಚುತ್ತಿದ್ದರು. ದೂರಿನ ಊರುಗಳಿಗೆ ಅಂಚೆಯಿಂದ ಕಳಿಸಲಾಗುತ್ತಿತ್ತು. ಕಲೆಕ್ಟರ. ಮಾಮಲೇದಾರ. ಡಿ. ಎಸ್. ಪಿ. ಮೊದಲಾದ ಅಧಿಕಾರಿಗಳಿಗೂ ಅಂಚೆಯಿಂದ ತಪ್ಪದೆ ಬುಲೆಟಿನ್ ಹೋಗುತ್ತಿದ್ದವು.

ಒಂದೆರಡು ತಿಂಗಳು ಈ ರೀತಿಯಾಗಿ ಬುಲೆಟಿನ್ ಹೊರಡಹತ್ತಿದ್ದರಿಂದ ಡಿ. ಯಸ್. ಪಿ. ಅವರಿಗೆ ಕಲೆಕ್ಟರರಿಂದ ಒತ್ತಾಯ ಬಂದಿತು. ಬುಲೆಟಿನ್ ಯಾರು ಹೊರಡಿಸುತ್ತಾರೆ ? ಎಲ್ಲಿ ಹೊರಡಿಸುತ್ತಾರೆ ? ಎಂಬುದನ್ನು ಶೋಧಮಾಡಲು ಹೇಳಿದರು. ಆಗ ಕಾರ್ಯಕರ್ತರಲ್ಲಿ ಹೊರಗುಳಿದವರಲ್ಲಿ ನಾನೊಬ್ಬನೇ. ನಾನು ಮೇಲಿಂದ ಮೇಲೆ ಹುದಲಿಗೆ ಹೋಗಿ ಬಂದು ಮಾಡುತ್ತಿದ್ದೆ. ನನ್ನ ಮೇಲೆ ವಾರಂಟ್ ಹೊರಟಿದೆ. ಎಂದು ಕೇಳಿದೆ. ಆದುದರಿಂದ ನಾನು ಬಹಳ ಜಾಗರೂಕತೆಯಿಂದ ತಿರುಗಾಡುತ್ತಿದ್ದೆ.

ಪೋಲೀಸನ ಕೈಯಿಂದ ಪಾರಾದುದು

ನನ್ನ ಮೇಲೆ ವಾರಂಟಿದೆ ಎಂಬ ಸುದ್ದಿಯಿದ್ದುದರಿಂದ ನಾನು ಸ್ವಲ್ಪ ಎಚ್ಚರಿಕೆಯಿಂದಲೇ ಕೆಲಸ ಮಾಡುತ್ತಿದ್ದೆನು. ಹೀಗೆಯೇ ಒಂದು ದಿವಸ ಹುದಲಿಯಿಂದ ಬೆಳಗಾಂವಿಗೆ ನಾಲ್ಕು ಗಂಟೆಯ ಗಾಡಿಗೆ ಬಂದೆನು. ಸ್ಟೇಶನ್ನಿನ ಮೇಲೆ ಒಬ್ಬ ಬಿನ್-ಡ್ರೆಸ್ಸಿನ ಪೋಲೀಸನಿದ್ದ. ನಾನು ಅವನ ಕಡೆಗೆ ಲಕ್ಷ್ಯಕೊಡದೆ ಸುಮ್ಮನೆ ಹೊರಗೆ ಬಂದೆ. ಅವನು ಕಣಬುರಗಿಯವನಾದುದರಿಂದ ಅವನಿಗೆ ನನ್ನ ಗುರುತು ಇತ್ತು. ಅವನು ನನ್ನ ಬೆನ್ನುಹತ್ತಿ ಬರತೊಡಗಿದನು. ನಾನು ಬಹಳ ದೂರದ ವರೆಗೆ ಹೋದೆ. ಅತ್ತ

ನನ್ನ ಬೆನ್ನುಹಿಂದೆಯೇ ಬರುತ್ತಿದ್ದ. ನಾನು ನನ್ನ ಹೋಗುವ ದಾರಿಯನ್ನು ಬಿಟ್ಟು, ಬೇರೆ ದಾರಿ ಹಿಡಿದೆ. ಅವನೂ ಸಹ ನನ್ನ ಬೆನ್ನಹತ್ತಿ ಬರಹತ್ತಿದ. ಆಗ ನಾನು ಅವನಿಂದ ತಪ್ಪಿಸಿಕೊಳ್ಳಬೇಕೆಂದು ರಾಮಲಿಂಗ ಖಿಂಡಿಯಲ್ಲಿಯ ಡಾ. ಕೋವಾಡಕರರ ಮನೆಯೊಳಗೆ ಹೋದೆ.

ಆಗ ಡಾಕ್ಟರರು ಮನೆಯಲ್ಲಿರಲಿಲ್ಲ. ಅವರ ಮನೆಯವರಿಗೆ ನನ್ನ ಪರಿಚಯ ವಿರಲಿಲ್ಲ. ಹೊರಗೆ ಪೋಲೀಸ ನಿಂತುಬಿಟ್ಟಿದ್ದ. ಹೆಣ್ಣುಮಕ್ಕಳು 'ಡಾಕ್ಟರ್' ಮನೆ ಯಲ್ಲಿಲ್ಲೆಂದು ಹೇಳಿದರು. ಇನ್ನೇನು ಮಾಡುವುದೆಂದು ಹೊರಗೆ ಬಂದೆ. ಬೇರೆ ಕಡೆಗೆ ಹೊರಟೆ. ಆ ಪೋಲೀಸ ನನ್ನನ್ನು ಅಡ್ಡಗಟ್ಟಿ ಪೋಲೀಸ ಸ್ಟೇಶನ್ನಿಗೆ ಬರಬೇಕೆಂದು ಹೇಳಿದನು. 'ಅಲ್ಲಿ ನನ್ನದೇನೂ ಕೆಲಸವಿಲ್ಲ. ಕಾರಣ ನಾನು ಬರುವುದಿಲ್ಲ' ಎಂದು ಅವನಿಗೆ ಹೇಳಿದೆ. 'ನಿಮ್ಮ ಮೇಲೆ ವಾರಂಟ್ ಇದೆ. ಆದುದರಿಂದ ನೀವು ಪೋಲೀಸ ಸ್ಟೇಶನ್ನಿಗೆ ಬರಬೇಕು' ಎಂದು ಅವನು ನನಗೆ ತಿಳಿಸಿದನು. 'ವಾರಂಟ್ ತೆಗೆದುಕೊಂಡು ಬಾ. ಅನಂತರ ಬರುತ್ತೇನೆ' ಎಂದಂದವನೇ ನಾನು ಹೊರಟೇಬಿಟ್ಟೆ. ಆತನೂ ನನ್ನ ಬೆನ್ನು ಬಿಡಲೇ ಇಲ್ಲ.

ದೇಶಪಾಂಡೆ ಹನುಮಂತರಾಯರ ಮನೆ ಬಹಳ ದೊಡ್ಡದು. ಬಸವಣ್ಣಗಲ್ಲಿ ಯಲ್ಲಿ ಹಿತ್ತಿಲ ಬಾಗಿಲವಿದ್ದರೆ ದೇಶಪಾಂಡೆಗಲ್ಲಿಯೊಳಗೆ ಅದರ ಮುಂಚೀಬಾಗಿಲವಿದೆ. ಆದುದರಿಂದ ಬಸವಣ್ಣಗಲ್ಲಿಯೊಳಗಿನ ಬಾಗಿಲದಿಂದ ಹಾಯ್ದು ದೇಶಪಾಂಡೆಗಲ್ಲಿಗೆ ಹೋಗಬಹುದಿತ್ತು. ಆದರೆ ಇದು ಹೊಸಬರಿಗೆ ಗೊತ್ತಾಗುವಂತಿರಲಿಲ್ಲ. ಆಗ ನಾನು ಅವರ ಅಟ್ಟದ ಮೇಲಿನ ಕೋಣೆಯೊಳಗೇ ಇರುತ್ತಿದ್ದೆ. ಬಸವಣ್ಣಗಲ್ಲಿಗೆ ಬಂದ ಕೂಡಲೇ ನಾನು ಬಾಗಿಲೊಳಗೆ ಹೋದೆ. ಪೋಲೀಸನೂ ಒಳಗೆ ಬರಬೇಕೋ ಅಥವಾ ಬರ ಬಾರದೋ ಎಂಬ ಗೊಂದಲದಲ್ಲಿ ಬಿದ್ದ. ನಾನೂ ಸ್ವಲ್ಪ ಆತನಿಗೆ 'ಒಳಗೆ ಬರು ತ್ತೀಯಾ ?' ಎಂದು ಗದ್ದರಿಸಿದೆ. ಆಗ ಅವನು ಹಿಂತಿರುಗಿ, ನೇರವಾಗಿ ಪೋಲೀಸ ಸ್ಟೇಶನ್ನಿಗೆ ಹೋಗಿ ವರದಿಮಾಡಿದ. ನಾನು ದೇಶಪಾಂಡೆಯವರ ಅಟ್ಟದ ಮೇಲೆ ಹೋಗಿ ಕೋಣೆಯಲ್ಲಿ ಕುಳಿತೆ. ಹನುಮಂತರಾಯರ ಮನೆಯೊಳಗೆ ನಾನು ಹೋದು ದನ್ನು ಅವನು ಪೋಲೀಸ ಠಾಣೆಯಲ್ಲಿ ಹೇಳಿರಬೇಕು.

ದೇಶಪಾಂಡೆ ಹನುಮಂತರಾಯರು ಪೋಲೀಸರನ್ನು ಬೆದರಿಸಿದುದು

ಮುಂದೆ ಅರ್ಧ ಗಂಟೆಯೊಳಗೇ ನಾಲ್ಕಾರು ಪೋಲೀಸರೂ ಸಬ್-ಇನ್‌ಸ್ಪೆಕ್ಟ ರರೂ ಶ್ರೀ ಹನುಮಂತರಾಯರ ಮನೆಗೆ ಬಂದು ನನ್ನ ಬಗೆಗೆ ವಿಚಾರಿಸತೊಡಗಿದರು. ಆಗ ಹನುಮಂತರಾಯರು ಮನೆಯಲ್ಲಿಯೇ ಹೊರಗಡೆಗೆ ಕುಳಿತಿದ್ದರು. ಬಾಂಬ್ ಪ್ರಕ ರಣದಂತಹ ಭಯಂಕರ ಪೋಲೀಸರ ಅತ್ಯಾಚಾರದ ಕಾಲಕ್ಕೇನೇ ಪೋಲೀಸರಿಗೆ ಸೊಪ್ಪು ಹಾಕದ ಹನುಮಂತರಾಯರು ಈ ಪೋಲೀಸರನ್ನು ಕೇಳುತ್ತಾರೆಯೇ ? ಪೋಲೀಸರು

ಸೌಮ್ಯವಾಗಿ 'ವಡವಿಯವರು ಇಲ್ಲಿ ಬಂದಿದ್ದಾರಂತಲ್ಲ' ಎಂದು ವಿಚಾರಿಸಿದರು. ನನ್ನ ಮೇಲೆ ವಾರಂಟಿದೆ ಎಂಬುದು ಹನುಮಂತರಾಯರಿಗೂ ಗೊತ್ತಿತ್ತು. ನಾನು ಅವರ ಅಟ್ಟದ ಮೇಲೆ ಕೋಣೆಯಲ್ಲಿರುತ್ತೇನೆಂಬುದೂ ಅವರಿಗೆ ಗೊತ್ತಿತ್ತು. ಆದರೆ ನಾನು ಈಗ ಪೋಲೀಸರ ಕೈಯಿಂದ ತಪ್ಪಿಸಿಕೊಂಡು ಬಂದು ಅವರ ಅಟ್ಟದ ಮೇಲಿನ ಕೋಣೆ ಯಲ್ಲಿ ಕುಳಿತುಕೊಂಡುದು ಅವರಿಗೆ ಗೊತ್ತಿರಲಿಲ್ಲ.

ದೇಶಪಾಂಡೆಯವರ ಅಟ್ಟದ ಮೇಲೆ ನಾಲ್ಕೆಂಟು ಕೋಣೆಗಳಿದ್ದವು. ಅವು ಗಳನ್ನು ಅವರು ವಿದ್ಯಾರ್ಥಿಗಳಿಗೆ ಬಾಡಿಗೆಗೆ ಕೊಡುತ್ತಿದ್ದರು. ಅವುಗಳಲ್ಲೊಂದರಲ್ಲಿ ನಾನೂ ಇರುತ್ತಿದ್ದೆ. ಪೋಲೀಸರು ನನ್ನ ಬಗ್ಗೆ ವಿಚಾರಿಸಿದ ಕೂಡಲೇ ಹನುಮಂತ ರಾಯರು ತಮ್ಮ ಉಚ್ಚಸ್ವರದಲ್ಲಿ "ಯಾವ ವಡವಿ? ಅವನೇಕೆ ಇಲ್ಲಿಗೆ ಬರುತ್ತಾನೆ? ಅವನಿಗೂ ನಮಗೂ ಏನು ಸಂಬಂಧ? ಸಿಕ್ಕವರನ್ನು ಸಿಕ್ಕವರ ಮನೆಯಲ್ಲಿ ಕೇಳಲು ನಿಮಗೆ ತಿಳಿಯುವದಿಲ್ಲವೇ?" ಎಂದು ಮುಂತಾಗಿ ಪೋಲೀಸರನ್ನು ಗದ್ದರಿಸಿದರು. ಅವರ ಗರ್ಜನೆಯನ್ನು ಕೇಳಿ, ಪೋಲೀಸರು ಸುಮ್ಮನೆ ಅಲ್ಲಿಂದ ಹೊರಟುಹೋದರು.

ಇಷ್ಟಾದ ನಂತರ ಶ್ರೀ ಹನುಮಂತರಾಯರು ಅಟ್ಟದ ಮೇಲೆ ಬಂದು, ನನ್ನ ಕೋಣೆಯ ಬಾಗಿಲವನ್ನು ಟಕ್ ಟಕ್ ಎಂದು ಬಡಿದರು. ನಾನು ಬಾಗಿಲನ್ನು ತೆರೆದೆ. ಹೊರಗೆ ಹನುಮಂತರಾಯರು ನಿಂತಿದ್ದರು. ಅವರು ನನಗೆ "ಏ ಮಹಾರಾಯಾ, ಈಗ ಪೋಲೀಸರು ಬಂದು ನಿನ್ನನ್ನು ಕೇಳುತ್ತಿದ್ದರು. ನಾನು ಅವರನ್ನು ಬಯ್ದು ಕಳಿಸಿದೆ." ಎಂದರು. ನಾನು ನಡೆದ ಸಂಗತಿಯನ್ನು ಅವರಿಗೆ ತಿಳಿಸಿದೆ. ಅವರು ನಗುತ್ತ "ನೀನು ಬೇಗನೆ ಇಲ್ಲಿಂದ ಕಾಲು ಕಿತ್ತು." ಎಂದು ಹೇಳಿದರು. ನಾನು ಕೂಡಲೇ ಅಲ್ಲಿಂದ ಬೇರೆ ಕಡೆಗೆ ಹೊರಟುಹೋದೆ.

೭. ಗವಳಿಗನ ವೇಷದಿಂದ ಪಲಾಯನ

ನನಗೆ ಎಷ್ಟೋ ಸಾರೆ ಪೋಲೀಸರ ಕೈಯೊಳಗಿಂದ ತಪ್ಪಿಸಿಕೊಂಡು ಹೋಗುವ ಪ್ರಸಂಗಗಳು ಬಂದಿವೆ. ಅವುಗಳಲ್ಲಿ ಇನ್ನೊಂದನ್ನು ಇಲ್ಲಿ ಕೊಡುತ್ತೇನೆ. ಮತ್ತೊಮ್ಮೆ ನನಗೆ ಈ ಮೊದಲು ಬಂದಂಥ ಪ್ರಸಂಗ ಬಂದಿತು. ನಾನು ಮೇಲಿಂದ ಮೇಲೆ ಸ್ಥಳ ಬದಲಾಯಿಸಬೇಕಾಗುತ್ತಿತ್ತು. ಒಂದೇ ಸ್ಥಳದಲ್ಲಿದ್ದರೆ ಪೋಲೀಸರಿಗೆ ನನ್ನ ಸುಳಿವು ಹತ್ತಿ, ನಾನು ಅವರ ಕೈಗೆ ಸಿಗಬಹುದೆಂಬ ವಿಚಾರದಿಂದ ಹೀಗೆ ಮಾಡಬೇಕಾಗು ತ್ತಿತ್ತು. ನಾನು ಅಂದು ತಳಕವಾಡಿಯಲ್ಲಿರುವ ಶ್ರೀ ಜೀವಣರಾವ ಯಾಳಗಿಯವರ ಮನೆಯಲ್ಲಿದ್ದೆ. ಶ್ರೀ ಜೀವಣರಾಯರು ಸೆರೆಮನೆಯಲ್ಲಿದ್ದರು. ಮನೆಯಲ್ಲಿ ಅವರ ಪತ್ನಿ ಸೌ. ರಮಕ್ಕ ಒಬ್ಬರೇ ಇದ್ದರು. ಬೆಳಿಗ್ಗೆ ೮ ಗಂಟೆಯಾಗಿರಬಹುದು. ಗವಳಿಗ ಬಂದು ಹಾಲು ಕೊಡುತ್ತಿದ್ದ. ನಾನೂ ಅಲ್ಲಿಯೇ ನಿಂತಿದ್ದೆ.

ಅಷ್ಟರಲ್ಲಿ ನಾಲ್ಕಾರು ಜನ ಪೋಲೀಸರು ಅವರ ಗೇಟಿಗೆ ಬಂದರು. ಮೈಮೇಲೆ ಸಂಕಟ ಬಂದಾಗ ಬುದ್ಧಿಯೂ ಹಾಗೆಯೇ ಚುರುಕಾಗಿ ಓಡುತ್ತಿರುವುದೋ ಏನೋ ! ಆಗ ನನಗೆ ಏನು ಹೊಳೆಯಿತೋ ಏನೋ ! ಗವಳಿಗನನ್ನು 'ನೀನು ತೊಟ್ಟಿರುವ ಕೋಟು ಹಾಗೂ ರುಮಾಲ ಕೊಡುತ್ತಿಯಾ ?' ಎಂದು ಕೇಳಿದೆ. ಸೌ. ರಮಕ್ಕ ಅವರೂ ಆತನಿಗೆ ಆತನ ಬಟ್ಟೆ ಕೊಡಲು ಹೇಳಿದರು. ಆತನೂ ಸಮ್ಮತಿಸಿದ. ನಾನು ಕೂಡಲೇ ಆತನ ಕೋಟು ತೊಟ್ಟು, ರುಮಾಲ ಸುತ್ತಿಕೊಂಡೆ. ಆತನವೇ ಆದ ಎರಡು ಹಾಲಿನ ಖಾಲಿ ಪಾತ್ರೆಗಳನ್ನು ಸಾಯಕಲ್ಲಿಗೆ ತೂಗು ಹಾಕಿಕೊಂಡು ಪೋಲೀಸರ ಎದುರಿನಲ್ಲಿಯೇ ಹೊರಟುಹೋದೆ.

ನಾನು ಹೋದನಂತರ ಪೋಲೀಸರು ಮನೆಯೊಳಗೆ ಬಂದು ಅತ್ತಿತ್ತ ಹುಡುಕಾಡಿದರು. ಅಲ್ಲಿ ಗವಳಿಗ ಕುಳಿತಿದ್ದ. 'ಈತನಾರು ?' ಎಂದು ಪೋಲೀಸರು ಸೌ. ರಮಕ್ಕ ಅವರನ್ನು ಕೇಳಿದರು. ಅದಕ್ಕೆ ಅವರು 'ಈತ ನಮ್ಮ ಮನೆಗೆ ಹಾಲು ಕೊಡುವ ಗವಳಿ' ಎಂದು ಹೇಳಿದರು. 'ಸಾಯಕಲ್ ಮೇಲಿಂದ ಈಗ ಒಬ್ಬ ಗವಳಿ ಹೋದನಲ್ಲ !' ಎಂದು ಮತ್ತೆ ಪೋಲೀಸರು ವಿಚಾರಿಸಿದರು. 'ಒಬ್ಬ ಗವಳಿಯಿಂದ ನಮ್ಮ ಮನೆಗೆ ಹಾಲು ಸಾಲುವುದಿಲ್ಲ. ಇಬ್ಬರು–ಮೂವರು ಗವಳಿಗರು ಹಾಲು ಕೊಡುತ್ತಾರೆ' ಎಂದು ಸೌ. ರಮಕ್ಕ ಉತ್ತರಕೊಟ್ಟರು. ಇದನ್ನು ಕೇಳಿ ಪೋಲೀಸರು ಬೆಪ್ಪಾಗಿ ಹಾಗೆಯೇ ಹೊರಟು ಹೋದರು.

ಈ ಕಾಲದ ಇಂತಹ ಅನೇಕಾನೇಕ ಮೋಜಿನ ಸಂಗತಿಗಳನ್ನು ಹೇಳುತ್ತ ಕುಳಿತರೆ, ಅದೇ ಒಂದು ಉದ್ಗ್ರಂಥವಾಗಬಹುದು. ಆದ್ದರಿಂದ ಮುಖ್ಯ ಮುಖ್ಯ ಸಂಗತಿಗಳನ್ನಷ್ಟೇ ಮಾತ್ರ ಉಲ್ಲೇಖಿಸಿ, ೧೯೩೨ರ ಆಂದೋಲನಕಾಲದ ವಿವರಣೆಯನ್ನು ಮುಗಿಸುತ್ತೇನೆ.

೮. ಕುಮರಿ ಆಶ್ರಮ ಪೋಲೀಸವಶ (೧೯೩೨)

ಕರ್ನಾಟಕದಲ್ಲಿ ರಾಷ್ಟ್ರೀಯ ಆಂದೋಲನದ ಉಗಮ ಸ್ಥಾನವೆಂದರೆ ಹುದಲಿಯ ಕುಮರಿ ಆಶ್ರಮವೇ ಎಂಬುದನ್ನು ಸರಕಾರವು ಅರಿತಿತ್ತು. ಅದನ್ನು ನಮ್ಮ ವಶಕ್ಕೆ ತೆಗೆದುಕೊಳ್ಳದ ಹೊರತು ಈ ಭಾಗದಲ್ಲಿಯ ಚಳುವಳಿ ನಿಲ್ಲುವದಿಲ್ಲೆಂದು ಪೋಲೀಸ ಅಧಿಕಾರಿಗಳು ನಿರ್ಣಯಿಸಿದರು. ಆದ್ದರಿಂದ ಒಂದು ದಿವಸ ಬೆಳಗಾವಿಯ ಡಿ. ಎಸ್. ಪಿ. ತಮ್ಮ ಸಂಗಡ ಕೆಲವೊಂದು ಪೋಲೀಸರನ್ನು ಕರೆದುಕೊಂಡು ಕುಮರಿ ಆಶ್ರಮಕ್ಕೆ ಬಂದರು. ಆಶ್ರಮದಲ್ಲಿಯ ಸಾಮಾನುಗಳಲ್ಲಿ ಒಯ್ಯಲು ಬರುವಂಥ ಕೆಲ ಸಾಮಾನುಗಳನ್ನು ಪೋಲೀಸರು ತೆಗೆದುಕೊಂಡು ಹೋದರು. ಇನ್ನುಳಿದ ರಾಟಿ ಮುಂತಾದ ಸಾಮಾನುಗಳನ್ನು ಸುಟ್ಟು ಹಾಕಿದರು. ಆಶ್ರಮದ ಕಟ್ಟಡಕ್ಕೆ ಬೀಗ ಜಡಿದು ಸೀಲ್ ಮಾಡಿ, ಆಶ್ರಮ ಜಪ್ತಾಯಿತೆಂದು ಜಾಹೀರುಪಡಿಸಿದರು. ಆಶ್ರಮದ ಕಾವಲಿ

ಗಾಗಿ ನಾಲ್ಕು ಜನ ಸಶಸ್ತ್ರ ಪೋಲೀಸರನ್ನು ಇಟ್ಟು ಇತರರು ಅಲ್ಲಿಂದ ಹೊರಟು ಹೋದರು.

ನಾನು (ವಡವಿ) ಈ ಆಶ್ರಮದಲ್ಲಿಯೇ ಒಂದು ಸ್ವತಂತ್ರ ಮನೆ ಮಾಡಿಕೊಂಡಿರುತ್ತಿದ್ದೆ. ನನ್ನ ಮನೆಯ ಪಾತ್ರೆ-ಪಡಗ ದೊದಲಾದವುಗಳು ಆಶ್ರಮದಲ್ಲಿಯೇ ಇರುತ್ತಿದ್ದವು. ಪೋಲೀಸರು ಅವೆಲ್ಲವುಗಳನ್ನೂ ಜಪ್ತ ಮಾಡಿಕೊಂಡು ಒಯ್ದರು. ಆಂದೋಲನ ಪ್ರಾರಂಭವಾಗುವ ಪೂರ್ವದಲ್ಲಿಯೇ ನಾನು ನನ್ನ ಕುಟುಂಬವನ್ನು ಕರಜಗಿಗೆ ಕಳುಹಿಸಿಕೊಟ್ಟಿದ್ದೆ. ಜಪ್ತಿ ನಡೆದ ಕಾಲಕ್ಕೆ ನಾನು ಆಶ್ರಮದಲ್ಲಿರಲಿಲ್ಲ. ನಮ್ಮ ಆಶ್ರಮದ ಒಬ್ಬ ಕಾರ್ಯಕರ್ತರಾದ ವಾಸುದೇವಪ್ರಭು (ಗೋಸಾವಿ) ಅಲ್ಲಿದ್ದರು. ಅವರು ಪೋಲೀಸರಿಗೆ "ಈ ಪಾತ್ರೆಗಳೆಲ್ಲವೂ ಶ್ರೀ ವಡವೀ ಮಾಸ್ತರರವು" ಎಂದು ಹೇಳಿದರು.

ಆಗ ಪೋಲೀಸರು "ಬಹಳೇ ಒಳ್ಳೆಯದಾಯಿತು. ಪಾತ್ರೆಗಳನ್ನು ಕೇಳಲು ಸ್ವತಃ ಅವರೇ ಬರಲಿ" ಎಂದರು. ನನ್ನಮೇಲೆ ವಾರಂಟ್ ಇದ್ದಮೂಲಕ ನಾನು ಪೋಲೀಸರಿಗೆ ಭೆಟ್ಟಿಯಾಗುವದು ಶಕ್ಯವಿರಲಿಲ್ಲ. ಜಪ್ತಾದ ಆಶ್ರಮದ ಸಾಮಾನುಗಳು ತಿರುಗಿ ಸಿಗಲಿಲ್ಲ. ನನ್ನ ಪಾತ್ರೆಗಳು ಸಹ ನನಗೆ ತಿರುಗಿ ಎಂದೂ ದೊರೆಯಲೇ ಇಲ್ಲ. ೧೯೩೦ರಲ್ಲಿ ಸಹ ನನ್ನ ಮನೆಯ ಪಾತ್ರೆಗಳು ಇದೇ ರೀತಿಯಾಗಿ ಹೋಗಿದ್ದವು. ಆಶ್ರಮದ ಸಾಮಾನುಗಳ ಜಪ್ತಿಯ ಜೊತೆಗೆ ಆಶ್ರಮದಲ್ಲಿಯ ನೇಕಾರರ ಮನೆಗಳಲ್ಲಿಯ ಸಾಮಾನುಗಳನ್ನೂ ಪೋಲೀಸರು ಜಪ್ತಿಮಾಡಿದರು. ಆಶ್ರಮದಲ್ಲಿ ಹತ್ತು ಸ್ವತಂತ್ರವಾದ ಕೋಣೆಗಳನ್ನು ಕಟ್ಟಿಸಿ, ನೇಕಾರರ ಹತ್ತು ಕುಟುಂಬಗಳನ್ನು ಮನೆ ಮಾಡಿಕೊಂಡಿರಲು ಕರೆದುಕೊಂಡು ಬಂದಿದ್ದೆವು. ಅವರ ಮನೆಗಳನ್ನು ಪೋಲೀಸರು ಜಪ್ತ ಮಾಡಿದನಂತರ ಆ ನೇಕಾರರ ಹತ್ತೂ ಕುಟುಂಬದವರು ಬರಿಗೈ ಬೀಸುತ್ತ ಹುವಲಿಯಲ್ಲಿಯ ತಮ್ಮತಮ್ಮ ಮನೆಗಳಲ್ಲಿ ಇರಲಿಕ್ಕೆ ಹೊರಟುಹೋದರು.

೯. ಕುಮರಿ ಆಶ್ರಮದ ಮೇಲೆ ಕಾರ್ಯಕರ್ತರ ದಾಳಿ

೧೯೩೨ರ ಆಂದೋಲನದ ಪ್ರಾರಂಭದಲ್ಲಿಯೇ ಪೋಲೀಸರು ಆಶ್ರಮವಾಸಿಗಳನ್ನೆಲ್ಲ ಹಿಡಿದು ಸೆರೆಮನೆಗೆ ಕಳಿಸಿದ್ದರು. ಅಲ್ಲಿದ್ದ ರಾಟಿಗಳನ್ನೂ ಮಗ್ಗಗಳನ್ನೂ ತೆಗೆದುಕೊಂಡು ಹೋದರು. ಆಶ್ರಮ ಜಪ್ತಿಮಾಡಿ, ಬೀಗ ಹಾಕಿ, ಮುದ್ರೆಯೊತ್ತಿ, ಕಾವಲಿಗೆ ಪೋಲೀಸರನ್ನಿಟ್ಟರು—ಎಂಬ ವಿಷಯವು ಈ ಮೊದಲೇ ಬಂದಿದೆ.

ಕುಮರಿ ಆಶ್ರಮ

ಆಗಿನ ಕಾಲದ ಕುಮರಿ ಆಶ್ರಮದ ವಿಚಾರವಾಗಿ ಎರಡು ಮಾತುಗಳನ್ನು ಹೇಳುವುದು ಆವಶ್ಯವೆನಿಸುತ್ತಿದೆ. ಕುಮರಿ ಹುದಲಿಯಿಂದ ಪಶ್ಚಿಮಕ್ಕೆ ಒಂದೂವರೆ

ಮೈಲಿನ ಮೇಲೆ ಇದೆ. ಅದರ ಸುತ್ತಲೂ ಗುಡ್ಡ ಹಬ್ಬಿಕೊಂಡಿದೆ. ಎರಡು ಗುಡ್ಡಗಳ ನಡುವಿರುವ ಪ್ರದೇಶವೇ ಕುಮರಿ ಎಂದು ಕರೆಯಲ್ಪಡುತ್ತದೆ. ಅಲ್ಲಿಯೇ ಒಂದು ಹಳ್ಳವು ಹರಿದಿದೆ. ಹಳ್ಳದ ದಂಡೆಯ ಮೇಲೆ ಆಶ್ರಮದ ಜಮೀನಿನಲ್ಲಿ ಬಾಳೆತೋಟ, ಕಬ್ಬಿನ ತೋಟ, ಚಿಕ್ಕು, ಪಪ್ಪಾಯಿ, ಪೇರಲ ಮುಂತಾದ ಹಣ್ಣಿನ ತೋಟಗಳಿವೆ. ಅವ ರಿಂದೀಚೆಗೆ ಗು. ಗಂಗಾಧರರಾಯರು ಇರುವ ಮನೆ, ಅಡುಗೆಯ ಮನೆ, ನೇಯ್ಗೆಯ ಮನೆ, ಖಾದಿಯ ಮನೆ ಮೊದಲಾದವುಗಳಿದ್ದು, ಆಶ್ರಮಕ್ಕೆ ತಕ್ಕ ರಮ್ಯ ಸ್ಥಾನವಾಗಿದೆ; ಪ್ರಶಾಂತವೂ ಆಗಿದೆ. ಫಲಭಾರದಿಂದ ತುಂಬಿ ತೊನೆಯುತ್ತಿದ್ದ ಹಣ್ಣಿನ ತೋಟ, ಬಾಳೆ ತೋಟಗಳು ಪೋಲೀಸರ ಕೈಗೆ ಸಿಕ್ಕಮೇಲೆ ಕೇಳುವದೇನು, ಅವುಗಳ ಇತಿಶ್ರೀ ಯಾಗಲು ಬಹಳ ಸಮಯ ಬೇಕಾಗಿರಲಿಲ್ಲ.

ಈ ಆಶ್ರಮವನ್ನು ಕಾಯಲು ಅಲ್ಲಿ ನಾಲ್ಕು ಜನ ಸಶಸ್ತ್ರ ಪೋಲೀಸರನ್ನು ಸರಕಾರದವರು ಇಟ್ಟೇ ಇದ್ದರು. ಹಗಲಿರುಳೂ ಕಾವಲು ಮಾಡಬೇಕಾದುದೇ ಅವರ ಕರ್ತವ್ಯವಾಗಿತ್ತು. ಆದರೆ ಅವರು ಬಾಳೆಹಣ್ಣುಗಳನ್ನಲ್ಲದೆ ಇನ್ನಿತರ ಹಣ್ಣು ಗಳನ್ನೂ ತಿನ್ನುವುದರಲ್ಲಿ ಮಗ್ನರಾಗಿ, ಬಹಳ ಆರಾಮಾಗಿದ್ದರು. ಹುದಲಿ ಊರ ಜನ ರಿಗೆ ಇದು ಹೇಗೆ ಸಹನವಾಗಬೇಕು ? ಆಗ ಮಳೆಗಾಲ. ಪಕ್ಕದ ಹಳ್ಳ ಧಡಧಡನೆ ಸೂಸಿ ಹರಿಯುತ್ತಿತ್ತು. ಒಂದು ರಾತ್ರಿ ಕೆಲವು ಜನರು ಬಂದು ಬಾಳೆಯ ಗಿಡಗಳನ್ನೆಲ್ಲ ಕೊಯ್ದು ಹಳ್ಳಕ್ಕೆ ಹಾಕಿದರು. ಬನವನ್ನೆಲ್ಲ ನಾಶಮಾಡಿದರು. ಹಳ್ಳದ ದಂಡೆಗಿದ್ದ ಊರ ಜನರು ಮರುದಿನ ಬಾಳೆಗೊನೆಗಳನ್ನು ತೆಗೆದು ತಿಂದು ತೇಗಿದರು. ಜನರು ಇದನ್ನು ನಡೆಸಿದರು. ಇದಕ್ಕೆ ನಮ್ಮ ಸಂಬಂಧವು ಏನೂ ಇರಲಿಲ್ಲ. ನಮ್ಮ ಮನಸ್ಸಿ ನಲ್ಲಿ ಸರಕಾರವು ಹಾಕಿದ ಮುದ್ರೆಯನ್ನು ಒಡೆದು, ಆಶ್ರಮವನ್ನು ನಮ್ಮ ವಶಕ್ಕೆ ತೆಗೆದುಕೊಂಡೆವೆಂದು ಜಾಹೀರು ಮಾಡುವದಿತ್ತು. ಯಾಕೆಂದರೆ ಕಾಂಗ್ರೆಸ್ ಕಾರ್ಯ ಕ್ರಮಗಳಲ್ಲಿ ಇದೂ ಒಂದಾಗಿತ್ತು.

ದಾಳಿಯ ಯೋಜನೆ

ನಾಲ್ಕು ಜನ ಸ್ವಯಂಸೇವಕರನ್ನು ಕರೆದುಕೊಂಡು ನಾವು ೮–೧೦ ಜನ ಅವರ ಸಂಗಡ ಹೋಗಬೇಕು. ನಾವು ದೂರ ನಿಂತಿರಬೇಕು. ಪೋಲೀಸರು ಅವರನ್ನು ಹೊಡೆದು ಬಡಿದು ಮಾಡಿದರೆ, ನಾವೂ ಮುಂದೆ ಹೋಗಬೇಕು–ಎಂದು ಪೂರ್ವಯೋಜನೆ ಮಾಡ ಲಾಗಿತ್ತು. ಪೋಲೀಸರು ರಾತ್ರಿಯಲ್ಲಿ ಇಸ್ಪೇಟ ಆಡಿ, ಬೆಳಿಗ್ಗೆ ೯ ಗಂಟೆಯವರೆಗೆ ಮಲಗಿ ಕೊಳ್ಳುತ್ತಾರೆಂಬುದನ್ನು ನಾವು ತಿಳಿದುಕೊಂಡಿದ್ದೆವು. ಆದ್ದರಿಂದ ಬೆಳಗಿನ ೮ ಗಂಟೆ ಗೇನೇ ದಾಳಿಮಾಡುವುದೆಂದು ನಿಶ್ಚಯಿಸಲಾಗಿತ್ತು.

ನಾವು ಸೂಳೇಭಾವಿಯಿಂದ ಗುಡ್ಡದ ದಾರಿಯಿಂದ ನಡೆಯುತ್ತ ಕುಮರಿಗೆ ಬಂದೆವು. ಈ ಕೆಲಸಕ್ಕೆ ಕರಜಗಿಯ ಶ್ರೀ ನಾರಾಯಣಾಚಾರ್ಯ ಚವಟೆ ಎಂಬವರನ್ನು

ಮುಂದಾಳನ್ನಾಗಿ ಮಾಡಿದ್ದೆವು. ಅವರು ಎತ್ತರ ನಿಲುವಿನ ಕಪ್ಪು ಬಣ್ಣದ ದಪ್ಪಗಿನ ಆಳು. ಅವರ ಜೊತೆಗೆ ಇನ್ನೂ ಮೂರು ಜನ ಸ್ವಯಂಸೇವಕರನ್ನು ಕೊಟ್ಟಿದ್ದೆವು. ಮೊದಲೇ ಹೇಳಿದಂತೆ ಕುಮರಿ, ಗುಡ್ಡಗಳಿಂದ ಸುತ್ತುವರಿಯಲ್ಪಟ್ಟ ಪ್ರದೇಶವಾಗಿದೆ. ಒಂದೊಂದು ಗುಡ್ಡ ಒಂದೊಂದು ಸಂಸ್ಥಾನಕ್ಕೆ ಸೇರಿದವು. ಒಂದು ಸಾಂಗಲಿ, ಇನ್ನೊಂದು ಕುರಂದವಾಡ. ಮತ್ತೊಂದು ಬ್ರಿಟಿಶ್ ಹದ್ದಿಗೆ ಸೇರಿವೆ. ಸಾಂಗಲಿ ಸಂಸ್ಥಾನಕ್ಕೆ ಸೇರಿದ ಗುಡ್ಡದ ಅಂಚಿನ ಹತ್ತಿರವೆ ಒಂದು ದಾರಿಯಿದೆ. ಆ ದಾರಿಯ ಆ ಬದಿಗೆ ಆಶ್ರಮದ ಖಾದಿ-ಕಾರ್ಯದ ಕಟ್ಟಡವಿದೆ. ಅದನ್ನೇ ಸರಕಾರವು ಜಪ್ತಿ ಮಾಡಿ ಮುದ್ರೆಯೊತ್ತಿತ್ತು. ಮುದ್ರೆಯನ್ನೊಡೆದು ಈ ದಾರಿಯನ್ನು ದಾಟಿ, ಈ ಗುಡ್ಡಕ್ಕೆ ಬಂದಿದ್ದರೆ ಪೋಲೀಸರು ನಮ್ಮನ್ನು ಒಡಿಯುವಂತಿರಲಿಲ್ಲ. ಯಾಕೆಂದರೆ ಅದು ಸಾಂಗಲಿ ಸಂಸ್ಥಾನಕ್ಕೆ ಸೇರಿದ್ದು. ಆ ಕೆಲಸವನ್ನು ಬಹಿರಂಗವಾಗಿ ಮಾಡಿ ಅದನ್ನು ನಾವೇ ಮಾಡಿರುವೆವೆಂದು ಸರಕಾರಕ್ಕೂ ಜನತೆಗೂ ತೋರಿಸುವದಿತ್ತು.

ನಾವು ಸಾಂಗಲಿ ಸಂಸ್ಥಾನದ ಗುಡ್ಡದಲ್ಲಿಯೇ ನಿಂತಿದ್ದೆವು. ನಾರಾಯಣಾಚಾರ್ಯರಿಗೆ ಮೊದಲೇ ಸೂಚನೆಗಳನ್ನು ಕೊಟ್ಟಿದ್ದೆವು. "ಒಂದು ದೊಡ್ಡ ಕಲ್ಲಿನಿಂದ ಬಾಗಿಲವನ್ನು ಜೋರಿನಿಂದ ಹೊಡೆಯಬೇಕು. ಬಾಗಿಲು ಮುರಿದ ಕೂಡಲೇ ಸೀಲುಮಾಡಿದ ಕೀಲಿಯನ್ನು ಹೊಡೆದು ಮುರಿಯಬೇಕು. ಅನಂತರ ಕೈಯಲ್ಲಿದ್ದ ಧ್ವಜವನ್ನು ಗಳಕ್ಕೆ ಏರಿಸಿ, ಜಯಜಯಕಾರ ಮಾಡಬೇಕು"—ಎಂದು. ಆ ಪ್ರಕಾರ ನಾರಾಯಣಾಚಾರ್ಯರು ಕೈಯಲ್ಲಿ ದೊಡ್ಡದೊಂದು ಕಲ್ಲನ್ನು ತೆಗೆದುಕೊಂಡು ಬಾಗಿಲಕ್ಕೆ ಹೊಡೆದರು. ಬಾಗಿಲು ಪಳ್ ಎಂದು ಎರಡು ತುಂಡಾಗಿ ಬಿತ್ತು. ಅದರಂತೆ ಮೇಲಿನ ಕೀಲಿಯನ್ನೂ ಸೀಲನ್ನೂ ಮುರಿಯಲಾಯಿತು. ಅನಂತರ ಜಯಜಯಕಾರ ಘೋಷಣೆ ಮಾಡತೊಡಗಿದರು. ಯೋಜನೆಯಂತೆ ಎಲ್ಲವೂ ಸರಿಯಾಗಿಯೇ ಆಯಿತು.

ಇದೆಲ್ಲವನ್ನು ನೀರು ತರಲು ಹೋಗುತ್ತಿರುವ ಪೋಲೀಸರ ಹೆಂಡಂದಿರು ನೋಡಿ, ಓಡಿ ಹೋಗಿ, ಮಲಗಿದ್ದ ತಮ್ಮ ಗಂಡಂದಿರಿಗೆ ಹೇಳಿದರು. ಅವರು ಹಾಸಿಗೆಯಿಂದೆದ್ದು ಹಾಗೆಯೆ ಅಸ್ತವ್ಯಸ್ತವಾದ ಬಟ್ಟೆಗಳಿಂದ ಧಾವಿಸುತ್ತ ಅಲ್ಲಿಗೆ ಬಂದರು. ಅಷ್ಟರಲ್ಲಿ ಎಲ್ಲ ಕೆಲಸ ಮುಗಿದು ಹೋಗಿತ್ತು. ಪೋಲೀಸರು ಶ್ರೀ ನಾರಾಯಣಾಚಾರ್ಯರ ಕಪಾಳಕ್ಕೆ ಹೊಡೆದರು. ಆ ಕೂಡಲೇ ನಾವು ಗುಡ್ಡದೊಳಗಿಂದಲೇ ಜಯಜಯಕಾರ ಮಾಡತೊಡಗಿದೆವು. ನಮ್ಮ ಜನ ಬಹಳ ಇದೆ ಎಂದು ಭಾವಿಸಿ, ಪೋಲೀಸರು ಅವರನ್ನು ಹೊಡೆಯುವದನ್ನು ಬಿಟ್ಟರು. ಗಡಿಬಿಡಿಯಿಂದ ಡ್ರೆಸ್ ಹಾಕಿಕೊಂಡು ಹುದಲಿಗೆ ಸ್ವಯಂಸೇವಕರನ್ನು ಕರೆದುಕೊಂಡು ಹೋದರು. ಅಲ್ಲಿಯೇ ಪಂಚನಾಮೆ ಮಾಡಿಸಿ, ಅವರನ್ನು ಬೆಳಗಾಂವಿಗೊಯ್ದು, ಖಟ್ಲೆ ಹಾಕಿದರು. ಎಲ್ಲರಿಗೂ ಒಂದೊಂದೇ ವರುಷ ಕಠಿಣ ಶಿಕ್ಷೆಯಾಯಿತು. ಆಗ ಕುಮರಿಯಲ್ಲಿದ್ದ ಪೋಲೀಸರನ್ನು ನವಕರಿಯಿಂದ ತೆಗೆದು ಹಾಕಿದರೆಂದು ನಾವು ಕೇಳಿದೆವು.

೧೦. ಸರಕಾರದ ತಂತ್ರ ಬುಡಮೇಲಾಯಿತು

ಮೆರವಣಿಗೆ. ಧ್ವಜವಂದನೆಗಳು ನಡೆದವು. ಸಿಂದೀಗಿಡ ಕಡಿಯುವ ಕಾರ್ಯ ಕ್ರಮ ಆರಂಭವಾಯಿತು. ಸೆರೆ–ಸಿಂದಿ ಅಂಗಡಿಗಳ–ಗಡಂಗಗಳ ಮುಂದೆ ಪಿಕೆಟಿಂಗ್ (ನಿರೋಧ) ನಡೆಯಿತು. ಸರಕಾರವು ಈ ಸಲ ಇಂಥ ಕಾರ್ಯಕ್ರಮ ಮಾಡಿದವರಿಗೆ ಉಗ್ರ ಶಿಕ್ಷೆ ವಿಧಿಸತೊಡಗಿತು. ಪ್ರಭಾತಫೇರಿ ತೆಗೆದವರಿಗೂ ಧ್ವಜವಂದನೆ ಮಾಡಿದವ ರಿಗೂ ವರ್ಷ ಎರಡು ವರ್ಷಗಳ ಶಿಕ್ಷೆ ಹಾಗೂ ಸಾವಿರಾರು ರೂಪಾಯಿ ದಂಡ ವಿಧಿಸ ತೊಡಗಿತು. ದಂಡ ಮಾಡಿದ ಕೂಡಲೇ ಅದರ ವಸೂಲಿಯ ಕೆಲಸವೂ ಆರಂಭವಾಗು ತ್ತಿತ್ತು. ಈ ರೀತಿ ಉಗ್ರ ದಬ್ಬಾಳಿಕೆ ನಡೆಸಿ ಚಳುವಳಿಯನ್ನು ಹತ್ತಿಕ್ಕಿ, ಕಾಂಗ್ರೆಸ್ಸನ್ನು ನಿರ್ನಾಮ ಮಾಡಬೇಕೆಂದು ಸರಕಾರದ ಉದ್ದೇಶವಾಗಿತ್ತು.

ಭಾರತದ ಇನ್ನಿತರ ಕಡೆಗಳಂತೆ ಹುದಲಿಯಲ್ಲಿಯೂ ಕಾನೂನುಭಂಗ ಕಾರ್ಯ ಕ್ರಮಗಳು ಆರಂಭವಾದವು. ಪ್ರಾರಂಭಕ್ಕೆ ಶ್ರೀ ಗಂಗಪ್ಪ ಯಮಕನಮರಡಿ ಶ್ರೀ ಅಲ್ಲೀ ಸಾಹೇಬ ವಾರೀಮನಿ ಶ್ರೀ ವಿರುಪಾಕ್ಷಪ್ಪ ಬೆಲ್ಲದ ಅವರು ಪ್ರಭಾತಫೇರಿ ತೆಗೆದರು. ಪ್ರಭಾತಫೇರಿ ತೆಗೆದುದಕ್ಕಾಗಿ ವಿರುಪಾಕ್ಷಪ್ಪ ಬೆಲ್ಲದ ಅವರಿಗೆ ಒಂದು ವರ್ಷ ಶಿಕ್ಷೆ ಹಾಗೂ ಒಂದು ಸಾವಿರ ರೂಪಾಯಿ ದಂಡ ವಿಧಿಸಿದರು. ದಂಡ ವಸೂಲಿಗಾಗಿ ಅವರ ಕಿರಾಣಿ ಅಂಗಡಿ ಜಪ್ತಿಮಾಡಿದರು. ಅಲ್ಲೀಸಾಹೇಬರಿಗೆ ಒಂದೂವರೆ ವರ್ಷ ಶಿಕ್ಷೆ ಮತ್ತು ೩೦೦ ರೂ. ದಂಡ ಮತ್ತು ಗಂಗಪ್ಪ ಅವರಿಗೆ ಆರು ತಿಂಗಳು ಶಿಕ್ಷೆ, ೫೦೦ ರೂ. ದಂಡಗಳಾದವು. ಇದರ ಪರಿಣಾಮ ಹುದಲಿ ಮತ್ತು ಸುತ್ತುಮುತ್ತಲಿನ ಊರುಗಳ ಮೇಲೆ ಆಗಿ, ಮುಂದೆ ಚಳುವಳಿಯಲ್ಲಿ ಯಾರೂ ಭಾಗ ತೆಗೆದುಕೊಳ್ಳಬಾರದೆಂದು ಸರಕಾರದ ಉದ್ದೇಶವಾಗಿತ್ತು. ಆದರೆ ಅದರ ಉದ್ದೇಶವು ಸಫಲವಾಗಲಿಲ್ಲ.

ಜನರು ಮೇಲಿಂದಮೇಲೆ ಕಾನೂನುಭಂಗ ಕಾರ್ಯಕ್ರಮಗಳನ್ನು ನಡೆಸಿಯೇ ಇದ್ದರು. ಒಂದುಸಲ ಶ್ರೀ ತಿಪ್ಪಣ್ಣ ಬೆಟಗೇರಿ ಮೊದಲಾದ ಹುದಲಿಯ ಏಳೆಂಟು ಜನ ಕಾರ್ಮಿಕರು ಸಿಂದೀಗಿಡ ಕಡಿಯುವದು, ಪ್ರಭಾತಫೇರಿ, ಧ್ವಜವಂದನೆ ಮಾಡುವ ಇವೇ ಮೊದಲಾದ ಕಾರ್ಯಕ್ರಮಗಳಲ್ಲಿ ತೊಡಗಿದ್ದರು. ಆಗಿನ ಪೋಲೀಸಪಾಟೀಲರಾದ ಶ್ರೀ ಬಸನಗೌಡ ಪಾಟೀಲ ಅವರ ಭಾವಮೈದುನರಾದ ಶ್ರೀ ರಾಮನಗೌಡ ಪಾಟೀಲ (ಬಡಸ) ಅವರು ತಿಪ್ಪಣ್ಣ ಬೆಟಗೇರಿ ಮೊದಲಾದವರ ಸಂಗಡ ಪ್ರಭಾತಫೇರಿ, ಸಿಂದೀ ಗಿಡ ಕಡಿಯುವ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗ ತೆಗೆದುಕೊಂಡರು. ಕಾನೂನು ಭಂಗಮಾಡಿದರು. ಪೋಲೀಸರು ಎಲ್ಲರನ್ನೂ ಬಂಧಿಸಿ, ಎಲ್ಲರ ಮೇಲೆ ಖಟ್ಲೆಹಾಕಿದರು. ಅದರಂತೆ ಶ್ರೀ ರಾಮನಗೌಡರ ಮೇಲೂ ಖಟ್ಲೆ ಹಾಕಿದರು. ಎಲ್ಲರನ್ನೂ ಅಂಡರ್- ಟ್ರಾಯಿಲ್ ಎಂದು ಹಿಂಡಲಗಿ ಸೆರೆಮನೆಯಲ್ಲಿಟ್ಟು ಖಟ್ಲೆ ನಡೆಸಿದರು. ಖಟ್ಲೆಯ ಮುದ್ದತಿನ ದಿವಸ ಎಲ್ಲರನ್ನೂ ಪೋಲೀಸರ ಕಾವಲಿನಲ್ಲಿ ಕೋರ್ಟಿಗೆ ಕರೆಮಕೊಂಡು

ಬರುತ್ತಿದ್ದರು. ಆದರೆ ರಾಮನಗೌಡರನ್ನು ಎಲ್ಲರ ಸಂಗಡ ಇಡದೆ ಅವರೊಬ್ಬರನ್ನೇ ಪ್ರತ್ಯೇಕವಾಗಿ ಇಟ್ಟಿದ್ದರು. ಕೋರ್ಟಿಗೆ ಕರೆತರುವಾಗಲೂ ಅವರೊಬ್ಬರನ್ನೇ ಪ್ರತ್ಯೇಕವಾಗಿ ಇಬ್ಬರು ಪೋಲೀಸರು ಕರೆದುಕೊಂಡು ಬರುತ್ತಿದ್ದರು. ಇತರರಿಗಿಲ್ಲದ ಸೌಲಭ್ಯಗಳನ್ನು ಅವರಿಗೆ ಕೊಟ್ಟಿದ್ದರು. ಇದಕ್ಕೆ ಕಾರಣ ಏನಾದರೂಮಾಡಿ ರಾಮನಗೌಡರಿಗೆ ಕ್ಷಮೆ ಬೇಡಲಿಕ್ಕೆ ಹಚ್ಚಿ. ಅವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಬೇಕು. ಇದರ ಪರಿಣಾಮ ಇತರರ ಮೇಲೂ ಆಗಿ, ಅವರೂ ಕ್ಷಮೆ ಬೇಡಹತ್ತುವರು. ಹೆಚ್ಚು ಜನರು ಕ್ಷಮೆ ಯಾಚಿಸಿ, ಸೆರೆಮನೆಯಿಂದ ಹೊರಗೆ ಬರಹತ್ತಿದರೆ ಚಳುವಳಿಯ ಕಸುವು ಕುಗ್ಗುವದೆಂದು ಸರಕಾರದ ಯುಕ್ತಿಗಳಲ್ಲಿ ಇದೂ ಒಂದಾಗಿತ್ತು.

ಆದ್ದರಿಂದಲೇ ಅವರು ಈ ತಂತ್ರವನ್ನು ರಚಿಸಿದ್ದರು. ರಾಮನಗೌಡರಿಗೆ ಪೋಲೀಸರು "ನೀವು ವತನದಾರರು. ಸರಕಾರೀ ನವಕರರೂ ಆಗಿ ನೀವು ಚಳುವಳಿಯಲ್ಲಿ ಭಾಗ ತೆಗೆದುಕೊಂಡರೆ, ಸರಕಾರದ ವಿರುದ್ಧ ಬಂಡು ಹೂಡಿದಂತಾಗುವದು. ಸರಕಾರವು ನಿಮ್ಮ ಆಸ್ತಿಯನ್ನೇ ಜಪ್ತಿ ಮಾಡುವದು. ವತನ ಖಾಲಸಾ ಮಾಡುವದು. ನಿಮ್ಮ ಮನೆತನದ ಗೌಡಿಕೆಯನ್ನೂ ಕಸಿದುಕೊಳ್ಳುವದು. ಇದರಿಂದ ನೀವೊಬ್ಬರು ಕಷ್ಟಕ್ಕೀಡಾಗುವಿರಲ್ಲದೆ ನಿಮ್ಮ ಮನೆಯವರನ್ನೆಲ್ಲ ಕಷ್ಟಕ್ಕೆ ಗುರಿಮಾಡುವಿರಿ. ಅಲ್ಲದೆ ನಿಮಗೆ ಇತರರಿಗಿಂತ ಭಾರೀ (ಹೆಚ್ಚಿನ) ಶಿಕ್ಷೆ ಕೊಡುವರು" ಎಂದು ಅನೇಕ ರೀತಿಯಿಂದ ಬೆದರಿಕೆ ಹಾಕುತ್ತಿದ್ದರು. ಇದರಿಂದ ರಾಮನಗೌಡರು ಅಂಜಿ ಕ್ಷಮೆ ಬೇಡಲು ಸಿದ್ಧರಾದರು. ಸೆರೆಮನೆಯೊಳಗಿಂದ ಅವರ ಸಹಕಾರಿಗಳು ಈ ಸುದ್ದಿಯನ್ನು ನನಗೆ ತಿಳಿಸಿದರು. ಅಲ್ಲದೆ ಹೇಗಾದರೂ ಮಾಡಿ. ರಾಮನಗೌಡರು ಕ್ಷಮೆ ಬೇಡದಂತೆ ಮಾಡಿರಿ' ಎಂದು ಹೇಳಿ ಕಳಿಸಿದರು.

ಹೊರಗಿನ ನನ್ನ ಸಹಕಾರಿಗಳು ಸಹ ಹೇಗಾದರೂ ಮಾಡಿ ರಾಮನಗೌಡರಿಗೆ ಭೆಟ್ಟಿಯಾಗಿ, ರಾಮನಗೌಡರನ್ನು ಕ್ಷಮೆ ಬೇಡುವುದರಿಂದ ಪರಾವೃತ್ತ ಮಾಡಲು ನನಗೆ ಆಗ್ರಹ ಮಾಡತೊಡಗಿದರು. ನಾನು ಅವರಿಗೆ ಭೆಟ್ಟಿಯಾಗಿ ನಾಲ್ಕು ಮಾತುಗಳನ್ನು ಹೇಳಿದರೆ ಅವರು ನನ್ನ ಮಾತನ್ನು ಕೇಳುತ್ತಾರೆಂದು ಎಲ್ಲರಿಗೂ ಅನಿಸುತ್ತಿತ್ತು. ನನಗೂ ಸಹ ಹಾಗೆಯೇ ಅನಿಸುತ್ತಿತ್ತು. ಆದರೆ ಅವರನ್ನು ಭೆಟ್ಟಿಯಾಗುವ ಬಗೆ ಹೇಗೆ ? ನನ್ನ ಮೇಲೆ ವಾರಂಟ್ ಇತ್ತು. ಆದ್ದರಿಂದ ಸೆರೆಮನೆಗೆ ಹೋಗಿ ಅವರನ್ನು ಭೆಟ್ಟಿಯಾಗುವುದು ಸಾಧ್ಯವಿರಲಿಲ್ಲ. ಅವರನ್ನು ಹೇಗೆ ಭೆಟ್ಟಿಯಾಗಬೇಕೆಂದು ನಾನು ಯೋಚಿಸುತ್ತಿದ್ದೆ. ನನ್ನ ಸಹಕಾರಿಗಳೊಬ್ಬರು ಹೇಳಿದರು : ಒಂದು ಉಪಾಯವಿದೆ. ಆದರೆ ಅದರಲ್ಲಿ ಅಪಾಯವೂ ಇದೆ. ಆದರೂ ನಿಮಗೆ ಸರಿಕಂಡರೆ ಅದನ್ನು ಮಾಡಿ ನೋಡಬಹುದು. ಕೋರ್ಟಿನ ಮುದ್ದತಿನ ದಿವಸ ಶ್ರೀ ರಾಮನಗೌಡರನ್ನು ಕೋರ್ಟಿಗೆ ಹೋಗುವ ಮೊದಲು ಒಂದು ಲಿಂಗಾಯತ ಖಾನಾವಳಿಗೆ ಊಟಕ್ಕೆ ಕರೆದುಕೊಂಡು ಬರುತ್ತಾರೆ. ಅವರ ಸಂಗಡ ಇಬ್ಬರು ಪೋಲೀಸರು ಮಾತ್ರ ಇರುತ್ತಾರೆ. ಆಗ ನೀವು

ಆ ಖಾನಾವಳಿಗೆ ಊಟಕ್ಕೆಂದು ಹೋಗಿ, ಅವರನ್ನು ಭೆಟ್ಟಿಯಾಗಿ ಬರಬಹುದು. ಆದರೆ ಸಂಗಡ ಪೋಲಿಸ ಕಾವಲಿರುವುದರಿಂದ, ನೀವು ವೇಷ ಬದಲಿಸಿಕೊಂಡು ಹೋಗ ಬೇಕು ಅಂದರು: ಮತ್ತೂ ಅವರೇ ಒಂದು ಹಂಚಿಕೆ ಸೂಚಿಸಿದರು: "ಆ ಖಾನಾವಳಿಗೆ ಬರುವವರೆಲ್ಲರೂ ಸಾಮಾನ್ಯವಾಗಿ ಲಿಂಗಾಯತರೇ. ನೀವು ಅಯ್ಯನವರ ವೇಷ ಹಾಕಿ ಕೊಂಡು ಹೋಗಿರಿ. ಅಂದರೆ ಪೋಲೀಸರಿಗೆ ಏನೂ ಸಂಶಯ ಬರುವುದಿಲ್ಲ."

"ಊಟದ ಕಾಲಕ್ಕೆ ಪೋಲೀಸರು ಹೊರಗೆ ಕುಳಿತಿರುತ್ತಾರೆ. ನೀವು ಒಳಗೆ ಹೋಗಿ ರಾಮನಗೌಡರ ಜೊತೆಗೆ ಮಾತಾಡಿ ಬರ್ರಿ" ಎಂಬ ಅವರ ಸೂಚನೆ ನನಗೆ ಸರಿ ಎನಿಸಿತು. ನಾನು ಇದಕ್ಕೆ ಒಪ್ಪಿದೆ. ಮುದ್ದತಿನ ದಿವಸ ತೀರ ನಸುಕಿನಲ್ಲಿಯೇ ನನ್ನ ಸಹಕಾರಿಗಳು ನನಗೆ ಒಂದು ಕೆಂಪು ಪಾವಡ ಸುತ್ತಿ, ಕೆಂಪು ಬಟ್ಟೆಯಲ್ಲಿ ಒಂದು ಲಿಂಗ ಕಟ್ಟಿದಂತೆ ಮಾಡಿ, ಅದನ್ನು ನನ್ನ ಕೊರಳಲ್ಲಿ ಕಟ್ಟಿದರು. ಹಣೆಗೆ ವಿಭೂತಿ ಹಚ್ಚಿದರು. ಒಂದು ಶರ್ಟ ತೊಡಿಸಿ, ಮಾಸಿದ ದೋತರವನ್ನುಡಿಸಿದರು. ಕೈಯಲ್ಲಿ ಒಂದು ಬಡಿಗೆ ಕೊಟ್ಟರು. ನನ್ನನ್ನು ಆ ಖಾನಾವಳಿಯ ಹತ್ತಿರದ ಒಂದು ಮನೆಯಲ್ಲಿ ತಂದು ಕೂಡ್ರಿಸಿದರು.

ಹತ್ತು ಗಂಟೆಯ ಸುಮಾರಿಗೆ ಪೋಲೀಸರು ರಾಮನಗೌಡರನ್ನು ಖಾನಾವಳಿಗೆ ಊಟಕ್ಕಾಗಿ ಕರೆದುಕೊಂಡು ಬಂದರು. ನನ್ನ ಸಹಕಾರಿಗಳು ಇದರ ನಿರೀಕ್ಷಣೆಯಲ್ಲಿಯೇ ಇದ್ದರು. ರಾಮನಗೌಡರು ಖಾನಾವಳಿಗೆ ಬಂದ ಸುದ್ದಿಯನ್ನು ನನಗೆ ಹೇಳಿದರು. ನಾನು ಕೂಡಲೇ ಖಾನಾವಳಿಗೆ ಹೊರಟೆ. ಖಾನಾವಳಿಯ ವ್ಹರಾಂಡದಲ್ಲಿ ಪೋಲೀಸರು ಬೀಡಿ ಸೇದುತ್ತ ಕುಳಿತಿದ್ದರು. ಕಚೇರಿಯ ಸಮಯವಾದ್ದರಿಂದ ಊಟಕ್ಕೆ ಬರುವವರ ದಟ್ಟಣೆ ವಿಶೇಷವಾಗಿತ್ತು. ನಾನೂ ಆ ದಟ್ಟಣೆಯಲ್ಲಿಯೇ ಒಳಗೆ ಹೋದೆನು. ರಾಮನಗೌಡರು ಕುಳಿತ ಪಕ್ಕದ ಮಣೆಯ ಮೇಲೆ ಕುಳಿತುಕೊಂಡೆನು. ನನ್ನನ್ನು ಆ ವೇಷದಲ್ಲಿ ನೋಡಿ ರಾಮನಗೌಡರಿಗೆ ಆಶ್ಚರ್ಯವಾಯಿತು; ಕೆಡಕೂ ಅನಿಸಿರಬೇಕು. ಅವರು ತಲೆ ಕೆಳಗೆ ಹಾಕಿಕೊಂಡು ಸುಮ್ಮನೆ ಕುಳಿತುಕೊಂಡರು. ನಾನೇ ಅವರನ್ನು 'ಆರೋಗ್ಯವಾಗಿದ್ದೀರಾ ?' ಎಂದು ವಿಚಾರಿಸಿದೆ. ಅವರು ಗೋಣುಹಾಕಿಯೇ 'ಅಹುದು' ಎಂದು ಉತ್ತರವಿತ್ತರು. ಮಾತು ಬೆಳೆಸಲಿಕ್ಕೆ ಸಮಯವಿರಲಿಲ್ಲ. ನಾನು ನೇರವಾಗಿ ಅವರನ್ನು ವಿಚಾರಿಸದೆ 'ನೀವು ಕ್ಷಮೆ ಬೇಡುತ್ತೀರಂತೆ ! ನಿಜವೇನು ?' ಎಂದು ಕೇಳ ಲಾಗಿ ಅವರು ಅದಕ್ಕೆ ಉತ್ತರಕೊಡಲಿಲ್ಲ. ಮೌನವಾಗಿಯೇ ಇದ್ದರು. ಇದರಿಂದ ಅವರು ಕ್ಷಮೆ ಬೇಡುವುದು ನಿಶ್ಚಯವೆಂದು ನಾನು ತಿಳಿದುಕೊಂಡೆ. ನಾನು ಅವರಿಗೆ ಹೇಳಿದೆ: 'ನೀವು ಸೆರೆಮನೆಗೆ ಈ ಸಾರೆ ಇಷ್ಟೊಂದು ಏಕೆ ಅಂಜುತ್ತಿದ್ದೀರಿ ? ೧೯೩೦ ನೆಯ ಇಸ್ವಿಯಲ್ಲಿ ನೀವು ಸೆರೆಮನೆಗೆ ಹೋಗಿದ್ದೀರಿ ! ಈಗ ಸಹ ಜೇಲಿನಲ್ಲಿ ನಮ್ಮವರು ನೂರಾರು ಜನರಿದ್ದಾರೆ. ಹುದಲಿಯ ನಿಮ್ಮ ಸಹಕಾರಿಗಳೂ ಅಲ್ಲಿಯೇ ಇದ್ದಾರೆ. ನೀವೊಬ್ಬರೇ ಇರುವದಿಲ್ಲ. ಹೀಗಿದ್ದು ಕ್ಷಮೆ ಬೇಡುವಂಥದು ನಿಮಗೆ ಏನಾಗಿದೆ ?

ಕ್ಷಮೆ ಬೇಡಿ ಹುದಲಿ ಊರಿಗೂ ಬಡಸಕ್ಕೂ ಕಲಂಕ ಹಚ್ಚುವಿರಲ್ಲದೆ ನಿಮ್ಮ ಮನೆತನಕ್ಕೂ ಕುಂದುತರುತ್ತೀರಿ. ಅದರ ಗೌರವ ಕಡಮೆ ಮಾಡುತ್ತೀರಿ. ನೀವು ಇಂಥ ಮನೆತನದಲ್ಲಿ ಹುಟ್ಟಿ, ಹೇಡಿಯಾಗುತ್ತೀರಾ ?"

ಈ ಮಾತಿಗೆ ಅವರು ಉತ್ತರ ಕೊಟ್ಟರು. "ಇಲ್ಲ. ನಾನು ಜೇಲಿಗೆ ಅಂಜಿಲ್ಲ. ನಮ್ಮ ವತನ ಖಾಲಸಾ ಮಾಡುತ್ತಾರಂತೆ! ಇದರಿಂದ ನಮ್ಮ ಮನೆಯುವರಿಗೆಲ್ಲ ಕಷ್ಟ ವಾಗುತ್ತದೆ. ಅದಕ್ಕೆಲ್ಲ ನಾನೇ ಕಾರಣನಾಗುತ್ತೇನೆ. ಅದಕ್ಕಾಗಿ ನಾನು ಹೆದರುತ್ತಿದ್ದೇನೆ.

ನಾನು ಹೇಳಿದೆ : "ನಿಮ್ಮ ಆಸ್ತಿ ಜಪ್ತಿ ಮಾಡಿದರೆ, ಬ್ರಿಟಿಶರು ಅದನ್ನೇನು ತಲೆಯ ಮೇಲೆ ಹೊತ್ತುಕೊಂಡು ಹೋಗುವುದಿಲ್ಲ. ನೀವೇನು ಕಳುವು–ತುಡುಗು ಮಾಡಿ ಜೇಲಿಗೆ ಬಂದಿಲ್ಲ. ಅಂದಮೇಲೆ ಇತರರು ನಿಮ್ಮ ಆಸ್ತಿಗೆ ಕೈ ಹಚ್ಚುವ ಧೈರ್ಯ ಮಾಡಲಾರರು. ನಿಮ್ಮ ವತನ ಖಾಲಸಾ ಆದರೆ ನಿಮ್ಮ ಮನೆಯುವರು ಅದನ್ನು ಸಹನ ಮಾಡಿಕೊಳ್ಳಬಹುದು. ಆದರೆ ಕ್ಷಮೆ ಬೇಡಿ, ಹೇಡಿಯಾಗಿ ಮನೆಗೆ ಹೋದರೆ ನಿಮ್ಮ ಮುಖವನ್ನು ಸಹ ಅವರು ನೋಡಲಿಕ್ಕಿಲ್ಲ. ನೀವು ಕ್ಷಮೆ ಬೇಡಿ ನಿಮ್ಮ ಮನೆತನಕ್ಕೆ ಕಲಂಕ ಹಚ್ಚಬೇಡಿರಿ."

ಈ ಉಪದೇಶ ಅವರ ಮನಸ್ಸಿನ ಮೇಲೆ ಪರಿಣಾಮ ಮಾಡಿತು. ಅವರಿಗೆ ಧೈರ್ಯ ಬಂದಿತು. ಅವರು ಹೇಳಿದರು : "ಮಾಸ್ತರರೇ, ಇಲ್ಲ. ನಾನು ಇನ್ನು ಎಂದೂ ಕ್ಷಮೆಯಾಚಿಸುವದಿಲ್ಲ. ಇದನ್ನು ಪ್ರಮಾಣವಾಗಿ ಹೇಳುತ್ತೇನೆ. ನೀವು ನಿಶ್ಚಿಂತೆಯಿಂದ ಇರ್ರಿ." ಇದನ್ನು ಕೇಳಿ ನನಗೆ ಸಂತೋಷವಾಯಿತು. "ನೀವು ಧೈರ್ಯದಿಂದ ಇರ್ರಿ. ನಿಮಗೆ ಏನೂ ಆಗುವದಿಲ್ಲ. ದೇವರು ನಿಮಗೆ ಒಳ್ಳೆಯದನ್ನೇ ಮಾಡುವನು" ಎಂದು ಹೇಳಿ, ನಾನು ಊಟ ಮಾಡದೆ ಹೊರಟು ಬಂದೆ.

ಅಂದೇ ಕೊನೆಯ ಮುದ್ದತ್ತು ಆಗಿತ್ತು. ಖಟ್ಲೆಯ ತೀರ್ಪು ಕೇಳಲು ಹುದಲಿ ಹಾಗೂ ಬಡಸ ಊರುಗಳಿಂದ ಅನೇಕ ಜನರು ಬಂದಿದ್ದರು. ರಾಮನಗೌಡರ ಮನೆ ಯುವರೂ ಅವರ ಸ್ನೇಹಿತರೂ ಬಂದಿದ್ದರು. ರಾಮನಗೌಡರು ಏನು ಮಾಡುತ್ತಾರೆ ಎಂಬದನ್ನು ನೋಡಲು ಎಲ್ಲರಿಗೂ ಕುತೂಹಲವಿತ್ತು. ರಾಮನಗೌಡರ ಸಂಗಡಿಗರಿಗೆಲ್ಲ ಮ್ಯಾಜಿಸ್ಟ್ರೇಟರು ಶಿಕ್ಷೆ ವಿಧಿಸಿದರು. ರಾಮನಗೌಡರ ಬಗ್ಗೆ ಪೋಲೀಸರು ಮ್ಯಾಜಿಸ್ಟ್ರೇಟ ರಿಗೆ ರಾಮನಗೌಡರು ಚಳುವಳಿಯಲ್ಲಿ ಭಾಗ ತೆಗೆದುಕೊಂಡ ಬಗ್ಗೆ ವಿಷಾದ ವ್ಯಕ್ತ ಮಾಡುತ್ತಾರೆ. ಅವರನ್ನು ಬಿಡುಗಡೆ ಮಾಡಬೇಕು ಎಂದು ಮುಂಚಿತವಾಗಿ ಸೂಚನೆ ಕೊಟ್ಟಿರಬೇಕು. ಎಲ್ಲರಿಗೂ ಶಿಕ್ಷೆ ಕೊಡುವದಾದ ನಂತರ ಮ್ಯಾಜಿಸ್ಟ್ರೇಟರು ರಾಮನಗೌಡ ರನ್ನು ಸ್ವತಃ ಪ್ರಶ್ನಿಸಿದರು : ಚಳುವಳಿಯಲ್ಲಿ ಭಾಗತೆಗೆದುಕೊಂಡುದಕ್ಕೆ ನಿಮಗೆ ವಿಷಾದ ವಾಗುತ್ತಿದೆಯಲ್ಲವೇ ? ನಿಮ್ಮನ್ನು ಬಿಡುಗಡೆ ಮಾಡಿದರೆ ನೀವು ಚಳುವಳಿಯಲ್ಲಿ ಭಾಗ ತೆಗೆದುಕೊಳ್ಳುವದಿಲ್ಲ ಅಲ್ಲವೆ ? ರಾಮನಗೌಡರು ಏನು ಉತ್ತರ ಕೊಡುತ್ತಾರೆಯೋ ಎಂಬುವುದನ್ನು ಕೇಳುವುದಕ್ಕೆ ಪ್ರೇಕ್ಷಕರು ಆತುರರಾಗಿದ್ದರು. ಎಲ್ಲರ ದೃಷ್ಟಿ ಅವರ

ಮೇಲೆ ನೆಟ್ಟಿತು. ರಾಮನಗೌಡರು ಮ್ಯಾಜಿಸ್ಟ್ರೇಟರ ಪ್ರಶ್ನೆಗೆ ದಿಟ್ಟತನದ ಉತ್ತರ ಕೊಟ್ಟರು.

"ಇಲ್ಲ. ಚಳುವಳಿಯಲ್ಲಿ ಭಾಗತೆಗೆದುಕೊಂಡುದಕ್ಕೆ ನನಗೆ ವಿಷಾದವಾಗಿಲ್ಲ; ಆನಂದವಾಗಿದೆ. ನನ್ನನ್ನು ಬಿಡುಗಡೆ ಮಾಡಿದರೆ ನಾನು ಮತ್ತೆ ಚಳುವಳಿ ಮಾಡುವವನೇ" ಎಂದು ಹೇಳಿದರು. ಇದನ್ನು ಕೇಳಿದ ಕೂಡಲೇ ಪ್ರೇಕ್ಷಕರ ವರ್ಗವು ಹರ್ಷೋದ್ಗಾರ ತೆಗೆಯಿತು. ಮ್ಯಾಜಿಸ್ಟ್ರೇಟರಿಗೆ ಆಶ್ಚರ್ಯವಾಯಿತು. ಅವರು ಪೋಲೀಸರತ್ತ ನೋಡಿದರು. ಪೋಲೀಸರಿಗೂ ತಮ್ಮ ತಂತ್ರ ಹೇಗೆ ಬುಡಮೇಲಾಯಿತು ಎಂಬ ಬಗೆಗೆ ಆಶ್ಚರ್ಯವಾಯಿತು. ಆದರೆ ಮಾಡುತ್ತಾರೇನು ? ಮ್ಯಾಜಿಸ್ಟ್ರೇಟರು ರಾಮನಗೌಡರಿಗೆ ಮತ್ತೆ ಕೇಳಿದರು : "ನೋಡಿರಿ. ವಿಚಾರ ಮಾಡಿರಿ. ಶಿಕ್ಷೆ ಕೊಟ್ಟನಂತರ ಪಶ್ಚಾತ್ತಾಪ ಪಡಬೇಡಿರಿ." ರಾಮನಗೌಡರು ಉತ್ತರ ಕೊಟ್ಟರು : "ಪಶ್ಚಾತ್ತಾಪದ ಪ್ರಶ್ನೆಯೇ ಇಲ್ಲ. ನೀವು ಬೇಕಾದಷ್ಟು ಶಿಕ್ಷೆ ಕೊಡಿರಿ. ನಾನು ಅದನ್ನು ಆನಂದದಿಂದ ಭೋಗಿಸಲು ಸಿದ್ಧನಿದ್ದೇನೆ." ಇತರರಂತೆ ಅವರಿಗೂ ಒಂದು ವರ್ಷ ಶಿಕ್ಷೆ ಹಾಗೂ ದಂಡ ವಿಧಿಸಿದರು.

ರಾಮನಗೌಡರು ತಮಗಾದ ಶಿಕ್ಷೆಯನ್ನು ಪೂರ್ತಿ ಅನುಭವಿಸಿ ಹೊರಗೆ ಬಂದರು.

ಇದನ್ನು ಇಲ್ಲಿ ಬರೆಯುವ ಉದ್ದೇಶವಿಷ್ಟೇ. ೧೯೩೨ ನೆಯ ಇಸ್ವಿಯ ಆಂದೋಲನದ ಕಾಲಕ್ಕೆ ದಬ್ಬಾಳಿಕೆ ನಡೆಸಿ, ಆಮಿಷ ತೋರಿಸಿ, ಬೆದರಿಕೆ ಹಾಕಿ ಕ್ಷಮೆ ಬೇಡಲು ಹಚ್ಚಿ, ಚಳುವಳಿಯನ್ನು ಹತ್ತಿಕ್ಕಿ, ಕಾಂಗ್ರೆಸ್ಸನ್ನು ನಾಮಶೇಷ ಮಾಡಬೇಕಾಗಿತ್ತು ಸರಕಾರಕ್ಕೆ. ತದ್ವಿರುದ್ಧ ಸರಕಾರದ ತಂತ್ರಗಳನ್ನೂ ಯುಕ್ತಿಗಳನ್ನೂ ಗೊತ್ತು ಹಚ್ಚಿ, ಅವು ನಿಷ್ಫಲವಾಗುವಂತೆ ಮಾಡಿ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗಿ ಕಾಂಗ್ರೆಸ್ಸು ಸತ್ತಿಲ್ಲ ಜೀವಂತವಿದೆ ಎಂದು ಸರಕಾರಕ್ಕೂ ಜನತೆಗೂ ತೋರಿಸುವದು ಕಾಂಗ್ರೆಸ್ಸಿನ ಉದ್ದೇಶವಾಗಿತ್ತು. ಸರಕಾರದ ತಂತ್ರಗಳನ್ನು ಹೇಗೆ ನಿಷ್ಫಲಗೊಳಿಸಲಾಗುತ್ತಿತ್ತೆಂಬುವದರ ಬಗ್ಗೆ ಇದೊಂದು ದೃಷ್ಟಾಂತ; ಅಷ್ಟೆ.

೧೧. ಒಂಬತ್ತನೆಯ ತಿಂಗಳು

ಇದೊಂದು ಬೆಳಗಾಂವಿ ಊರಲ್ಲಿ ಕೋಲಾಹಲವನ್ನೆಬ್ಬಿಸಿದ ಕಾರ್ಯಕ್ರಮ. ಅಂದು ಗಣೇಶ ಚತುರ್ಥಿ. ಗಣೇಶನ ಹಬ್ಬವನ್ನು ಬೆಳಗಾಂವಿಯಲ್ಲಿ ಒಳ್ಳೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಅನೇಕ ಸ್ಥಳಗಳಲ್ಲಿ ಸಾರ್ವಜನಿಕ ಗಣಪತಿಗಳನ್ನು ಕೂಡಿಸುತ್ತಾರೆ. ಗಣೇಶ ಚತುರ್ಥಿಯ ದಿವಸ ಬೆಳಗಿನಿಂದ ಮಧ್ಯಾಹ್ನ ಎರಡು ಗಂಟೆಯವರೆಗೆ ಊದಿಸುತ್ತ, ಬಾರಿಸುತ್ತ ಬಹಳ ಸಡಗರದಿಂದ ಗಣಪತಿಗಳನ್ನು ಪಲ್ಲಕ್ಕಿಗಳಲ್ಲಿಯೋ ಅಥವಾ ತೆರೆದ ಕಾರಿನಲ್ಲಿಯೋ ಒಯ್ಯುತ್ತಿರುತ್ತಾರೆ. ಎಲ್ಲಿ ನೋಡಿದಲ್ಲಿ ಬೀದಿಗಳ ತುಂಬೆಲ್ಲ ಜನಜಂಗುಳಿ. ಈ ಕಾಲದಲ್ಲಿ ಬುಲೆಟಿನ್ನುಗಳನ್ನು ಹಂಚಬೇಕೆಂದು ನಾವು

ನಿಶ್ಚಯಿಸಿದೆವು. ಅಂದಿಗೆ ಆಂದೋಲನ ಪ್ರಾರಂಭವಾಗಿ ಒಂಬತ್ತು ತಿಂಗಳಾಗುತ್ತಿದ್ದವು. ಆದುದರಿಂದ ಬುಲೆಟಿನ್ನಿಗೆ 'ನವವಾ ಮಹಿನಾ' ಎಂದು ಹೆಸರಿಟ್ಟೆವು. ಅದೇ ಕನ್ನಡದಲ್ಲಿ 'ಒಂಬತ್ತನೆಯ ತಿಂಗಳು'. ಆಂದೋಲನ ಪ್ರಾರಂಭವಾದಂದಿನಿಂದ ಇದು ವರೆಗಿನ ಮುಖ್ಯಾಂಶಗಳನ್ನೆಲ್ಲ ಅದರಲ್ಲಿ ಕೊಡಲಾಗಿತ್ತು ಮತ್ತು ಸರಕಾರದ ಕೃತ್ಯಗಳನ್ನು ಹಳಿಯಲಾಗಿತ್ತು.

ಯೋಜನೆ

ಬುಲೆಟಿನ್ನುಗಳನ್ನು ಸ್ವಯಂಸೇವಕರು ಕೈಯಿಂದ ಹಂಚುತ್ತ ಹೋದರೆ ಅತ್ತ ಕಡೆಗೆ ಜನರ ಆಕರ್ಷಣೆಯಾಗುವುದಿಲ್ಲವೆಂದು ತಿಳಿದು ನಾಟಕ, ಸಿನೇಮಾಗಳ ಜಾಹೀರಾತು ಹಂಚುವಂತೆ ಅವುಗಳನ್ನು ಹಂಚಬೇಕೆಂದು ಗೊತ್ತುಮಾಡಿದೆವು. ಶ್ರೀ ಅಪ್ಪಣ್ಣ ದೇಶಪಾಂಡೆ ಅವರು ಹೋಗಿ ಒಂದು ಟಾಂಗಾದವನನ್ನೂ ಹಾಗೂ ಒಬ್ಬ ತಾಸೇಬಾರಿಸುವವನನ್ನೂ ಗೊತ್ತುಮಾಡಿಕೊಂಡು ಬಂದರು. ಯಾವುದೋ ಒಂದು ನಾಟಕ ಕಂಪನಿಯ ಜಾಹೀರಾತುಗಳಿರಬೇಕೆಂದು ಅವರಿಬ್ಬರೂ ತಿಳಿದುಕೊಂಡರು. ಊರಲ್ಲೆಲ್ಲ ತಿರುಗಾಡಿ ಹಂಚುವುದಕ್ಕೆ ಪ್ರತಿಯೊಬ್ಬರಿಗೂ ಐದೈದು ರೂಪಾಯಿ ಕೊಡುವುದನ್ನು ಗೊತ್ತುಮಾಡಲಾಗಿತ್ತು.

ಮೊದಲೇ ಗೊತ್ತುಮಾಡಿದಂತೆ ಇಬ್ಬರು ಸ್ವಯಂಸೇವಕರು ಈ ಕೆಲಸ ಮಾಡಲು ಸಿದ್ಧರಾಗಿದ್ದರು. ಈ ಸ್ವಯಂಸೇವಕರು ಜಮಖಂಡಿಯವರಿದ್ದರೆಂದು ನನಗೆ ಜ್ಞಾಪಕ. ಅವರ ಹೆಸರು ನೆನಪಿಲ್ಲ. ಸಾಕಷ್ಟು ಬುಲೆಟಿನ್‌ಗಳನ್ನು ಅವರಿಬ್ಬರ ಕೈಯಲ್ಲಿ ಕೊಟ್ಟು ಕಳಿಸಲಾಯಿತು. ತಾಸೇ ಬಾರಿಸುತ್ತ ಟಾಂಗಾ ಬೆಳಗಾಂವಿಯ ಮುಖ್ಯ ಮುಖ್ಯ ಬೀದಿಗಳಲ್ಲಿ ಹೊರಟಿತು. ಹಿಂದೆ ಕುಳಿತಿದ್ದ ಸ್ವಯಂಸೇವಕರು ಬುಲೆಟಿನ್ ಹಂಚುತ್ತ ಹೊರಟರು. ಬುಲೆಟಿನ್ನುಗಳನ್ನು ಕನ್ನಡ ಹಾಗೂ ಮರಾಠಿ ಎರಡೂ ಭಾಷೆಗಳಲ್ಲಿ ತೆಗೆಯಲಾಗಿತ್ತು. ಟಾಂಗಾದ ಒಂದು ಬದಿಗೆ ದೊಡ್ಡ ರಟ್ಟಿನ ಮೇಲೆ ಮರಾಠಿಯಲ್ಲಿ 'ನವವಾ ಮಹಿನಾ' ಎಂದೂ ಇನ್ನೊಂದು ಬದಿಗೆ 'ಒಂಬತ್ತನೆಯ ತಿಂಗಳು' ಎಂದೂ ಬೋರ್ಡ ಬರೆದು ಹಚ್ಚಲಾಗಿತ್ತು. ಇದರಿಂದ ಯಾವುದೋ ಒಂದು ನಾಟಕ ಬಂದಿದೆ ಎಂದು ಜನರ ಕುತೂಹಲ ಕೆರಳಿ 'ಬುಲೆಟಿನ್' ನಾ ಮುಂದೆ, ನೀ ಮುಂದೆ ಎಂದು ನುಗ್ಗಿ ಬಂದು, ತೆಗೆದುಕೊಳ್ಳುತ್ತಿದ್ದರು. ಅದನ್ನು ಬೇರೆಯವರ ಕೈಯಲ್ಲಿ ಕೊಟ್ಟು 'ಘೇರೆ ಘೇ, ನವವಾ ಮಹಿನಾ ನಾಟಕ ಯೇಣಾರ ಆಹೆ. ಫಾರ ಸುಂದರ ಆಹೆ ಮ್ಹಣೆ!' ಎಂದು ನುಡಿಯುತ್ತಿದ್ದರು. "ಇದೋ ನೋಡು. 'ಒಂಬತ್ತು ತಿಂಗಳು' ಎಂಬ ನಾಟಕ ಬರುವದಿದೆಯಂತೆ ! ಬಹಳ ಸುಂದರವಿದೆಯಂತೆ ! ತೆಗೆದುಕೋ ಈ ಜಾಹೀರಾತು" ಎಂದು ಬೇರೆಯವರ ಕಡೆಗೆ ಕೊಡುತ್ತಿದ್ದರು. ಜನರ ಬಾಯಲ್ಲೆಲ್ಲ ಅಂದು 'ಒಂಬತ್ತು ತಿಂಗಳ'ದ ಸುದ್ದಿಯೇ ಸುದ್ದಿ.

ಅಂದಿನ ಉತ್ಸವದ ವ್ಯವಸ್ಥೆಗಾಗಿ ಪೋಲೀಸರೂ ಅಲ್ಲಲ್ಲಿ ಇದ್ದರು. ಅವರು ತಮ್ಮ ವ್ಯವಸ್ಥೆಯಲ್ಲಿ ಮಗ್ನರಾಗಿದ್ದರು. ಬುಲೆಟಿನ್ ಹಂಚುವವರು ಎರಡು ಮೂರು ಗಂಟೆಯ ವರೆಗೆ ಬೆಳಗಾವಿಯ ಮುಖ್ಯ ಮುಖ್ಯ ಬೀದಿಗಳಲ್ಲೆಲ್ಲ ಹಂಚಿದರು. ಅವರೂ ಅವರ ಬಂಧನವಾಗಲಿಲ್ಲ. ಬಂಧಿತರಾಗದೆ ಹಾಗೇ ಬರಬಾರದೆಂದು ನಾವು ಅವರಿಗೆ ಹೇಳಿ ಕಳಿಸಿದ್ದೆವು. ಕೊನೆಗೆ ಗಣಪತಿ ಗಲ್ಲಿಯೊಳಗಿಂದ ಖಡೇಬಾಜಾರಕ್ಕೆ ಟಾಂಗಾ ಹೋಯಿತು ಖಡೇಬಾಜಾರ ಪೋಲೀಸ ಸ್ಟೇಶನ್ನಿನ ಮುಂದೆ ಒಬ್ಬ ಪೋಲೀಸ ನಿಂತಿದ್ದನು. ಆತನ ಕೈಯಲ್ಲಿ ಸ್ವಯಂಸೇವಕರು ಬೇಕೆಂತಲೇ ಒಂದು ಬುಲೆಟಿನ್ ಕೊಟ್ಟರು. ಆತ ಅದನ್ನೋದಿ 'ಇದು ನಾಟಕದ ಜಾಹೀರಾತು ಅಲ್ಲ—ಬುಲೆಟಿನ್ ಎಂದು ತಿಳಿದು, ಒಳಗೆ ಹೋಗಿ ಅದನ್ನು ಸಬ್‌ಇನ್‌ಸ್ಪೆಕ್ಟರರಿಗೆ ತೋರಿಸಿದ.

ಸಬ್‌ಇನ್‌ಸ್ಪೆಕ್ಟರರು ಟಾಂಗಾದವ ಮತ್ತು ತಾಸೇದವನು ಸಹಿತ ಸ್ವಯಂಸೇವಕರನ್ನು ಹಿಡಿದುಕೊಂಡು ಬರಲಿಕ್ಕೆ ೭–೮ ಜನ ಪೋಲೀಸರನ್ನು ಕಳಿಸಿಕೊಟ್ಟರು. ಅಷ್ಟರಲ್ಲಿ ಆ ಟಾಂಗಾ ಗು. ಗಂಗಾಧರರಾವ ದೇಶಪಾಂಡೆ ಅವರ ಮನೆಯ ಹತ್ತಿರ ಇರುವ ಅರಳೀಕಟ್ಟೆಯ ಚೌಕಿಗೆ ಬಂದಿತ್ತು. ಪೋಲೀಸರು ಓಡುತ್ತ ಬಂದು ಟಾಂಗಾ ತರುಬಿ, ಎಲ್ಲರನ್ನೂ ಪೋಲೀಸ ಠಾಣೆಗೆ ಕರೆದೊಯ್ದರು. ಟಾಂಗಾದವ ಮತ್ತು ತಾಸೇದವರಿಬ್ಬರೂ 'ಇದು ತಮಗೇನೂ ಗೊತ್ತಿಲ್ಲ. ನಾಟಕದ ಜಾಹೀರಾತು ಎಂದು ಹೇಳಿದರು. ಅದಕ್ಕಾಗಿ ನಾವು ಬಂದೆವು. ನಮ್ಮನ್ನು ಬಿಡಬೇಕು' ಎಂದು ಕೇಳಿಕೊಂಡರು. ಆದರೆ ಕೇಳುವವರಾರು ? ಎಲ್ಲರ ಮೇಲೆ ಖಟ್ಲೆ ಹಾಕಲಾಯಿತು. ಮರುದಿನ ಮ್ಯಾಜಿಸ್ಟ್ರೇಟರ ಮುಂದೆ ಖಟ್ಲೆ ನಡೆದು ಸ್ವಯಂಸೇವಕರಿಗೆ ಆರಾರು ತಿಂಗಳು ಶಿಕ್ಷೆಯಾಯಿತು. ಟಾಂಗಾ ಮತ್ತು ತಾಸೇದವರಿಗೆ ಹತ್ತು ರೂಪಾಯಿ ದಂಡವಾಯಿತು. ಗೊತ್ತಿಲ್ಲದೆ ಟಾಂಗಾ ಹೊಡೆದುದಕ್ಕೂ ದಂಡ ! ತಾಸೇ ಬಾರಿಸಿದ್ದಕ್ಕೂ ದಂಡ ! ಯಾರದೋ ತಪ್ಪಿಗಾಗಿ ಯಾರಾರಿಗೋ ದಂಡ ! ಇದು ಆಗಿನ ಕಾಲದ ನ್ಯಾಯನೀತಿ !

ಊಟ ಹಾಕಿದ್ದಕ್ಕೂ ದಂಡ

ಇದೇ ಸಂದರ್ಭದಲ್ಲಿ ನಡೆದ ಇನ್ನೊಂದು ವಿನೋದಕರ ಸಂಗತಿಯನ್ನು ಇಲ್ಲಿ ಹೇಳಬೇಕೆನಿಸುತ್ತಿದೆ. ಬೋಗಾರವೇಸಿನಲ್ಲಿ 'ಆನಂದಾಶ್ರಮ' ಎಂಬ ಖಾನಾವಳಿಯಿತ್ತು. ಬಂದಂಥ ಸ್ವಯಂಸೇವಕರಿಗೆಲ್ಲ ಊಟದ ವ್ಯವಸ್ಥೆಯನ್ನು ಆ ಖಾನಾವಳಿಯಲ್ಲಿಯೇ ಮಾಡಲಾಗುತ್ತಿತ್ತು. ಆ ಖಾನಾವಳಿಯ ಯಜಮಾನನಿಗೂ ಶ್ರೀ ಅಪ್ಪಣ್ಣ ದೇಶಪಾಂಡೆಯವರಿಗೂ ಬಹಳ ಸ್ನೇಹವಿತ್ತು. ಅಲ್ಲಿ ದಿನಾಲೂ ೧೦-೧೫ ಜನ ಸ್ವಯಂಸೇವಕರ ಊಟವಾಗುತ್ತಿತ್ತು. ಖಾನಾವಳಿಯ ಮಾಲಕ ಸಹಜವಾಗಿ ಶ್ರೀ ದೇಶಪಾಂಡೆಯವರನ್ನು ವಿಚಾರಿಸಿದಾಗ "ತಾವು ಹುದಲಿ ದೇಶಪಾಂಡೆಯವರೆಂದೂ, ದೇ. ಭ. ಗಂಗಾಧರರಾಯರ ಅಣ್ಣ-ತಮ್ಮಂದಿರೆಂದೂ" ಹೇಳಿದ್ದರು. ಇದು ನಿಜವೂ ಇತ್ತು. "ಇಲ್ಲಿ ಒಂದು

ವಿದ್ಯಾರ್ಥಿನಿಲಯುವನ್ನು ತೆರೆಯಲಾಗಿದೆ. ಅಲ್ಲಿ ಇನ್ನೂ ಊಟದ ವ್ಯವಸ್ಥೆಯಾಗಿಲ್ಲ. ಅಲ್ಲಿ ಊಟದ ವ್ಯವಸ್ಥೆಯಾಗುವವರೆಗೆ ನಿಮ್ಮಲ್ಲಿಯೇ ಊಟಕ್ಕೆ ಕಳಿಸುತ್ತೇನೆ. ಅಲ್ಲದೆ ನಿಮ್ಮಲ್ಲಿಯ ಊಟ ಚೆನ್ನಾಗಿರುತ್ತದೆ. ಹುಡುಗರಿಗೆ ಅದು ರುಚಿಸುತ್ತಿದೆ. ಆದ್ದರಿಂದ ಹುಡುಗರ ಊಟದ ವ್ಯವಸ್ಥೆ ಇಲ್ಲಿಯೇ ಮಾಡಲಾಗಿದೆ" ಎಂದು ಹೇಳಿದ್ದರಂತೆ.

ಖಾನಾವಳಿಯ ಒಡೆಯನಿಗೆ ಇದಕ್ಕಿಂತ ಹೆಚ್ಚಿನ ಪುರಸ್ಕಾರ ಮತ್ತೇನು ಬೇಕು? ಇದರಿಂದ ಅವನು ಎಲ್ಲ ಹುಡುಗರಿಗೆ ಸವಿಯಾದ ಊಟ ಹಾಕುತ್ತಿದ್ದನಂತೆ!

ವ್ಯವಸ್ಥಿತವಾಗಿ ಬುಲೆಟಿನ್ ಹೊರಡುವುದು, ಮೇಲಿಂದಮೇಲೆ ಕಾರ್ಯಕ್ರಮಗಳಾಗುವುದು, ಸ್ವಯಂಸೇವಕರು ಜೇಲಿಗೆ ಹೋಗುವದು—ಇದೆಲ್ಲವನ್ನೂ ನೋಡಿ, ಒಂದು ವ್ಯವಸ್ಥಿತವಾದ ಸಂಘಟನೆಯಿದೆ; ಇದನ್ನು ಮುರಿಯಲೇಬೇಕೆಂದು ಸರಕಾರ ಯೋಚಿಸಿತು. ಸ್ವಯಂಸೇವಕರ ಊಟ-ವಸತಿಯ ವ್ಯವಸ್ಥೆಯನ್ನು ಯಾರು ಮಾಡುತ್ತಾರೆ ಎಂಬುದರ ಶೋಧ ನಡೆಯಿತು. ಬುಲೆಟಿನ್ ಹಂಚಿದ ಹುಡುಗರನ್ನು ಹೊಡೆದು 'ನೀವು ಎಲ್ಲಿ ಊಟ ಮಾಡುತ್ತೀರಿ' ಎಂದು ಪೋಲೀಸರು ವಿಚಾರಿಸಿದರು. ಅದಕ್ಕೆ ಅವರು ತಾವು ಊಟವನ್ನು ಆನಂದಾಶ್ರಮದಲ್ಲಿ ಮಾಡುತ್ತಿದ್ದೇವೆಂದು ಹೇಳಿದರು. ಬುಲೆಟಿನ್ ಬಗ್ಗೆ ವಿಚಾರಿಸಿದಾಗ 'ಅದನ್ನು ಯಾರು ಹೊರಡಿಸುತ್ತಾರೆ, ಎಲ್ಲಿ ಹೊರಡಿಸುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ನಮ್ಮ ಕೈಯಲ್ಲಿ ಶ್ರೀ ದೇಶಪಾಂಡೆ ಎಂಬವರು ತಂದುಕೊಡುತ್ತಾರೆ. ನಾವು ಅವುಗಳನ್ನು ಹಂಚುತ್ತೇವೆ' ಎಂದಿಷ್ಟೇ ಅವರು ಹೇಳಿದರು. ಅವರಿಗೆ ಬುಲೆಟಿನ್ ಬಗ್ಗೆ ಇದಕ್ಕಿಂತ ಹೆಚ್ಚಿನ ಸಂಗತಿಗಳು ಗೊತ್ತೇ ಇರಲಿಲ್ಲ.

ಅಂತೂ ಪೋಲೀಸರಿಗೆ ಸ್ವಯಂಸೇವಕರು ಊಟ ಮಾಡುತ್ತಿದ್ದ ಸ್ಥಳ ಸಿಕ್ಕಿತಲ್ಲ! ಎಂದು ಅವರು ಖಾನಾವಳಿಯ ಒಡೆಯನನ್ನು ಹಿಡಿದುಕೊಂಡು ಬಂದರು. ಅವರನ್ನು ಸ್ವಯಂಸೇವಕರಿಗೆ ಊಟ ಹಾಕುತ್ತಿದ್ದ ಬಗ್ಗೆ ವಿಚಾರಿಸಿದರು. ಅವರು 'ಸ್ವಯಂಸೇವಕರ ವಿಷಯ ಮೊದಲಾದುದು ನನಗೇನೂ ಗೊತ್ತಿಲ್ಲ. ಖಾನಾವಳಿಗೆ ಊಟಕ್ಕೆ ಬರುತ್ತಿದ್ದರು. ನಾನು ಹಣ ತೆಗೆದುಕೊಂಡು ಊಟ ಹಾಕುತ್ತಿದ್ದೆ' ಎಂದು ಹೇಳಿದರು. ಆದರೂ ಪೋಲೀಸರು ಅವರ ಮೇಲೆ ಖಟ್ಲೆ ಹಾಕಿದರು. ಮ್ಯಾಜಿಸ್ಟ್ರೇಟರು ಅವರಿಗೆ ೨೫ ರೂ. ದಂಡ ಹೇರಿದರು! ಇಷ್ಟೇ ಅಲ್ಲದೆ ಇನ್ನು ಮುಂದೆ ಚಳುವಳಿಗಾರರಿಗೆ ಊಟ ಹಾಕಬಾರದೆಂದು ಅವರಿಗೆ ಕಟ್ಟಪ್ಪಣೆ ಮಾಡಿದರಂತೆ! ಎಷ್ಟು ವಿಚಿತ್ರ! ಖಾನಾವಳಿಗೆ ಊಟಕ್ಕೆ ಬರುವವರಲ್ಲಿ ಯಾರು ಚಳುವಳಿಗಾರರು, ಯಾರು ಅಲ್ಲ ಎಂಬುದು ಹಣ ತೆಗೆದುಕೊಂಡು ಊಟಕ್ಕೆ ನೀಡುವ ಖಾನಾವಳಿಯ ಮಾಲಕನಿಗೆ ಹೇಗೆ ಗೊತ್ತಾಗಬೇಕು? ಪೋಲೀಸರಿಗೇ ಗೊತ್ತಾಗದ್ದು ಆ ಬಡಪಾಯಿಗೆ ಹೇಗೆ ಗೊತ್ತಾಗಬೇಕು? ಇದರಿಂದ ಚಳವಳಿ ಕಾಲದ ಪರಿಸ್ಥಿತಿಯ ಜ್ಞಾನವಾಗುತ್ತದೆ.

೧೨. ಶ್ರೀ ಗಾವಡೆ–ಬಾಳೇಕುಂದರಗಿ ಅವರ ಮನೆಗಳ ಮೇಲೆ ಪೋಲೀಸರ ದಾಳಿ

ಕುಮರಿಯ ಆಶ್ರಮದ ಮೇಲಿನ ದಾಳಿ. ನವಪಾ ಮಹಿನಾ ಬುಲೆಟಿನ್ ಹೊರಡುವದು ಮೊದಲಾದ ಕಾರ್ಯಕ್ರಮಗಳಿಂದ ಕಲೆಕ್ಟರರ ಕೋಪ ಕೆರಳಿತು. ಅವರು ಪೋಲೀಸರಿಗೆ 'ಇಷ್ಟೊಂದು ದಿನಗಳಾದವು. ಪ್ರಾಂತದಲ್ಲಿ ಎಲ್ಲಕಡೆಗೂ ಚಳುವಳಿ ಸ್ತಬ್ಧವಾಗಿರುವಾಗ ಬೆಳಗಾವಿಯಲ್ಲಿ ಇನ್ನೂ ಇಷ್ಟೊಂದು ವ್ಯವಸ್ಥಿತವಾಗಿ ಚಳುವಳಿ ನಡೆದುದು ಆಶ್ಚರ್ಯಕರವಾಗಿದೆ. ಇದರ ಹಿಂದೆ ಯಾರಿದ್ದಾರೆ, ಅವರನ್ನು ಹುಡುಕಿ ತೆಗೆಯುವದು ನಿಮ್ಮಿಂದ ಇನ್ನೂ ಆಗಿಲ್ಲ. ಬುಲೆಟಿನ್ ಹೊರಡುತ್ತದೆ. ಅದು ಎಲ್ಲಿ ಹೊರಡುತ್ತದೆಂಬುದರ ಶೋಧ ಹಚ್ಚುವದು ಆಗಿಲ್ಲವಲ್ಲ! ಎಂದು ಮುಂತಾಗಿ ಸಿಟ್ಟು ಮಾಡಿದರಂತೆ! ಇವೆಲ್ಲ ಪ್ರಕರಣಗಳಿಂದ ಪೋಲೀಸಿನವರ ಮನಸ್ಸಿಗೂ ಹತ್ತಿರಬೇಕು. ಅವರು ಹೆಚ್ಚು ಮನಸ್ಸಿನ ಮೇಲೆ ತೆಗೆದುಕೊಂಡು. ಮೊದಲು ಬುಲೆಟಿನ್ ಎಲ್ಲಿಂದ ಹೊರಡುತ್ತದೆಂಬುದರ ಪತ್ತೆ ಹಚ್ಚಬೇಕೆಂದು ನಿರ್ಧರಿಸಿದರು.

ಅಂತೂ ದೀರ್ಘ ಪ್ರಯತ್ನದಿಂದ ಶಹಾಪೂರದಲ್ಲಿ ಶ್ರೀ ಬಾಳೇಕುಂದರಗಿ ಅಥವಾ ಗಾವಡೆಯವರ ಮನೆಯಿಂದ ಬುಲೆಟಿನ್ ಹೊರಡುತ್ತದೆಂದು ಅವರಿಗೆ ಗೊತ್ತಾಯಿತು. ಶಹಾಪುರವು ಆಗ ಸಾಂಗಲಿ ಸಂಸ್ಥಾನಕ್ಕೆ ಸೇರಿದ್ದುದರಿಂದ ಬೆಳಗಾವಿಯ ಪೋಲೀಸರು ಶಹಾಪೂರ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದುಕೊಂಡು ಎರಡೂ ಮನೆಗಳ ಮೇಲೆ ಝಡತಿ ವಾರಂಟ್ ತೆಗೆಸಿ. ಅವರಿಬ್ಬರ ಮನೆಗಳ ಮೇಲೆ ಒಮ್ಮಿಂದೊಮ್ಮೆಲೆ ದಾಳಿ ಮಾಡಿದರು.

ಶ್ರೀ ಗಾವಡೆ

ಶ್ರೀ ಗಾವಡೆ ಒಬ್ಬ ತರುಣ. ಕಾಲೇಜಿನ ವಿದ್ಯಾರ್ಥಿ. ಇವರ ತಂದೆ ಶಹಾಪೂರದಲ್ಲಿ ಲಾಯಸೆನ್ಸ್ ಪಡೆದ ಮದ್ದಿನ ಅಂಗಡಿಯ ವ್ಯಾಪಾರಸ್ಥರು. ತರುಣ ಗಾವಡೆಗೆ ಬಾಂಬ್ ಮಾಡಬೇಕೆಂಬ ಹುಚ್ಚು. ಅದನ್ನು ತಯಾರಿಸುವ ಎಲ್ಲ ಸಾಮಗ್ರಿಯನ್ನು ಕಲೆಹಾಕಿ. ಬಾಂಬ್ ಮಾಡುವ ಪ್ರಯೋಗ ಮಾಡುತ್ತಿದ್ದನೆಂದು ನಾನು ಕೇಳಿದ್ದೆ. ನಾನು ಅವರ ಮನೆಗೆ ಎಂದೂ ಹೋಗಿರಲಿಲ್ಲ. ಮತ್ತು ಅದನ್ನು ನೋಡಿರಲಿಲ್ಲ. ಅಲ್ಲದೆ ಅವನನ್ನು ಪ್ರತ್ಯಕ್ಷವಾಗಿ ಈ ವಿಷಯವಾಗಿ ವಿಚಾರಿಸಿರಲಿಲ್ಲ. ಆದರೆ ಅವನ ಸ್ನೇಹಿತರು ಮಾತ್ರ ಹೀಗೆ ಹೇಳುತ್ತಿದ್ದರು.

ಶ್ರೀ ಬಾಳೇಕುಂದರಗಿ

ಇವರ ಮನೆತನ ಮೊದಲು ದೊಡ್ಡ ಸರಾಫರದಿರಬೇಕು. ಇವರ ಮನೆ ಹಳೆಯ ಪದ್ಧತಿಯದಾಗಿದ್ದು. ದೊಡ್ಡದೂ ಆಗಿದೆ. ಪಡಸಾಲೆ, ನಡುಮನೆ. ಅಡಿಗೆಯ

ಮನೆ, ಅನೇಕ ಕೋಣೆಗಳು ಹೊರಗಿನ ಕಟ್ಟೆ. ಕಟ್ಟೆಯ ಮೇಲೆ ಒಂದು ಕೋಣೆ. ಕಟ್ಟೆಯ ಮೇಲಿನ ಕೋಣೆಯೊಂದನ್ನು ಬಿಟ್ಟರೆ. ಉಳಿದೆಲ್ಲ ಕಡೆಗೂ ಕತ್ತಲೆಯೆ. ಈ ಹೊರಗಿನ ಕೋಣೆಯಲ್ಲಿಯೇ ನಾನಿದ್ದುದು. ಮನೆಯ ಕೆಲವು ಗೋಡೆಗಳು ಮೂರು ಫೂಟಾದರೂ ದಪ್ಪವಾಗಿರಬೇಕು. ಆ ಗೋಡೆಗಳಲ್ಲಿ ದೊಡ್ಡ ದೊಡ್ಡ ಕಪಾಟುಗಳು. ಆ ಕಪಾಟುಗಳ ತಳ ಹಲಗೆಯನ್ನು ಎತ್ತಿದರೆ ಅದರ ಬುಡದಲ್ಲಿ ಒಂದು ತೆಗ್ಗು ಇರುತ್ತಿತ್ತು. ಅಲ್ಲಿ ಏನಾದರೂ ಸಾಮಾನು ಇಟ್ಟು, ಮೇಲೆ ಹಲಗೆ ಹಾಕಿದರೆ ಯಾರಿಗೂ ಏನೂ ತಿಳಿಯುವಂತಿರಲಿಲ್ಲ. ಹಿಂದಿನ ಕಾಲದಲ್ಲಿ ಈಗಿನಂಥ ಬ್ಯಾಂಕಿನ ವ್ಯವಹಾರವಿರಲಿಲ್ಲ. ಕಳ್ಳಕಾಕರಿಗೆ ಹಣ-ಕಾಸು ಸಿಗಬಾರದೆಂದು ಈ ವ್ಯವಸ್ಥೆ ಮಾಡಿರಬಹುದು. ಇವರ ಮನೆಯಲ್ಲಿಯೇ ಇದ್ದುಕೊಂಡು ಬುಲೆಟಿನ್ ಹೊರಡಿಸುತ್ತಿದ್ದೆವೆಂದು ಈ ಹಿಂದೆ ಹೇಳಿದ್ದೇನೆ. ಶ್ರೀ ಬಾಳೇಕುಂದರಗಿಯವರು ತರುಣರು. ಬಹಳ ಸಾತ್ವಿಕ ಸ್ವಭಾವದ ಗೃಹಸ್ಥರು.

ಒಂದು ದಿವಸ ಮಧ್ಯಾಹ್ನ ನಾಲ್ಕು ಗಂಟೆಯ ಸುಮಾರಿಗೆ ನಾನು ಶ್ರೀ ಬಾಳೇಕುಂದರಗಿಯವರ ಮನೆಯ ಹೊರಗಿನ ಕೋಣೆಯಲ್ಲಿ ಕುಳಿತಿದ್ದೆ. ಅವರ ಮನೆಯ ಮುಂದೆ ಪೋಲೀಸರಿಂದ ತುಂಬಿದ ಒಂದು ಲಾರಿ ಹಾಯ್ದು ಹೋಯಿತು. ಈ ಹೊತ್ತಿನಲ್ಲಿ ಅದು ಎಲ್ಲಿಗೆ ಹೋಯಿತೆಂದು ನೋಡುವುದಕ್ಕೆ ನಾನು ಹೊರಗೆ ಬಂದೆ. ಅದು ಶ್ರೀ ಗಾವಡೆಯವರ ಮನೆಯಮುಂದೆ ನಿಂತಿತು. ಶ್ರೀ ಗಾವಡೆಯವರ ಮನೆಗೂ ಶ್ರೀ ಬಾಳೇಕುಂದರಗಿಯವರ ಮನೆಗೂ ನಡುವೆ ನಾಲ್ಕಾರು ಮನೆಗಳ ಅಂತರ. ಪೋಲೀಸರು ಶ್ರೀ ಗಾವಡೆಯವರ ಮನೆಯ ಝಡತಿಗೆ ಬಂದಿರುವರೆಂದೆನಿಸಿತು. ಶ್ರೀ ಬಾಳೇಕುಂದರಗಿಯವರ ಮನೆಗೂ ಅವರು ಬರಬಹುದೆಂದು ತಿಳಿದು, ನಾನು ಬೇರೆ ಕಡೆಗೆ ಹೋಗುವ ಸಿದ್ಧತೆ ಮಾಡತೊಡಗಿದೆ. ಅಷ್ಟರಲ್ಲಿ ನಾಲ್ಕಾರು ಜನ ಪೋಲೀಸರು ಬಂದು, ನಾನು ಇರುವ ಕೋಣೆಯ ಬಾಗಿಲಿಗೂ ಮನೆಯ ಬಾಗಿಲಿಗೂ ನಿಂತುಬಿಟ್ಟರು. ಹಿತ್ತಲ ಬಾಗಿಲಿಗೂ ನಾಲ್ಕು ಜನ ಪೋಲೀಸರು ಹೋಗಿ ನಿಂತರು. ಒಳಗಿನವರು ಹೊರಗೆ ಹೋಗದಂತೆ ಪೋಲೀಸರು ಕಾವಲು ಮಾಡತೊಡಗಿದರು.

ನಾನು ಮುಂದೆ ಏನು ಮಾಡಬೇಕೆಂಬುದು ನನಗೆ ತೋಚದಾಯಿತು. ನಾನಂತೂ ಪೋಲೀಸರ ಕೈಗೆ ಸಿಕ್ಕೆನೆಂದು ತಿಳಿದೆ. ಆದರೆ ನನ್ನ ಹತ್ತಿರ ಮುಂಬೈ ಆಫೀಸಿನಿಂದ, ಬೆಂಗಳೂರಿನಿಂದ ಬಂದ ಕಾಗದಪತ್ರಗಳಿದ್ದವು. ಅವುಗಳಲ್ಲಿ ಮುಂಬಯಿಯಲ್ಲಿಯ ಕೆಲವು ಕಾಂಗ್ರೆಸ್ಸಿಗರ ವಿಳಾಸ ಮುಂತಾದವುಗಳಿದ್ದವು. ಅವುಗಳಾದರೂ ಪೋಲೀಸರ ಕೈಗೆ ಸಿಗಬಾರದೆಂದು ನಾನು ಅವುಗಳನ್ನು ಹರಿದು ಚೂರುಚೂರಾಗಿ ಮಾಡಿದೆ. ಪೋಲೀಸರು ಅದನ್ನು ನೋಡಿ ಈಗ ಕಾಗದ ಮುಂತಾದವುಗಳನ್ನು ಹರಿಯಬೇಡಿರೆಂದು ಹೇಳಿದರು. ಅಷ್ಟೊತ್ತಿಗೆ ನಾನು ಕೆಲಸ ಮುಗಿಸಿಬಿಟ್ಟಿದ್ದೆ.

ಶ್ರೀ ಗಾವಡೆಯವರ ಮನೆಯ ಝಡತಿ

ಪೋಲೀಸರು ಮೊದಲು ಗಾವಡೆಯವರ ಮನೆಗೆ ಹೋದರೆಂದು ಹಿಂದೆ ಹೇಳಿದ್ದೇನೆ. ತರುಣ ಗಾವಡೆ ಆಗ ಸ್ವಲ್ಪ ಚಾಣಾಕ್ಷತನ ಮಾಡಿದ. ಪೋಲೀಸರನ್ನು

ಒಮ್ಮೆಲೆ ಮನೆಯೊಳಗೆ ಬರಗೊಡಲಿಲ್ಲ. "ಹಿರಿಯರು ಅಂಗಡಿಯಲ್ಲಿದ್ದಾರೆ. ಅವರನ್ನು ಕರೆದುಕೊಂಡು ಬನ್ನಿರಿ. ಆಮೇಲೆ ಮನೆಯು ಒಳಗೆ ಪ್ರವೇಶಮಾಡಿರಿ" ಎಂದು ಪೋಲೀಸರಿಗೆ ಹೇಳಿದನಂತೆ. ಪೋಲೀಸರು ಅವರ ತಂದೆಯವರನ್ನು ಕರೆಯಲು ಅಂಗಡಿಗೆ ಹೋದರು. ಅವರ ತಂದೆಯವರು ಅಂಗಡಿಯಿಂದ ಬರುವುದರೊಳಗಾಗಿ ಈ ತರುಣ ಗಾವಡೆ ತಾನು ಬಾಂಬಿನ ಪ್ರಯೋಗ ಮಾಡುತ್ತಿದ್ದ ಪದಾರ್ಥಗಳನ್ನೆಲ್ಲ ನಾಶಮಾಡಿದ್ದನು. ಗಾವಡೆಯವರ ತಂದೆ ಬಂದರು. ಮನೆಯ ಝಡತಿ ಪ್ರಾರಂಭವಾಯಿತು. ಸಾಯಂಕಾಲ ಆರು ಗಂಟೆಯವರೆಗೂ ಝಡತಿ ನಡೆಯಿತು. ಪೋಲೀಸರಿಗೆ ಬೇಕಾದುದು ಸಾಯಕ್ಲೊಸ್ಟಾಯಿಲ್ ಮಶಿನ್. ಅದೇನೂ ಅವರಿಗೆ ಅಲ್ಲಿ ಸಿಗಲಿಲ್ಲ. ಅವರು ನಿರಾಶರಾಗಿ ಶ್ರೀ ಬಾಳೇಕುಂದರಗಿಯವರ ಮನೆಗೆ ಬಂದರು.

ಶ್ರೀ ಬಾಳೇಕುಂದರಗಿಯವರ ಮನೆಯ ಝಡತಿ

ಪೋಲೀಸರು ಶ್ರೀ ಬಾಳೇಕುಂದರಗಿಯವರ ಮನೆಗೆ ಬಂದಾಗ ಮಬ್ಬಾಗಿತ್ತು. ಮೊದಲೇ ಕತ್ತಲುಗವಿದ ಮನೆ. ಈಗಂತೂ ಮಬ್ಬಾಗಿತ್ತು. ಮೊದಲೇ ಕತ್ತಲುಗವಿದ ಮನೆ. ಈಗಂತೂ ಮಬ್ಬಾಗಿತ್ತು. ಕೇಳುವುದೇನು ? ಆಗ ಇನ್ನೂ ವಿದ್ಯುದ್ದೀಪವಿರಲಿಲ್ಲ. ಅದರಿಂದ ಪೋಲೀಸರು ನಾಲ್ಕಾರು ಪೆಟ್ರೊಮ್ಯಾಕ್ಸ ತರಿಸಿದರು. ಪೋಲೀಸರೆಲ್ಲರೂ ಮನೆಯೊಳಗೆ ನುಗ್ಗಿದರು. ನಾನು ಕೂಡ ಆ ಗದ್ದಲದೊಳಗೇ ಕೋಣೆಯೊಳಗಿಂದ ಮನೆಯೊಳಗೆ ಹೋದೆ. ಪೋಲೀಸರು ಎಲ್ಲ ಮನೆಯನ್ನೂ ಕಪಾಟು ಮೊದಲು ಮಾಡಿಕೊಂಡು ಒಂದೊಂದನ್ನಾಗಿ ಹುಡುಕತೊಡಗಿದರು. ಎಷ್ಟೊತ್ತು ಹುಡುಕಿದರೂ ಅವರಿಗೆ ಏನೇನೂ ದೊರೆಯಲಿಲ್ಲ. ಡಿ. ವಾಯ್. ಎಸ್. ಪಿ. ಡಿಸೋಜಾ ಸಹ ಅಲ್ಲಿಗೆ ಬಂದಿದ್ದರು. ಅವರು ಸಹಜವಾಗಿ ನಾನಿರುತ್ತಿದ್ದ ಹೊರಗಿನ ಕೋಣೆಯೊಳಗೆ ಹೋದರು. ಅಲ್ಲಿ ಅವರಿಗೆ ನೂರಾರು ಖಾಲೀ ಪಾಕೀಟುಗಳು ಸಿಕ್ಕವು. ನಾವು ಯಾವ ಪಾಕೀಟುಗಳೊಳಗಿಂದ ಅಧಿಕಾರಿಗಳಿಗೆ ಬುಲೆಟಿನ್ ಕಳಿಸುತ್ತಿದ್ದೆವೋ ಅಂತಹವೇ ಪಾಕೀಟುಗಳು ಅವು ಆಗಿದ್ದವು.

ಅದರಿಂದ ಅವರ ಸಂಶಯಕ್ಕೆ ಬಲ ಬಂದಿತು. ಅವರು "These are some envelopes in which we receive bulletins! ನಮಗೆ ಯಾವ ಪಾಕೀಟಿನಲ್ಲಿ ಬುಲೆಟಿನ್ ಬರುತ್ತವೆಯೋ ಅವೇ ಈ ಪಾಕೀಟುಗಳು" ಎಂದು ಉದ್ಗಾರ ತೆಗೆದರು. ಮತ್ತು ಅತ್ತಿತ್ತ ಸುತ್ತಾಡಿ ನೋಡಿದರು. ಹರಿದ ಕಾಗದದ ಒಂದು ತುಂಡಿನಲ್ಲಿ ಕಾಂಗ್ರೆಸ್ಸು ಎಂದಿತ್ತು. ಇನ್ನೊಂದರಲ್ಲಿ ಮುಂಬಯಿ ಎಂದಿತ್ತು. ಮತ್ತೊಂದರಲ್ಲಿ ಬುಲೆಟಿನ್ ಎಂದಿತ್ತು. ಇದರಿಂದ ಬುಲೆಟಿನ್ ಇಲ್ಲಿಂದಲೇ ಹೊರಡುತ್ತದೆಂದು ಅವರಿಗೆ ತಿಳಿದಂತಾಯಿತು.

ಶ್ರೀ ಬಾಳೇಕುಂದರಗಿಯವರು ಸಂಕಟದಲ್ಲಿ

ಶ್ರೀ ಡಿಸೋಜಾ ಅವರು 'ಈ ಮನೆಯ ಯಜಮಾನ ಯಾರು ?' ಎಂದು ಕೇಳಿದರು. ಬಾಳೇಕುಂದರಗಿಯವರು ಅಂಜುತ್ತಲೇ ಮುಂದೆ ಬಂದರು. 'ಈ ಕೋಣೆಯಲ್ಲಿ ಯಾರು ಇರುತ್ತಾರೆ'? ಎಂದು ಪುನಃ ವಿಚಾರಿಸಿದರು. ಬಾಳೇಕುಂದರಗಿಯವರಿಗೆ ಮಹಾಸಂಕಟ ಒದಗಿತು. ಅತ್ತ ದರಿ, ಇತ್ತ ಪುಲಿ ಎಂಬಂತಾಯಿತು ಅವರ ಸ್ಥಿತಿ. ನನ್ನ ಹೆಸರು ಹೇಳುತ್ತಾರೆಯೆ—ನನ್ನನ್ನು ಹಿಡಿದುಕೊಟ್ಟ ಆರೋಪಕ್ಕೆ ಗುರಿಯಾಗುತ್ತಾರೆ. ನನ್ನ ಹೆಸರು ಹೇಳದಿದ್ದರೆ ಪೋಲೀಸರು ತಮಗೆ ಏನು ಮಾಡುತ್ತಾರೆಯೋ ಎಂಬ ಭಯ. ಉಭಯ ಸಂಕಟದಲ್ಲಿ ಸಿಕ್ಕು ಅವರು ಒದ್ದಾಡುತ್ತಿದ್ದರು. ಇದನ್ನೆಲ್ಲ ನಾನು ಅಲ್ಲಿಯೇ ನಿಂತು ನೋಡುತ್ತಿದ್ದೆ.

ಶ್ರೀ ಬಾಳೇಕುಂದರಗಿಯವರ ಮನಃಸ್ಥಿತಿಯನ್ನು ನೋಡಿ, ನನಗೆ ಕನಿಕರ ಪುಟಾಯಿತು. ಅವರನ್ನು ಸಂಕಟಕ್ಕೆ ಗುರಿ ಮಾಡುವುದಕ್ಕಿಂತ ನಾನೇ ಹಾಜರ ಆಗಬೇಕೆಂದು ನಿಶ್ಚಯಿಸಿದೆ. ಬಾಳೇಕುಂದರಗಿಯವರು ಇನ್ನೂ ಹಾಗೆಯೇ ಸುಮ್ಮನೆ ನಿಂತಿದ್ದರು. ನಾನು ಕೂಡಲೇ ಮುಂದೆ ಬಂದು 'ಈ ಕೋಣೆಯಲ್ಲಿ ನಾನಿರುತ್ತೇನೆ' ಎಂದು ಅಂದೆ. ನನ್ನನ್ನು ಸ್ವಲ್ಪ ನೋಡಿದವರೇ ಡಿಸೋಜಾ ಅವರು 'ನೀವು ವಡವಿ ಅಲ್ಲವೆ?' ಎಂದರು. ನಾನು 'ಅಹುದು' ಎಂದು ಹೇಳಿದೆ. ಆಗ ಡಿಸೋಜಾ ಅವರ ಆನಂದಕ್ಕೂ ಆಶ್ಚರ್ಯಕ್ಕೂ ಪಾರಾವಾರವೇ ಉಳಿಯಲಿಲ್ಲ. ಅವರು ಕುಮರಿಯ ಆಶ್ರಮದ ಜಪ್ತಿಗೆ ಬಂದಾಗ ನನ್ನನ್ನು ನೋಡಿದ್ದರು.

ಆದುದರಿಂದ ಅವರು ಕೂಡಲೇ ನನ್ನ ಗುರುತನ್ನು ಹಿಡಿದರು. ಆಗ ಅವರಿಗೆ ತಮ್ಮ ಕಾರ್ಯವೆಲ್ಲ ಸಿದ್ಧಿಸಿತೆಂದೆನಿಸಿತು. ಅವರು ಸೌಮ್ಯ ಶಬ್ದಗಳಲ್ಲಿ ನನ್ನ ಕ್ಷೇಮ ಸಮಾಚಾರ ವಿಚಾರಿಸಿದರು. ನಾನು ಇದುವರೆಗೆ ಎಲ್ಲಿ ಇರುತ್ತಿದ್ದೆ. ಏನು ಕೆಲಸ ಮಾಡುತ್ತಿದ್ದೆನೆಂಬುವವನ್ನೂ ಕೇಳಿದರು. ನಾನೂ ಸಹ ಸರಲವಾಗಿ ನನ್ನ ಕೆಲಸ ಏನೆಂಬುವದು ನಿಮಗೆ ಗೊತ್ತೇ ಇದೆ. ಕಾಂಗ್ರೆಸ್ ಕೆಲಸದ ಹೊರತು ಈ ಕಾಲದಲ್ಲಿ ಬೇರೆ ಏನು ಕೆಲಸವಿರುತ್ತವೆ ನಮಗೆ' ಎಂದು ಉತ್ತರ ಕೊಟ್ಟೆ. ಅವರು ಅದಕ್ಕೆ "ನೀವು ಎಲ್ಲವನ್ನೂ ನಿಜ ಹೇಳುತ್ತೀರಿ. ಸ್ಟಾಯಿಕ್ಲೋಸ್ಟಾಯಿಲ್ ಮಶಿನ್ ಎಲ್ಲಿದೆ ಎಂಬುವನ್ನಷ್ಟು ಹೇಳಿಬಿಡಿರಲ್ಲ!" ಎಂದರು. "ಅದನ್ನು ಹೇಳುವದು ನಮ್ಮ ಕೆಲಸವಲ್ಲ. ಶೋಧ ಮಾಡುವದು ನಿಮ್ಮ ಕೆಲಸ" ಎಂದೆ.

ಹೀಗೆ ಅತಿ ಸೌಹಾರ್ದ ರೀತಿಯಲ್ಲಿ ಮಾತು ನಡೆದಿದ್ದವು. ಅತ್ತ ಪೋಲೀಸರು ಸ್ಟಾಯಿಕ್ಲೋಸ್ಟಾಯಿಲ್ ಶೋಧವನ್ನು ಮತ್ತಿಷ್ಟು ಭರದಿಂದ ನಡೆಸಿದರು. ರಾತ್ರಿ ಎಂಟೂವರಿ ಗಂಟೆಯಾಗುತ್ತ ಬಂತು. ಏನೂ ಸಿಗಲಿಲ್ಲ. ಸಾಯಿಕ್ಲೋಸ್ಟಾಯಿಲ್

ಸಿಗದಿದ್ದರೂ ಇಲ್ಲಿ ಶ್ರೀ ವಡವಿಯವರಾದರೂ ಸಿಕ್ಕರಲ್ಲ! ಎಂಬ ಸಮಾಧಾನದಿಂದ ಪೋಲೀಸರು ಹಿಂತಿರುಗಿ ಹೋಗಿರಬೇಕು.

ಮತ್ತೆ ಪೋಲೀಸರ ಕೈಯಿಂದ ನುಸುಳಿದುದು

ಪೋಲೀಸರು ನನ್ನನ್ನು ಈಗ ಬಂಧಿಸದೆ ಬಿಟ್ಟಿದ್ದಕ್ಕೆ ಒಂದು ಕಾರಣವಿತ್ತು. ಶಹಾಪೂರ ಆಗ ಸಾಂಗಲಿ ಸಂಸ್ಥಾನದಲ್ಲಿತ್ತೆಂದು ಈ ಮೊದಲೇ ಹೇಳಿದೆ. ಆದುದರಿಂದ ನನ್ನನ್ನು ಹಿಡಿಯಲಿಕ್ಕೆ ಶಹಾಪೂರ ಮ್ಯಾಜಿಸ್ಟ್ರೇಟರಿಂದ ವಾರಂಟ್ ತರಬೇಕಾಗಿತ್ತು. ಅದು ಅವರಲ್ಲಿರಲಿಲ್ಲ. ಆದುದರಿಂದ ಅವರು ನನ್ನನ್ನು ಬಂಧಿಸದೆ ಹಾಗೆಯೇ ಹೋದರು. ಆದರೆ ಒಂದೆರಡು ತಾಸುಗಳಲ್ಲಾಗಲಿ ಬೆಳಗಿನಲ್ಲಾಗಲಿ ಪೋಲಿಸರು ವಾರಂಟ್ ತೆಗೆದು ಕೊಂಡು ಬರಬಹುದೆಂದು ನನಗನಿಸಿತ್ತು. ಆದುದರಿಂದ ಆಗಲೇ ಶ್ರೀ ಬಾಳೇಕುಂದರಗಿ ಯವರ ಮನೆಯಿಂದ ಹೊರಡಬೇಕೆಂದು ನಿಶ್ಚಯಿಸಿದೆ. ಪೋಲೀಸರು ಹೋಗುವಾಗ ನನ್ನ ಚಲನವಲನೆಯ ಮೇಲೆ ಲಕ್ಷ್ಯವಿಡಲಿಕ್ಕೆ ಇಬ್ಬರು ಬಿನ್-ಡ್ರೆಸ್ಸಿನ ಪೋಲೀಸರನ್ನು ಇಟ್ಟು ಹೋಗಿದ್ದರು. ಅವರ ಕಣ್ಣು ತಪ್ಪಿಸಿ ನಾನು ಹೋಗಬೇಕಾಗಿತ್ತು.

ಆಗ ನಾನು ಧೋತರ ಉಟ್ಟು, ಕೋಟು ಹಾಕಿದ್ದೆ. ರಾತ್ರಿಯಾದುದರಿಂದ ನನ್ನ ಮುಖಚರ್ಯವನ್ನು ಪೋಲೀಸರು ಚೆನ್ನಾಗಿ ನೋಡಿರಲಿಲ್ಲ. ಶ್ರೀ ಬಾಳೇಕುಂದರಗಿ ಯವರು ಒಂದು ಓರಿಗೆಯ ಎಂಟು-ಹತ್ತು ಹುಡುಗರನ್ನು ಕೂಡಿಸಿ, ಸಿನೇಮಾಕ್ಕೆ ಹೋಗಬೇಕೆಂದು ಪೋಲೀಸರಿಗೆ ಕೇಳಿಸುವಂತೆ ಗಟ್ಟಿಯಾಗಿ ಮಾತಾಡಹತ್ತಿದರು. ಹುಡುಗ ರೆಲ್ಲರೂ ಸಿನೇಮಾಕ್ಕೆ ಹೊರಟರು. ಅವರ ಮಧ್ಯದಲ್ಲಿ ನಾನೂ ಹೊರಟೆ. ಸಿನೇಮಾ ಥೇಟರದ ಹತ್ತಿರ ನಮ್ಮ ಗುಂಪು ಬೇರೆ ಬೇರೆಯಾಗಿ ಒಡೆಯಿತು. ನಾನು ನನ್ನ ಜೊತೆಗೆ ಇಬ್ಬರನ್ನು ಕರೆದುಕೊಂಡು ಗದ್ದಲದಲ್ಲಿ ಪೋಲೀಸರ ಕಣ್ಣುತಪ್ಪಿಸಿ ರೇಲ್ವೆ ಸ್ಟೇಶನಕ್ಕೆ ಹೋದೆ. ಅಲ್ಲಿಂದ ರೇಲ್ವೆಯಿಂದ ಧಾರವಾಡಕ್ಕೆ ಬಂದೆನು.

ಶ್ರೀ ಗಾವಡೆ-ಬಾಳೇಕುಂದರಗಿಯವರ ಬಂಧನ ಹಾಗೂ ಶಿಕ್ಷೆ

ನಾವು ಊಹಿಸಿದಂತೆ ಮರುದಿನ ಬೆಳಿಗ್ಗೆ ೮ ಗಂಟೆಗೆ ಎಂಟು ಜನ ಬೆಳಗಾಂವಿಯ ಪೋಲೀಸರೂ ಸಬ್‌ಇನ್‌ಸ್ಪೆಕ್ಟರರೂ, ಶಹಾಪೂರ ಪೋಲೀಸರೊಡನೆ ನಾನು, ಗಾವಡೆ ಮತ್ತು ಬಾಳೇಕುಂದರಗಿ ಈ ಮೂವರ ಮೇಲೆ ವಾರಂಟ್ ತೆಗೆದುಕೊಂಡು ಬಂದರು. ಬಾಳೇಕುಂದರಗಿಯವರನ್ನು ಪೋಲೀಸರು 'ವಡವಿಯವರು ಎಲ್ಲಿದ್ದಾರೆ' ಎಂದು ವಿಚಾರಿಸಿದರು. 'ನಿನ್ನೆ ರಾತ್ರಿ ಆದ ಎಲ್ಲ ಗೊಂದಲ ನೋಡಿ ಅವರನ್ನು ರಾತ್ರಿಯೇ ಹೊರಗೆ ಹಾಕಿದೆವು' ಎಂದು ಅವರು ಹೇಳಿದರು.

ಪೋಲೀಸರಿಗೆ ಅದನ್ನು ಕೇಳಿ ಬಹಳ ನಿರಾಶೆಯಾಯಿತು. ಸಾಯಕ್ಲೋ ಸ್ಟಾಯಿಲ್ ಮಶಿನ್ ಸಿಗದಿದ್ದರೂ ವಡವಿಯವರಾದರೂ ಸಿಕ್ಕರೆಂಬ ಸಮಾಧಾನದಿಂದ

ಅವರು ಹೋಗಿದ್ದರು. ಈಗ ಅವರೂ ಸಿಗದಂತಾಯಿತು. ಗಾವಡೆ ಮತ್ತು ಬಾಳೇಕುಂದರಗಿಯವರನ್ನು ಬಂಧಿಸಿ, ಸಾಂಗಲಿಗೆ ಕಳಿಸಿದರು. ಅವರಿಬ್ಬರಿಗೂ ನಾಲ್ಕು ನಾಲ್ಕು ತಿಂಗಳ ಕಠಿಣ ಶಿಕ್ಷೆಯಾಯಿತು.

ಶ್ರೀ ಬಾಬಾಸಾಹೇಬ ಸೋಮಣ ಅವರು ಪೋಲೀಸರ ಕೈಯೊಳಗಿಂದ ಸ್ವಲ್ಪದರಲ್ಲಿ ಪಾರಾದರು

ಮುಂಬಯಿಯ ಗುಪ್ತ ಕಾಂಗ್ರೆಸ ಕಚೇರಿಯಿಂದಲೂ ಬೆಂಗಳೂರಿನಿಂದಲೂ ನಮಗೆ ಪತ್ರಗಳು ಬರುತ್ತಿದ್ದವು. ಅಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳ ವಿಷಯ ವನ್ನು ಅವು ತಿಳಿಸುತ್ತಿದ್ದವು. ನಾವು ನಮ್ಮ ಕಾರ್ಯಕ್ರಮ ಅವರಿಗೆ ತಿಳಿಸುತ್ತಿದ್ದೆವು. ಹೀಗೆ ಬರುತ್ತಿದ್ದ ಪತ್ರಗಳ ಬಗ್ಗೆ ವಿಚಾರಮಾಡುವುದಕ್ಕೆ, ಅವುಗಳಿಗೆ ಉತ್ತರಕೊಡುವ ದಕ್ಕೆ, ಶ್ರೀ ಬಾಬಾಸಾಹೇಬ ಸೋಮಣರು ವಾರಕ್ಕೊಂದೆರಡು ಸಲ ಬಂದು, ನನಗೆ ಭೆಟ್ಟಿಯಾಗಿ ಹೋಗುತ್ತಿದ್ದರು. ಬಾಳೇಕುಂದರಗಿಯವರ ಮನೆಗೆ ಝಡತಿ ಬಂದ ದಿನವೇ ಅವರೂ ನನ್ನ ಭೆಟ್ಟಿಗೆ ಬರುವ ದಿವಸವೇ ಆಗಿತ್ತು. ಸಾಯಂಕಾಲ ೫ ಗಂಟೆಯ ಸುಮಾರಿಗೆ ಶ್ರೀ ಬಾಬಾಸಾಹೇಬರು ನನ್ನ ಭೆಟ್ಟಿಗೆಂದು ಶಹಾಪೂರ ಅಗಸಿಯಹತ್ತಿರ ಬರತೊಡಗಿದ್ದರು.

ಆಗ ಅವರ ಪರಿಚಯದವರೊಬ್ಬರು ಬಾಬಾಸಾಹೇಬರಿಗೆ 'ಎಲ್ಲಿಗೆ ಹೋಗು ತ್ತೀರಿ' ಎಂದು ವಿಚಾರಿಸಿದರು. ಬಾಬಾಸಾಹೇಬರು ಗುಪ್ತರೀತಿಯಿಂದ ಕಾಂಗ್ರೆಸ್ಸಿನವರಿಗೆ ಸಹಾಯ ಮಾಡುತ್ತಾರೆಂಬುದು ಆ ಗೃಹಸ್ಥರಿಗೆ ಗೊತ್ತಿತ್ತು. ಬಾಬಾಸಾಹೇಬರು 'ಎಲ್ಲಿಯೂ ಇಲ್ಲ. ಇಲ್ಲಿಯೇ ಒಬ್ಬರನ್ನು ಭೆಟ್ಟಿಯಾಗಬೇಕಾಗಿದೆ' ಎಂದು ಉತ್ತರ ಕೊಟ್ಟು, ಮುಂದೆ ಹೊರಟರು. ಆಗ ಆ ಗೃಹಸ್ಥರು ಮತ್ತೆ ಬಾಬಾಸಾಹೇಬರನ್ನು ನಿಲ್ಲಿಸಿ 'ಗಾವಡೆ ಮತ್ತು ಬಾಳೇಕುಂದರಗಿಯವರ ಮನೆಗೆ ಪೋಲೀಸರು ಬಂದು ಝಡತಿ ನಡೆಸಿದ್ದಾರೆ. ಎಚ್ಚರದಿಂದ ಹೋಗಿರಿ' ಎಂದು ಹೇಳಿದರಂತೆ. ಅದನ್ನು ಕೇಳಿ ಶ್ರೀ ಬಾಬಾಸಾಹೇಬರು ಹಿಂದಿರುಗಿ ಹೋದರು. ಇಲ್ಲದಿದ್ದರೆ ಅವರ ಬಂಧನವೂ ಆಗುತ್ತಿತ್ತು.

೧೩. ಅರಭಾವಿಯ ಪ್ರಕರಣ

೧೯೩೨ ನೇ ಇಸ್ವಿಯ ಆಂದೋಲನದ ಇದೊಂದು ಘಟನೆಯನ್ನು ಹೇಳಿ ಇದನ್ನು ಮುಗಿಸುತ್ತೇನೆ. ನಾಲ್ಕೆಂಟು ದಿವಸಗಳಾದನಂತರ ನಾನು ಮತ್ತೆ ಬೆಳಗಾಂವಿಗೆ ಬಂದೆ. ಈ ಕಾಲದಲ್ಲಿ ಕೇವಲ ಬುಲೆಟಿನ್ ಹೊರಡಿಸಿ, ಸುಮ್ಮನೇ ಕೂಡ್ರುವಂತಿರಲಿಲ್ಲ. ಪ್ರಾಂತದಲ್ಲಿ ಬೇರೆ ಬೇರೆ ಕಡೆಗೆ ಹೋಗಿ ಸ್ವಯಂಸೇವಕರನ್ನು ಕಲೆಹಾಕುವದು, ಬೆಳಗಾಂವಿಯಲ್ಲಿ ಅವರಿಗೆ ಊಟ ಹಾಗೂ ವಸತಿಯ ಸೌಕರ್ಯ ಒದಗಿಸಿಕೊಡುವದು,–

ಕಾರ್ಯಕ್ರಮ ಗೊತ್ತುಮಾಡಿ, ಅವರನ್ನು ಸೆರೆಮನೆಗೆ ಕಳಿಸುವದು ಇವೆಲ್ಲ ಕೆಲಸ ಮಾಡ ಬೇಕಾಗುತ್ತಿತ್ತು. ಸರಕಾರಕ್ಕೆ ಆಂದೋಲನ ಸತ್ತಿಲ್ಲ— ಇನ್ನೂ ಜೀವಂತವಾಗಿದೆ ಎಂದು ತೋರಿಸಬೇಕಾಗಿತ್ತು. ಆದುದರಿಂದ ಬೇರೆ ಬೇರೆ ಕಾರ್ಯಕ್ರಮಗಳ ಯೋಜನೆಮಾಡಿ, ಅವನ್ನು ಆಚರಿಸಲಾಗುತ್ತಿತ್ತು. ತಾಲೂಕು, ಜಿಲ್ಹಾ, ಪ್ರಾಂತೀಯ ಹಾಗೂ ಅಖಿಲ ಭಾರತ ಮಟ್ಟದ ಸಮ್ಮೇಲನಗಳನ್ನು ಕೂಡಿಸಬೇಕಾಗುತ್ತಿತ್ತು.

ಗೋಕಾಕದ ಹತ್ತಿರ ಅರಭಾವಿ ಎಂಬ ಊರು ಇದೆ. ಅಲ್ಲಿ ಸತ್ಯಪ್ಪ ವಡ್ಡರ ಈತನ ಒಂದು ದೊಡ್ಡ ಸಿಂದೀಗಿಡಗಳ ಬನವಿದೆ. ಈ ಬನದೊಳಗಿನ ಸಿಂದೀಗಿಡ ಕಡಿಯ ಬೇಕೆಂಬ ವಿಚಾರ ಬಂದಿತು. ಇದಕ್ಕೊಂದು ಕಾರಣವಿತ್ತು. ೧೯೩೦ರಲ್ಲಿ ಒಮ್ಮೆ ಶ್ರೀಮತಿ ಕೃಷ್ಣಾಬಾಯಿ ಪಣಜೀಕರ ಅವರು ಗೋಕಾಕಕ್ಕೆ ವ್ಯಾಖ್ಯಾನ ಕೊಡುವುದಕ್ಕಾಗಿ ಹೋಗಿದ್ದರು. ವ್ಯಾಖ್ಯಾನದ ಕಾಲದಲ್ಲಿ ಅವರು ಸೆರೆ–ಸಿಂದಿಗಳನ್ನು ಟೀಕಿಸಿದರು. ವ್ಯಾಖ್ಯಾನ ಮುಗಿಸಿಕೊಂಡು ಅವರು ಹುಕ್ಕೇರಿ ಸ್ಟೇಶನ್ನಿಗೆ ಬಂದಾಗ ಅವರನ್ನು ಬಂಧಿಸಿ. ಅವರ ಜೊತೆಗಿದ್ದ ಗಂಗಪ್ಪ ಯಮಕನಮರಡಿಯವರನ್ನು ಹೊಡೆದ ವಿಷಯವು ಈ ಹಿಂದೆಯೇ ಬಂದಿದೆ. ಇದೂ ಅಲ್ಲದೆ ಸಿಂದೀಗಿಡ ಕಡಿಯುವವರು ನನ್ನ ಬನಕ್ಕೆ ಬರಲಿ ನೋಡುತ್ತೇನೆಂದು ಆ ಸತ್ಯಪ್ಪನು ಅನ್ನುತ್ತಿದ್ದ.

ಆದುದರಿಂದ ಅವನ ಬನದಲ್ಲಿಯ ಕೆಲವು ಗಿಡಗಳನ್ನಾದರೂ ಕಡಿದೇತೀರ ಬೇಕೆಂದು ಕಾರ್ಯಕರ್ತರು ಆತುರರಾಗಿದ್ದರು. ಈ ಸಾರೆಯ ಕಾರ್ಯಕ್ರಮವೆಂದು ಅದನ್ನೇ ಗೊತ್ತುಮಾಡಿದೆವು.

ಸತ್ಯಪ್ಪ ವಡ್ಡರ

ಈತನು ಆ ಕಾಲದಲ್ಲಿ ಸಿಂದಿಯ ವ್ಯಾಪಾರಕ್ಕೆ ಬೆಳಗಾಂವಿ ಜಿಲ್ಹೆಯಲ್ಲಿ ಹೆಸ-ರಾಗಿದ್ದನು. ಸಾಮಾನ್ಯವಾಗಿ ಜಿಲ್ಹೆಯಲ್ಲಿಯ ಎಲ್ಲ ಸಿಂದಿಯ ಗಡಂಗಗಳು ಅವನ ಗುತ್ತಿಗೆಗೇ ಸೇರಿದವು ಎಂದರೂ ಅಡ್ಡಿಯಿಲ್ಲ. ಸಿಂದಿಯನ್ನು ಸಾಗಿಸುವುದಕ್ಕೆ ೫–೬ ಟ್ರಕ್ಕುಗಳನ್ನು ಇಟ್ಟಿದ್ದನು. ಅರಭಾವಿಯ ಹತ್ತಿರವೇ ಒಂದು ದೊಡ್ಡ ಸಿಂದಿಯ ಬನವೂ ಇತ್ತು. ಅದರ ಪಕ್ಕದಲ್ಲಿಯೇ ಉಪ್ಪರಿಗೆಯ ಮನೆ ಹಾಗೂ ಕಾರು; ಕೈಯಲ್ಲಿ ಹತ್ತಿಪ್ಪತ್ತು ಆಳುಗಳು ಯಾವಾಗಲೂ ಇರುತ್ತಿದ್ದರು. ಆಗಿನ ಸರಕಾರದಲ್ಲಿ ಆತನ ಪ್ರಸ್ತ ವಿಶೇಷವಾಗಿತ್ತು. ಇಂಥವರನ್ನೇ ಹಿಡಿದು ಸರಕಾರ ನಡೆಸಬೇಕಿತ್ತಲ್ಲ ಬ್ರಿಟಿಶರಿಗೆ!

ಕಾರ್ಯಕ್ರಮದ ಯೋಜನೆ

ಸಿಂದಿಯ ಗಿಡ ಕಡಿಯುವುದು ಕಷ್ಟದ ಕೆಲಸ. ಕೇವಲ ೧೦–೧೨ ಜನ ಸ್ವಯಂಸೇವಕರಿಂದ ಈ ಕೆಲಸ ಆಗುವಂತಿರಲಿಲ್ಲ. ಆದುದರಿಂದ ಮೊದಲಿಯ ಬೇಡರನ್ನು

ಕರೆಯಿಸಿ, ಅವರಿಗೆ ಅರಭಾವಿಯ ಸಿಂದಿಯ ಬನದಲ್ಲಿಯ ಗಿಡಗಳನ್ನು ಕಡಿಯಲು ಹೇಳಿದೆವು. ಅವರ ಜೊತೆಗೆ ನಾವೂ ಬರುವುದಾಗಿ ಹೇಳಿದ್ದೆವು. ಅವರು ಗಿಡ ಕಡಿದು ಮನೆಗೆ ಹೋಗಬೇಕು. ಸ್ವಯಂಸೇವಕರು ಗೋಕಾಕ ಊರಲ್ಲಿ ಜಯಜಯಕಾರ ಮಾಡುತ್ತ ಮೆರೆವಣಿಗೆ ತೆಗೆದು ಜೇಲಿಗೆ ಹೋಗಬೇಕು ಎಂದು ಗೊತ್ತಾಗಿತ್ತು. ಅದಕ್ಕೆ ಬೇಡರು ಒಪ್ಪಿದರು.

ಬೇಡರು ನೇರವಾಗಿ ಬನಕ್ಕೇ ಹೋಗಿ, ಸಿಂದಿಯ ಗಿಡ ಕಡಿಯತೊಡಗಬೇಕು. ಸ್ವಯಂಸೇವಕರು ರೈಲಿನಿಂದ ಹುಕ್ಕೇರಿರೋಡಿಗೆ ಬಂದು ಬನಕ್ಕೆ ಹೋಗಬೇಕು. ನಾನು ಮತ್ತು ವಾಮನರಾವ ಕುಲಕರ್ಣಿಯವರು ಸುಲ್ತಾನಪುರದಿಂದ ಸಾಯಕಲ್ ಮೇಲಿಂದ ಸ್ಟೇಶನ್ನಿಗೆ ಬಂದು, ಸ್ವಯಂಸೇವಕರನ್ನು ಕೂಡಿಕೊಳ್ಳಬೇಕು ಎಂಬುದಾಗಿ ನಿಶ್ಚಯಿಸ ಲಾಗಿತ್ತು. ಸ್ವಯಂಸೇವಕರಲ್ಲಿ ಹುಚ್ಚಪ್ಪ ಹೊಳಿಯಾಚೆ, ಬಾಳಪ್ಪ ಅಕ್ಕತಂಗೇರಹಾಳ ಅಲ್ಲದೆ ಇನ್ನೂ ೮–೧೦ ಜನರು ಇದ್ದರು. ಹುದಲಿಯ ಅಪ್ಪಣ್ಣ ದೇಶಪಾಂಡೆಯವರೂ ಇದ್ದರು.

ಕಾರ್ಯಕ್ರಮದ ದಿನ

ಸುಲ್ತಾನಪುರವು ಹುಕ್ಕೇರಿ ತಾಲೂಕಿನೊಳಗಿನ ಒಂದು ಹಳ್ಳಿ. ಅಲ್ಲಿ ಹುದಲಿ ಯದೇ ಶಾಖೆಯಾದ ಖಾದೀಕೇಂದ್ರವಿತ್ತು. ಶ್ರೀ ವಾಮನರಾವ ಕುಲಕರ್ಣಿಯವರು ಅಲ್ಲಿ ಕೆಲಸ ಮಾಡುತ್ತಿದ್ದರು. ಕಾರ್ಯಕ್ರಮ ಗೊತ್ತಾದ ದಿನ ಎಲ್ಲ ಸಿದ್ಧತೆಯನ್ನೂ ಮಾಡಿ, ನಾನು ಮುಂಜಾನೆ ಸುಲ್ತಾನಪುರಕ್ಕೆ ಹೋದೆ. ಊಟ ತೀರಿಸಿ, ವಿಶ್ರಾಂತಿ ತೆಗೆದುಕೊಂಡು ಸಾಯಂಕಾಲ ೬ ಗಂಟೆಯ ಸುಮಾರಿಗೆ ಸಾಯಕಲ್ ಮೇಲಿಂದ ನಾನು ಹಾಗು ವಾಮನರಾಯರು ಸುಲ್ತಾನಪುರದಿಂದ ಹೊರಟೆವು. ಹುಕ್ಕೇರಿಯಿಂದ ಹುಕ್ಕೇರಿ ರೋಡ ಸ್ಟೇಶನ್ನಿಗೆ ಹೋಗುವ ದಾರಿಯಲ್ಲಿ ಗುಡಸ ಎಂಬ ಊರು ಸಿಕ್ಕುತ್ತದೆ. ಆ ಊರ ಮುಂದೆ ದಾರಿಯು ಇಳಿಜಾರಾಗಿದೆ. ರಸ್ತೆಯನ್ನು ಅದೇ ದುರಸ್ತು ಮಾಡಿದ್ದ ರಿಂದ ವಾಹನಗಳು ಅಡ್ಡಾಡಬಾರದೆಂದು ದಾರಿಯುದ್ದಕ್ಕೂ ದೊಡ್ಡ ದೊಡ್ಡ ಕಲ್ಲು ಗಳನ್ನು ಇಡಲಾಗಿತ್ತು. ಕತ್ತಲೆಯಲ್ಲಿ ಆ ಕಲ್ಲುಗಳು ನನಗೆ ಕಾಣಲಿಲ್ಲ. ಇಳಿಜಾರಾದ್ದ ರಿಂದ ಸಾಯಕಲ್ ಜೋರಿನಿಂದ ಹೊರಟಿತ್ತು. ಊರ ಮುಂದಿನ ಸುಂಕದ ಕಟ್ಟೆಯ ಹತ್ತಿರ ಸಾಯಕಲ್ ಒಂದು ಕಲ್ಲಿಗೆ ತಗುಲಿ ನಾನು ಜೋರಾಗಿ ಬಿದ್ದುಬಿಟ್ಟೆ. ಬಲಗಡೆಯ ಮಂಡೆ ಒಡೆದು ರಕ್ತ ಸೋರತೊಡಗಿತು.

ಆಗ ಸುಂಕದ ಕಟ್ಟೆಯಲ್ಲಿದ್ದವನು 'ದೀಪ ತರಲೇನು' ಎಂದು ಕೇಳಿದನು. ಆತ ಬಂದರೆ ನಮ್ಮ ಗುರುತು ಎಲ್ಲಿ ಸಿಕ್ಕುತ್ತದೆಯೋ ಎಂದು 'ಬೇಡ, ವಿಶೇಷ ಏನೂ ಆಗಿಲ್ಲ' ಎಂದು ಹೇಳಿ ನಾವು ಹಾಗೆಯೇ ಮುಂದೆ ಸಾಗಿದೆವು. ಹುಕ್ಕೇರಿರೋಡ ಸ್ಟೇಶನ್ನಿನ

ಲೆಪ್ಪೆಲ್ ಕ್ರಾಸಿಂಗಿನ ಹತ್ತಿರ ನಾಲ್ಕು ರಸ್ತೆಗಳು ಕೂಡುತ್ತವೆ. ಅಲ್ಲಿಗೆ ನಾವು ಹೋಗುವುದಕ್ಕೇ ಆ ರಸ್ತೆಯ ಮೇಲೆ ನಾಲ್ಕು ಖಾಲಿ ಲಾರಿಗಳು ನಿಂತುದು ನಮ್ಮ ದೃಷ್ಟಿಗೆ ಬಿದ್ದಿತು. ಅವುಗಳಲ್ಲಿ ಜನರು ಯಾರೂ ಇರಲಿಲ್ಲ. ನಾವು ಡ್ರಾಯವ್ಹರನನ್ನು 'ಈ ಲಾರಿಗಳು ಎಲ್ಲಿಗೆ ಹೋಗುತ್ತವೆ' ಎಂದು ವಿಚಾರಿಸಿದೆವು. ಆತ ಮಾತನಾಡಲೇ ಇಲ್ಲ. ನಾವು ಅರಭಾವಿ ಕಡೆಗೆ ಹೋಗುವ ರಸ್ತೆ ಹಿಡಿದು ಹೊರಟು ರಸ್ತೆಯ ಬದಿಗಿರುವ ಒಂದು ಒಡ್ಡಿನ ಕೆಳಗೆ ಎರಡೂ ಸಾಯಕಲ್‌ಗಳನ್ನು ಇಟ್ಟೆವು. ಕಾರ್ಯಕ್ರಮ ಮುಗಿಸಿಕೊಂಡು, ಸಾಯಕಲ್ ಮೇಲಿಂದಲೇ ತಿರುಗಿ ನಾವು ಬರಬೇಕೆಂಬ ವಿಚಾರವಿತ್ತು.

ಅಲ್ಲಿಂದ ಸ್ಟೇಶನ್ನಿಗೆ ಹೋದೆವು. ಆ ಸ್ಥಳಕ್ಕೂ ಸ್ಟೇಶನ್ನಿಗೂ ಬಹಳ ದೂರವಿರಲಿಲ್ಲ. ಒಂದೆರಡೇ ಫರ್ಲಾಂಗ ಆಗಬಹುದು. ಗಾಡಿ ಬರುವ ಸಮಯವಾಗಿತ್ತು. ಆದರೂ ಎಲ್ಲವೂ ಶಾಂತವಾಗಿತ್ತು. ಸ್ಟೇಶನ್ನಿನ ಮೇಲೆ ದೀಪವಿರಲಿಲ್ಲ. ಪಾನ-ಬೀಡಿ ಸಿಗರೇಟಗಳ ಚೀರಾಟವಿರಲಿಲ್ಲ. ಎಲ್ಲವೂ ಶಾಂತವಾಗಿತ್ತು. ಇದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಅಲ್ಲಿ ಬಿನ್‌ಡ್ರೆಸ್ಸಿನ ಪೋಲೀಸರು ಒಬ್ಬಿಬ್ಬರು ತಿರುಗಾಡುತ್ತಿದ್ದರು. 'ದಾಲಮೇ ಕಾಲಾ' ಎಂಬಂತೆ ಏನೋ ಗಡಿಬಿಡಿ ಆಗಿದೆ ಎಂದು ನಮಗೂ ಸಂದೇಹ ಬಂತು. ಆದರೆ ಗಾಡಿ ಬರುವ ಹೊತ್ತಾಗಿತ್ತು. ಈಗ ಮಾಡುವುದೇನು ? ಮುಂದೆ ನಾವು ಏನು ಮಾಡಬೇಕೆಂಬ ವಿಚಾರದಲ್ಲಿರುವಾಗಲೇ ಗಾಡಿ ಬಂದೇಬಿಟ್ಟಿತು.

ಪ್ರಯಾಣಿಕರು ಗಾಡಿ ಇಳಿದು ಹೊರಗೆ ಬರತೊಡಗಿದರು. ನಾವು ಮೊದಲೇ ಹೊರಗೆ ಬಂದು ನಿಂತಿದ್ದೆವು. ನಮ್ಮ ಸ್ವಯಂಸೇವಕರು ಕೊಡಲಿಗಳನ್ನು ಕೈಚೀಲಗಳಲ್ಲಿ ಹಾಕಿ ಅವುಗಳ ಕಾವುಗಳನ್ನು ಕೈಯಲ್ಲಿ ಹಿಡಿದುಕೊಂಡು ಬರುತ್ತಿದ್ದರು.– ಅವರು ಟಿಕೆಟಗಳನ್ನು ಕೊಟ್ಟು ಹೊರಗೆ ಬಂದರು. ನಾವು ಒಬ್ಬರನ್ನೊಬ್ಬರು ನೋಡಿದೆವು. ಅವರಿಗೆ ಸಂಜ್ಞೆಮಾಡಿ ಮುಂದಾಗಲು ಹೇಳಿದೆವು. ಅವರ ಹಿಂದೆಯೇ ಸ್ವಲ್ಪ ಅಂತರದಲ್ಲಿ ನಾನು ಮತ್ತು ವಾಮನರಾವ ಇಬ್ಬರೂ ನಡೆದೆವು. ಮುಖ್ಯ ದಾರಿಯನ್ನು ಬಿಟ್ಟು ಅರಭಾವಿಯ ದಾರಿಯ ಕಡೆಗೆ ಸ್ವಯಂಸೇವಕರು ಹೊರಳಿದರು. ನಾವಿನ್ನೂ ಮುಖ್ಯ ದಾರಿಯ ಮೇಲೆಯೇ ಇದ್ದೆವು. ಅಷ್ಟರಲ್ಲಿ ಪೋಲೀಸರ ಆವಾಜ (ಸಪ್ಪಳ) ಕೇಳಬರಹತ್ತಿತು. ಶೀಟಿಯಾಗತೊಡಗಿತು.' 'ಪಕಡೋ, ಪಕಡೋ' ಎಂಬ ಶಬ್ಧ ಕೇಳಬಂದಿತು.

ಆಗ ವಾಮನರಾಯರು "ಮಾಸ್ತರರೇ, ಘಾತವಾಯಿತು. ಏನೋ ಮೋಸವಾಗಿದೆ. ಪೋಲೀಸರು ಸ್ವಯಂಸೇವಕರನ್ನು ಹಿಡಿಯಹತ್ತಿದ್ದಾರೆ. ಇನ್ನು ನಾವು ಅಲ್ಲಿ ಹೋಗಿ ಉಪಯೋಗವಿಲ್ಲ" ಎಂದು ಹೇಳಿ, ನನ್ನನ್ನು ಕರೆದುಕೊಂಡು ಸ್ಟೇಶನ್ನಿಗೆ ಬಂದರು. ಪೋಲೀಸರು ಸ್ವಯಂಸೇವಕರನ್ನು ಒಡಿಯುವ ಗಡಿಬಿಡಿಯಲ್ಲಿದ್ದುದರಿಂದ ಮತ್ತು ಕತ್ತಲೆಯಾದ್ದರಿಂದ ನಾವು ತಿರುಗಿ ಬಂದುದನ್ನು ಯಾರೂ ಗಮನಿಸಲಿಲ್ಲ. ನಾವು ಹಾಗೆಯೇ ಮುಂದೆ ಹೋಗಿ ಕತ್ತಲಲ್ಲಿ ಹಳಿ ದಾಟಿ ಸ್ಟೇಶನ್ನಿನ ವಿರುದ್ಧ ದಿಕ್ಕಿಗೆ

ಹೊರಟೆವು. ಅಲ್ಲಿ ಒಂದು ಜೋಳದ ಹೊಲವಿತ್ತು. ಆಗ ಜೋಳದ ನಿಲುವು ಎದೆ ಎತ್ತರದಷ್ಟು ನಿಂತಿತ್ತು. ನಾವಿಬ್ಬರೂ ಅದರ ಮಧ್ಯದಲ್ಲಿ ಹೋಗಿ ಕುಳಿತೆವು. ಅತ್ತ ಸ್ವಯಂಸೇವಕರ ಬಂಧನವೆಲ್ಲ ಆಯಿತು. ಪೋಲೀಸರಿಗೆ ಯಾರು ಯಾರು ಬರುತ್ತಾರೆ ಎಂಬುವರ ವಿವರವಾದ ಪಟ್ಟಿಯೇ ಸಿಕ್ಕಿತ್ತು. ಆ ಪ್ರಕಾರ ಅವರು ಪ್ರತಿಯೊಬ್ಬರ ಹೆಸರನ್ನೇ ತೆಗೆದುಕೊಂಡು ಬಂಧಿಸಿದರು.

ಆ ಪಟ್ಟಿಯಲ್ಲಿದ್ದ ಹೆಸರಿನಲ್ಲಿ ನನ್ನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಇದ್ದರು. ಆ ಪಟ್ಟಿಯಲ್ಲಿ ವಾಮನರಾಯರ ಹೆಸರು ಇರಲಿಲ್ಲ. ಹುಚ್ಚಪ್ಪ ಹೊಳೆಯಾಚೆ ಹಾಗು ಇನ್ನಿತರ ಸ್ವಯಂಸೇವಕರನ್ನು ನಾನು ಬಂದಿದ್ದೇನೆಯೋ ಇಲ್ಲವೋ ಎಂಬುದನ್ನು ಪೋಲೀಸರು ಕೇಳಿದರು. 'ಇಲ್ಲಿಯೇ ಇದ್ದರು: ಎತ್ತ ಹೋದರೋ ಏನೋ ಗೊತ್ತಿಲ್ಲ' ಎಂದು ಅವರು ಹೇಳಿದರು. ನಾನು ಬಂದುದನ್ನು ಪೋಲೀಸರೂ ಸತ್ಯಪ್ಪನ ಜನರೂ ನೋಡಿದ್ದರು. ಆದರೂ ನಾನು ಎಲ್ಲಿ ತಪ್ಪಿಸಿಕೊಂಡೆ; ಇಲ್ಲಿಯೇ ಎಲ್ಲಾದರೂ ಅಡಗಿ ಕೊಂಡಿರಬಹುದು; ಅಥವಾ ಎಲ್ಲಿಯಾದರೂ ಓಡಿಹೋಗುತ್ತಿರಬಹುದು ಎಂದು ಪೋಲೀಸರು ತಿಳಿದರು. ಇಷ್ಟು ಜನ ಪೋಲೀಸರ ಕೈಯೊಳಗಿಂದ ಹೇಗೆ ಪಾರಾಗು ತ್ತಾನೆ–ನೋಡುವಾ–ಹಿಡಿದೇ ತೀರಬೇಕೆಂದು ಅವರು ನಿಶ್ಚಯಿಸಿದರು. ಸ್ವಯಂಸೇವಕರ ನ್ನೆಲ್ಲ ಒಯ್ದು ಗೆಸ್ಟ್‌ಹೌಸಿನಲ್ಲಿ ಕೂಡ್ರಿಸಿದರು.

ಲೆವ್ವಲ್ ಕ್ರಾಸಿಂಗಿನ ಹತ್ತಿರ ಇದ್ದ ನಾಲ್ಕು ರಸ್ತೆಯ ಮೇಲೆ ಓಡಾಡತೊಡ ಗಿದರು. ಜೋಳದ ನಿಲುವಿನೊಳಗಿಂದ ನಮಗೆ ಅದೆಲ್ಲ ಕಾಣುತ್ತಿತ್ತು. ನಾವು ಮಾತ್ರ ಯಾರಿಗೂ ಕಾಣುತ್ತಿರಲಿಲ್ಲ. ಇಷ್ಟೊತ್ತಿಗೆ ರಾತ್ರಿ ಮೂರು ತಾಸಾಗಿರಬಹುದು. ಪ್ರತಿ ಯೊಂದು ರಸ್ತೆಯ ಮೇಲೆ ಒಂದೊಂದು ಬಸ್ಸನ್ನು ೩–೪ ಮೈಲು ದೂರ ಓಡಿಸುವದು ಮತ್ತೆ ತಿರುಗಿ ತರುವುದು ಮತ್ತೆ ಓಡಿಸುವದು. ಮಧ್ಯ–ಮಧ್ಯದಲ್ಲಿ ನಿಂತು ಅತ್ತಿತ್ತ ಮೋಟರಿನ ಲೈಟ್ ಬಿಡುವುದು, ಗುಂಡುಗಳನ್ನು ಹಾರಿಸುವುದು ಇತ್ಯಾದಿಗಳು ಅಖಂಡ ವಾಗಿ ನಡೆಯಿತು. ನೂರಾರು ಜನ ಪೋಲೀಸರು, ಡಿ. ವಾಯ್. ಎಸ್. ಪಿ., ಮತ್ತು ಡಿ. ಎಸ್. ಪಿ. ಸಬ್ ಇನ್‌ಸ್ಪೆಕ್ಟರ ಮೊದಲಾದವರೂ ಅಲ್ಲಿ ಇದ್ದರು. ಅವರ ಸಹಾ ಯಕ್ಕೆ ಸತ್ಯಪ್ಪ ವಡ್ಡರ ಈತನ ಜನರೂ ಇದ್ದರು. ಕೆಲವು ಪೋಲೀಸರನ್ನು ಹಾಗೆ ಅತ್ತಿತ್ತ ಅಡ್ಡಾಡಿ ನನ್ನನ್ನು ಹುಡುಕಲು ಹೇಳಿದರು.

ಪೋಲೀಸರು ಟಾರ್ಚ ಹಿಡಿದು ಅಲ್ಲಲ್ಲಿ ತಿರುಗಾಡಿ ಹುಡುಕುತ್ತಿದ್ದರು. ಆಗಿನ ಕಾಲದ ದೃಶ್ಯ ಒಂದು ಯುದ್ಧಭೂಮಿಯ ದೃಶ್ಯವಾಗಿ ಕಾಣುತ್ತಿತ್ತು. ಯಾರೋ ಪೋಲೀಸರಿಗೆ ಈ ಸುದ್ದಿ ಹೇಳುವಾಗ ಸ್ವಲ್ಪ ಉಪ್ಪುಕಾರವನ್ನು ಹಚ್ಚಿ ಹೇಳಿರಬೇಕು. ನಾವೇನೋ ಸಾವಿರಾರು ಜನ ದಾಳಿಮಾಡಲಿಕ್ಕೆ ಬರುತ್ತೇವೆಂಬ ಭಾವನೆಯಿಂದ ನೂರಾರು ಸಶಸ್ತ್ರ ಪೋಲೀಸರನ್ನು ಕರೆತಂದಿದ್ದರೇನೋ! ಸತ್ಯಪ್ಪ ವಡ್ಡರ ಈತನಿಗೆ

ಈ ಸುದ್ದಿ ತಿಳಿದು. ಡಿ. ಎಸ್. ಪಿ. ಯು ಕಡೆಗೆ ಹೋಗಿ, ಇಪ್ಪೊಂದು ಜನ ಪೋಲೀಸ ರನ್ನು ಸಜ್ಜು ಮಾಡಿ ತಂದಿರಬೇಕು.

ಎಲ್ಲಿ ನೋಡಿದಲ್ಲಿ ಒದರಾಟ. ಚೀರಾಟ. ಗುಂಡಿನ ಗಡಗಡಾಟ, ಬಸ್ಸುಗಳ ತಿರುಗಾಟ ನಡೆಯಿತು. ನಾವಿದ್ದ ಕಡೆಗೂ ಗುಂಡುಗಳು ಬರುತ್ತಿದ್ದುವು. ಆದರೆ ಸುದೈವ ದಿಂದ ನಮಗೆ ಒಂದೂ ತಾಗಲಿಲ್ಲ. ಪೋಲೀಸರಿಗೂ ಸತ್ಯಪ್ಪನಿಗೂ ಇದೊಂದು ಅವ ಮಾನವೇ ಸರಿ. ಕೈಗೆ ಬಂದ ಮುಖ್ಯ ಆಸಾಮಿಯನ್ನೇ ಕಳೆದುಕೊಂಡೆವಲ್ಲ! ಇಲ್ಲಿಗೆ ಬಂದವನು ಇಷ್ಟು ಜನ ಪೋಲೀಸರ ಕೈಯೊಳಗಿಂದ ಹೇಗೆ ಪಾರಾಗಿ ಹೋಗುತ್ತಾನೆ! ನೋಡಿಯೇ ಬಿಡಬೇಕೆಂಬ ಈರ್ಷೆ ಸಹ ಸಫಲವಾಗಲಿಲ್ಲ. ಗುಡ್ಡ ಅಗಿದು ಇಲಿ ತೆಗೆ ದಂತಾಯಿತು—ಅವರ ಈ ಭಗೀರಥ ಪ್ರಯತ್ನ. ರಾತ್ರಿ ಒಂದು ಗಂಟೆಯವರೆಗೂ ಈ ಹುಡುಕಾಟ ನಡೆಯಿತು. ಆದರೆ ಅದರ ಪ್ರಯೋಜನವೇನೂ ಆಗಲಿಲ್ಲ. ಎರಡುಗಂಟೆಯ ಸುಮಾರಿಗೆ ಎಲ್ಲವೂ ಸ್ತಬ್ಧವಾಯಿತು. ಬಸ್ಸುಗಳೆಲ್ಲ ಗೋಕಾದ ಕಡೆಗೆ ಹೋದವು. ನಾವು ಮತ್ತೆ ಅರ್ಧ ಗಂಟೆ ಕಾಯ್ದೆವು. ಎಲ್ಲವೂ ಶಾಂತವಾಗಿತ್ತು. ಬೆಳಗಾಗುವದರೊಳಗೆ ಊರು ಮುಟ್ಟಬೇಕಲ್ಲ! ಎಂಬ ಚಿಂತೆಯಿಂದ ನಾನು ಏಳಲಿಕ್ಕೆ ಹೋದೆ, ಬರಲಿಲ್ಲ. ಕಾಲು ಹಿಡಿದುಬಿಟ್ಟಿತ್ತು. ಇದುವರೆಗೆ ಕಾಲು ನೋವಿನ ಅರಿವೇ ನನಗಿರಲಿಲ್ಲ. ಈಗ ಕಾಲು ನಿಲ್ಲಲಿಕ್ಕೆ ಬಾರದಷ್ಟು ಮರಗಟ್ಟಿತ್ತು. ಆದರೂ ಸಾವರಿಸಿಕೊಂಡು ಎದ್ದೆ. ಇಬ್ಬರೂ ಮೆಲ್ಲನೆ ಸಾಯಕಲ್ ಇರಿಸಿದ್ದ ಸ್ಥಳಕ್ಕೆ ಬಂದೆವು.

ನಮ್ಮ ಎರಡೂ ಸಾಯಕಲ್ಲುಗಳು ಪೋಲೀಸರ ಕೈಗೆ ಸಿಕ್ಕಿರಬೇಕೆಂದು ನಮ್ಮ ಕಲ್ಪನೆಯಾಗಿತ್ತು. ಆದರೆ ಸುದೈವದಿಂದ ಸಾಯಕಲ್‌ಗಳು ಅಲ್ಲಿಯೇ ಸುರಕ್ಷಿತವಾಗಿದ್ದವು. ನಾವು ಅವುಗಳನ್ನು ತೆಗೆದುಕೊಂಡು ಸಾವಕಾಶವಾಗಿ ಸುಲ್ತಾನಪುರಕ್ಕೆ ಬಂದೆವು. ಆಗ ತಾನೇ ಅರುಣೋದಯವಾಗುತ್ತಿತ್ತು. ಜನರು ಇನ್ನೂ ಅದೇ ಏಳತೊಡಗಿದ್ದರು. ನಾನು ಮನೆಗೆ ಬಂದವನೇ ಮಲಗಿಕೊಳ್ಳಬೇಕೆಂದು ಮಾಡಿದೆ. ಬಹಳ ಹಸಿವೆಯೂ ಆಗಿತ್ತು. ವಾಮನರಾಯರು ಎಲ್ಲಿಯೋ ಹೋಗಿ, ಹಾಲು ತಂದರು. ಹಾಲು ಕುಡಿದು ನಾನು ಮಲಗಿಬಿಟ್ಟೆ. ವಾಮನರಾಯರು ಊರಲ್ಲ ತಿರುಗಾಡಿ, ಜನರಿಗೆ ಭೆಟ್ಟಿಯಾಗಿ ತಾವು ಊರಲ್ಲಿಯೇ ಇರುವುದಾಗಿ ಭಾಸವಾಗುವಂತೆ ಮಾಡಿದರು.

ಸಾಯಂಕಾಲವೇ ನಾನು ಊರು ಬಿಡಬೇಕಾಗಿತ್ತು. ಐದು ಗಂಟೆಯ ಸುಮಾ ರಿಗೆ ನಾನು ಒಂದು ಎತ್ತಿನ ಗಾಡಿಯಲ್ಲಿ ಕುಳಿತು ಹುಕ್ಕೇರಿಗೆ ಬಂದು, ಕೊನೆಯ ಬಸ್ಸಿ ನಿಂದ ನಾನು ಕೊಲ್ಹಾಪುರಕ್ಕೆ ಹೋದೆನು. ಕೊಲ್ಹಾಪುರದಲ್ಲಿ ಶ್ರೀ ದತ್ತೋಪಂತ ಮಾಳಗಿಯವರ ಬೀಗರಿದ್ದಾರೆ. ಅವರ ಸಹಾಯದಿಂದ ನಾನು ೧೫ ದಿವಸ ದವಾಖಾನೆ ಯಲ್ಲಿದ್ದು ಕಾಲನ್ನು ಸರಿಪಡಿಸಿಕೊಂಡು ತಿರುಗಿ ಬೆಳಗಾವಿಗೆ ಬಂದೆನು.

೧೪. ನನ್ನ ಗಡಿಪಾರು

ಈ ಘಟನೆಯನಂತರ ನಾನು ಕೊಲ್ಹಾಪುರದಿಂದ ತಿರುಗಿ ಬಂದೆ. ತಿರುಗಿ ಬಂದಾಗ ಎಲ್ಲವೂ ಶಾಂತವಾಗಿತ್ತು. ಮತ್ತೆ ಸಂಘಟನೆ ಮಾಡುವುದು ಕಷ್ಟದಾಯಕವಾಗಿತ್ತು. ಸುಮ್ಮನೇ ಹೊರಗೆ ಕೂಡುವದು ನನಗೆ ಸರಿದೋರಲಿಲ್ಲ. ಇಷ್ಟೊಂದು ಕಾರ್ಯಕ್ರಮಗಳಾದರೂ ಪೋಲೀಸರಿಗೆ ನನ್ನನ್ನು ಹಿಡಿಯುವದಾಗಲಿಲ್ಲ. ಏನಾದರೂ ಕಾರ್ಯಕ್ರಮ ಮಾಡಿ ನಾನು ಸೆರೆಮನೆಗೆ ಹೋಗಬೇಕೆಂದು ನಿಶ್ಚಯಿಸಿದೆನು. ನನ್ನ ಈ ಸ್ಥಿತಿಯನ್ನು ಶ್ರೀ ಕೃಷ್ಣರಾವ ಯಾಳಗಿಯವರಿಗೆ ತಿಳಿಸಿದೆ ಅವರೂ ಒಪ್ಪಿಕೊಂಡರು.

ನಾನು ಒಂದು ದಿವಸ ಬೆಳಗಾಂವಿಯಲ್ಲಿಯೇ ಧ್ವಜವಂದನೆ ಮತ್ತು ಸಭೆಯನ್ನು ಮಾಡುವದು ಗೊತ್ತುಮಾಡಿದೆ. ಆ ರೀತಿ ಕಲೆಕ್ಟರರಿಗೆ ಬರೆದು ತಿಳಿಸಿದೆ. ಗೊತ್ತು ಮಾಡಿದ ದಿವಸ ಬೆಳಗಿನ ೯ ಘಂಟೆಯ ಸುಮಾರಿಗೆ ಮೂವರು ಸ್ವಯಂಸೇವಕರನ್ನು ಜೊತೆಯಲ್ಲಿ ಕರೆದುಕೊಂಡು ಮಾರ್ಕೆಟ್ಟಿನಲ್ಲಿ ಧ್ವಜವಂದನೆ ಮಾಡಿದೆ. ಮೊದಲೇ ಕಲೆಕ್ಟರರಿಗೆ ತಿಳಿಸಿದ್ದರಿಂದ ಪೋಲೀಸರು ನಮ್ಮನ್ನು ಬಂಧಿಸಲು ಸಜ್ಜಾಗಿ ನಿಂತಿದ್ದರು. ಧ್ವಜವಂದನೆ ಮುಗಿದಕೂಡಲೇ ಅವರು ನಮ್ಮನ್ನು ಹಿಡಿದುಕೊಂಡು ಪೋಲೀಸಠಾಣೆಗೆ ಕರೆದುಕೊಂಡು ಹೋದರು.

ಧ್ವಜವಂದನೆ ಮಾಡಿರಲಿ ಅಥವಾ ಏನೇ ಮಾಡಿರಲಿ. ಈ ಸಲ ನನಗೆ ಕನಿಷ್ಟ ಎರಡು ವರ್ಷ ಶಿಕ್ಷೆಯಾಗುವುದೆಂದು ತಿಳಿದಿದ್ದೆ. ಇತರರೂ ಹಾಗೆಯೇ ತಿಳಿದಿದ್ದರು. ಆದರೆ ಪೋಲೀಸರು ನನ್ನ ಮೇಲೆ ಧ್ವಜವಂದನೆಯ ಖಟ್ಲೆ ಹಾಕಿದರು. ಅದರಿಂದ ಮ್ಯಾಜಿಸ್ಟ್ರೇಟರು ಇತರ ಸ್ವಯಂಸೇವಕರೊಂದಿಗೆ ನನಗೂ ನಾಲ್ಕೇ ತಿಂಗಳು ಕಠಿಣ ಶಿಕ್ಷೆ ವಿಧಿಸಿದರು. ಇದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು.

ನನ್ನ ಬಿಡುಗಡೆ ಮತ್ತು ಗಡಿಪಾರು ಆಜ್ಞೆ

ನಾಲ್ಕು ತಿಂಗಳ ಶಿಕ್ಷೆ ಮುಗಿಯುತ್ತಲೇ ನನ್ನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದರು. ನಾನು ಜೇಲಿನ ಹೊರಗೆ ಬಂದಕೂಡಲೇ ಪೋಲೀಸರು ನನ್ನನ್ನು ಬೆಳಗಾವಿ ಜಿಲ್ಹೆಯಿಂದ ಗಡಿಪಾರು ಮಾಡಿದ ಹುಕುಂ ತೆಗೆದುಕೊಂಡು ನಿಂತಿದ್ದರು. ಅದನ್ನು ನನಗೆ ಜಾರಿಮಾಡಿ ನನ್ನನ್ನು ಧಾರವಾಡಕ್ಕೆ ತಂದುಬಿಟ್ಟರು.

ನಾನು ಹೊರಗೆ ಬಂದಾಗ ನನ್ನ ಸಹಕಾರಿಗಳು ಇನ್ನೂ ಯಾರೂ ಹೊರಗೆ ಬಂದಿದ್ದಿಲ್ಲ. ನನ್ನ ಆರೋಗ್ಯ ಕೆಟ್ಟದ್ದರಿಂದ ನಾನು ಕೆಲವು ದಿವಸ ಧಾರವಾಡದಲ್ಲಿಯೇ

ವಿಶ್ರಾಂತಿ ತೆಗೆದುಕೊಳ್ಳತೊಡಗಿದೆ. ಅಷ್ಟರಲ್ಲಿ ಅನೇಕ ಜನರು ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದಿದ್ದರು. ಆಂದೋಲನವೂ ಸ್ಥಗಿತವಾಗಿತ್ತು. ನಾನು ಮರಳಿ ಬೆಳಗಾವಿಗೆ ಹೋದೆ. ಈ ಮೊದಲೇ ಗಾಂಧೀಜಿಯವರ ಉಪವಾಸ, ಬಿಡುಗಡೆ ಹರಿಜನ ಪ್ರವಾಸ ಎಲ್ಲವೂ ನಡೆದುಹೋಗಿದ್ದವು. ಸರಕಾರವು ವರ್ಕಿಂಗ ಕಮಿಟಿ ಸದಸ್ಯರನ್ನು ಬಿಡುಗಡೆ ಮಾಡಿತ್ತು. ಇತರ ಮುಖಂಡರನ್ನೂ ಕಾರ್ಯಕರ್ತರನ್ನೂ ಸಹ ಬಿಡುಗಡೆ ಮಾಡತೊಡಗಿತ್ತು. ಚಳವಳಿ ಪೂರ್ಣ ನಿಂತುಹೋಗಿತ್ತು. ಆದುದರಿಂದ ನಾನು ಗಡಿಪಾರು ಆಜ್ಞೆ ಉಲ್ಲಂಘಿಸಿದ್ದಕ್ಕಾಗಿ ಪೋಲೀಸರು ನನ್ನನ್ನು ಬಂಧಿಸಲಿಲ್ಲ.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ೧೯೩೦ ರಿಂದ ೧೯೪೫ ರ ವರೆಗೆ ನಡೆದ ಆಂದೋಲನಗಳಲ್ಲಿ ಭಾಗವಹಿಸಿ ಜೇಲಿಗೆ ಹೋದ ಸ್ವಾತಂತ್ರ್ಯಯೋಧರ ಪಟ್ಟಿ

ಅ. ನಂ.	ಹೆಸರು	೧೯೩೦-೩೧		೧೯೩೨-೩೪		೧೯೪೨-೪೫ ಶಿಕ್ಷೆ		೧೯೪೨-೪೫ ಅಂಡರ ಟ್ರಾಯಲ್ ಡಟೆನ್ಯು		ಒಟ್ಟು ಶಿಕ್ಷೆ		ಶರಾ
೧	೨	೩		೪		೫		೬		೭		೮
		ವ.	ತಿಂ.	ವ.	ತಿಂ.	ವ.	ತಿಂ.	ವ.	ತಿಂ.	ವ.	ತಿಂ.	
೧	ದೇ. ಭ. ಗಂಗಾಧರರಾವ ಬಾ. ದೇಶಪಾಂಡೆ	೦	೬	೧	೦	೨	೦	...		೪	೦	ಜೇಲವಾಸ ೧೯೨೧ ರಲ್ಲಿ ೬ ತಿಂಗಳು
೨	ಪುಂಡಲೀಕಜಿ ತಮ್ಮಾಜಿ ಕಾತಗಡೆ	೦	೭	೧	೦	೨	೦	...		೩	೭	
೩	ರಾಮಚಂದ್ರ ವೆ. ವಡವಿ	೦	೭	೦	೮	೦	೪	೦	೪	೧	೧೧	
೪	ಗಂಗಪ್ಪ ಬ. ಯಮಕನಮರ್ಡಿ	೧	೦	೧	೦	೨	೦	...		೪	೦	
೫	ಅಲ್ಲಿಸಾಬ ಹುಸೇನಸಾಬ ವಾರಿಮನಿ	೦	೪	೧	೯	...		೧	೬	೩	೭	
೬	ಭಾಸ್ಕರ ವಿಷ್ಣು ಕಾಳೆ	೦	೪	೨	೦	...		...		೨	೪	
೭	ಅಪ್ಪಾರಾವ ಭೀಮರಾವ ದೇಶಪಾಂಡೆ	೧	೦	೦	೪	...		...		೧	೪	
೮	ವಿರುಪಾಕ್ಷಪ್ಪ ದೊಡ್ಡಪ್ಪ ಬೆಲ್ಲದ	...		೧	೪	...		...		೧	೪	
೯	ಶ್ರೀನಿವಾಸರಾವ ಜಾಲನೂರ	೦	೪	...		...		...		೦	೪	
೧೦	ದತ್ತೋಪಂತ ಲಕ್ಷ್ಮಣ ಅಧ್ಯಾಪಕ	೦	೪	...		...		...		೦	೪	

೧೧	ಅನಂತ ಕೃಷ್ಣರಾವ ನೇರಲಿಕರ	...	೦	೯	...		...	...	೦	೯
೧೨	ಬಾಪು ಗೋಖಲೆ	...	೦	೪	೧	೦	...	...	೧	೪
೧೩	ಅನಂತ ಅಮೃತರಾವ ದೇಶಪಾಂಡೆ	...	೦	೪	೦	೬	...	...	೦	೧೦
೧೪	ನಾರಾಯಣ ಕೃಷ್ಣಾ ಗೋಕಾಕ	...	೧	೬	೧	೦	...	...	೨	೬
೧೫	ಬಸವಂತ ಬಸಪ್ಪ ಬನದವರ	...	೦	೬	...		...	...	೦	೬
೧೬	ಗಂಗಪ್ಪ ಲಕ್ಷ್ಮಣ ಉಪರಿ	...	೦	೬	...		...	...	೦	೬
೧೭	ರಾಮನಗೌಡ ರುದ್ರಗೌಡ ಪಾಟೀಲ	...	೦	೬	...		...	...	೦	೬
೧೮	ರಾಮಚಂದ್ರ ಭರಮಪ್ಪ ಕೊಲ್ಹಾಪುರೆ	...	...		೧	೬	...	...	೧	೬
೧೯	ಚಂದುರಾಮ ಮಲ್ಹಾರ ದಪ್ತರದಾರ	...	೦	೪	೧	೦	...	...	೧	೪
೨೦	ಲಕ್ಷ್ಮಣ ಭರಮಪ್ಪ ತುಕ್ಕಾರ	...	ಘಟಕಿ	೧೨	...		...	...	ಘಟಕಿ	೧೨
೨೧	ಮೋದಿನಸಾಬ ಇಮಾಮಸಾಬ ಅರಳಿಕಟ್ಟಿ	...	,,	೧೨	...		...	...	,,	೧೨
೨೨	ಮಲ್ಲಪ್ಪ ಕರೆಪ್ಪ ಹೆಗ್‌ನಾಯಿಕ	...	...		೨	೦	೧ ೬	...	೩	೬
೨೩	ಸುಬ್ಬರಾವ	...	...		೧	೬	...	...	೧	೬
೨೪	ಬಸಪ್ಪ ಕರಿಗೌಡಪ್ಪ ಭದ್ರಕಾಳಿ	...	...		೧	೬	...	...	೧	೬
೨೫	ತಿಪ್ಪಣ್ಣ ಯಲ್ಲಪ್ಪ ಬೆಟಗೇರಿ	...	...		೧	೬	೧ ೬	...	೩	೦
೨೬	ಚನಬಸಪ್ಪ ಮುದ್ದಪ್ಪ ಮೂಗಿ	...	...		೧	೬	೧ ೬	...	೩	೦
೨೭	ವಾಮನ ಶ್ರೀಪಾದರಾವ ದೇಶಪಾಂಡೆ	...	...		೦	೬	...	...	೦	೬
೨೮	ಶ್ರೀಪಾದ ಅನಂತ ಮೂದಲೆ	...	...		೦	೬	...	...	೦	೬
೨೯	ವಾಸುದೇವ ಅನಂತ ಗೋಸಾವಿ	...	...		೦	೬	೧ ೦	...	೧	೬

೧	೨	೩	೪	೫	೬	೭	೮
			ಅಂಡರ ಟ್ರಾಯಲ				
೩೦	ಸೌ. ಸಂಗವ್ವ ಗಂಗಪ್ಪ ಯಮಕನಮರ್ಡಿ ...	...	೦ ೧	...	...	೦ ೧	ಅಂಡರ ಟ್ರಾಯಲ್
೩೧	,, ಚಂದ್ರಾಬಾಯಿ ವಾಮನರಾವ ದೇಸಾಯಿ ...	...	೦ ೬	...	...	೦ ೬	
೩೨	,, ರಮಾಬಾಯಿ ವಾಸುದೇವ ಗೋಸಾವಿ ...	...	೦ ೪	೦ ೪	...	೦ ೮	
೩೩	,, ಭವಾನಿಬಾಯಿ ಕಾನಗೋ ...	...	...	೦ ೪	...	೦ ೪	
೩೪	ಗೌಡಪ್ಪ ಚನ್ನಪ್ಪ ಭದ್ರಕಾಳಿ (ಪಾಟೀಲ) ...	...	೦ ೪	೨ ೦	...	೨ ೪	
೩೫	ಮೋಹನ ಬಿ. ದೇಸಾಯಿ ...	...	...	೧ ೦	೧ ೬	೦ ೬	ಡೆಟಿನ್ಯೂ
೩೬	ಭೀಮಪ್ಪ ಚನಬಸಪ್ಪ ಯಲಿಗಾರ ...	...	...	೧ ೦	...	೧ ೦	
೩೭	ಮಲ್ಲಪ್ಪ ರಾಮಪ್ಪ ಹೆಗ್‌ನಾಯಿಕ ...	...	...	೧ ೦	...	೧ ೦	
೩೮	ವಾಸುದೇವ ನಾಗಪ್ಪ ಕದಮ ...	...	...	೨ ೦	...	೨ ೦	
೩೯	ವಸಂತ ಗೋಪಾಳರಾವ ದೇಶಪಾಂಡೆ ...	...	...	೨ ೦	...	೨ ೦	
೪೦	ನಾರಾಯಣ ಬಂಡೋ ದೇಶಪಾಂಡೆ ...	...	...	೧ ೬	...	೧ ೬	
೪೧	ಅಪ್ಪಣ್ಣಾ ಮರಲಿಂಗಣ್ಣವರ ...	...	...	೧ ೬	...	೧ ೬	
೪೨	ಕೆಂಚನಗೌಡ ಮಲಗೌಡ ಪಾಟೀಲ ...	...	೧ ೪	...	೦ ೬	೦ ೧೦	ಡೆಟಿನ್ಯೂ
೪೩	ಬಸನಗೌಡ ರು. ಪಾಟೀಲ ...	...	...	೦ ೪	೧ ೨	೧ ೬	ಅಂಡರ ಟ್ರಾಯಲ್
೪೪	ನಿಂಗಪ್ಪ ಯಲ್ಲಪ್ಪ ತುಕ್ಕಾರ ...	...	...	...	೧ ೨	೧ ೨	,,
೪೫	ಭೀಮಪ್ಪ ನಿಂಗಪ್ಪ ಭೂಸಿ ...	...	...	...	೧ ೨	೧ ೨	,,
೪೬	ಬಾಳಪ್ಪ ಲಕ್ಷ್ಮಪ್ಪ ಮಾಳಗಿ ...	...	...	...	೧ ೨	೧ ೨	,,

೪೭	ರಾಮಪ್ಪ ಬಸಪ್ಪ ಬನದವರ	...	...	...	...	೧ ೨	೧ ೨	ಅಂ. ಟ್ರಾ.
೪೮	ಅಪ್ಪಣ್ಣ ಸಾತಪ್ಪ ಹೂಗಾರ	...	...	...	೦ ೧	೦ ೬	೦ ೭	,,
೪೯	ಮಲ್ಲಪ್ಪ ನಿಂಗಪ್ಪ ಗುಂಡ್ಲೂರ	...	...	...	೦ ೧	೦ ೬	೦ ೬	,,
೫೦	ಬಸಪ್ಪ ಭೀಮಪ್ಪ ಹಳ್ಳೂರಿ	...	...	...	...	೧ ೨	೧ ೨	,,
೫೧	ಬಾಳಪ್ಪ ಭೀಮಪ್ಪ ಕದಮ	...	...	...	೩ ೦	೧ ೨	೧ ೫	,,
೫೨	ಫಕೀರ ಬಸಲಿಂಗಪ್ಪ ಬನದವರ	...	...	...	೦ ೩	೧ ೨	೧ ೫	,,
೫೩	ರಾಮಪ್ಪ ಮಲ್ಲಪ್ಪ ಗವಣಾರ	...	...	...	೦ ೩	೧ ೨	೧ ೫	,,
೫೪	ಮಲ್ಲಪ್ಪ ಬಾಳಪ್ಪ ಮಾಳಗೆ	...	...	...	...	೦ ೪	೦ ೪	,,
೫೫	ಯಲ್ಲಪ್ಪ ಕೃಷ್ಣ ಕರಡಿಗುದ್ದಿ	...	...	=	...	೧ ೨	೧ ೨	,,
೫೬	ರಾಮಪ್ಪ ಫಕೀರಪ್ಪ ಸೊಂಟಕ್ಕಿ	...	...	...	...	೧ ೨	೧ ೨	,,
೫೭	ನಾಗಪ್ಪ ಭೀಮಪ್ಪ ಉಪರಿ	...	...	...	೦ ೩	೧ ೨	೧ ೫	,,
೫೮	ಭರತ ಸತ್ಯಪ್ಪ ಲೋಲಿ	...	...	...	೦ ೪	...	೦ ೪	,,
೫೯	ಲಕ್ಷ್ಮಣ ಸತ್ಯಪ್ಪ ಲೋಲಿ	...	...	...	೦ ೪	...	೦ ೪	,,
೬೦	ಯಮುನಪ್ಪ ಬಾಳಪ್ಪ ಆಡಕಾಯಿ	...	...	...	೦ ೧	೦ ೬	೦ ೭	ಡೆಟಿನ್ಯೂ
೬೧	ಪುಂಡಲೀಕ ಭೀಮಪ್ಪ ಮುಸಳಿ	...	...	...	೦ ೧	೦ ೬	೦ ೭	,,
೬೨	ಸೋಮಲಿಂಗಪ್ಪ ಅ. ಮಳಗಲಿ	...	...	...	೦ ೨	೦ ೬	೦ ೮	,,
೬೩	ಶಂಕರ ಭೀಮಾಜಿ ದೇಶಪಾಂಡೆ	...	...	...	...	೦ ೬	೦ ೬	,,
೬೪	ನಾಗಪ್ಪ ಭೀಮಪ್ಪ ಉಪರಿ	...	...	...	೦ ೩	೧ ೨	೧ ೫	ಅಂಡರ ಟ್ರಾಯಿಲ್
೬೫	ಮೋಹನರಾವ ಗಂಗಾಧರರಾವ ದೇಶಪಾಂಡೆ	...	...	...	...	೦ ೪	೦ ೪	ಡೆಟಿನ್ಯೂ

೧	೨		೩	೪	೫	೬		೭		೮
೬೬	ದೇವಜಿ ಕಲ್ಲೋ ದೇಶಪಾಂಡೆ	...	...	...	...	೦	೪	೦	೪	ಡೆಟಿಸ್ಯೂ
೬೭	ಬಸವಣ್ಣೆಪ್ಪ ಮಲ್ಲಪ್ಪ ಜಕ್ಕಣ್ಣವರ	...	...	...	೦ ೧	೦	೬	೦	೭	ಅಂಡರ ಟ್ರಾಯಿಲ್
೬೮	ಗಂಗಾಧರ ಅಪ್ಪಾರಾವ ದೇಶಪಾಂಡೆ	...	...	...	...	೦	೪	೦	೪	,,
೬೯	ಸಂಗಪ್ಪ ತಿಪ್ಪಣ್ಣ ಮಳಗಲಿ	...	...	...	...	೦	೪	೦	೪	,,
೭೦	ಬಿಳಿಗೌಡ ನಿಂಗಪ್ಪ ಭದ್ರಕಾಳಿ	...	...	...	...	೦	೪	೦	೪	,,
೭೧	ಬಸಪ್ಪ ನಿಂಗಪ್ಪ ಭದ್ರಕಾಳಿ	...	...	...	...	೦	೪	೦	೪	,,
೭೨	ಗಂಗಪ್ಪ ನಿಂಗಪ್ಪ ಭದ್ರಕಾಳಿ	...	...	...	...	೦	೪	೦	೪	,,
೭೩	ನಿಂಗಜ್ಜ ಬಸವಂತಪ್ಪ ಭದ್ರಕಾಳಿ	...	...	...	...	೦	೪	೦	೪	,,
೭೪	ಗಂಗಪ್ಪ ಮಲ್ಲಪ್ಪ ಮಾಳಗಿ	...	...	...	...	೦	೪	೦	೪	,,
೭೫	ಗಂಗಪ್ಪ ಬಸಣ್ಣ ಮೋದಿಗಿ	...	...	...	...	೦	೪	೦	೪	,,
೭೬	ಬಾಳಪ್ಪ ಸಾತಪ್ಪ ಹೆಗ್‌ನಾಯಿಕ	...	...	...	...	೦	೪	೦	೪	,,
೭೭	ಗಡ್ಡೆಪ್ಪ ಮಲ್ಲಪ್ಪ ಹೆಗ್‌ನಾಯಿಕ	...	...	...	...	೦	೪	೦	೪	,,
೭೮	ಬಸವಂತಪ್ಪ ಕರಬಸಪ್ಪ ಮಳಗಲಿ	...	...	...	...	೦	೪	೦	೪	,,
೭೯	ಬಸವಣ್ಣೆ ಸಂಗಪ್ಪ ಮಳಗಲಿ	...	...	...	...	೦	೪	೦	೪	,,
೮೦	ಮಾನಪ್ಪ ಶಿವಲಿಂಗಪ್ಪ ವಾರಿಮನಿ	...	...	...	...	೦	೪	೦	೪	,,
೮೧	ಬಸವಣ್ಣೆ ರಾಮಗೌಡ ಮೊದಿಗಿ	...	...	...	...	೦	೪	೦	೪	,,
೮೨	ಗಂಗಪ್ಪ ಅಪ್ಪಣ್ಣ ಚವ್ಹಾಣ	...	...	...	...	೦	೪	೦	೪	,,
೮೩	ತವನಪ್ಪ ಅಪ್ಪಣ್ಣ ಪಾಲಕಾರ	...	...	...	...	೦	೪	೦	೪	,,

೮೪	ಬುಡ್ಡೇಸಾಬ ಇಮಾಮಸಾಬ ದಳವಾಯಿ	...	...	...	...	೦	೪	೦	೪	,,
೮೫	ಸೋಮಲಿಂಗ ಫಕೀರಪ್ಪ ನಾವಲಗಿ	...	...	...	...	೦	೪	೦	೪	,,
೮೬	ಹುಸೇನಸಾಬ ದಾವಲಸಾಬ ತಾಶಿಲದಾರ	...	...	...	...	೦	೪	೦	೪	,,
೮೭	ಈರಯ್ಯ ರಾಚಯ್ಯ ಚರಂತಿಮಠ	...	...	...	...	೦	೪	೦	೪	,,
೮೮	ಬಸವಣ್ಣೆಪ್ಪ ಕೆಂಪಣ್ಣ ಬೆಟಗೇರಿ	...	...	...	...	೦	೪	೦	೪	,,
೮೯	ದುರ್ಗಪ್ಪ ನಿಂಗಪ್ಪ ದಂಡಾಯಿ	...	...	...	...	೦	೪	೦	೪	,,
೯೦	ಬಸಪ್ಪ ನಿಂಗಪ್ಪ ಹಿರತೆಗ್ಗಿನವರ	...	...	...	...	೦	೪	೦	೪	,,
೯೧	ಗುರುಸಿದ್ದಪ್ಪ ಕಠಾವಿ	...	...	...	...	೦	೪	೦	೪	,,
೯೨	ರಾಮಚಂದ್ರ ಬಾಳಪ್ಪ ಬಡಿಗೇರ	...	...	...	...	೦	೬	೦	೬	,,
೯೩	ಚನಗೌಡ ಬಸನಗೌಡ ಪಾಟೀಲ	...	...	...	...	೦	೪	೦	೪	,,
೯೪	ಬಾಳಪ್ಪ ಹುಲೇನೂರ ಕರೀಕಟ್ಟಿ	...	...	...	...	೦	೪	೦	೪	,,
೯೫	ರಾಮೋಸಿ ಬಸಪ್ಪ ನಾಯಿಕ	...	...	...	...	೦	೪	೦	೪	,,
೯೬	ವಿಠ್ಠಲ ಗೋವಿಂದರಾವ ದೇಶಪಾಂಡೆ	...	...	...	...	೦	೪	೦	೪	ಡೆಟಿನ್ಯೂ
೯೭	ಹೊಳೆಪ್ಪ ಯಲ್ಲಪ್ಪ ನಾರಿ	...	...	...	...	೦	೪	೦	೪	,,
೯೮	ಬಸಪ್ಪ ಹೊನ್ನಪ್ಪ ಗಂಡಬಾಳಿ	...	...	...	...	೦	೪	೦	೪	,,
೯೯	ಗಣಪತಿ ಬಸಪ್ಪ ಉಪರಿ	...	...	...	೦ ೪	...		೦	೪	,,
೧೦೦	ಬಾಳಪ್ಪ ನಿಂಗಪ್ಪ ತೋಟಗಿ	...	...	...	...	೦	೪	೦	೪	,,
೧೦೧	ಮಲ್ಲಪ್ಪ ಬಸಪ್ಪ ಮೂಳಗಿ	...	...	...	...	೦	೪	೦	೪	,,
೧೦೨	ಲಕ್ಷ್ಮಣ ಮಲ್ಲಪ್ಪ ನಾಯಿಕ	...	...	...	...	೦	೪	೦	೪	,,

೧	೨	೩	೪	೫	೬		೭		೮
೧೦೩	ಬಸಪ್ಪ ಬಾಳಪ್ಪ ಕೊಂತಿ	...	...	....	...	೦	೪	೦	೪	ಡೆಟಿನ್ಯೂ
೧೦೪	ಫಕೀರ ನಾಗಪ್ಪ ಕದಮು	...	...	....	...	೦	೪	೦	೪	,,
೧೦೫	ಬಾಳಪ್ಪ ಸಾತಪ್ಪ ಹೆಗ್ನಾಯಿಕ	...	...	....	...	೦	೪	೦	೪	,,
೧೦೬	ಗಂಗಪ್ಪ ಗೌಡಪ್ಪ ಭದ್ರಕಾಳಿ	...	....	...	...	೦	೪	೦	೪	,,
೧೦೭	ಸಿದಲಿಂಗ ತರಬರು ಉರ್ಫ ಸಿದಗೌಡ	...	...	...	...	೦	೪	೦	೪	,,
೧೦೮	ನಾಗಯ್ಯ ರಾಚಯ್ಯ ಹಿರೇಮಠ	...	....	....	...	೦	೪	೦	೪	,,

ಇದರಲ್ಲಿ ಅನೇಕ ಜನರಿಗೆ ಇಪ್ಪತ್ತೈದು ರೂಪಾಯಿಯಿಂದ ಒಂದುಸಾವಿರ ರೂಪಾಯಿಗಳ ವರೆಗೆ ದಂಡವಾಗಿತ್ತು. ಅದರ ಬದಲಿ ಶಿಕ್ಷೆ ಅನುಭವಿಸಿದ್ದು ಅವಧಿ ಕೂಡಿರುತ್ತದೆ.

೧) ಗಂಗಾಧರ ಸ. ಮಳಗಲಿ ೨) ಕಾಡಪ್ಪ ಮ. ತೊಟಗಿ ೩) ಮಾರುತಿ ಲ. ಮಾಳಗಿ ೪) ನೀಲಕಂಠ ಜ. ಪತ್ತಾರ ೫) ಸಿದಲಿಂಗ ಯ. ತುಕ್ಕಾರ ೬) ಸಿದಲಿಂಗ ಸಿ. ಖಣಗನ್ನಿ.

ಸದರೀಯವರು ಪ್ರಾಥಮಿಕ ಶಾಲೆ ಶಿಕ್ಷಣಕ್ಕೆ ಶರಣು ಹೊಡೆದು ಶಾಲೆಯ ದಪ್ತರ ವಗೈರೆ ಸುಡುವ ಕೆಲಸಮಾಡಿ ಪ್ರಭಾತಫೇರಿ ತೆಗೆದು, ಜೇಲಿಗೆ ಹೋಗುವ ವಿಚಾರ ಮಾಡಿದ್ದಾಗ್ಗೆ ಅವರ ಪಾಲಕರಿಗೆ ಗೊತ್ತಾಗಿ ಸದರೀಯವರನ್ನು ಜೇಲಿಗೆ ಹೋಗದಂತೆ ಅಡ್ಡಿಮಾಡಲಾಯಿತು.

ಹಾಯಸ್ಕೂಲ ಐದನೇ ತರಗತಿ ಶಿಕ್ಷಣಕ್ಕೆ ಶರಣು ಹೊಡೆದು ಶ್ರೀ ಮಲ್ಲಪ್ಪ ನಿಂಗಪ್ಪ ಗುಂಡ್ಲೂರ ಇವರು ಒಂದು ವರ್ಷ ಅಜ್ಞಾತವಾಸ ಅನುಭವಿಸಿ, ಆರು ತಿಂಗಳ ಅಂಡರ ಟ್ರಾಯಲ್ ಡೆಟಿನ್ಯೂ ಅಂತಾ ಜೇಲುವಾಸ ಅನುಭವಿಸಿರುತ್ತಾರೆ. ಅದೇಪ್ರಕಾರ ಶ್ರೀ ಘಟಿಗೆಪ್ಪ ಉರ್ಫ ಮೋಹನ ಬಿ. ದೇಸಾಯಿ ಇವರು ಹಾಯಸ್ಕೂಲ ಶಿಕ್ಷಣಕ್ಕೆ ಶರಣು ಹೊಡೆದು ಒಂದು ವರ್ಷ ಅಜ್ಞಾತವಾಸ ಅನುಭವಿಸಿ ವಂದೂವರಿ ವರ್ಷ ಶಿಕ್ಷೆ ಅನುಭವಿಸಿರುತ್ತಾರೆ.

ವಿಶೇಷ ಸೂಚನೆ

ಮೇಲೆ ಬರೆದವರಲ್ಲದೆ ಎರಡುನೂರಕ್ಕೂ ಮೇಲ್ಪಟ್ಟ ಜನರನ್ನು ಸರಕಾರ ದವರು ಬಂಧನಮಾಡಿ ಹದಿನೈದು ದಿವಸಗಳವರೆಗೆ ಲಾಕಪ್ಪಿನಲ್ಲಿ ಇಟ್ಟು ಬಿಡುಗಡೆ ಮಾಡಿರುತ್ತಾರೆ. ಇದಲ್ಲದೆ ಗುಜನಾಳ ಪೋಲೀಸ ಕ್ಯಾಂಪಿಗೆ ಅನೇಕ ಗಂಡಸರು, ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗಿ ಹೊಡೆದು ಬಡೆದು ಮಾಡಿ, ಅವರಿಂದ ಹಣ ವಸೂಲ ಮಾಡಿಕೊಂಡು ಬಿಡುತ್ತಿದ್ದರು. ಅದನ್ನೆಲ್ಲ ಈ ಯಾದಿಯಲ್ಲಿ ಕೊಟ್ಟಿರುವದಿಲ್ಲ.

ಈಗ ನಮಗೆ ನೆನಪಿನಲ್ಲಿದ್ದಷ್ಟು ಜನರ ಯಾದಿ ನಮಗೆ, ಗೊತ್ತಿದ್ದಷ್ಟು ಜೇಲ ವಾಸದ ಮಾಹಿತಿ ಬರೆಯಲಾಗಿದೆ.

ಲೇಖಕರ ಪರಿಚಯ

ಜನ್ಮ : ೧೯೦೩, ಧಾರವಾಡ ಜಿಲ್ಲಾ, ಶಿರಹಟ್ಟಿ ತಾಲೂಕು. ವಡವಿಯಲ್ಲಿ. ಪ್ರಾಥಮಿಕ ಶಿಕ್ಷಣ ಕರಜಗಿಯಲ್ಲಿ. ಹೈಸ್ಕೂಲ ಶಿಕ್ಷಣ ಧಾರವಾಡ ವಿಕ್ಟೋರಿಯಾ ಹೈಸ್ಕೂಲಿನಲ್ಲಿ. (ಇಂದಿನ ವಿದ್ಯಾರಣ್ಯ ಹೈಸ್ಕೂಲಿನಲ್ಲಿ). ಹೈಸ್ಕೂಲಿನಲ್ಲಿದ್ದಾಗಲೇ ಶಾಂತೇಶ ವಾಚನಾಲಯ ಸ್ಥಾಪಿಸಿದ್ದು. ೧೯೨೦ರಲ್ಲಿ ಗಾಂಧೀಜಿಯವರ ಅಸಹಕಾರ ಚಳವಳಿಯ ಕರೆಗೆ ಓಗೊಟ್ಟು, ಶಾಲೆಗೆ ಬಹಿಷ್ಕಾರ ಹಾಕಿ ಗಾಂಧೀಜಿಯವರ ಸಾಬರಮತಿ ಆಶ್ರಮಕ್ಕೆ ಹೋದದ್ದು. (೧೯೨೦-೨೩). ಪೂಜ್ಯ ಕಾಕಾಸಾಹೇಬರ ಸಹಾಯದಿಂದ ವಿದ್ಯಾಭ್ಯಾಸ ಮುಗಿಸಿಕೊಂಡು, ಖಾದೀ ಕಾರ್ಯ ಕಲಿತದ್ದು. ೧೯೨೩ ರಿಂದ ೪೬ರ ವರೆಗೆ ಗುರುವರ್ಯ ಗಂಗಾಧರರಾವ ದೇಶಪಾಂಡೆಯವರ ನೇತೃತ್ವದಲ್ಲಿ ಕುಮರಿಯಲ್ಲಿ ಆಶ್ರಮ ಸ್ಥಾಪಿಸಿ, ಸಂಚಾಲಕರಾಗಿ ಕಾರ್ಯ ಮಾಡಿದ್ದು. ಹುದಲಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಿವಿಧ ವಿಧಾಯಕ ಕಾರ್ಯ ಮಾಡಿದ್ದು.

೧೯೩೦, ೩೨ ಹಾಗೂ ೪೨ರ ಆಂದೋಲನಗಳಲ್ಲಿ ಭಾಗ ವಹಿಸಿ ಜೇಲಿಗೆ ಹೋದದ್ದು. ಭೂಗತನಾಗಿ ಕೆಲಸ ಮಾಡಿದ್ದು. ೧೯೪೬-೫೨ರ ವರೆಗೆ ಚರಖಾ ಸಂಘದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದು. ೫೨ರಿಂದ ೫೮ರ ವರೆಗೆ ಪೂಜ್ಯ ವಿನೋಬಾಜಿಯವರ ಭೂದಾನ ಆಂದೋಲನದಲ್ಲಿ ಕೆಲಸ. ೧೯೫೮-೧೯೭೦ರ ವರೆಗೆ ವಿನೋಬಾಜಿಯವರ ಆದೇಶದ ಮೇರೆಗೆ ಗಾಂಧೀ-ಸ್ಮಾರಕ ನಿಧಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದು.

ಲೇಖಕರು ಬರೆದ ಗ್ರಂಥಗಳ ಪಟ್ಟಿ ಬೇರೆಡೆಗೆ ಕೊಡಲಾಗಿದೆ. ಖಾದಿ ಹಾಗೂ ಪ್ರೌಢ ಶಿಕ್ಷಣದ ಮೇಲೆ ಬರೆದ ಗ್ರಂಥಗಳು. ಸ್ವಂತ ಅನುಭವದಿಂದ ಬರೆದಂಥವು.

ಈ ಪುಸ್ತಕದಲ್ಲಿ ಏನೇನಿದೆ ?

೧೯೪೨ನೇ ಇಸ್ವಿ ಆಂದೋಲನದ ಕಾಲಕ್ಕೆ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಸಾರಸರ್ವಸ್ವವನ್ನು ತ್ಯಾಗಮಾಡಿ, ತಮ್ಮ ಪ್ರಾಣವನ್ನು ಪಣಕ್ಕೆ ಹಚ್ಚಿ, ಸಶಸ್ತ್ರ ಬ್ರಿಟಿಶ ಸಾಮ್ರಾಜ್ಯಶಾಹಿಯ ವಿರುದ್ಧ ನಿಶ್ಯಸ್ತ್ರವಾಗಿ ಹೋರಾಡಿದ ಅಜ್ಞ, ನಿರಕ್ಷರಿ, ವಾಚಾಹೀನ, ನಿತ್ಯದ ದುಡಿಮೆಯಿಂದಲೆ ಉಪಜೀವಿಸುವ ಜನರು ಯಾವ ಸ್ಥಾನಮಾನದ ಆಶೆ ಇಲ್ಲದೆ ನಿರಪೇಕ್ಷ ಬುದ್ಧಿಯಿಂದ ಹೋರಾಡಿದ ಅದ್ಭುತರಮ್ಯ ಇತಿಹಾಸವಿದೆ.

'ಭಾರತದಿಂದ ತೊಲಗಿರಿ' ಆಂದೋಲನದ ಕಾಲದಲ್ಲಿ ಭೂಗತ ಕಾರ್ಯಕರ್ತರು ಯಾವ ರೀತಿ ಹೋರಾಡಿದರು, ಯಾವ ಬಗೆಯ ಕಷ್ಟನಷ್ಟಗಳನ್ನು ಅನುಭವಿಸಿದರು, ಎಂಥ ದಿವ್ಯದೊಳಗಿಂದ ಪಾರಾದರು, ಅವರ ಆರ್ಥಿಕ ಪರಿಸ್ಥಿತಿ ಹೇಗಿತ್ತು, ಅವರ ಕೌಟುಂಬಿಕ ಪರಿಸ್ಥಿತಿ ಹೇಗಿತ್ತು ಮುಂತಾದುದರ ಆಗಿನ ಪರಿಸ್ಥಿತಿಯ ಸಮಗ್ರ ಚಿತ್ರಣವಿಲ್ಲಿದೆ.

ಇದಲ್ಲದೆ ೧೯೩೦ ಹಾಗೂ ೧೯೩೨ನೆಯ ಇಸ್ವಿ ಆಂದೋಲನಗಳ ಕಾಲಕ್ಕೆ ಸಂಭವಿಸಿದ ಕೆಲವೊಂದು ಮಹತ್ವಪೂರ್ಣ, ಸ್ವಾರಸ್ಯಮಯ ಹಾಗೂ ರೋಮಾಂಚಕಾರಿ ಘಟನೆಗಳು ಇವೆ.

ಇದಲ್ಲದೆ ಇನ್ನೂ ಅನೇಕ ಸ್ವಾರಸ್ಯಮಯವಾದ ಸಂಗತಿಗಳು ಓದಲು ಸಿಗುತ್ತವೆ.